ಬೆಂಗಳೂರು	ಬೆಂಗಳೂರು	ಕಸಬಾ	ಭೋಗೇನಹಳ್ಳಿ	ಪಟ್ಟೇದಾರ್ ಮುನಿನಂಜಪ್ಪ, ಕ್ರಯದಾರ್ ದಂಡೆ ಲಿಂಗಣ್ಣ.	21	0—38	ಈ ಸರ್ವೆ ನಂ. 21ರ ಮಿಕ್ಕ ಭಾಗ	ಕೃಷ್ಣಪ್ಪನಿಗೆ ಸೇರಿದ ಸರ್ವೆ ನಂ. 20	ಸರ್ವೆ ನಂ. 21ರ ಮಿಕ್ಕ ಭಾಗ	ಸರ್ವೆ ನಂ. 21ರ ಮಿಕ್ಕ ಭಾಗ	ಷಹರು ಮ್ಯುನಿಸಿಪಲ್ ಫಂಡಿನಿಂದ ನೊಬಲಗು ಕೊಡತಕ್ಕದ್ದು.
				ಪಟ್ಟೇದಾರ್ ಕೃಷ್ಣಪ್ಪ, ಅನುಭವದಾರ್ ಸುಗ್ಗಪ್ಪ ಮತ್ತು ಮ್ಯುನಿಸಿಪಲ್ ರಂಗಣ್ಣ.	20	0 – 38	ಮುನಿನಂಜಪ್ಪನಿಗೆ ಸೇರಿದ ಸರ್ವೆ ನಂ. 21	ನಾಗರಭಾವಿ ದಾಸಪ್ಪನ ಜಮೀನು	ಸರ್ವೆ ನಂ. 19	ಸರ್ವೆ ನಂ. 20ರ ಭಾಗ	
				ನಾಗರಭಾವಿ ದಾಸಪ್ಪ.	20	0— ¼	ಮ್ಯುನಿಸಿಪಲ್ ರಂಗಣ್ಣನ ಜಮೀನು	ನಾಗರಭಾವಿ ದಾಸಪ್ಪನ ಹಿಡುವಳಿ	ನಾಗರಭಾವಿ ದಾಸಪ್ಪನ ಹಿಡುವಳಿ	ನಾಗರಭಾವಿ ದಾಸಪ್ಪನ ಹಿಡುವಳಿ	
				ಜಮ್ಲಾ	...	1–36¼					

ತಾರೀಖು 13ನೆ ಜನವರಿ 1904.

ನಂ. ರೆ. 1935, ಅಮಲ್ದಾರ್ರುಗಳ ಮತ್ತು ಡೆಪ್ಯುಟಿ ಅಮಲ್ದಾರ್ರುಗಳ ಇದರಡೀ ಕಂಡ ಬಡ್ತಿಗಳೂ ವ ನೌಕರರಾತಿಗಳೂ ಹುಕುಂ ಮಾಡಲ್ಪಟ್ಟಿರುತ್ತವೆ:—

ಅಮಲ್ದಾರ್ರುಗಳು.

ಕಾಯಂ:—

ಎರಡನೇ ಕ್ಲಾಸಿನಲ್ಲಿ ಕಾಯಂ ಮಾಡಲ್ಪಟ್ಟವರು.

ಮ॥ ಕೆ. ಜಿ. ಕಾಮಣ್ಣನವರು

ಮೂರನೇ ಕ್ಲಾಸಿಗೆ ಬಡ್ತಿ ಮಾಡಲ್ಪಟ್ಟವರು.

ಮ॥ ಎಂ. ಕೃಷ್ಣಸ್ವಾಮಿ ಅಯ್ಯಂಗಾರ್ರು

ನಾಲ್ಕನೇ ಕ್ಲಾಸಿನಲ್ಲಿ ಕಾಯಂ ಮಾಡಲ್ಪಟ್ಟವರು.

ಮ॥ ಜೆ. ಬಾಲ್ ಯವರು
„ ಸಿ. ಆರ್. ಕೃಷ್ಣರಾಯರು
ಮ॥ ಬಿ. ಎಂ. ವೆಂಕಟೇಶಯ್ಯನವರು
„ ಎಂ. ಕೃಷ್ಣರಾಯರು

ಹಂಗಾಮಿ:—

ಆಕ್ಟಿಂಗ್ ಮೊದಲನೇ ಕ್ಲಾಸಿಗೆ ಬಡ್ತಿ ಮಾಡಲ್ಪಟ್ಟವರು.

ಮ॥ ಆರ್. ರಾಘವೇಂದ್ರರಾಯರು

ಆಕ್ಟಿಂಗ್ ಎರಡನೇ ಕ್ಲಾಸಿಗೆ ಬಡ್ತಿ ಮಾಡಲ್ಪಟ್ಟವರು.

ಮ॥ ಜಿ. ಆರ್. ಶ್ರೀನಿವಾಸಯ್ಯಂಗಾರ್ರು
ಮ॥ ಎಸ್. ಕೃಷ್ಣಅಯ್ಯರ್ ಯವರು

ಆಕ್ಟಿಂಗ್ ಮೂರನೇ ಕ್ಲಾಸಿಗೆ ಬಡ್ತಿ ಮಾಡಲ್ಪಟ್ಟವರು.

ಮ॥ ಎಸ್. ನಾರಾಯಣರಾಯರು
ಮ॥ ಚಿನ್ನಪ್ಪಪಿಳ್ಳೆ ಯವರು

ಆಕ್ಟಿಂಗ್ ನಾಲ್ಕನೇ ಕ್ಲಾಸಿಗೆ ಬಡ್ತಿ ಮಾಡಲ್ಪಟ್ಟವರು.

ಚೆನ್ನಿಗಪ್ಪನವರು, ಚಿಂತಾಮಣಿಗೆ ನೇಮಿಸಲ್ಪಟ್ಟಿರುತ್ತಾರೆ. ಕೂಡಲೆ ಕೆಲಸಕ್ಕೆ ದಾಖಲಾಗತಕ್ಕದ್ದು.

ಶೇಕ್ ಅಬ್ದುಲ್ಲಾ ಯವರು, ಚೆನ್ನಗಿರಿಗೆ ನೇಮಿಸಲ್ಪಟ್ಟಿರುತ್ತಾರೆ. ಕೂಡಲೆ ಕೆಲಸಕ್ಕೆ ದಾಖಲಾಗತಕ್ಕದ್ದು.

ಡೆಪ್ಯುಟಿ ಅಮಲ್ದಾರು.

ಎಚ್. ಕೇಶವಾಚಾರ್ರು, ನಂಜನಗೂಡಿಗೆ ನೇಮಿಸಲ್ಪಟ್ಟಿರುತ್ತಾರೆ. ಕೂಡಲೆ ಕೆಲಸಕ್ಕೆ ದಾಖಲಾಗತಕ್ಕದ್ದು.

ಆಕ್ಟಿಂಗ್ ಸಬ್ ಪ್ರೊಟೆಂ ನಾಲ್ಕನೇ ಕ್ಲಾಸಿಗೆ ಬಡ್ತಿ ಮಾಡಲ್ಪಟ್ಟವರು.

ಎಂ. ರಾಮಸ್ವಾಮಯ್ಯಂಗಾರ್ರು, ಮಂಜರಾಬಾದ್.

ವಿ. ಎಸ್. ರಾಜಗೋಪಾಲಾಚಾರ್ರು, ರೈಲ್ವೆ ಪೊಲೀಸ್ ಇನ್ಸ್ಪೆಕ್ಟರು, ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಹೊಳಲಕೆರೆಗೆ ನೇಮಿಸಲ್ಪಟ್ಟಿರುತ್ತಾರೆ. ಕೂಡಲೆ ಕೆಲಸಕ್ಕೆ ದಾಖಲಾಗತಕ್ಕದ್ದು.

ಡೆಪ್ಯುಟಿ ಅಮಲ್ದಾರ್ರುಗಳು.

ಖಾಯಮಾಗಿರತಕ್ಕದ್ದು:

ಚೆನ್ನಿಗಪ್ಪನವರು	ಜಿ. ಎಂ. ಮುಕ್ಕೈ ಯವರು
ಹನುಮಂತರಾಯರು	ಶೇಕ್ ಅಬ್ದುಲ್ಲಾ ಯವರು

ಆಕ್ಟಿಂಗ್ ಸಬ್ ಪ್ರೊಟೆಂ ಡೆಪ್ಯುಟಿ ಅಮಲ್ದಾರುಗಳಾಗಿರತಕ್ಕದ್ದು.

1. ಸಿ. ಆರ್. ನಾರಾಯಣಸಾಮಿ ಮೊದಲಿಯಾರ್ರು, ಮೊದಲನೇ ಗ್ರೇಡ್ ಎಕ್ಸೈಜ್ ಇನ್ಸ್ಪೆಕ್ಟರು
2. ನರಸಿಹ್ಮಲುನಾಯಿಡು ಯವರು, ಸಾಗರ ಸಬ್ ಡಿವಿಜನ್ ಶಿರಸ್ತೇದಾರು
3. ಕೇಶವಾಚಾರ್, ಬಿ. ಎ., ಬಿ. ಎಲ್., ಯವರು ತಾಲ್ಲೂಕು ಶಿರಸ್ತೇದಾರು
4. ಬಿ. ಕೃಷ್ಣಯ್ಯಂಗಾರ್ರು, ಲೇಟ್ ಅಗ್ರಿಕಲ್ಚರಲ್ ಬ್ಯಾಂಕ್ ಇನ್ಸ್ಪೆಕ್ಟರವರ ಆಫೀಸ್ ಹೆಡ್ ಅಕೌಂಟೆಂಟರು
5. ಎಸ್. ಅನಂತರಾಮಯ್ಯಂಗಾರ್ರು, ಫಾರೆಸ್ಟ್ ಕನ್ಸರ್ವೇಟರವರ ಆಫೀಸ್ ಅಕೌಂಟೆಂಟರು

ಹುಕುಂ ಬಮೋಜಬ್,
ಎಚ್. ವಿ. ನಂಜುಂಡಯ್ಯ,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರನಾಮೆ.

ತಾರೀಖು 6ನೆ ಜನವರಿ 1904.

ನಂ. 19—52, ಕಾಯಂ ಮೊದಲನೆ ಕ್ಲಾಸಿನ ಎಕ್ಸಿಕ್ಯೂಟಿವ್ ಇಂಜನಿಯರ್ ಮತ್ತು ಪಶ್ಚಿಮ ಸರ್ಕಲಿನ ಆಫೀಷಿಯೇಟಿಂಗ್, ಸೂಪರಿಂಟೆಂಡಿಂಗ್ ಇಂಜನಿಯರಾದ ಮ|| ಎ. ಎಸ್. ನಾಗವೇಕರ್ ಯವರು 1902ನೆ ಆಗಸ್ಟ್ 8ನೆ ತಾರೀಖಿನಾರಭ್ಯ ಸೂಪರ್‌ನ್ಯೂಮರರಿ ಸೂಪರಿಂಟೆಂಡಿಂಗ್ ಇಂಜನಿಯರಾಗಿ ಕಾಯಂ ಮಾಡಲ್ಪಟ್ಟಿರುತ್ತಾರೆ.

ತಾರೀಖು 8ನೆ ಜನವರಿ 1904.

ನಂ. 35—115, ಮ|| ಎಸ್. ಎ. ರಾಮಸ್ವಾಮಿ ಅಯ್ಯರ್ ಬಿ. ಇ., ಯವರು ಮಾಹೆ ಯಾನ 80 ರೂಪಾಯಿಗಳ ತಲಬಿನ ಮೇಲೆ ಹಂಗಾಮಿ ಸಬ್ ಅಸಿಸ್ಟೆಂಟ್ ಇಂಜನಿಯರಾಗಿ ಮಾಹೆ ಮಜಕೂರ್ 5ನೆ ತಾರೀಖಿನಾರಭ್ಯ ನೌಕರರ್ಮಾಡಲ್ಪಟ್ಟು ಪೂರ್ವ ಸರ್ಕಲಿಗೆ ನೇಮಿಸಲ್ಪಟ್ಟಿರುತ್ತಾರೆ.

ತಾರೀಖು 12ನೆ ಜನವರಿ 1904.

ನಂ. 52—185, ಶಿವಮೊಗ್ಗ ಡಿವಿಜನಿಗೆ ಸೇರಿದ ಸಬ್ ಅಸಿಸ್ಟೆಂಟ್ ಇಂಜನಿಯರ್ ಮ|| ಬಿ. ಗರುಡಾಚಾರ್ಯ, ಎಲ್. ಸಿ. ಇ., ಯವರಿಗೆ ಮಾಹೆ ಮಜಕೂರು 20ನೆ ತಾರೀಖಿನ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತದೆ.

ತಾರೀಖು 9ನೆ ಜನವರಿ 1904.

ನಂ. 42—138, ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖಾ (ಲೋಕಲ್) ಇಂಜನಿಯರ್ ಸಿಬ್ಬಂದಿಯಲ್ಲಿ ಇದರಡೀ ಕಂಡ ಬಡ್ತಿಗಳು ನಮೂದಿಸಲ್ಪಟ್ಟ ತಾರೀಖುಗಳಾರಭ್ಯ ಹುಕುಂ ಮಾಡಲ್ಪಟ್ಟಿರುತ್ತವೆ:—

ನಂಬರು.	ಹೆಸರು.	ಹಾಲಿ ಕ್ಲಾಸು.	ಬಡ್ತಿ ಮಾಡಲ್ಪಟ್ಟ ಕ್ಲಾಸು.	ಬಡ್ತಿಯ ಸ್ವಭಾವ.	ಯಾವ ಲಾಗಾಯತು.	ಷರಾ.
1	ವೆ॥ ಬಿ. ಸೀತಾರಾಮ ರಾಯರು ..	ಕಾಯಂ ಮೂರನೇ ಕ್ಲಾಸಿನ ಮತ್ತು ಹಂಗಾಮಿ ಎರಡನೇ ಕ್ಲಾಸಿನ ಎಗ್ಜಿಕ್ಯೂಟಿವ್ ಇಂಜನಿಯರ್	ಎರಡನೇ ಕ್ಲಾಸಿನ ಎಗ್ಜಿಕ್ಯೂಟಿವ್ ಇಂಜನಿಯರ್	ಕಾಯಂ	1—9—1903	ಸೂಪರ್ ನ್ಯೂಮರರಿ ಸೂಪರಿಂಟೆಂಡಿಂಗ್ ಇಂಜನಿಯರಾಗಿ ಕಾಯಂ ಮಾಡಲ್ಪಟ್ಟ ವೆ॥ ಸಿ. ಟಿ. ದಳಾಲಿಯವರಿಗೆ ಬದಲಾಗಿ
2	,, ಸಿ. ಎ. ಮಹದೇವಶಾಸ್ತ್ರಿಯವರು ..	ಕಾಯಂ ನಾಲ್ಕನೇ ಕ್ಲಾಸಿನ ಮತ್ತು ಹಂಗಾಮಿ ಮೂರನೇ ಕ್ಲಾಸಿನ ಎಗ್ಜಿಕ್ಯೂಟಿವ್ ಇಂಜನಿಯರ್	ಮೂರನೇ ಕ್ಲಾಸಿನ ಎಗ್ಜಿಕ್ಯೂಟಿವ್ ಇಂಜನಿಯರ್	ಡಿಟೋ	ಡಿಟೋ	
3	,, ಬಿ. ರಂಗರಾಯರು ...	ಕಾಯಂ ಮೊದಲನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್ ಮತ್ತು ಹಂಗಾಮಿ ನಾಲ್ಕನೇ ಕ್ಲಾಸಿನ ಎಗ್ಜಿಕ್ಯೂಟಿವ್ ಇಂಜನಿಯರ್	ನಾಲ್ಕನೇ ಕ್ಲಾಸಿನ ಎಗ್ಜಿಕ್ಯೂಟಿವ್ ಇಂಜನಿಯರ್	ಡಿಟೋ	ಡಿಟೋ	
4	,, ಎಚ್. ಜೆ. ಮೊಲ್ಲಾಯಿ ಯವರು ...	ಕಾಯಂ ಎರಡನೇ ಕ್ಲಾಸಿನ ಮತ್ತು ಹಂಗಾಮಿ ಮೊದಲನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್	ಮೊದಲನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್	ಡಿಟೋ	ಡಿಟೋ	
5	,, ಆರ್. ವಿ. ಸುಬ್ರಾ ಅಯ್ಯರ್ ಯವರು ..	ಕಾಯಂ ಮೂರನೇ ಕ್ಲಾಸಿನ ಮತ್ತು ಹಂಗಾಮಿ ಎರಡನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್	ಎರಡನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್	ಡಿಟೋ	ಡಿಟೋ	
6	,, ಸಿ. ಕೃಷ್ಣಯ್ಯಂಗಾರ್ರು .	ಕಾಯಂ ಮೊದಲನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್ ಮತ್ತು ಹಂಗಾಮಿ ಮೂರನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್	ಮೂರನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್	ಡಿಟೋ	ಡಿಟೋ	
7	,, ಎ. ಎ. ಅನಂದಾಳ್ವಾರ್ ..	ಕಾಯಂ ಎರಡನೇ ಕ್ಲಾಸಿನ ಮತ್ತು ಹಂಗಾಮಿ ಮೊದಲನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್	ಮೊದಲನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್	ಡಿಟೋ	ಡಿಟೋ	

ನಂಬರು	ಹೆಸರು.	ಹಾಲಿ ಕ್ಲಾಸು.	ಬಡ್ತಿ ಮಾಡಲ್ಪಟ್ಟ ಕ್ಲಾಸು.	ಬಡ್ತಿಯ ಸ್ವಭಾವ.	ಯಾವ ಲಾಗಾಯತು.	ಷರಾ.
8	ಮಿ|| ಎ. ರಾಮರಾಯರು ..	ಕಾಯಂ ಮೂರನೇ ಕ್ಲಾಸಿನ ಮತ್ತು ಹಂಗಾಮಿ ಎರಡನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್	ಎರಡನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್	ಕಾಯಂ	1-9-1903	
9	,, ಸಿ. ವಿಜಯರಂಗಂ ನಾಯಿಡುಯವರು	ಹಂಗಾಮಿ ಎರಡನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್	ಮೂರನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್	ಡಿಟೋ	ಡಿಟೋ	ನೋಟ್.— ಈಗಿನಂತೆಯು ಎರಡನೇ ಕ್ಲಾಸಿನ ಹಂಗಾಮಿ ದರ್ಜೆಯಲ್ಲಿರತಕ್ಕದ್ದು
10	,, ಕೊಂಗತ್ತಿ ಪೊನ್ನಪ್ಪನವರು ...	ಕಾಯಂ ಮೊದಲನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್	ಮೂರನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್	ಹಂಗಾಮಿ	ಡಿಟೋ	ಮೂರನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರಾಗಿ ಹಂಗಾಮಿ ಬಡ್ತಿಯನ್ನು ಸಹಾ ಹೊಂದಿರುವ ಮಿ|| ಸಿ. ಕೃಷ್ಣಯ್ಯಂಗಾರ್ರಿಗೆ ಬದಲಾಗಿ
11	,, ಎ. ಕೃಷ್ಣಸ್ವಾಮಯ್ಯ ...	ಕಾಯಂ ಎರಡನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್	ಮೊದಲನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್	ಡಿಟೋ	ಡಿಟೋ	
12	,, ಕೆ. ಅನಂತಾಚಾರ್ಯರು .	ಕಾಯಂ ಮೊದಲನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್ ಮತ್ತು ಹಂಗಾಮಿ ಮೂರನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್	ಮೂರನೇ ಕ್ಲಾಸ್ ಅಸಿಸ್ಟೆಂಟ್ ಇಂಜನಿಯರ್	ಕಾಯಂ	19-10-03	ಪೆನ್ಶನ್ ಹೊಂದಿದ ಮೂರನೇ ಕ್ಲಾಸ್ ಅಸಿಸ್ಟೆಂಟ್ ಇಂಜನಿಯರ್ ಮಿ|| ಎಸ್. ಎ. ದುಗ್ಗಪ್ಪಯ್ಯನವರಿಗೆ ಬದಲಾಗಿ
13	,, ಬಿ. ಗರುಡಾಚಾರ್ಯರು ..	ಕಾಯಂ ಎರಡನೇ ಕ್ಲಾಸಿನ ಮತ್ತು ಹಂಗಾಮಿ ಮೊದಲನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್	ಮೊದಲನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್	ಡಿಟೋ	ಡಿಟೋ	
14	,, ಬಿ. ನಂಜುಂಡಾರಾಧ್ಯರು ...	ಕಾಯಂ ಮೂರನೇ ಕ್ಲಾಸಿನ ಮತ್ತು ಹಂಗಾಮಿ ಎರಡನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್	ಎರಡನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್	ಡಿಟೋ	ಡಿಟೋ	
15	,, ಬಿ. ಎಸ್. ವೆಂಕಟಾಚಾರ್ಯರು	ಕಾಯಂ ಮೂರನೇ ಕ್ಲಾಸಿನ ಮತ್ತು ಹಂಗಾಮಿ ಎರಡನೇ ಕ್ಲಾಸಿನ ಎಗ್ಸಿಕ್ಯೂಟಿವ್ ಇಂಜನಿಯರ್	ಎರಡನೇ ಕ್ಲಾಸಿನ ಎಗ್ಸಿಕ್ಯೂಟಿವ್ ಇಂಜನಿಯರ್	ಸಬ್‌ಪ್ರೊಟೆಂ	1-12-03	ಪಬ್ಲಿಕ್ ವರ್ಕ್ಸ್ ಇಲಾಖೆಯ ಬಿಟ್ಟು ಯಲ್ಲಿ ಸೆಕೆಂಡ್ ಆದ ಮಿ|| ಡಿ. ಸೀತಾರಾಮರಾಯರಿಗೆ ಬದಲಾಗಿ

16	,, ಸಿ. ಎ. ಮಹದೇವಶಾಸ್ತ್ರಿಯವರು	ಕಾಯಂ ಮೂರನೇ ಕ್ಲಾಸಿನ ಎಗ್ಸಿಕ್ಯೂಟಿವ್ ಇಂಜನಿಯರ್	ಎರಡನೇ ಕ್ಲಾಸಿನ ಎಗ್ಸಿಕ್ಯೂಟಿವ್ ಇಂಜನಿಯರ್	ಹಂಗಾಮಿ	1-12-03	
17	,, ಬಿ. ಪಿ. ರಾಘವಲು ನಾಯಿಡು ಯವರು	ಕಾಯಂ ನಾಲ್ಕನೇ ಕ್ಲಾಸಿನ ಮತ್ತು ಹಂಗಾಮಿ ಮೂರನೇ ಕ್ಲಾಸಿನ ಎಗ್ಸಿಕ್ಯೂಟಿವ್ ಇಂಜನಿಯರ್	ಮೂರನೇ ಕ್ಲಾಸಿನ ಎಗ್ಸಿಕ್ಯೂಟಿವ್ ಇಂಜನಿಯರ್	ಸಬ್ ಪ್ರೋಟೆಂ	ಡಿಟ್ಟೋ	
18	,, ಡಿ. ರಂಗರಾಯರು	ಕಾಯಂ ನಾಲ್ಕನೇ ಕ್ಲಾಸಿನ ಎಗ್ಸಿಕ್ಯೂಟಿವ್ ಇಂಜನಿಯರ್	ಡಿಟ್ಟೋ	ಹಂಗಾಮಿ	ಡಿಟ್ಟೋ	
19	,, ವಿ. ಅರುಣಾಚಲಮೊದಲಿಯಾರ್ರು	ಕಾಯಂ ಮೊದಲನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್ ಮತ್ತು ಹಂಗಾಮಿ ನಾಲ್ಕನೇ ಕ್ಲಾಸಿನ ಎಗ್ಸಿಕ್ಯೂಟಿವ್ ಇಂಜನಿಯರ್	ನಾಲ್ಕನೇ ಕ್ಲಾಸಿನ ಎಗ್ಸಿಕ್ಯೂಟಿವ್ ಇಂಜನಿಯರ್	ಸಬ್ ಪ್ರೋಟೆಂ	ಡಿಟ್ಟೋ	
20	,, ಬಿ. ಸುಬ್ಬರಾಯರು	ಕಾಯಂ ಮೊದಲನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್	ಡಿಟ್ಟೋ	ಹಂಗಾಮಿ	ಡಿಟ್ಟೋ	
21	,, ಕೆ. ಕೃಷ್ಣಯ್ಯಂಗಾರ್ರು	ಕಾಯಂ ಎರಡನೇ ಕ್ಲಾಸಿನ ಮತ್ತು ಹಂಗಾಮಿ ಮೊದಲನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್	ಮೊದಲನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್	ಸಬ್ ಪ್ರೋಟೆಂ	ಡಿಟ್ಟೋ	
22	,, ಸಿ. ಮಾಧವರಾಯರು	ಕಾಯಂ ಎರಡನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್	ಡಿಟ್ಟೋ	ಹಂಗಾಮಿ	ಡಿಟ್ಟೋ	
23	,, ಜಾರ್ಜ್ ಫೋರ್ಡ್ ಯವರು	ಕಾಯಂ ಮೂರನೇ ಕ್ಲಾಸಿನ ಮತ್ತು ಹಂಗಾಮಿ ಎರಡನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್	ಎರಡನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್	ಸಬ್ ಪ್ರೋಟೆಂ	ಡಿಟ್ಟೋ	
24	,, ಜೆ. ಇ. ಎ. ಡಿಕ್ರೂಜ್ ಯವರು	ಕಾಯಂ ಮೂರನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್	ಎರಡನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್	ಹಂಗಾಮಿ	ಡಿಟ್ಟೋ	
25	,, ವೆಂಕಟರಾವ್, ನಿಜಗಲ್ ಯವರು	ಕಾಯಂ ಮೊದಲನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್ ಮತ್ತು ಹಂಗಾಮಿ ಮೂರನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್	ಮೂರನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್	ಸಬ್ ಪ್ರೋಟೆಂ	ಡಿಟ್ಟೋ	
26	,, ಟಿ. ಜಿ. ಲಕ್ಷ್ಮಣರಾಯರು	ಕಾಯಂ ಮೊದಲನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್	ಡಿಟ್ಟೋ	ಹಂಗಾಮಿ	ಡಿಟ್ಟೋ	
	,,* ಎಂ. ಎ. ಆನಂದಾಳ್ವಾರ್ ಯವರು	ಡಿಟ್ಟೋ	ಡಿಟ್ಟೋ	ಡಿಟ್ಟೋ	ಡಿಟ್ಟೋ	* ಪಬ್ಲಿಕ್ ವರ್ಕ್ಸಿನ ಲಿಸ್ಟಿನಲ್ಲಿ ಸೇರಿದ್ದಾದ ಮೆ|| ಟಿ. ಜಿ. ಲಕ್ಷ್ಮಣರಾಯರಿಗೆ ಬದಲಾಗಿ
27	,, ಬಿ. ಸಿ. ಶ್ರೀನಿವಾಸಯ್ಯಂಗಾರ್ರು	ಕಾಯಂ ಎರಡನೇ ಕ್ಲಾಸಿನ ಮತ್ತು ಹಂಗಾಮಿ ಮೊದಲನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್	ಮೊದಲನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್	ಸಬ್ ಪ್ರೋಟೆಂ	ಡಿಟ್ಟೋ	
28	,, ಎನ್. ರಾಮರಾಯರು	ಕಾಯಂ ಎರಡನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್	ಡಿಟ್ಟೋ	ಹಂಗಾಮಿ	ಡಿಟ್ಟೋ	
29	,, ಕೆ. ಆರ್. ಶೇಷಾಚಾರ್ರು	ಕಾಯಂ ಮೂರನೇ ಕ್ಲಾಸಿನ ಮತ್ತು ಹಂಗಾಮಿ ಎರಡನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್	ಎರಡನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್	ಸಬ್ ಪ್ರೋಟೆಂ	ಡಿಟ್ಟೋ	

ಹುಕುಂ ಬಮೋಜಿಬ್,
ಡಬ್ಲ್ಯು. ಮೆಕಹಚೀನ್,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನ್ಮೆಂಟ್ ಸೆಕ್ರೆಟರಿ.

ಫಾರೆಸ್ಟು.

ಪ್ರಸಿದ್ಧ ಪತ್ರಿಕೆ.

ತಾರೀಖು 30ನೆ ನವಂಬರ್ 1903.

ನಂ. 352—3783, ಸರ್ 1900ನೆ ಇಸವಿ 11ನೆ ನಂಬರ್ ಮೈಸೂರು ಫಾರೆಸ್ಟು ರಗ್ಯುಲೇಷನ್ 17ನೆ ಸೆಕ್ಷನಿನ ವಿಧಿಗಳನ್ನನುಸರಿಸಿ ಶ್ರೀಮನ್ ಮೈಸೂರು ಮಹಾರಾಜರವರ ಸರ್ಕಾರದವರು ಈ ಕೆಳಗೆ ಕಂಡ ಷೆಡ್ಯೂಲಿನಲ್ಲಿ ನಮೂದು ಇರುವ ಚಕ್ಕುಬಂದಿಗೆ ಒಳಪಟ್ಟ ಜಂಗಲ್ ಪ್ರದೇಶವನ್ನು ಸರ್ 1904ನೆ ಇಸವಿ ಜನವರಿ ಮಾಹೆ 1ನೆ ತಾರೀಖು ಲಾಗಾಯತು ಸ್ಟೇಟ್ ಫಾರೆಸ್ಟು ಎಂದು ತೀರ್ಮಾನಿಸಿ ಇದ್ದಾರೆ.

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಫಾರೆಸ್ಟು ಬ್ಲಾಕ ಹೆಸರು.	ವಿಸ್ತೀರ್ಣ. ಎ.	ಗು.	ಚಕ್ಕುಬಂದಿ.
ತುಮಕೂರು.	ಕೊರಟಗೆರೆ ಸಬ್ ತಾಲ್ಲೂಕು.	ಮಧುಗಿರಿ ಸ್ಟೇಟ್ ಫಾರೆಸ್ಟು ಕೋಳಿಕಲ್ಲು ಬ್ಲಾಕಿನ ಬಡಾವಣೆ.	1649	17	ಉತ್ತರಕ್ಕೆ.—ಬೈಸು ನಗಲೂರುಗ್ರಾಮದ ಸರ್ವೆ 88ನೆ ನಂಬರು ನೈರುತ್ಯ ಮೂಲೆಯಿಂದ ಹೊರಟು ಅದೇ ನಂಬರು ದಕ್ಷಿಣ ಕಡೆ ಬೂದಗಾವಿ ಗ್ರಾಮದ ಸರ್ವೆ 29ನೆ ನಂಬರು ನೈರುತ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಅದೇ ಸರ್ವೆ 29 ಮತ್ತು 31ನೆ ನಂಬರುಗಳ ದಕ್ಷಿಣವಾಗಿ 32ನೆ ನಂಬರು ನೈರುತ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ 32ನೆ ನಂಬರು ದಕ್ಷಿಣವಾಗಿ 33ನೆ ನಂಬರು ಪಶ್ಚಿಮವಾಗಿ 14ನೆ ನಂಬರು ನೈರುತ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಸರ್ವೆ 14, 11 ಮತ್ತು 17ನೆ ನಂಬರುಗಳಿಗೆ ದಕ್ಷಿಣವಾಗಿ ಆಖೈರ್ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಬೂದಗಾವಿ ಗ್ರಾಮದ ಸರ್ವೆ 17, 7 ಮತ್ತು 6ನೆ ನಂಬರುಗಳ ಪೂರ್ವ ದಿಕ್ಕಿನಲ್ಲಿ ಹೊರಟು ಆಖೈರ್ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಅದೇ ಬೂದಗಾವಿ ಗ್ರಾಮದ ಸರ್ವೆ 35, 39 ಮತ್ತು 38ನೆ ನಂಬರುಗಳ ದಕ್ಷಿಣ ಗಡಿಯಾದ "ನಾಲೆ" ಮೂಲಕ ಹೊರಟು ಆಖೈರ್ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ಪೂರ್ವಕ್ಕೆ.—ಅಲ್ಲಿಂದ ಕುಮಟೇನಹಳ್ಳಿ ಗ್ರಾಮದ ಸರ್ವೆ 11 ಮತ್ತು ಬೇಡೊಪ ಗ್ರಾಮದ 26 ಮತ್ತು 25ನೆ ನಂಬರುಗಳ ಪಶ್ಚಿಮವಾಗಿ ಹಾದು ಕೋಳಿಕಲ್ಲು ಸ್ಟೇಟ್ ಫಾರೆಸ್ಟು ಗಡಿಗೆ ಸೇರುತ್ತದೆ. ಅಲ್ಲಿಂದ ಅದೇ ಗಡಿಮೇಲೆ ಹೊರಟು ಕುರಂಕೋಟೆ ಗ್ರಾಮದ ಸರ್ವೆ 66ನೆ ನಂಬರಿನ ವಾಯುವ್ಯ ಮೂಲೆಗೆ ಸೇರುತ್ತದೆ. ದಕ್ಷಿಣಕ್ಕೆ.—ಅಲ್ಲಿಂದ ಕುರಂಕೋಟೆ ಗ್ರಾಮದ ಸರ್ವೆ 53ನೆ ನಂಬರ್ ಉತ್ತರ ಭಾಗವಾಗಿ ಅದೇನಂಬರಿನ ವಾಯುವ್ಯ ದಿಕ್ಕಿಗೆ ಸೇರಿ ಅಲ್ಲಿಂದ ಜಂಜರಾಮನಹಳ್ಳಿ ಗ್ರಾಮದ ಸರ್ವೆ 1ನೆ ನಂಬರಿನಲ್ಲಿ ಹೊರಟು ಅದೇ ಗ್ರಾಮದ ಸರ್ವೆ 60ನೆ ನಂಬರು ಪೂರ್ವ ಗಡಿಗೆ ಸೇರುತ್ತದೆ. ಪಶ್ಚಿಮಕ್ಕೆ.—ಅಲ್ಲಿಂದ ಜಂಜರಾಮನಹಳ್ಳಿ ಸರ್ವೆ 60ನೆ ನಂಬರು ಪೂರ್ವ ದಿಕ್ಕಾಗಿ ಮರನಾಯಿಕನಹಳ್ಳಿ ಸರ್ವೆ 42ನೆ ನಂಬರ್ ಪೂರ್ವ ದಿಕ್ಕಾಗಿ ಅದೇ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ನೆಗಲಾಲ ಗ್ರಾಮದ ಸರ್ವೆ 102ನೆ ನಂಬರಿನಲ್ಲಿ ಈಶಾನ್ಯ ದಿಕ್ಕಿಗೆ ನೇರವಾಗಿ ಮೊದಲು ಹೊರಟ ಸ್ಥಳಕ್ಕೆ ಸೇರುತ್ತದೆ.

ಷರಾ.—ಕೆಳಗೆ ನಮೂದಿರುವ ದಾರಿಗಳು 4 ಗಜಗಳಿಗಿಂತ ಜಾಸ್ತಿಯಾಗಿ ಅಗಲವಿಲ್ಲದೆ ಜನಗಳು ತಿರುಗಾಡುವ ಬಗ್ಗೆ ಬಿಡಲ್ಪಟ್ಟು ಇರುತ್ತದೆ.

1. ಕುರಂಕೋಟೆಯಿಂದ ಈಶ್ವರದೇವರ ಮತ್ತು ಸಿದ್ಧೇಶ್ವರದೇವರ ಗುಡಿಗಳಿಗೆ ಹೋಗುವ ದಾರಿ—ಈ ದಾರಿಯು ಕುರಂಕೋಟೆ ಗ್ರಾಮದ ಸರ್ವೆ 53 ಮತ್ತು 52ನೆ ನಂಬರುಗಳ ಮಧ್ಯ ಡಿಮಾರ್ಕೇಷನ್ ಲೈನಿನಲ್ಲಿ ಅದೇ ಗ್ರಾಮದ ಸರ್ವೆ 65ನೆ ನಂಬರಿನ ನೈರುತ್ಯ ಮೂಲೆಯಿಂದ 200 ಗಜದ ಫಾಸಲೆಯಲ್ಲಿ ಶುರುವಾಗಿ ಉತ್ತರ ಮತ್ತು ವಾಯುವ್ಯದಿಗ್ಭಾಗವಾಗಿ ಫಾರೆಸ್ಟಿನಲ್ಲಿ ಬೆಟ್ಟದಮೇಲೆ ಇರುವ ಗುಡಿ ವರೆಗೆ 1958 ಗಜಗಳ ಫಾಸಲೆ ವರೆಗೆ ಹೋಗುತ್ತದೆ.

2. ಕುರಂಕೋಟೆಯಿಂದ ಈಶ್ವರದೇವರ ಗುಡಿಗೆ ಹೋಗುವ ದಾರಿ.—ಈ ದಾರಿಯು ಕುರಂಕೋಟೆ ಗ್ರಾಮದ ಸರ್ವೆ 53 ಮತ್ತು 52ನೆ ನಂಬರುಗಳ ಮಧ್ಯೆ ಡಿಮಾರ್ಕೇಷರ್ನ ಲೈನಿನಲ್ಲಿ ಅದೇ ಗ್ರಾಮದ 53ನೆ ನಂಬರ್ ವಾಯುವ್ಯ ಮೂಲೆಯಿಂದ 2 ಫರ್ಲಾಂಗು ದೂರದಲ್ಲಿ ಫಾರೆಸ್ಟ್ ಪ್ರವೇಶಮಾಡಿ 5 ಫರ್ಲಾಂಗು ದೂರ ವಾಯುವ್ಯದಿಂಗ್ಮುಖವಾಗಿ ಸ್ಟೇಟ್ ಫಾರೆಸ್ಟಿನಲ್ಲಿ ಬೆಟ್ಟದಮೇಲೆ ಇರುವ ಗುಡಿ ವರಿಗೆ ಹೋಗುತ್ತದೆ.

3. ಜಂಜರಾಮನ ಹಳ್ಳಿಯಿಂದ ಈಶ್ವರದೇವರ ಗುಡಿಗೆ ಹೋಗುವ ದಾರಿ.—ಈ ದಾರಿಯು ಜಂಜರಾಮನಹಳ್ಳಿ ಗ್ರಾಮದ ಸರ್ವೆ 1ನೆ ನಂಬರಿನಲ್ಲಿ ಹೋಗುವ ಡಿಮಾರ್ಕೇಷರ್ನ ಲೈನಿನಲ್ಲಿ ಕುರಂಕೋಟೆ ಗ್ರಾಮದ ಸರ್ವೆ 53ನೆ ನಂಬರಿನ ವಾಯುವ್ಯ ಮೂಲೆಗೆ 2 ಫರ್ಲಾಂಗು ದೂರದಲ್ಲಿ ಫಾರೆಸ್ಟ್ ಪ್ರವೇಶ ಮಾಡಿ ಉತ್ತರದಿಂಗ್ಮುಖವಾಗಿ 2354 ಗಜಗಳ ಫಾಸಲೆ ಗುಡಿವರಿಗೆ ಹೋಗುತ್ತದೆ.

4. ನೆಗಲಾಲದಿಂದ ಸಿದ್ಧೇಶ್ವರ ಗುಡಿಗೆ ಹೋಗುವ ದಾರಿ.—ಈ ದಾರಿಯು ಬೂದಗಾವಿ ಗ್ರಾಮದ ಸರ್ವೆ 31ನೆ ನಂಬರಿನ ನೈರುತ್ಯ ಮೂಲೆಯಿಂದ 110 ಗಜ ದೂರದಲ್ಲಿ ಜಂಗಲ್ ಪ್ರವೇಶ ಮಾಡಿ ಆಗ್ನೇಯದಿಂಗ್ಮುಖವಾಗಿ 1364 ಗಜಗಳ ಫಾಸಲೆ ಗುಡಿ ವರಿಗೆ ಹೋಗುತ್ತದೆ.

ತಾರೀಖು 30ನೆ ಡಿಸೆಂಬರ್ 1903.

ನಂ. 360—3791, ಸ್ 1900ನೆ ಇಸವಿ 11ನೆ ನಂಬರು ಮೈಸೂರು ಫಾರೆಸ್ಟ್ ರೆಗ್ಯುಲೇಷರ್ನ 17ನೆ ಸೆಕ್ಷನ್ನಿನ ವಿಧಿಗಳನ್ನನುಸರಿಸಿ ಶ್ರೀಮನ್ ಮೈಸೂರು ಮಹಾರಾಜರವರ ಸರ್ಕಾರದವರು ಈ ಕೆಳಗೆ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಚಕ್ಕುಬಂದಿಗೆ ಒಳಪಟ್ಟ ಪ್ರದೇಶವನ್ನು 1904ನೆ ಇಸವಿ ಜನವರಿ ಮಾಹೆ 1ನೆ ತಾರೀಖು ಲಾಗಾಯತು ಸ್ಟೇಟ್ ಫಾರೆಸ್ಟಾಗಿ ನಿರ್ಧರಿಸಿರುತ್ತಾರೆ:—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲೋಕು.	ಫಾರೆಸ್ಟು ಹೆಸರು.	ವಿಸ್ತೀರ್ಣ.	ಚಕ್ಕುಬಂದಿ.
ತುಮಕೂರು.	ಮದ್ದಗಿರಿ ತಾಲ್ಲೋಕು ಮತ್ತು ಕೊರಟಗೆರೆ ಸಬ್ ತಾಲೋಕು	ಮದ್ದಗಿರಿ ಸ್ಟೇಟ್ ಫಾರೆಸ್ಟು ವಿಸ್ತರಣೆ	2284 ಎಕರೆ. 18 ಗುಂಟೆ.	ಉತ್ತರಕ್ಕೆ.—ಡಿಮಾರ್ಕೇಷರ್ನ ಲೈನು ಕಮ್ಮನಕೋಟೆ ಗ್ರಾಮದ ಸರ್ವೆ 43ನೆ ನಂಬರು ದಕ್ಷಿಣ ಮೂಲೆಯಲ್ಲಿ ಮದ್ದಗಿರಿ ಫಾರೆಸ್ಟಿನ ಡಿಮಾರ್ಕೇಷರ್ನ ಲೈನ್ನಿಂದ ಷುರುವಾಗಿ ಅದೇ ಗ್ರಾಮದ ಸರ್ವೆ 44 ಮತ್ತು 33ನೆ ನಂಬರುಗಳಲ್ಲಿ ಹೊರಟು ಸರ್ವೆ 31ನೆ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಸರ್ವೆ 31 ಮತ್ತು 30ನೆ ನಂಬರುಗಳ ದಕ್ಷಿಣ ಗಡಿಯಲ್ಲಿ ಹೊರಟು ಕಡೇ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಸರ್ವೆ 30 ಮತ್ತು 28ನೆ ನಂಬರುಗಳ ಪೂರ್ವ ಗಡಿ ಮೇಲೆ ಹೊರಟು ಚಿನ್ನ ಕವಜ್ರದ ಗ್ರಾಮದ ಸರ್ವೆ 29ನೆ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಅದೇ 29ನೆ ನಂಬರು ದಕ್ಷಿಣ ಗಡಿ ಮೇಲೆ ಹೊರಟು ಅದೇ ಗ್ರಾಮದ ಸರ್ವೆ 16ನೆ ನಂಬರ್ ನೈರುತ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಅದೇ ನಂಬರಿನ ದಕ್ಷಿಣ ಗಡಿಮೇಲೆ ಹೊರಟು ಅದರ ಆಗ್ನೇಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಸರ್ವೆ 17 ಮತ್ತು 13 ನಂಬರುಗಳ ದಕ್ಷಿಣ ಗಡಿ ಮೇಲೆ ಹೊರಟು ಸರ್ವೆ 163ನೆ ನಂಬರವರಿಗೂ ಹೋಗುತ್ತದೆ. ಅಲ್ಲಿಂದ ಅದೇ 163ನೆ ನಂಬರ್ ಮಧ್ಯೆ ಆಗ್ನೇಯದಿಂಗ್ಮುಖವಾಗಿ ಹೊರಟು ಅದೇ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ಪೂರ್ವಕ್ಕೆ.—ಅಲ್ಲಿಂದ ಚಿನ್ನಕವಜ್ರದ ಗ್ರಾಮದ ಸರ್ವೆ 52ನೆ ನಂಬರಿನಲ್ಲಿಯೂ ಮತ್ತು ದಾಸರಹಳ್ಳಿ ಮತ್ತು ಜೋಡಿ ಇನಾಂ ವಲಸೆವೀರನಹಳ್ಳಿ ಗಡಿಗಳಮೇಲೆಯೂ ಹೊರಟು ಚನ್ನರಾಯದುರ್ಗ, ಬೈರೇನಹಳ್ಳಿ ಮತ್ತು ವಲಸೆವೀರನಹಳ್ಳಿ ಈ ಮೂರು ಗ್ರಾಮಗಳ ಗಡಿ ಸೇರುವ ಸ್ಥಳಕ್ಕೆ ಸೇರುತ್ತದೆ. ದಕ್ಷಿಣಕ್ಕೆ.—ಅಲ್ಲಿಂದ ಚನ್ನರಾಯದುರ್ಗ ಗ್ರಾಮದ ಸರ್ವೆ 11ನೆ ನಂಬರಿನಲ್ಲಿ ಹೊರಟು ಸರ್ವೆ 10ನೆ ನಂಬರ್ ಈಶಾನ್ಯ ದಿಕ್ಕಿಗೆ ಸೇರುತ್ತದೆ. ಅಲ್ಲಿಂದ 1ನೆ ನಂಬರಿನ ಉತ್ತರ ಗಡಿ ಮೇಲೆ ಹೊರಟು ಆ ನಂಬರಿನ ವಾಯುವ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಅದೇ 1ನೆ ನಂಬರಿನ ಉತ್ತರ ಗಡೀಲಿ ಹೊರಟು ಅದೇ ಗ್ರಾಮದ ಸರ್ವೆ 63ನೆ ನಂಬರಿಗೆ ಸೇರುತ್ತದೆ. ಅಲ್ಲಿಂದ ಅದೇ ಗ್ರಾಮದ ಸರ್ವೆ 55, 63 ಮತ್ತು 73ನೆ ನಂಬರುಗಳ ಉತ್ತರ ಗಡಿ ಮೇಲೆ ಹೊರಟು ಕಡೇ ನಂಬರಿನ ವಾಯುವ್ಯ ಮೂಲೆಯಲ್ಲಿ ಚನ್ನರಾಯದುರ್ಗ ಮತ್ತು ಮದ್ದಗಿರಿ ಸ್ಟೇಟ್ ಫಾರೆಸ್ಟು ಸೇರುವ ಗಡಿವರಿಗೆ ಹೋಗುತ್ತದೆ. ಅಲ್ಲಿಂದ ಮದ್ದಗಿರಿ ಸ್ಟೇಟ್ ಫಾರೆಸ್ಟಿಗೆ ಆಗ್ನೇಯ ದಿಕ್ಕಿನಲ್ಲಿ ಡಿಮಾರ್ಕೇಷರ್ನ ಲೈನಿಗೆ ಸೇರುತ್ತದೆ. ಪಶ್ಚಿಮಕ್ಕೆ.—ಮದ್ದಗಿರಿ ಸ್ಟೇಟ್ ಫಾರೆಸ್ಟು.

ಷರಾ.—ಕೆಳಗೆ ನಮೂದಿರುವ ದಾರಿಯನ್ನು ಅಗಲದಲ್ಲಿ 6 ಗಜಕ್ಕೆ ಜಾಸ್ತಿ ಇಲ್ಲದೆ ಜನಗಳಿಗೂ, ದನಗಳಿಗೂ ಮತ್ತು ಗಾಡಿಗಳಿಗೂ ಬಿಟ್ಟು ಇರುತ್ತೆ.

ಮದ್ದಗಿರಿಯಿಂದ ಚನ್ನರಾಯದುರ್ಗಕ್ಕೆ ಹೋಗುವ ದಾರಿ.—ಈ ದಾರಿಯು ಚಿನ್ನಕವಜ್ರಗ್ರಾಮದ ಸರ್ವೆ 16ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಷುರುವಾಗಿ ದಕ್ಷಿಣದಿಂಗ್ಮುಖವಾಗಿ 2178 ಗಜ ಲಾಂಬಿ ಅದೇ ಗ್ರಾಮದ ಸರ್ವೆ 17ನೆ ನಂಬರಿನ ದಕ್ಷಿಣ ಮೂಲೆ ವರಿಗೆ ಹೋಗುತ್ತದೆ.

ತಾರೀಖು 30ನೆ ನವಂಬರ್ 1903.

ನಂ. 356—3787, ಸನ್ 1900ನೆ ಇಸವಿ 11ನೆ ನಂಬರ್ ಮೈಸೂರು ಫಾರೆಸ್ಟು ರೆಗ್ಯುಲೇಷನ್ 17ನೆ ಸೆಕ್ಷನಿನ ವಿಧಿಗಳನ್ನನುಸರಿಸಿ ಮೈಸೂರ ಶ್ರೀಮನ್ ಮಹಾರಾಜರವರ ಸರ್ಕಾರದವರು ಈ ಕೆಳಗೆ ಕಂಡ ಷೆಡ್ಯೂಲಿನಲ್ಲಿ ನಮೂದಿರುವ ಚಕ್ಕುಬಂದಿಗೆ ಒಳಪಟ್ಟ ಜಂಗಲ್ ಪ್ರದೇಶವನ್ನು 1904ನೆ ಇಸವಿ ಜನವರಿ ಮಾಹೆ 1ನೆ ತಾರೀಖು ಲಾಗಾಯತು ಸ್ಟೇಟ್ ಫಾರೆಸ್ಟೆಂದು ತೀರ್ಮಾನಿಸಿ ಇದ್ದಾರೆ.

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ವಿಸ್ತೀರ್ಣ.	ಜಂಗಲಿನ ಹೆಸರು.	ಚಕ್ಕುಬಂದಿ.
ತುಮಕೂರು.	ಕೊರಟಗೆರೆ ಸಬ್ ತಾಲ್ಲೂಕು.	911 ಎಕರೆ.	ಕವರಗಲ್.	ಉತ್ತರಕ್ಕೆ.—ಕರಿಯಮ್ಮನಹಳ್ಳಿ ಗ್ರಾಮದ ಸರ್ವೆ 2ನೆ ನಂಬರ ನೈರುತ್ಯ ಮೂಲೆಯಿಂದ ಲೈನು ಪ್ರಾರಂಭವಾಗಿ ಅದೇ ನಂಬರಿನ ದಕ್ಷಿಣ ದಿಕ್ಕಿನಲ್ಲಿ ಹೊರಟು ಸಂಗಾಪುರದ ಸರ್ವೆ 9ನೆ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಅದೇ ಸಂಗಾಪುರದ 9ನೆ ನಂಬರು ಮತ್ತು ಬಿಳಿ ಗ್ರಾಮದ 71ನೆ ನಂಬರ ದಕ್ಷಿಣ ದಿಕ್ಕಿನಲ್ಲಿ ಹೊರಟು ಅದೇ ಗ್ರಾಮದ 68ನೆ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಸರ್ವೆ 64ನೆ ನಂಬರಿನ ದಕ್ಷಿಣವಾಗಿ ಹೊರಟು ಆ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಅಗ್ರಹಾರಗ್ರಾಮದ ಗಡಿ ಮೇಲೆ ಹೊರಟು ತರಟಿರೊಪ್ಪದ ಸರ್ವೆ 65ನೆ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ಪೂರ್ವಕ್ಕೆ.—ಅಲ್ಲಿಂದ ತರಟಿರೊಪ್ಪದ ಸರ್ವೆ 65ನೆ ನಂಬರಿನ ಉತ್ತರ ಮತ್ತು ಪಶ್ಚಿಮ ಗಡಿ ಮೇಲೂ ಮತ್ತು ಸರ್ವೆ 116ನೆ ನಂಬರಿನ ಪಶ್ಚಿಮ ಗಡಿ ಮೇಲೂ ಹೊರಟು ಆಖೈರ್ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ದಕ್ಷಿಣಕ್ಕೆ.—ಅಲ್ಲಿಂದ ತರಟಿರೊಪ್ಪದ ಸರ್ವೆ 69 ಮತ್ತು 67ನೆ ನಂಬರುಗಳ ಉತ್ತರ ಗಡಿ ಮೇಲೆ ಹೊರಟು ಆಖೈರ್ ನಂಬರಿನ ವಾಯುವ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಅದೇ ಗ್ರಾಮದ ಸರ್ವೆ 67ನೆ ನಂಬರಿನ ಪಶ್ಚಿಮ ಮತ್ತು ದಕ್ಷಿಣ ಗಡಿಗಳ ಮೇಲೂ ಮತ್ತು ಸರ್ವೆ 67, 70, 78, 113ನೆ ನಂಬರುಗಳ ಪಶ್ಚಿಮ ಗಡಿ ಮೇಲೂ ಹೊರಟು ಸರ್ವೆ 114ನೆ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಅದೇ ನಂಬರಿನ ಉತ್ತರ ಗಡಿ ಮೇಲೂ ಸರ್ವೆ 83ನೆ ನಂಬರಿನ ಉತ್ತರ ಮತ್ತು ಪಶ್ಚಿಮ ಗಡಿಗಳ ಮೇಲೂ ಹೊರಟು ಚನ್ನಪಟ್ಣ ಗ್ರಾಮದ ಸರ್ವೆ 7ನೆ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಅದೇ ನಂಬರಿನ ಉತ್ತರ ಮತ್ತು ವಾಯುವ್ಯ ಗಡಿಗಳ ಮೇಲೆ ಹೊರಟು ಅದೇ ಗ್ರಾಮದ ಸರ್ವೆ 5ನೆ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಅದೇ 5ನೆ ನಂಬರಿನ ಈಶಾನ್ಯ, ಉತ್ತರ ಮತ್ತು ವಾಯುವ್ಯ ಗಡಿಗಳ ಮೇಲೆ ಹೊರಟು ಕಂಬದಹಳ್ಳಿ ಗ್ರಾಮದ ಗಡಿ ಬಾಂದಿಗೆ ಸೇರುತ್ತದೆ. ಪಶ್ಚಿಮಕ್ಕೆ.—ಅಲ್ಲಿಂದ ಕಂಬದಹಳ್ಳಿ ಗ್ರಾಮದ ಸರ್ವೆ 15, 14, 13, 12, 1, 6 ಮತ್ತು 9ನೆ ನಂಬರುಗಳ ಪೂರ್ವಗಡಿ ಮೇಲೆ ಹೊರಟು ಅದೇ ಗ್ರಾಮದ ಸರ್ವೆ 8ನೆ ನಂಬರಿನ ಈಶಾನ್ಯಮೂಲೆಗೆ ಸೇರುತ್ತದೆ. ಅಲ್ಲಿಂದ ಅದೇ ನಂಬರಿನ ಉತ್ತರ ಗಡಿ ಮೇಲೆ ಹೊರಟು ಸರ್ವೆ 9ನೆ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಅದೇ ನಂಬರಿನ ಪೂರ್ವ ಗಡಿ ಮೇಲೆ ಹೊರಟು ಮೊದಲು ಲೈನ್ ಪ್ರಾರಂಭವಾದ ಸ್ಥಳಕ್ಕೆ ಹೋಗಿ ಸೇರುತ್ತದೆ.

ಷರಾ.—ಕೆಳಗೆ ನಮೂದಿರುವ ದಾರಿಗಳನ್ನು ಬಿಟ್ಟು ಇರುತ್ತದೆ.

1. ಕಂಬದಹಳ್ಳಿ ಗ್ರಾಮದ ರೈತರ ದನಗಳನ್ನು ಅವರ ಗೋಮಾಳ ಜಮೀನಿಗೆ ಹೋಗಲು ಅದೇ ಗ್ರಾಮದ ಸರ್ವೆ 11ನೆ ನಂಬರಿನ ಗಡಿ ಮೇಲೆ ಬರುವ ಡಿಮಾರ್ಕೇಷನ್ ಲೈನಿನಲ್ಲಿ ದಾರಿ ಬಿಟ್ಟು ಇದೆ. ಈ ದಾರಿಯು ಕಂಬದಹಳ್ಳಿ ಗ್ರಾಮದ ಸರ್ವೆ 13ನೆ ನಂಬರಿನ ಆಗ್ನೇಯ ದಿಕ್ಕಿನಲ್ಲಿ ಷುರುವಾಗಿ ಅದೇ ಗ್ರಾಮದ ಸರ್ವೆ 10ನೆ ನಂಬರಿನ ಆಗ್ನೇಯ ಮೂಲೆ ವರಿಗೂ ಹೋಗುತ್ತದೆ. ಈ ದಾರಿಯು 792 ಗಜ ಲಾಂಬಿ ಮತ್ತು 22 ಗಜ ರುಂದಿ ಇರುತ್ತದೆ.

2. ಕಂಬದಹಳ್ಳಿ ಗ್ರಾಮದ ಸರ್ವೆ 10ನೆ ನಂಬರಿನಲ್ಲಿ ಖಾಲಿ ಇರುವ ದಾರಿ ಆ ಗ್ರಾಮದ ದನಗಳು ಕುಂಟೆಗೆ ನೀರು ಕುಡಿಯಲು ಹೋಗುವದಕ್ಕಾಗಿ 418ಗಜ ಲಾಂಬಿ 22ಗಜ ರುಂದಿ ಬಿಟ್ಟು ಇರುತ್ತೆ. ಈ ದಾರಿಯು ಮೇಲ್ಕಂಡ 10ನೆ ನಂಬರಿನ ಆಗ್ನೇಯ ಮೂಲೆಯಿಂದ ಹೊರಟು ಉತ್ತರದಿಂಗ್ಮುಖವಾಗಿ ಹೊರಟು ಕುಂಟೆಗೆ ಸೇರುತ್ತದೆ.

3. ಕಂಬದಹಳ್ಳಿಯಿಂದ ಗೊಲ್ಲಹಳ್ಳಿಗೆ ಹೋಗಲು ಕಂಬದಹಳ್ಳಿ ಗ್ರಾಮದ 10ನೆ ನಂಬರಿನಲ್ಲಿ ಖಾಲಿ ಇರುವ ದಾರಿಯನ್ನು ಬಿಟ್ಟು ಇರುತ್ತೆ. ಈ ದಾರಿಯು ಅದೇ ಕಂಬದಹಳ್ಳಿ ಗ್ರಾಮದ ಸರ್ವೆ 10ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಫಾರೆಸ್ಟು ಪ್ರವೇಶವಾಗಿ ಉತ್ತರದಿಂಗ್ಮುಖವಾಗಿ 836 ಗಜ ಹೊರಟು ಅದೇ ಸರ್ವೆ 10ನೆ ನಂಬರಿನ ಈಶಾನ್ಯ ಮೂಲೆಯಲ್ಲಿ ಫಾರೆಸ್ಟು ಬಿಟ್ಟು ಹೋಗುತ್ತದೆ.

ಹುಕುಂ ಬಮೊಜಬ್,

ಎಂ. ಮುತ್ತಣ್ಣಾ,

ಫಾರೆಸ್ಟು ಇಲಾಖೆಯ ಗವರ್ನ್ಮೆಂಟ್ ಆಫೀಷಿಯೇಟಿಂಗ್ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಫ್ರಾಯಿಷ್ ಆದ್ದು. [ನಂ. 2.

ಬೆಂಗಳೂರು, ಗುರುವಾರ, ಜನವರಿ ತಾ|| 14, ಸನ್ 1904.

IIನೆ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಮೈಸೂರು ರೆವೆನ್ಯು ಸರ್ವೆ ಮತ್ತು ಸೆಟಲ್ಮೆಂಟ್ ಇಲಾಖಾ.

ಇಸ್ತಿಹಾರ್ನಾಮೆ.

ತಾರೀಖು 11ನೆ ಜನವರಿ 1904.

ನಂ. 685, ಸಮಸ್ತ ಜನಗಳಿಗೂ ತಿಳಿಯುವದಕ್ಕೋಸ್ಕರ ಈ ಮೂಲಕಾ ಫ್ರಾಯಿಷ್ ಮಾಡಲ್ಪಡುವದೇನಂದರೆ, ಸಾಬಕ ಕೆಂಗೇರಿ ತಾಲ್ಲೂಕಿಗೆ ಸೇರಿದ್ದ ಬಿಡದಿ ಮತ್ತು ತಾವರಿಕೆರೆ ಹೋಬಳಿಗಳಲ್ಲಿ ಸರ್ವೆ ಕೆಲಸಗಳು ಕ್ಷಿಪ್ರದಲ್ಲಿ ಪ್ರಾರಂಭಿಸಲ್ಪಡುವವು.

ಜೆ. ಪಿ. ಗ್ರಾಂಟ್,

ಸರ್ವೆ ಮತ್ತು ಸೆಟಲ್ಮೆಂಟ್ ಕಮಿಷನರ್, ಮೈಸೂರು.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

ತಾರೀಖು 22ನೆ ಡಿಸೆಂಬರ್ 1903, ಬೆಂಗಳೂರು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—1901ನೆ ಇಸವಿ ಅಕ್ಟೋಬರ್ 2ನೆ ಮೊರ್ಕಂ 245–1300ನೆ ನಂಬರ್ ಗವರ್ನ್ಮೆಂಟ್ ನೋಟಿಫಿಕೇಷನ್ XIIನೆ ರೂಲ್ ಮೇರಿಗೆ ಮತ್ತು 1902ನೆ ಇಸವಿ ಮೇ 5ನೆ ಮೊರ್ಕಂ ನೋಟಿಫಿಕೇಷನ್ ಅನುಸರಿಸಿ, ಈ ಕೆಳಗೆ ನಮೂದಿಸಿರುವ ಜನರನ್ನು ಬೆಂಗಳೂರು ಡಿಸ್ಟ್ರಿಕ್ಟ್ ಈ ಕೆಳಗೆ ಕಂಡ ಸ್ಟೇಟ್ ಫಾರೆಸ್ಟು ಡಿಸ್ಟ್ರಿಕ್ಟ್ ಫಾರೆಸ್ಟುಗಳು ಮತ್ತು ಫ್ಯೂಯಲ್ ರಿಸರ್ವ್‌ಗಳಲ್ಲಿ ಬೆಳಸಿರುವ, ಬಿದಿರು ವಗೈರೆಗಳನ್ನು ಕಡಿದು ಸಾಗಿಸಿಕೊಳ್ಳಲು, ತಖ್ತೆಯಲ್ಲಿ ಕಂಡಂತೆ, ಆಯಾಯ ಜನರನ್ನು ಆಯಾಯ ಸ್ಥಳಗಳಲ್ಲಿ ಹಾಸಲು ತೆಗೆದುಕೊಂಡು ಲೈಸೆನ್ಸ್‌ಗಳನ್ನು ಕೊಡುವದಕ್ಕೂ ಹಾಸಲ್ ಸಂದ ಲೈಸೆನ್ಸ್‌ಗಳನ್ನು ಜಮಾಯಿಷಿ ಮಾಡುವದಕ್ಕೂ, ಲೈಸೆನ್ಸ್ ವೆಂಡರ್ ಅಥವಾ ಕಮಿಷನ್ ಏಜಂಟರನ್ನಾಗಿ ನೇಮಕ ಮಾಡಿರುತ್ತೆ:—

ನಂಬರು.	ರೇಂಜಿನ ಹೆಸರು.	ತಾಲ್ಲೂಕಿನ ಹೆಸರು.	ಲೈಸೆನ್ಸ್ ವೆಂಡರು ಇರುವ ಸ್ಥಳ ಅಥವಾ ಹೆಡ್‌ಕ್ವಾರ್ಟರ್.	ಲೈಸೆನ್ಸ್ ವೆಂಡರುಗಳ ಹೆಸರು.	ಅಧಿಕಾರ.	ಅಧಿಕಾರ ಚಲಾಯಿಸತಕ್ಕ ಫಾರೆಸ್ಟುಗಳ ಹೆಸರು.	ಷರಾ.
1	ಬೆಂಗಳೂರು.	ದೊಡ್ಡಬಳ್ಳಾಪುರ	ಚಲೇನಹಳ್ಳಿ ..	ನರಸಪ್ಪ, (ಶ್ಯಾನುಭೋಗ)	ಬಿದಿರು, ಇಜ್ಜಲು, ಸಾದಗಳಿಗೂ ಮತ್ತು ದನಗಳನ್ನು ಮೇಯಿಸುವದಕ್ಕೂ ಲೈಸೆನ್ಸ್‌ಗಳನ್ನು ಕೊಡುವದು	ದೊಡ್ಡಬಳ್ಳಾಪುರದ ಫಾರೆಸ್ಟು ಅಂದರೆ ಉಜನಿ, ಹುಲ್ಕುಡ್ಡಿ, ಮಾಕಳಿದುರ್ಗ, ಹಾರೋಹಳ್ಳಿ, ದೇವರ ಬೆಟ್ಟ, ಮೆಲ್ಲಾಯಿಕನ ಹಳ್ಳಿ	
2	ಡಿಟ್ಟೋ ..	ಕಾನಕಾನ ಹಳ್ಳಿ	ಕಗ್ಗಲೀಪುರ ...	ಕೃಷ್ಣಪ್ಪ, (ಶ್ಯಾನುಭೋಗ)	ಡಿಟ್ಟೋ	ರಾಗೀಹಳ್ಳಿ ಸ್ಟೇಟ್ ಫಾರೆಸ್ಟು, ಬಳ್ಳನಕುಪ್ಪೆ ಮತ್ತು ತಮ್ಮನಾಯ್ಕನಹಳ್ಳಿ ಫ್ಯೂಯಲ್ ರಿಸರ್ವ್‌ಗಳು	
3	ಡಿಟ್ಟೋ .	ಆನೆಕಲ್ ..	ತಮ್ಮನಾಯ್ಕನ ಹಳ್ಳಿ	ಶೀವಗೀಯಪ್ಪ, (ಶ್ಯಾನುಭೋಗ)	ಡಿಟ್ಟೋ	ತಮ್ಮನಾಯ್ಕನ ಹಳ್ಳಿ ಮತ್ತು ಬಳ್ಳನಕುಪ್ಪೆ ಫ್ಯೂಯಲ್ ರಿಸರ್ವ್‌ಗಳು	
4	ಡಿಟ್ಟೋ ..	ಡಿಟ್ಟೋ .	ಬನ್ನೇರುಘಟ್ಟ (ಸಂಪಿಗೇಹಳ್ಳಿ)	ಕೆಂಪೇಗೌಡ, (ಪಟೇಲ್)	ಡಿಟ್ಟೋ	ರಾಗಿಹಳ್ಳಿ ಸ್ಟೇಟ್ ಫಾರೆಸ್ಟು	
5	ಕ್ಲೋಸ್‌ಪೇಟೆ	ಕ್ಲೋಸ್‌ಪೇಟೆ	ಕ್ಲೋಸ್‌ಪೇಟೆ	ಜೀವಣ್ಣರಾವ್, (ಕಸಬಾ ಶ್ಯಾನುಭೋಗ)	ಡಿಟ್ಟೋ	ಹಂದಿಗೊಂದಿ, ತೆಂಗಿನಕಲ್ ಮತ್ತು ಮಾಕಳಿ ಸ್ಟೇಟ್ ಫಾರೆಸ್ಟುಗಳು, ಮತ್ತು ತಾಲೋಕಿನ ಡಿಸ್ಟ್ರಿಕ್ಟ್ ಫಾರೆಸ್ಟುಗಳು	
6	ಡಿಟ್ಟೋ ..	ಡಿಟ್ಟೋ ..	ಬಿಡದಿ ...	ರಾಮಕೃಷ್ಣಪ್ಪ, (ಜಮೀನ್‌ದಾರ್)	ಡಿಟ್ಟೋ	ಹಂದಿಗೊಂದಿ ಸ್ಟೇಟ್ ಫಾರೆಸ್ಟು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟುಗಳು	
7	ಡಿಟ್ಟೋ :	ಚನ್ನಪಟ್ಣ ..	ಚನ್ನಪಟ್ಣ ...	ಹನುಮಂತರಾವ್, (ಡಿಪೋ ಹೆಡ್‌ಗಾರ್ಡ್)	ಡಿಟ್ಟೋ	ಮಾಕಳಿ, ತೆಂಗಿನಕಲ್, ಚಿಕ್ಕ ಮತ್ತು ದೊಡ್ಡ ಮಣ್ಣುಗುಡ್ಡೆ ಫಾರೆಸ್ಟುಗಳು	
8	ಡಿಟ್ಟೋ	ಮಾಗಡಿ ...	ವೀರೇಗೌಡನ ದೊಡ್ಡಿ	ಚಿಕ್ಕವೀರೇಗೌಡ, (ಪಟೇಲ್)	ಡಿಟ್ಟೋ	ಸಾವನದುರ್ಗ ಮತ್ತು ಸಿದ್ಧೇದೇವರ ಬೆಟ್ಟ ಸ್ಟೇಟ್ ಫಾರೆಸ್ಟುಗಳು, ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟುಗಳು	
9	ಕಾನಕಾನಹಳ್ಳಿ	ಕಾನಕಾನ ಹಳ್ಳಿ	ಕಾನಕಾನಹಳ್ಳಿ.	ನರಸಪ್ಪ, (ಶ್ಯಾನುಭೋಗ)	ಡಿಟ್ಟೋ	ಬಿಳಿಕಲ್ ಮತ್ತು ಬಾಣಂತಿಮಾರಿ ಸ್ಟೇಟ್ ಫಾರೆಸ್ಟುಗಳು, ಬೆಟ್ಟಹಳ್ಳಿ ವಾಡೆ ರಿಸರ್ವ್‌ಗಳು	
10	ಡಿಟ್ಟೋ ..	ಡಿಟ್ಟೋ ...	ಹನಿಯೂರು ..	ಪುಟ್ಟರಾಮಯ್ಯ, (ಶ್ಯಾನುಭೋಗ)	ಡಿಟ್ಟೋ	ಕಬ್ಬಾಳು ಫಾರೆಸ್ಟು ಮತ್ತು ತೈಲೂರು ರಿಸರ್ವ್‌ಗಳು	
11	ಡಿಟ್ಟೋ ..	ಡಿಟ್ಟೋ ..	ಹಾರೋಹಳ್ಳಿ ...	ಶ್ರೀನಿವಾಸಯ್ಯ, (ಪಟೇಲ್)	ಡಿಟ್ಟೋ	ಗಂಗಾಧರನ ಗುಡ್ಡೆ ರಿಸರ್ವ್, ಹಾರೋಹಳ್ಳಿ ಮತ್ತು ದೇವಸಂದ್ರ ಡಿಸ್ಟ್ರಿಕ್ಟ್ ಜಂಗಲ್‌ಗಳು ಸಹಾ	
12	ಡಿಟ್ಟೋ ..	ಡಿಟ್ಟೋ ..	ಮುಳ್ಳಹಳ್ಳಿ ...	ವೆಂಕಟರಾಮಯ್ಯ, (ಬನ್ನೀ ಮುಕೊಡ್ಲು)	ಡಿಟ್ಟೋ	ಚಿಲಂದ್ವಾಡಿ ಮತ್ತು ಮುಗ್ಗೂರು ಸ್ಟೇಟ್ ಫಾರೆಸ್ಟುಗಳು	
13	ಡಿಟ್ಟೋ ..	ಮಳವಳ್ಳಿ	ಹಲಗೂರು ..	ರಾಮಸ್ವಾಮಯ್ಯ, (ಹಲಗೂರು ಪಟೇಲ್ ಕೃಷ್ಣಪ್ಪನವರ ಮಗ)	ಡಿಟ್ಟೋ	ಬಸವನಬೆಟ್ಟ ಸ್ಟೇಟ್ ಫಾರೆಸ್ಟು	

ನೋಟಿಫಿಕೇಷನ್, ತಾರೀಖು . ನೆ ಜನವರಿ 1904ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ; ಸನ್ 1900ನೆ ಇಸವಿ ಫಾರೆಸ್ಟು ರೆಗ್ಯುಲೇಷನ್ 24ನೆ ಸೆಕ್‌ಷನ್ "ಇ" ಕ್ಲಾಜು ಅನುಸರಿಸಿ ಈ ಕೆಳಗೆ ನಮೂದಿಸಿರುವ ಬೆಂಗಳೂರು ಡಿಸ್ಟ್ರಿಕ್ಟಿನ ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳನ್ನು ಬೆಂಕಿಯಿಂದ ಕಾಪಾಡಲು ಏರ್ಪಾಡು ಇಟ್ಟಿರುತ್ತೆ. 1904ನೆ ಇಸವಿ ಜನವರಿ 15ನೆ ತಾರೀಖು ಲಾಗಾಯಿತು ಮೇ ಆಖೈರ ವರಿವಿಗೆ ಸದರಿ ಸ್ಟೇಟ್ ಫಾರೆಸ್ಟುಗಳು ಮತ್ತು ಪ್ಲಾಂಟೇಷನ್‌ಗಳು ಬಂದು ಮಾಡಲ್ಪಟ್ಟಿರುತ್ತವೆ. ಶಿವಾಯಿ ಯಾವ ಮನುಷ್ಯನು ಮೇಲ್ಕಂಡ ಫಾರೆಸ್ಟುಗಳಲ್ಲಿ ಗೊತ್ತಾದ ದಾರಿಗಳು ವಿನಹ ಫಾರೆಸ್ಟು ಕನ್ಸರ್ವೇಟರರವರ ಅಥವಾ ಅಧಿಕಾರ ಹೊಂದಿದ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ಅಪ್ಪಣೆ ವಿನಹ ಪ್ರವೇಶ ಮಾಡಕೂಡದು. ಅಕ್ರಮಪ್ರವೇಶಿಸುವರು ಪ್ರಾಸಿಕ್ಯೂಷನ್‌ಗೆ ಒಳಪಡುತ್ತಾರೆ:—

ನಂಬರು.	ಫಾರೆಸ್ಟು ಯಾ ಪ್ಲಾಂಟೇಷನ್‌ಗಳ ಹೆಸರು.	ತಾಲ್ಲೂಕು ಹೆಸರು.
1	ಬಿಳಿಕಲ್ ಸ್ಟೇಟ್ ಫಾರೆಸ್ಟು	ಕನ್ಕಾನಹಳ್ಳಿ ತಾಲ್ಲೂಕು
2	ಮುಗ್ಗೂರು ಡಿಟೋ	ಡಿಟೋ
3	ಚೀಲಂದಾಡಿ ಡಿಟೋ	ಡಿಟೋ
4	ಕಬ್ಬಾಳದುರ್ಗ ಡಿಟೋ	ಡಿಟೋ
5	ಬಾಣಂತಿಮಾರಿ ಡಿಟೋ	ಡಿಟೋ
6	ಬಸವನಬೆಟ್ಟ ಡಿಟೋ	ಮಳವಳ್ಳಿ ತಾಲ್ಲೂಕು
7	ತೆಂಗಿನಕಲ್ ಡಿಟೋ	ಚನ್ನಪಟ್ಣ ತಾಲ್ಲೂಕು
8	ಮಾಕಳಿ ಡಿಟೋ	ಡಿಟೋ
9	ದೊಡ್ಡ ಮಣ್ಣುಗುಡ್ಡೆ ಡಿಟೋ	ಡಿಟೋ
10	ಚಿಕ್ಕ ಮಣ್ಣುಗುಡ್ಡೆ ಡಿಟೋ	ಡಿಟೋ
11	ಹಂದಿಗೊಂದಿ ಡಿಟೋ	ಡಿಟೋ
12	ಹುಲ್ತಾರ್ ಡಿಟೋ	ಡಿಟೋ
13	ಕುಂಬಳಗೋಡಿ ಡಿಟೋ	ಡಿಟೋ
14	ಸಾವನದುರ್ಗ ಡಿಟೋ	ಮಾಗಡಿ ತಾಲ್ಲೂಕು
15	ಹುಲ್ಕಡಿ ಡಿಟೋ	ದೊಡ್ಡಬಳ್ಳಾಪುರ ತಾಲ್ಲೂಕು
16	ಪುಟನಿ ಡಿಟೋ	ಡಿಟೋ
17	ಮಾಕಳಿದುರ್ಗ ಡಿಟೋ	ಡಿಟೋ
18	ರಾಗಿಹಳ್ಳಿ ಡಿಟೋ	ಆನೆಕಲ್ ತಾಲ್ಲೂಕು
19	ನಿಜಗಲ್ ಡಿಟೋ	ನೆಲಮಂಗಲ ತಾಲ್ಲೂಕು
20	ಮುದಗೆರೆ ಪ್ಲಾಂಟೇಷನ್	ಚನ್ನಪಟ್ಣ ತಾಲ್ಲೂಕು
21	ಗಂಡ್ರಗೋಳಿಪುರ ಡಿಟೋ	ದೊಡ್ಡಬಳ್ಳಾಪುರ ತಾಲ್ಲೂಕು
22	ಜಾಸಂದ್ರ ಡಿಟೋ	ಡಿಟೋ
23	ಗೋವಿಂದಪುರ ಡಿಟೋ	ನೆಲಮಂಗಲ ತಾಲ್ಲೂಕು
24	ಕಲ್ಲುಪಾಳ್ಯ ಡಿಟೋ	ಡಿಟೋ
25	ಜಕ್ಕಸಂದ್ರ ಡಿಟೋ	ಡಿಟೋ
26	ಕೃಷ್ಣರಾಜಪುರ ಡಿಟೋ	ಡಿಟೋ
27	ಮಾವಿನಕೋಮನಹಳ್ಳಿ ಡಿಟೋ	ಡಿಟೋ
28	ಕಂಚನಪುರ ಡಿಟೋ	ಡಿಟೋ
29	ಬಿಳಗೆರೆ ಡಿಟೋ	ಡಿಟೋ
30	ಮಾಚೋಹಳ್ಳಿ ಡಿಟೋ	ಡಿಟೋ
31	ಗಂಟಿಗಾನಹಳ್ಳಿ ಮತ್ತು ಜಕ್ಕೂರು ಪ್ಲಾಂಟೇಷನ್ ...	ಬೆಂಗಳೂರು ತಾಲ್ಲೂಕು
32	ಬೆಟ್ಟಹಳ್ಳಿ ಡಿಟೋ ...	ಡಿಟೋ
33	ಕೊಡಿಗೆಹಳ್ಳಿ ಡಿಟೋ ...	ಡಿಟೋ
34	ಜಾರಕಬಂಡೆ "ಎ" ಮತ್ತು 'ಬಿ' ಮತ್ತು ಜಕ್ಕೂರು ಪ್ಲಾಂಟೇಷನ್	ಡಿಟೋ
35	ಬಟ್ಟ ಜೆಬ್ಬಳಿ ಪ್ಲಾಂಟೇಷನ್	ಡಿಟೋ
36	ಕೆಂಚೆನಹಳ್ಳಿ ಡಿಟೋ	ಡಿಟೋ
37	ಮಲ್ಲತ್ತಹಳ್ಳಿ ಡಿಟೋ	ಡಿಟೋ
38	ನಾಗರಭಾವಿ ಡಿಟೋ	ಡಿಟೋ
39	ಸೂಲಿಕೆರೆ ಡಿಟೋ	ಡಿಟೋ
40	ಪೀಣ್ಯಾ ಮತ್ತು ಜಾಲಹಳ್ಳಿ ಡಿಟೋ ...	ಡಿಟೋ
41	ಗೊಲ್ಲಹಳ್ಳಿ ಡಿಟೋ	ಹೊಸಕೋಟೆ ತಾಲ್ಲೂಕು
42	ಅಪ್ಪಸಂದ್ರ ಡಿಟೋ	ಡಿಟೋ
43	ಜಡಿಗೇನಹಳ್ಳಿ ಹಳೇ ಮತ್ತು ಹೊಸ ಪ್ಲಾಂಟೇಷನ್	ಡಿಟೋ
44	ನಲ್ಲಾಲ್ (ಎ—ಬಿ ಮತ್ತು ಸಿ) ಡಿಟೋ ...	ಡಿಟೋ
45	ಕಾಡಗೋಡಿ ಡಿಟೋ ...	ಡಿಟೋ
46	ತತ್ತನೂರು ಡಿಟೋ ...	ಡಿಟೋ
47	ತಿಂಡ್ಲು ಡಿಟೋ ...	ಡಿಟೋ

ಟಿ. ಅಬ್ದುಲ್ ಕರೀಂ,

ಡೆಪ್ಯುಟಿ ಕನ್ಸರವೇಟರ ಆಫ್ ಫಾರೆಸ್ಟು, ಬೆಂಗಳೂರು ಡಿಸ್ಟ್ರಿಕ್ಟು.

1904ನೆ ಇಸವಿ ಜನವರಿ ತಾರೀಖು 4ರಲ್ಲು.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ—ಇದರಡಿ ಕಂಡ ಮೈಸೂರು ಡಿಸ್ಟ್ರಿಕ್ಟು ಡಿಪೋಗಳಲ್ಲಿ ಅವರ ಬಾಜಾರದಲ್ಲಿ ನಮೂದಿಸುವ ತಾರೀಖುಗಳಲ್ಲಿ ಚೌಬೀನೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	ಹರಾಜು ಮಾಡಿಸುವ ಆಫೀಸರವರ ಹೆಸರು.	ಸುಮಾರು ಚೌಬೀನೆ ಮೊತ್ತ.											
				ಸಾಗ್ವಾನಿ ನಾಟಾ ಮತ್ತು ಜಂತೆ.		ಮಮ್ನಾಜಾತಿ ನಾಟಾ ಮತ್ತು ಜಂತೆ.		ಕಾಡುನಾಟಾ ಮತ್ತು ಜಂತೆ.		ಸಾಗವಾನಿ ಸರಾ.		ಮಮ್ನಾಜಾತಿ ಸರಾ.		ಕಾಡುಸರಾ	
				ಅದದು	ಸಲೆ ಅಡಿ.	ಅದದು	ಸಲೆ ಅಡಿ.	ಅದದು	ಸಲೆ ಅಡಿ.	ಅದದು	ಸಲೆ ಅಡಿ.	ಅದದು	ಸಲೆ ಅಡಿ.	ಅದದು	ಸಲೆ ಅಡಿ.
1	ಮೈಸೂರು ಪ್ರಡಿಮಾರ್ಡು.	29–1–04	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರು ಮೈಸೂರು ಡಿಸ್ಟ್ರಿಕ್ಟ್.	206	5696	254	4563	12	266	449	673	5	60	...	..
2	ನಂಜನಗೂಡು ಡಿಪೋ.	1–2–04		535	7062	320	4623	10	151	174	390	41	74	...	...

ಷರತ್ತು:—1895ನೆ ಇಸವಿ ಮಾರ್ಚಿ 10ನೆ ಮರ್ಸ್ಕಂ 1529—R. F. 155—92ನೆ ನಂಬರು ಇಷ್ತಿಹಾರ್ನಾಮೆಯನ್ನ 25—4—1895ನೆ ಮರ್ಸ್ಕಂ 15ನೆ ನಂಬರು ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಿರುತ್ತೆ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಮೈಸೂರು ಡಿಸ್ಟ್ರಿಕ್ಟ್.

ತಾರೀಖು 15ನೆ ಡಿಸೆಂಬರ 1903.

ಈ ಕೆಳಗೆ ನಮೂದಿಸಿರುವ ಇಷ್ತಿಹಾರನ್ನು ಸರ್ವರ ತಿಳುವಳಿಕೆ ಬಗ್ಗೆ ಪ್ರಾಯಿಷ್ ಮಾಡಿ ಇದೆ:—ಚಿತ್ರದುರ್ಗದ ಡಿಸ್ಟ್ರಿಕ್ಟಿನ ಈ ಕೆಳಗೆ ನಮೂದಿಸಿರುವ ಮಮ್ನಾ ಮತ್ತು ರಿಜರ್ವ್ ಜಂಗಲುಗಳನ್ನು 1904ನೆ ಇಸವಿ ಫೆಬ್ರುವರಿ ಮಾಹೆ 1ರ ಲಾಗಾಯತು 1904ನೆ ಇಸವಿ ಜೂನ್ ಆಖ್ಯೆರುವರೆಗೆ ಬೇಟೆ, ಷಿಕಾರಿ, ವಗೈರೆ ಕೆಲಸಗಳು ಮಾಡದಂತೆ ಬಂದುಮಾಡಿ ಇರುತ್ತೆ. ಸದರಿ ಮಮ್ನಾ ಜಂಗಲು ಮತ್ತು ಪ್ಲಾಂಟೇಷನ್‌ಗಳನ್ನು ಮೈಸೂರು ಸೀಮೆಯ ಕನ್ಸರವೇಟರ್ ಸಾ॥ ರವರಿಂದಲಾಗಲಿ ಅಥವಾ ಅಧಿಕಾರ ಹೊಂದಿದ ಇತರ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರಿಂದಲಾಗಲಿ ಕ್ರಮವಾಗಿ ಅಧಿಕಾರ ಹೊಂದದ ಯಾವ ಮನುಷ್ಯನು ಪ್ರವೇಶಿಸಕೂಡದು. ಅಕ್ರಮವಾಗಿ ಪ್ರವೇಶಮಾಡಿದವರನ್ನು 1900ನೆ ಇಸವಿ XIನೆ ಫಾರೆಸ್ಟು ರೆಗ್ಯುಲೇಷನ್ 24ನೆ ಸೆಕ್ಷನ್ ಪ್ರಕಾರ ಶಿಕ್ಷೆಗೆ ಗುರಿಪಡಿಸಲಾಗುವದು:—

2. ಸ್ಟೇಟ್ ಫಾರೆಸ್ಟಿನಲ್ಲಿ ಯಾವ ಹಕ್ಕನ್ನಾದರೂ ಚಲಾಯಿಸುವ ಅಥವಾ ಅಂಥಾ ಫಾರೆಸ್ಟಿನಲ್ಲಿ ಮರಮುಟ್ಟನ್ನು ಕಡದು ಸಾಗಿಸಲು ಅಥವಾ ದನ ಕರುವನ್ನು ಮೇಯಿಸಲು ಅಥವಾ ಅಲ್ಲಿಂದ ಯಾವದಾದರೂ ಫಾರೆಸ್ಟುತ್ಪತ್ತಿಯನ್ನು ತೆಗೆದುಕೊಳ್ಳಲು ಅಪ್ಪಣೆ ಪಡೆದ ಪ್ರತಿ ಮನುಷ್ಯನು, ಆ ಸ್ಟೇಟ್ ಫಾರೆಸ್ಟಿನಲ್ಲಿ ಯಾರಾದರೂ ಅವನ ಚಾಕರಿಯಲ್ಲಿರುವ ಪ್ರತಿ ಮನುಷ್ಯನು, ಮತ್ತು ಸರ್ಕಾರದ ನೌಕರಿಯಲ್ಲಿರುವ ಅಂಥಾ ಫಾರೆಸ್ಟಿಗೆ ಹತ್ತಿರದ ಯಾವದಾದರೂ ಗ್ರಾಮದಲ್ಲಿರುವ ಪ್ರತಿ ಮನುಷ್ಯನು ಅಥವಾ ಆ ಗ್ರಾಮದ ಪ್ರತಿ ನೌಕರನೂ ಅವಶ್ಯಕವಾದ ಸಾವಕಾಶವಿಲ್ಲದೆ ಅಂಥಾ ಫಾರೆಸ್ಟಿನಲ್ಲಿ ಅಥವಾ ಅದರ ಸಮೀಪದಲ್ಲಿ ಬೆಂಕಿಬಿದ್ದ ವಿಚಾರವಾಗಿಯಾಗಲೀ ಯಾವದಾದರೂ ಫಾರೆಸ್ಟು ತಕ್ಸೀರ್ ನಡದ ಅಥವಾ ನಡಿಸಬೇಕೆಂಬ ಉದ್ದೇಶ್ಯದ ವಿಚಾರವಾಗಿಯಾಗಲೀ ತನಗೆ ದೊರಕಿರಬಹುದಾದ ಯಾವ ವರ್ತಮಾನವನ್ನಾದರೂ ಅತ್ಯಂತ ಸಮೀಪದಲ್ಲಿರುವ ಫಾರೆಸ್ಟಾಫಿಸರಿಗೆ ಅಥವಾ ಪೋಲೀಸಾಫಿಸರಿಗೆ ಕೊಡಲು ಬದ್ಧನಾಗಿರತಕ್ಕದ್ದಲ್ಲದೆ ತನ್ನ ಸಹಾಯವನ್ನು ತಗಾದೆಮಾಡುವ ಯಾವ ಫಾರೆಸ್ಟು ಅಥವಾ ಪೋಲೀಸಾಫಿಸರಿಗಾಗಲೀ

(a) ಅಂಥಾ ಫಾರೆಸ್ಟಿನಲ್ಲಿ ಸಂಭವಿಸುವ ಯಾವ ಬೆಂಕಿಯನ್ನಾದರೂ ಆರಿಸೋಣವರಲ್ಲಿ

(b) ಅಂಥಾ ಫಾರೆಸ್ಟಿನ ಆಸ್ಪಾಸಿನಲ್ಲಿ ಸಂಭವಿಸಬಹುದಾದ ಯಾವ ಬೆಂಕಿಯಾಗಲೀ ಅಂಥಾ ಫಾರೆಸ್ಟಿನೊಳಕ್ಕೆ ವಿಸ್ತರಿಸದಂತೆ ತಪ್ಪಿಸೋಣದರಲ್ಲಿ

(c) ಅಂಥಾ ಫಾರೆಸ್ಟಿನಲ್ಲಿ ಯಾವ ಫಾರೆಸ್ಟು ತಕ್ಸೀರು ನಡಿಯದಂತೆ ಅಡ್ಡಿ ಮಾಡೋಣದರಲ್ಲಿ, ಮತ್ತು

(d) ಅಂಥಾದ್ದು ಯಾವದಾದರೂ ತಕ್ಸೀರ್ ಅಂಥಾ ಫಾರೆಸ್ಟಿನಲ್ಲಿ ನಡದಿರುತ್ತೆಂದು ನಂಬಲು ಕಾರಣವಿರುವಾಗ, ಅಪರಾಧಿಯನ್ನು ಕಂಡುಹಿಡಿದು ಅವನನ್ನು ದಸ್ತಗಿರಿ ಮಾಡೋಣದರಲ್ಲಿ ಸಹ ಕುಮ್ಮಕ್ಕಾಗತಕ್ಕದ್ದು. (1900ನೆ ಇಸವಿ 11ನೆ ಫಾರೆಸ್ಟು ರೆಗ್ಯುಲೇಷನ್ 29ನೆ ಸೆಕ್ಷನ್.)

1.	ಜೋಗೀಮಟ್ಟಿ ಮನ್ನಾ ಜಂಗಲಿ ಬಡಾವಣಿ ಸಹ ...	ಚಿತ್ರದುರ್ಗ, ಹಿರಿಯೂರು ಮತ್ತು ಹೊಳಲ್ಕೆರೆ ತಾಲ್ಲೂಕುಗಳು.
2.	ನೀರ್ಥಡಿ ಮನ್ನಾ ಜಂಗಲಿ ಬಡಾವಣಿ ಸಹ ...	ಚಿತ್ರದುರ್ಗ, ಹೊಳಲ್ಕೆರೆ, ದಾವಣಗೆರೆ ತಾಲ್ಲೂಕುಗಳು.
3.	ನೀರ್ಲಗುಂದಿ ಪ್ಲಾಂಟೇಷನ್ ...	ಚಿತ್ರದುರ್ಗದ ತಾಲ್ಲೂಕು.
4.	ಪಿಳ್ಳೇಕೇರನಹಳ್ಳಿ ಡಿಟೋ ...	ಡಿಟೋ
5.	ಚಳ್ಳಕೆರೆ ಡಿಟೋ ...	ಚಳ್ಳಕೆರೆ ಡಿಟೋ
6.	ಮೊಳಕಾಲ್ಮುರು ಡಿಟೋ ...	ಮೊಳಕಾಲ್ಮುರು ತಾಲ್ಲೂಕು.
7.	ಕಮರಾಕಾವಲ್ ರಿಜರ್ವಡ್ ಫಾರೆಸ್ಟು ...	ಡಿಟೋ
8.	ಹಿರೇ ಅಡವಿ ಡಿಟೋ ...	ಡಿಟೋ
9.	ಸಂಜೀವರಾಯನಕೋಟೆ ಮನ್ನಾ ಜಂಗಲಿ ...	ಡಿಟೋ
10.	ಖಾಂಡರಾವಿ ರಿಜರ್ವಡ್ ಫಾರೆಸ್ಟು ...	ಡಿಟೋ
11.	ಕೃಷ್ಣರಾಜಪುರ ಡಿಟೋ ...	ಡಿಟೋ
12.	ಜಗಳೂರು ಪ್ಲಾಂಟೇಷನ್ ...	ಜಗಳೂರು ತಾಲ್ಲೂಕು.
13.	ರಂಗಯ್ಯನದುರ್ಗ ರಿಜರ್ವಡ್ ಫಾರೆಸ್ಟು ...	ಡಿಟೋ
14.	ಅಣಬೂರು ಡಿಟೋ ...	ಡಿಟೋ
15.	ಮಳೇಬೆನ್ನೂರು ಮನ್ನಾ ಜಂಗಲಿ ...	ಹರಿಹರದ ಸಬ್ ತಾಲ್ಲೂಕು ಮತ್ತು ಹೊನ್ನಾಳಿ ತಾಲ್ಲೂಕು.
16.	ದೇವರಗುಡ್ಡ ಡಿಟೋ ...	ಹೊಳಲ್ಕೆರೆ ಮತ್ತು ಹೊಸದುರ್ಗದ ತಾಲ್ಲೂಕು.
17.	ಗರ್ಗಾಕಾವಲ್ ಡಿಟೋ ...	ಹೊಳಲ್ಕೆರೆ ತಾಲ್ಲೂಕು.
18.	ಜಾನಕಲ್ ರಿಜರ್ವಡ್ ಫಾರೆಸ್ಟು ...	ಹೊಳಲ್ಕೆರೆ ಮತ್ತು ಹೊಸದುರ್ಗದ ತಾಲ್ಲೂಕು.
19.	ಕಾದುರೇಕಣಿವೆ ಮನ್ನಾ ಜಂಗಲಿ ...	ಹೊಸದುರ್ಗ.
20.	ಲಕ್ಕೀಹಳ್ಳಿ ರಿಜರ್ವಡ್ ಫಾರೆಸ್ಟು ...	ಹೊಳಲ್ಕೆರೆ, ಹೊಸದುರ್ಗ, ಹಿರಿಯೂರು.
21.	ಮಾರೀಕಣಿವೆ ಡಿಟೋ ...	ಹೊಸದುರ್ಗ, ಹಿರಿಯೂರು.

ಕೆ. ಶಾಮೈಯ್ಯಂಗಾರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ, ಚಿತ್ರದುರ್ಗ ಡಿಸ್ಟ್ರಿಕ್ಟು.

ಕಡೂರು ಡಿಸ್ಟ್ರಿಕ್ಟು.

ಸರ್ 1903ನೆ ಇಸವಿ ಡಿಸೆಂಬರ್ ತಾರೀಖು 21.

ಮೆ|| ಸಿ. ಕಿಂಗ ಸಾಹೇಬರವರಿಂದ ಸರ್ 1901—02 ಮತ್ತು 1902—1903 ಯಾ ಎರಡು ಸಾಲುಗಳಿಗೆ ಬರಬೇಕಾದ ಕಂದಾಯ ಬಾಕಿ ಬಗ್ಗೆ ಮೂಡಿಗೆರೆ ತಾಲ್ಲೂಕು ಬಣಕಲ್ ಹೋಬಳಿ ಹಳಕೆರೆ ಎಸ್ಟೇಟ್ ಗ್ರಾಮದಲ್ಲಿರುವ ಸರ್ವೆ ನಂ. 31 162 ಎಕ್ರೆ 10 ಗುಂಟೆವುಳ್ಳ ಕಾಫೀ ಜಮೀನನ್ನು ಮೂಡಿಗೆರೆ ತಾಲ್ಲೂಕು ಅಮಲ್ದಾರ್ರವರ ರೂಬರೂಬು ಸರ್ 1904ನೆ ಇಸವಿ ಫೆಬ್ರುವರಿ ತಾರೀಖು 12ನೆ ಶುಕ್ರವಾರದ ದಿವಸ ದಿವಿ 11 ಘಂಟೆಗೆ ಮೂಡಿಗೆರೆ ಮೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುವದು.

ಜಾಸ್ತಿ ತಪಶೀಲು ಹರಾಜು ಇಸ್ತಹಾರಿನಲ್ಲಿ ನಮೂದಿಸಿರುವದು ನೋಡಲಾಗಿ ತಿಳಿಯಲಾಗುತ್ತೆ.

ಸರ್ 1903ನೆ ಇಸವಿ ಡಿಸೆಂಬರ್ ತಾರೀಖು 21.

ಬಂಕನಕಟ್ಟೆ ಪುಟ್ಟಪ್ಪ ವಗೈರೇರಿಂದ ಸರ್ 1902—1903ನೆ ಸಾಲಿನ ಕಂದಾಯ ಬಾಕಿ ಬಗ್ಗೆ ತರೀಕೆರೆ ತಾಲ್ಲೂಕು ಶಿವನೆ ಹೋಬಳಿ ಬಂಕನಕಟ್ಟೆ ಎಂಬ ಜೋಡಿ ಪೂರಾಗ್ರಾಮವನ್ನು ತರೀಕೆರೆ ತಾಲ್ಲೂಕು ಛಾರ್ಜಿನಲ್ಲಿರುವ 1ನೆ ಅಸಿಸ್ಟಂಟ್ ಕಮಿಷನರವರ ರೂಬರೂಬು ಸರ್ 1904ನೆ ಇಸವಿ ಫೆಬ್ರುವರಿ ತಾರೀಖು 12ನೆ ಶುಕ್ರವಾರದ ದಿವಸ ದಿವಿ 11 ಘಂಟೆಗೆ ತರೀಕೆರೆ ಮೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುವದು.

ಜಾಸ್ತಿ ತಪಸೀಲು ಇದರ ಹಿಂದಿನ ವಾರದ ಗೆಜೆಟ್ಟಿನಲ್ಲಿ ನಮೂದಿಸಿರುವದು ನೋಡಲಾಗಿ ತಿಳಿಯಲಾಗುತ್ತೆ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ.

ಚಿತ್ರದುರ್ಗ ಡಿಸ್ಟ್ರಿಕ್ಟು.

ಪ್ರೊಸೀಡಿಂಗ್ಸ್.

1903ನೆ ಡಿಶಂಬರು ಮಾಹೆ ತಾರೀಖು 5ನೆ ಶನಿವಾರ ಹಗಲು 3–30 ಘಂಟೆಗೆ ಚಿತ್ರದುರ್ಗದಲ್ಲಿ ನಡದ ಚಿತ್ರದುರ್ಗ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗ ಬಾಬತು.

ಹಾಜರು.

ಹೆಚ್. ರಾಮಾನುಜ ಐಯ್ಯಂಗಾರ್, ಎಸ್‌ಕ್ವೈರ್, ಪ್ರೆಸಿಡೆಂಟ್

ಆಫೀಶಿಲ್ ಮೆಂಬರುಗಳು.

(1) ಚಿತ್ರದುರ್ಗದ ಡಿವಿಜನ್ ಎಗ್ಜಿಕ್ಯೂಟಿವ್ ಇಂಜಿನಿಯರ ಸಾ॥ ರವರು.
(2) ಚಿತ್ರದುರ್ಗದ ಅಸಿಸ್ಟೆಂಟ್ ಸರ್ಜನ್ ರವರು.
(3) ಡಿಟೋ ಮಾ॥ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರ್‌ರವರು.
(4) ದಾವಣಗೆರೆ ಅಸಿಸ್ಟೆಂಟ್ ಕಮಿಷನರ ಸಾ॥ ರವರು.
(5) ಚಿತ್ರದುರ್ಗದ ಅಸಿಸ್ಟೆಂಟ್ ಕಮಿಷನರ ಸಾ॥ ರವರು.
(6) ಡಿಟೋ ಮಾ॥ ಟ್ರೆಜರಿ ಅಸಿಸ್ಟೆಂಟ್ ಕಮಿಷನರ ಸಾ॥ ರವರು.

ನಾನ್ ಆಫೀಶಿಲ್ ಮೆಂಬರುಗಳು.

(1) ಮ॥ ಪಟೇಲ್ ಕೆಂಚವೀರಪ್ಪನವರು, ಚಿತ್ರದುರ್ಗದ ತಾಲ್ಲೂಕು.
(2) ,, ತಾಡಪತ್ರಿ ಸ್ವಾಮಿರಾಮಾಚಾರ್ಯರು, ಡಿಟೋ ತಾಲ್ಲೂಕು.
(3) ,, ಖಾಜಿ ಸೈಯದ್ ಮೊಹಿದೀನ್ ಹುಶೇನ್ ಸಾಬರು, ಡಿಟೋ ತಾಲ್ಲೂಕು.
(4) ,, ತುಪ್ಪದ ವೀರಣ್ಣನವರು, ಚಳ್ಳಕೆರೆ ತಾಲ್ಲೂಕು
(5) ,, ಶಾನುಭೋಗ ಹನುಮಂತಪ್ಪನವರು, ಡಿಟೋ ತಾಲ್ಲೂಕು
(6) ,, ಶಾನುಭೋಗ ಗೋಪಾಲಯ್ಯನವರು, ಹೊಳಲಕೆರೆ ತಾಲ್ಲೂಕು.
(7) ,, ನಾಡಿಗ ಶಿದ್ಧರಾಮಯ್ಯನವರು, ಡಿಟೋ ತಾಲ್ಲೂಕು.
(8) ,, ಸಿ. ಎನ್. ಕ್ರಿಷ್ಣಪ್ಪನವರು, ಹಿರಿಯೂರು ತಾಲ್ಲೂಕು.
(9) ,, ಶಾನುಭೋಗ ಚನ್ನಗಿರಿಯ್ಯನವರು, ಡಿಟೋ ತಾಲ್ಲೂಕು.
(10) ,, ಖಾಶಿಂಸಾಬರು, ಹೊಸದುರ್ಗ ತಾಲ್ಲೂಕು.
(11) ,, ಫಕೀರ್ ಸಾಬರು, ಜಗಲೂರು ತಾಲ್ಲೂಕು.
(12) ,, ಅಚ್ಚಪ್ಪನಾಯಕರು, ಹರಿಹರ ಸಬ್ ತಾಲ್ಲೂಕು.
(13) ,, ಬಾರಿ ಸಣ್ಣಪ್ಪನವರು, ಮೊಳಕಾಲ್ಮೂರು ತಾಲ್ಲೂಕು.
(14) ,, ಆದೋನಿ ನರಶಿಂಗಪ್ಪನವರು, ಡಿಟೋ ತಾಲ್ಲೂಕು.
(15) ,, ಟಿ. ಷಡಾಕ್ಷರಪ್ಪನವರು, ದಾವಣಗೆರೆ ತಾಲ್ಲೂಕು.
(16) ,, ನಬಿ ಸಾಬರು.
(17) ,, ಲೋಕಿಕೆರೆ ಹನುಮಂತಪ್ಪನವರು, ಡಿಟೋ ತಾಲ್ಲೂಕು.

ಗೈರ ಹಾಜರು.

ನಾನ್ ಆಫೀಶಿಲ್ ಮೆಂಬರುಗಳು.

ಹೊಸದುರ್ಗ ತಾಲ್ಲೂಕು ಜೋಡಿದಾರ ಕೆ. ಷಾಚಾರ್ರು.

(ಇವರು ಹಾಜರಾಗಲು ತಪ್ಪಿದ್ದಕ್ಕೆ ಸಂಜಾಯಿಷಿ ಕೊಡಲು ಹುಕುಂ ಕೊಟ್ಟಿರುತ್ತೆ.)

(1) 1902ನೆ ಇಸವಿ IIನೆ ನಂಬರು ಲೋಕಲ್ ಬೋರ್ಡು ರೆಗ್ಯುಲೇಷನ್ ಅನುಸರಿಸಿ ಡಿಸ್ಟ್ರಿಕ್ಟು ಬೋರ್ಡು ಏರ್ಪಾಟು ಕ್ರಮವನ್ನು—ಜಾರಿಯಲ್ಲಿ ತರುವದು ಮಂಜೂರಾಗಿರುವ 18—11—03ನೆ ಮಾರ್ಕು 1860—L. F. 74—03ನೆ ಗೌರ್ನಮೆಂಟ್ ಪ್ರೊಸೀಡಿಂಗ್ಸ್ ವಿಚಾರ—

ಓದಿ ರಿಕಾರ್ಡು ಮಾಡಲಾಯಿತು.

(2) 1902ನೆ ಇಸವಿ IIನೆ ನಂಬರು ಲೋಕಲ್ ಬೋರ್ಡ್ಸ್ ರೆಗ್ಯುಲೇಷನ್ ಅನುಸರಿಸಿ ಏರ್ಪಾಟಾದ ಡಿಸ್ಟ್ರಿಕ್ಟು ಬೋರ್ಡಿಗೆ ಆಫೀಶಿಲ್ ಮತ್ತು ನಾನ್ ಆಫೀಶಿಲ್ ಮೆಂಬರುಗಳನ್ನು ಮೊಕರರು ಮಾಡುವ ಸಂಗತಿಯಲ್ಲಿ ತಿಳಿಸಿರುವ 17—11—03ನೆ ಮಾರ್ಕು 1858—L. F. 74—03ನೆ ನಂಬರು ಗೌರ್ನಮೆಂಟ್ ನೋಟಿಫಿಕೇಷನ್ ವಿಚಾರ—

ಓದಿ ರಿಕಾರ್ಡು ಮಾಡಲಾಯಿತು.

37

(3) ಗೌರ್ನವೆುಂಟಿಗೆ ರವಾನೆ ಆದ 1902—03ನೆ ಸಾಲಿನ ಅಡ್ಮಿನಿಸ್ಟ್ರೇಷನ್ ರಿಪೋರ್ಟು—

ಓದಲಾಯಿತು.

ರೆಜೊಲ್ಯೂಷನ್—ಹಾಜರಿದ್ದ ನಾನ್ ಆಫೀಶಿಲ್ ಮೆಂಬರುಗಳ ತಿಳುವಳಿಕೆಗೋಸ್ಕರ ಸದರಿ ರಿಪೋರ್ಟಿನ ಮುಖ್ಯವಾದ ಅಂಶಗಳು ಕನ್ನಡದಲ್ಲಿ ಓದಲ್ಪಟ್ಟು ರಿಪೋರ್ಟನ್ನು ಬೋರ್ಡಿನವರಿಂದ ಅನುಮೋದಿಸಲ್ಪಟ್ಟಿತು.

(4) ಮೈಸೂರು ಶೀಮೆಯಲ್ಲಿರುವ ಲೋಕಲ್ ಫಂಡು ಡಿಸ್ಪೆನ್ಸರಿಗಳಿಗೆ ಸೇರಿರುವ ಇನ್‌ಪೇಶಂಟ್ ವಾರ್ಡುಗಳನ್ನು ಆಯಾ ಯ ಆಸ್ಪತ್ರೆಲ್ ಆಸಿಸ್ಟೆಂಟರುಗಳ ವಾಸಕ್ಕೋಸ್ಕರ ಉಪಯೋಗಿಸಬಹುದೆಂಬ ಬಾಬ ಸೀನಿಯರ್ ಸರ್ಜನ್ ಸಾ|| ರವರು ಶಿಫಾರಸು ಮಾಡಿರುವ ವಿಚಾರದಲ್ಲಿ ಬೋರ್ಡಿನವರ ಅಭಿಪ್ರಾಯ ತಿಳಿಸಬೇಕಾಗಿ ಗೌರ್ನವೆುಂಟಿನಿಂದ ತಲಪಿರುವ 13—8—1903ನೆ ಮಾರ್ಕ್ಕಂ 769-77—L. F. 357-72ನೆ ನಂಬರು ಪ್ರೊಸಿಡಿಂಗ್ಸ್—

ಓದಲಾಯಿತು.

ರೆಜೊಲ್ಯೂಷನ್—ಪ್ರಸಕ್ತದ ವಾರ್ಡುಗಳನ್ನು ಯಾವ ಉದ್ದೇಶಕ್ಕಾಗಿ ಕಟ್ಟಿದರೋ ಆ ಕೆಲಸಗಳಿಗೇನೆ ಸಂಪೂರ್ಣ ವಾಗಿ ಉಪಯೋಗಿಸತಕ್ಕದ್ದೆಂದು ಬೋರ್ಡಿನವರು ಯೋಚಿಸುವದರಿಂದ ಸದರಿ ಇನ್‌ಪೇಶಂಟ್ ವಾರ್ಡುಗಳನ್ನು ವಾಸದ ಕ್ವಾರ್ಟರುಗಳಾಗಿ ಮಾಡುವದಕ್ಕೆ ಅವರು ಒಪ್ಪುವದಿಲ್ಲಾ.

(5) ಜನರಲ್ ಮತ್ತು ರೆವಿನ್ಯೂ ಸೆಕ್ರಟರಿ ಸಾ|| ರವರಿಂದ ತಲಪಿರುವ 1903ನೆ ಶಪ್ಟಂಬರು ಮಾರ್ಕ್ಕಂನ 1130-7—L. F. 59—03ನೆ ನಂಬರು ಪ್ರೊಸಿಡಿಂಗ್ಸಿನಲ್ಲಿ ನಮೂದಿರುವಂತೆ ಮೈಸೂರು ಸಂಸ್ಥಾನದಲ್ಲಿರುವ ಮುಸಾಫರಖಾನೆಗಳನ್ನು ಯಾ ವರೀತಿ ಉಪಯೋಗಿಸಬೇಕೆಂಬ ಬಾಬ ಆಗಿರುವ ಡ್ರಾಫ್ಟ್ ರೂಲ್ಸು ವಿಚಾರದಲ್ಲಿ ಡಿಸ್ಟ್ರಿಕ್ಟು ಬೋರ್ಡಿನವರ ಅಭಿಪ್ರಾಯ ತಿಳಿಸುವ ವಿಷಯ—

ಓದಲಾಯಿತು.

ರೆಜೊಲ್ಯೂಷನ್—ಪ್ರಸಕ್ತದ ರೂಲ್ಸನ್ನು ಸಾಧಾರಣವಾಗಿ ಬೋರ್ಡಿನ ಶಿಸ್ಟು ಜನರು ಒಪ್ಪುತ್ತಾರೆ.

(6) ಹೊಳಲಕೆರೆ ರೈಲ್ವೆ ಸ್ಟೇಷನ್ನಿಗೆ ಸಮೀಪವಾಗಿರುವ ಅರೆಹಳ್ಳಿ ಹಟ್ಟಿ ಛತ್ರದಲ್ಲಿ ಎಲ್ಲಾ ಜಾತಿ ಬಡ ಪ್ರಯಾಣಿಕರಿಗೆ ಅನ್ನ ಕೊಡುವದಕ್ಕೋಸ್ಕರ ಇರುವ ಮುಜರ್‍ಯಿ ಗ್ರ್ಯಾಂಟು (25—6—0) ರೂಪಾಯಿಗಳೊಂದಿಗೆ ಡಿಸ್ಟ್ರಿಕ್ಟು ಫಂಡ್ಸಿನಿಂದ (17—0—0) ರೂಪಾಯಿ ಕೊಡುವದನ್ನು ಮಂಜೂರು ಮಾಡಲಿಕ್ಕಾಗುವದಿಲ್ಲವೆಂದು ಗೌರ್ನವೆುಂಟಿನಿಂದ ತಲಪಿರುವ 26—7—01ನೆ ಮಾರ್ಕ್ಕಂ 1353—L. F. 124—94ನೆ ಪ್ರೊಸಿಡಿಂಗ್ಸ್—

ಓದಲಾಯಿತು.

ರೆಜೊಲ್ಯೂಷನ್—ಅರೆಹಳ್ಳಿ ಹಟ್ಟಿ ಮುಸಾಫರ್ ಖಾನೆಯಲ್ಲಿರುವ ಮುಜರ್‍ಯಿ ಛತ್ರದ ಪಾರಪತ್ತೆಗಾರ್ ನರಸಪ್ಪನು ಬಹಳ ಚನ್ನಾಗಿ ಕೆಲಸ ಮಾಡುತ್ತಿರುವದರಿಂದ ಆ ಬಗ್ಗಾಗಿ ಮುಸಾಫರ್‌ಖಾನೆ ಹಾಗೂ ಬಂಡಿಮೋಟುಗಳಿಗೋಸ್ಕರ ಒಬ್ಬ ಕೇರ್‌ಟೇಕರನು ಸಾಕಾಗಿರುತ್ತೆ. ಬಂಡೀಮೋಟಿಗೋಸ್ಕರ ಮಾಹೆಯಾನಾ 5 ರೂಪಾಯಿ ಸಂಬಳ ತೆಗೆದು ಕೊಂಡು ಇರುವ ಕೇರ್‌ಟೇಕರ್ ಕೆಲಸವನ್ನು ವಜಾಮಾಡಿ ಮೇಲ್ಕಂಡ ಪಾರಪತ್ತೆಗಾರ್ ನರಸಪ್ಪನಿಗೆ ಹಾಲಿ ಸಲ್ಲುತ್ತಿರುವ ಸಂಣ ವೇತನ ನಾಲ್ಕು ರೂಪಾಯಿನೊಂದಿಗೆ 5 ರೂಪಾಯಿ ಸೇರಿಸಿ ಮಾಹೆಯಾನಾ 9 ರೂಪಾ ಯಿ ತಲಬು ಕೊಡುವದು ಯುಕ್ತವೆಂದು ಬೋರ್ಡಿನವರು ಯೋಚಿಸಿರುತ್ತಾರೆ.

(7) ಹೊಸ ಲೋಕಲ್ ಬೋರ್ಡು ರೆಗ್ಯುಲೇಷನ್ ಮತ್ತು ಆ ಸಂಬಂಧದ ರೂಲ್ಸು ಪ್ರಕಾರ ಡಿಸ್ಟ್ರಿಕ್ಟು ಫಂಡ್ಸು ಹಣವನ್ನು ಗ್ರಾಮ ಪಾಕೀಜಾ ಅಭಿವೃದ್ಧಿಗೋಸ್ಕರ ಉಪಯೋಗಿಸತಕ್ಕ ಬಾಬ ಪ್ರೆಸಿಡೆಂಟರವರು ಗಮನ ಕೊಡಬೇಕೆಂಬ ಅಂಶದಲ್ಲಿ ತಲಪಿರುವ 12—11—03ನೆ ಮಾರ್ಕ್ಕಂ 1792-99—L. F. 61-03ನೆ ನಂಬರು ಗೌರ್ನವೆುಂಟ್ ಪ್ರೊಸಿಡಿಂಗ್ಸ್—

ಓದಿ ನೋಟ್ ಮಾಡಲಾಯಿತು.

(8) ದಾವಣಗೆರೆ ತಾಲ್ಲೂಕು ಮಾಯಿಕೊಂಡೆ ಗ್ರಾಮದಲ್ಲಿ ಮ್ಯುನಿಸಿಪಾಲಿಟಿಯನ್ನು ಏರ್ಪಾಟು ಮಾಡುವದು ಪ್ರಕೃತ ಉಪಯೋಗವಿಲ್ಲಾ—ಡಿಸ್ಟ್ರಿಕ್ಟು ಫಂಡ್ ರೆಗ್ಯುಲೇಷನ್ ಜಾರಿಯಲ್ಲಿ ಬಂದ ನಂತರ ಆ ಗ್ರಾಮವನ್ನು "ಯೂನಿಯನ್" ಆಗಿ ಮಾಡಬಹು ದೆಂಬ ಅಂಶಕ್ಕೆ ಗೌರ್ನವೆುಂಟಿನಿಂದ ತಲಪಿದ 18—10—01ನೆ ಮಾರ್ಕ್ಕಂ 6567—L. F. 341-96ನೆ ನಂ. ಪ್ರೊಸಿಡಿಂಗ್ಸ್—

ಓದಲಾಯಿತು.

ರೆಜೊಲ್ಯೂಷನ್—ಹೊಸ ರೆಗ್ಯುಲೇಷನ್ ಅನುಸರಿಸಿ ಮಾಯಿಕೊಂಡೆ ಗ್ರಾಮದಲ್ಲಿ "ಯೂನಿಯನ್" ಏರ್ಪಾಡು ಆಗಲು ಗೌರ್ನವೆುಂಟಿಗೆ ಶಿಫಾರಸ್ ಮಾಡಬೇಕು.

(9) ಚಿತ್ರದುರ್ಗದ ಸಬ್ ಜಡ್ಜಿ ಮೆ|| ಹಂಜಾಹುಸೇನ್ ಸಾಹೇಬರವರು ತಾವು ಉಪಯೋಗಿಸಿಕೊಂಡಿರುವ ಮುಸಾಫರ್ ಖಾನೆಗೆ ಛಾರ್ಜು ಮಾಡಿರುವ ಬಾಡಿಗೆ ಕಮ್ಮಿಮಾಡಿ ತಾವು ವಾಸವಾಗಿರುವ ಭಾಗಕ್ಕೆ ಮಟ್ಟಿಗೆ ಮಾಹೆಯಾನಾ ಹತ್ತು ರೂಪಾಯಿ ಮೇರೆಗೆ ಬಾಡಿಗೆ ತೆಗೆದುಕೊಳ್ಳಬಹುದೆಂದು ಬರೆದಿರುವ ಡಿ. ಪೊ. ಲೆಟರು ವಿಚಾರ—

ಓದಲಾಯಿತು.

ರೆಜೊಲ್ಯೂಷನ್—ಮೆ|| ಹಂಜಾಹುಸೇನ್ ಸಾ|| ರವರು ಹಂಗಾಮಿಯಾಗಿ ವಾಸವಾಗಿರುವ ಮುಸಾಫರ್‌ಖಾನೆಯ ಭಾಗಕ್ಕೆ ಮಾಸೆಯಾನಾ ಹತ್ತು ರೂಪಾಯಿ ಮೇರ ಬಾಡಿಗೆ ಕೊಡುತ್ತೇವೆಂದು ಹೇಳುವದನ್ನು ನ್ಯಾಯವಾಗಿ ಅಂಗೀಕರಿಸಬಹುದು. ಆದರೆ ಮುಸಾಫರ್‌ಖಾನೆಗಳನ್ನು ಹಂಗಾಮಿಯಾಗಿ ಸಹವಾಸದ ಮನೆಗಳಾಗಿ ಮಾಡಿಕೊಳ್ಳುವದು ಯುಕ್ತವಲ್ಲವೆಂದು ಬೋರ್ಡಿನವರು ಐಕ್ಯಮತವಾಗಿ ಹೇಳುವದರಿಂದ ಸದರಿ ಮುಸಾಫರ್‌ಖಾನೆಯನ್ನು ಪ್ರಯಾಣಿಕರ ಉಪಯೋಗಕ್ಕೋಸ್ಕರ ಸಂಪೂರ್ಣವಾಗಿ ಖುಲ್ಲಾ ಮಾಡಿಸಬೇಕೆಂದು ಬೋರ್ಡಿನವರು ಅಭಿಪ್ರಾಯಪಡುತ್ತಾರೆ.

(10) ಚಿತ್ರದುರ್ಗದ ಡಿ|| ಎಗ್ಸಿಕ್ಯೂಟಿವ್ ಇಂಜನಿಯರ್ ಸಾ|| ರವರಿಂದ 30—10—03ನೆ ಮುರ್ಸಲಂ 927ನೆ ನಂ. ಜೊತೆಗೆ ತಲಪಿರುವ ದಾವಣಗೆರೆ ಲೋಕಲ್ ಫಂಡ್ ಡಿಸ್ಪೆನ್ಸರಿ ರಿಪೇರಿಗೋಸ್ಕರ ತಯಾರಾದ 860 ರೂಪಾಯಿನ ಬಾಬತು ಎಸ್ಟಿಮೇಟನ್ನು ಒಪ್ಪಿಕೊಂಡು ಫಂಡ್ಸ್ ಕೊಡುವ ವಿಚಾರ—

ಓದಲಾಯಿತು.

ಹಾಲಿ ಎಸ್ಟಿಮೇಟನ್ನು ಡಿಟೋ ಮ|| ಎಗ್ಸಿಕ್ಯೂಟಿವ್ ಇಂಜನಿಯರ್ ಸಾ|| ರವರು (394—0—0) ರೂಪಾಯಿಗೆ ಕಮ್ಮಿ ಮಾಡಿರುತ್ತಾರಾಗಿ ಇದನ್ನು ಪ್ಯಾಸುಮಾಡಿ ಅವಶ್ಯಕವಾದ ಮೊಬಲಗು ಕೊಡತಕ್ಕದ್ದೆಂದು ತೀರ್ಮಾನಿಸಲಾಯಿತು.

(11) ಹೊಸದುರ್ಗದ 3ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲೆಗೆ ಆಗಬೇಕಾದ ರಿಪೇರಿ ವಗೈರೆ ಅವಶ್ಯಕವಾದ ಕಾಮಗಾರಿಗೋಸ್ಕರ ಎಗ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಂದ 14—9—1903ನೆ ಮುರ್ಸಲಂ 803ನೆ ನಂಬರು ಜೊತೆಗೆ ತಲಪಿರುವ 519 ಮತ್ತು 1646 ರೂಪಾಯಿಗಳ ಬಾಬತು ಎರಡು ಎಸ್ಟಿಮೇಟುಗಳ ವಿಚಾರ—

ಓದಲಾಯಿತು.

ಆ ತಾಲ್ಲೂಕು ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು ಮೇಲ್ಕಂಡ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ಬರುವ ಮೀಟಿಂಗಿನಲ್ಲಿ ತಿಳಿಸಬಹುದಾದ್ದರಿಂದ ಆ ಬಗ್ಗೆ ಈ ವಿಷಯವನ್ನು ಆಲೋಚಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

(12) ಜಗಲೂರು ಡಿಸ್ಪೆನ್ಸರಿ ಕಾಂಪೌಂಡು ಸುತ್ತಲು ಬೇಲಿ ಹಾಕುವದಕ್ಕಾಗಿ ತಯಾರಾದ (461—0—0) ರೂಪಾಯಿನ ಎಸ್ಟಿಮೇಟು ಎಗ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಂದ 17—9—03ನೆ ಮುರ್ಸಲಂ 815ನೆ ನಂ. ಜೊತೆಗೆ ತಲಪಿರುವ ವಿಚಾರ—

ಓದಲಾಯಿತು.

ಹಾಲಿ ಯೋಚಿಸಿರುವಂತೆ ಕಾಂಪೌಂಡು ಸುತ್ತಲು ಬೇಲಿ ಹಾಕುವದು ಬೋರ್ಡಿನವರಿಗೆ ಯುಕ್ತತೋರದೆ ಸದರಿ ಕಾಂಪೌಂಡು ಸುತ್ತಲು ವೈರಿನಿಂದ ಬೇಲಿ ಹಾಕುವದಕ್ಕೆ (Wire fence) ಎಷ್ಟು ಲಾಗವಡು ತಗಲುತ್ತೆಂಬ ಬಗ್ಗೆ ಒಂದು ಎಸ್ಟಿಮೇಟನ್ನು ತಯಾರ ಮಾಡಿಸಿ ಕಳುಹಿಸಲು ಎಗ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಗೆ ಬರಿಯತಕ್ಕದ್ದೆಂದು ತೀರ್ಮಾನಿಸಲಾಯಿತು.

(13) ಚಳ್ಳಕೆರೆ-ಪಾವಗಡ ರಸ್ತೆ ಸ್ಪೆಷಲ್ ರಿಪೇರಿಗಾಗಿ ಎಗ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಂದ 21—11—03ನೆ ಮುರ್ಸಲಂ 979ನೆ ನಂ. ಜೊತೆಗೆ ತಲಪಿರುವ (499) ರೂಪಾಯಿನ ಎಸ್ಟಿಮೇಟು—

ಓದಿ ಸದ್ಯಕ್ಕೆ ಇದನ್ನು ಹಾಗೆಯೇ ನಿಲ್ಲಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

(14) ಹಿರಿಯೂರು ತಾಲ್ಲೂಕು ಯರಬಳ್ಳಿ ಮತ್ತು ದಾವಣಗೆರೆ ತಾಲ್ಲೂಕು ಆನಗೋಡು ಟ್ರಾವಲರ್ಸ್ ಬಂಗ್ಲೆಗಳ ರಿಪೇರಿಗಾಗಿ ಎಗ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಂದ 7—11—03ನೆ ಮುರ್ಸಲಂ 951ನೆ ನಂಬರು ಜೊತೆಗೆ ತಲಪಿದ ಎರಡು ಎಸ್ಟಿಮೇಟುಗಳ ವಿಚಾರ—

ಓದಲಾಯಿತು.

ಎಗ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರು ಹಾಲಿ ಸದರಿ ಎಸ್ಟಿಮೇಟುಗಳನ್ನು ಕಮ್ಮಿ ಮೊಬಲಗಿಗೆ ಬದಲಾಯಿಸಿರುವಂತೆ ಪ್ಯಾಸ್ ಮಾಡಬೇಕೆಂದು ತೀರ್ಮಾನಿಸಲಾಯಿತು.

(15) ಇಂಜನಿಯರ್ ಇಲಾಖಾ ಸಬ್ ಡಿವಿಜನ್ ಆಫಿಸರ್ರವರ ವಾಸಕ್ಕೆ ಉಪಯೋಗವಾಗುವಂತೆ ಹೊಳಲಕೆರೆ ಮುಸಾಫರ್‌ಖಾನೆಯ ಒಂದು ಭಾಗಕ್ಕೆ ಕೆಲವು ಬದಲಾವಣೆಗಳನ್ನು ಮಾಡುವದಕ್ಕಾಗಿ ಎಗ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಂದ 2—9—03ನೆ ಮುರ್ಸಲಂ 766ನೆ ನಂ. ಜೊತೆಗೆ ತಲಪಿರುವ 90 ರೂಪಾಯಿನ ಎಸ್ಟಿಮೇಟನ್ನು ಪ್ಯಾಸ್ ಮಾಡುವ ವಿಚಾರ—

ಓದಲಾಯಿತು.

ರೆಜೊಲ್ಯೂಷನ್—ಎಗ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರು ಈ ಎಸ್ಟಿಮೇಟನ್ನು ವಾಪಸು ತೆಗದುಕೊಂಡಿರುತ್ತಾರೆ.

(16) ಚಿತ್ರದುರ್ಗದ ತಾಲ್ಲೂಕು ವಿಜಾಪುರದಬಳಿ ಇರುವ ಗೌರಮ್ಮನಹಳ್ಳಿ ಭಾವಿಗೆ ಸುತ್ತಲು ಗೋಡೆ ಮತ್ತು ಗಿಡ ಇಡುವದಕ್ಕೋಸ್ಕರ ಎಸ್ಟಿಮೇಟನ್ನು ತಯಾರ್ ಮಾಡಿಸಿ 20—11—03ನೆ ಮುರ್ಸಲಂ 980ನೆ ನಂ. ಡಾಕೇಟ್ ಜೊತೆಗೆ ಫೈಸಲ್ ಬಗ್ಗೆ ಕಳುಹಿಸಿರುವ ವಿಚಾರ—

ಇದನ್ನು ಮುಂದಾ ಯೋಚಿಸತಕ್ಕ ಬಗ್ಗೆ ಇಡಬೇಕು. ಅಷ್ಟರಲ್ಲಿ ಚಿತ್ರದುರ್ಗ ತಾಲ್ಲೂಕು ಅಮಲ್ದಾರ್ರಿಂದ ಈ ವಿಚಾರದಲ್ಲಿ ರಿಪೋರ್ಟ್ ಬರಮಾಡಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು.

(17) ಫೈನ್ಯಾನ್ಸ್ ಕಮಿಟಿ ವಿಷಯ ವಿಚಾರದಲ್ಲಿ ಮೈಸೂರು ಲೋಕಲ್ ಬೋರ್ಡು ರೆಗ್ಯುಲೇಷನ್ 20ನೆ ಸೆಕ್ಷನ್ ಓದಲಾಯಿತು.

ಮೇಲ್ಕಂಡ ರೂಲ್ಸು ಅನುಸರಿಸಿ ಫೈನ್ಯಾನ್ಸ್ ಕಮಿಟಿಗೆ ಈ ಕೆಳಗೆ ನಮೂದಾಗುವ ಮೆಂಬರುಗಳನ್ನು ಸೇರಿಸತಕ್ಕದ್ದೆಂದು ತೀರ್ಮಾನವಾಯಿತು.

1. ವೈಸ್ ಪ್ರೆಸಿಡೆಂಟರವರು.
2. ಎಗ್ಸಿಕ್ಯೂಟಿವ್ ಇಂಜಿನಿಯರ್ ಸಾಹೇಬರವರು.
3. ಸೆಕಂಡ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.
4. ಮ॥ ಕ್ರಿಷ್ಣಪ್ಪನವರು.
5. ,, ವೀರಭದ್ರಯ್ಯನವರು.
6. ,, ಹನುಮಂತಪ್ಪನವರು.
7. ,, ಸ್ವಾಮಿರಾಯಾಚಾರ್ರು.

ಹೆಚ್. ರಾಮಾನುಜೈಯ್ಯಂಗಾರ್,
ಪ್ರೆಸಿಡೆಂಟ್.

ಬೆಂಗಳೂರು ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸ್ 1903—1904ನೆ ಇಸವಿ ಅರ್ಜೀ ನಂಬರು 231.

ಮೃತಪಟ್ಟ ಗೋಪಾಲೈಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ತಾಲ್ಲೂಕು ಯಳಚೇನಹಳ್ಳೀಲಿರುವ 1ನೆ ನರಸಯ್ಯ, 2ನೆ ಕದರಿಪತಿ ಮೈನರು, ಗಾರ್ಡಿಯನ್ 1ನೆ ಅರ್ಜೀದಾರ್, ಮೃತಪಟ್ಟ ಸದರೀ ಗೋಪಾಲೈಯ್ಯನವರಿಗೆ ಸಹೋದರರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ತಾಲ್ಲೂಕು ಯಳಚೇನಹಳ್ಳಿ ಸ್ಥಳದ ವಾಸಸ್ಥರಾಗಿ ಮೃತಪಟ್ಟ ಗೋಪಾಲೈಯ್ಯನವರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ನರಸಯ್ಯ, 2ನೆ ಕದರಿಪತಿ ಮೈನರು, ಗಾರ್ಡಿಯನ್ 1ನೆ ಅರ್ಜಿದಾರ್ರ ಅರ್ಜಿಯನ್ನು ಸ್ 1904ನೆ ಇಸವಿ ಫೆಬ್ರುವರಿ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲಹುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗೋಪಾಲೈಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1904ನೆ ಇಸವಿ ಜನವರಿ ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತುಡನೆ ಕೊಡೋಣಾಗಿದೆ.

ಎಸ್. ಆರ್. ಸುಬ್ಬಾಯು ಐಯ್ಯರ್,
ಡಿಸ್ಟ್ರಿಕ್ಟ್, ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸ್ 1903—1904ನೆ ಇಸವಿ ಅರ್ಜೀ ನಂಬರ್ 253.

ಅರ್ಜೀದಾರ್ರು ಮೈಸೂರು ರಮಾವಿಳಾಸದ ಅಗ್ರಹಾರದಲ್ಲಿರುವ ರಿಜಿಸ್ಟ್ರೇಷನ್ ಗುಮಾಸ್ತ ನಂಜಪ್ಪನವರ ಮಗ K. N. ಶ್ರೀಕಂಠೈಯ್ಯ ಮೈನರಾದ ಮೈಸೂರು ಸ್ಥಳದ ನಾರಾಯಣನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ನಾರಾಯಣನಿಗೆ ಅಣ್ಣನು ಆಗಬೇಕೆಂಬ ಹಕ್ಕಿನಮೇಲೆ ಮೈಸೂರು ಸ್ಥಳದ ಶ್ರೀಕಂಠೈಯ್ಯನವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ 1904ನೆ ಇಸವಿ ಜನವರಿ ತಾರೀಖು 22ರಲ್ಲು ಮೊಕದ್ದಮೆ ನಡೆಸುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸ್ 1903ನೆ ಇಸವಿ ಡಿಸೆಂಬರ್ ತಿಂಗಳು 10ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತುಖತ್ತುಡನೆ ಕೊಡೋಣಾಗಿದೆ.

ಸ್ 1903—1904ನೆ ಇಸವಿ ಅರ್ಜೀ ನಂಬರ್ 266.

ಅರ್ಜಿದಾರ್ರು ನಂಜನಗೂಡು ತಾಲ್ಲೂಕು ಹುಳಿಮಾವು ಗ್ರಾಮದಲ್ಲಿರುವ ಶಿವಾಚಾರದ ಪುರಗ ಬಸವೈಯ್ಯನ ಮಗ ದೊಡಯ್ಯ ಮೈನರಾದ ಬಕ್ಕಹಳ್ಳಿ ಸ್ಥಳದ ಸುಬ್ಬೆಗೌಡನ ಮಗ ನಂಜೈಯ್ಯನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ನಂಜೈಯ್ಯನಿಗೆ ಸೋದರ ಮಾವನು ಆಗಬೇಕೆಂಬ ಹಕ್ಕಿನಮೇಲೆ ಹುಳಿಮಾವು ಸ್ಥಳದ ದೊಡ್ಡಯ್ಯನು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ 1904ನೆ ಇಸವಿ ಫೆಬ್ರುವರಿ ತಾರೀಖು 12ರಲ್ಲು ಮೊಕದ್ದಮೆ ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ 1903ನೆ ಇಸವಿ ಡಿಸೆಂಬರ್ ತಿಂಗಳು 15ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತುಖತ್ತುಡನೆ ಕೊಡೋಣಾಗಿದೆ.

ಸನ್ 1903—1904ನೆ ಇಸವಿ ಅರ್ಜೀ ನಂಬರ್ 278.

ಅರ್ಜೀದಾರರು ಹುಣಸೂರು ತಾಲ್ಲೂಕು ಪಟ್ಟದಪುರದ ಹೋಬಳಿ ಬೂವನಹಳ್ಳಿ ಗ್ರಾಮದಲ್ಲಿರುವ ಸಾಮಧಾರಿ ಒಕ್ಕಲಿಗರ ಜಾತಿ ಚಿಕ್ಕಗೌಡನ ಮಗ ಯಜಮಾನ್ ಚನ್ನಿಗೌಡ, ಮೈನರಾದ ಬೂವನಹಳ್ಳಿ ಸ್ಥಳದ ಮೂಳೆಬೋರಗೌಡನ ಮಕ್ಕಳು ಬೋರಲಿಂಗ, ಶಿದ್ಧ ಇವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಬೋರಲಿಂಗ, ಶಿದ್ಧ ಇವರಿಗೆ ಗಾರ್ಡಿಯನ್ ಆಗಬೇಕೆಂಬ ಹಕ್ಕಿನಮೇಲೆ ಬೂವನಹಳ್ಳಿ ಸ್ಥಳದ ಚನ್ನಿಗೌಡನು ಸದರೀ ಮೈನರಿನ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸನ್ 1904ನೆ ಇಸವಿ ಜನವರಿ ತಾರೀಖು 20ರಲ್ಲು ಮೊಕರರು ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

ಸನ್ 1903ನೆ ಇಸವಿ ಡಿಸೆಂಬರು ತಿಂಗಳು 10ನೆ ತಾರೀಖಿನಲ್ಲಿ ಕೋರ್ಟಿನ ಮೊಹರ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗ ಡಿಸ್ಟ್ರಿಕ್ಟ ಜಡ್ಜರವರ ಕೋರ್ಟಿನಲ್ಲಿ.

ಸನ್ 1903—1904ನೆ ಇಸವಿ ವಿಚಿ ಅರ್ಜೀ ನಂಬರ್ 195.

ಅರ್ಜೀದಾರರು ಚಿತ್ರದುರ್ಗ ತಾಲ್ಲೂಕು ಹಿರಿಯೂರು ವಾಸಿ ಕರ್ತ ಶ್ರೀನಿವಾಸಾವಧಾನಿ ಬಿನ್ ಸುಬ್ಬಾವಧಾನಿ, ಮೈನರಾದ ರಾಮಲಕ್ಷ್ಮಮ್ಮ (ಘವಣಿ ವೆಂಕಟರಾಮಶಾಸ್ತ್ರಿ ವಿಧವೆ) ಹಿರಿಯೂರು ಸ್ಥಳದ ಘವತಿ ವೆಂಕಟರಾಮಶಾಸ್ತ್ರಿಯವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ರಾಮಲಕ್ಷ್ಮಮ್ಮನವರಿಗೆ ಖಾಸ ತಂದೆ ಆಗಬೇಕೆಂಬ ಹಕ್ಕಿನ ಮೇಲೆ ಚಿತ್ರದುರ್ಗ ತಾಲ್ಲೂಕು ಹಿರಿಯೂರು ಸ್ಥಳದ ಅರ್ಜೀದಾರರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಗೆ ಅರ್ಜಿಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸನ್ 1904ನೆ ಇಸವಿ ಜನವರಿ ತಾರೀಖು 22ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

ಸನ್ 1903ನೆ ಇಸವಿ ಡಿಸೆಂಬರ ತಿಂಗಳು 14ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1903—1904ನೆ ಇಸವಿ ಅರ್ಜೀ ನಂಬರ್ 198.

ಮೃತಪಟ್ಟ ರಾಜಗೊಂಡಹಳ್ಳಿಯಲ್ಲಿದ್ದ ನಾವಡೆ ಸಿದ್ಧಲಿಂಗಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ಸಿದ್ಧಪ್ಪ, ಈತನ ತಮ್ಮ ಸಿಂಗಪ್ಪ, ಚನ್ನಗಿರಿ ತಾಲ್ಲೂಕು ವಾಸಿಗಳು, ಮೃತಪಟ್ಟ ಸದರೀ ಸಿದ್ಧಲಿಂಗಪ್ಪನವರಿಗೆ ಖಾಸಾ ಮಕ್ಕಳು ಆಗಬೇಕೆಂಬ ಹಕ್ಕುದಾರಿಮೇಲೆ ಸ್ಥಳದ ಡಿಟೋ ಅರ್ಜಿದಾರರು ರಾಜಗೊಂಡಹಳ್ಳಿ ವಾಸಸ್ಥರಾಗಿ ಮೃತಪಟ್ಟ ಸಿದ್ಧಲಿಂಗಪ್ಪನವರ ಜಿಂದಗಿ ಬಗ್ಗಾಗಿ ಬರತಕ್ಕ 175—7 10 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1860ನೆ ಇಸವಿ 27ನೆ ಆಕ್ಟು ಮೇರೆಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅರ್ಜಿದಾರರ ಅರ್ಜಿಯನ್ನು ಸನ್ 1904ನೆ ಇಸವಿ ಜನವರಿ ತಿಂಗಳು ತಾರೀಖು 22ರಲ್ಲು ಕೇ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಿದ್ಧಲಿಂಗಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೆ ಇಸವಿ ಡಿಸಂಬರ್ ತಿಂಗಳು 18ನೆ ತಾರೀಖಿನಲ್ಲಿ ಕೋರ್ಟಿನ ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1903—1904ನೆ ಇಸವಿ ವಿ|| ಅರ್ಜೀ ನಂಬರ್ 199.

ಮೃತಪಟ್ಟ ಹೊನ್ನಾಳಿ ತಾಲ್ಲೂಕು ಈರಣ್ಣನ ಚಿಲ್ಲೂರು ವಾಸಿ ಹಾಲಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಶಿವಲಿಂಗಮ್ಮ ಕೋಂ ಹಾಲಪ್ಪ ಮೈನರ್, ಗಾರ್ಡಿಯನ್ ಮೈದುನ ಮುರಿಗೆಪ್ಪ, ಚಿಲ್ಲೂರು ವಾಸಿ, ಮೃತಪಟ್ಟ ಸದರೀ ಹಾಲಪ್ಪನವರಿಗೆ ಖಾಸ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಲ್ಲೂರು ಸ್ಥಳದ ಶಿವಲಿಂಗಮ್ಮ ಕೋಂ ಹಾಲಪ್ಪ ಮೈನರ್ ಗಾರ್ಡಿಯನ್ ಮೈದುನ ಮುರಿಗೆಪ್ಪನವರು, ಚಿಲ್ಲೂರು ವಾಸಸ್ಥರಾಗಿ ಮೃತಪಟ್ಟ ಹಾಲಪ್ಪನವರ ಜಿಂದಗಿ ಬಗ್ಗಾಗಿ ಬರತಕ್ಕ 160—8—0 ರೂ. ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ VIIನೆ ನಂಬರ ರೆಗ್ಯುಲೇಷನ್ ಮೇರೆಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಿವಲಿಂಗಮ್ಮ ಮೈನರ್, ಗಾರ್ಡಿಯನ್ ಮೈದುನ ಮುರಿಗೆಪ್ಪನವರ ಅರ್ಜಿಯನ್ನು ಸನ್ 1904ನೆ ಇಸವಿ ಜನವರಿ ತಿಂಗಳು ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹಾಲಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೆ ಇಸವಿ ಡಿಸೆಂಬರು ತಿಂಗಳು 24ನೆ ತಾರೀಖಿನಲ್ಲಿ ಕೋರ್ಟಿನ ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1903—1904ನೆ ಇಸವಿ ಮಿ|| ಅರ್ಜಿ ನಂಬರ್ 224.

ಶಿವಮೊಗ್ಗಾದಲ್ಲಿ ವಾಸವಾಗಿದ್ದ ಮೃತಪಟ್ಟ ಸುಬ್ಬರಾಯರ ಆಸ್ತಿ ವಿಷಯದಲ್ಲಿ—

ಅರ್ಜಿದಾರ್ರು ವೆಂಕಟರಾವ್ ಕೆಲಕರ, 2ನೆ ತಮ್ಮ ಬಾಳಪ್ಪ, 3ನೆ ಯಲ್ಲಪ್ಪ ಈ ಸುಬ್ಬರಾವ್, ಮೈನರ ಗಾರ್ಡಿಯನ್ 1ನೆ ಅರ್ಜಿದಾರ ಶಿವಮೊಗ್ಗಾ ವಾಸಿ, ಮೃತಪಟ್ಟ ಸದರೀ ಸುಬ್ಬರಾಯರಿಗೆ ಮಕ್ಕಳು ಆಗಬೇಕೆಂಬ ಹಕ್ಕು ದಾರಿ ಮೇಲೆ ಶಿವಮೊಗ್ಗಾ ಸ್ಥಳದ 1, 2, 3ನೆ ಅರ್ಜಿದಾರರು ಶಿವಮೊಗ್ಗಾ ವಾಸಸ್ಥರಾಗಿ ಮೃತಪಟ್ಟ ಸುಬ್ಬರಾಯರ ಜಿಂದಗಿ ಬಗ್ಗ್ಯಾಗಿ ಬರತಕ್ಕ 2,000—0—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ VIIನೆ ನಂಬರ ರೆಗ್ಯುಲೇಷನ ಮೇರಿಗೆ ಸರಟಿಫಿಕೇಟ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ವೆಂಕಟರಾವ್ ಕೆಲಕರ, 2ನೆ ತಮ್ಮ ಬಾಳಪ್ಪ, 3ನೆ ಯಲ್ಲಪ್ಪ ಮೈನರ ಗಾರ್ಡಿಯನ್ 1ನೆ ಅರ್ಜಿದಾರರ ಅರ್ಜಿಯನ್ನು 1904ನೆ ಇಸವಿ ಫೆಬ್ರುವರಿ ತಿಂಗಳು ತಾರೀಖು 19ರಲ್ಲಿ ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ಜನವರಿ 6ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1903—1904ನೆ ಇಸವಿ ಮಿ|| ಅರ್ಜಿ ನಂಬರ್ 225.

ಶಿವಮೊಗ್ಗಾ ತಾಲ್ಲೂಕು ಮತ್ತೂರಲ್ಲಿ ವಾಸವಾಗಿದ್ದ ಮೃತಪಟ್ಟ ರಾಮಾವಧಾನಿ ಯಾನೆ ಕಂಠಾವಧಾನೀರ ಆಸ್ತಿ ವಿಷಯದಲ್ಲಿ—

ಅರ್ಜಿದಾರ್ರು ಕೇಶವಾವಧಾನಿ, 2ನೆ ಕೃಷ್ಣಾವಧಾನಿ, 3ನೆ ರಾಮಾವಧಾನಿ ಮೈನರ್, ಗಾರ್ಡಿಯನ್ ತಾಯಿ ಲಕ್ಷ್ಮಮ್ಮ, ಮತ್ತೂರು ವಾಸಿ, ಮೃತಪಟ್ಟ ಸದರೀ ರಾಮಾವಧಾನಿಗಳವರಿಗೆ 1, 2, 3ನೆ ಮಕ್ಕಳು, ಗಾರ್ಡಿಯನ್ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗಾ ತಾಲ್ಲೂಕು ಗ್ರಾಜನೂರು ಸ್ಥಳದ 1, 2, 3ನೆ ಅರ್ಜಿದಾರ್ರು ಮೈನರ್ ಗಾರ್ಡಿಯನ್ ತಾಯಿ ಲಕ್ಷ್ಮಮ್ಮನವರು ಮತ್ತೂರು ವಾಸಸ್ಥರಾಗಿ ಮೃತಪಟ್ಟ ರಾಮಾವಧಾನಿಗಳವರ ಜಿಂದಗಿ ಬಗ್ಗ್ಯಾಗಿ ಬರತಕ್ಕ 655—0—0 ರೂ. ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ VIIನೆ ನಂಬರ್ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1, 2, 3ನೆ ಅರ್ಜಿದಾರ್ರು ಮೈನರ್, ಗಾರ್ಡಿಯನ್ ತಾಯಿ ಲಕ್ಷ್ಮಮ್ಮನವರ ಅರ್ಜಿಯನ್ನು ಸನ್ 1904ನೆ ಇಸವಿ ಫೆಬ್ರುವರಿ ತಿಂಗಳು ತಾರೀಖು 19ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಾವಧಾನಿಯವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ಜನವರಿ ತಿಂಗಳು 6ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1903—1904ನೆ ಇಸವಿ ಮಿ|| ಅರ್ಜಿ ನಂಬರ್ 226

ಕೊಪ್ಪ ತಾಲ್ಲೂಕು ಹರಿಹರಪುರದಲ್ಲಿ ವಾಸವಾಗಿದ್ದ ಮೃತಪಟ್ಟ ರಂಗಣ್ಣ ಉಪಾಧ್ಯರ ಆಸ್ತಿ ವಿಷಯದಲ್ಲಿ—

ಅರ್ಜಿದಾರ್ರು ಸುಬ್ಬಣ್ಣ ಉಪಾಧ್ಯ, ರಂಗಣ್ಣ ಉಪಾಧ್ಯರ ಮಗ, ಹರಿಹರಪುರದ ವಾಸಿ, ಮೃತಪಟ್ಟ ಸದರೀ ರಂಗಣ್ಣ ಉಪಾಧ್ಯರಿಗೆ ಖಾಸ ಮಗನು ಆಗಬೇಕೆಂಬ ಹಕ್ಕಿನ ಮೇಲೆ ಹರಿಹರಪುರ ಸ್ಥಳದ ಸುಬ್ಬಣ್ಣ ಉಪಾಧ್ಯರು ಹರಿಹರಪುರ ವಾಸಸ್ಥರಾಗಿ ಮೃತಪಟ್ಟ ರಂಗಣ್ಣ ಉಪಾಧ್ಯರ ಜಿಂದಗಿ ಬಗ್ಗ್ಯಾಗಿ ಬರತಕ್ಕ 2,327—8—6 ರೂ. ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ VIIನೆ ನಂಬರ್ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಸುಬ್ಬಣ್ಣ ಉಪಾಧ್ಯರ ಅರ್ಜಿಯನ್ನು ಸನ್ 1904ನೆ ಇಸವಿ ಫೆಬ್ರುವರಿ ತಿಂಗಳು ತಾರೀಖು 19ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗಣ್ಣ ಉಪಾಧ್ಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ಜನವರಿ ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಶೇಷಾದ್ರ್ಯಯ್ಯಂಗಾರಿ,
ಷಿರಸ್ತೇದಾರ್.

ಚಿತ್ರದುರ್ಗ ಡಿವಿಜನ್.

ನೋಟಿಸ್.

ಚಿತ್ರದುರ್ಗ ಡಿವಿಜನ್ ಎಗ್ಸಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫೀಸಿನಲ್ಲಿ, ವಿಜಾಪುರ ಹಳ್ಳಿ ತಲಾವ್ ಕಂಟ್ರಾಕ್ಟರ್ ರಾಮಲಿಂಗಂ ಎಂಬುವರಿಗೆ ಪಾವತಿ ಆಗಬೇಕಾಗಿರುವ ರೂ. 8—9—1 ಪೈ ಬಾಕಿ ನಿಂತಿರುತ್ತೆ. ಈ ತಾರೀಖು ಲಾಗಾಯಿತು 3 ತಿಂಗಳೊಳಗಾಗಿ ಮೇಲ್ಕಂಡ ಕಂಟ್ರಾಕ್ಟುದಾರರೇ ಆಗಲಿ ಅಥವಾ ಅವರ ಸರಿಯಾದ ವಾರಸ್ದಾರರೇ ಆಗಲಿ ಚಿತ್ರದುರ್ಗ ಡಿವಿಜನ್ ಎಗ್ಸಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ರೂಬರೂಬು ಹಾಜರಾಗಿ ಹಣಾ ತೆಗದುಕೊಳ್ಳತಕ್ಕದ್ದು. ತಪ್ಪಿದಲ್ಲಿ ಮೊಬಲಗು ಸರಕಾರಕ್ಕೆ ಜಮಾ ಮಾಡಿಕೊಳ್ಳಲ್ಪಡುತ್ತೆ.

ವೈ. ಶ್ರೀನಿವಾಸರಾವ್,
ಎಗ್ಸಿಕ್ಯೂಟಿವ್ ಇಂಜಿನಿಯರ್.

ಬೆಂಗಳೂರು ಸೆಂಟ್ರಲ್ ಜೈಲ್.

ತಾರೀಖು 15ನೆ ಡಿಸೆಂಬರ್ 1903.

ಇದರಿಂದ ತಿಳಿಯಪಡಿಸುವದೇನಂದರೆ—ಬೆಂಗಳೂರು ಸೆಂಟ್ರಲ್ ಜೈಲನಲ್ಲಿ ಖೈದು ಮಾಡಲ್ಪಟ್ಟು ಇರುವ ಖೈದಿಗಳ ಉಪಯೋಗದ ಬಗ್ಗೆ ಸ್ 1904ನೆ ಇಸವಿ ಫೆಬ್ರವರಿ ಗುರ್ರೆ ಲಾಗಾಯಿತು ಸ್ 1905ನೆ ಇಸವಿ ಜನವರಿ 31ನೆ ತಾರೀಖಿನ ವರಿಗೂ ಆ 2 ದಿನಗಳೂ ಸೇರಿ ಜಿನಸುಗಳನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಗೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರಿಂದ ಸ್ 1904ನೆ ಇಸವಿ ಜನವರಿ ತಾರೀಖು 15ನೆ ಶುಕ್ರವಾರ ಹಗಲು 10 ಘಂಟೆ ವರಿಗೂ ತೆಗದುಕೊಳ್ಳಲ್ಪಡುವವು.

ಸರಬರಾಯಿ ಆಗಬೇಕಾದ ಪದಾರ್ಥಗಳ ತಪಸೀಲು ಮತ್ತು ದರಖಾಸ್ತುಗಳ ಸಂಬಂಧವಾದ ಕರಾರುಗಳು 1903ನೆ ಇಸವಿ ಡಿಸೆಂಬರು 24ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಮಾಡಿ ಇರುತ್ತದೆ.

ನೋಟೀಸ್.

ನೋಟೀಸು ಮೂಲಕ ತಿಳಿಯಪಡಿಸುವದೇನಂದರೆ—1904ನೆ ಇಸವಿ ಫೆಬ್ರವರಿ ಗುರ್ರೆ ತಾರೀಖು ಲಾಗಾಯಿತು 1905ನೆ ಇಸವಿ ಜನವರಿ 31ನೆ ತಾರೀಖು ವರಿವಿಗು ಜೈಲಿನಲ್ಲಿ ತಯಾರಾಗತಕ್ಕ ಸಾಮಾನುಗಳಿಗೆ ಬೇಕಾದಂಥಾ ಎಲ್ಲಾ ರಖಂ ತುಕಡಿಗಳು ಮತ್ತು ಇತರ ಸಾಮಾನುಗಳನ್ನು ಹಾಜರುಮಾಡಲು ಕಂಟ್ರಾಕ್ಟು ಪಡೆಯಲು ಇಷ್ಟಪಟ್ಟವರಿಂದ ಹಾಜರ್ಮಾಡಲ್ಪಡುವ ಸೀಲ್ಡು ಕವರಿನಲ್ಲಿ ಇರುವ ದರಖಾಸ್ತುಗಳನ್ನು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು 1904ನೆ ಇಸವಿ ಜನವರಿ 15ನೆ ಶುಕ್ರವಾರ 10 ಘಂಟೆ ವರಿಗು ಅಂಗೀಕರಿಸುವರು.

ಸರಬರಾಯಿ ಆಗಬೇಕಾದ ಪದಾರ್ಥಗಳ ತಪಸೀಲು ಮತ್ತು ದರಖಾಸ್ತುಗಳ ಸಂಬಂಧವಾದ ಕರಾರುಗಳು 1903ನೆ ಇಸವಿ ಡಿಸೆಂಬರು 24ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟ ಮಾಡಲ್ಪಟ್ಟು ಇರುತ್ತದೆ.

ಜೆ. ಹ್ಯೂಂ ರೈಟ್,
ಸೂಪರಿಂಟೆಂಡೆಂಟ್ ಸೆಂಟ್ರಲ್ ಜೈಲ್, ಬೆಂಗಳೂರು.

ಅಮೃತ ಮಹಲ್ ಇಲಾಖಾ.

ಇಸ್ತಿಹಾರ್ನಾಮೆ.

ತಾರೀಖು 21-24ನೆ ಡಿಸೆಂಬರು 1903, ಮೊಕ್ಕಾಂ ಬೆಂಗಳೂರು.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ:—ಅಮೃತ ಮಹಲ್ ಇಲಾಖಾದಲ್ಲಿರುವ 4 ವರುಷದ ಕೆಲವು ಹೋರಿಗಳನ್ನು ಮತ್ತು ಕೆಲವು ಹೆಣ್ಣು ದನಗಳನ್ನು ಹಾಸನ ತಾಲ್ಲೂಕು ಸೋಮನಹಳ್ಳಿ ಕಾವಲಲ್ಲಿ 1904ನೆ ಜನವರಿ 14ನೆ ತಾರೀಖು ಲಾಗಾಯತು ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಇಷ್ಟಪಟ್ಟವರು ಜತ ದರಖಾಸ್ತು ಮಾಡಿ ಪಡಿಯಬಹುದು.

ಹೆಚ್. ನಂಜುಂಡರಾಜ ಅರಸ್,
ಸೂಪರಿಂಟೆಂಡೆಂಟ್ ಅಮೃತ ಮಹಲ್ ಇಲಾಖಾ.

ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ—ಬೆಂಗಳೂರ್.

ನೋಟಿಸ್, ತಾರೀಖು 8ನೆ ಡಿಸೆಂಬರ 1903.

ಈ ಕೆಳಗಡೆ ನಮೂದಿಸಿರುವ ಪುಸ್ತಕಗಳು ಡಿಪೋವಿನಲ್ಲಿ ವಿಕರಿಗೆ ಸಿದ್ಧವಾಗಿರುತ್ತವೆ. ಇದರ ಕ್ರಯ ಪ್ರತಿ 1ಕ್ಕೆ ನಾಲ್ಕು ಆಣೆ:—

1901ನೆ ಇಸವಿ ಖಾನೇಷುಮಾರಿ ಲೆಖ್ಖದ ಬಾಬತು ಜಾತಿವಾರ್ ತೋರಿಸುವ ತಖ್ತೆಯುಳ್ಳ ಪುಸ್ತಕ.

ಎಸ್. ಅಬ್ದುಲ್ ಷೈ, ಕ್ಯೂರೇಟರ್.

ಇದರಿಂದ ಸಮಸ್ತ ಜನರಿಗೂ,—

ಹೊನ್ನಾಳಿ ತಾಲ್ಲೂಕು ನ್ಯಾಮತಿ ವಾಸಸ್ಥರಾಗಿ ಮೃತಪಟ್ಟ ನಾಡಿಗ ಸುಬ್ಬಣ್ಣನವರ ದತ್ತು ಮಗ ದಾಸಪ್ಪ, ಮೈನರ್, ಈತನ ಕ್ಷೇಮ ಚಿಂತಕ ಹಾಗು ಜನಕತಂದೆ ಚಿಲ್ಲೂರು ನಾಡಿಗ ಕೃಷ್ಣಪ್ಪನು ತಿಳಿಯಪಡಿಸುವದೇನಂದರೆ:—

ಮೈನರ್ ದಾಸಪ್ಪನ ದತ್ತು ತಾಯಿ ಯಮುನಮ್ಮ ಕೋಂ ಸುಬ್ಬಣ್ಣ ಈಗ ನಮ್ಮ ಕೆಲವು ದ್ವೇಷಿಗಳೂ ಪ್ರೇರಿತ ನಿಷ್ಕಾರಣವಾಗಿ ಪ್ರತಿ ಫಲವಿಲ್ಲದೆ ಮೈನರ್ ದಾಸಪ್ಪನ ಬಾಬತು ಕೆಲವು ಸ್ಥಿರಸ್ವತ್ತುಗಳನ್ನ ಅಡವು ಮಾಡಿಸಿಕೊಂಡು ಪತ್ರಗಳೂ ಬರಿಸಿಕೊಂಡಿರುವಂತೆಯೂ ಇನ್ನೂ ಕೆಲವರು ಖರೀದಿ ಮಾಡಿಕೊಳ್ಳುವದರಲ್ಲಿರುವದಾಗಿಯೂ ಸಮಾಚಾರ ಕೇಳುತ್ತೇನೆ. ಹಾಗೆ ಯಾರಾದರೂ ಮೈನರನಿಗೆ ವಿರೋಧವಾಗಿ ಅವನ ಬಾಬತು ಯಾವ ಸ್ಥಿರ ಸೊತ್ತುಗಳನ್ನಾಗಲಿ ಯಾವ ಮೂಲಕವಾಗಿಯಾದರೂ ಸದರಿ ಯಮುನಮ್ಮನಿಂದಾ ಹೊಂದಕೂಡದು, ಆಕೆ ಹಕ್ಕುದಾರಳಲ್ಲಾ. ಆಕೆಗೆ ಹಾಗೆ ಮಾಡಲು ಹಕ್ಕಿಲ್ಲಾ. ಪಕ್ಷೆ ಹಾಗೇನಾದರೂ ಯಾರಾದರೂ ಯಾವವಿಧವಾಗಿ ಪತ್ರ ಬರಿಸಿಕೊಂಡಿದ್ರೆ ಅದು ಜಾರಿಯಾಗತಕ್ಕದ್ದಿಲ್ಲ ಎಂಬುವದನ್ನ ಈ ಮೂಲಕ ಕೃತಪಡಿಸಿ ಇದ್ದೇನೆ.

ಕೃಷ್ಣಪ್ಪ ಚಿಲ್ಲೂರು ನಾಡಿಗ.

ಮೈಸೂರ ಗೆಜೆಟ್.

ಸಂ. 39] ಸರ್ಕಾರದಿಂದ ಛಾಪಿಸಲ್ಪಟ್ಟದ್ದು. [ಸಂ. 2

ಬೆಂಗಳೂರು, ಗುರುವಾರ, ಜನವರಿ ತಾ॥ 14, ಸನ್ 1904.

IIIನೆ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವು ಇಲಾಖೆ.

1903ನೆ ವರುಷದ 5ನೆ ನಂಬರಿನ ರೆಗ್ಯುಲೇಷನ್.

(1903ನೆ ವರುಷದ ಡಿಸೆಂಬರ್ 14ನೆ ತಾರೀಖಿನಲ್ಲಿ ಮಂಜೂರಾದ್ದು).

ಪೆಟ್ಟಿನ ಶಿಕ್ಷೆಗೆ ಸಮ್ಮಂಧಪಟ್ಟ ಕಾನೂನನ್ನು ಸರಿಪಡಿಸುವದಕ್ಕಾಗಿ ಆಗಿರುವ ರೆಗ್ಯುಲೇಷನ್.

ಪೀಠಿಕೆ.

ಪೆಟ್ಟಿನ ಶಿಕ್ಷೆಗೆ ಸಮ್ಮಂಧಪಟ್ಟ ಕಾನೂನನ್ನು ಸರಿಪಡಿಸುವದು ಯುಕ್ತವಾದುದರಿಂದ ಘನವನ್ನೈದಿದ ಶ್ರೀಮನ್ ಮಹಾರಾಜಾ ಸಾಹೇಬರು ಇದರಡೀ ಕಂಡಂತೆ ಕಾನೂನನ್ನು ನಿರ್ಣಯಿಸಿರುತ್ತಾರೆ.

ಚಿಕ್ಕ ಹೆಸರು.

1. ಈ ರೆಗ್ಯುಲೇಷನ್ "1903ನೇ ವರುಷದ ಮೈಸೂರು ಸೀಮೆಯ ವಿಪ್ಪಿಂಗ್ ರೆಗ್ಯುಲೇಷನ್" ಎಂದು ಕರಿಯಲ್ಪಡಬಹುದು;

ವ್ಯಾಪ್ತಿ.

ಇದು ಮೈಸೂರು ಸೀಮೆಗೆಲ್ಲಾ ವ್ಯಾಪಿಸತಕ್ಕದ್ದು; ಮತ್ತು

ಪ್ರಾರಂಭ.

ಇದು ಮಂಜೂರಾದ ತೇದಿಯು ಆರಭ್ಯ ಜಾರಿಯಲ್ಲಿ ಬರತಕ್ಕದ್ದು.

ರದ್ದಿಯಾತು.

ಮೈಸೂರು ಸೀಮೆಯಲ್ಲಿ ಜಾರಿಯಲ್ಲಿರುವ 1864ನೆ ವರುಷದ VIನೆ ನಂಬರಿನ ಆಕ್ಟು ಈ ಮೂಲಕ ರದ್ದುಮಾಡಲ್ಪಟ್ಟಿರುತ್ತೆ.

ಪಿನಲ್ ಕೋಡಿನ 53ನೆ ಪ್ರಕರಣದಲ್ಲಿ ನಮೂದಿಸಿರುವ ಶಿಕ್ಷೆಗಳೊಂದಿಗೆ ಪೆಟ್ಟಿನ ಶಿಕ್ಷೆಯನ್ನು ಸೇರಿಸೋಣ.

2. ಇಂಡ್ಯನ್ ಪಿನಲ್ ಕೋಡಿನ 53ನೆ ಪ್ರಕರಣದಲ್ಲಿ ನಮೂದಿಸಿರುವ ಶಿಕ್ಷೆಗಳೊಂದಿಗೆ ತಪ್ಪಿತಸ್ಥರು ಪೆಟ್ಟಿನ ಶಿಕ್ಷೆಗೆ ಸಹ ಗುರಿಯಾಗುತ್ತಾರೆ.

ಪಿನಲ್ ಕೋಡಿನಿಂದ ನಿರ್ದೇಶಿಸಲ್ಪಟ್ಟ ಇತರ ಶಿಕ್ಷೆಯ ಬದಲಾಗಿ ಪೆಟ್ಟಿನ ಶಿಕ್ಷೆ ವಿಧಿಸಬಹುದಾದ ಅಪರಾಧಗಳು.

3. ಯಾವನು ಈ ಕೆಳಗೆ ಕಾಣಿಸಿದ ಯಾವದಾದರು ಅಪರಾಧಗಳನ್ನು ಮಾಡುತ್ತಾನೋ ಅಂಥಾ ಪ್ರತಿ ಒಬ್ಬ ಮನುಷ್ಯನು, ಇಂಡಿಯನ್ ಪಿನಲ್ ಕೋಡಿನ ಮೇರೆಗೆ ಅಂಥಾ ಅಪರಾಧದ ಬಗ್ಯೆ ಆತನು ಗುರಿಯಾಗಬಹುದಾದಂಥಾ ಯಾವದಾದರೂ ಶಿಕ್ಷೆಯ ಬದಲಾಗಿ ಪೆಟ್ಟಿನ ಶಿಕ್ಷೆಗೆ ವಿಧಿಸಲ್ಪಡಬಹುದು, ಆ ಅಪರಾಧಗಳು ಯಾವವೆಂದರೆ:—

A ಗುಂಪು.

(1) ಸದರಿ ಕೋಡಿನ 378ನೇ ಪ್ರಕರಣದಲ್ಲಿ ವಿವರಿಸಲ್ಪಟ್ಟ ಮೇರೆಗೆ ಕಳವು;

(2) ಸದರಿ ಕೋಡಿನ 380ನೇ ಪ್ರಕರಣದಲ್ಲಿ ವಿವರಿಸಲ್ಪಟ್ಟ ಮೇರೆಗೆ ಒಂದು ಕಟ್ಟಡದಲ್ಲಾಗಲಿ, ಡೇರೆಯಲ್ಲಾಗಲಿ, ಹಡಗಿನಲ್ಲಾಗಲಿ ಕಳವು;

(3) ಸದರಿ ಕೋಡಿನ 381ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಗುಮಾಸ್ತನಿಂದ–ಯಾ–ನೌಕರನಿಂದ ಕಳವು ;

(4) ಸದರಿ ಕೋಡಿನ 382ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಮರಣ–ಯಾ–ಹಿಂಸೆ ಮಾಡುವದಕ್ಕೆ ಸನ್ನಾಹ ಮಾಡಿದ ನಂತರ ಕಳವು ;

B ಗುಂಪು.

(5) ಸದರಿ ಕೋಡಿನ 386ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಹೆದರಿಸಿ ಕಡ್ಡಾಯ ಮಾಡೋಣ ;

(6) ಸದರಿ ಕೋಡಿನ 389ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಕಡ್ಡಾಯ ಮಾಡುವ ಉದ್ದೇಶ್ಯ ತಪ್ಪನ್ನು ಆಪಾದನೆ ಮಾಡುವದಾಗಿ ಒಬ್ಬ ಮನುಷ್ಯನನ್ನು ಅಂಜಿಸೋಣ ;

C ಗುಂಪು.

(7) ಸದರಿ ಕೋಡಿನ 411ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಅಪ್ರಮಾಣಿಕತೆಯಿಂದ ಚೋರಿ ಮಾಲನ್ನು ತೆಗದುಕೊಳ್ಳೋಣ ;

(8) ಸದರಿ ಕೋಡಿನ 412ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಡಕಾಯಿತಿ ನಡಿಯುವಾಗ ಚೋರಿಯಾದ ಮಾಲನ್ನು ಅಪ್ರಮಾಣಿಕತೆಯಿಂದ ತಗದುಕೊಳ್ಳೋಣ ;

D ಗುಂಪು.

(9) ಈ ಪ್ರಕರಣಕ್ಕನುಗುಣವಾಗಿ ಪಟ್ಟಿನ ಶಿಕ್ಷೆ ವಿಧಿಸಲ್ಪಡಬಹುದಾದ ಯಾವದೊಂದು ಅಪರಾಧವನ್ನು ನಡಿಸುವ ಉದ್ದೇಶ್ಯ ಸದರಿ ಕೋಡಿನ 443ನೇ ಮತ್ತು 445ನೇ ಪ್ರಕರಣಗಳಲ್ಲಿ ವಿವರಿಸಿರುವ ಮೇರೆಗೆ ಹೊಂಚು ಹಾಕಿಕೊಂಡಿದ್ದು ಮನೆಯೊಳಗೆ ನುಗ್ಗೋಣ ಅಥವಾ ಮನೆಗೆ ಕನ್ನ ಹಾಕೋಣ ;

(10) ಈ ಪ್ರಕರಣಕ್ಕನುಗುಣವಾಗಿ ಪಟ್ಟಿನ ಶಿಕ್ಷೆ ವಿಧಿಸಲ್ಪಡಬಹುದಾದ ಯಾವದೊಂದು ಅಪರಾಧವನ್ನು ನಡಿಸುವ ಉದ್ದೇಶ್ಯ ಸದರಿ ಕೋಡಿನ 444ನೇ ಮತ್ತು 446ನೇ ಪ್ರಕರಣಗಳಲ್ಲಿ ವಿವರಿಸಿರುವ ಮೇರೆಗೆ ರಾತ್ರೆ ಕಾಲದಲ್ಲಿ ಹೊಂಚು ಹಾಕಿಕೊಂಡಿದ್ದು ಮನೆಯೊಳಗೆ ನುಗ್ಗೋಣ ಅಥವಾ ರಾತ್ರಿ ಕಾಲದಲ್ಲಿ ಮನೆಗೆ ಕನ್ನ ಹಾಕೋಣ.

3ನೆ ಪ್ರಕರಣದಲ್ಲಿ ನಮೂದಿಸಲ್ಪಟ್ಟ ಅಪರಾಧವು ಎರಡನೆಸಾರಿ ಸಾಬೀತು ಪಟ್ಟಲ್ಲಿ ಪಟ್ಟಿನ ಶಿಕ್ಷೆಯನ್ನು ಇತರ ಶಿಕ್ಷೆಗೆ ಕೂಡಿಸಿ ವಿಧಿಸಬಹುದು.

4. ಯಾವನು ಹಿಂದಿನ ಕಡೇ ಪ್ರಕರಣದಲ್ಲಿ ನಮೂದಿಸಲ್ಪಟ್ಟ ಯಾವದೊಂದು ಅಪರಾಧವು ಸಾಬೀತು ಪಟ್ಟಿದ್ದು, ಪುನಹ ಅದೇ ಅಪರಾಧವು ಅಥವಾ ಅದೇ ಗುಂಪಿನಲ್ಲಿ ಸೇರಿದ ಯಾವದೊಂದು ಅಪರಾಧವು ಸಾಬೀತು ಪಡುತ್ತಾನೋ, ಅಂಥಾ ಪ್ರತಿ ಮನುಷ್ಯನು ಇಂಡಿಯನ್ ಪಿನಲ್ ಕೋಡಿನ ಮೇರೆಗೆ ಅಂಥಾ ಅಪರಾಧಕ್ಕೆ ಆತನು ಗುರಿಯಾಗಬಹುದಾದಂಥಾ ಇತರ ಯಾವದಾದರು ಶಿಕ್ಷೆಯು ಬದಲಾಗಿ ಅಥವಾ ಅದಕ್ಕೆ ಕೂಡಿಸಿ ಪಟ್ಟಿನ ಶಿಕ್ಷೆ ವಿಧಿಸಲ್ಪಡಬಹುದು.

ಇತರ ಶಿಕ್ಷೆಯೊಂದಿಗೆ ಪಟ್ಟಿನ ಶಿಕ್ಷೆಯನ್ನು ಯಾವ ಅಪರಾಧಗಳು ಎರಡನೆಸಾರಿಗೆ ಸಾಬೀತುಪಟ್ಟ ಸಂಗತಿಯಲ್ಲಿ ವಿಧಿಸಬಹುದೋ ಆ ಅಪರಾಧಗಳು.

5. ಯಾವನು ಈ ಕೆಳಗೆ ಕಾಣಿಸಿದ ಯಾವದಾದರೂ ಅಪರಾಧ ಮುಂಚೆ ಸಾಬೀತು ಪಟ್ಟಿದ್ದು, ಪುನಹ ಅದೇ ಅಪರಾಧವು ಅಥವಾ ಅದೇ ಗುಂಪಿನಲ್ಲಿ ಸೇರಿದ ಯಾವದಾದರೂ ಅಪರಾಧವು ಸಾಬೀತು ಪಡುತ್ತಾನೋ, ಅಂಥಾ ಪ್ರತಿ ಮನುಷ್ಯನು ಇಂಡಿಯನ್ ಪಿನಲ್ ಕೋಡಿನ ಮೇರೆಗೆ ಅಂಥಾ ಅಪರಾಧಕ್ಕಾಗಿ ಆತನು ಗುರಿಯಾಗಬಹುದಾದ ಇತರ ಯಾವದಾದರೂ ಶಿಕ್ಷೆಯೊಡನೆ ಪಟ್ಟಿನ ಶಿಕ್ಷೆ ವಿಧಿಸಲ್ಪಡಬಹುದು ; ಸದರಿ ಅಪರಾಧಗಳು ಯಾವವೆಂದರೆ :—

A ಗುಂಪು.

(1) ಇಂಡಿಯನ್ ಪಿನಲ್ ಕೋಡಿನ 193ನೇ ಪ್ರಕರಣಕ್ಕನುಗುಣವಾಗಿ ಶಿಕ್ಷೆಗೆ ಗುರಿಯಾಗಿರುವ ರೀತಿಯಲ್ಲಿ ಸುಳ್ಳು ಸಾಕ್ಷ್ಯ ಕೊಡೋಣ ಅಥವಾ ಬನಾವಣಿ ಮಾಡೋಣ ;

(2) ಸದರಿ ಕೋಡಿನ 194ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಮರಣ ದಂಡನೆಯಾಗತಕ್ಕ ಅಪರಾಧವು ಸಾಬೀತುಪಡಿಸಬೇಕೆಂಬ ಅಭಿಪ್ರಾಯದಿಂದ ಸುಳ್ಳು ಸಾಕ್ಷ್ಯ ಕೊಡೋಣ ಅಥವಾ ಬನಾವಣಿ ಮಾಡೋಣ ;

(3) ಸದರಿ ಕೋಡಿನ 195ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ನೀರಿನ ಮೇಲೆ ಕಳುಹಿಸುವ ಶಿಕ್ಷೆ ಅಥವಾ ಕೈದಿನ ಶಿಕ್ಷೆ ವಿಧಿಸಲ್ಪಡಬಹುದಾದ ಒಂದು ಅಪರಾಧವು ಸಾಬೀತು ಪಡಿಸಬೇಕೆಂಬ ಅಭಿಪ್ರಾಯದಿಂದ ಸುಳ್ಳು ಸಾಕ್ಷ್ಯಕೊಡೋಣ ಅಥವಾ ಬನಾವಣಿ ಮಾಡೋಣ ;

B ಗುಂಪು.

ದೇಶಭಾಷೆ–ಓದುವುದು.	ಅಕ್ಷರಗಳನ್ನು ತೋರಿಸುವುದು, ಉಚ್ಚರಿಸುವುದು, ಮತ್ತು ಕಾಗುಣಿತ; ಬಾಲಬೋಧೆ 1ನೆಯ ಭಾಗವನ್ನು ಓದುವುದು. (6 ಅರ್ಧ ಘಂಟೆಗಳ ಕಾಲ)	ಬಾಲಬೋಧೆ 2ನೆಯ ಭಾಗವನ್ನು ಓದುವುದು–ಮತ್ತು ಗ್ರಂಥವಿಷಯವನ್ನು ಕುರಿತು ಕೇಳುವ ಸುಲಭವಾದ ಪ್ರಶ್ನೆಗಳಿಗೆ ಉತ್ತರಹೇಳುವುದು. (6 ಅರ್ಧ ಘಂಟೆಗಳ ಕಾಲ)	(a) ಇಲಾಖೆಯ 1ನೆಯ ಪುಸ್ತಕವನ್ನು ಓದುವುದು; ಅರ್ಥ, ಗ್ರಂಥ ವಿಷಯ, ಇವುಗಳನ್ನು ಕುರಿತು ಕೇಳುವ ಸುಲಭವಾದ ಪ್ರಶ್ನೆಗಳಿಗೆ ಉತ್ತರ ಹೇಳುವುದು. (4 ಘಂಟೆಗಳ ಕಾಲ) (b) ದೊಡ್ಡ ಹುಟ್ಟಕ್ಷರದಲ್ಲಿ ಬರೆದ ಕಾಗದಗಳನ್ನು ಓದುವುದು. (2 ಘಂಟೆಗಳ ಕಾಲ)
,, ಬಾಯಿಪಾಠ.	...	...	ಸುಲಭವಾದ ಹತ್ತು ಕವಿತೆಗಳನ್ನು ಅಥವಾ ಪದ್ಯಗಳನ್ನು ಬಾಯಿಪಾಠವಾಗಿ ಹೇಳುವುದು ಇದು ಓದುವ ಪಾಠದ ಒಂದು ಭಾಗ.
,, ಬರವಣಿಗೆ.	ಅಕ್ಷರಗಳನ್ನೂ ಮತ್ತು ಸುಲಭವಾದ ಮಾತುಗಳನ್ನೂ ಬೀಜಗಳಿಂದ ಕಲ್ಪಿಸುವುದು. (6 ಅರ್ಧ ಘಂಟೆಗಳ ಕಾಲ)	ಒಂದು ಚಿಕ್ಕ ವಾಕ್ಯವನ್ನು ಹಲಗೆಯ ಮೇಲಾಗಲಿ ಕಪ್ಪುಹಲಗೆಯ ಮೇಲಾಗಲಿ ದೊಡ್ಡ ಅಕ್ಷರದಲ್ಲಿ ನೋಡಿಕೊಂಡು ಬರೆಯುವುದು. (6 ಅರ್ಧ ಘಂಟೆಗಳ ಕಾಲ)	ದೊಡ್ಡಕ್ಷರ ಬರೆಯುವುದು. ಪರೀಕ್ಷೆಯ ಕಾಲದಲ್ಲಿ ಪೂರ್ತಿಯಾಗಿ ಬರೆದ ಲೇಖನಪುಸ್ತಕಗಳನ್ನು ತೋರಿಸಬೇಕು. [ಇಲಾಖೆಯ ಲೇಖನಪುಸ್ತಕಗಳು ನಂಬರು 1 ಮತ್ತು 2] (4 ಅರ್ಧ ಘಂಟೆಗಳ ಕಾಲ)
,, ಅಕ್ಷರಸಂಯೋಜನ.	ಹೇಳುವ 6 ಸುಲಭವಾದ ಮಾತುಗಳನ್ನು ಬರೆಯುವುದು. (2 ಅರ್ಧ ಘಂಟೆಗಳ ಕಾಲ)	ಪಾಠಪುಸ್ತಕದಿಂದ ಆರಿಸಿ ಹೇಳುವ ಆರು ಮಾತುಗಳನ್ನು ಬರೆಯುವುದು. (2 ಅರ್ಧ ಘಂಟೆಗಳ ಕಾಲ)	ಪಾಠಪುಸ್ತಕದಿಂದ ಓದಲ್ಪಡುವ ನಾಲ್ಕು ಪಙ್ಕ್ತಿಗಳನ್ನು ಧಾರಾಳವಾಗಿ ಬರೆಯುವುದು. (2 ಅರ್ಧ ಘಂಟೆಗಳ ಕಾಲ)

119

ಇಲಾಖೆ.

ಪತ್ರಿಕೆ.

20ನೆಯ ತಾರೀಖು.

ತ್ತೆಗಳು ಈ ಕೆಳಗೆ ವಿವರಿಸಲ್ಪಟ್ಟಿವೆ. ಇವು 1904ನೆಯ ಇಸವಿ ಜನವರಿ ತಿಂಗಳಿಂದ ಸರ್ಕಾರದ, ಮ್ಯುನಿಸಿಪಾಲಿಟಿಯು, ದ್ರವ್ಯಸಹಾ

ಪುಸ್ತಕಗಳನ್ನು ಸರ್ಕಾರದವರಿಂದ ಅಂಗೀಕೃತವಾದ ಪುಸ್ತಕದ ಪಟ್ಟಿಯಿಂದ ಚುನಾಯಿಸಿ ಪಾಠಪುಸ್ತಕಗಳಾಗಿ ಇಟ್ಟುಕೊಳ್ಳಬಹುದು.

ಬಾಲಿಕಾ ಪಾಠಶಾಲೆಗಳ ಇಯತ್ತೆಗಳು.

ಅಪ್ಪರಿ ಪ್ರೈಮರಿ.		ಲೋವರ್ ಸೆಕಂಡರಿ.	
2ನೆಯ ಇಯತ್ತೆ ಅಥವಾ ವರ್ಗ.	3ನೆಯ ಇಯತ್ತೆ ಅಥವಾ ವರ್ಗ.	4ನೆಯ ಇಯತ್ತೆ ಅಥವಾ ವರ್ಗ.	5ನೆಯ ಇಯತ್ತೆ ಅಥವಾ ವರ್ಗ.
(*a*) ಇಲಾಖೆಯ 2ನೆಯ ಪುಸ್ತಕವನ್ನು ಓದುವುದು; ಅರ್ಥ, ಗ್ರಂಥವಿಷಯ, ಇವುಗಳನ್ನು ಕುರಿತ ಪ್ರಶ್ನೆಗಳಿಗೆ ಉತ್ತರ ಹೇಳುವುದು (5 ಘಂಟೆಗಳ ಕಾಲ) (*b*) ಹುಟ್ಟಕ್ಷರದ ಕಾಗದಗಳನ್ನು ಓದುವುದು. (2 ಘಂಟೆಗಳ ಕಾಲ)	(*a*) ಇಲಾಖೆಯ 3ನೆಯ ಪುಸ್ತಕವನ್ನು ಅಥವಾ ಮೆಕ್ಮಿಲ್ಲನ್ ಎಂಬವರ 3ನೆಯ ಕನ್ನಡ ಪುಸ್ತಕವನ್ನೂ ಮತ್ತು ಸಾವಿತ್ರಿ ಚರಿತ್ರೆಯನ್ನೂ ಓದುವುದು; ಅರ್ಥ, ಗ್ರಂಥವಿಷಯ, ಇವುಗಳನ್ನು ಕುರಿತ ಪ್ರಶ್ನೆಗಳಿಗೆ ಉತ್ತರ ಹೇಳುವುದು; ಮತ್ತು ನಾಮಪದಗಳು, ಕ್ರಿಯಾಪದಗಳು ಮುಂತಾದವುಗಳನ್ನು ಪ್ರತ್ಯೇಕಿಸಿ ಹೇಳುವುದು. (5 ಘಂಟೆಗಳ ಕಾಲ) (*b*) ಸಾಧಾರಣವಾದ ಕೈಬರಹದ ಕಾಗದಗಳನ್ನು ಓದುವುದು. (2 ಘಂಟೆಗಳ ಕಾಲ)	(*a*) ಸ್ತ್ರೀಧರ್ಮನೀತಿಯನ್ನು ಓದುವುದು; ಅರ್ಥ, ಗ್ರಂಥವಿಷಯ, ರೂಪನಿಷ್ಪತ್ತಿ, ಶಬ್ದಲಕ್ಷಣ, ವಾಕ್ಯಲಕ್ಷಣ, ಇವುಗಳನ್ನು ಕುರಿತ ಪ್ರಶ್ನೆಗಳಿಗೆ ಉತ್ತರ ಹೇಳುವುದು. (5 ಘಂಟೆಗಳ ಕಾಲ) (*b*) ಸಾಧಾರಣವಾದ ಕೈಬರಹದ ಕಾಗದಗಳನ್ನು ಓದುವುದು. (1 ಘಂಟೆಯ ಕಾಲ)	(*a*) ಲೋವರ್ ಸೆಕಂಡರೀ ಪರೀಕ್ಷೆಗೆ ನಿಯಮಿಸಿರುವ ವಚನಗ್ರಂಥವನ್ನೂ ಕಾವ್ಯವನ್ನೂ ಓದುವುದು; ಅರ್ಥ, ಗ್ರಂಥವಿಷಯ, ವ್ಯಾಕರಣ, ಭಾಷಾಶೈಲಿ ಇವುಗಳನ್ನು ಕುರಿತ ಪ್ರಶ್ನೆಗಳಿಗೆ ಉತ್ತರ ಹೇಳುವುದು. (5 ಘಂಟೆಗಳ ಕಾಲ)
ಓದುವ ಪುಸ್ತಕದಲ್ಲಿರುವ ಪದ್ಯಗಳು. [ಇದು ಓದುವ ಪಾಠದ ಒಂದು ಭಾಗ]	ಓದುವ ಪುಸ್ತಕದಲ್ಲಿರುವ ಪದ್ಯಗಳು. [ಇದು ಓದುವ ಪಾಠದ ಒಂದು ಭಾಗ].	ಸಾವಿತ್ರೀ ಚರಿತ್ರೆಯಿಂದ ಆರಿಸಿದ 40 ಪದ್ಯಗಳು. [ಇದು ಓದುವ ಪಾಠದ ಒಂದು ಭಾಗ]	ಲೋವರ್ ಸೆಕಂಡರಿ ಪರೀಕ್ಷೆಗೆ ನಿಯಮಿಸಿರುವ ಕಾವ್ಯದಿಂದ ಆರಿಸಿದ ಪದ್ಯಗಳು. [ಇದು ಓದುವ ಪಾಠದ ಒಂದು ಭಾಗ]
ಸಡಿಲತರವಾದ ಅಕ್ಷರವನ್ನು ಬರೆಯುವುದು. ಪರೀಕ್ಷೆಯ ಕಾಲದಲ್ಲಿ ಪೂರ್ತಿಯಾಗಿ ಬರೆದ ಲೇಖನಪುಸ್ತಕಗಳನ್ನು ತೋರಿಸಬೇಕು. [ಲೇಖನಪುಸ್ತಕಗಳು ನಂಬರು 3 ಮತ್ತು 4] (4 ಅರ್ಧ ಘಂಟೆಗಳ ಕಾಲ)	ಸಣ್ಣಕ್ಷರ ಬರೆಯುವುದು. ಪರೀಕ್ಷೆಯ ಕಾಲದಲ್ಲಿ ಪೂರ್ತಿಯಾಗಿ ಬರೆದ ಲೇಖನಪುಸ್ತಕಗಳನ್ನು ತೋರಿಸಬೇಕು. [ಲೇಖನಪುಸ್ತಕಗಳು ನಂಬರು 5 ಮತ್ತು 6] (2 ಅರ್ಧ ಘಂಟೆಗಳ ಕಾಲ)	ದೊಡ್ಡದಾಗಿ ಮೋಡಿಯಕ್ಷರ ಬರೆಯುವುದು. ಪರೀಕ್ಷೆಯ ಕಾಲದಲ್ಲಿ ಪೂರ್ತಿಯಾಗಿ ಬರೆದ ಲೇಖನಪುಸ್ತಕಗಳನ್ನು ತೋರಿಸಬೇಕು. [ಲೇಖನಪುಸ್ತಕಗಳು ನಂಬರು 7 ಮತ್ತು 8] (2 ಅರ್ಧ ಘಂಟೆಗಳ ಕಾಲ)	ಮೋಡಿಯಕ್ಷರ ಬರೆಯುವುದು ಪರೀಕ್ಷೆಯ ಕಾಲದಲ್ಲಿ ಪೂರ್ತಿಯಾಗಿ ಬರೆದ ಲೇಖನಪುಸ್ತಕಗಳನ್ನು ತೋರಿಸಬೇಕು. (2 ಅರ್ಧ ಘಂಟೆಗಳ ಕಾಲ)
ಪಾಠಪುಸ್ತಕದಿಂದ ಓದಲ್ಪಡುವ ಆರು ಪಙ್ತಿಗಳನ್ನು ಧಾರಾಳವಾಗಿ ಬರೆಯುವುದು. (2 ಅರ್ಧ ಘಂಟೆಗಳ ಕಾಲ)	ಓದದೆ ಇರುವ ಮತ್ತು ಪಾಠಪುಸ್ತಕಕ್ಕೆ ಸಮಾನವಾದ ಯಾವುದಾದರೂ ಒಂದು ವಚನಗ್ರಂಥದಿಂದ ಓದಲ್ಪಡುವ ಎಂಟು ಪಙ್ತಿಗಳನ್ನು ಬರೆಯುವುದು. (2 ಅರ್ಧ ಘಂಟೆಗಳ ಕಾಲ)	ಪಾಠಪುಸ್ತಕಕ್ಕೆ ಸಮಾನವಾದ ಯಾವುದಾದರೂ ಒಂದು ವಚನಗ್ರಂಥದಿಂದ ಓದಲ್ಪಡುವ ಎಂಟು ಪಙ್ತಿಗಳನ್ನೂ ಮತ್ತು ಆರಿಸಿ ಹೇಳುವ ಎಂಟು ಮಾತುಗಳನ್ನೂ ಬರೆಯುವುದು. (2 ಅರ್ಧ ಘಂಟೆಗಳ ಕಾಲ)	ಆರಿಸಿ ಹೇಳುವ 12 ಮಾತುಗಳನ್ನೂ, ಮತ್ತು ವಚನಗ್ರಂಥದಿಂದ ಓದಲ್ಪಡುವ ಎಂಟು ಪಙ್ತಿಗಳನ್ನೂ ಬರೆಯುವುದು. (2 ಅರ್ಧ ಘಂಟೆಗಳ ಕಾಲ)

120

ವಿಷಯಗಳು.	ಲೋವರ್ ಪ್ರೈಮರಿ.		
	ಮಕ್ಕಳ ಇಯತ್ತೆ ಅಥವಾ ವರ್ಗ.		1ನೆಯ ಇಯತ್ತೆ ಅಥವಾ ವರ್ಗ.
	A.	B.	
ದೇಶಭಾಷೆ-ವ್ಯಾಕರಣ ಮತ್ತು ಪ್ರಬಂಧ ರಚನೆ.	..	...	....
ಅಂಕಗಣಿತ.	ಒಂದರಿಂದ ಇಪ್ಪತ್ತರವರೆಗೆ (a) ಗಣನ (ಎಣಿಕೆ), (b) ಅಂಕಖಂಡನ (c) ಅಂಕರಚನೆ (d) ಅಂಕಕರಣ, ಸಂಖ್ಯಾಪಠನ. (e) ಸಂಕಲನ, ವ್ಯವಕಲನ, ಸಮಭಾಗ, ದ್ವಿಗುಣ, ಗುಂಡುಗಳ ಚೌಕಟ್ಟಿನಲ್ಲಾಗಲಿ ಗೋಲಿ ಮೊದಲಾದ ಇತರವಸ್ತುಗಳಿಂದಾಗಲಿ ಇವುಗಳನ್ನು ಸ್ಪಷ್ಟಗೊಳಿಸಬೇಕು. (f) 5 × 10ರ ವರೆಗೆ ಮಗ್ಗಿ. (6 ಅರ್ಧ ಘಂಟೆಗಳ ಕಾಲ) [ಉಪಾಧ್ಯಾಯನ ಉಪಯೋಗಕ್ಕಾಗಿ ಅಂಕಗಣಿತ ಬಾಲಶಿಕ್ಷೆ]	(a) ಒಂದರಿಂದ ನೂರರ ವರೆಗೂ ನೂರರಿಂದ ಒಂದರವರೆಗೂ ಅನುಲೋಮ ವಿಲೋಮಗತಿಗಳಲ್ಲಿ ಎಣಿಸುವುದು (b) 2, 3, 4, 5 ಮತ್ತು 10 ಇವುಗಳ ವ್ಯತ್ಯಾಸವುಳ್ಳ 100ರ ವರೆಗಿನ ಸಂಖ್ಯೆಗಳನ್ನು ಅನುಲೋಮ ವಿಲೋಮಗತಿಗಳಲ್ಲಿ ಹೇಳುವುದು (c) ಒಂದರಿಂದ ನೂರರವರೆಗೆ ಅಂಕಖಂಡನ (d) ಮುಖ್ಯಾಂಕಗಳನ್ನು ಗುಂಡುಗಳ ಚೌಕಟ್ಟಿನಲ್ಲಾಗಲಿ ಗೋಲಿ ಮೊದಲಾದುವುಗಳಿಂದಾಗಲಿ ರಚಿಸಿ ತೋರುವುದು. (e) ಸಂಕಲನ, ವ್ಯವಕಲನ, ಗುಣಕಾರ, ಭಾಗಹಾರ (f) 1ರಿಂದ 40ರ ವರೆಗೆ ಅರ್ಧ ಮತ್ತು ಕಾಗ (g) 10 × 10ರ ವರೆಗೆ ಮಗ್ಗಿ (h) ಮಾನಸಗಣಿತ. (6 ಅರ್ಧ ಘಂಟೆಗಳ ಕಾಲ) [ಉಪಾಧ್ಯಾಯನ ಉಪಯೋಗಕ್ಕಾಗಿ ಅಂಕಗಣಿತ ಬಾಲಶಿಕ್ಷೆ]	ಮಕ್ಕಳ ಇಯತ್ತೆಯಲ್ಲಿ ಹೇಳಿರುವುದರ ಜತೆಗೆ 16 × 16ರ ವರೆಗೆ ಮಗ್ಗಿ, 40ರ ವರೆಗೆ ಸರಮಗ್ಗಿ, ಒಂದರಿಂದ ಲಕ್ಷದವರೆಗೆ ಅಂಕಕರಣ ಮತ್ತು ಸಂಖ್ಯಾಪಠನ. 6 ಅಂಕೆಗಳಿಗೆ ಹೆಚ್ಚಾಗಿಲ್ಲದ ಸಂಖ್ಯೆಗಳ ಸಂಕಲನ ಮತ್ತು ವ್ಯವಕಲನ, ಅಂಥ ಸಂಖ್ಯೆಗಳನ್ನು 3 ಅಂಕೆಗಳಿಗಿಂತ ಹೆಚ್ಚಾಗಿಲ್ಲದ ಸಂಖ್ಯೆಗಳಿಂದ ಗುಣಿಸುವುದು ಮತ್ತು ಭಾಗಿಸುವುದು. ಇಂಡಿಯಾದೇಶದಲ್ಲಿ ಚಲಾವಣೆಯಲ್ಲಿರುವ ನಾಣ್ಯಗಳ ಕೋಷ್ಟಕಗಳು, ಅವುಗಳ ಸಂಕಲನ ಮತ್ತು ವ್ಯವಕಲನ, 10 ರೂಪಾಯಿಗಳ ವರೆಗೆ ರೂಪಾಯಿಗಳನ್ನು ಆಣೆ ಪೈಗಳನ್ನಾಗಿಯೂ, ಆಣೆ ಪೈಗಳನ್ನು ರೂಪಾಯಿಗಳನ್ನಾಗಿಯೂ ಮಾಡುವುದು. ಮಕ್ಕಳ ಇಯತ್ತೆಯಲ್ಲಿ ಹೇಳಿರುವುದರ ವಿಷಯವಾಗಿ ಸುಲಭವಾದ ಮಾನಸಗಣಿತ. [ಇಲಾಖೆಯ 1ನೆಯ ಇಯತ್ತೆಯ ಅಂಕಗಣಿತ] (5 ಘಂಟೆಗಳ ಕಾಲ)
ಹಾಡುವುದು.	10 ಹಾಡುಗಳನ್ನು ಹಾಡುವುದು: (1) ಮಂಗಳಂ ಶಂಕರಿದೇಹಿ (2) ರಾರಾಜೀವನೇತ್ರೂಪನು (3) ಚೆಂಡನಾಡಿದಳು ಗೌರಿ (4) ಶ್ರೀವಾಸುದೇವ ಲಾಲಿ (5) ಆರತಿಯೆತ್ತಿರೆ (6) ಪರಿಪಾಲಯಮಾಂ (7) ಶ್ರೀರಜತಾದ್ರಿ ವಿಹಾರಿಣಿ (8) ಕಂತುಕಖೇಲನಂ (9) ಶ್ರೀರಾಜರಾಜೇಶ್ವರಿ (10) ಜೋಜೋಜೋರಾಮ. (6 ಅರ್ಧ ಘಂಟೆಗಳ ಕಾಲ)		ಇನ್ನೂ 10 ಹಾಡುಗಳನ್ನು ಹಾಡುವುದು: (1) ಶ್ರೀಶಂಭೋಕಲ್ಯಾಣ (2) ಶಂಕರಿ ಮಾಂಪಾಲಯಾಶು (3) ನಲುಗಿಡರಾವಮ್ಮ (4) ಶ್ರೀಗಿರಿಸುತೆ ಶರ್ವಾಣಿ (5) ಶೈಲಸಾರ್ವಭೌಮಬಾಲೆ (6) ಬಾಮೇಂದ್ರತನುಜನ (7) ಲಾಲಿ ಶ್ರೀರಮೇಶ (8) ಮಂಗಳಂ ಮಹಾಬಲಾಚಲ (9) ಪೂಲಜಂಡ್ಲಾ ಡಿರಿಪ್ಪುಡು (10) ಕಾಯಾ ಶ್ರೀಗೌರಿ. (6 ಅರ್ಧ ಘಂಟೆಗಳ ಕಾಲ)

ಅಪ್ಪರ್ ಪ್ರೈಮರಿ.		ಲೋವರ್ ಸೆಕಂಡರಿ.	
2ನೆಯ ಇಯತ್ತೆ ಅಥವಾ ವರ್ಗ.	3ನೆಯ ಇಯತ್ತೆ ಅಥವಾ ವರ್ಗ.	4ನೆಯ ಇಯತ್ತೆ ಅಥವಾ ವರ್ಗ.	5ನೆಯ ಇಯತ್ತೆ ಅಥವಾ ವರ್ಗ.
(*a*) ಯಾವುದಾದರೂ ಒಂದು ಸುಲಭವಾದ ವಾಕ್ಯದಲ್ಲಿ ನಾಮವಾಚಕಗಳನ್ನೂ ಕ್ರಿಯಾವಾಚಕಗಳನ್ನೂ ತೋರಿಸುವುದು; ಮತ್ತು ಕರ್ತೃಕರ್ಮ ಕ್ರಿಯೆಗಳನ್ನು ಪ್ರತ್ಯೇಕಿಸಿ ಹೇಳುವುದು. (*b*) ಓದಿಹೇಳಿದ ಒಂದು ಚಿಕ್ಕ ಕಥೆಯನ್ನು ಸ್ವಂತಮಾತಿನಲ್ಲಿ ಬರೆಯುವುದು. (4 ಘಂಟೆಗಳ ಕಾಲ)	(*a*) ಪಂಡಿತ ಕೇಶವಾಚಾರ್ಯರ ವ್ಯಾಕರಣಸಂಗ್ರಹ, ಮತ್ತು ವಾಚಕಬೋಧಿನಿ, ಪುಟಗಳು 1ರಿಂದ 45ರ ವರೆಗೆ. (*b*) ಒಂದು ಚಿಕ್ಕ ಕಾಗದವನ್ನು ಬರೆಯುವುದು ಅಥವಾ ಓದಿ ಹೇಳಿದ ಒಂದು ಚಿಕ್ಕ ಕಥೆಯನ್ನು ಸ್ವಂತ ಮಾತಿನಲ್ಲಿ ಬರೆಯುವುದು. (4 ಘಂಟೆಗಳ ಕಾಲ)	(*a*) ಕಬ್ಬಾದರ್ಶ, ಪುಟಗಳು 1ರಿಂದ 61ರ ವರೆಗೆ, ಮತ್ತು ವಾಚಕಬೋಧಿನಿ, ಪುಟಗಳು 1ರಿಂದ 75ರ ವರೆಗೆ. (*b*) ಒಂದು ಚಿಕ್ಕ ಕಾಗದವನ್ನಾಗಲಿ ಒಂದು ವರ್ಣನೆಯನ್ನಾಗಲಿ ಬರೆಯುವುದು, ಅಥವಾ ಓದಿ ಹೇಳಿದ ಒಂದು ಕಥೆಯನ್ನು ಸ್ವಂತ ಮಾತಿನಲ್ಲಿ ಬರೆಯುವುದು. (3 ಘಂಟೆಗಳ ಕಾಲ)	(*a*) ಕಬ್ಬಾದರ್ಶ ಮತ್ತು ವಾಚಕಬೋಧಿನಿ. (*b*) ಒಂದು ಚಿಕ್ಕ ಕಾಗದವನ್ನಾಗಲಿ, ಸ್ಥಳವರ್ಣನೆಯನ್ನಾಗಲಿ, ವಸ್ತುವಿವರಣವನ್ನಾಗಲಿ, ಒಂದು ಸಂಗತಿಯ ಕಥೆಯನ್ನಾಗಲಿ, ಅಥವಾ ಒಂದು ಚಿಕ್ಕ ಪ್ರಬಂಧವನ್ನಾಗಲಿ ಬರೆಯುವುದು. (3 ಘಂಟೆಗಳ ಕಾಲ)
ಸಂಕಲನ, ವ್ಯವಕಲನ, ಗುಣಾಕಾರ, ಭಾಗಹಾರ, ಹಣ, ಅಳತೆ, ತೂಕ, ಉದ್ದಳತೆ ಇವುಗಳ ದೇಶೀಯಕೋಷ್ಟಕಗಳನ್ನು ಕುರಿತ ರೂಪಾಂತರಕರಣ, ವಿವಿಧ ಸಂಕಲನ ವ್ಯವಕಲನ ಗುಣಕಾರ ಭಾಗಹಾರಗಳು. ಮನೆವಾರ್ತೆ ಲೆಕ್ಕಗಳು ಮತ್ತು ಅಂಗಡಿಬಿಲ್ಲುಗಳು. 1ನೆಯ ಇಯತ್ತೆಯಲ್ಲಿ ಹೇಳಿರುವುದರ ವಿಷಯವಾಗಿ ಮಾನಸಗಣಿತ. [ಗಣಿತಕಲಾನಿಧಿ.] (5 ಘಂಟೆಗಳ ಕಾಲ)	ಮಹತ್ತಮ ಸಾಮಾನ್ಯ ಅಪವರ್ತನ, ಲಘುತಮ ಸಾಮಾನ್ಯ ಅಪವರ್ತ್ಯ, ಇಂಗ್ಲಿಷ್ ನಾಣ್ಯ, ತೂಕ, ಅಳತೆ, ಕಾಲ, ಇವುಗಳ ಕೋಷ್ಟಕಗಳನ್ನು ಕುರಿತ ರೂಪಾಂತರಕರಣ ಮತ್ತು ವಿವಿಧಸಂಕಲನ ವ್ಯವಕಲನ ಗುಣಕಾರ ಭಾಗಹಾರಗಳು. ಭಾಗಾನುಬಂಧ ಪೂರ್ಣಾಂಕೆಗಳನ್ನು ಅಪೂರ್ಣಾಂಕೆಗಳನ್ನಾಗಿಯೂ, ಅಪೂರ್ಣಾಂಕೆಗಳನ್ನು ಭಾಗಾನುಬಂಧ ಪೂರ್ಣಾಂಕೆಗಳನ್ನಾಗಿಯೂ ಮಾಡುವುದು. ಛೇದವು 20ಕ್ಕೆ ಮೀರದಿರುವ ಅಪೂರ್ಣಾಂಕೆಗಳ ಸಂಕಲನ, ವ್ಯವಕಲನ, ಗುಣಕಾರ, ಭಾಗಹಾರ. ತ್ರೈರಾಶಿಕ. 2ನೆಯ ಇಯತ್ತೆಯಲ್ಲಿ ಹೇಳಿರುವ ಅಂಗಡಿಯ ವ್ಯಾಪಾರಕ್ಕೆ ಉಪಯುಕ್ತವಾದ ದೇಶೀಯ ಕೋಷ್ಟಕಗಳಿಗೆ ಸಂಬಂಧಪಟ್ಟ ಸುಲಭವಾದ ಮಾನಸಗಣಿತ. (5 ಘಂಟೆಗಳ ಕಾಲ)	ಭಿನ್ನರಾಶಿಗಳು, ದಶಮಾಂಶಗಳ ಅಂಕಕರಣ; ಶುದ್ಧದಶಮಾಂಶಗಳ ಸಂಕಲನ ಮತ್ತು ವ್ಯವಕಲನ ಪೂರ್ಣಾಂಕಗಳಿಂದ ಶುದ್ಧದಶಮಾಂಶಗಳ ಗುಣಕಾರ ಮತ್ತು ಭಾಗಹಾರ, ರೂಢಿಗಣಿತ [ಸಾಧಾರಣ ಮತ್ತು ಸಂಯುಕ್ತ] ಚದುರಳತೆ, ಘನ ಅಳತೆ, ತ್ರೈರಾಶಿಕ. (5 ಘಂಟೆಗಳ ಕಾಲ)	ಶುದ್ಧದಶಮಾಂಶಗಳು, ಭಿನ್ನರಾಶಿಗಳು; ಇಂಡಿಯಾ ಮತ್ತು ಇಂಗ್ಲಂಡ್ ದೇಶಗಳ ನಾಣ್ಯಗಳು, ಮೈಸೂರು ಸಂಸ್ಥಾನದಲ್ಲಿ ಉಪಯೋಗಿಸಲ್ಪಡುವ ಉದ್ದಳತೆ, ದ್ರವವಸ್ತುಗಳ ಅಳತೆ ಮತ್ತು ತೂಕಗಳು, ಇಂಡಿಯಾ ಸರ್ಕಾರದಲ್ಲಿ ರೂಢಿಯಾಗಿರುವ ಉದ್ದಳತೆ ದ್ರವವಸ್ತುಗಳ ಅಳತೆ ಮತ್ತು ತೂಕ, ಇಂಗ್ಲಿಷ್ ಕಾಲಪ್ರಮಾಣ, ಇಂಗ್ಲಿಷ್ ಉದ್ದಳತೆ ಚದುರಳತೆ ಮತ್ತು ಘನಅಳತೆ ಮತ್ತು ಭಾರವಾದ ದಿನಸಿನತೂಕಗಳು—ಇವುಗಳನ್ನು ಕುರಿತ ವಿವಿಧಸಂಕಲನ ವ್ಯವಕಲನ ಗುಣಕಾರ ಭಾಗಹಾರಗಳು; ಸಾಧಾರಣ ಮತ್ತು ಸಂಯುಕ್ತ ತ್ರೈರಾಶಿಕ, ರೂಢಿಗಣಿತ, ಸರಳಬಡ್ಡಿ, ಸರಾಸರಿ ಲೆಕ್ಕ, ನೇಕಡಾ ಲೆಕ್ಕ; ಇತರ ಸುಲಭವಾದ ಲೆಕ್ಕಗಳು. (5 ಘಂಟೆಗಳ ಕಾಲ)
ಇನ್ನೂ 10 ಹಾಡುಗಳನ್ನು ಹಾಡುವುದು:— 1. ಗಣಪುರನಾಯಕಪಾಹಿ 2. ವಾಹಿನಂದಗೋಪಬಾಲ 3. ಲಕ್ಷ್ಮೀರಮಣದೇವ 4. ತಾಯೆರಾಜರಾಜೇಶ್ವರಿ 5. ಮಾಮವಾಶು ಮಾರಮಣ 6. ಪೊರೆ ಶೈಲಾಧಿಪಸಂಭವೆ 7. ಮಂಗಳಂಭವತು ಸರ್ವಮಂಗಳೆ 8. ರಾರ ಕೋಲಲಾಡಗ 9. ಬಾಲೆಯರೆಲ್ಲರು ಬನ್ನಿರೆ 10. ಶ್ರೀರಘುವೀರಸುಂದರಘನ (4 ಅರ್ಧ ಘಂಟೆಗಳ ಕಾಲ)	ಇನ್ನೂ 10 ಹಾಡುಗಳನ್ನು ಹಾಡುವುದು:— 1. ಇಂದಿರೇಮಾಮಕೀನ 2. ತ್ರಿಪುರಸುಂದರೀ 3. ಪಾಲಿಸು ಶ್ರೀಪ್ರಾಲೇಯ 4. ಗಂಗೆಯೆನ್ನವ 5. ರಾಮಶ್ರೀಮಹಿತನಾಮ 6. ಅಂಗಜಮದಹರ 7. ಅಂಬುಧಿನಂದಿನಿ 8. ಮಂತುಕೆಕ್ಕನ ಹಿಮವಂತುನಿ 9. ಕುಲಗಿರೀಂದ್ರಕುಮಾರಿಕೆ 10. ರಘುಕುಲನಾಯಕ (4 ಅರ್ಧ ಘಂಟೆಗಳ ಕಾಲ)	ಇನ್ನೂ 12 ಹಾಡುಗಳನ್ನು ಹಾಡುವುದು :— 1. ಸುಪ್ರಿಸುಪ್ರಿಯನುಚಾಚಾಚರ 2. ಶಾರದೆವರದೆ 3. ಶ್ರೀತ್ರಿಪುರಸುಂದರೀನಾ 4. ಶಂಕರಾರ್ಧಾಂಗೀನತಾ 5. ಹಿಮಗಿರೀಂದ್ರಸುತಾತ್ಮಜಾ 6. ಸಾರಸನಮುಖ 7. ಆನಂದಸಾಗರ 8. ಎಂತನೇಡುಕೊಂದು 9. ಗಿರಿರಾಜಸುತಾತನಯ 10. ವರಶರಸಮರ್ಯಕಶೂರ 11. ಹಿಮಾಚಲತನಯಬ್ರೋವ 12. ಕಾಯಾಶ್ರೀಗೌರಿ (4 ಅರ್ಧ ಘಂಟೆಗಳ ಕಾಲ)	ನಾಲ್ಕನೆಯ ಇಯತ್ತೆಗೆ ನೇಮಿಸಿರುವ ಹಾಡುಗಳನ್ನೇ ಹಾಡುವುದು. (4 ಅರ್ಧ ಘಂಟೆಗಳ ಕಾಲ)

ವಿಷಯಗಳು.	ಮಕ್ಕಳ ಇಯತ್ತೆ ಅಥವಾ ವರ್ಗ.	1ನೆಯ ಇಯತ್ತೆ ಅಥವಾ ವರ್ಗ.
	A B	
ವಸ್ತುಪಾಠಗಳು.	(a) ಚಿತ್ರಪಟ್ಟಿಗಳಲ್ಲಿ ಪದಾರ್ಥಗಳ ಸಮೂಹದಲ್ಲಾಗಲಿ ಕೆಳಗೆ ಹೇಳಿರುವ ವಸ್ತುಗಳನ್ನು ತೋರಿಸಿ ಹೆಸರು ಹೇಳುವುದು :—(1) ಮನೆಯ ಅಥವಾ ಪಾಠಶಾಲೆಯ ಸಾಮಾನುಗಳು, ಉಡುಪು, ಆಯಾ ಸ್ಥಳಗಳಲ್ಲಿ ಕೆಲಸಗಳಿಗೆ ಉಪಯೋಗಿಸುವ ಆಯುಧಗಳು, ಪಾತ್ರೆಗಳು ಇವೇ ಮುಂತಾದ ಬಳಕೆಯಲ್ಲಿರುವ ಸಾಮಾನುಗಳು; (2) ಪರಿಚಿತವಾದ ಪ್ರಾಣಿಗಳು ಅಥವಾ ಅವುಗಳಿಂದುಂಟಾಗುವ ಹಾಲು, ಮೊಸರು, ರೇಷ್ಮೆ, ತುಪ್ಪ ಮುಂತಾದ ವಸ್ತುಗಳು; (3) ವಾಡಿಕೆಯಾಗಿರುವ ಸಸ್ಯಗಳು ಅಥವಾ ಸಸ್ಯಜಗಳು; (4) ಬಳಕೆಯಲ್ಲಿರುವ ಧಾತುಗಳು; ಮತ್ತು (b) ಕಲಿಸಿದ ಪಾಠಗಳಿಗೆ ಸಂಬಂಧಪಟ್ಟ ಸುಲಭವಾದ ಪ್ರಶ್ನೆಗಳಿಗೆ ಉತ್ತರ ಹೇಳುವುದು. ಒಂದೊಂದು ಭಾಗದಲ್ಲಿಯೂ 3 ಪಾಠಗಳ ಮೇರೆಗೆ ಒಟ್ಟು 12 ಪಾಠಗಳನ್ನು ಕಲಿಸಬೇಕು. ಉಪಾಧ್ಯಾಯನ ಉಪಯೋಗಕ್ಕಾಗಿ ಇಲಾಖೆಯ ವಸ್ತುಪಾಠಗಳ ಪುಸ್ತಕ. (6 ಅರ್ಧ ಘಂಟೆಗಳ ಕಾಲ)	ಮಕ್ಕಳ ಇಯತ್ತೆಗೆ ಹೇಳಿರುವಂತೆಯೇ. ಅದರ ಜತೆಗೆ ಒಂದೊಂದು ಭಾಗದಲ್ಲಿಯೂ 4 ಪಾಠಗಳ ಮೇರೆಗೆ ಒಟ್ಟು 16 ಪಾಠಗಳು. ಉಪಾಧ್ಯಾಯನ ಉಪಯೋಗಕ್ಕಾಗಿ ವಸ್ತುಪಾಠಗಳ ಪುಸ್ತಕ. (6 ಅರ್ಧ ಘಂಟೆಗಳ ಕಾಲ)
ಕಥೆ ಹೇಳುವುದು.	ವಿನೋದಕರವಾಗಿಯೂ ಸುಲಭವಾಗಿಯೂ ನೀತಿಬೋಧಕವಾಗಿಯೂ ಇರುವ ಕಥೆಗಳನ್ನು ಕೇಳಿ ಅವುಗಳ ವಿಷಯವನ್ನು ಕುರಿತ ಪ್ರಶ್ನೆಗಳಿಗೆ ಉತ್ತರ ಹೇಳುವುದು. (2 ಅರ್ಧ ಘಂಟೆಗಳ ಕಾಲ)	ಮಕ್ಕಳ ಇಯತ್ತೆಗೆ ಹೇಳಿರುವಂತೆಯೇ. (2 ಅರ್ಧ ಘಂಟೆಗಳ ಕಾಲ)
ಕಿಂಡರ್‌ಗಾರ್ಟನ್ ಕರಣಗಳು.	(a) ನಾಲ್ಕು ಕರಣಗಳನ್ನು (Occupations) ಮಾಡುವುದು. (b) ಉಪಯೋಗಿಸುವ ಉಪಕರಣಗಳ ಆಕೃತಿ, ವರ್ಣ, ಇವೇ ಮುಂತಾದ ಮುಖ್ಯಗುಣಗಳನ್ನು ಕುರಿತ ಸುಲಭಪ್ರಶ್ನೆಗಳಿಗೆ ಉತ್ತರ ಹೇಳುವುದು. (c) ಆಕೃತಿ, ವರ್ಣ, ಇವುಗಳ ವಿಷಯವಾಗಿ ಸಾಧಾರಣಜ್ಞಾನ. ಉಪಾಧ್ಯಾಯನು ಆಕೃತಿಗಳ ಪೆಟ್ಟಿಗೆ, ಪಟ, ಬಣ್ಣದ ಪಟ, ಕಾರ್ಡು, ಇವುಗಳನ್ನು ಉಪಯೋಗಿಸಬೇಕು. (4 ಅರ್ಧ ಘಂಟೆಗಳ ಕಾಲ)	(a) ಆರು ಕರಣಗಳನ್ನು (Occupations) ಮಾಡುವುದು. (b) ಉಪಯೋಗಿಸುವ ಉಪಕರಣಗಳ ಆಕೃತಿ, ವರ್ಣ, ಇವೇ ಮುಂತಾದ ಮುಖ್ಯ ಗುಣಗಳನ್ನು ಕುರಿತ ಸುಲಭ ಪ್ರಶ್ನೆಗಳಿಗೆ ಉತ್ತರ ಹೇಳುವುದು. (c) ಆಕೃತಿ, ವರ್ಣ, ಇವುಗಳ ವಿಷಯವಾಗಿ ಸಾಧಾರಣಜ್ಞಾನ. (4 ಅರ್ಧ ಘಂಟೆಗಳ ಕಾಲ)
ಭೂಗೋಳಶಾಸ್ತ್ರ.	...	ಭೂಪಟವೆಂದರೆ ಇಂಥದು ಎಂಬ ಜ್ಞಾನ. ನಾಲ್ಕು ದಿಕ್ಕುಗಳು. ಪಾಠಶಾಲೆಯ ಮತ್ತು ಊರಿನ ನಕ್ಷೆ. ಮೈಸೂರು ದೇಶದ ಭೂಪಟದಲ್ಲಿ ಸರಹದ್ದುಗಳು, ಬೆಟ್ಟಗಳು, ನದಿಗಳು, ಡಿಸ್ಟ್ರಿಕ್ಟುಗಳು, ಮುಖ್ಯವಾದ ಪಟ್ಟಣಗಳು, ಇವುಗಳನ್ನು ತೋರಿಸುವುದು. (ಈ ಪಾಠಗಳನ್ನು ಪುಸ್ತಕವಿಲ್ಲದೆ ಮುಖತಃ ಹೇಳಿಕೊಡಬೇಕು) (2 ಘಂಟೆಗಳ ಕಾಲ)

ಅಪ್ಪರ್ ಪ್ರೈಮರಿ.		ಲೋಯರ್ ಸೆಕಂಡರಿ.	
2ನೆಯ ಇಯತ್ತೆ ಅಥವಾ ವರ್ಗ.	3ನೆಯ ಇಯತ್ತೆ ಅಥವಾ ವರ್ಗ.	4ನೆಯ ಇಯತ್ತೆ ಅಥವಾ ವರ್ಗ.	5ನೆಯ ಇಯತ್ತೆ ಅಥವಾ ವರ್ಗ.
1ನೆಯ ಇಯತ್ತೆಗೆ ಹೇಳಿರುವಂತೆಯೇ, ಅದರ ಜತೆಗೆ ಒಂದೊಂದು ಭಾಗದಲ್ಲಿಯೂ 5 ಪಾಠಗಳ ಮೇರಿಗೆ 20 ಪಾಠಗಳು. [ಉಪಾಧ್ಯಾಯನ ಉಪಯೋಗಕ್ಕಾಗಿ-ವಸ್ತು ಪಾಠಗಳ ಪುಸ್ತಕ] (3 ಘಂಟೆಗಳ ಕಾಲ)			
..	...	..	..
..	...	..	..
ಭೂಮಿಯ ಆಕಾರ ಮತ್ತು ಪರಿಮಾಣ, ಭೂಗೋಳಶಾಸ್ತ್ರದಲ್ಲಿ ಉಪಯೋಗಿಸುವ ಸಂಕೇತಪದಗಳ ವಿವರಣೆ ಮತ್ತು ಉದಾಹರಣೆಗಳನ್ನು ಭೂಪಟದಲ್ಲಿ ತೋರಿಸುವುದು. ಭೂಖಂಡಗಳು ಮತ್ತು ಸಾಗರಗಳು. ಮದರಾಸ್ ಆಧಿಪತ್ಯ, ಕೊಡಗು, ಮೈಸೂರು, ತಿರುವಾಂಕೋಡು, ಕೊಚ್ಚಿ ಮತ್ತು ಹೈದರಾಬಾದ್, ಇವುಗಳ ಭೂವಿವರಣೆ, ಎಲ್ಲೆಗಳನ್ನೂ, ಸ್ವಾಭಾವಿಕವಾಗಿ ಆಗಿರುವ ಮತ್ತು ರಾಜ್ಯಭಾರಕ್ಕೋಸ್ಕರ ಮಾಡಿರುವ ಭಾಗಗಳನ್ನೂ (natural and political divisions), ಪರ್ವತಗಳನ್ನೂ, ನದಿಗಳನ್ನೂ, ಪಟ್ಟಣಗಳನ್ನೂ,	(a) ಏಷ್ಯಾಖಂಡದ ಭೂವಿವರಣೆ. [ಬಾಲಭೂವಿವರಣೆ] ಭೂಪಟವ ಬರೆಯುವುದು—ಇಂಡಿಯಾ ದೇಶದ ಆಕಾರ ಮತ್ತು ಅಲ್ಲಿರುವ ಮುಖ್ಯವಾದ ನದಿಗಳು, ಪರ್ವತ ಶ್ರೇಣಿಗಳು, ಮುಖ್ಯಪಟ್ಟಣಗಳು ಇವುಗಳನ್ನು ಬರೆಯುವುದು. (2 ಘಂಟೆಗಳ ಕಾಲ)	(a) ಯೂರೋಪ್ ಮತ್ತು ಆಫ್ರಿಕಾ ಖಂಡಗಳ ಭೂವಿವರಣೆ. [ಭೂವಿವರಣೆ 2ನೆಯ ಭಾಗ] (b) ಭೂಪಟ ಬರೆಯುವುದು— ಏಷ್ಯ ಮತ್ತು ಯೂರೋಪ್ ಖಂಡಗಳ ಮುಖ್ಯದೇಶಗಳ ಆಕಾರ ಮತ್ತು ಅವುಗಳಲ್ಲಿಯ ಮುಖ್ಯ ನದಿಗಳು, ಪರ್ವತಶ್ರೇಣಿಗಳು, ಮುಖ್ಯ ಪಟ್ಟಣಗಳು ಇವುಗಳನ್ನು ಬರೆಯುವುದು. (2 ಘಂಟೆಗಳ ಕಾಲ)	(a) ಸಾಮಾನ್ಯ ಭೂಗೋಳಶಾಸ್ತ್ರ [ಭೂವಿವರಣೆ] (b) ಇಂಡಿಯಾದೇಶದ ಭೂವಿವರಣೆ [ಭೂವಿವರಣೆ] (c) ಪ್ರಾಕೃತಿಕ ಭೂಗೋಳಶಾಸ್ತ್ರ [ಭೂವಿವರಣೆಯ ಅವತರಣಿಕೆ] (d) ಭೂಪಟ ಬರೆಯುವುದು—ಮುಖ್ಯವಾದ ನದಿಗಳು, ಪರ್ವತಶ್ರೇಣಿಗಳು, ಪಟ್ಟಣಗಳು, ಇವುಗಳನ್ನು ತೋರಿಸಿ ಯಾವ ಖಂಡದ ಭೂಪಟವನ್ನಾಗಲಿ, ಯೂರೋಪ್ ಮತ್ತು ಏಷ್ಯಾ ಖಂಡಗಳಲ್ಲಿರುವ ಯಾವ ಮುಖ್ಯದೇಶದ ಭೂಪಟವನ್ನಾಗಲಿ ಬರೆಯುವುದು. (2 ಘಂಟೆಗಳ ಕಾಲ)

ಲೋವರ್ ಪ್ರೈಮರಿ.

ವಿಷಯಗಳು.	ಮಕ್ಕಳ ಇಯತ್ತೆ ಅಥವಾ ವರ್ಗ. A	ಮಕ್ಕಳ ಇಯತ್ತೆ ಅಥವಾ ವರ್ಗ. B	1ನೆಯ ಇಯತ್ತೆ ಅಥವಾ ವರ್ಗ.
ಚರಿತ್ರೆ	...		..
ಸಾದಾ ಹೊಲಿಗೆ (ಐಚ್ಛಿಕ)	...	...	ಸೂಜಿಗೆ ದಾರ ಸೇರಿಸುವುದು, ಅಂಚುಕಟ್ಟುವುದು ಅಥವಾ ಟಿಪ್ಪಿ ಹಾಕುವುದು. (4 ಅರ್ಧ ಘಂಟೆಗಳ ಕಾಲ)
ಪಾಕಶಾಸ್ತ್ರ (ಐಚ್ಛಿಕ)	..		..
ಆರೋಗ್ಯಶಾಸ್ತ್ರ (ಐಚ್ಛಿಕ)	..		..
ಗೃಹಕಾರ್ಯನಿರ್ವಾಹ (ಐಚ್ಛಿಕ)	...		..
ಸಂಸ್ಕೃತ (ಐಚ್ಛಿಕ)	...		..

ಅಪ್ಪರ್ ಪ್ರೈಮರಿ.		ಲೋವರ್ ಸೆಕೆಂಡರಿ.	
2ನೆಯ ಇಯತ್ತೆ ಅಥವಾ ವರ್ಗ.	3ನೆಯ ಇಯತ್ತೆ ಅಥವಾ ವರ್ಗ.	4ನೆಯ ಇಯತ್ತೆ ಅಥವಾ ವರ್ಗ.	5ನೆಯ ಇಯತ್ತೆ ಅಥವಾ ವರ್ಗ.
ರೇವುಗಳನ್ನೂ, ಮುಖ್ಯವಾದ ರಸ್ತೆಗಳನ್ನೂ, ರೆಯಿಲ್ವೆಗಳನ್ನೂ ಭೂಪಟದಲ್ಲಿ ತೋರಿಸುವುದು. [ಬಾಲ ಭೂವಿವರಣೆ] (2 ಘಂಟೆಗಳ ಕಾಲ)			
ಎಂ. ಶಾಮರಾಯರವರ ಮೈಸೂರು ದೇಶದ ಚರಿತ್ರಸಂಗ್ರಹ. (3 ಘಂಟೆಗಳ ಕಾಲ)	ಮಾರ್ಸ್ಡೆನ್ ಎಂಬವರ ಹಿಂದೂ ಚರಿತ್ರೆಯ ಸುಲಭ ಪಾಠಗಳು. (2 ಘಂಟೆಗಳ ಕಾಲ)	ಇಂಡಿಯಾ ದೇಶದ ಚರಿತ್ರೆ. 1798ನೆಯ ಇಸವಿ ವರೆಗೆ ಮಾರ್ಸ್ಡೆನ್ ಎಂಬವರ ಹಿಂದೂ ದೇಶದ ಚರಿತ್ರೆಯ ಮೊದಲನೆ, ಎರಡನೆ ಭಾಗಗಳು. (ಅದಕ್ಕೆ ಬೇಕಾದ ಭೂಗೋಳ ಶಾಸ್ತ್ರಜ್ಞಾನ ಸಹ) [ಹೋಬಳಿ ಸ್ಕೂಲುಗಳಲ್ಲಿ ಚರಿತ್ರ ಸಂಗ್ರಹವನ್ನು ಓದಬಹುದು] (2 ಘಂಟೆಗಳ ಕಾಲ)	ವರ್ತಮಾನ ಕಾಲದ ವರೆಗಿನ ಇಂಡಿಯಾ ದೇಶದ ಚರಿತ್ರೆ. ಮಾರ್ಸ್ಡೆನ್ ಎಂಬವರ ಹಿಂದೂ ದೇಶದ ಚರಿತ್ರೆಯ ಮೂರನೆಯ ಭಾಗ. ಹೋಬಳಿ ಸ್ಕೂಲ್‌ಗಳಲ್ಲಿ ಉಪಾಧ್ಯಾಯರು ಅಪೇಕ್ಷಿಸಿದರೆ ಚರಿತ್ರ ಸಂಗ್ರಹವನ್ನು ಓದಬಹುದು. (ಅದಕ್ಕೆ ಬೇಕಾದ ಭೂಗೋಳ ಶಾಸ್ತ್ರಜ್ಞಾನ ಸಹ) (3 ಘಂಟೆಗಳ ಕಾಲ)
ಮೇಲುಗಡೆ ಟೆಬ್ಬಿ ಹಾಕುವುದು; ಅಂಚು ಕಟ್ಟುವುದು, ಟೆಬ್ಬಿ ಹಾಕುವುದು, ಗೇಟು ಕಟ್ಟುವುದು, ಮತ್ತು ದಳಗೆ ಹಾಕುವುದು. (2 ಘಂಟೆಗಳ ಕಾಲ)	ಕತ್ತಿನ ಪಟ್ಟಿಯನ್ನೂ ಮತ್ತು ಜೇಬನ್ನೂ ಸೇರಿಸುವುದು, ಗುಂಡಿಗಳನ್ನು ಹೊಲಿಯುವುದು, ಗುಂಡಿ ಕಾಜಾಗಳನ್ನು ಮಾಡುವುದು, ಮತ್ತು ಆರು ವರುಷದ ಹುಡುಗಿಗೆ ಒಂದು ಜುಬ್ಬವನ್ನೂ ಮತ್ತು ಒಂದು ಗುಂಡಿ ರವಕೆಯನ್ನೂ ಕತ್ತರಿಸಿ ತಯಾರ್ಮಾಡುವುದು, ಫ್ಲಾನಲ್ ಬಟ್ಟೆಯಲ್ಲಿ ಸವೆದು ಹೋಗಿರುವ ಜಾಗಗಳನ್ನೂ ಮತ್ತು ಕಾಲುಚೀಲಗಳಲ್ಲಿರುವ ರಂಧ್ರಗಳನ್ನೂ ರಫ್ಫು ಮಾಡುವುದು. ಕ್ಯಾಲಿಕೊ ಬಟ್ಟೆಗೆ ತೇಪೆ ಹಾಕುವುದು. (2 ಘಂಟೆಗಳ ಕಾಲ)	ಪೂರಾ ಆಕಾರವುಳ್ಳ ಒಂದು ಚಿಕ್ಕದಾದ ಹಿಂದೂ ಗಂಡಸಿನ ಜುಬ್ಬವನ್ನು ಕತ್ತರಿಸಿ ತಯಾರ್ಮಾಡುವುದು. ಮನೆಯ ಬಟ್ಟೆಯನ್ನು ರಫ್ಫು ಮಾಡುವುದು ಮತ್ತು ರಿಪೇರಿ ಮಾಡುವುದು. ಚೀಟಿಗಳನ್ನೂ ಮತ್ತು ಉಣ್ಣೆಯ ಬಟ್ಟೆಗಳನ್ನೂ ತೇಪೇ ಹಾಕುವುದು ಮತ್ತು ರಫ್ಫು ಮಾಡುವುದು. (2 ಘಂಟೆಗಳ ಕಾಲ)	ಕೊಡಲ್ಪಡುವ ಮಾದರಿಯಿಂದಾಗಲಿ ಅಥವಾ ಅಳತೆಯಿಂದಾಗಲಿ ಕತ್ತರಿಸಿಕೊಂಡು, ಹಿಂದೂ ಗಂಡಸಿನ ಒಳಗೆ ತೊಟ್ಟುಕೊಳ್ಳುವ ಒಂದು ಜುಬ್ಬವನ್ನು ತಯಾರ್ಮಾಡುವುದು. ಇಂಗ್ಲೀಷಿನ ಅಥವಾ ಕನ್ನಡದ ಆದ್ಯಕ್ಷರಗಳನ್ನು ಹೊಲಿಯುವುದು. ರಫ್ಫು ಮಾಡುವುದು ಮತ್ತು ತೇಪೆ ಹಾಕುವುದು. (2 ಘಂಟೆಗಳ ಕಾಲ)
...	..	ಪಾಕಶಾಸ್ತ್ರ ಮತ್ತು ಅಡಿಗೆ ಮಾಡುವುದು. (2 ಘಂಟೆಗಳ ಕಾಲ)	ಪಾಕಶಾಸ್ತ್ರ ಮತ್ತು ಅಡಿಗೆ ಮಾಡುವುದು. (2 ಘಂಟೆಗಳ ಕಾಲ)
..	ಸರಳಾರೋಗ್ಯ ಪಾಠ (2 ಘಂಟೆಗಳ ಕಾಲ)	ನರಸಿಂಹಯ್ಯಂಗಾರ್ರವರ ಆರೋಗ್ಯ ಶಾಸ್ತ್ರ (2 ಘಂಟೆಗಳ ಕಾಲ)	ನರಸಿಂಹಯ್ಯಂಗಾರ್ರವರ ಆರೋಗ್ಯ ಶಾಸ್ತ್ರ. (2 ಘಂಟೆಗಳ ಕಾಲ)
..	(2 ಘಂಟೆಗಳ ಕಾಲ)	(2 ಘಂಟೆಗಳ ಕಾಲ)	(2 ಘಂಟೆಗಳ ಕಾಲ)
..	(*a*) ಕಥಾಶತಕದ ಮೊದಲು 15 ಕಥೆಗಳನ್ನು ಓದುವುದು.	(*a*) ಕಥಾಶತಕದ ಕಥೆಗಳು 16 ರಿಂದ 35ರ ವರೆಗೆ ಓದು	(*a*) ಲೋವರ್ ಸೆಕೆಂಡರಿ ಪರೀಕ್ಷೆಗೆ ಸಂಸ್ಕೃತವನ್ನು 2ನೆಯ ಭಾಷೆ

ವಿಷಯಗಳು.	ಲೋಯರ್ ಪ್ರೈಮರಿ.		
	ಮೊದಲ ಇಯತ್ತೆ ಅಥವಾ ವರ್ಗ.		1ನೆಯ ಇಯತ್ತೆ ಅಥವಾ ವರ್ಗ.
	A	B.	
ಇಂಗ್ಲಿಷ್ ಐಚ್ಛಿಕ:— ಓದು, ಬರೆಯುವದು, ಭಾಷಾಂತರೀಕರಣ ಮತ್ತು ಬಾಯಿಪಾಠ.	..	..	..

ಅಪ್ಪರ್ ಪ್ರೈಮರಿ.		ಲೋವರ್ ಸೆಕಂಡರಿ.	
2ನೆಯ ಇಯತ್ತೆ ಅಥವಾ ವರ್ಗ.	3ನೆಯ ಇಯತ್ತೆ ಅಥವಾ ವರ್ಗ.	4ನೆಯ ಇಯತ್ತೆ ಅಥವಾ ವರ್ಗ.	5ನೆಯ ಇಯತ್ತೆ ಅಥವಾ ವರ್ಗ.
	(a) ದೊಡ್ಡಕ್ಷರದಲ್ಲಿ ಸುಲಭವಾದ ಪದಗಳನ್ನು ಬರೆಯುವುದು. [ಆರ್ನೋಲ್ಡ್ ಎಂಬವರ ಕಾಪಿಬುಕ 1ನೆಯ ನಂಬರು.] (b) ಏಕಾಕ್ಷರದ (of one syllable) ಆರು ಸುಲಭವಾದ ಪದಗಳನ್ನು ಬರೆಯುವುದು. (4 ಅರ್ಧ ಘಂಟೆಗಳ ಕಾಲ)	(a) ದೊಡ್ಡಕ್ಷರದಲ್ಲಿ ಸುಲಭವಾದ ಪದಗಳನ್ನು ಬರೆಯುವುದು. ಪೂರಾಬರೆದ ಕಾಪಿಬುಕ್ಕನ್ನು ತೋರಿಸಬೇಕು. [ಆರ್ನೋಲ್ಡ್ ಎಂಬವರ ಕಾಪಿಬುಕ್ 2ನೆಯ ಮತ್ತು 3ನೆಯ ನಂಬರುಗಳು] (b) ಪಾಠಪುಸ್ತಕದಲ್ಲಿ ಓದಿದ ಭಾಗದಿಂದ 5 ಪದಗಳನ್ನೂ ಮತ್ತು 5 ಪಙ್ತಿಗಳನ್ನೂ ಬರೆಯುವುದು. (4 ಅರ್ಧ ಘಂಟೆಗಳ ಕಾಲ)	(a) ದೊಡ್ಡ ಅಥವಾ ನಡುತರವಾದ ಅಕ್ಷರವನ್ನು ಬರೆಯುವುದು. ಪೂರಾಬರೆದ ಕಾಪಿ ಬುಕ್ಕನ್ನು ತೋರಿಸಬೇಕು. [ಆರ್ನೋಲ್ಡ್ ಎಂಬವರ ಕಾಪಿ ಬುಕ 3A, 4, ಮತ್ತು $4\frac{1}{2}$ ನಂಬರುಗಳು] (b) ಪಾಠಪುಸ್ತಕದಲ್ಲಿ ಓದಿದ ಭಾಗದಿಂದ ಹೇಳಲ್ಪಡುವ 10 ಪದಗಳನ್ನೂ ಮತ್ತು ಓದಲ್ಪಡುವ 8 ಪಙ್ತಿಗಳನ್ನೂ ಬರೆಯುವುದು. (4 ಅರ್ಧ ಘಂಟೆಗಳ ಕಾಲ)
	ಸಾಮಾನ್ಯವಾಕ್ಯಗಳಲ್ಲಿ ವಾಚಕಗಳನ್ನೂ ಕರ್ತೃ ಕರ್ಮ ಕ್ರಿಯೆಗಳನ್ನೂ ತೋರಿಸುವುದು. (ಇದು ಓದುವ ಪಾಠದ ಒಂದು ಭಾಗ)	(a) ಸುಲಭವಾದ ಶಬ್ದ ಸ್ವರೂಪ ಕಥನ (parsing) (b) ಮೋರ್ಸ್ ಎಂಬವರ ಫಸ್ಟ್ ಸ್ಟೆಪ್ಸ್ ಇನ್ ಇಂಗ್ಲಿಷ್ ಗ್ರಾಮರ್, ಪುಟಗಳು 1ರಿಂದ 21ರ ವರೆಗೆ; ಅಥವಾ ಕ್ರಿಶ್ಚಿಯನ್ ಲಿಟರೆಚೂರ ಸೊಸೈಟಿಯ ಪ್ರಿಮರ್ ಆಫ್ ಇಂಗ್ಲಿಷ್ ಗ್ರಾಮರ್, ಪುಟಗಳು 1ರಿಂದ 24ರ ವರೆಗೆ. ಅಭ್ಯಾಸ ಪಾಠಗಳನ್ನು (exercises) ಒಂದು ಪುಸ್ತಕದಲ್ಲಿ ಬರೆದಿಡಬೇಕು. (2 ಅರ್ಧ ಘಂಟೆಗಳ ಕಾಲ)	(a) ಕ್ರಿಶ್ಚಿಯನ್ ಲಿಟರೆಚೂರ ಸೊಸೈಟಿಯ ಪ್ರಿಮರ್ ಆಫ್ ಇಂಗ್ಲಿಷ್ ಗ್ರಾಮರ್ ಅಥವಾ ಮೋರ್ಸ್ ಎಂಬವರ ಫಸ್ಟ್ ಸ್ಟೆಪ್ಸ್ ಇನ್ ಇಂಗ್ಲಿಷ್ ಗ್ರಾಮರ್— ಪೂರ್ತಿಯಾಗಿ. ಅಭ್ಯಾಸ ಪಾಠಗಳನ್ನು ಒಂದು ಪುಸ್ತಕದಲ್ಲಿ ಬರೆದಿಡಬೇಕು. (4 ಅರ್ಧ ಘಂಟೆಗಳ ಕಾಲ) (b) ಇಂಗ್ಲಿಷ್ ರೀಡರಿನಲ್ಲಿಯ ಸುಲಭವಾದ ಶಬ್ದಗಳ ಸ್ವರೂಪ ಕಥನ.

ಹೆಚ್. ಜೆ. ಭಾಭಾ,
ಇನ್ಸ್ಪೆಕ್ಟರ್ ಜನರಲ್.

ಫಾರೆಸ್ಟು ಇಲಾಖಾ.

ಇಸ್ತಿಹಾರ್.

ನೋಟಿಫಿಕೇಷನ್, ತಾರೀಖು ನೆ ಜನವರಿ 1904ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸನ್ 1900ನೆ ಇಸವಿ ಫಾರೆಸ್ಟು ರೆಗ್ಯುಲೇಷನ್ 24ನೆ ಸೆಕ್ಷನ್ "ಇ" ಕ್ಲಾಜು ಅನುಸರಿಸಿ ಈ ಕೆಳಗೆ ನಮೂದಿಸಿರುವ ಬೆಂಗಳೂರು ಡಿಸ್ಟ್ರಿಕ್ಟಿನ ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳನ್ನು ಬೆಂಕಿಯಿಂದ ಕಾಪಾಡಲು ಏರ್ಪಾಡು ಇಟ್ಟಿರುತ್ತೆ. 1904ನೆ ಇಸವಿ ಜನವರಿ 15ನೆ ತಾರೀಖು ಲಾಗಾಯಿತು ಮೇ ಆಖೈರ ವರಿಗೆ ಸದರಿ ಸ್ಟೇಟ್ ಫಾರೆಸ್ಟುಗಳು ಮತ್ತು ಪ್ಲಾಂಟೇಷನ್‌ಗಳು ಬಂದು ಮಾಡಲ್ಪಟ್ಟಿರುತ್ತವೆ. ಶಿವಾಯಿ ಯಾವ ಮನುಷ್ಯನು ಮೇಲ್ಕಂಡ ಫಾರೆಸ್ಟುಗಳಲ್ಲಿ ಗೊತ್ತಾದ ದಾರಿಗಳು ವಿನಹ ಫಾರೆಸ್ಟು ಕನ್ಸರ್ವೇಟರವರ ಅಥವಾ ಅಧಿಕಾರ ಹೊಂದಿದ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರ ಅಪ್ಪಣೆ ವಿನಹ ಪ್ರವೇಶ ಮಾಡಕೂಡದು. ಅತಿಕ್ರಮ ಪ್ರವೇಶಿಸುವವರು ಪ್ರಾಸಿಕ್ಯೂಷನ್‌ಗೆ ಒಳಪಡುತ್ತಾರೆ:—

ನಂಬರು.	ಫಾರೆಸ್ಟು ಯಾ ಪ್ಲಾಂಟೇಷನ್‌ಗಳ ಹೆಸರು.		ತಾಲ್ಲೂಕು ಹೆಸರು.
1	ಬಿ. ಕಲ್	ಸ್ಟೇಟ್ ಫಾರೆಸ್ಟು	ಕನಕಾನಹಳ್ಳಿ ತಾಲ್ಲೂಕು
2	ಮುಗ್ಗೂರು	ಡಿಟ್ಟೋ	ಡಿಟ್ಟೋ
3	ಚಿಲಂದವಾಡಿ	ಡಿಟ್ಟೋ	ಡಿಟ್ಟೋ
4	ಕಬ್ಬಾಳದುರ್ಗ	ಡಿಟ್ಟೋ	ಡಿಟ್ಟೋ
5	ಬಾಣಂತಿಮಾರಿ	ಡಿಟ್ಟೋ	ಡಿಟ್ಟೋ
6	ಬಸವನಬೆಟ್ಟ	ಡಿಟ್ಟೋ	ಮಳವಳ್ಳಿ ತಾಲ್ಲೂಕು
7	ತೆಂಗಿನಕಲ್	ಡಿಟ್ಟೋ	ಚನ್ನಪಟ್ಟಣ ತಾಲ್ಲೂಕು
8	ಮಾಕಳಿ	ಡಿಟ್ಟೋ	ಡಿಟ್ಟೋ
9	ದೊಡ್ಡ ಮಣ್ಣುಗುಡ್ಡೆ	ಡಿಟ್ಟೋ	ಡಿಟ್ಟೋ
10	ಚಿಕ್ಕ ಮಣ್ಣುಗುಡ್ಡೆ	ಡಿಟ್ಟೋ	ಡಿಟ್ಟೋ
11	ಹಂದಿಗೊಂದಿ	ಡಿಟ್ಟೋ	ಡಿಟ್ಟೋ
12	ಹುಲ್ತಾರ್	ಡಿಟ್ಟೋ	ಡಿಟ್ಟೋ
13	ಕುಂಬಳಗೋಡು	ಡಿಟ್ಟೋ	ಡಿಟ್ಟೋ
14	ಸಾವನದುರ್ಗ	ಡಿಟ್ಟೋ	ಮಾಗಡಿ ತಾಲ್ಲೂಕು
15	ಹುಲ್ಕುಡಿ	ಡಿಟ್ಟೋ	ದೊಡ್ಡಬಳ್ಳಾಪುರ ತಾಲ್ಲೂಕು
16	ಪುಜನಿ	ಡಿಟ್ಟೋ	ಡಿಟ್ಟೋ
17	ಮಾಕಳಿದುರ್ಗ	ಡಿಟ್ಟೋ	ಡಿಟ್ಟೋ
18	ರಾಗಿಹಳ್ಳಿ	ಡಿಟ್ಟೋ	ಆನೇಕಲ್ ತಾಲ್ಲೂಕು
19	ನಿಜಗಲ್	ಡಿಟ್ಟೋ	ನೆಲಮಂಗಲ ತಾಲ್ಲೂಕು
20	ಮಾದಗೆರೆ	ಪ್ಲಾಂಟೇಷನ್	ಚನ್ನಪಟ್ಟಣ ತಾಲ್ಲೂಕು
21	ಗಂಡ್ರಗೊಳಿಪುರ	ಡಿಟ್ಟೋ	ದೊಡ್ಡಬಳ್ಳಾಪುರ ತಾಲ್ಲೂಕು
22	ಜಕನಂದ್ರ	ಡಿಟ್ಟೋ	ಡಿಟ್ಟೋ
23	ಗೋವಿಂದಪುರ	ಡಿಟ್ಟೋ	ನೆಲಮಂಗಲ ತಾಲ್ಲೂಕು
24	ಕಲ್ಲುಪಾಳ್ಯ	ಡಿಟ್ಟೋ	ಡಿಟ್ಟೋ
25	ಜಕ್ಕಸಂದ್ರ	ಡಿಟ್ಟೋ	ಡಿಟ್ಟೋ
26	ಕೃಷ್ಣರಾಜಪುರ	ಡಿಟ್ಟೋ	ಡಿಟ್ಟೋ
27	ಮಾವಿನಕೋಮನಹಳ್ಳಿ	ಡಿಟ್ಟೋ	ಡಿಟ್ಟೋ
28	ಕಂಬನಪುರ	ಡಿಟ್ಟೋ	ಡಿಟ್ಟೋ
29	ಬಿಳಗರ	ಡಿಟ್ಟೋ	ಡಿಟ್ಟೋ
30	ಮಾಚಕೋಹಳ್ಳಿ	ಡಿಟ್ಟೋ	ಡಿಟ್ಟೋ
31	ಗೇಟಿಗಾನಹಳ್ಳಿ ಮತ್ತು ಜಕ್ಕೂರು ಪ್ಲಾಂಟೇಷನ್		ಬೆಂಗಳೂರು ತಾಲ್ಲೂಕು
32	ಬೆಟ್ಟಹಳ್ಳಿ	ಡಿಟ್ಟೋ	ಡಿಟ್ಟೋ
33	ಕೊಡಿಗೆಹಳ್ಳಿ	ಡಿಟ್ಟೋ	ಡಿಟ್ಟೋ
34	ಜಾರಕಬಂಡೆ "ಎ" ಮತ್ತು 'ಬಿ' ಮತ್ತು ಜಕ್ಕೂರು ಪ್ಲಾಂಟೇಷನ್		ಡಿಟ್ಟೋ
35	ಬೆಟ್ಟ ಹೆಬ್ಬಾಳ	ಪ್ಲಾಂಟೇಷನ್	ಡಿಟ್ಟೋ
36	ಕೆಂಚನಹಳ್ಳಿ	ಡಿಟ್ಟೋ	ಡಿಟ್ಟೋ
37	ಮಲ್ಲತ್ತಹಳ್ಳಿ	ಡಿಟ್ಟೋ	ಡಿಟ್ಟೋ
38	ನಾಗರಭಾವಿ	ಡಿಟ್ಟೋ	ಡಿಟ್ಟೋ
39	ಸೂಲಿಕೆರೆ	ಡಿಟ್ಟೋ	ಡಿಟ್ಟೋ
40	ಪಿಂಡ್ಯಾ ಮತ್ತು ಜಾಲಹಳ್ಳಿ	ಡಿಟ್ಟೋ	ಡಿಟ್ಟೋ
41	ಗುಲ್ಲಹಳ್ಳಿ	ಡಿಟ್ಟೋ	ಹೊಸಕೋಟೆ ತಾಲ್ಲೂಕು
42	ಅಪ್ಪಸಂದ್ರ	ಡಿಟ್ಟೋ	ಡಿಟ್ಟೋ
43	ಜಡಿಗೇನಹಳ್ಳಿ ಹಳೇ ಮತ್ತು ಹೊಸ ಪ್ಲಾಂಟೇಷನ್		ಡಿಟ್ಟೋ
44	ನಲ್ಲಾಲ್ (ಎ—ಬಿ ಮತ್ತು ಸಿ)	ಡಿಟ್ಟೋ	ಡಿಟ್ಟೋ
45	ಕಾಡಗೋಡಿ	ಡಿಟ್ಟೋ	ಡಿಟ್ಟೋ
46	ತತ್ತನೂರು	ಡಿಟ್ಟೋ	ಡಿಟ್ಟೋ
47	ತಿಂಡ್ಲು	ಡಿಟ್ಟೋ	ಡಿಟ್ಟೋ

ಟಿ. ಅಬ್ದುಲ್ ಕರೀಂ, ಡೆಪ್ಯುಟಿ ಕನಸರ್ವೇಟರ್ ಆಫ್ ಫಾರೆಸ್ಟು, ಬೆಂಗಳೂರು ಡಿಸ್ಟ್ರಿಕ್ಟು.

ನೋಟಿಸ್, ತಾರೀಖು 6ನೆ ಜನವರಿ 1904ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮೈಸೂರು ಪೃಥ್ಯೆಡರ್ ಮತ್ತು ನಂಜನಗೂಡು ಡಿಪೋಗಳಲ್ಲಿ ಹರಾಜು ಆಗತಕ್ಕ ಚೌಬೀನಾ ವಿಷಯದಲ್ಲಿ 1904ನೆ ಜನವರಿ 14ನೆ ಮುದ್ರಾಂ 2ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 12ನೆ ಪುಟವನ್ನು ನೋಡತಕ್ಕದ್ದು.

ಸಿ. ಅಪ್ಪಯ್ಯ, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಮೈಸೂರು ಡಿಸ್ಟ್ರಿಕ್ಟ್.

ಅಪ್ಪರ್ ಪ್ರೈಮರಿ.		ಲೋವರ್ ಸೆಕಂಡರಿ.	
2ನೆಯ ಇಯತ್ತೆ ಅಥವಾ ವರ್ಗ.	3ನೆಯ ಇಯತ್ತೆ ಅಥವಾ ವರ್ಗ.	4ನೆಯ ಇಯತ್ತೆ ಅಥವಾ ವರ್ಗ.	5ನೆಯ ಇಯತ್ತೆ ಅಥವಾ ವರ್ಗ.
	(b) ಲೇಖನ ಪುಸ್ತಕದಲ್ಲಿ ಬರೆಯುವುದು. ಪರೀಕ್ಷೆಯ ಕಾಲದಲ್ಲಿ ದೇವನಾಗರಿಯಕ್ಷರದಲ್ಲಿ ಬರೆದ 10 ಪುಟಗಳನ್ನು ತೋರಿಸಬೇಕು. (c) ಅಕ್ಷರಸಂಯೋಜನ-ಪಾಠಪುಸ್ತಕದಿಂದ ಹೇಳಿದ 6 ಕಷ್ಟವಾದ ಶಬ್ದಗಳನ್ನು ಬರೆಯುವುದು. (d) ಭಂಡಾರ್ಕರರವರ ಪ್ರಥಮ ಪುಸ್ತಕದಲ್ಲಿ ಮೊದಲು 5 ಪಾಠಗಳಲ್ಲಿಯ ಅಭ್ಯಾಸಗಳನ್ನು ಭಾಷಾಂತರ ಮಾಡಿ ಬರೆದು ತೋರಿಸುವುದು. (2 ಘಂಟೆಗಳ ಕಾಲ)	ವುದು. (b) ಲೇಖನ ಪುಸ್ತಕದಲ್ಲಿ ಬರೆಯುವುದು. ಪರೀಕ್ಷೆಯ ಕಾಲದಲ್ಲಿ ದೇವನಾಗರಿಯಕ್ಷರದಲ್ಲಿ ಬರೆದ 15 ಪುಟಗಳನ್ನು ತೋರಿಸಬೇಕು. (c) ಅಕ್ಷರಸಂಯೋಜನ-ಪಾಠ ಪುಸ್ತಕದಿಂದ ಹೇಳಿದ 10 ಕಷ್ಟವಾದ ಪದಗಳನ್ನು ಬರೆಯುವುದು. (d) ಭಂಡಾರ್ಕರರವರ ಪ್ರಥಮ ಪುಸ್ತಕದಲ್ಲಿ 6ರಿಂದ 12ರ ವರೆಗಿನ ಪಾಠಗಳಲ್ಲಿಯ ಅಭ್ಯಾಸಗಳನ್ನು ಭಾಷಾಂತರಮಾಡಿ ಬರೆದು ತೋರಿಸುವುದು. (e) ಸಂಧಿ ವಿಷಯಕವಾದ ಸಾಮಾನ್ಯ ವಿಧಿಗಳು, ಅಜಂತನಾಮಪದ, ಗುಣವಾಚಕ, ಇವುಗಳ ವಿಭಕ್ತಿರೂಪಗಳು (ಸಂಸ್ಕೃತ ಪ್ರಥಮ ಪುಸ್ತಕದಲ್ಲಿ ಇರುವಂತೆ) ಮತ್ತು 1ನೆಯ 4ನೆಯ 6ನೆಯ ಮತ್ತು 10ನೆಯ ವಿಕರಣಿಗಳ ಧಾತುಗಳಿಗೆ ಲಟ್, ಲೋಟ್, ಲಙ್, ವಿಧಿಲಿಙ್‌ಗಳಲ್ಲಿ ರೂಪಗಳು. (3 ಘಂಟೆಗಳ ಕಾಲ)	ಯಾಗಿ ತೆಗೆದುಕೊಳ್ಳುವವರಿಗೆ ನಿಯಮಿಸಿರುವ ಗ್ರಂಥಗಳು. (b) ದೇವನಾಗರಿಯಕ್ಷರದಲ್ಲಿ ಅಚ್ಚು ಹಾಕಿರುವ ಒಂದು ಪತ್ರಿಕೆಯನ್ನು ಚೆನ್ನಾಗಿಯೂ, ಸ್ಫುಟವಾಗಿಯೂ, ಬರೆಯುವುದು. (c) ಓದಲ್ಪಡುವ ಒಂದು ಚಿಕ್ಕ ಭಾಗವನ್ನು ಬರೆಯುವುದು. (d) ಭಂಡಾರ್ಕರರವರ ಪ್ರಥಮ ಪುಸ್ತಕದಲ್ಲಿ 13ರಿಂದ 31ರ ವರೆಗಿನ ಪಾಠಗಳಲ್ಲಿಯ ಅಭ್ಯಾಸಗಳನ್ನು ಭಾಷಾಂತರ ಮಾಡಿ ಬರೆದು ತೋರಿಸುವುದು. (e) ಸಂಧಿ ವಿಷಯಕವಾದ ವಿಧಿಗಳು; ಅಜಂತ ಹಲಂತ ನಾಮವಾಚಕ ಗುಣವಾಚಕಗಳು ಮತ್ತು ಸರ್ವನಾಮಗಳು ಇವುಗಳ ವಿಭಕ್ತಿರೂಪ; ದಶವಿಕರಣಿಗಳಲ್ಲಿಯ ಧಾತುಗಳಿಗೂ ಲಟ್, ಲೋಟ್, ಲಙ್ ವಿಧಿ ಲಿಙ್‌ಗಳಲ್ಲಿ ರೂಪಗಳು. (ಭಂಡಾರ್ಕರರವರ ಪ್ರಥಮ ಪುಸ್ತಕದಲ್ಲಿರುವಂತೆ) (3 ಘಂಟೆಗಳ ಕಾಲ)
	ಯಾವುದಾದರೂ ಒಂದು ಸಮ್ಮತವಾದ ಇಂಗ್ಲಿಷ್ ಪ್ರೈಮರನ್ನು ಓದುವುದು; ದೇಶಭಾಷೆಗೆ ಮುಖತಃ ಭಾಷಾಂತರ ಮಾಡುವುದು; ಮತ್ತು ಪದಗಳ ಅರ್ಥವನ್ನೂ ಗ್ರಂಥ ವಿಷಯವನ್ನೂ ತಿಳಿಯುವುದು. [ಬೇಸಲ್ ಮಿಷನ್ ಡಿಪೋವಿನಲ್ಲಿ ದೊರೆಯುವ ಹೊಸ ಆಂಗ್ಲೋ ಕೆನರೀಸ್ ಪ್ರೈಮರನ್ನು ಓದಬಹುದು] (3 ಘಂಟೆಗಳ ಕಾಲ).	(a) ಯಾವುದಾದರೂ ಒಂದು ಸಮ್ಮತವಾದ 1ನೆಯ ಇಂಗ್ಲಿಷ್ ರೀಡರನ್ನು ಓದುವುದು, ದೇಶಭಾಷೆಗೆ ಮುಖತಃ ಭಾಷಾಂತರ ಮಾಡುವುದು; ಮತ್ತು ಪದಗಳ ಅರ್ಥವನ್ನೂ ಗ್ರಂಥ ವಿಷಯವನ್ನೂ ತಿಳಿಯುವುದು. [ಆಂಗ್ಲೋ ಕೆನರೀಸ್ ಸ್ಟ್ಯಾಂಡರ್ಡ್ ರೀಡರನ್ನು ಓದಬಹುದು. (ಇದು ಬಾಸಲ್ ಮಿಷನ್ ಡಿಪೋವಿನಲ್ಲಿ ದೊರೆಯುತ್ತದೆ)] (b) ರೀಡರಿನಲ್ಲಿ ಕೊಟ್ಟಿರುವ ದೇಶ ಭಾಷೆಯ ಬಹಳ ಸುಲಭವಾದ ವಾಕ್ಯಗಳನ್ನು ಇಂಗ್ಲೀಷಿಗೆ ಮುಖತಃ ಭಾಷಾಂತರ ಮಾಡುವುದು. (3 ಘಂಟೆಗಳ ಕಾಲ)	(a) ಯಾವುದಾದರೂ ಒಂದು ಸಮ್ಮತವಾದ 2ನೆಯ ಇಂಗ್ಲಿಷ್ ರೀಡರನ್ನು ಓದುವುದು, ದೇಶಭಾಷೆಗೆ ಮುಖತಃ ಭಾಷಾಂತರ ಮಾಡುವುದು; ಮತ್ತು ಪದಗಳ ಅರ್ಥವನ್ನೂ ಗ್ರಂಥವಿಷಯವನ್ನೂ ತಿಳಿಯುವುದು. [ಮೆಕ್ಮಿಲ್ಲನ್ ಅಂಡ್ ಕೋ ಎಂಬವರ ಸೆಕಂಡ್ ನ್ಯೂ ಓರಿಯಂಟ್ ರೀಡರ್.] (b) ಅಂಕ್ಲೆ ಎಂಬವರ ಆಂಗ್ಲೋ ಕೆನರೀಸ್ ಟ್ರಾನ್ಸ್ಲೇಷನ್ ಸೀರೀಸಿನ 2ನೆಯ ಪುಸ್ತಕದಲ್ಲಿ ಮೊದಲು 16 ಪಾಠಗಳಲ್ಲಿಯ ಅಭ್ಯಾಸಗಳನ್ನು ಇಂಗ್ಲಿಷಿಗೆ ಭಾಷಾಂತರ ಮಾಡುವುದು. (ಈ ಪುಸ್ತಕವು ಬೊಂಬೆ ಗವರನ್ಮೆಂಟ್ ಬುಕ್ ಡಿಪೋವಿನಲ್ಲಿ ದೊರೆಯುತ್ತದೆ.) (c) ಪಾಠ ಪುಸ್ತಕದಿಂದ ಪದ್ಯಕಾವ್ಯದ 50 ಪಙ್ಕ್ತಿಗಳನ್ನು ಒಪ್ಪಿಸುವುದು. (3 ಘಂಟೆಗಳ ಕಾಲ)

ವಿಷಯಗಳು.	ಲೋವರ್ ಪ್ರೈಮರಿ.		
	ಮಕ್ಕಳ ಇಯತ್ತೆ ಅಥವಾ ವರ್ಗ.		1ನೆಯ ಇಯತ್ತೆ ಅಥವಾ ವರ್ಗ.
	A.	B.	
ಬರವಣಿಗೆ ಮತ್ತು ಅಕ್ಷರ ಸಂಯೋಜನ.	..	...	...
ವ್ಯಾಕರಣ.	..	..	...

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 7ನೆ ಜನವರಿ 1904.

ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ವಿವರಿಸಿರುವ ರಿಜಸ್ಟ್ರಿಯಾದ ದಸ್ತೈವಜುಗಳು ಎರಡು ವರುಷಗಳಿಗೆ ಮೇಲ್ಪಟ್ಟು ಈ ಕೆಳಗೆ ನಮೂದಾಗುವ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ವಾರಸುದಾರರು ಹಾಜರಾಗಿ ವಾಪಸು ಪಡೆಯದೆ ನಿಂತಿರುತ್ತವೆ. ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಸದರಿ ದಸ್ತೈವಜು ಹಾಜರ್ಮಾಡಿದವರಾಗಲಿ ಅವರ ಪ್ರತಿನಿಧಿಗಳಾಗಲಿ ಅಥವಾ ದಸ್ತೈವಜುಗಳಿಗೆ ಬಾಧ್ಯತೆವುಳ್ಳವರಾಗಲಿ ಸಬ್ ರಿಜಸ್ಟ್ರಾರು ಆಫೀಸುಗಳಲ್ಲಿ ಹಾಜರಾಗಿ ತಮ್ಮ ದಸ್ತೈವಜುಗಳನ್ನು ವಾಪಸು ಪಡೆಯಬೇಕು. ತಪ್ಪಿದರೆ ರಿಜಸ್ಟ್ರೇಷನ್ ಆಕ್ಟು 85ನೆ ಸೆಕ್ಷನ್ ಮೇರೆ ಸದರಿ ದಸ್ತೈವಜುಗಳು ನಾಶಪಡಿಸಲ್ಪಡುತ್ತೆ.

ಸಬ್ ರಿಜಿಸ್ಟ್ರಿ ಆಫೀಸು ಹೆಸರು.	ಬುಕ್ಕು ನಂಬರು.	ದಸ್ತಾವೇಜುಗಳ ನಂಬರು ಮತ್ತು ಸಾಲ್.	ದಸ್ತಾವೇಜು ಬರಿಯಲ್ಪಟ್ಟ ತಾರೀಖು.	ದಸ್ತಾವೇಜು ರಿಜಸ್ಟರ್ಮಾಡಿದ ತಾರೀಖು.	ದಸ್ತಾವೇಜು ಬರದುಕೊಟ್ಟವರ ಹೆಸರು.	ದಸ್ತಾವೇಜು ಬರಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
			ತುಮಕೂರು ಸಬ್ ರಿಜಿಸ್ಟ್ರಿ ಆಫೀಸು.				
ತುಮಕೂರು ...	1	1057 / 1900—1901	1901ನೆ ಫೆಬ್ರವರಿ 23	1901ನೆ ಮೇ 20	ತಿಮ್ಮ	ಕಾಳಯ್ಯ	18—8—0 ರೂಪಾಯಿನ ಕ್ರಯ
	1	48 / 1901—1902	1901ನೆ ಜುಲೈ 8	1901ನೆ ಜುಲೈ 9	ದಾಸಪ್ಪ	ಮುದ್ದಬಸಪ್ಪ	100 ರೂಪಾಯಿನ ಕ್ರಯ.
	1	50 / 1901—1902	1901ನೆ ಜುಲೈ 6	1901ನೆ ಜುಲೈ 9.	1. ಕೆಂಪಕ್ಕ 2. ದಾಸಪ್ಪ	ಡಿಟೋ	100 ರೂಪಾಯಿನ ಕ್ರಯ.
	1	539 / 1901—1902	1901ನೆ ಡಿಶಂಬರ್ 15	1901ನೆ ಡಿಶಂಬರ್ 19	ನಂಜುಂಡಯ್ಯ	ಮುದ್ದಣ್ಣ	25 ರೂಪಾಯಿನ ಕ್ರಯ.
			ಚಿಕ್ಕನಾಯಕನ ಹಳ್ಳಿ.				
ಚಿಕ್ಕನಾಯಕನಹಳ್ಳಿ.	2	1 / 1900—1901	1901ನೆ ಫೆಬ್ರವರಿ 6	ತಿರಸ್ಕರಿಸಿಧೆ. 6—2—1901	ವಡೇರಹಳ್ಳಿ ಭದ್ರಿಪಾಳ್ಯದ ಬೋರಯ್ಯನ ಮಗ ಸಿದ್ದಯ್ಯ	ಮೊಕವಳ್ಳಿ ಭದ್ರಿ ಮರುಳೈನ ಹೆಂಡತಿ ಲಕ್ಕಮ್ಮ	175 ರೂಪಾಯಿನ ಜೀವನಾಂಶ.
	1	422	1901ನೆ ಏಪ್ರಿಲ್ 27	1901ನೆ ಜೂನ್ 28	ಚಿಕ್ಕನಾಯಕನಹಳ್ಳಿ ದೊಡ್ಡ ಫಿರಾಖಾನಾಬಿ ವೊರಫ್ ಅಕ್ಕಾಬಿ	ಚಿಕ್ಕನಾಯಕನ ಹಳ್ಳಿಲಿರುವ ಚನ್ನರಾಯಪಟ್ಟಣದ ಸೂರಶೆಟ್ಟರು	80 ರೂಪಾಯಿನ ಆಧಾರ.
	3	.	1898ನೆ ನವಂಬರ್ 26	ಹಾಜರ್ಮಾಡಿದ ವೆಂಕಟರಮಣೈಯ್ಯ ರಿಜಿಸ್ಟರು ಅವಶ್ಯಕವಿಲ್ಲವೆಂದು ವಾಪಸು ಅಪೇಕ್ಷಿಸಿದ ಸಬಬು	ಚಿಕ್ಕನಾಯಿಕನಹಳ್ಳಿ ಕಮ್ಮವಾರು ವೆಂಕಟರಮಣೈಯ್ಯ	..	ವಿಲ್.
			ಶಿರಾ.				
ಶಿರಾ ...	1	359 / 1900—1901	1901ನೆ ಫೆಬ್ರವರಿ 25	1901ನೆ ಫೆಬ್ರವರಿ 26	ಶಿರಾ ತಾಲ್ಲೂಕು ಚಿಕ್ಕನಕೋಟೆ ಗ್ರಾಮದ ಕರೇಗೌಡನ ಮಗ ಪಟ್ಟಣದ ಚಿಕ್ಕಪ್ಪ	ಶಿರಾ ತಾಲ್ಲೂಕು ಚಿಕ್ಕನಕೋಟೆ ಗ್ರಾಮದ ತೋಟಪ್ಪನ ಮಗ ಕರಿಯಪ್ಪ	40 ರೂಪಾಯಿನ ಕ್ರಯ.
		563 / 1900—1901	1901ನೆ ಜೂನ್ 10	1901ನೆ ಜೂನ್ 11.	ಶಿರಾ ತಾಲ್ಲೂಕು ಕೋಠಿವ ಗ್ರಾಮದಲ್ಲಿರುವ ಶೇಷಪ್ಪನ ಮಗ ಸುಬ್ಬಣ್ಣ	ಶಿರಾ ತಾಲ್ಲೂಕು ಮೇಲ್ಕೋಟೆ ಮಜರೆ ಕುರುಡನ ಹಳ್ಳಿ ಗ್ರಾಮದಲ್ಲಿರುವ ಉಪ್ಪಾರ ಚಿಕ್ಕಣ್ಣನ ಮಗ ರಂಗ	50 ರೂಪಾಯಿನ ಕ್ರಯ.

ಸಬ್ ರಿಜಿಸ್ಟ್ರಿ ಆಫೀಸು ಹೆಸರು.	ಬುಕ್ಕು ನಂಬರು.	ದಸ್ತಾವೇಜುಗಳ ನಂಬರು ಮತ್ತು ಸಾಲ್.	ದಸ್ತಾವೇಜು ಬರಿಯಲ್ಪಟ್ಟ ತಾರೀಖು.	ದಸ್ತಾವೇಜು ರಿಜಿಸ್ಟರ್ಮಾಡಿದ ತಾರೀಖು.	ದಸ್ತಾವೇಜು ಬರದುಕೊಟ್ಟವರ ಹೆಸರು.	ದಸ್ತಾವೇಜು ಬರಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಮೊಬಲಗು.
				ಗುಬ್ಬಿ.			
ಗುಬ್ಬಿ ..	2	4	1900ನೆ ಆಗಸ್ಟು 1	ತಿರಸ್ಕರಿಸಿಧೆ.	ದೊಡ್ಡ ಅಡವಿ ಶೆಟ್ಟಿ	ಮಹಮದ್ ಹಸೇಸಾಬಿ	100 ರೂಪಾಯಿನ ಕ್ರಯ.
	1	253	1900ನೆ ಮಾರ್ಚಿ 26	1901ನೆ ಸೆಪ್ಟೆಂಬರು 18	ಹನುಮಂತ	ಹಸೇಸಾಬಿ	150 ರೂಪಾಯಿನ ಕ್ರಯ.
				ತಿಪಟೂರು.			
ತಿಪಟೂರು ..	2	3	1900ನೆ ಮೇ 23	ತಿರಸ್ಕರಿಸಿಧ.	ತುಮಕೂರು ಮುನಸೀಫ್ ಕೋರ್ಟ್ ಸೇಲ್ ಸರ್ಟಿಫಿಕೇಟ್	ಹರಾಜಿನಲ್ಲಿ ಪಡೆದ ಲಿಂಗದಹಳ್ಳಿ ಮರಿಲಿಂಗಣ್ಣ	325 ರೂಪಾಯಿನ ಕ್ರಯ.
	1	126	1901ನೆ ಜುಲೈ 29	1901ನೆ ಜುಲೈ 29	ನೆಲ್ಲಕೆರೆ ಲಕ್ಕೇಗೌಡನ ಮಗ ವಿಜಯಗೌಡ	ಚನ್ನರಾಯಪಟ್ಣದ ತಾಲ್ಲೂಕು ಕನ್ನುಗಟ್ಟದ ಪಟೇಲ್ ತಿಮ್ಮೇಗೌಡ	50 ರೂಪಾಯಿನ ಕ್ರಯ.
				ಪಾವಗಡ.			
ಪಾವಗಡ ..	1	30	1901ನೆ ಅಕ್ಟೋಬರ 30	1901ನೆ ಅಕ್ಟೋಬರು 30	ತಿಪ್ಪಯ್ಯನ ದುರ್ಗದ ಕರಡಿಗೊಲ್ಲರ ಪೂಜಾರಿ ಪೊನ್ನಪ್ಪನ ಮಗ ಅಜ್ಜಪ್ಪ	ಹೊಸಕೋಟೆ ಗ್ರಾಮದ ವಾಸಸ್ಥ ವೈಶ್ಯರ ಕೊಲಿಪಾಕಲು ಬಾಲಪ್ಪನ ಮಗ ನಂಜಪ್ಪ	200 ರೂಪಾಯಿನ ಆಧಾರ.
				ಕುಣಿಗಲ್.			
ಕುಣಿಗಲ್ ..	1	33 / 1901—1902	1901ನೆ ಜುಲೈ 9	1901ನೆ ಜುಲೈ 13	ತಿಮ್ಮರಾಜು ಶೆಟ್ಟಿ	ನರಸಮ್ಮ	40 ರೂಪಾಯಿನ ದಾನ.
	1	126 / 1901—1902	1901ನೆ ಆಗಸ್ಟು 15	1901ನೆ ಆಗಸ್ಟು 15	ಹಳ್ಳಿಗೌಡ	ತೋಳಮ್ಮ	75 ರೂಪಾಯಿನ ದಾನ.
				ಕೊರಟಗೆರೆ.			
ಕೊರಟಗೆರೆ ..	1	77 / 1901—1902	1901ನೆ ಅಕ್ಟೋಬರ 3	1901ನೆ ಅಕ್ಟೋಬರ 3	ಹಜಾಮರ ಮುದ್ದರಂಗ	ತಿಗಳರ ನರಸೈಯ್ಯ	6 ರೂಪಾಯಿನ ಕ್ರಯ.
	1	49 / 1901—1902	1901ನೆ ಅಕ್ಟೋಬರ 12	1901ನೆ ನವಂಬರು 4	ಮಹಮದ್‌ಮೊಹಿದೀನ್ ಪುಲಫ್ ಜಾಗ್ಲಿಸಾಬಿ	ಹುಸೇನ್‌ಸಾಬಿ	200 ರೂಪಾಯಿನ ಆಧಾರ.
ಮಧುಗಿರಿ ..	...	..	..	..	...	...	..
ತುರ್ವೆಕೆರೆ ..	..	...	..	...	..	..	...

ಎಂ. ಎಸ್. ನಾರಾಯಣರಾವ್,
ರಿಜಿಸ್ಟ್ರಾರ್.

133

ಕೋಲಾರ ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೆ.

ತಾರೀಖು 23ನೆ ಡಿಸೆಂಬರ್ 1903ನೆ ಇಸವಿ.

ಕೋಲಾರ ತಾಲ್ಲೂಕಿಗೆ ಸೇರಿದ ಪ್ರಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಜೋಡಿ ಗ್ರಾಮಗಳು, ಸರಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ ತಾಲ್ಲೂಕು ಅಮಲ್ದಾರ್ರ

1. ಜೋಡಿ ಸೋಮಶಾಸ್ತ್ರಿ, ಹೊಸೂರು | ಹೋಳೂರು ಹೋಬಳಿ
2. ಜೋಡಿ ಜಯಸಂದ್ರ |
3. ಜೋಡಿ ತಂಬಿಹಳ್ಳಿ | ಹುತ್ತೂರು ಹೋಬಳಿ

ಕಚೇರಿಯಲ್ಲಿ 1904ನೆ ಇಸವಿ ಫೆಬ್ರವರಿ ಮಾಹೆ 22ನೆ ತಾ॥ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತ ನೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿ ಇದೆ.

(ಹೆಚ್ಚು ತಪಶೀಲ್ ಬಗ್ಯೆ 1904ನೆ ಜನವರಿ 21ನೆ ಮರ್ಕುಂ 3ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 24–25–26ನೆ ಪೇಜು ನೋಡತಕ್ಕದ್ದು.

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನರ್.

ಬೆಂಗಳೂರು ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1903—1904ನೆ ಇಸವಿ ಅರ್ಜೀ ನಂಬರ್ 241.

ಮೃತಪಟ್ಟ ಸ್ಟಾಂಪು ವೆಂಡರ್ ಚೂಡಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರಲ್ಲಿರುವ ಪುಲ್ಲಿಂಗಾ ಮೈನರ್, ಗಾರ್ಡಿಯನ್ ಲಕ್ಷ್ಮಮ್ಮನವರು, ಮೃತಪಟ್ಟ ಸದರೀ ಸ್ಟಾಂಪು ವೆಂಡರ್ ಚೂಡಪ್ಪನವರಿಗೆ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ ಸ್ಟಾಂಪು ವೆಂಡರ್ ಚೂಡಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟಿ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪುಲ್ಲಿಂಗಾ ಮೈನರ್, ಗಾರ್ಡಿಯನ್ ಲಕ್ಷ್ಮಮ್ಮನವರ ಅರ್ಜಿಯನ್ನು ಸನ್ 1904ನೆ ಇಸವಿ ಮಾರ್ಚಿ ತಿಂಗಳು ತಾರೀಖು 3ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸ್ಟಾಂಪು ವೆಂಡರ್ ಚೂಡಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ಜನವರಿ ತಿಂಗಳು 19ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1903—1904ನೆ ಇಸವಿ ಅರ್ಜೀ ನಂಬರ್ 252.

ಮೃತಪಟ್ಟ ಸಿದ್ದಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಹೊಸಕೋಟೆ ತಾಲ್ಲೂಕು ಸೂಲಿಬೆಲೆಲಿರುವ ಮರಿಲಿಂಗಮ್ಮನವರು, ಮೃತಪಟ್ಟ ಸದರೀ ಸಿದ್ದಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಹೊಸಕೋಟೆ ತಾಲ್ಲೂಕು ಸೂಲಿಬೆಲೆಲಿ ವಾಸಸ್ಥರಾಗಿ ಮೃತಪಟ್ಟ ಸಿದ್ದಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮರಿಲಿಂಗಮ್ಮನವರ ಅರ್ಜಿಯನ್ನು 1904ನೆ ಇಸವಿ ಮಾರ್ಚಿ ತಿಂಗಳು ತಾರೀಖು (3) ಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಿದ್ದಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ಜನವರಿ 19ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1903—1904ನೆ ಇಸವಿ ಅರ್ಜೀ ನಂಬರ್ 255.

ಮೃತಪಟ್ಟ ತಿಮ್ಮದಾಸಪ್ಪನೆಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ಚಿಕ್ಕಯ್ಯನ ಪೇಟೆಯಲ್ಲಿರುವ ತೇರಮ್ಮ ನೆಂಬುವರು, ಮೃತಪಟ್ಟ ಸದರೀ ತಿಮ್ಮದಾಸಪ್ಪನವರಿಗೆ 3ನೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ ತಿಮ್ಮದಾಸಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ತೇರಮ್ಮನೆಂಬುವರ ಅರ್ಜಿಯನ್ನು ಸನ್ 1904ನೆ ಇಸವಿ ಮಾರ್ಚಿ ತಿಂಗಳು ತಾರೀಖು 3ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮದಾಸಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ಜನವರಿ ತಿಂಗಳು 19ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1903 – 1904ನೆ ಇಸವಿ ಅರ್ಜೀ ನಂಬರ್ 256.

ಮೃತಪಟ್ಟ ಮುದ್ದಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರಿನಲ್ಲಿ ಇರುವ ಬಸಪ್ಪ ಮೈನರ್, ಗಾರ್ಡಿಯನ್ ರೇವಣ್ಣನೆಂಬುವರು, ಮೃತಪಟ್ಟ ಸದರೀ ಮುದ್ದಪ್ಪನವರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ ಮುದ್ದಪ್ಪನವರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಬಸಪ್ಪ ಮೈನರ್, ಗಾರ್ಡಿಯನ್ ರೇವಣ್ಣನವರ ಅರ್ಜಿಯನ್ನು ಸನ್ 1904ನೆ ಇಸವಿ ಮಾರ್ಚಿ ತಿಂಗಳು ತಾರೀಖು 3ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುದ್ದಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಜನವರಿ ತಿಂಗಳು 19ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1903 – 1904ನೆ ಇಸವಿ ಅರ್ಜೀ ನಂಬರ್ 257.

ಮೃತಪಟ್ಟ ಗೆಂಡೆ ಶೇಷಗಿರಿರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಹಾಲಿ ಬನ್ನೂರಲ್ಲಿರುವ ವೆಂಕಮ್ಮನವರು, ಮೃತಪಟ್ಟ ಸದರೀ ಗೆಂಡೆ ಶೇಷಗಿರಿರಾಯರಿಗೆ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸೀಗೇಪೇಟೆಯಲ್ಲಿ ವಾಸಸ್ಥರಾಗಿ ಮೃತಪಟ್ಟ ಗೆಂಡೆ ಶೇಷಗಿರಿರಾಯರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲಿ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಮ್ಮನವರ ಅರ್ಜಿಯನ್ನು ಸನ್ 1904ನೆ ಇಸವಿ ಮಾರ್ಚಿ ತಿಂಗಳು ತಾರೀಖು 3ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗೆಂಡೆ ಶೇಷಗಿರಿರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಜನವರಿ ತಿಂಗಳು 22ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1903 – 1904ನೆ ಇಸವಿ ಅರ್ಜೀ ನಂಬರ್ 259.

ಮೃತಪಟ್ಟ ಮುನೇಗೌಡ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ತಾಲ್ಲೂಕು ರೂಪೇನ ಅಗ್ರಹಾರದಲ್ಲಿರುವ 1ನೆ ಚಿನ್ನಮ್ಮ, 2ನೆ ರಾಮಯ್ಯ, ಮೃತಪಟ್ಟ ಸದರೀ ಮುನೇಗೌಡರಿಗೆ ಮುಖ್ಯ ವಾರಸದಾರ್ರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ತಾಲ್ಲೂಕು ರೂಪೇನ ಅಗ್ರಹಾರದಲ್ಲಿ ವಾಸಸ್ಥರಾಗಿ ಮೃತಪಟ್ಟ ಮುನೇಗೌಡರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಚಿನ್ನಮ್ಮ, 2ನೆ ರಾಮಯ್ಯನವರ ಅರ್ಜಿಯನ್ನು 1904ನೆ ಇಸವಿ ಮಾರ್ಚಿ ತಿಂಗಳು ತಾರೀಖು 3ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುನೇಗೌಡರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಜನವರಿ 22ನೆ ತಾರೀಖಿನಲ್ಲಿ ಕೋರ್ಟು ಮೊಹರನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ಆರ್. ಸುಬ್ಬಯ್ಯ ಐಯ್ಯರ್,
ಡಿಸ್ಟ್ರಿಕ್ಟ್ ಜಡ್ಜಿ.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1903 – 1904ನೆ ಇಸವಿ ಮಿ॥ ಅರ್ಜೀ ನಂಬರ್ 400.

ಅರ್ಜೀದಾರ್ರು ಬೆಂಗಳೂರು ಗೊಲ್ಲರಪೇಟೆಲಿರುವ ಸಾದಣ್ಣನವರ ವೆಂಗಟಪ್ಪ, ಮೈನರಾದ ಬೆಂಗಳೂರು ಗೊಲ್ಲರಪೇಟೇಲಿರುವ ಸಾದಣ್ಣನವರ ವೀರಣ್ಣನ ಮಕ್ಕಳು 1ನೆ ಮುನಿಯಪ್ಪ, 2ನೆ ಮುನಿನಂಜಪ್ಪನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ 1ನೆ ಮುನಿಯಪ್ಪ ವಗೈರೇರಿಗೆ ಚಿಕ್ಕತಂದೆ ಆಗಬೇಕೆಂಬ ಹಕ್ಕಿನ ಮೇಲೆ ಅರ್ಜೆದಾರ್ ವೆಂಗಟಪ್ಪನೆಂಬವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸನ್ 1904ನೆ ಇಸವಿ ಜನವರಿ ತಾರೀಖು 2ರಲ್ಲು ಮೊಕದ್ದಮೆ ಮಾಡಿ ಇರುವದಾಗಿ ಇದರಿಂದ ನೋಟೀಸ್ ಕೊಡೋಣಾಗಿಧೆ.

ಸನ್ 1904ನೆ ಇಸವಿ ಜನವರಿ ತಿಂಗಳು 19ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಪಿ. ಸಿಂಗ್ರಾಚಾರ್,
ಸಬ್ ಜಡ್ಜಿ.

ಚಿಕ್ಕಮಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1903—1904ನೆ ಇಸವಿ ಅರ್ಜೀ ನಂಬರ 371.

ಮೃತಪಟ್ಟ ಮರಿಶಿದ್ದಪ್ಪನ ಆಸ್ತೀ ವಿಷಯದಲ್ಲಿ :—

ಅರ್ಜೀದಾರ್ರು ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಚಿಕ್ಕಮಗಳೂರು ಕಸಬಾದಲ್ಲಿರುವ ಶಿದ್ದಲಿಂಗಪ್ಪಶೆಟ್ಟಿ, ಮೃತಪಟ್ಟ ಮರಿಶಿದ್ದಪ್ಪನವರಿಗೆ ಮಗ ಆಗಬೇಕೆಂಬ ಹಕ್ಕುದಾರಿಯ ಮೇಲೆ ಚಿಕ್ಕಮಗಳೂರು ಕಸಬಾ ವಾಸಸ್ಥರಾಗಿ ಮೃತಪಟ್ಟ ಮರಿಶಿದ್ದಪ್ಪನ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಪಿಟಿಷನ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಿದ್ದಲಿಂಗಪ್ಪಶೆಟ್ಟಿಯವರ ಅರ್ಜಿಯನ್ನು ಸನ್ 1904ನೆ ಇಸವಿ ಫೆಬ್ರವರಿ ತಿಂಗಳು ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಚಾರಣೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮರಿಶಿದ್ದಪ್ಪನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಜನವರಿ 18ನೆ ತಾರೀಖಿನಲ್ಲಿ ಕೋರ್ಟು ಮೊಹರ್ಸಿ ನನ್ನ ದಸ್ತಖತ್ತಿನೊಡನೆ ಕೊಡೋಣಾಗಿಧೆ.

ಟಿ. ಪರಮಶಿವ ಅಯ್ಯರ್,
ಸಬ್ ಜಡ್ಜ್.

ಹಾಸನ ಡಿವಿಜನ್.

ಪ್ರಸಿದ್ಧ ಪತ್ರಿಕೆ.

ತಾರೀಖು 9ನೆ ಜನವರಿ 1904ನೆ ಇಸವಿ.

I. ಹಾಸನ ತಾಲ್ಲೂಕು ರಿಜಸ್ಟರ್ 669ನೆ ನಂಬರು ಅಂಬುಗದ ತಲಾವ್ ಕಾಂಗಾರಿ ಉದ್ದಿಶ್ಯ 1904ನೆ ಇಸವಿ ಫೆಬ್ರವರಿ ಮಾಹೆ 15ನೆ ತಾರೀಖು ವರಿವಿಗೂ ದರಖಾಸ್ತುಗಳು ಹಾಸನ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಂದ ತೆಗದುಕೊಳ್ಳಲ್ಪಡುತ್ತವೆ. ಈ ಕೆಳಗೆ ಕಂಡ ಅಂದಾಜಿನಲ್ಲಿನ ಐಟಂಗಳ ಮೊತ್ತವನ್ನ ಕಾಣಿಸಲ್ಪಟ್ಟಿರುತ್ತದೆ, ಇದು ನಿಷ್ಕರ್ಷೆಯಾದದ್ದಾಗಿರುವದಿಲ್ಲಾ. ಡಿಟೋ ಕಾಂಗಾರಿಯು 1906ನೆ ಇಸವಿ ಮಾರ್ಚಿ ತಿಂಗಳು ಆಖೈರೊಳಗಾಗಿ ಪೂರೈಸತಕ್ಕದ್ದು.

II. ಪ್ಲ್ಯಾನ್ ಮತ್ತು ತಪಶೀಲು ಅಂದಾಜು ಮತ್ತು ಷರತ್ತುಗಳು ವಗೈರೆ ಹಾಸನ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ ಆಫೀಸಿನಲ್ಲಿ ಕಛೇರಿಯ ದಿವಸಗಳ ಪ್ರಾತಃಕಾಲ 11 ಘಂಟೆ ಮೊದಲಾಗಿ ಸಾಯಂಕಾಲ 5 ಘಂಟೆ ವರಿವಿಗೆ ನೋಡಲು ಅವಕಾಶ ಕೊಡಲ್ಪಡುತ್ತೆ.

III. ದರಖಾಸ್ತುಗಳನ್ನು ಅಚ್ಚು ಹಾಕಿದ ಫಾರಂನಲ್ಲೇ ಬರಿಯಬೇಕು. ಈ ಫಾರಂಗಳು ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ ಆಫೀಸಿನಲ್ಲಿ ದೊರಿಯುತ್ತವೆ. ದರಖಾಸ್ತುಗಳಿಗೆ ಈ ಕೆಳಗೆ ಕಾಣಿಸಲ್ಪಟ್ಟಿರುವ ನಮೂನೆಯ ಪ್ರಕಾರ ಒಂದು ಸ್ಟೇಟ್‌ಮೆಂಟ್ ಲಗತ್ತು ಮಾಡಿರಬೇಕು. ಅದರಲ್ಲಿ ಕಂಟ್ರಾಕ್ಟುದಾರನು ಯಾವರೇಟಿ ಪ್ರಕಾರ ಪ್ರತಿ ಐಟಂಗಳ ಕೆಲಸವೆಸ್ಸು ಮಾಡಿಸಬಲ್ಲನೋ ಆ ರೇಟನ್ನು ಅಥವಾ ಆ ದರವನ್ನು ನಮೂದು ಮಾಡಬೇಕು.

ಫಾರಂ.

ಕೆಲಸದ ವಿವರ.	ಪ್ರತಿಯೊಂದು.	ಮೊತ್ತ.	ಕಂಟ್ರಾಕ್ಟುದಾರ ಕೆಲಸ ಮಾಡುವದಕ್ಕೆ ಒಪ್ಪುವ ದರ.			

IV. ಪ್ರತಿ ಒಂದು ದರಖಾಸ್ತಿನ ಸಂಗಡಲು 200 ರೂಪಾಯಿಗಳ ಕರೆನ್ಸಿ ನೋಟುಗಳಾಗಲಿ, ಗವರ್ನಮೆಂಟ್ ಪ್ರಾಮಿಸರಿ ಆಗಲಿ ಅಥವಾ ನಗದಾಗಲಿ ಡಿಪಾಜಿಟ್ ಹಣವನ್ನು ಠೇವಣಾತಿಯಾಗಿ ಹಾಜರ್ಮಾಡಬೇಕು. ಮತ್ತು ಲಕೋಟೆ ಮೇಲೆ "ಅಂಬುಗದ ತಲಾವ್ ಅಭಿವೃದ್ಧಿ ಕಾಂಗಾರಿ ಬಗ್ಯೆ ದರಖಾಸ್ತು" ಎಂದು ಬರೆಯಬೇಕು; ತಪ್ಪಿದಲ್ಲಿ ಅಂಥಾ ದರಖಾಸ್ತುಗಳನ್ನ ತಿರಸ್ಕರಿಸಲಾದೀತು.

V. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡತಕ್ಕದ್ದಕ್ಕೆ ಚೀಫ್ ಇಂಜನಿಯರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ. ಹಾಗೆ ಮಂಜೂರ್ಮಾಡತಕ್ಕದ್ದರಲ್ಲಿ ಕೀಳ್ಪಟ್ಟ ದರಖಾಸ್ತನ್ನೇ ಆಗಲಿ ಅಥವಾ ಅನ್ಯಾವ ದರಖಾಸ್ತನ್ನೇ ಆಗಲಿ ಒಪ್ಪಿಕೊಳ್ಳಬೇಕೆಂಬ ನಿರ್ಬಂಧವಿರುವದಿಲ್ಲ ಅಲ್ಲದೆ ತಿರಸ್ಕರಿಸಿದ ದರಖಾಸ್ತುಗಳಿಗೆ ಕಾರಣಗಳನ್ನು ಕೊಡುವದಿಲ್ಲಾ.

VI. ಯಾವ ದರಖಾಸ್ತನ್ನೇ ಆಗಲಿ ಮಂಜೂರ್ಮಾಡಿದ (8) ಎಂಟು ದಿನಗಳ ವಳಗಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಕಂಟ್ರಾಕ್ಟು ಬಾಂಡ್ ಎಂಬ ಕರಾರು ಪತ್ರವನ್ನ ಬರದುಕೊಡಬೇಕು. ತಪ್ಪಿದಲ್ಲಿ ಅವನ ದರಖಾಸ್ತು ರದ್ದು ಮಾಡಲ್ಪಟ್ಟು ಠೇವಣಾತಿ ಹಣವನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುತ್ತೆ.

VII. ಮಂಜೂರಾದ ದರಖಾಸ್ತುದಾರನ ಹೆಸರು ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ ಆಫೀಸ್ ಮುಂಭಾಗದಲ್ಲಿ ನೋಟೀಸ್ ಬೋರ್ಡ್ ಮೇಲೆ ಬರೆದು ಚಿಕಟಾಯಿಸಲ್ಪಡುತ್ತೆ. ಅಂಗೀಕರಿಸಿದ ಅಥವಾ ತಿರಸ್ಕರಿಸಿದ ದರಖಾಸ್ತುದಾರರುಗಳ ವಿಷಯದಲ್ಲಿ ಯಾವದೊಂದು ಜವಾಬ್ ದೊರಿಯಲಾರದು.

VIII. ಯಾವದಾದರೂ ದರಖಾಸ್ತು ಮಂಜೂರಾದನಂತರ ತಿರಸ್ಕರಿಸಲ್ಪಟ್ಟ ದರಖಾಸ್ತುದಾರರ ಹಣವನ್ನ ಅವರವರಿಗೆ ವಾಪಸ್‌ಮಾಡಲ್ಪಡುತ್ತೆ.

ತಾರೀಖು 9ನೆ ಜನವರಿ 1904.

ಹಾಸನ ತಾಲ್ಲೂಕು ರಿಜಿಸ್ಟರ್ 665ನೆ ನಂಬರ್ ಅಂಬುಗದ ತಲಾವಿನ ಅಭಿವೃದ್ಧಿ ಕಾಮಗಾರಿಯ ಅಂದಾಜಾ ಗೋಷ್ವಾರೆ.

ಕೆಲಸದ ವಿವರ.	ಪ್ರತಿಯೊಂದಕ್ಕೆ.	ಮೊತ್ತ.
ಏರಿ.		
ಏರಿಗೆ ಮಣ್ಣು ಹಾಕುವದು—ಪಿಕ್ಕಿಂಗ್ ಮಾಡಿ, ನೀರು ಹಾಕಿ ಸಮ್ಮರೆ, ಘಾಷರೆ ಕೇರಿ ...	ಸಲೆ ಗಜ	15,915
ಡಿಟೋ (ಓ. ಪಿ. 7ರ ಭಾಗಾಯಿತು 12ರ ವರೆಗೆ ಮೇಲ್ಕಂಡಂತೆ ...	ಡಿಟೋ	6,843
ಹುಲ್ಲುಗಟ್ಟುವದು ...	ಚದರ ಗಜ	30,730
ಗೈಡು ಕಲ್ಲುಗಳು, ತಳಭಾಗದ ಸಮೇತ ...	ನಂ.	77
ವಿಸವಿಸಿ ಕಲ್ಲುಗಳು ...	ಡಿಟೋ	77
ಸಂವತ್ಸರ ಮತ್ತು ರಿಜಿಸ್ಟರ್ ನಂಬರ್ ಕಲ್ಲು ...	ಡಿಟೋ	1
ಬೆಂಚು ಮಾರ್ಕು ಕಲ್ಲುಗಳು ...	ಡಿಟೋ	2
ಗೇಜು ಕಲ್ಲುಗಳು ...	ಡಿಟೋ	3
ಹೊಸ ಕಾಡು ಕಲ್ಲುಕೆಲಸ ...	ಸಲೆ ಗಜ	1,932
ಹಳೇ ಕಾಡು ಕಲ್ಲು ಕೆಲಸ, ಹೊಸ ಜಲ್ಲಿ ಸಹ ...	ಡಿಟೋ	561
ಕಲ್ಲು ಕಟ್ಟುವ ಹಿಂಭಾಗಕ್ಕೆ ಗ್ರಾವಲಿನಿಂದ ಭದ್ರಪಡಿಸುವದು ...	ಡಿಟೋ	1,306
ಜಂಗಲ್ ಕತರಾಯಿಸುವದು ...	ಒಟ್ಟು ಮೊಬಲಗು	
ಏರಿಯ ಜಮ್ಲಾ ...		
ತೂಬುಗಳು.		
ನಂ. 2ನೆ ಮತ್ತು 3ನೆ ತೂಬುಗಳಿಗೆ ಹಿಂಗುಂಡಿ ಮುಂಗುಂಡಿಗಳನ್ನು ಕಟ್ಟಿ, ನಂ. 4ನೆ ತೂಬನ್ನು ರಿಪೇರಿ ಮಾಡುವದು.	ಒಟ್ಟು ಮೊಬಲಗು	
ಎಡಗಡೆ ಕೋಡಿ, ಬಹಾವಣೆ 240 ಅಡಿ ಲಾಂಬಿ.		
ಮಣ್ಣು ಕೆಲಸ - ಕೋಡಿಯಿಂದ ಏರಿ ಭರ್ತಿ ...	ಸಲೆ ಗಜ	96
ಡಿಟೋ ಡಿಟೋ ಕಲ್ಲು ಭೂಮಿಯಲ್ಲಿ ...	ಡಿಟೋ	1,190
ಸುರಂಗದ ಕೆಲಸ ...	ಡಿಟೋ	50
ಮಣ್ಣು ಕಟ್ಟಿಗೆ ಮತ್ತು ಸುರ್ಕಿ ಗಾರೆ ಕೆಲಸ ...	ಸಲೆ ಅಡಿ	1,163
ಸುರ್ಕಿ ಗಾರೆಯ ಗಿಲಾವು ...	ಚದರ	9·75
ಸುರ್ಕಿ ಗಾರೆಯಿಂದ ಕಟ್ಟತಕ್ಕ ಹೊಸ ಕಾಡು ಕಲ್ಲುಕೆಲಸ ...	ಸಲೆ ಅಡಿ	2,204
ಹಳೇ ಕಾಡು ಕಲ್ಲು ಕೆಲಸ ...	ಸಲೆ ಗಜ	286
ಹೊಸ ಕಾಡು ಕಲ್ಲು ಕೆಲಸ ...	ಡಿಟೋ	155
ಮಣ್ಣುಕೆಲಸ, ನಾಲಾ ಕೋಡಿ ...	ಡಿಟೋ	7,182
ಛಪಡಿ ಕಲ್ಲುಗಳು, ಸಂತಾನ್ಷ್ ಮಾಡಿದ್ದು ...	ಚದರ ಅಡಿ	573
ಹಾಲಿ ಇರತಕ್ಕ ಕೋಡಿಗೆ ಮಾಡತಕ್ಕ ಚಿಲ್ರೆ ಕಾಮಗಾರಿ ...	ಒಟ್ಟು ಮೊಬಲಗು	
ಎಡಗಡೆ ಕೋಡಿಯ ಜಮ್ಲಾ ...		
ಬಲಗಡೆ ಕೋಡಿ, 30 ಅಡಿ ಲಾಂಬಿ.		
ನಾಲಾ ಕೋಡಿ ...	ಒಟ್ಟು ಮೊಬಲಗು	

ಸಿ. ಎ. ಮಹದೇವ ಶಾಸ್ತ್ರಿ,
ಎಕ್ಸಿಕ್ಯೂಟಿವ್ ಇಂಜನಿಯರ್.

ತಿಳುವಳಿಕೆ.

ಹಣ್ಣು, ಹೂವು, ಮತ್ತು ತರಕಾರಿ ಇವುಗಳ ಬೆಳವಣಿಗೆಯು ಸಕಾಲಕ್ಕೆ ಬಾರದ ಕಾರಣ ಮೇಳೆಕಾಲದ ಲಾಲ್‌ಬಾಗ್ ಪುಷ್ಪ ಪ್ರದರ್ಶನವು 1904ನೆ ಇಸವಿ ಫೆಬ್ರವರಿ 5ನೆ ತಾರೀಖಿಗೆ ಬದಲಾಯಿಸಿರುತ್ತೆಂದು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸಿ ಇದೆ.

ಜೆ. ಕ್ಯಾಮರನ್,
ಸೂಪರಿಂಟೆಂಡೆಂಟ್ ಗವರ್ನ್ಮೆಂಟ್ ಗಾರ್ಡನ್ಸ್.

ಮೈಸೂರ ಗೆಜೆಟ್.

ಸಂ. 39] ಸರ್ಕಾರದಿಂದ ಪ್ರಾಂಬಿಷ್ ಆದ್ದು. [ಸಂ. 4.

ಬೆಂಗಳೂರು, ಗುರುವಾರ, ಜನವರಿ ತಾ|| 28, ಸ್ 1904.

IIIನ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವು ಇಲಾಖೆ.

1903ನೆ ವರುಷದ 5ನೆ ನಂಬರಿನ ರೆಗ್ಯುಲೇಷನ್.

(1903ನೆ ವರುಷದ ಡಿಸೆಂಬರ್ 14ನೆ ತಾರೀಖಿನಲ್ಲಿ ಮಂಜೂರಾದ್ದು).

ಪೆಟ್ಟಿನ ಶಿಕ್ಷೆಗೆ ಸಮ್ಮಂಧಪಟ್ಟ ಕಾನೂನನ್ನು ಸರಿಪಡಿಸುವದಕ್ಕಾಗಿ ಆಗಿರುವ ರೆಗ್ಯುಲೇಷನ್.

ಪೀಠಿಕೆ.

ಪೆಟ್ಟಿನ ಶಿಕ್ಷೆಗೆ ಸಮ್ಮಂಧಪಟ್ಟ ಕಾನೂನನ್ನು ಸರಿಪಡಿಸುವದು ಯುಕ್ತವಾದುದರಿಂದ ಘನವನ್ನೈದಿದ ಶ್ರೀಮನ್ ಮಹಾರಾಜಾ ಸಾಹೇಬರು ಇದರಡಿಯಲ್ಲಿ ಕಂಡಂತೆ ಕಾನೂನನ್ನು ನಿರ್ಣಯಿಸಿರುತ್ತಾರೆ.

ಚಿಕ್ಕ ಹೆಸರು.

1. ಈ ರೆಗ್ಯುಲೇಷನ್ "1903ನೇ ವರುಷದ ಮೈಸೂರು ಸೀಮೆಯ ವಿಪ್ಪಿಂಗ್ ರೆಗ್ಯುಲೇಷನ್" ಎಂದು ಕರಿಯಲ್ಪಡಬಹುದು;

ವ್ಯಾಪ್ತಿ.

ಇದು ಮೈಸೂರು ಸೀಮೆಗೆಲ್ಲಾ ವ್ಯಾಪಿಸತಕ್ಕದ್ದು; ಮತ್ತು

ಪ್ರಾರಂಭ.

ಇದು ಮಂಜೂರಾದ ತೇದಿಯ ಆರಭ್ಯ ಜಾರಿಯಲ್ಲಿ ಬರತಕ್ಕದ್ದು.

ರದ್ದಿಯಾತು.

ಮೈಸೂರು ಸೀಮೆಯಲ್ಲಿ ಜಾರಿಯಲ್ಲಿರುವ 1864ನೆ ವರುಷದ VIನೆ ನಂಬರಿನ ಆಕ್ಟು ಈ ಮೂಲಕ ರದ್ದುಮಾಡಲ್ಪಟ್ಟಿರುತ್ತೆ.

ಪಿನಲ್ ಕೋಡಿನ 53ನೆ ಪ್ರಕರಣದಲ್ಲಿ ನಮೂದಿಸಿರುವ ಶಿಕ್ಷೆಗಳೊಂದಿಗೆ ಪೆಟ್ಟಿನ ಶಿಕ್ಷೆಯನ್ನು ಸೇರಿಸೋಣ.

2. ಇಂಡ್ಯನ್ ಪಿನಲ್ ಕೋಡಿನ 53ನೆ ಪ್ರಕರಣದಲ್ಲಿ ನಮೂದಿಸಿರುವ ಶಿಕ್ಷೆಗಳೊಂದಿಗೆ ತಪ್ಪಿತಸ್ಥರು ಪೆಟ್ಟಿನ ಶಿಕ್ಷೆಗೆ ಸಹ ಗುರಿಯಾಗುತ್ತಾರೆ.

ಪಿನಲ್ ಕೋಡಿನಿಂದ ನಿರ್ದೇಶಿಸಲ್ಪಟ್ಟ ಇತರ ಶಿಕ್ಷೆಯ ಬದಲಾಗಿ ಪೆಟ್ಟಿನ ಶಿಕ್ಷೆ ವಿಧಿಸಬಹುದಾದ ಅಪರಾಧಗಳು.

3. ಯಾವನು ಈ ಕೆಳಗೆ ಕಾಣಿಸಿದ ಯಾವದಾದರು ಅಪರಾಧಗಳನ್ನು ಮಾಡುತ್ತಾನೋ ಅಂಥಾ ಪ್ರತಿ ಒಬ್ಬ ಮನುಷ್ಯನು, ಇಂಡಿಯನ್ ಪಿನಲ್ ಕೋಡಿನ ಮೇರೆಗೆ ಅಂಥಾ ಅಪರಾಧದ ಬಗ್ಯೆ ಆತನು ಗುರಿಯಾಗಬಹುದಾದಂಥಾ ಯಾವದಾದರೂ ಶಿಕ್ಷೆಯ ಬದಲಾಗಿ ಪೆಟ್ಟಿನ ಶಿಕ್ಷೆಗೆ ವಿಧಿಸಲ್ಪಡಬಹುದು, ಆ ಅಪರಾಧಗಳು ಯಾವವಂದರೆ:—

A ಗುಂಪು.

(1) ಸದರಿ ಕೋಡಿನ 378ನೇ ಪ್ರಕರಣದಲ್ಲಿ ವಿವರಿಸಲ್ಪಟ್ಟ ಮೇರೆಗೆ ಕಳವು;

(2) ಸದರಿ ಕೋಡಿನ 380ನೇ ಪ್ರಕರಣದಲ್ಲಿ ವಿವರಿಸಲ್ಪಟ್ಟ ಮೇರೆಗೆ ಒಂದು ಕಟ್ಟಡದಲ್ಲಾಗಲಿ, ಡೇರೆಯಲ್ಲಾಗಲಿ, ಹಡಗಿನಲ್ಲಾಗಲಿ ಕಳವು;

(3) ಸದರಿ ಕೋಡಿನ 381ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಗುಮಾಸ್ತನಿಂದ–ಯಾ–ನೌಕರನಿಂದ ಕಳವು ;

(4) ಸದರಿ ಕೋಡಿನ 382ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಮರಣ–ಯಾ–ಹಿಂಸೆ ಮಾಡುವದಕ್ಕೆ ಸನ್ನಾಹ ಮಾಡಿದ ನಂತರ ಕಳವು ;

B ಗುಂಪು.

(5) ಸದರಿ ಕೋಡಿನ 388ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಹೆದರಿಸಿ ಅನ್ಯಾಯ ಮಾಡೋಣ ;

(6) ಸದರಿ ಕೋಡಿನ 389ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಅನ್ಯಾಯ ಮಾಡುವ ಉದ್ದೇಶ್ಯ ತಪ್ಪನ್ನು ಅಪಾದನೆ ಮಾಡುವದಾಗಿ ಒಬ್ಬ ಮನುಷ್ಯನನ್ನು ಅಂಜಿಸೋಣ ;

C ಗುಂಪು.

(7) ಸದರಿ ಕೋಡಿನ 411ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಅಪ್ರಮಾಣಿಕತೆಯಿಂದ ಚೋರಿ ಮಾಲನ್ನು ತೆಗದುಕೊಳ್ಳೋಣ ;

(8) ಸದರಿ ಕೋಡಿನ 412ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಡಕಾಯಿತಿ ನಡಿಯುವಾಗ ಚೋರಿಯಾದ ಮಾಲನ್ನು ಅಪ್ರಮಾಣಿಕತೆಯಿಂದ ತೆಗದುಕೊಳ್ಳೋಣ ;

D ಗುಂಪು.

(9) ಈ ಪ್ರಕರಣಕ್ಕನುಗುಣವಾಗಿ ಪೆಟ್ಟಿನ ಶಿಕ್ಷೆ ವಿಧಿಸಲ್ಪಡಬಹುದಾದ ಯಾವದೊಂದು ಅಪರಾಧವನ್ನು ನಡಿಸುವ ಉದ್ದೇಶ್ಯ ಸದರಿ ಕೋಡಿನ 443ನೇ ಮತ್ತು 445ನೇ ಪ್ರಕರಣಗಳಲ್ಲಿ ವಿವರಿಸಿರುವ ಮೇರೆಗೆ ಹೊಂಚುಹಾಕಿಕೊಂಡಿದ್ದು ಮನೆಯೊಳಗೆ ನುಗ್ಗೋಣ ಅಥವಾ ಮನೆಗೆ ಕನ್ನ ಹಾಕೋಣ ;

(10) ಈ ಪ್ರಕರಣಕ್ಕನುಗುಣವಾಗಿ ಪೆಟ್ಟಿನ ಶಿಕ್ಷೆ ವಿಧಿಸಲ್ಪಡಬಹುದಾದ ಯಾವದೊಂದು ಅಪರಾಧವನ್ನು ನಡಿಸುವ ಉದ್ದೇಶ್ಯ ಸದರಿ ಕೋಡಿನ 444ನೇ ಮತ್ತು 446ನೇ ಪ್ರಕರಣಗಳಲ್ಲಿ ವಿವರಿಸಿರುವ ಮೇರೆಗೆ ರಾತ್ರಿ ಕಾಲದಲ್ಲಿ ಹೊಂಚುಹಾಕಿಕೊಂಡಿದ್ದು ಮನೆಯೊಳಗೆ ನುಗ್ಗೋಣ ಅಥವಾ ರಾತ್ರಿ ಕಾಲದಲ್ಲಿ ಮನೆಗೆ ಕನ್ನ ಹಾಕೋಣ.

3ನೆ ಪ್ರಕರಣದಲ್ಲಿ ನಮೂದಿಸಲ್ಪಟ್ಟ ಅಪರಾಧವು ಎರಡನೆಸಾರಿ ಸಾಬೀತು ಪಟ್ಟಲ್ಲಿ ಪೆಟ್ಟಿನ ಶಿಕ್ಷೆಯನ್ನು ಇತರ ಶಿಕ್ಷೆಗೆ ಕೂಡಿಸಿ ವಿಧಿಸಬಹುದು.

4. ಯಾವನು ಹಿಂದಿನ ಕಡೇ ಪ್ರಕರಣದಲ್ಲಿ ನಮೂದಿಸಲ್ಪಟ್ಟ ಯಾವದೊಂದು ಅಪರಾಧವು ಸಾಬೀತು ಪಟ್ಟಿದ್ದು, ಪುನಹ ಅದೇ ಅಪರಾಧವು ಅಥವಾ ಅದೇ ಗುಂಪಿನಲ್ಲಿ ಸೇರಿದ ಯಾವದೊಂದು ಅಪರಾಧವು ಸಾಬೀತು ಪಡುತ್ತಾನೋ, ಅಂಥಾ ಪ್ರತಿ ಮನುಷ್ಯನು ಇಂಡಿಯನ್ ಪಿನಲ್ ಕೋಡಿನ ಮೇರೆಗೆ ಅಂಥಾ ಅಪರಾಧಕ್ಕೆ, ಅತನು ಗುರಿಯಾಗಬಹುದಾದಂಥಾ ಇತರ ಯಾವದಾದರು ಶಿಕ್ಷೆಯ ಬದಲಾಗಿ ಅಥವಾ ಅದಕ್ಕೆ ಕೂಡಿಸಿ ಪೆಟ್ಟಿನ ಶಿಕ್ಷೆ ವಿಧಿಸಲ್ಪಡಬಹುದು.

ಇತರ ಶಿಕ್ಷೆಯೊಂದಿಗೆ ಪೆಟ್ಟಿನ ಶಿಕ್ಷೆಯನ್ನು ಯಾವ ಅಪರಾಧಗಳು ಎರಡನೆಸಾರಿಗೆ ಸಾಬೀತುಪಟ್ಟ ಸಂಗತಿಯಲ್ಲಿ ವಿಧಿಸಬಹುದೋ ಆ ಅಪರಾಧಗಳು.

5. ಯಾವನು ಈ ಕೆಳಗೆ ಕಾಣಿಸಿದ ಯಾವದಾದರೂ ಅಪರಾಧವು ಒಂದು ಸಾರೆ ಸಾಬೀತು ಪಟ್ಟಿದ್ದು, ಪುನಹ ಅದೇ ಅಪರಾಧವು ಅಥವಾ ಅದೇ ಗುಂಪಿನಲ್ಲಿ ಸೇರಿದ ಯಾವದಾದರೂ ಅಪರಾಧವು ಸಾಬೀತು ಪಡುತ್ತಾನೋ, ಅಂಥಾ ಪ್ರತಿ ಮನುಷ್ಯನು ಇಂಡಿಯನ್ ಪಿನಲ್ ಕೋಡಿನ ಮೇರೆಗೆ ಅಂಥಾ ಅಪರಾಧಕ್ಕಾಗಿ ಅತನು ಗುರಿಯಾಗಬಹುದಾದ ಇತರ ಯಾವದಾದರೂ ಶಿಕ್ಷೆಯೊಡನೆ ಪೆಟ್ಟಿನ ಶಿಕ್ಷೆ ವಿಧಿಸಲ್ಪಡಬಹುದು ; ಸದರಿ ಅಪರಾಧಗಳು ಯಾವವೆಂದರೆ :—

A ಗುಂಪು.

(1) ಇಂಡಿಯನ್ ಪಿನಲ್ ಕೋಡಿನ 193ನೇ ಪ್ರಕರಣಕ್ಕನುಗುಣವಾಗಿ ಶಿಕ್ಷೆಗೆ ಗುರಿಯಾಗಿರುವ ರೀತಿಯಲ್ಲಿ ಸುಳ್ಳು ಸಾಕ್ಷ್ಯ ಕೊಡೋಣ ಅಥವಾ ಬನಾವಣಿ ಮಾಡೋಣ ;

(2) ಸದರಿ ಕೋಡಿನ 194ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಮರಣ ದಂಡನೆಯಾಗತಕ್ಕ ಅಪರಾಧವು ಸಾಬೀತುಪಡಿಸಬೇಕೆಂಬ ಅಭಿಪ್ರಾಯದಿಂದ ಸುಳ್ಳು ಸಾಕ್ಷ್ಯ ಕೊಡೋಣ ಅಥವಾ ಬನಾವಣಿ ಮಾಡೋಣ ;

(3) ಸದರಿ ಕೋಡಿನ 195ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ನೀರಿನ ಮೇಲೆ ಕಳುಹಿಸುವ ಶಿಕ್ಷೆ ಅಥವಾ ಕೈದಿನ ಶಿಕ್ಷೆ ವಿಧಿಸಲ್ಪಡಬಹುದಾದ ಒಂದು ಅಪರಾಧವು ಸಾಬೀತು ಪಡಿಸಬೇಕೆಂಬ ಅಭಿಪ್ರಾಯದಿಂದ ಸುಳ್ಳು ಸಾಕ್ಷ್ಯಕೊಡೋಣ ಅಥವಾ ಬನಾವಣಿ ಮಾಡೋಣ ;

B ಗುಂಪು.

(4) ಸದರಿ ಕೋಡಿನ 211ನೇ ಮತ್ತು 377ನೇ ಪ್ರಕರಣಗಳಲ್ಲಿ ವಿವರಿಸಿರುವ ಮೇರೆಗೆ ಒಂದು ಅಸಹಜವಾದ ಅಪರಾಧವನ್ನು ಮಾಡಿದ್ದಾನೆಂಬದಾಗಿ ಒಬ್ಬ ಮನುಷ್ಯನ ಮೇಲೆ ಸುಳ್ಳು ಅಪಾದನೆ ಹೊರಿಸೋಣ ;

C ಗುಂಪು.

(5) ಸದರಿ ಕೋಡಿನ 354ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಒಬ್ಬ ಹೆಂಗಸಿನ ಮಾನವನ್ನು ಭಂಗಪಡಿಸಬೇಕೆಂಬ ಅಭಿಪ್ರಾಯದಿಂದ ಅವಳ ಮೇಲೆ ಬಲಾತ್ಕಾರ ನಡಿಸೋಣ ಅಥವಾ ಅಕ್ರಮವಾದ ಬಲೋತ್ಪಂಧಿ ಮಾಡೋಣ ;

(6) ಸದರಿ ಕೋಡಿನ 376ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಒಂದು ಸ್ತ್ರೀಯೊಂದಿಗೆ ಅಕ್ರಮವಾದ ಸಹಸಂಭೋಗ ಮಾಡೋಣ ;

(7) ಸದರಿ ಕೋಡಿನ 377ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಅಸಹಜವಾದ ಅಪರಾಧಗಳು ; 139

D ಗುಂಪು.

(8) ಸದರಿ ಕೋಡಿನ 390ನೇ ಮತ್ತು 391ನೇ ಪ್ರಕರಣಗಳಲ್ಲಿ ವಿವರಿಸಿರುವ ಮೇರೆಗೆ ಚೋರಿ ಅಥವಾ ಡಕಾಯಿತಿ ಎಂಬ ದರೋಡೆ ಕಳವು ;

(9) ಸದರಿ ಕೋಡಿನ 393ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಚೋರಿ ಮಾಡಲಿಕ್ಕೆ ಎತ್ನಿಸೋಣ ;

(10) ಸದರಿ ಕೋಡಿನ 394ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಚೋರಿ ಮಾಡುವಲ್ಲಿ ಮನಃಪೂರ್ವಕವಾಗಿ ಹಿಂಸೆ ಮಾಡೋಣ ;

E ಗುಂಪು.

(11) ಸದರಿ ಕೋಡಿನ 413ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ವಾಡಿಕೆಯಾಗಿ ಚೋರಿ ಮಾಲನ್ನು ತೆಕ್ಕೊಳ್ಳೋಣ ಅಥವಾ ಅದರ ವ್ಯಾಪಾರ ಮಾಡೋಣ ;

F ಗುಂಪು.

(12) ಸದರಿ ಕೋಡಿನ 463ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಫೋರ್ಜರಿ-ಯಾ-ಸೃಷ್ಟನೆ ;

(13) ಸದರಿ ಕೋಡಿನ 466ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಒಂದು ದಸ್ತಾವೇಜನ್ನು ಸೃಷ್ಟನೆ ಮಾಡೋಣ ;

(14) ಸದರಿ ಕೋಡಿನ 467ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಒಂದು ದಸ್ತಾವೇಜನ್ನು ಸೃಷ್ಟನೆ ಮಾಡೋಣ ;

(15) ಸದರಿ ಕೋಡಿನ 468ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಮೋಸಮಾಡುವ ನಿಮಿತ್ತ ಸೃಷ್ಟನೆ ಮಾಡೋಣ ;

(16) ಸದರಿ ಕೋಡಿನ 469ನೇ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಯಾವನೊಬ್ಬ ಮನುಷ್ಯನ ಹೆಸರನ್ನು ಬದಲಾಯಿಸುವ ಉದ್ದೇಶ್ಯ ಸೃಷ್ಟನೆ ಮಾಡೋಣ ;

G ಗುಂಪು.

(17) ಈ ಪ್ರಕರಣಕ್ಕನುಗುಣವಾಗಿ ಪೆಟ್ಟಿನ ಶಿಕ್ಷೆ ವಿಧಿಸಲ್ಪಡಬಹುದಾದ ಯಾವದೊಂದು ಅಪರಾಧವನ್ನು ಮಾಡುವ ಉದ್ದೇಶ್ಯ ಸದರಿ ಕೋಡಿನ 443ನೇ ಮತ್ತು 445ನೇ ಪ್ರಕರಣಗಳಲ್ಲಿ ವಿವರಿಸಿರುವ ಮೇರೆಗೆ ಹೊಂಚುಹಾಕಿಕೊಂಡಿದ್ದು ಮನೆಯೊಳಗೆ ನುಗ್ಗೋಣ ಅಥವಾ ಮನೆಗೆ ಕನ್ನ ಹಾಕೋಣ ;

(18) ಈ ಪ್ರಕರಣಕ್ಕನುಗುಣವಾಗಿ ಪೆಟ್ಟಿನ ಶಿಕ್ಷೆ ವಿಧಿಸಲ್ಪಡಬಹುದಾದ ಯಾವದೊಂದು ಅಪರಾಧವನ್ನು ಮಾಡುವ ಉದ್ದೇಶ್ಯ ಸದರಿ ಕೋಡಿನ 444ನೇ ಮತ್ತು 446ನೇ ಪ್ರಕರಣಗಳಲ್ಲಿ ವಿವರಿಸಿರುವ ಮೇರೆಗೆ ರಾತ್ರೀಕಾಲದಲ್ಲಿ ಹೊಂಚುಹಾಕಿಕೊಂಡಿದ್ದು ಮನೆಯೊಳಗೆ ನುಗ್ಗೋಣ ಅಥವಾ ರಾತ್ರೆಕಾಲದಲ್ಲಿ ಮನೆಗೆ ಕನ್ನ ಹಾಕೋಣ.

ಯಾವ ಸಂದರ್ಭಗಳಲ್ಲಿ ಸ್ತ್ರೀಯೊಡನೆ ಅಕ್ರಮವಾಗಿ ಹಟ ಸಂಗಮ ಮಾಡಿದ್ದಕ್ಕೆ ಪೆಟ್ಟಿನ ಶಿಕ್ಷೆಯನ್ನು ಸಹ ವಿಧಿಸಬಹುದು.

6. ಗವರ್ನಮೆಂಟಿನವರು, ಮೈಸೂರು ಸೀಮೆಯ ಯಾವ ಪ್ರದೇಶದಲ್ಲಿಯಾದರೂ ಈ ಪ್ರಕರಣದ ನಿಯಮಗಳು ಜಾರಿಯಲ್ಲಿರತಕ್ಕದ್ದೆಂದು ಸರ್ಕಾರಿ ಗೆಜೆಟ್ಟಿನಲ್ಲಿ ಇಸ್ತಿಹಾರ್ಮೂಲಕ ಪ್ರಕಟನೆ ಮಾಡಿದ್ದಾಗ್ಯೆ, ಅಂಥಾ ಪ್ರದೇಶದಲ್ಲಿರುವ ಯಾವ ಮನುಷ್ಯನಾಗಲಿ, ಇಂಡಿಯನ್ ಪಿನಲ್ ಕೋಡಿನ 375ನೆ ಪ್ರಕರಣದಲ್ಲಿ ವಿವರಿಸಿರುವ ಅಕ್ರಮವಾದ ಸ್ತ್ರೀ ಹಟ ಸಂಗಮ ಮಾಡುವದೆ ಸಾಮಾನ್ಯವಾದ ಉದ್ದೇಶ್ಯವುಳ್ಳ ಎರಡು ಅಥವಾ ಎರಡಕ್ಕಿಂತ ಅಧಿಕ ಸಂಖ್ಯೆಯುಳ್ಳ ಜನಗಳ ಕೂಟಕ್ಕೆ ಸೇರಿ ಇದ್ದು, ಅಂಥಾ ಅಪರಾಧವನ್ನು ಮಾಡಲಿಕ್ಕೆ ಸಹಕರಿಸುತ್ತಾನೊ ಅಥವಾ ಮಾಡುತ್ತಾನೊ ಅಥವಾ ಮಾಡಲು ಎತ್ನಿಸುತ್ತಾನೊ ಅಂಥಾ ಮನುಷ್ಯನು, ಸದರಿ ಕೋಡಿನಂತೆ ಆತನು ಅಂಥಾ ಸಹಕರಿಸೋಣ, ಅಪರಾಧ, ಅಥವಾ ಪ್ರಯತ್ನ—ಇದಕ್ಕಾಗಿ ಆತನು ಗುರಿಯಾಗಬಹುದಾದ ಇತರ ಶಿಕ್ಷೆಗೆ ಅಧಿಕವಾಗಿ ಪೆಟ್ಟಿನ ಶಿಕ್ಷೆ ವಿಧಿಸಲ್ಪಡಬಹುದು.

7. ಯಾವ ಅಪ್ರಾಯಸ್ಥನಾದ ಅಪರಾಧಿಯಾದರು,—

ಯಾವ ಸಂದರ್ಭದಲ್ಲಿ ಅಪ್ರಾಯಸ್ಥರಾದ ಅಪರಾಧಿಗಳು ಪೆಟ್ಟಿನಿಂದ ಶಿಕ್ಷಿಸಲ್ಪಡಬಹುದು.

(*a*) ಇಂಡಿಯನ್ ಪಿನಲ್ ಕೋಡಿನ ಪ್ರಕಾರ ಮರಣದಂಡನೆಯಲ್ಲದ ಇತರ ದಂಡನೆಗೆ ಗುರಿಯಾಗಬಹುದಾದ ಯಾವ ಅಪರಾಧವನ್ನಾಗಲಿ, ಅಥವಾ

(*b*) ಯಾವ ಇತರ ಕಾನೂನಿನ ಪ್ರಕಾರ ಕೈದು ದಂಡನೆಗೆ ಗುರಿಯಾಗಬಹುದಾದ ಯಾವ ಅಪರಾಧವನ್ನಾಗಲಿ,—

ಮಾಡಲಿಕ್ಕೆ ಸಹಕರಿಸುತ್ತಾನೊ, ಮಾಡುತ್ತಾನೊ, ಅಥವಾ ಮಾಡಲು ಎತ್ನಿಸುತ್ತಾನೊ, ಅಂಥಾವನು, ಅಂಥಾ ಅಪರಾಧ, ಸಹಕರಿಸೋಣ, ಅಥವಾ ಪ್ರಯತ್ನ—ಇದಕ್ಕಾಗಿ ಆತನು ಗುರಿಯಾಗಬಹುದಾದ ಯಾವ ಇತರ ದಂಡನೆಗೆಯಾದರೂ ಬದಲಾಗಿ ಪೆಟ್ಟಿನ ಶಿಕ್ಷೆ ವಿಧಿಸಲ್ಪಡಬಹುದು.

ಆದರೆ ಗವರ್ನಮೆಂಟಿನವರು, (*b*) ಕಲಮಿನಲ್ಲಿ ಕಾಣುವ ಯಾವ ಅಪರಾಧಗಳ ಸಮ್ಮಂಧವಾಗಿ ಪೆಟ್ಟಿನ ಶಿಕ್ಷೆ ವಿಧಿಸಕೂಡದೆಂದು ಈಪರವಾಗಿ ಅವುಗಳನ್ನು ವಿಶೇಷಿಸಲು ಯುಕ್ತವೆಂದೆಣಿಸಬಹುದೊ ಆ ಅಂಶವನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಇಸ್ತಿಹಾರ್ಮೂಲಕ ಪ್ರಕಟಿಸಬಹುದು.

ಟಿಪ್ಪಣಿ.—ಈ ಪ್ರಕರಣದಲ್ಲಿ "ಅಪ್ರಾಯಸ್ಥನಾದ ಅಪರಾಧಿ" ಎಂಬುವದಕ್ಕೆ ಹದಿನಾರು ವರುಷಕ್ಕಿಂತ ಕಡಿಮೆ ಪ್ರಾಯದವನೆಂತ ಕೋರ್ಟಿನವರು, ತಾವು ಅಗತ್ಯವೆಂದು ಎಣಿಸಬಹುದಾದ ವಿಚಾರಣೆ ಏನಾದರು ಮಾಡಿದ ನಂತರ, ಅಭಿಪ್ರಾಯಪಡುವ ಅಪರಾಧಿ ಎಂಬ ಅರ್ಥವಾಗುತ್ತದೆ. ಇಂಥಾ ವಿಷಯದಲ್ಲಿ ಕೋರ್ಟಿನವರ ತೀರ್ಪು ಕಡೇದಾಗಿ ನಿರುತ್ತರವಾದ್ದಾಗಿರುತ್ತದೆ.

ಪಿ. ಎನ್. ಕೃಷ್ಣಮೂರ್ತಿ,

ಮೈಸೂರು ಸೀಮೆಯ ದಿವಾನರು.

Mysore Government Central Press, Bangalore.—1904.

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಪ್ರಕಟಿಸಿದ್ದು. [ನಂ. 5.

ಬೆಂಗಳೂರು, ಗುರುವಾರ, ಫೆಬ್ರವರಿ ತಾ॥ 4, ಸನ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರಗಳು, ಫಾರೆಸ್ಟು, ರಜಿಸ್ಟ್ರೇಷನ್ ವ ಯಜ್ಯುಕೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜಿಗಳು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷ್ನರರುಗಳು, ಸಬಾರ್ಡಿನೇಟ್ ಜಡ್ಜಿಗಳು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸ್‌ಗಳು.

3ನೆ ಭಾಗ—ಲೆಜಿಸ್ಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲ.

4ನೆ ಭಾಗ—ಸರ್ಕಾರೀ ಕಾಗದಪತ್ರಗಳು—ಇಲ್ಲ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 19ನೆ ಜನವರಿ 1904.

ನಂ. ಲೋ. ಜೋ. ಪಿ. 921, ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳಲ್ಲಿ ನಡೆಯುವ ಕೆಳಗೆ ನಮೂದು ಮಾಡಲ್ಪಟ್ಟ ಜಾತ್ರೆಗಳ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದರಿಂದ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಯಾವ ಊಗಾಯತು.	ಯಾವ ವರೆವಿಗೆ.
1. ವೆಂಕಟಾವಧೂತರ ಜಾತ್ರೆ ...	ಹುಸೇನಪುರ	ಪಾವಗಡ ...	4—2—04	
2. ಸೀಬಿ ನರಸಿಂಹಸ್ವಾಮಿಯ ಜಾತ್ರೆ	ಸೀಬಿ	ಸೀರಾ ...	1—2—04	26—2—04
3. ಚನ್ನಕೇಶವಸ್ವಾಮಿಯ ಜಾತ್ರೆ	ಚನ್ನಕೇಶಪುರ ...	ಪಾವಗಡ ...	31—3—04	3—4—04
4. ಲಕ್ಷ್ಮೀನರಸಿಂಹಸ್ವಾಮಿಯ ರಥೋತ್ಸವ.	ದೇವರಾಯದುರ್ಗ ...	ತುಮಕೂರು ...	1—3—04	7—3—04
5. ಆಂಜನೇಯಸ್ವಾಮಿಯ ರಥೋತ್ಸವ.	ಸಿಟ್ಟಹಳ್ಳಿ	ಡಿಟೋ ...	31—3—04	2—4—04

ಸನ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ 2ನೆ ನಂಬರ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು, ಪ್ರತಿ ಬಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಮೇಲ್ಕಂಡ ಜಾತ್ರೆಗಳಿಗೆ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಅಡ್ಡೀಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ಜಾತ್ರೆಗಳಿಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 19ನೆ ಜನವರಿ 1904.

ನಂ. ಲೋ. ಬೋ. ಪಿ. 919, ಬೆಂಗಳೂರು ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿರುವ ಇದರಡೀ ಕಂಡ ಸ್ಥಳಗಳಲ್ಲಿ ನಡೆಯುವ ವೇಳೆಗೆ ನಮೂದು ಮಾಡಲ್ಪಟ್ಟ ಜಾತ್ರೆಗಳ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಸ್ಸಂದೇಹವಾಗಿರುವದ್ದರಿಂದ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಯಾವ ಲಾಗಾಯತು.	ಯಾವ ವರಿವಿಗೆ.
ಬೆಂಗಳೂರು ಡಿಸ್ಟ್ರಿಕ್ಟು.				
1. ಶ್ರೀ ಚಂಪಕಧಾಮಸ್ವಾಮಿಯ ರಥೋತ್ಸವ.	ಬನ್ನೇರಘಟ್ಟ	ಆನೇಕಲ್	5—3—04	10—3—04
2. ಮದ್ದೂರಮ್ಮನ ಜಾತ್ರೆ ...	ಹುಸ್ಕೂರು	ಡಿಟೋ	11—3—04	16—3—04
3. ಶ್ರೀ ತಿಮ್ಮರಾಯಸ್ವಾಮಿಯ ರಥೋತ್ಸವ.	ಆನೇಕಲ್	ಡಿಟೋ	23—3—04	26—3—04
4. ಧರ್ಮರಾಯನ ಜಾತ್ರೆ ..	ಡಿಟೋ	ಡಿಟೋ	31—3—04	3—4—04
ಕಡೂರು ಡಿಸ್ಟ್ರಿಕ್ಟು.				
1. ಕಳಸೇಶ್ವರ ಸ್ವಾಮಿಯ ರಥೋತ್ಸವ	ಮಾವಿನಕೆರೆ	ಮೂಡಗೆರೆ	29—1—04	1 ತಿಂಗಳ ವರಿವಿಗೆ ನಡೆಯುತ್ತದೆ
2. ವೆಂಕಟರಮಣ ದೇವರ ರಥೋತ್ಸವ	ಹರಲನೆ	ಕೊಪ್ಪ	3—2—04	5—2—04
3. ಶ್ರೀ ಶಾರದಮ್ಮನವರ ರಥೋತ್ಸವ.	ಶೃಂಗೇರಿ	ಶೃಂಗೇರಿ ಜಹಗೀರ್	1—2—04	5—2—04
4. ಬಸರಿಕಟ್ಟೆ ಜನಾರ್ಧನ ದೇವರ ರಥೋತ್ಸವ.	ಹೊಸ್ಸಗುಂಡಿ	ಕೊಪ್ಪ	6—2—04	9—2—04
5. ಬೆಟ್ಟದ ಮಲ್ಲಿಕಾರ್ಜುನ ದೇವರ ರಥೋತ್ಸವ.	ಶೃಂಗೇರಿ	ಶೃಂಗೇರಿ ಜಹಗೀರ್	12—2—04	18—2—04

ಸನ್ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ 2ನೆ ನಂಬರ್ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು ಪ್ರತಿ ಒಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಮೇಲ್ಕಂಡ ಜಾತ್ರೆಗಳಿಗೆ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಅಡ್ಡಿಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ಜಾತ್ರೆಗಳಿಗೆ ಹೊರಡುವ ಬರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 19ನೆ ಜನವರಿ 1904.

ನಂ. ಲೋ. ಬೋ. ಪಿ. 929, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಕಂ 9383—ಮಿ. ಪ್ಲೈ. 21—96ನೆ ಮತ್ತು 9384—ಮಿ. ಪ್ಲೈ. 21—96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ತುಮಕೂರು, ಹಾಸನ ಮತ್ತು ಮೈಸೂರು ಡಿಸ್ಟ್ರಿಕ್ಟುಗಳಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ತುಮಕೂರು ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಅರಳಕಟ್ಟೆ	ತುಮಕೂರು	12. ಊರಕೆರೆಗೆ ಸೇರಿದ ಮಲ್ಲೇನಹಳ್ಳಿ	ತುಮಕೂರು
2. ಸಿದ್ದಾರ್ಥನಪಾಳ್ಯ	ಡಿಟೋ	13. ಮಾದನೂರು	ತಿಪಟೂರು
3. ಕಳ್ಳಹಳ್ಳಿ	ಡಿಟೋ	14. ಕಾಂತೂರು	ಡಿಟೋ
4. ದೇವರಾಯಪಟ್ಟಣ	ಡಿಟೋ	15. ಗೋಪಾಲಪುರ	ಡಿಟೋ
5. ಸತ್ಯಮಂಗಲ	ಡಿಟೋ	16. ಮತ್ತಿಘಟ್ಟ	ಡಿಟೋ
6. ನಾಗವಲ್ಲಿನಹಳ್ಳಿ	ಡಿಟೋ	17. ಮಾಕನಹಳ್ಳಿ	ಡಿಟೋ
7. ಹಿರೆ ತೋಟಲಕೆರೆ	ಡಿಟೋ	18. ಹೊಡಲೂರು	ಗುಬ್ಬಿ
8. ಹೆಗ್ಗೆರೆ	ಡಿಟೋ	19. ರಾಮಪುರ	ಡಿಟೋ
9. ಕಟ್ಟಿಗೇನಹಳ್ಳಿ	ಡಿಟೋ	20. ಸಿಂಗೋನಹಳ್ಳಿ	ಡಿಟೋ
10. ರಂಗಾಪುರ	ಡಿಟೋ	21. ಮಾಕನಹಳ್ಳಿಪಟ್ಣ	ಡಿಟೋ
11. ತರೂರು	ಡಿಟೋ		

ಹಾಸನ ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಹಾಸನ	ಹಾಸನ	4. ಗೋಹಳ್ಳಿ	ಹೊಳೇನರಸೀಪುರ
2. ಗೊಬ್ರವಳ್ಳಿ	ಬೇಲೂರು	5. ಕಲ್ಲಹಳ್ಳಿ	ಡಿಟೋ
3. ಸೂರ್‍ನಹಳ್ಳಿ	ಹೊಳೇನರಸೀಪುರ		

ಮೈಸೂರು ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಗರುಡನ ಉಕ್ಕಡ	ಶ್ರೀರಂಗಪಟ್ಟಣ	3. ಸುಂಕತೊಣ್ಣೂರು	ಫ್ರೆಂಚ್‌ರಾಕ್ಸ್ ಸಬ್ ತಾ||
2. ಮುದ್ದನಕೂಡು	ಚಾಮರಾಜನಗರ	4. ಕಾರೇಪುರ	ನಂಜನಗೂಡು

142

ತಾರೀಖು 19ನೆ ಜನವರಿ 1904.

ನಂ. ಲೋ. ಜೋ. ಪಿ. 927, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳಲ್ಲಿ ನಡೆಯುವ ಕೆಳಗೆ ನಮೂದು ಮಾಡಲ್ಪಟ್ಟ ಜಾತ್ರೆಗಳ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ತಾರೀಖು.	
			ಯಾವ ಲಾಗಾಯತು.	ಯಾವ ವರಿವಿಗೆ.
1. ಮಲ್ಲಿಕಾರ್ಜುನಸ್ವಾಮಿಯ ರಥೋತ್ಸವ.	ಪಟ್ಟದಪುರ	ಹುಣಸೂರು	3—2—04	
2. ತಿಪ್ಪುಸುಲ್ತಾನರ ಉರಸು ...	ಗಂಜಾಂ	ಶ್ರೀರಂಗಪಟ್ಣ	15—2—04	17—2—04
3. ಹಿರೀದೇವತೆ ಜಾತ್ರೆ ...	ಕನ್ನಂಬಾಡಿ	ಕೃಷ್ಣರಾಜಪೇಟೆ	28—2—04	13—3—04
4. ಬೀರೆದೇವರ ಜಾತ್ರೆ ..	ಕೊಡಗಹಳ್ಳಿ	ಡಿಟೋ	14—2—04	15—2—04
5. ಮಾರತಿಲಿಂಗನ ಜಾತ್ರೆ ..	ಮಾರಗೋನಹಳ್ಳಿ	ಡಿಟೋ	2—2—04	5—2—04
6. ಲಕ್ಷ್ಮೀನರಸಿಹ್ಮಸ್ವಾಮಿಯ ರಥ.	ಅಕ್ಕಿ ಹೆಬ್ಬಾಳು	ಡಿಟೋ	23—2—04	27—2—04
7. ಸಿದ್ದೇಶ್ವರ ರಥ ..	ಬೇಬಿಪಟ್ಣ	ಡಿಟೋ	15—2—04	28—2—04
8. ರಾಜಪ್ಪನವರ ಗದ್ದಿಗೆಸೇವೆ ..	ಕಪ್ಪಡಿ ಹಂತ	ಯಡತೊರೆ	14—2—04	14—3—04
9. ಸೋಮನಹಳ್ಳಿ ಅಮ್ಮನ ಜಾತ್ರೆ.	ಸೋಮನಹಳ್ಳಿ	ನಾಗಮಂಗಲ	4—2—04	5—2—04

ಸರ್ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ 2ನೆ ನಂಬರ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು, ಪ್ರತಿ ಒಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಮೇಲ್ಕಂಡ ಜಾತ್ರೆಗಳಿಗೆ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಆಡ್ಡೀಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ಜಾತ್ರೆಗಳಿಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 19ನೆ ಜನವರಿ 1904.

ನಂ. ಲೋ. ಜೋ. ಪಿ. 931, ಇದರಿಂದ ಸಮಸ್ತ ಜನಗಳ ತಿಳುವಳಿಕೆಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ರೋಗ ತಗಲಿದ ಪ್ರದೇಶಗಳಾಗಿ ಆಗಿಂದಾಗ್ಯೆ ಪ್ರಸಿದ್ಧಪಡಿಸಲ್ಪಟ್ಟ ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟರುತ್ತವೆ :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಚಿಕ್ಕತೊಟ್ಲುಕೆರೆ ..	ತುಮಕೂರು	10. ಮಕ್ಕೋಡಿ ..	ತುಮಕೂರು
2. ಹೊನ್ನೇನಹಳ್ಳಿ ...	ಡಿಟೋ	11. ಯೋಗೇನಹಳ್ಳಿ ..	ಡಿಟೋ
3. ಮೇಲೆಕೋಟೆ ...	ಡಿಟೋ	12. ಉಪ್ಪಾರಹಳ್ಳಿ ..	ಡಿಟೋ
4. ಕ್ಯಾತಸಂದ್ರ ..	ಡಿಟೋ	13. ಮಾರಲೇನಹಳ್ಳಿ ..	ಡಿಟೋ
5. ಮರಳೂರು ...	ಡಿಟೋ	14. ನಾಗಪ್ಪನಪಾಳ್ಯ ..	ಡಿಟೋ
6. ಬೆಳ್ಳಾವಿ ...	ಡಿಟೋ	15. ಬಿರಾಂಸಾಬಿಪಾಳ್ಯ ...	ಡಿಟೋ
7. ಹೊಸಪಾಳ್ಯ ...	ಡಿಟೋ	16. ಹನುಮಂತಾಪುರ ..	ಡಿಟೋ
8. ಚಿಕ್ಕಬೆಳ್ಳಾವಿ ...	ಡಿಟೋ	17. ಗಂಗಸಂದ್ರ ..	ಡಿಟೋ
9. ಗೊಲ್ಲರಹಟ್ಟಿ ...	ಡಿಟೋ	18. ಮಲ್ಲೇನಹಳ್ಳಿ ..	ತಿಪ್ಟೂರು

ತಾರೀಖು 26ನೆ ಜನವರಿ 1904.

ನಂ. ಲೋ. ಜೋ. ಪಿ. 942, ಚಿತ್ರದುರ್ಗ ಡಿಸ್ಟ್ರಿಕ್ಟಿನ ಹರಿಹರದಲ್ಲಿ ನಡೆಯುವ ಹರಿಹರೇಶ್ವರ ದೇವರ ರಥೋತ್ಸವದ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳದಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದರಿಂದ, 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರ ರೆಗ್ಯುಲೇಷನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, 1904ನೆ ಜನವರಿ 28ರ ಲಾಗಾಯತು ಫೆಬ್ರವರಿ 8ರ ವರಿವಿಗೆ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು ಆಡ್ಡೀಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ರಥೋತ್ಸವಕ್ಕೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 30ನೆ ಜನವರಿ 1904.

3. ಬೆಂಗಳೂರಲ್ಲಿರುವ ಸಿಟಿ ಮ್ಯಾಜಿಸ್ಟ್ರೇಟರವರ ಕೋರ್ಟಿನ ಚಾರ್ಜಿನಲ್ಲಿರುವ ಸೀನಿಯರ್ ಅಸಿಸ್ಟೆಂಟ್ ಕಮಿಷನರಾದ ಮೆ|| ಎಸ್. ವೈದ್ಯನಾಥ ಅಯ್ಯರ್ ಯವರು ಮೈಸೂರು ಡಿಸ್ಟ್ರಿಕ್ಟಿಗೆ ವರ್ಗವಾಗಿ ಫ್ರೆಂಚ್‌ರಾಕ್ಸ್ ಸಬ್ ಡಿವಿಜನಿನ ಚಾರ್ಜಿನಲ್ಲಿರತಕ್ಕದ್ದು.

4. ಸ್ಪೆಷಿಯಲ್ ಡ್ಯೂಟಿಯಲ್ಲಿರುವ ಅಸಿಸ್ಟೆಂಟ್ ಕಮಿಷನರಾದ ಮೆ|| ಎ. ಆನಂದರಾಯರು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರವರ ಕೋರ್ಟಿನ ಚಾರ್ಜಿನಲ್ಲಿರತಕ್ಕದ್ದು.

ಹುಕುಂ ಬಮೋಜಿಬ್,

ಎಲ್. ಅನಂತಸ್ವಾಮಿರಾವ್,

ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್ಮೆಂಟ್ ಆಫೀಷಿಯೇಟಿಂಗ್ ಸೆಕ್ರೆಟರಿ.

ಫಾರೆಸ್ಟ್.

ಇಸ್ತಿಹಾರ್ನಾಮೆ.

ತಾರೀಖು 16ನೆ ಫೆಬ್ರವರಿ 1904.

ನಂ. 536—6681, ಕೆಲಸದಿಂದ ನಿವೃತ್ತರಾದ ಇಂಡಿಯಾ ಸರ್ವೆಯ ಎಕ್ಸ್‌ಟ್ರಾ ಡೆಪ್ಯುಟಿ ಸೂಪರಿಂಟೆಂಡೆಂಟರಾದ ಮೆ|| ಟಿ. ಇ. ಎಂ. ಕ್ಲಾಡಿಯಸ್‌ಯವರು 1904ನ ಫೆಬ್ರವರಿ ..ನೆ ತಾರೀಖಿನಾರಭ್ಯ ಮೂರು ವರುಷಗಳವರಿವಿಗೆ ಮೈಸೂರು ಸೀಮೆಯ ಫಾರೆಸ್ಟ್ ಸರ್ವೆಗಳ ಸೂಪರಿಂಟೆಂಡೆಂಟರಾಗಿ ನೌಕರೂರ್ ಮಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜಿಬ್,

ಎಂ ಮುತ್ತಣ್ಣ,

ಫಾರೆಸ್ಟ್ ಇಲಾಖೆಯ ಗವರ್ನ್ಮೆಂಟ್ ಆಫೀಷಿಯೇಟಿಂಗ್ ಸೆಕ್ರೆಟರಿ

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 16ನೆ ಫೆಬ್ರವರಿ 1904.

ನಂ 224—1184, ಸರ್ 1904ನೆ ಜನವರಿ 27ನೆ ಮುರ್ಕುಂ 96—547ನೇ ನಂಬರ್ ಪಬ್ಲಿಕ್ ವರ್ಕ್ಸ್ ಇಸ್ತಿಹಾರ್ ನಾಮೆಗೆ ಸೇರಿಸುವಿಕೆ.

ಸರ್ 1904ನೆ ಜನವರಿ 6ನೆ ತಾರೀಖಿನಾರಭ್ಯ ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖೆಯ ಇಂಜನಿಯರ್ ಸಿಬ್ಬಂದಿಯಲ್ಲಿ ಇದರಡೀ ಕಂಡ ವಾಪಸು ಬರೋಣವು ಹುಕುಂ ಮಾಡಲ್ಪಟ್ಟಿರುತ್ತದೆ.—

ಹೆಸರು.	ಹಾಲಿ ಕ್ಲಾಸು.	ವಾಪಸು ಮಾಡಲ್ಪಟ್ಟ ಕ್ಲಾಸು.	ವಾಪಸಿನ ಸ್ವಭಾವ.	ಷರಾ.
ಮೆ|| ಟಿ. ಜಿ. ಲಕ್ಷ್ಮಣರಾಯರು.	ಹಂಗಾಮಿ ಮೂರನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್.	ಮೊದಲನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್.	ಕಾಯಂ.	ಮೆ|| ಟಿ. ಎಸ್. ಶೇಷೈಯ್ಯಂಗಾರ್ರು ರಜಾದಿಂದ ವಾಪಸು ಬಂದಿರುವದ್ದರಿಂದ.

ತಾರೀಖು 16ನೆ ಫೆಬ್ರವರಿ 1904

ನಂ 225—1186, ಸರ್ 1904ನೆ ಫೆಬ್ರವರಿ 9ನೆ ತಾರೀಖು ಮದರಾಸು ಫೋರ್ಟ್ ಸೆಂಟ್ ಜಾರ್ಜ್ ಗೆಜೆಟ್ಟಿನ ಇದರಡೀ ಕಂಡ ಎಕ್ಸ್‌ಟ್ರಾಕ್ಟ್ ತಿಳುವಳಿಕೆ ಬಗ್ಯೆ ಪುನಹ ಪ್ರಾಯಿಷ್ ಮಾಡಲ್ಪಟ್ಟಿರುತ್ತದೆ:—

ಪಬ್ಲಿಕ್ ವರ್ಕ್ಸ್ ಇಲಾಖಾ.

ಬಡ್ತಿಗಳು ವ ವಾಪಸು ಬರೋಣಗಳು.

ಸರ್ 1904ನೆ ಫೆಬ್ರವರಿ 1, ಫೋರ್ಟ್ ಸೆಂಟ್ ಜಾರ್ಜ್.

ನಂ. 13.—ಕೆಲಸದಿಂದ ನಿವೃತ್ತರಾದ ಕರ್ನಲ್ ಕೂರ್ಟ್ನಿ ಕ್ಲಾರ್ಕ್ ಹಾರ್ಸ್, ಆರ್. ಇ., ಯವರಿಗೆ ಬದಲಾಗಿ 1904ನೆ ಜನವರಿ 21ನೆ ತಾರೀಖಿನಾರಭ್ಯ ಇದರಡಿ ಕಂಡ ಬಡ್ತಿಗಳು ಮತ್ತು ವಾಪಸು ಬರೋಣಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

* * * * * *

(17) ಮೆ|| ಜಾರ್ಜ್ ಜೋಸೆಫ್ ವೈಟ್ಲಿಯವರು, ಸೂಪರ್‌ನ್ಯೂಮರೆರಿ ಮೊದಲನೇ ಗ್ರೇಡಿನ ಎಕ್ಸಿಕ್ಯೂಟಿವ್ ಇಂಜನಿಯರಾದ ಸೂಪರ್‌ನ್ಯೂಮರೆರಿ ಹಂಗಾಮಿ ದರ್ಜೆಯ ಮೂರನೇ ಕ್ಲಾಸಿನ ಸೂಪರಿಂಟೆಂಡಿಂಗ್ ಇಂಜನಿಯರಿಗೆ.

* * * * * *

(ಸೈನ್ಡ್) ಡಬ್ಲ್ಯೂ. ಬಿ. ಡೀವಿರ್ಟ್,

ಪಬ್ಲಿಕ್ ವರ್ಕ್ಸ್ ಇಲಾಖಾ, ಮದರಾಸು ಗವರ್ನ್ಮೆಂಟಿನ ಸೆಕ್ರೆಟರಿ.

256

261.

ತಾರೀಖು 16ನೆ ಫೆಬ್ರುವರಿ 1904.

ನಂ. 228—1189, ಮ|| ಎಂ. ಜಿ. ರಂಗಯ್ಯ, ಬಿ. ಇ, ಯವರು 1904ನೆ ಜನವರಿ 9ನೆ ತಾರೀಖಿನಾರಭ್ಯ ಮಾಹೆಯಾನ 80 ರೂಪಾಯಿಗಳ ತಲಬಿನ ಮೇಲೆ ಹಂಗಾಮಿ ಸಬ್ ಅಸಿಸ್ಟೆಂಟ್ ಇಂಜನಿಯರಾಗಿ ನೌಕರರ್ನಾಗಿ ಮಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜಿಬ್,

ಡಬ್ಲ್ಯು. ಮೆಕಹಚೀ,

ಪಬ್ಲಿಕ್ ವರ್ಕ್ಸ್ ಇಲಾಖಾ, ಮೈಸೂರು ಗವರ್ನ್ಮೆಂಟ್ ಸೆಕ್ರೆಟೆರಿ.

ಮುಜರೈ.

ಇಸ್ತಿಹಾರ್‌ನಾಮೆ.

ತಾರೀಖು 10ನೇ ಫೆಬ್ರುವರಿ 1904.

ನಂ. 2368, ಕಾಲಾತಿಕ್ರಮಣ ಯಾ ಇತರ ಕಾರಣಗಳಿಂದ ಖಾಲಿಗಳು ಉಂಟಾಗಿರುವದ್ದರ ದೆಶೆಯಿಂದ, ಮೈಸೂರ ಪ್ಯಾಲೆಸ್ ಕಂಟ್ರೋಲರವರ ಆಡಳಿತದಲ್ಲಿರುವ ಮುಜರಾಯಿಗೆ ಸಂಬಂಧಪಟ್ಟ ದೇವಸ್ಥಾನ ವಗೈರೆಗಳ ಕೆಲಸಗಳ ಮೇಲ್ವಿಚಾರಣೆ ಬಗ್ಗೆ ಧರ್ಮದರ್ಶಿಗಳ ಪರಿಷ್ಕರಿಸಲ್ಪಟ್ಟ ಇದರಡೀ ಕಂಡ ಪಟ್ಟಿಯು 1898ನೆ ಅಕ್ಟೋಬರ್ 10ನೆ ಮರ್ಕುಂ 460–8ನೆ ನಂಬರ್ ಗವರ್ನ್ಮೆಂಟಿನ ಪ್ರೊಸೀಡಿಂಗ್ಸಿನಲ್ಲಿ ಮಂಜೂರ್ ಮಾಡಲ್ಪಟ್ಟ ಧರ್ಮದರ್ಶಿ ರೂಲುಗಳ 11ನೆ ಪ್ಯಾರಾ ಅನುಸರಿಸಿ ಖಾಯಿಮ್ ಮಾಡಲ್ಪಟ್ಟಿರುತ್ತದೆ:—

ಮ|| ರಾ|| ರಾ|| ಅಂಬ್ಲೆ ಅಣ್ಣಯ್ಯಪಂಡಿತರು.
,, ಲಕ್ಷ್ಮೀನಾರಣಪ್ಪನವರು.
,, ಅಡ್ವೋಕೇಟರಾದ ಎಂ. ಸಿ. ರಂಗಯ್ಯಂಗಾರ್ರು.
,, ಅಡ್ವೋಕೇಟರಾದ ಎಚ್. ನರಸಿಂಗರಾಯರು.
,, ಧರ್ಮಾಧಿಕಾರಿ ಕುಟ್ಟೆ ನರಸಿಂಹ ಶಾಸ್ತ್ರಿಯವರು.

ಹುಕುಂ ಬಮೋಜಿಬ್,

ಎಲ್. ಅನಂತಸ್ವಾಮಿ ರಾವ್,

ಮುಜರೈ ಇಲಾಖೆಯ ಡೆಪ್ಯುಟಿ ಸೆಕ್ರೆಟೆರಿ.

ಮಿಲಿಟೆರಿ.

ಇಸ್ತಿಹಾರ್‌ನಾಮೆ.

ತಾರೀಖು 15ನೆ ಫೆಬ್ರುವರಿ 1904.

ನಂ. 2547—9, ಸ॥ 1903ನೆ ನವಂಬರ್ ಗುರ್ರೆ ಲಾಗಾಯಿತು ಲೋಕಲ್ ಸರ್ವಿಸ್ ರೆಜಿಮೆಂಟಿನ ಕವರ್ಟರ್ಮಾಸ್ಟರ್ ಡೆಂಟರಾಗಿ ಇಂಪೀರಿಯಲ್ ಸರ್ವಿಸ್ ಲ್ಯಾನ್ಸರುಗಳ ಜಮೇದಾರ್ ಸೈಯದ್ ಲತೀಫ್ ಯುವರ ನೌಕರರಾತಿಯನ್ನು ಮೈಸೂರು ಶೀಮೆಯ ಘನವನ್ನೈದಿದ ಶ್ರೀಮತ್ ಮಹಾರಾಜರವರು ಮಂಜೂರ್ ಮಾಡಿರುತ್ತಾರೆ.

ಹುಕುಂ ಬಮೋಜಿಬ್,

ಆರ್. ಜೆ. ಜೋನ್ಸ್,

ಲೆಫಟಿನೆಂಟ್ ಕರ್ನಲ್, ಮಿಲಿಟೆರಿ ಅಸಿಸ್ಟೆಂಟ್.

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಛಾಯಿಸಿದ್ದು. [ನಂ. 7.

ಬೆಂಗಳೂರು, ಗುರುವಾರ, ಫೆಬ್ರುವರಿ ತಾ|| 18, ಸನ 1904.

IIನೇ ಭಾಗ.

ಇಂಡ್ಯಾ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜಿಯರು ವಗೈರೆಯರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಇನಾಂ ಇಲಾಖಾ.

ಇಸಿಹಾರ್ನಾಮೆ.

ನಂಬರು 2, ತಾರೀಖು 12ನೆ ಫೆಬ್ರವರಿ ಸನ 1904ನೆ ಇಸವಿ.

ಇನಾಂದಾರ್ರಿಗೆ ಇದರಿಂದ ತಿಳಿಯಪಡಿಸುವದೇನಂದರೆ, ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿರತಕ್ಕ ಚಿಲ್ಲರೆ ಇನಾಂಗಳ ಬಾಬತು ಫೈನಲ್ ಟೈಟಲ್ ಡೀಡ್ ಯಾನೆ ಖಾಯಂ ಪಟ್ಟೆಗಳು (100) ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರ ಬಳಿಗೆ ಬಟವಾಡೆ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರಿ ತಾಲ್ಲೂಕಿನ ಅಮಲ್ದಾರರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸುಗಳು ಬಂದಮೇಲೆ ಅವುಗಳನ್ನು ತೆಗದುಕೊಳ್ಳುವ ಬಗ್ಯೆ ಸದರಿ ಇನಾಂದಾರರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರಿ ತಾಲ್ಲೂಕಿನ ಅಮಲ್ದಾರರು ಅಂಥಾ ನೋಟೀಸುಗಳನ್ನು ದೇರ್ ಮಾಡದೆ ಕೊಡತಕ್ಕದ್ದೆಂದು ನೇಮಿಸಲ್ಪಟ್ಟು ಇರುತ್ತಾರೆ.

3. ಸದರಿ ಚಿಲ್ಲರೆ ಇನಾಂಗಳ ಬಗ್ಯೆ ಈ ಆಫೀಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟು ಇರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಟ್ಟು ಇರುತ್ತೆ.

ಜೆ. ಪಿ. ಗ್ರ್ಯಾಂಟ್,

ಸೂಪರಿಂಟೆಂಡೆಂಟ್ ಆಫ್ ಇನಾಂ ಸೆಟಲ್‌ಮೆಂಟ್, ಮೈಸೂರು.

ವಿದ್ಯಾಭ್ಯಾಸದ ಇಲಾಖೆ.

ಡಿ. ನಂಬರು 28ನೆಯ ಪ್ರಕಟನ ಪತ್ರಿಕೆ, ಸನ 1904ನೆಯ ಇಸವಿ ಜನವರಿ ತಾರೀಖು 9.

ಮೈಸೂರು ದೇಶೀಯ ಪರೀಕ್ಷಾ ಭಾಷಾ ಗ್ರಂಥಗಳು.

ಇದರಡೀ ಕಂಡ ಭಾಷಾ ಗ್ರಂಥಗಳು ಸನ 1905ನೆಯ ಇಸವಿ ನವಂಬರ್ ತಿಂಗಳಲ್ಲಿ ನಡೆವ ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ:—

ಕನ್ನಡ—ಗದ್ಯ...ನಿಯಮಿಸಲ್ಪಟ್ಟಿರುವ ಭಾಗ. (ಇಲಾಖೆಯವರಿಂದ ಮುದ್ರಿಸಲ್ಪಡುವುದು.)

ಪದ್ಯ...ಹೊಸ ಪದ್ಯಸಾರ, Iನೆಯ ಭಾಗ, ಪದ್ಯಗಳು 196—342.

ತೆಲುಗು—ಗದ್ಯ...ರಾಜಶೇಖರ ಚರಿತ್ರ, ಪುಟಗಳು 1—42 (ಐದು ಪ್ರಕರಣಗಳು.)
ಪದ್ಯ...ನಳಚರಿತ್ರಮು.

ಸಂಸ್ಕೃತ— ಮೊದಲನೆಯ ಭಾಷೆ.

ಪದ್ಯ...ರಘುವಂಶ, V ಮತ್ತು VIನೆಯ ಸರ್ಗಗಳು.

ಗದ್ಯ...ಯುದ್ಧಕಾಂಡ, ಗರಳಪುರಿ ಶಾಸ್ತ್ರಿಗಳಿಂದ ರಚಿಸಲ್ಪಟ್ಟದ್ದು.

ಎರಡನೆಯ ಭಾಷೆ.

ಹಿತೋಪದೇಶ—ಮಿತ್ರಲಾಭ (ಇಲಾಖೆಯರ ಮುದ್ರಣ.)

ಲ್ಯಾಟಿನ್—ಸೀಜರ್ ಡಿ ಬೆಲ್ಲೊ ಗ್ಯಾಲಿಕೊ, Vನೆಯ ಪುಸ್ತಕ.

ಉರ್ದು—ನಿಸಬೆ-ಉರ್ದು, ಟ್ರೇನಿಂಗ್ ಕಾಲೇಜುಗಳಿಗೆ ನಿಯಮಿಸಲ್ಪಟ್ಟಿರುವುದು, ಮುನಷಿ ಗುಲಾಬ್ ಸಿಂಗ್ ರವರಿಂದ ರಚಿಸಲ್ಪಟ್ಟದ್ದು, (ಪುಟಗಳು 93—108, 119-129 ಮತ್ತು 156—167, ವಿನಾ).

ಫಾರಷಿ— ಮೊದಲನೆಯ ಭಾಷೆ.

ಮುಂತಖಬಾತ್—ಐ—ಫಾರ್ಸಿ, IVನೆಯ ಭಾಗ, ರವರೆಂಡ್. ಇ. ಸಲ್ ಸಾಹೇಬರವರಿಂದ ರಚಿಸಲ್ಪಟ್ಟದ್ದು.

ಇದರಡೀ ಕಂಡ ಭಾಷಾ ಗ್ರಂಥಗಳು ಸರ್ 1905ನೆಯ ಇಸವಿ ನವಂಬರಿ ತಿಂಗಳಲ್ಲಿ ನಡೆವ ಮೈಸೂರು ದೇಶಭಾಷೆಯ ಅಪ್ಪರ್ ಸೆಕಂಡರಿ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ:—

ಕನ್ನಡ – ಪದ್ಯ..(1) ಕಾದಂಬರಿ., ಪದ್ಯಗಳು 101—199.

(2) ರಾಮಾಯಣ ನಾಟಕ, ಪಂಡಿತ ಅಯ್ಯಾಶಾಸ್ತ್ರಿಗಳಿಂದ ರಚಿಸಲ್ಪಟ್ಟದ್ದು. (ಗ್ರಂಥಮಾಲೆಯಲ್ಲಿ ಮುದ್ರಿತವಾದುದು.)

(3) ನಳರಾಜೇಂದ್ರ ಚರಿತ್ರೆ, ಪಂಡಿತ ಒಸಪ್ಪ ಶಾಸ್ತ್ರಿಗಳಿಂದ ರಚಿಸಲ್ಪಟ್ಟದ್ದು, Iನೆಯ ಅಧ್ಯಾಯ.

ಗದ್ಯ..(1) ಪ್ರಬಂಧಾವಳಿ, ಮೆ|| ಎಂ. ಎ. ರಾಮಾನುಜೈಯ್ಯಂಗಾರ್ಯರವರಿಂದ ರಚಿಸಲ್ಪಟ್ಟದ್ದು—(ಪೂರ್ತಿಯಾಗಿ)

(2) ಅರ್ಥಶಾಸ್ತ್ರ, ಮೆ|| ಎಚ್. ವಿ. ನಂಜುಂಡೈಯ್ಯನವರಿಂದ ರಚಿಸಲ್ಪಟ್ಟದ್ದು, IIನೆಯ ಭಾಗ, ಪುಟಗಳು 69—111.

(3) ರಾಮಾಶ್ವಮೇಧ—ಪುಟಗಳು 58—95.

ಸಂಸ್ಕೃತ—(1) ರಘುವಂಶ, IX ಮತ್ತು Xನೆಯ ಸರ್ಗಗಳು.

(2) ಪಂಚತಂತ್ರ, (ಮುಂಬೈ ಭಾಷೆ) Vನೆಯ ತಂತ್ರ.

ಉರ್ದು—ಗದ್ಯ...ಖನಿಸೆ ಫಟಮ (ಮುನಷಿ ಗಂಗಪರಸಾದ್ ರವರ ಪ್ರೆಸ್, ಲಕ್ನೊ).

ಸಂರಮ—ದಿ ಆನತ್ (ಮುನಷಿ ಗಂಗಪರಸಾದ್ ರವರ ಪ್ರೆಸ್, ಲಕ್ನೊ).

ಪದ್ಯ..ದಿವಾನ್—ಐ—ನಾಸಿಖ್, ರಡಿಫ್ ಅಲಿಫ್ ಇಂದ ನೂನ್ ಅಂತ್ಯದ ವರೆಗೆ.

ಫಾರಷಿ—ಪದ್ಯ..ದಿವಾನ್—ಐ—ಹಾಫಿಜ್, ರಡಿಫ್-ಜೆ ಇಂದ್ರ ಕೊನೆಯ ವರೆಗೆ, (ನವಲ್ ಕಿಷೋರೀ ಪ್ರೆಸ್).

ಗದ್ಯ ಕಿಸ್ಸನಾಮ (ಫಿರ್ದೋಸ್ ಪ್ರೆಸ್, ಕಲ್ಕತ್ತ).

ಪ್ರ ಕ ಟ ನ ಪ ತ್ರಿ ಕೆ

ಸರ್ 1904ನೆ ಇಸವಿ ಜನವರಿ 26ನೆ ತಾರೀಖಿನ ಡಿ. ನಂಬರು 39.

ಮೈಸೂರು ಲೋವರ್ ಸೆಕಂಡರಿ ಪರೀಕ್ಷೆ.

ಹೊಸದಾಗಿ ತಿದ್ದುಪಾಟು ಮಾಡಿದ ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಯ ನಿಬಂಧನೆಗಳು ಜನಗಳ ತಿಳುವಳಿಕೆ ಬಗ್ಗೆ ಈ ಕೆಳಗೆ ಪ್ರಕಟಿಸಲ್ಪಟ್ಟಿವೆ. [2, 3, 6, 7, 8, 9 ಮತ್ತು 15ನೆ ಅಂಶಗಳಲ್ಲಿನ ಬದಲಾವಣೆಗಳಿಗೆ ವಿಶೇಷ ಗಮನ ಕೊಡತಕ್ಕದ್ದು.]

1. ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಯು ಪ್ರತಿ ವರುಷವೂ ನವಂಬರು ತಿಂಗಳು ಹದಿನೈದನೇ ತಾರೀಖಿನಲ್ಲಿ ಅಥವಾ ಆ ತಾರೀಖು ಭಾನುವಾರವಾದಪಕ್ಷದಲ್ಲಿ ನವಂಬರು ತಿಂಗಳು 16ನೆ ತಾರೀಖಿನಲ್ಲಿ ಆರಂಭವಾಗಿ ಆ ದಿವಸದಲ್ಲಿಯೂ ಮುಂದಿನ ದಿವಸಗಳಲ್ಲಿಯೂ ಒಂದೊಂದು ಡಿಸ್ಟ್ರಿಕ್ಟಿನ ಮುಖ್ಯಸ್ಥಳದಲ್ಲಿಯೂ (Head quarters) ಚಿಕ್ಕಬಳ್ಳಾಪುರ ಮತ್ತು ಚನ್ನಪಟ್ಟಣ ಈ ಸ್ಥಳಗಳಲ್ಲಿಯೂ ಪರೀಕ್ಷಾ ಕಾಲಕ್ಕೆ ಪೂರ್ವವೇ ನೇಮಿಸಲ್ಪಡಬಹುದಾದ ಇತರ ಸ್ಥಳಗಳಲ್ಲಿಯೂ ನಡೆಯಿಸಲ್ಪಡುವುದು—

2. ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಗೆ ಇದರಡಿ ವಿವರಿಸಲ್ಪಟ್ಟಿರುವವರು ಸೇರಬಹುದು. —

(a) ಸರ್ಕಾರದ ದ್ರವ್ಯಸಹಾಯದ ಅಥವಾ ಮುನಿಸಿಪಾಲಿಟಿಯ ಯಾವುದಾದರೂ ಒಂದು ಆಂಗ್ಲ — ದೇಶಭಾಷಾ ಪಾಠಶಾಲೆಯ ಅಥವಾ ಸರ್ಕಾರದಿಂದ ಅಂಗೀಕೃತವಾದ ಇತರ ಆಂಗ್ಲ — ದೇಶಭಾಷಾ ಪಾಠಶಾಲೆಯ ಮೂರನೇ ಶ್ರೇಣಿಯ (Form) ವಿದ್ಯಾರ್ಥಿಗಳು.

(b) ಸರ್ಕಾರದ, ದ್ರವ್ಯಸಹಾಯದ ಅಥವಾ ಸರ್ಕಾರದಿಂದ ಅಂಗೀಕೃತವಾಗಿ ಸ್ವಂತವಾಗಿಟ್ಟುಕೊಂಡಿರುವ ಯಾವದಾದರೂ ಒಂದು ದೇಶಭಾಷಾ ಪಾಠಶಾಲೆಯ ಐದನೇ ವರ್ಗದಲ್ಲಿರುವ (Class) ವಿದ್ಯಾರ್ಥಿಗಳು.

(c) ಸರ್ಕಾರದ, ದ್ರವ್ಯಸಹಾಯದ ಅಥವಾ ಸರ್ಕಾರದಿಂದ ಅಂಗೀಕೃತವಾಗಿ ಸ್ವಂತವಾಗಿಟ್ಟುಕೊಂಡಿರುವ ಸಂಸ್ಕೃತ ಮಿಡಿಲ್ ಪಾಠಶಾಲೆಗಳ ಮೇಲ್ಪಟ್ಟ ವರ್ಗದ ವಿದ್ಯಾರ್ಥಿಗಳು.

ಪರಂತು ಈ ಮೇಲ್ಕಂಡ ವಿದ್ಯಾರ್ಥಿಗಳು ಪರೀಕ್ಷೆಗೆ ಹಿಂದಿನ ಫೆಬ್ರುವರಿ ತಿಂಗಳು 1ನೆ ತಾರೀಖಿನಿಂದ ದರಖಾಸ್ತು ಕೊಡುವ ತಾರೀಖಿನ ವರೆಗೆ ಕ್ರಮವಾಗಿ ವ್ಯಾಸಂಗಮಾಡುತ್ತಾ ಇದ್ದರೆಂದು ಪ್ರಮಾಣೀಕರಿಸಲ್ಪಡಬೇಕು.

[ಟಿಪ್ಪಣಿ 1. ವಿದ್ಯಾರ್ಥಿಗಳಾದ ಪರೀಕ್ಷ್ಯರೆಲ್ಲರೂ (Candidates) ಸಂವತ್ಸರಾಂತ್ಯದವರೆಗೂ ಪಾಠಶಾಲೆಯಲ್ಲಿ ವ್ಯಾಸಂಗ ಮಾಡುತ್ತೇವೆಂದು ಪ್ರಮಾಣೀಕರಿಸಬೇಕು. ಪರೀಕ್ಷೆಗೆ ದರಖಾಸ್ತು ಕೊಟ್ಟ ತರುವಾಯ ಪುನಃಪೂರ್ವಕವಾಗಿ ಪಾಠಶಾಲೆಗೆ ಕ್ರಮವಾಗಿ ಬಾರದೆ ಇರುವ ಅಥವಾ ಪಾಠಶಾಲೆಯ ವೇತನವನ್ನು (School Fee) ಕೊಡದೆ ಇರುವ ಯಾವ ವಿದ್ಯಾರ್ಥಿಯ ವಿಷಯವಾಗಿಯಾಗಲಿ ಹೆಡ್‌ಮಾಸ್ಟರ್ ಎಂದರೆ ಮುಖ್ಯೋಪಾಧ್ಯಾಯರುಗಳು ದೇಶೀಯ ಪರೀಕ್ಷಾ ಆಫೀಸ್ ಮ್ಯಾನೇಜರವರಿಗೆ ಬರೆದುಕೊಂಡಲ್ಲಿ ಅಂಥಾ ಪರೀಕ್ಷ್ಯರು ಪರೀಕ್ಷೆಗೆ ಸೇರಿಸಲ್ಪಡುವದಿಲ್ಲ.

ಟಿಪ್ಪಣಿ 2. ಹಿಂದಿನ ಯಾವುದಾದರೂ ಒಂದು ವರ್ಷದಲ್ಲಿ ಲೋವರ್ ಸೆಕಂಡರಿ ಪರೀಕ್ಷೆಗೆ ಹೋಗಿ ತೇರ್ಗಡೆಯಾಗದ ಒಬ್ಬ ವಿದ್ಯಾರ್ಥಿ ಪರೀಕ್ಷ್ಯನ (Pupil Candidate) ವಿಷಯದಲ್ಲಿ ಮುಖ್ಯೋಪಾಧ್ಯಾಯರು ಇವನು ಪುನಃ ಪರೀಕ್ಷೆಗೆ ಹೋಗುವ ವರುಷದಲ್ಲಿ ಆ ವರ್ಷದ ಒಂದು ಭಾಗ ಯಾವುದಾದರೂ ಒಂದು ಅಂಗೀಕೃತವಾದ ಪಾಠಶಾಲೆಯಲ್ಲಿ ಓದುತ್ತಿದ್ದನೆಂಬ ಪ್ರಮಾಣಪತ್ರಿಕೆ ಇಲ್ಲದೆಯೇ ಸೇರಿಸಿಕೊಳ್ಳಬೇಕೆಂದು ಜುಲೈ ಗುರ್ರೇ ತಾರೀಖಿಗೆ ಮುಂಚಿತವಾಗಿ ಶಿಫಾರಸು ಮಾಡಿದರೆ ಆ ಪರೀಕ್ಷ್ಯನನ್ನು ಹಾಗೆ ಸೇರಿಸಿಕೊಳ್ಳಬಹುದು.

ಟಿಪ್ಪಣಿ 3. ಈ ಪರೀಕ್ಷೆಯ ಸಂಬಂಧದಲ್ಲಿ ಸ್ವಂತವಾಗಿಟ್ಟಿರುವ ಪಾಠಶಾಲೆಗಳು ಸರ್ಕಾರದಿಂದ ಅಂಗೀಕರಿಸಲ್ಪಡಬಹುದು.

ಟಿಪ್ಪಣಿ 4. ಯಾವುದಾದರೂ ಒಂದು ಅಂಗೀಕೃತವಾದ ಪಾಠಶಾಲೆಯ ಮುಖ್ಯೋಪಾಧ್ಯಾಯನು ಲೋವರ್ ಸೆಕಂಡರಿ ಪರೀಕ್ಷೆಯ ಪ್ರಕಟನ ಪತ್ರಿಕೆಯ ತತ್ಕಾಲದಲ್ಲಿ ಆಚರಣೆಯಲ್ಲಿರುವ ಯಾವ ಕಟ್ಟಳೆಗಾದರೂ ವ್ಯತಿರಿಕ್ತವಾಗಿ ನಡೆದ ಪಕ್ಷದಲ್ಲಿ ಪರೀಕ್ಷಾ ನಿರ್ವಾಹಕ ಸಭೆಯವರು ಲೋವರ್ ಸೆಕಂಡರಿ ಪರೀಕ್ಷೆಯ ಸಂಬಂಧದಲ್ಲಿ ಆ ಪಾಠಶಾಲೆಯನ್ನು ಅಂಗೀಕರಿಸದೆ ಇರಬಹುದು.]

(d) ಸರ್ಕಾರದ, ದ್ರವ್ಯಸಹಾಯದ ಅಥವಾ ಅಂಗೀಕೃತವಾದ ದೇಶಭಾಷಾ ಪಾಠಶಾಲೆಗಳ ಉಪಾಧ್ಯಾಯರುಗಳು.

(e) ಮೇಲ್ಕಂಡವರಲ್ಲದೆ ಪರೀಕ್ಷೆಗೆ ಬರುವವರೆಲ್ಲರೂ ಸ್ವಂತ ವ್ಯಾಸಂಗಿಗಳೆಂದು ಭಾವಿಸಲ್ಪಡುವರು. ಈ ಪರೀಕ್ಷ್ಯರು ಸರ್ಕಾರದ ಉದ್ಯೋಗಸ್ಥರಾಗಿರುವ ಪಕ್ಷದಲ್ಲಿ ಯಾವ ವಯಸ್ಸಿನವರಾಗಿದ್ದರೂ ಇರಬಹುದು. ಸರ್ಕಾರದ ಉದ್ಯೋಗಸ್ಥರಲ್ಲದ ಪಕ್ಷದಲ್ಲಿ ಅವರು ಹದಿನಾರು ವರುಷಕ್ಕಿಂತ ಕಡಮೆಯಾದ ವಯಸ್ಸುಳ್ಳವರಾಗಿರಕೂಡದು.

[ಟಿಪ್ಪಣಿ. ಒಬ್ಬ ಹೆಡ್ ಮಾಸ್ಟರ್ ಎಂದರೆ ಮುಖ್ಯೋಪಾಧ್ಯಾಯನು ಲೋವರ್ ಸೆಕಂಡರಿ ಪರೀಕ್ಷೆಗೆ ಸ್ವಂತ ವ್ಯಾಸಂಗಿಯಂತೆ ಸೇರಿದ ತನ್ನ ಪಾಠಶಾಲೆಯ ಯಾವನಾದರೂ ಒಬ್ಬ ವಿದ್ಯಾರ್ಥಿಯ ಪರೀಕ್ಷೆಯ ಫಲಿತಾಂಶವು ತನ್ನ ಪಾಠಶಾಲೆಗೆ ಸೇರಬೇಕೆಂದರೆ ಪರೀಕ್ಷೆ ನಡೆಯುವಕಾಲಕ್ಕೆ ಪೂರ್ವವೇ ದೇಶೀಯ ಪರೀಕ್ಷೆಗಳ ಮ್ಯಾನೇಜರವರಿಗೆ ಬರೆದುಕೊಂಡ ಪಕ್ಷ ಆದಲ್ಲಿ ಫಲಿತಾಂಶವನ್ನು ಸೇರಿಸಿಕೊಡಬಹುದು.]

3. ಯಾವದಾದರೂ ಒಂದು ದೇಶಭಾಷೆಯನ್ನು ಪ್ರಥಮ ಭಾಷೆಯಾಗಿ ತೆಗೆದುಕೊಂಡು ಮೈಸೂರು ಉಪಾಧ್ಯಾಯರ ಅಥವಾ ವಿದ್ಯಾರ್ಥಿಗಳ ಪರೀಕ್ಷೆಯಲ್ಲಾಗಲಿ, ಮೈಸೂರು ಅಥವಾ ಮದರಾಸ್ ಲೋವರ್ ಸೆಕಂಡರಿ ಪರೀಕ್ಷೆಯಲ್ಲಾಗಲಿ, ಅಥವಾ ಮದರಾಸ್ ಮಿಡಿಲ್ ಸ್ಕೂಲ್ ಪರೀಕ್ಷೆಯಲ್ಲಾಗಲಿ, ಮೊದಲೇ ತೇರ್ಗಡೆಯಾಗಿರುವವರು, ನಿಯಮಿಸಲ್ಪಟ್ಟ ವೇತನವನ್ನು (Fee) ಕೊಟ್ಟು ಪರೀಕ್ಷೆಗೆ ಸೇರಿಸಿಕೊಳ್ಳಲು ಬರೆದುಕೊಳ್ಳುವ ದರಖಾಸ್ತುಗಳೊಡನೆ ತಾವು ತೇರ್ಗಡೆಯಾಗಿರುವ ಅಂಶವನ್ನು ತಿಳಿಸುವ ನಿರ್ಣಯ ಪತ್ರಿಕೆಯನ್ನು (Certificate) ಕಳುಹಿಸಿಕೊಟ್ಟರೆ, ಇಂಗ್ಲಿಷ ಭಾಷೆಯಲ್ಲಿ ಮಾತ್ರವೇ ಆಗಲಿ, ಸಂಸ್ಕೃತಭಾಷೆಯಲ್ಲಿ ಮಾತ್ರವೇ ಆಗಲಿ, ಅಥವಾ ಪರೀಕ್ಷ್ಯರು ಮೊದಲೇ ತೇರ್ಗಡೆಯಾಗಿರುವ ದೇಶಭಾಷೆಯಲ್ಲದ ಬೇರೆ ಯಾವ ದೇಶಭಾಷೆಯಲ್ಲಿ ಮಾತ್ರವೇ ಆಗಲಿ, ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಗೆ ಸೇರಬಹುದು.

4. ಕನ್ನಡವನ್ನು ಐಚ್ಛಿಕ ಭಾಷೆಯಾಗಿ ತೆಗೆದುಕೊಂಡು ಮದ್ರಾಸ ಮಿಡಲ್ ಸ್ಕೂಲ್ ಅಥವಾ ಅದಕ್ಕಿಂತ ಅಧಿಕವಾದ ಬೇರೆ ಯಾವುದಾದರೂ ಒಂದು ಪರೀಕ್ಷೆಯಲ್ಲಿ ತೇರ್ಗಡೆಯಾಗಿಲ್ಲದಿದ್ದರೆ ಮೈಸೂರು ಸರ್ಕಾರದ ದೇಶಭಾಷಾ ಸಂಬಂಧವಾದ ಇಲಾಖೆಗಳಲ್ಲಿ ಉದ್ಯೋಗವನ್ನು ಅಪೇಕ್ಷಿಸುವವರೆಲ್ಲರೂ ಕನ್ನಡವನ್ನು ಒಂದು ಭಾಷೆಯಾಗಿ ತೆಗೆದುಕೊಂಡು ಈ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಅವಶ್ಯಕವಾಗಿರುತ್ತದೆ.

೭೬೦

5. ಸರ್ಕಾರದ ದೇಶಭಾಷಾ ಪಾಠಶಾಲೆಯಲ್ಲಿ ಉಪಾಧ್ಯಾಯರ ಕೆಲಸವನ್ನು ಅಪೇಕ್ಷಿಸುವವರು ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ತತ್ಕಾಲದಲ್ಲಿ ಸರ್ಕಾರದ ಪಾಠಶಾಲೆಗಳಲ್ಲಿರುವ ಉಪಾಧ್ಯಾಯರುಗಳು ತಾವು ಅಭಿವೃದ್ಧಿಯನ್ನು ಹೊಂದಲು ಅರ್ಹರಾಗಬೇಕಾದಲ್ಲಿ ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು.

6. ಈ ಪರೀಕ್ಷೆಯ ವಿಷಯಗಳು ಕೆಳಗೆ ವಿವರಿಸಲ್ಪಟ್ಟಿವೆ :—

ಅವಶ್ಯಕ ವಿಷಯಗಳು.

I. ಪ್ರಥಮ ಭಾಷೆ—A. ಇಂಗ್ಲಿಷ್, B. ಕನ್ನಡ, ತೆಲುಗು ಅಥವಾ ಉರ್ದು C. ಸಂಸ್ಕೃತ, D. ಫಾರಸಿ.

A. ಇಂಗ್ಲಿಷ್.—120 ಅಂಕಗಳು.

ಇಂಗ್ಲಿಷ್ ಭಾಷೆಯು ಪ್ರತಿಯೊಂದಕ್ಕೂ 60 ಅಂಕಗಳುಳ್ಳ ಎರಡು ಶಾಖೆಗಳಾಗಿ ವಿಭಾಗಿಸಲ್ಪಟ್ಟಿರುವುದು.

I ನೆಯ ಶಾಖೆ—

(*a*) ಕೈ ಬರವಣಿಗೆ—ಅಚ್ಚು ಹಾಕಲ್ಪಟ್ಟ ಅಥವಾ ಶಿಲಾಯಂತ್ರದಿಂದ ಛಾಪಿಸಲ್ಪಟ್ಟ ಒಂದು ಪತ್ರಿಕೆಯನ್ನು ಶೀಘ್ರವಾಗಿಯೂ ಸ್ಪಷ್ಟವಾಗಿಯೂ ಚೆನ್ನಾಗಿಯೂ ಬರೆಯುವುದು.—10 ಅಂಕಗಳು.

(*b*) ಉಕ್ತಲೇಖನ.—ಸಮ್ಮತವಾದ ಯಾವುದಾದರೂ ಒಂದು ಮೂರನೇ ಇಂಗ್ಲಿಷ್ ರೀಡರಿಗೆ ಸಮಾನವಾದ ಒಂದು ಪುಸ್ತಕದಿಂದ ಓದಲ್ಪಡುವ ಒಂದು ಭಾಗವನ್ನು ಮತ್ತು ವಿಶೇಷ ಕಷ್ಟವಿಲ್ಲದ ಕೆಲವು ಪದಗಳನ್ನು ಬರೆಯುವುದು.—15 ಅಂಕಗಳು.

(*c*) ಭಾಷಾಂತರೀಕರಣ ಅಥವಾ ಇಂಗ್ಲಿಷ್ ಪ್ರಬಂಧರಚನೆ.

ಭಾಷಾಂತರೀಕರಣ.

(1) ಕಥಾರೂಪವಾದ ವಚನಕಾವ್ಯದ ಒಂದು ಸಾಧಾರಣವಾದ ಭಾಗವನ್ನು ಇಂಗ್ಲಿಷ್ ಭಾಷೆಯಿಂದ ಪರೀಕ್ಷ್ಯನ ದೇಶಭಾಷೆಗೆ ಭಾಷಾಂತರ ಮಾಡುವುದು.—15 ಅಂಕಗಳು.

(2) ಕಥಾರೂಪವಾದ ವಚನಕಾವ್ಯದ ಒಂದು ಸಾಧಾರಣವಾದ ಭಾಗವನ್ನು ಸುಲಭವಾದ ಚಿಕ್ಕ ವಾಕ್ಯಗಳನ್ನು ದೇಶಭಾಷೆಯಿಂದ ಇಂಗ್ಲಿಷ್ ಭಾಷೆಗೆ ಭಾಷಾಂತರ ಮಾಡುವುದು.—20 ಅಂಕಗಳು.

ಇಂಗ್ಲಿಷ್ ಪ್ರಬಂಧರಚನೆ (ಇಂಗ್ಲಿಷ್ ದೇಶಭಾಷೆಯಾಗಿರುವ ಪರೀಕ್ಷ್ಯರಿಗೆ ಮಾತ್ರ) :—

(1) ಕೊಡಲ್ಪಡುವ ಯಾವುದಾದರೂ ಒಂದು ಸಂಗತಿಯನ್ನು ಕುರಿತು ಸಂಕ್ಷೇಪವಾದ ಒಂದು ಪತ್ರಿಕೆಯನ್ನಾಗಲಿ, ಯಾವುದಾದರೂ ಒಂದು ಸ್ಥಳದ ಸಂಕ್ಷೇಪವಾದ ವರ್ಣನೆಯನ್ನಾಗಲಿ, ಯಾವುದಾದರೂ ಒಂದು ಉಪಯೋಗವಾದ ಪದಾರ್ಥದ ವಿವರವನ್ನಾಗಲಿ ಅಥವಾ ಪ್ರಖ್ಯಾತವಾದ ಯಾವುದಾದರೂ ಒಂದು ಸಂಗತಿಯ ಕಥೆಯನ್ನಾಗಲಿ ಬರೆಯುವುದು.—20 ಅಂಕಗಳು.

(2) ಹಿಂದೆ ಓದಿರುವ ಪದ್ಯಕಾವ್ಯದ ಒಂದು ಚಿಕ್ಕ ಭಾಗವನ್ನು ಅನುವಾದ ಮಾಡುವುದು. (Paraphrasing) 15 ಅಂಕಗಳು.

II ನೆಯ ಶಾಖೆ.—

(*d*) ವ್ಯಾಕರಣ.—ಅಕ್ಷರಲಕ್ಷಣ, ಶಬ್ದಲಕ್ಷಣ, ವಾಕ್ಯಲಕ್ಷಣ, ನಾಮಪದಗಳು, ಕ್ರಿಯಾಪದಗಳು, ಗುಣವಾಚಕಗಳು ಮತ್ತು ಕ್ರಿಯಾವಿಶೇಷಣಗಳು ಇವುಗಳ ಉತ್ಪತ್ತಿ ; ಸಾಧಾರಣ ವಾಕ್ಯಗಳು, ಸಂಯೋಜಿತ ವಾಕ್ಯಗಳು ಮತ್ತು ಸಂಮಿಶ್ರಿತ ವಾಕ್ಯಗಳು ಇವುಗಳ ವಿಭಜನೆ ; ಇವುಗಳ ವಿಷಯವಾದ ಸಿ. ವಿ. ಇ. ಸಮಾಜದ ನ್ಯೂ ಮಾನ್ಯುಎಲ್ ಆಫ್ ಇಂಗ್ಲಿಷ್ ಗ್ರಾಮರ್ ಎಂಬ ವ್ಯಾಕರಣಕ್ಕಾಗಲಿ ಅಥವಾ ಮೇಸನ್ನವರ ಫಸ್ಟ್ ನೋಷನ್ಸ್ ಆಫ್ ಗ್ರಾಮರ್ ಎಂಬ ವ್ಯಾಕರಣಕ್ಕಾಗಲಿ ವಿಶೇಷವಾಗಿ ಸಂಬಂಧಪಟ್ಟ ಅಭ್ಯಾಸ ಪಾಠಗಳು.—20 ಅಂಕಗಳು.

(*e*) ಭಾಷೆ—ಪ್ರಶ್ನೆಗಳು ಇವರಡಿ ಕಂಡ ಸಂಗತಿಗಳಿಗೆ ವಿಶೇಷವಾಗಿ ಸಂಬಂಧಪಟ್ಟಿರುವುವು :—ಪದಗಳ, ಪದಸ್ತೋಮಗಳ ಮತ್ತು ಭಾಷಾ ಸಂಪ್ರದಾಯಗಳ ಅರ್ಥ ವಿವರಣೆ ಮತ್ತು ಪ್ರಯೋಗ ; ವಾಕ್ಯಗಳ ಅರ್ಥ ವಿವರಣೆ ; ಲೋಪಿಸಿ ಇರುವುದನ್ನು ಬರೆಯುವುದು ; ಕೊಡಲ್ಪಡುವ ಪದಗಳನ್ನಾಗಲಿ, ಪದಸ್ತೋಮಗಳನ್ನಾಗಲಿ, ಭಾಷಾ ಸಂಪ್ರದಾಯಗಳನ್ನಾಗಲಿ ಸರಿಯಾಗಿ ಉಪಯೋಗಿಸಿ ಸಣ್ಣ ಸಣ್ಣ ವಾಕ್ಯಗಳನ್ನು ಬರೆಯುವುದು ; ಸೂಚಿಸಲ್ಪಡುವ ಪ್ರಕಾರ ಅನ್ವಯಗಳನ್ನು ಬದಲಾಯಿಸಿ ವಾಕ್ಯಗಳನ್ನು ಪುನಃ ಬರೆಯುವುದು : ಮುರಿಸನ್ನವರ ಫಸ್ಟ್ ವರ್ಕ್ ಇನ್ ಇಂಗ್ಲಿಷ್, Iನೆಯ ಭಾಗ, ಅಧ್ಯಾಯಗಳು I—V ಮತ್ತು ಹೈಡ್ ಎಂಬಾತನ ಲೆಸನ್ಸ್ ಇನ್ ದಿ ಯೂಸ್ ಆಫ್ ಇಂಗ್ಲಿಷ್, I ಮತ್ತು IIನೆಯ ಭಾಗಗಳು, ಈ ಪುಸ್ತಕಗಳಲ್ಲಿರುವಂತೆ ಇಂಗ್ಲಿಷ್ ಭಾಷಾ ಪ್ರಯೋಗದ ಸುಲಭವಾದ ಅಭ್ಯಾಸ ಪಾಠಗಳು.—40 ಅಂಕಗಳು.

B. ಕನ್ನಡ, ತೆಲುಗು, ಅಥವಾ ಉರ್ದು.—

(a) ಕೈ ಬರವಣಿಗೆ.—ಅಚ್ಚು ಹಾಕಲ್ಪಟ್ಟ ಅಥವಾ ಶಿಲಾಯಂತ್ರದಿಂದ ಛಾಪಿಸಲ್ಪಟ್ಟ ಒಂದು ಪತ್ರಿಕೆಯನ್ನು ಸ್ಪಷ್ಟವಾಗಿಯೂ, ಚೆನ್ನಾಗಿಯೂ ಬರೆಯುವುದು.—10 ಅಂಕಗಳು.

(b) ಅಕ್ಷರಸಂಯೋಜನ.—ಅಪ್ಪರ್ ಪ್ರೈಮರಿ ಇಯತ್ತೆಯ (Standard) ಒಂದು ಪುಸ್ತಕದಿಂದ ಓದಲ್ಪಡುವದನ್ನು ಬರೆಯುವುದು.—10 ಅಂಕಗಳು.

(c) ವ್ಯಾಕರಣ.—ಪಾಠಶಾಲೆಯಲ್ಲಿ ಓದಲು ಯೋಗ್ಯವೆಂದು ಅಂಗೀಕರಿಸಲ್ಪಟ್ಟ ಯಾವುದಾದರೂ ಒಂದು ವ್ಯಾಕರಣದಲ್ಲಿ ಬರೆದಿರುವಂತೆ, ಅಕ್ಷರಲಕ್ಷಣ, ಶಬ್ದಲಕ್ಷಣ, ವಾಕ್ಯಲಕ್ಷಣ, ಇವುಗಳ ವಿಷಯವಾದ ಅಭ್ಯಾಸ ಪಾಠಗಳು.—25 ಅಂಕಗಳು.

(d) ಭಾಷಾಗ್ರಂಥ.—ಪ್ರಕಟಿಸಲ್ಪಡುವ ಗ್ರಂಥ, ಪದಗಳು, ಪದಸ್ತೋಮಗಳು, ಭಾಷಾಸಂಪ್ರದಾಯಗಳು, ವಾಕ್ಯಗಳು ಮತ್ತು ವಾಕ್ಯಸ್ತೋಮಗಳು ಇವುಗಳ ವಿವರಣೆ; ಲುಪ್ತವಾದುದನ್ನು ಸೇರಿಸಿ ಬರೆಯುವುದು; ಸಾಧಾರಣ ಪದಗಳ ಉತ್ಪತ್ತಿ ಮತ್ತು ಅವುಗಳ ರೂಪನಿಷ್ಪತ್ತಿ ಮತ್ತು ಪೂರ್ವಪದ ಪ್ರತ್ಯಯಗಳ ಅನುಬಂಧನೆಯಿಂದಾಗುವ ಅರ್ಥಭೇದಗಳು ; ಪದ್ಯಗಳ ಮುಖ್ಯ ತಾತ್ಪರ್ಯದ ವಿವರಣೆ.—40 ಅಂಕಗಳು.

(e) ಪ್ರಬಂಧರಚನೆ.—

(1) ಕೊಡಲ್ಪಡುವ ಯಾವುದಾದರೂ ಒಂದು ಸಂಗತಿಯನ್ನು ಕುರಿತು ಸಂಕ್ಷೇಪವಾದ ಒಂದು ಪತ್ರಿಕೆಯನ್ನು ಬರೆಯುವುದು.—15 ಅಂಕಗಳು.

(2) ಯಾವುದಾದರೂ ಒಂದು ಸ್ಥಳದ ಸಂಕ್ಷೇಪವಾದ ವರ್ಣನೆಯನ್ನಾಗಲಿ (ಸ್ವಾಭಾವಿಕವಾದ ಅಥವಾ ಮನುಷ್ಯಕೃತವಾದ) ಯಾವುದಾದರೂ ಒಂದು ಉಪಯೋಗವಾದ ಪದಾರ್ಥದ ವಿವರವನ್ನಾಗಲಿ ಪ್ರಖ್ಯಾತವಾದ ಯಾವುದಾದರೂ ಒಂದು ಸಂಗತಿಯ ಕಥೆಯನ್ನಾಗಲಿ ಪರೀಕ್ಷ್ಯನ ಸ್ವಂತ ಮಾತುಗಳಿಂದ ಬರೆಯುವುದು.—20 ಅಂಕಗಳು.

C. ಸಂಸ್ಕೃತ.—120 ಅಂಕಗಳು.

(a) ಕೈ ಬರವಣಿಗೆ.—ದೇವನಾಗರಿಯ ಅಕ್ಷರದಲ್ಲಿ ಛಾಪಿಸಲ್ಪಟ್ಟಿರುವ ಒಂದು ಪತ್ರಿಕೆಯನ್ನು ಸ್ಪಷ್ಟವಾಗಿಯೂ ಚೆನ್ನಾಗಿಯೂ ಬರೆಯುವುದು.—10 ಅಂಕಗಳು.

(b) ಅಕ್ಷರಸಂಯೋಜನ.—ಹೇಳಲ್ಪಡುವ ಕೆಲವು ಕಠಿಣವಾದ ಪದಗಳನ್ನೂ ಮತ್ತು ನಿಯಮಿಸಲ್ಪಟ್ಟ ಭಾಷಾಗ್ರಂಥಕ್ಕೆ ಸಮಾನವಾದ ಯಾವುದಾದರೂ ಒಂದು ಪುಸ್ತಕದಿಂದ ಓದಲ್ಪಡುವ ಒಂದು ಚಿಕ್ಕ ಭಾಗವನ್ನೂ ದೇವನಾಗರಿಯಕ್ಷರದಲ್ಲಿ ಬರೆಯುವುದು.—10 ಅಂಕಗಳು.

(c) ವ್ಯಾಕರಣ.—ಸಂಧಿಸೂತ್ರಗಳು, ಸ್ವರಾಂತವಾದ ಅಥವಾ ವ್ಯಂಜನಾಂತವಾದ ನಾಮಪದಗಳು ಮತ್ತು ಗುಣವಾಚಕಗಳು, ಸರ್ವನಾಮಗಳು, ಮತ್ತು ಸರ್ವನಾಮಾತ್ಮಕ ಗುಣವಾಚಕಗಳು, ಇವುಗಳ ವಿಭಕ್ತಿರೂಪಗಳು; ಅಪೂರ್ವವಾದ ಮತ್ತು ವಿಕಾರವನ್ನು ಹೊಂದಿದ ವಿಭಕ್ತಿರೂಪಗಳು ; ಗುಣವಾಚಕಗಳ ತಾರತಮ್ಯಗಳು ; ಸಂಖ್ಯಾವಾಚಕಗಳು ; ಎಲ್ಲಾ ಹತ್ತು ವಿಕರಣಿಯ ಧಾತುಗಳ ಸಾರ್ವಧಾತುಕ ರೂಪಗಳು ; ಒಂದನೇ, ನಾಲ್ಕನೇ, ಆರನೇ ಮತ್ತು ಹತ್ತನೇ ವಿಕರಣಿಯ ಧಾತುಗಳ ಲಿಙ್ ರೂಪಗಳು ; ಲಿಟ್, ಲುಟ್ ಲೃಟ್, ಮತ್ತು ಲೃಙ್ ; ಕರ್ಮಣಿ ಪ್ರಯೋಗ ; ಸಮಾಸಪದಗಳು. [ಡಾಕ್ಟರ್ ಭಂಡಾರ್ಕರರವರ ಸಂಸ್ಕೃತದ ಮೊದಲನೇ ಪುಸ್ತಕದಲ್ಲಿಯೂ ಮತ್ತು ಎರಡನೇ ಪುಸ್ತಕದ ಮೊದಲ 20 ಪಾಠಗಳಲ್ಲಿಯೂ ಹೇಳಿರುವಂತೆ.]—25 ಅಂಕಗಳು.

(d) ಭಾಷಾಗ್ರಂಥಗಳು.—ಪ್ರತಿ ವರ್ಷದಲ್ಲಿಯೂ ನಿಯಮಿಸಲ್ಪಡಬಹುದಾದ ಗ್ರಂಥಗಳು ; ವಚನಕಾವ್ಯದಲ್ಲಿ ಸುಮಾರು 80 ಪುಟಗಳು ಮತ್ತು ಪದ್ಯಕಾವ್ಯದಲ್ಲಿ 1,000 ಪಙ್ಕ್ತಿಗಳಿಗೆ ಅಧಿಕವಿಲ್ಲದೆ.

ಪರೀಕ್ಷೆಯು ಅನ್ವಯ, ಅರ್ಥವಿವರಣೆ ಮತ್ತು ಸರಳಾನುವಾದ ಇವುಗಳಿಗೆ ವಿಶೇಷವಾಗಿ ಸಂಬಂಧಪಡುವುದು.—40 ಅಂಕಗಳು.

(e) ಭಾಷಾಂತರೀಕರಣ.—35 ಅಂಕಗಳು.

(1) ಪಂಚತಂತ್ರಕ್ಕೆ ಸಮಾನವಾದ ಯಾವುದಾದರೂ ಒಂದು ಸಂಸ್ಕೃತ ಗ್ರಂಥದಿಂದ ತೆಗೆದು ಕೊಡಲ್ಪಡುವ ವಚನರೂಪವಾದ ಒಂದು ಭಾಗವನ್ನು ಪರೀಕ್ಷ್ಯನ ದೇಶಭಾಷೆಗೆ ಭಾಷಾಂತರ ಮಾಡುವುದು.—15 ಅಂಕಗಳು.

(2) ವಿಶೇಷ ಕಠಿಣವಲ್ಲದ ಒಂದು ದೇಶಭಾಷಾ ಗ್ರಂಥದಿಂದ ಕೊಡಲ್ಪಡುವ ವಚನರೂಪವಾದ ಒಂದು ಭಾಗವನ್ನು ಸಂಸ್ಕೃತಕ್ಕೆ ಭಾಷಾಂತರ ಮಾಡುವುದು.—20 ಅಂಕಗಳು.

D. ಫಾರಸಿ.—

(a) ಕೈ ಬರವಣಿಗೆ.—ಬರೆಯಲ್ಪಟ್ಟ ಅಥವಾ ಶಿಲಾಯಂತ್ರದಿಂದ ಛಾಪಿಸಲ್ಪಟ್ಟ ಒಂದು ಪತ್ರಿಕೆಯನ್ನು ಸ್ಪಷ್ಟವಾಗಿಯೂ ಚೆನ್ನಾಗಿಯೂ ಬರೆಯುವುದು.—10 ಅಂಕಗಳು.

(b) ಅಕ್ಷರಸಂಯೋಜನ.—ಸಾದಿ ಎಂಬವರಿಂದ ರಚಿಸಲ್ಪಟ್ಟ ಗುಲಿಸ್ತಾನ್ ಗ್ರಂಥಕ್ಕೆ ಸಮಾನವಾಗಿರುವ ಯಾವುದಾದರೂ ಒಂದು ಫಾರಸಿ ಪುಸ್ತಕದಿಂದ ಓದಲ್ಪಡುವ ಒಂದು ಭಾಗವನ್ನೂ ಮತ್ತು ವಿಶೇಷ ಕಾಠಿಣ್ಯವಿಲ್ಲದ ಕೆಲವು ಪದಗಳನ್ನೂ ಬರೆಯುವುದು.—10 ಅಂಕಗಳು.

(c) ವ್ಯಾಕರಣ.—ಮೌಲ್ವಿ ಮಹಮ್ಮದ್ ಹುಸೇನ್ ಅಜಾದ್ ಎಂಬವರ ಫಾರಸಿ ವ್ಯಾಕರಣದಲ್ಲಿ ಅಥವಾ ಜಮೀಉಲ್ ಖವಾದ್ (ಪಂಜಾಬ್ ಭಾಷಾ) ನಲ್ಲಿ ಬರೆದಿರುವಂತೆ ಶಬ್ದಲಕ್ಷಣ ಮತ್ತು ವಾಕ್ಯಲಕ್ಷಣ, ಮತ್ತು ಫಾರ್ಬೆಸ್ ಎಂಬವರಿಂದ ರಚಿಸಲ್ಪಟ್ಟ ಫಾರಸಿ ವ್ಯಾಕರಣದ ಆರನೇ ಪ್ರಕರಣವನ್ನು ವ್ಯಾಸಂಗ ಮಾಡುವುದರಿಂದ ಫಾರಸಿ ಭಾಷೆಗೆ ಸೇರಿರುವ ಅರಬೀಪದಗಳ ಸ್ವಭಾವ ಮತ್ತು ಉಪಯೋಗ ಇವುಗಳನ್ನು ಕುರಿತು ಎಷ್ಟು ಜ್ಞಾನ ಉಂಟಾಗುತ್ತದೋ ಅಷ್ಟು ಜ್ಞಾನವಿರಬೇಕು.—25 ಅಂಕಗಳು.

(d) ಭಾಷಾಗ್ರಂಥಗಳು.—ಪ್ರಕಟಿಸಲ್ಪಡುವ ಗ್ರಂಥ—40 ಅಂಕಗಳು.

(e) ಭಾಷಾಂತರೀಕರಣ.—

(1) ನಿಯಮಿಸಲ್ಪಟ್ಟ ಫಾರಸಿ ಭಾಷಾಗ್ರಂಥಕ್ಕೆ ಸಮಾನವಾದ ಯಾವುದಾದರೂ ಒಂದು ಫಾರಸಿ ಪುಸ್ತಕದ ವಚನರೂಪವಾದ ಒಂದು ಭಾಗವನ್ನು ಉರ್ದುವಿಗೆ ಭಾಷಾಂತರ ಮಾಡುವುದು—15 ಅಂಕಗಳು.

(2) ವಿಶೇಷ ಕಾಠಿಣ್ಯವಿಲ್ಲದ ಉರ್ದು ವಚನಕಾವ್ಯದ ಒಂದು ಭಾಗವನ್ನು ಫಾರಸಿಗೆ ಭಾಷಾಂತರ ಮಾಡುವುದು—20 ಅಂಕಗಳು.

II. ಅಂಕಗಣಿತ.—ಶುದ್ಧ ದಶಮಾಂಶಗಳು ಮತ್ತು ಭಿನ್ನರಾಶಿಗಳು; ಇಂಡಿಯಾ ಮತ್ತು ಇಂಗ್ಲೆಂಡ್ ದೇಶಗಳ ನಾಣ್ಯಗಳು ಮೈಸೂರು ಸಂಸ್ಥಾನದಲ್ಲಿ ಉಪಯೋಗಿಸಲ್ಪಡುವ ಉದ್ದಳತೆ ದ್ರವ ವಸ್ತುಗಳ ಅಳತೆ ಮತ್ತು ತೂಕ, ಇಂಡಿಯಾ ಸರ್ಕಾರದಲ್ಲಿ ರೂಢಿಯಾಗಿರುವ ಉದ್ದಳತೆ ದ್ರವ ವಸ್ತುಗಳ ಅಳತೆ ಮತ್ತು ತೂಕ, ಇಂಗ್ಲಿಷ್ ಕಾಲಪ್ರಮಾಣ, ಇಂಗ್ಲಿಷ್ ಉದ್ದಳತೆ, ಚದರಳತೆ, ಘನ ಅಳತೆ, ಮತ್ತು ಭಾರವಾದ ದಿನಸಿನ ತೂಕಗಳು, ಇವುಗಳಿಗೆ ಸಂಬಂಧಪಟ್ಟ ವಿವಿಧ ಸಂಕಲನ, ವ್ಯವಕಲನ, ಗುಣಕಾರ ಭಾಗಕಾರಗಳು; ತ್ರೈರಾಶಿಕ; ಸಂಯುಕ್ತತ್ರೈರಾಶಿಕ; ರೂಢಿಗಣಿತ; ಮತ್ತು ಸರಳ ಬಡ್ಡಿ, ಸರಾಸರಿ, ಶೇಕಡ ಕ್ರಮಗಳ ವಿಷಯವಾಗಿ ಸುಲಭವಾದ ರೀತಿ ಪ್ರಶ್ನೆಗಳು (ಎಲ್ಲಾ ಪರೀಕ್ಷ್ಯರೂ ಇಂಗ್ಲಿಷ್ ಅಂಕೆಗಳನ್ನೇ ಉಪಯೋಗಿಸಬೇಕು).—100 ಅಂಕಗಳು.

III. ಭೂಗೋಳಶಾಸ್ತ್ರ ಮತ್ತು ಹಿಂದೂ ದೇಶದ ಚರಿತ್ರೆ.—120 ಅಂಕಗಳು.

(a) ಭೂಗೋಳಶಾಸ್ತ್ರ.—60 ಅಂಕಗಳು.

(1) ಯಾವುದಾದರೂ ಒಂದು ಸಮ್ಮತವಾದ ಪುಸ್ತಕದಲ್ಲಿರುವಂತೆ ಸಾಮಾನ್ಯ ಭೂವಿವರಣೆಯ ಸಂಕ್ಷೇಪ.—25 ಅಂಕಗಳು.

(2) ಯಾವುದಾದರೂ ಒಂದು ಸಮ್ಮತವಾದ ಪುಸ್ತಕದಲ್ಲಿರುವಂತೆ ಇಂಡಿಯಾ ದೇಶದ ಭೂವಿವರಣೆ.—25 ಅಂಕಗಳು.

(3) ಭೂಪಟ ಬರೆಯುವುದು.—ಯಾವುದಾದರೂ ಒಂದು ಭೂ ಖಂಡದ ಅಥವಾ ಯೂರೋಪಿನಲ್ಲಾಗಲಿ ಏಷಿಯಾವಿನಲ್ಲಾಗಲಿ ಇರುವ ಯಾವುದಾದರೂ ಒಂದು ದೊಡ್ಡದೇಶದ ಆಕಾರವನ್ನು ಬರೆಯುವುದು. ಕೊಡಲ್ಪಡುವ ಬಾಹ್ಯರೇಖೆಯುಳ್ಳ ನಕ್ಷೆಯಲ್ಲಿ ಯಾವುದಾದರೂ ಒಂದು ಭೂ ಖಂಡದ ಅಥವಾ ಯೂರೋಪಿನಲ್ಲಾಗಲಿ ಏಷಿಯಾವಿನಲ್ಲಾಗಲಿ ಇರುವ ಯಾವುದಾದರೂ ಒಂದು ದೊಡ್ಡದೇಶದ ಮುಖ್ಯ ನದಿಗಳನ್ನೂ ಪರ್ವತಶ್ರೇಣಿಗಳನ್ನೂ ಮುಖ್ಯ ಪಟ್ಟಣಗಳನ್ನೂ ಬರೆಯುವುದು.—10 ಅಂಕಗಳು.

(b) ಹಿಂದೂದೇಶದ ಚರಿತ್ರೆ.—ಮಿಡಿಲ್ ಸ್ಕೂಲುಗಳಿಗಾಗಿ ಮಾರ್ಸ್‌ಡೆನ್ ಎಂಬವರಿಂದ ರಚಿಸಲ್ಪಟ್ಟ ಹಿಂದೂ ದೇಶದ ಚರಿತ್ರೆಯಲ್ಲಿರುವಂತೆ ತತ್ಕಾಲದವರೆಗೆ ಹಿಂದೂ ದೇಶದ ಚರಿತ್ರೆಯ ಸಂಕ್ಷೇಪ.—60 ಅಂಕಗಳು.

ಐಚ್ಛಿಕ ವಿಷಯಗಳು.

I. ದ್ವಿತೀಯ ಭಾಷೆ.—120 ಅಂಕಗಳು.

[ಟಿಪ್ಪಣಿ.—ಯಾವ ಪರೀಕ್ಷ್ಯನೂ ಪ್ರಥಮ ದ್ವಿತೀಯ ಭಾಷೆಗಳಿಗೆ ಒಂದೇ ಭಾಷೆಯನ್ನು ತೆಗೆದುಕೊಳ್ಳಕೂಡದು. ಕನ್ನಡವನ್ನು ಪ್ರಥಮಭಾಷೆಯಾಗಿ ತೆಗೆದುಕೊಳ್ಳುವವರು ಫಾರಸಿ ಅಥವಾ ತೆಲುಗನ್ನು ದ್ವಿತೀಯ ಭಾಷೆಯಾಗಿ ತೆಗೆದುಕೊಳ್ಳಕೂಡದು. ತೆಲುಗನ್ನು ಪ್ರಥಮ ಭಾಷೆಯಾಗಿ ತೆಗೆದುಕೊಳ್ಳುವವರು ಸಂಸ್ಕೃತ ಅಥವಾ ಕನ್ನಡವನ್ನು ದ್ವಿತೀಯ ಭಾಷೆಯಾಗಿ ತೆಗೆದುಕೊಳ್ಳಕೂಡದು. ಉರ್ದುವನ್ನು ಪ್ರಥಮ ಭಾಷೆಯಾಗಿ ತೆಗೆದುಕೊಳ್ಳುವವರು ಸಂಸ್ಕೃತವನ್ನು ದ್ವಿತೀಯ ಭಾಷೆಯಾಗಿ ತೆಗೆದುಕೊಳ್ಳಕೂಡದು]

A. ಸಂಸ್ಕೃತ.—

(a) ಕೈ ಬರವಣಿಗೆ.—ದೇವನಾಗರಿಯ ಅಕ್ಷರದಲ್ಲಿ ಛಾಪಿಸಲ್ಪಟ್ಟ ಒಂದು ಪತ್ರಿಕೆಯನ್ನು ಸ್ಪಷ್ಟವಾಗಿಯೂ ಚೆನ್ನಾಗಿಯೂ ಬರೆಯುವುದು.—10 ಅಂಕಗಳು.

(b) ಅಕ್ಷರಸಂಯೋಜನ.—ನಿಯಮಿಸಲ್ಪಟ್ಟ ಭಾಷಾಗ್ರಂಥಕ್ಕೆ ಸಮಾನವಾದ ಯಾವುದಾದರೂ ಒಂದು ಪುಸ್ತಕದಿಂದ ಓದಲ್ಪಡುವ ಒಂದು ಚಿಕ್ಕ ಭಾಗವನ್ನು ದೇವನಾಗರಿಯ ಅಕ್ಷರದಲ್ಲಿ ಬರೆಯುವುದು.—10 ಅಂಕಗಳು.

(c) ವ್ಯಾಕರಣ ಸಂಧಿಸೂತ್ರಗಳು; ಸ್ವರಾಂತವಾದ ಅಥವಾ ವ್ಯಂಜನಾಂತವಾದ ನಾಮಪದಗಳು ಮತ್ತು ಗುಣವಾಚಕಗಳು, ಸರ್ವನಾಮಗಳು ಮತ್ತು ಸರ್ವನಾಮಾತ್ಮಕ ಗುಣವಾಚಕಗಳು ಇವುಗಳ ವಿಭಕ್ತಿರೂಪಕಗಳು; ಹತ್ತು ವಿಕರಣಿಯ ಧಾತುಗಳ ಸಾರ್ವಧಾತುಕರೂಪಗಳು [ಡಾಕ್ಟರ್ ಭಂಡಾರ್ಕರ್‌ರವರ ಸಂಸ್ಕೃತದ ಮೊದಲನೇ ಪುಸ್ತಕದಲ್ಲಿರುವಂತೆ].—25 ಅಂಕಗಳು.

(d) ಭಾಷಾಗ್ರಂಥಗಳು.—ವಚನಕಾವ್ಯ ಸುಮಾರು 20 ಪುಟಗಳು, ಪದ್ಯಕಾವ್ಯ ಸುಮಾರು 150 ಪಜ್ತಿಗಳು. ಭಾಷಾಗ್ರಂಥಗಳು ನಿಯಮಿಸಲ್ಪಡುವುವು.

ಪರೀಕ್ಷೆಯು ಅನ್ವಯ ಮತ್ತು ಅರ್ಥವಿವರಣೆ ಇವುಗಳಿಗೆ ಮುಖ್ಯವಾಗಿ ಸಂಬಂಧಪಡುವುದು.—40 ಅಂಕಗಳು.

(e) ಭಾಷಾಂತರೀಕರಣ.—

(1) ಡಾಕ್ಟರ್ ಭಂಡಾರ್ಕರ್ ಎಂಬವರ ಸಂಸ್ಕೃತದ ಮೊದಲನೇ ಪುಸ್ತಕದ ಮೊದಲು 24 ಪಾಠಗಳಲ್ಲಿರುವ ಸಂಸ್ಕೃತದ ಅಭ್ಯಾಸ ಪಾಠಗಳನ್ನು ದೇಶಭಾಷೆಗೆ ಭಾಷಾಂತರ ಮಾಡುವುದು.—15 ಅಂಕಗಳು.

(2) ಇದೇ ಪಾಠಗಳಲ್ಲಿನ ಕನ್ನಡದ ಅಭ್ಯಾಸ ಪಾಠಗಳನ್ನು ಸಂಸ್ಕೃತಕ್ಕೆ ಭಾಷಾಂತರ ಮಾಡುವುದು.—20 ಅಂಕಗಳು.

B ಫಾರಸಿ.—

(a) ಕೈ ಬರವಣಿಗೆ.—ಬರೆಯಲ್ಪಟ್ಟ ಅಥವಾ ಶಿಲಾಯಂತ್ರದಿಂದ ಛಾಪಿಸಲ್ಪಟ್ಟ ಒಂದು ಪತ್ರಿಕೆಯನ್ನು ಸ್ಪಷ್ಟವಾಗಿಯೂ ಚೆನ್ನಾಗಿಯೂ ಬರೆಯುವುದು.—10 ಅಂಕಗಳು.

(b) ಅಕ್ಷರಸಂಯೋಜನ.—ಪಂಜಾಬ್ ಛಾಪ ಫಾರಸಿ ಎರಡನೇ ಪುಸ್ತಕಕ್ಕೆ ಸಮಾನವಾದ ಯಾವುದಾದರೂ ಒಂದು ಪುಸ್ತಕದಿಂದ ಓದಲ್ಪಡುವ ಒಂದು ಭಾಗವನ್ನು ಬರೆಯುವುದು.—10 ಅಂಕಗಳು.

(c) ವ್ಯಾಕರಣ.—ಪ್ರೈಮರಿ ಪಾಠಶಾಲೆಗಳಲ್ಲಿ ಉಪಯೋಗಿಸಲ್ಪಡುವ ಸೆಲ್ ಸಾಹೇಬರವರಿಂದ ರಚಿಸಲ್ಪಟ್ಟ ಜುಬ್ದತುಲ್-ಕ್ಯಾವನೀನ್ (ಪಂಜಾಬ್ ಛಾಪ) ಫಾರಸಿ ವ್ಯಾಕರಣದಲ್ಲಿ ಬರೆದಿರುವಂತೆ.—25 ಅಂಕಗಳು.

(d) ಭಾಷಾಗ್ರಂಥ.—ಗುಲ್‌ದಸ್ತ-ಎ-ದನಿಷ್.—40 ಅಂಕಗಳು.

(e) ಭಾಷಾಂತರೀಕರಣ.—

(1) ಹಿಂದೆ ಓದದೇ ಇರುವ ಫಾರಸಿ ವಚನಕಾವ್ಯದ ಸಾಧಾರಣವಾದ ಒಂದು ಭಾಗವನ್ನು ಉರ್ದುವಿಗೆ ಭಾಷಾಂತರ ಮಾಡುವುದು.—15 ಅಂಕಗಳು.

(2) ಸುಲಭವಾದ ಉರ್ದು ವಾಕ್ಯಗಳನ್ನು ಫಾರಸಿ ಭಾಷೆಗೆ ಭಾಷಾಂತರ ಮಾಡುವುದು.—20 ಅಂಕಗಳು.

C ಲಾಟಿನ್.—

(a) ವ್ಯಾಕರಣ.—ಪಬ್ಲಿಕ್ ಸ್ಕೂಲ್ ಲಾಟಿನ್ ಪ್ರೈಮರಲ್ಲಿ ಅಥವಾ ಅದಕ್ಕೆ ಸಮಾನವಾದ ಮತ್ತೆ ಯಾವುದಾದರೂ ಒಂದು ಪುಸ್ತಕದಲ್ಲಿ ಇರುವಂತೆ.—40 ಅಂಕಗಳು.

(b) ಭಾಷಾಗ್ರಂಥ.—ವರ್ಷ ವರ್ಷವೂ ಭಾಷಾಗ್ರಂಥವು ನಿಯಮಿಸಲ್ಪಡುವುದು. ಪರೀಕ್ಷೆಯು ಅನ್ವಯ ಮತ್ತು ಅರ್ಥವಿವರಣೆ ಇವುಗಳಿಗೆ ವಿಶೇಷವಾಗಿ ಸಂಬಂಧಪಡುವುದು.—40 ಅಂಕಗಳು.

(c) ಭಾಷಾಂತರೀಕರಣ.—40 ಅಂಕಗಳು.

(1) ಹಿಂದೆ ಓದದ ಲಾಟಿನ್ ವಚನಕಾವ್ಯದ ಬಹಳ ಸುಲಭವಾದ ಒಂದು ಭಾಗವನ್ನು ಇಂಗ್ಲೀಷಿಗೆ ಭಾಷಾಂತರ ಮಾಡುವುದು.—15 ಅಂಕಗಳು.

(2) ಸುಲಭವಾದ ಇಂಗ್ಲೀಷ್ ವಾಕ್ಯಗಳನ್ನು ಲಾಟಿನ್‌ಗೆ ಭಾಷಾಂತರ ಮಾಡುವುದು.—25 ಅಂಕಗಳು.

D ಇಂಗ್ಲೀಷ್—ಹಿಂದೂ ಪರೀಕ್ಷ್ಯ (Female candidate) ಯರಿಗೂ ಮತ್ತು ಎಲ್ಲಾ ಮಹಮ್ಮದೀಯರಿಗೂ ಮಾತ್ರ—ಪರೀಕ್ಷೆಯ ಮೊದಲನೇ ದಿವಸ ಈ ಪರೀಕ್ಷೆಯು ಮುಖತಃ (*Viva voce*) ನಡೆಯಿಸಲ್ಪಡುವುದು. ಮತ್ತು ಮೂರನೇ ಅಂಗ—ದೇಶಭಾಷಾಯಿಯಷ್ಟೆಗೆ ಸಮಾನವಾಗಿರುವುದು.

(a) ಕೈ ಬರವಣಿಗೆ.—ದೊಡ್ಡ ಅಥವಾ ನಡುತ್ತರವಾದ ಅಕ್ಷರವನ್ನು ಬರೆಯುವುದು.—10 ಅಂಕಗಳು.

(b) ಅಕ್ಷರಸಂಯೋಜನ.—ಓದುವ ಪುಸ್ತಕದಲ್ಲಿ ಒಂದು ಭಾಗದಿಂದ ಹೇಳಲ್ಪಡುವ ಹತ್ತು ಪದಗಳನ್ನು ಎಂಟು ಪಜ್ತಿಗಳನ್ನೂ ಬರೆಯುವುದು.—10 ಅಂಕಗಳು.

(c) ವ್ಯಾಕರಣ.—ಮೇಸನ್ರವರ ಫಸ್ಟ್ ಸ್ಟೆಪ್ಸ್ ಇನ್ ಇಂಗ್ಲೀಷ್ ಗ್ರಾಮರ್, ಪುಟಗಳು 1ರಿಂದ 21ರ ವರೆಗೆ ಅಭ್ಯಾಸ ಪಾಠಗಳೊಡನೆ ಅಥವಾ ಸಿ. ವಿ. ಇ. ಸಂಘದವರ ಪ್ರೈಮರ್ ಆಫ್ ಇಂಗ್ಲೀಷ್ ಗ್ರಾಮರ್, ಪುಟಗಳು 1ರಿಂದ 24ರ ವರೆಗೆ ಅಭ್ಯಾಸ ಪಾಠಗಳೊಡನೆ.—25 ಅಂಕಗಳು.

(*d*) ಭಾಷಾಗ್ರಂಥ.—ಯಾವುದಾದರೂ ಒಂದು ಸಮ್ಮತವಾದ ಎರಡನೇ ಪುಸ್ತಕ (Second Reader) ಪುಟಗಳು 1ರಿಂದ 50ರ ವರೆಗೆ; ದೇಶಭಾಷೆಗೆ ಮುಖತಃ ಭಾಷಾಂತರ ಮಾಡಬೇಕು ಮತ್ತು ಪದಗಳ ಅರ್ಥವನ್ನು ಗ್ರಂಥ ವಿಷಯವನ್ನೂ ತಿಳಿದಿರಬೇಕು.—40 ಅಂಕಗಳು.

(*e*) ಭಾಷಾಂತರೀಕರಣ.—ಪರೀಕ್ಷೆಯು ದೇಶಭಾಷೆಯ ಆರು ಚಿಕ್ಕ ವಾಕ್ಯಗಳನ್ನು ಇಂಗ್ಲೀಷಿಗೆ ಭಾಷಾಂತರ ಮಾಡುವುದು.—35 ಅಂಕಗಳು.

E. ಕನ್ನಡ (ಉರ್ದುವೇ ತಮ್ಮ ದೇಶಭಾಷೆಯಾಗಿ ಆ ಭಾಷೆಯನ್ನೇ ಪ್ರಥಮ ಭಾಷೆಯಾಗಿ ತೆಗದುಕೊಳ್ಳುವ ಪರೀಕ್ಷ್ಯರಿಗೆ.) ಪರೀಕ್ಷೆಯು ಮೊದಲನೇ ದಿವಸ ಈ ಪರೀಕ್ಷೆಯ ಎ ಇದರಡಿ ಕಾಣಿಸಿರುವ ಪ್ರಕರಣಗಳಲ್ಲಿ ಮುಖತಃ (*Viva voce*) ನಡೆಯಿಸಲ್ಪಡುವುದು:—

(*a*) ಭಾಷಾಗ್ರಂಥ.—ಮ್ಯಾಕ್‌ಮಿಲ್ಲರವರ III ಮತ್ತು IVನೆಯ ಕನ್ನಡ ರೀಡರಗಳು.—ಗ್ರಂಥ ವಿಷಯವನ್ನು ಉರ್ದುವಿನಲ್ಲಿ ತಡೆಯಿಲ್ಲದೆ ವಿವರಿಸಬೇಕು. ಮತ್ತು ಕಷ್ಟವಾದ ಪದಗಳ ಅರ್ಥವನ್ನು ಹೇಳಬೇಕು. ಪರೀಕ್ಷ್ಯನು ಭಾಷಾಗ್ರಂಥದ ಒಂದು ಚಿಕ್ಕ ಭಾಗವನ್ನು ಉರ್ದುವಿಗೆ ತಡೆಯಿಲ್ಲದೆ ಭಾಷಾಂತರ ಮಾಡಬೇಕು.—40 ಅಂಕಗಳು.

(*b*) ಭಾಷಾಂತರೀಕರಣ.—ಕಥಾರೂಪವಾದ ಉರ್ದು ವಚನಕಾವ್ಯದ ಒಂದು ಸಾಧಾರಣವಾದ ಭಾಗವನ್ನು ಕನ್ನಡಕ್ಕೆ ಭಾಷಾಂತರ ಮಾಡುವುದು.—35 ಅಂಕಗಳು.

(*c*) ವ್ಯಾಕರಣ.—ಶೇಷಾಚಾರ್ಯರಿಂದ ರಚಿಸಲ್ಪಟ್ಟ ವ್ಯಾಕರಣ ಸಂಗ್ರಹದಲ್ಲಿರುವಂತೆ.—25 ಅಂಕಗಳು

(*d*) ಕೈ ಬರವಣಿಗೆ.—ಸಣ್ಣಕ್ಷರವನ್ನು ಬರೆಯುವುದು.—10 ಅಂಕಗಳು.

(*e*) ಅಕ್ಷರಸಂಯೋಜನ—ಭಾಷಾಗ್ರಂಥಕ್ಕೆ ಸಮಾನವಾದ ಹಿಂದೆ ಓದದ ಯಾವುದಾದರೂ ಒಂದು ವಚನಕಾವ್ಯದಿಂದ ಓದಲ್ಪಡುವ ಎಂಟು ಪಙ್ತಿಗಳನ್ನು ಬರೆಯುವುದು.—10 ಅಂಕಗಳು.

F. ಕನ್ನಡ, ತೆಲುಗು, ಅಥವಾ ಉರ್ದು.—I. B. ಆವಶ್ಯಕ ಭಾಷೆಗಳಿಗೆ ನಿಯಮಿಸಿರುವಂತೆಯೇ.—120 ಅಂಕಗಳು

II. ಆರೋಗ್ಯಶಾಸ್ತ್ರ.—ನರಸಿಂಹೈಯ್ಯಂಗಾರ್ರವರಿಂದ ರಚಿಸಲ್ಪಟ್ಟ ಆರೋಗ್ಯಶಾಸ್ತ್ರದಲ್ಲಿರುವಂತೆ.—100 ಅಂಕಗಳು.

III. ವ್ಯವಸಾಯಶಾಸ್ತ್ರ.—ಶೇಷಾದ್ರೈಯ್ಯಂಗಾರ್ರವರಿಂದ ರಚಿಸಲ್ಪಟ್ಟ ವ್ಯವಸಾಯ ಬೋಧಿನಿಯಲ್ಲಿರುವಂತೆ.—100 ಅಂಕಗಳು.

IV. ಕ್ಷೇತ್ರಗಣಿತ.—ಡಾಕ್ಟರ ಕುಕ್ ಸಾಹೇಬರವರ ಕ್ಷೇತ್ರ ಗಣಿತದ ಆದಿ ಪುಸ್ತಕದಲ್ಲಿ ಇರುವಂತೆ.—100 ಅಂಕಗಳು.

V. ಪ್ರಾಕೃತಿಕ ಭೂಗೋಳಶಾಸ್ತ್ರ.—ವೆಂಕಟರಂಗೋಕಟ್ಟಿಯವರು ಭಾಷಾಂತರ ಮಾಡಿರುವ ಗೈಕಿಯವರ ಪ್ರಾಕೃತಿಕ ಭೂಗೋಳಶಾಸ್ತ್ರದ ಆದಿ ಪುಸ್ತಕದಲ್ಲಿಯೂ ಬ್ಲಾಕ್‌ಫರ್ಡ್ ಎಂಬವರ ಪ್ರಾಕೃತಿಕ ಭೂಗೋಳಶಾಸ್ತ್ರದ ಪುಸ್ತಕದಲ್ಲಿಯೂ ಇರುವಂತೆ.—100 ಅಂಕಗಳು.

VI. (ಯಾವುದಾದರೂ ಒಂದು ದೇಶಭಾಷೆಯನ್ನು ಮಾತ್ರ ತೆಗದುಕೊಳ್ಳುವ ಪರೀಕ್ಷ್ಯೆಯರಿಗೆ ಹೊಲಿಗೆ ಮತ್ತು ಪಾಕಶಾಸ್ತ್ರ.—100 ಅಂಕಗಳು.

(*a*) ಸಾಧಾರಣ ಹೊಲಿಗೆ ಕೆಲಸ.—50 ಅಂಕಗಳು.

(1) ಕೊಡಲ್ಪಡುವ ಮಾದರಿ ಮೇರೆಗೆ ಕತ್ತರಿಸಿ ನೇಟಿವ್ ಗಂಡಸಿನ 12 ಅಂಗುಲ ಉದ್ದವುಳ್ಳ ಜುಬ್ಬವನ್ನು ಹೊಲಿಯುವುದು.

(2) ಅಂಚು ಅಥವಾ ಗೋಟು ಕಟ್ಟುವುದು, ಟಿಬ್ಬಿ ಹಾಕುವುದು, ರಫ್ಫು ಮಾಡುವುದು, ಮತ್ತು ತೇಪೆ ಹಾಕುವುದು ಮತ್ತು ಉಡುಪುಗಳ ಮೇಲೆ ಇಂಗ್ಲೀಷಿನ ಅಥವಾ ಕನ್ನಡದ ಹೆಸರುಗಳ ಪ್ರಥಮಾಕ್ಷರವನ್ನು ಹೊಲಿಯುವುದು.

(*b*) ಪಾಕಶಾಸ್ತ್ರ.—ಅಡಿಗೆ ಪಾತ್ರೆಗಳ ಉಪಯೋಗಗಳು, ಅವುಗಳನ್ನು ಶುದ್ಧಮಾಡುವ ವಿಧ ಮತ್ತು ನೇಟಿವ್ ಜನರಲ್ಲಿ ಮಾಡತಕ್ಕ ಸಾಧಾರಣವಾದ ಅಡಿಗೆಯ ಸಾಮಗ್ರಿಗಳು ಮತ್ತು ಪಾಕ ಕ್ರಮ.—50 ಅಂಕಗಳು.

VII. ಇಂಗ್ಲೀಷ ಭಾಷೆಯನ್ನು ತಮ್ಮ ದೇಶಭಾಷೆಯಾಗಿ ಉಳ್ಳ ಪರೀಕ್ಷ್ಯೆಯರಿಗೆ.

(*a*) ಆಂಗ್ಲೇಯರ ಚರಿತ್ರೆ. ಕ್ರೇರ್ಟನ ಎಂಬವರಿಂದ ರಚಿಸಲ್ಪಟ್ಟ ಷಿಲಿಂಗ ಹಿಸ್ಟರಿ ಎಂಬ ಆಂಗ್ಲೇಯರ ಚರಿತ್ರೆಯಲ್ಲಿರುವ ಹಾಗೆ.—100 ಅಂಕಗಳು.

(*b*) ಗೃಹಕೃತ್ಯ ನಡೆಯಿಸುವ ಕ್ರಮ.—ಮಿಸ್ ಕೀಲಿಯವರಿಂದ ರಚಿಸಲ್ಪಟ್ಟ ಗೃಹಕೃತ್ಯ ನಡಿಯಿಸುವ ಕ್ರಮದ ಪುಸ್ತಕದಲ್ಲಿರುವ ಹಾಗ (ಈ ಪುಸ್ತಕವು ಹಿಗ್ಗಿನ್ ಬೋತಮ್ಯಾಂ ಎಂಬವರಲ್ಲಿ ದೊರೆಯುತ್ತದೆ.—100 ಅಂಕಗಳು.

7. ಎಲ್ಲಾ ಪರೀಕ್ಷ್ಯೆಯರೂ ಐಚ್ಛಿಕ ವಿಷಯಗಳಲ್ಲಿ ಎರಡನ್ನು ತೆಗದುಕೊಳ್ಳಬೇಕು. ಪರೀಕ್ಷ್ಯೆಯರೂ ಈ ಎರಡು ಐಚ್ಛಿಕ ವಿಷಯಗಳಲ್ಲಿ ಸಾಧಾರಣವಾಗಿ ಹೊಲಿಗೆಯನ್ನೂ ಪಾಕಶಾಸ್ತ್ರವನ್ನೂ ಒಂದು ವಿಷಯವಾಗಿ ತೆಗದುಕೊಳ್ಳಲೇಬೇಕು.

ಇಂಗ್ಲೀಷ್ ಪಾಠಶಾಲೆಗಳ ವಿದ್ಯಾರ್ಥಿಗಳು ಸಾಧಾರಣವಾಗಿ ಆರೋಗ್ಯಶಾಸ್ತ್ರವನ್ನೂ ಯಾವುದಾದರೂ ಒಂದು ಎರಡನೇ ಭಾಷೆಯನ್ನೂ ಐಚ್ಛಿಕ ವಿಷಯಗಳಾಗಿ ತೆಗದುಕೊಳ್ಳಬೇಕು.

ದೇಶಭಾಷಾ ಪಾಠಶಾಲೆಗಳ ವಿದ್ಯಾರ್ಥಿಗಳು ಸಾಧಾರಣವಾಗಿ ಆರೋಗ್ಯಶಾಸ್ತ್ರವನ್ನೂ ಮತ್ತು ವ್ಯವಸಾಯಶಾಸ್ತ್ರ ಅಥವಾ ಕ್ಷೇತ್ರಗಣಿತ ಅಥವಾ ಪ್ರಾಕೃತಿಕ ಭೂಗೋಳಶಾಸ್ತ್ರವನ್ನೂ ಐಚ್ಛಿಕ ವಿಷಯಗಳಾಗಿ ತೆಗದುಕೊಳ್ಳಬೇಕು.

ಸಂಸ್ಕೃತ ಪಾಠಶಾಲೆಗಳ್ಲ ವಿದ್ಯಾರ್ಥಿಗಳು ಯಾವುದಾದರೂ ಒಂದು ದೇಶಭಾಷೆಯನ್ನು ದ್ವಿತೀಯ ಭಾಷೆಯಾಗಿಯೂ ಮತ್ತು ಆರೋಗ್ಯಶಾಸ್ತ್ರ, ವ್ಯವಸಾಯಶಾಸ್ತ್ರ, ಕ್ಷೇತ್ರಗಣಿತ, ಪ್ರಾಕೃತಿಕ ಭೂಗೋಳಶಾಸ್ತ್ರ ಇವುಗಳಲ್ಲಿ ಯಾವುದಾದರೂ ಒಂದನ್ನು ತೆಗದುಕೊಳ್ಳಬೇಕು.

8. ಇಂಗ್ಲಿಷ್ ಭಾಷೆಯನ್ನು ಮೊದಲನೇ ಭಾಷೆಯಾಗಿ ತೆಗದುಕೊಳ್ಳುವ ಪರೀಕ್ಷ್ಯರಿಗೆ ಇಂಗ್ಲೀಷ್ ಭಾಷಾಗ್ರಂಥದಲ್ಲಿಯೂ ಅಂಕಗಣಿತದಲ್ಲಿಯೂ ಪ್ರಶ್ನೆ ಪತ್ರಿಕೆಗಳು ಇಂಗ್ಲಿಷನಲ್ಲಿ ಕೊಡಲ್ಪಡುವುವು ಮತ್ತು ಈ ಪ್ರಶ್ನೆಗಳಿಗೆ ಉತ್ತರಗಳನ್ನು ಇಂಗ್ಲೀಷನಲ್ಲಿಯೇ ಬರೆಯಬೇಕು. ಇಂಗ್ಲೀಷ್ ಭಾಷೆಯನ್ನು ಪ್ರಥಮ ಭಾಷೆಯಾಗಿ ತೆಗದುಕೊಳ್ಳುವ ಪರೀಕ್ಷ್ಯರಿಗೆ ಮಿಕ್ಕ ಎಲ್ಲಾ ವಿಷಯಗಳಲ್ಲಿಯೂ ಪ್ರಶ್ನೆ ಪತ್ರಿಕೆಗಳು ಅವರ ದೇಶಭಾಷೆಯಲ್ಲಿ ಕೊಡಲ್ಪಡುವುವು ಮತ್ತು ಪ್ರಶ್ನೆಗಳಿಗೆ ಉತ್ತರಗಳನ್ನು ಅವರ ದೇಶಭಾಷೆಯಲ್ಲಿಯೇ ಬರೆಯಬೇಕು. ಇಂಗ್ಲಿಷ್ ದೇಶಭಾಷೆಯಾಗಿರುವ ಪರೀಕ್ಷ್ಯರಿಗೆ ಎಲ್ಲಾ ವಿಷಯಗಳಲ್ಲಿಯೂ ಪ್ರಶ್ನೆ ಪತ್ರಿಕೆಗಳು ಇಂಗ್ಲೀಷಿನಲ್ಲಿಯೇ ಕೊಡಲ್ಪಡುವುವು ಮತ್ತು ಈ ಪ್ರಶ್ನೆಗಳಿಗೆ ಉತ್ತರಗಳನ್ನು ಇಂಗ್ಲೀಷಿನಲ್ಲಿಯೇ ಬರೆಯಬೇಕು. ಉಳಿದ ಪರೀಕ್ಷ್ಯರೆಲ್ಲರೂ ಒಂದೊಂದು ವಿಷಯದಲ್ಲಿಯೂ ಅವರ ದೇಶಭಾಷೆಯಲ್ಲಿಯೇ ಪರೀಕ್ಷಿಸಲ್ಪಡುವರು.

9. ಪರೀಕ್ಷ್ಯರು, ಆವಶ್ಯಕ ಭಾಷೆಯಲ್ಲಿ ಶೇಕಡಾ 33ಕ್ಕೆ ಕಡಿಮೆ ಇಲ್ಲದಂತೆ ಅಂಕಗಳನ್ನೂ, ಅಂಕಗಣಿತದಲ್ಲಿ ಶೇಕಡಾ 30 ಅಂಕಗಳನ್ನೂ, ಇತರ ಒಂದೊಂದು ವಿಷಯಗಳಲ್ಲಿಯೂ ಶೇಕಡಾ 25 ಅಂಕಗಳನ್ನೂ ಮತ್ತು ಒಟ್ಟು ಸಂಖ್ಯೆಯಲ್ಲಿ ಶೇಕಡಾ 33ಕ್ಕೆ ಕಡಿಮೆ ಇಲ್ಲದ ಅಂಕಗಳನ್ನೂ ಪಡೆಯದ ಪಕ್ಷದಲ್ಲಿ ತೇರ್ಗಡೆಯಾಗಲಾರರು. ಇಂಗ್ಲೀಷ್ ಭಾಷೆಯನ್ನು ಮೊದಲನೆಯ ಭಾಷೆಯಾಗಿ ತೆಗದುಕೊಳ್ಳುವ ಪರೀಕ್ಷ್ಯರು, ಇಂಗ್ಲೀಷ್ ಭಾಷೆಯ ಎರಡು ಶಾಖೆಗಳಪೈಕಿ ಪ್ರತಿಯೊಂದರಲ್ಲೂ ಶೇಕಡಾ 25ಕ್ಕೆ ಕಡಿಮೆ ಇಲ್ಲದ ಅಂಕಗಳನ್ನೂ ಸದರಿ ಭಾಷೆಯ ಒಟ್ಟು ಅಂಕಗಳಲ್ಲಿ ಶೇಕಡಾ 33ಕ್ಕೆ ಕಡಿಮೆ ಇಲ್ಲದ ಅಂಕಗಳನ್ನೂ ಪಡೆಯದ ಪಕ್ಷದಲ್ಲಿ ತೇರ್ಗಡೆಯಾಗಲಾರರು. ಪರೀಕ್ಷ್ಯರು ಅಂಕಗಣಿತದಲ್ಲಿ ಅವರಿಗಾಗಿಯೇ ಬರೆಯಲ್ಪಟ್ಟ ಪರೀಕ್ಷ್ಯೆಯರಿಗೆ ಕೊಡಲ್ಪಡುವ ಅಂಕಗಣಿತದ ಪ್ರಶ್ನೆ ಪತ್ರಿಕೆಗಿಂತ ಸುಲಭವಾದ ಅಂಕಗಣಿತದ ಪ್ರಶ್ನೆ ಪತ್ರಿಕೆಯಲ್ಲಿ ತೇರ್ಗಡೆಯಾಗಬಹುದು.

ತೇರ್ಗಡೆಯಾಗುವಂಥಾವರು ಅವರವರ ಯೋಗ್ಯತಾನುಸಾರ ಎರಡು ವರ್ಗಗಳಾಗಿ ವಿಂಗಡಿಸಲ್ಪಡುವರು. ಒಟ್ಟು ಸಂಖ್ಯೆಯಲ್ಲಿ ಶೇಕಡಾ 60ಕ್ಕೆ ಕಡಮೆ ಇಲ್ಲದೆ ಅಂಕಗಳನ್ನು ಪಡೆಯುವಂಥಾವರು ಮೊದಲನೇ ವರ್ಗದಲ್ಲಿ ಸೇರಿಸಲ್ಪಡುವರು. ಒಟ್ಟು ಸಂಖ್ಯೆಯಲ್ಲಿ ಶೇಕಡಾ 60ಕ್ಕೆ ಕಡಮೆಯಾಗಿ ಅಂಕಗಳನ್ನು ಪಡೆಯುವವರು ಎರಡನೇ ವರ್ಗದಲ್ಲಿ ಸೇರಿಸಲ್ಪಡುವರು.

10. ಪರೀಕ್ಷಾ ವೇತನವು ಇದರಡೀ ಕಂಡಂತೆ ನಿಯಮಿಸಲ್ಪಟ್ಟಿರುತ್ತೆ:—

		ರೂ. ಆ. ಪೈ.
(1)	ಇಂಗ್ಲೀಷನ್ನು ತನ್ನ ಅವಶ್ಯಕ ಭಾಷೆಯಾಗಿ ತೆಗದುಕೊಳ್ಳುವಂಥಾ ಸರ್ಕಾರದ ಅಥವಾ ದ್ರವ್ಯ ಸಹಾಯದ ಪಾಠಶಾಲೆಯ ಉಪಾಧ್ಯಾಯನಿಗಾಗಲಿ ಅಥವಾ ಪರೀಕ್ಷಾ ರೂಲ್ಸಿನ ಎರಡನೇ ಪ್ರಕರಣದಲ್ಲಿ ವಿವರಿಸಲ್ಪಟ್ಟ ವಿದ್ಯಾರ್ಥಿಗಾಗಲಿ.	5—0—0
(2)	ಇತರ ಎಲ್ಲಾ ವಿದ್ಯಾರ್ಥಿಗಳಿಗೂ ಮತ್ತು ಸರಕಾರದ ಅಥವಾ ದ್ರವ್ಯ ಸಹಾಯದ ಪಾಠಶಾಲೆಯ ಉಪಾಧ್ಯಾಯರುಗಳಿಗೂ.	4—0—0
(3)	ಇಂಗ್ಲೀಷನ್ನು ಅವಶ್ಯಕ ಭಾಷೆಯಾಗಿ ತೆಗದುಕೊಂಡು ಸ್ವಂತ ವ್ಯಾಸಂಗ ಮಾಡುವಂಥಾವರಿಗೆ.	10—0—0
(4)	ಇತರ ಎಲ್ಲಾ ಸ್ವಂತ ವ್ಯಾಸಂಗಿಗಳಿಗೆ.	5—0—0
(5)	ಸಂಸ್ಕೃತದಲ್ಲಿ ಮಾತ್ರವೇ ಆಗಲಿ ಫಾರಶಿಯಲ್ಲಿ ಮಾತ್ರವೇ ಆಗಲಿ ಅಥವಾ ಇತರ ಯಾವ ದೇಶ ಭಾಷೆಯಲ್ಲಿ ಮಾತ್ರವೇ ಆಗಲಿ ಸೇರುವ ಪರೀಕ್ಷ್ಯರಿಗು ಮತ್ತು ಎಲ್ಲಾ ಪರೀಕ್ಷ್ಯೆಯರಿಗೂ.	2—8—0

11. ಪರೀಕ್ಷೆಗೆ ಬರುವವರಿಂದ ಒಂದು ಪರೀಕ್ಷೆಗೋಸ್ಕರ ಕೊಡಲ್ಪಟ್ಟಂಥಾ ಪರೀಕ್ಷಾ ವೇತನವು ಯಾವ ಸಂದರ್ಭದಲ್ಲಿಯೇ ಆಗಲಿ ಹಿಂದಕ್ಕೆ ಕೊಡಲ್ಪಡಲಾರದು ಮತ್ತು ಮುಂದಿನ ಯಾವ ಪರೀಕ್ಷೆಗೂ ಇಡಲ್ಪಡಲಾರದು.

12. ವಿದ್ಯಾರ್ಥಿಗಳಾಗಿರುವ ಪಕ್ಷದಲ್ಲಿ ಈ ಪರೀಕ್ಷೆಗೆ ಸೇರುವ ಬಗ್ಗೆ ಆಯಾ ಪಾಠಶಾಲೆಯ ಮುಖ್ಯೋಪಾಧ್ಯಾಯರುಗಳ ಮೂಲಕ ದರಖಾಸ್ತುಗಳನ್ನು ಕಳುಹಿಸಬೇಕು. ಎರಡನೇ ನಿಬಂಧನೆಯಲ್ಲಿ ಹೇಳಲ್ಪಟ್ಟ ಎಲ್ಲಾ ವಿದ್ಯಾರ್ಥಿಗಳೂ ಉಪಾಧ್ಯಾಯರುಗಳೂ ತಮ್ಮ ದರಖಾಸ್ತುಗಳನ್ನು ಆಗಸ್ಟ್ ತಿಂಗಳು 15ನೇ ತಾರೀಖನ್ನು ಅತಿಕ್ರಮಿಸದಂತೆ ದೇಶೀಯ ಪರೀಕ್ಷಾ ಮ್ಯಾನೇಜರವರಿಗೆ ತಲಪುವಂತೆ ಕಳುಹಿಸಬೇಕು. ಸ್ವಂತ ವ್ಯಾಸಂಗಿಗಳ ದರಖಾಸ್ತುಗಳೆಲ್ಲಾ ಜುಲೈ ತಿಂಗಳು 15ನೇ ತಾರೀಖನ್ನು ಅತಿಕ್ರಮಿಸದಂತೆ ದೇಶೀಯ ಪರೀಕ್ಷಾ ಮ್ಯಾನೇಜರವರಲ್ಲಿಗೆ ಬಂದು ತಲಪಬೇಕು.

13. ಪರೀಕ್ಷ್ಯರು, ತಮ್ಮ ಪಾಠಶಾಲೆಯಾಗಲಿ ಅಥವಾ ತಾವು ವಾಡಿಕೆಯಾಗಿ ವಾಸವಾಗಿರುವ ಸ್ಥಳವಾಗಲಿ ಯಾವ ಡಿಸ್ಟ್ರಿಕ್ಟಿಗೆ ಸೇರಿದೆಯೋ ಅಂಥಾ ಡಿಸ್ಟ್ರಿಕ್ಟಿನ ಮುಖ್ಯಸ್ಥಳದಲ್ಲಿ ಮಾತ್ರವೇ ಪರೀಕ್ಷೆಗೆ ಸೇರತಕ್ಕದ್ದು. ಆದರೆ ಕ್ಲೋಸೆಪೇಟೆ ಸಬ್ ಡಿವಿಜನಿಗೆ ಸೇರಿದ ಪರೀಕ್ಷ್ಯರು ಚನ್ನಪಟ್ಟಣದಲ್ಲಿಯೂ ಮತ್ತು ಚಿಕ್ಕ ಬಳ್ಳಾಪುರದ ಸಬ್ ಡಿವಿಜನಿಗೆ ಸೇರಿದ ಪರೀಕ್ಷ್ಯರು ಚಿಕ್ಕಬಳ್ಳಾಪುರದಲ್ಲಿಯೂ ಪರೀಕ್ಷೆಗೆ ಸೇರತಕ್ಕದ್ದು.

14. ಪರೀಕ್ಷೆಯು ಇದರಡಿ ವಿವರಿಸಲ್ಪಟ್ಟಿರುವ ಕಾಲ ಮತ್ತು ವಿಷಯಗಳ ಕ್ರಮಗಳನ್ನನುಸರಿಸಿ ನಡೆಯಿಸಲ್ಪಡುವುದು :—

ದಿವಸ.	ಕಾಲ.	ವಿಷಯಗಳು.	ಅಂಕಗಳು.
ಮೊದಲನೇ ದಿವಸ	10ರಿಂದ 12—30 ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಇಂಗ್ಲಿಷ್ ವ್ಯಾಕರಣ ಮತ್ತು ಭಾಷಾಗ್ರಂಥ.	60
		ಸಂಸ್ಕೃತದ ಮತ್ತು ಫಾರಸಿಯ ವ್ಯಾಕರಣ ಮತ್ತು ಭಾಷಾ ಗ್ರಂಥಗಳು	65
	1—30ರಿಂದ 2—30ರ ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಭಾಷಾಂತರೀಕರಣ—ಇಂಗ್ಲಿಷ್, ಸಂಸ್ಕೃತ, ಫಾರಸಿ.	35
		ಇಂಗ್ಲಿಷ್ ಪ್ರಬಂಧರಚನೆ, ಇಂಗ್ಲೀಷನ್ನು ದೇಶಭಾಷೆಯಾಗಿ ಉಳ್ಳಂಥಾವರಿಗೆ	
	2—35ರಿಂದ 3-5 ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಉಕ್ತಲೇಖನ—ಇಂಗ್ಲೀಷ್	15
		ಸಂಸ್ಕೃತ ; ಫಾರಸಿ	10
	3—10ರಿಂದ 3—40 ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಕೈಬರವಣಿಗೆ—ಇಂಗ್ಲೀಷ್ ; ಸಂಸ್ಕೃತ ; ಫಾರಸಿ ..	10
	3—45ರಿಂದ 4—15 ವರೆಗೆ	ಉರ್ದು ಉಕ್ತಲೇಖನ	10
	4—20ರಿಂದ 4—50 ವರೆಗೆ	ಉರ್ದು ಕೈಬರವಣಿಗೆ	10
ಎರಡನೇ ದಿವಸ	10ರಿಂದ 1ರ ವರೆಗೆ	ಕನ್ನಡ ಪ್ರಥಮ ಅಥವಾ ದ್ವಿತೀಯ ಭಾಷೆ—	
		ಕನ್ನಡ ವ್ಯಾಕರಣ, ಭಾಷಾಗ್ರಂಥ ಮತ್ತು ಪ್ರಬಂಧರಚನೆ ..	100
		ಫಾರಸಿ ದ್ವಿತೀಯ ಭಾಷೆ—	
		ಫಾರಸಿ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ...	100
	2ರಿಂದ 5ರ ವರೆಗೆ	ಸಂಸ್ಕೃತ ದ್ವಿತೀಯ ಭಾಷೆ—	
		ಸಂಸ್ಕೃತ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ..	100
		ಲಾಟಿನ ದ್ವಿತೀಯ ಭಾಷೆ—	
		ಲಾಟಿನ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ..	120
		ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ—	
		ತೆಲುಗು ಮತ್ತು ಉರ್ದು, ವ್ಯಾಕರಣ ಭಾಷಾಗ್ರಂಥಗಳು ಮತ್ತು ಪ್ರಬಂಧರಚನೆ	100
ಮೂರನೇ ದಿವಸ	10ರಿಂದ 12 ವರೆಗೆ	ಅಂಕಗಣಿತ	100
	12—5ರಿಂದ 12—35 ವರೆಗೆ	ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ—	
		ಕನ್ನಡ ಮತ್ತು ತೆಲುಗು ಅಕ್ಷರ ಸಂಯೋಜನ	10
	12—40ರಿಂದ 1—10ವರೆಗೆ	ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ—	
		ಕನ್ನಡ ಮತ್ತು ತೆಲುಗು ಕೈ ಬರವಣಿಗೆ	10
	2ರಿಂದ 3—30ವರೆಗೆ	ಆರೋಗ್ಯ ಶಾಸ್ತ್ರ	100
	3—45ರಿಂದ 4—15 ವರೆಗೆ	ಐಚ್ಛಿಕ ದ್ವಿತೀಯ ಭಾಷೆ—	
		ಸಂಸ್ಕೃತ ಮತ್ತು ಫಾರಸಿ ಅಕ್ಷರ ಸಂಯೋಜನ	10
	4—20ರಿಂದ 4—50 ವರೆಗೆ	ಐಚ್ಛಿಕ ದ್ವಿತೀಯ ಭಾಷೆ—	
		ಸಂಸ್ಕೃತ ಮತ್ತು ಫಾರಸಿ ಕೈ ಬರವಣಿಗೆ	10
ನಾಲ್ಕನೇ ದಿವಸ..	10ರಿಂದ 1ರ ವರೆಗೆ	ಚರಿತ್ರೆ, ಭೂಗೋಳಶಾಸ್ತ್ರ ಮತ್ತು ಭೂಪಟ ಬರೆಯುವುದು	120
	2ರಿಂದ 3—30 ವರೆಗೆ	ವ್ಯವಸಾಯ ಶಾಸ್ತ್ರ	100
ಐದನೇ ದಿವಸ ...	10ರಿಂದ 11—30 ವರೆಗೆ	ಕ್ಷೇತ್ರಗಣಿತ ಅಥವಾ ಆಂಗ್ಲೇಯರ ಚರಿತ್ರೆ	100
	11—35ರಿಂದ 1—5 ವರೆಗೆ	ಪ್ರಾಕೃತಿಕ ಭೂಗೋಳ ಶಾಸ್ತ್ರ, ಅಥವಾ ಗೃಹಕೃತ್ಯ ನಡೆಯಿಸುವ ಕ್ರಮ ..	100
	2 ರಿಂದ 3—30 ವರೆಗೆ	ಹೊಲಿಗೆ	50
	3—35ರಿಂದ 5—5ವರೆಗೆ	ಪಾಕಶಾಸ್ತ್ರ	50

15. ಆಂಗ್ಲ ದೇಶಭಾಷಾ ಮಿಡಲ್ ಪಾಠಶಾಲೆಗಳ ವಿದ್ಯಾರ್ಥಿಗಳು, ಇಂಗ್ಲಿಷ ಭಾಷೆಯನ್ನು ಪ್ರಥಮ ಭಾಷೆಯಾಗಿಯೂ ಒಂದು ದೇಶಭಾಷೆಯನ್ನಾಗಲಿ ಒಂದು 'ಕ್ಲಾಸಿಕಲ್' ಎಂಬ ಶ್ರೇಷ್ಠ ವರ್ಗದ ಭಾಷೆಯನ್ನಾಗಲಿ ಎರಡನೆಯ ಭಾಷೆಯಾಗಿಯೂ ತೆಗದುಕೊಂಡು ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಲ್ಲಿ, ಅವರು ಒಂದು ಹೈಸ್ಕೂಲಿನ ನಾಲ್ಕನೆಯ ಶ್ರೇಣಿಗೆ ಸೇರಿಸಲ್ಪಡುವರು. ಕಾಲೀಜಗಳ ಪ್ರಿನ್ಸಿಪಲ್ (ಅಧ್ಯಕ್ಷ) ಗಳಿಗೂ, ಹೈಸ್ಕೂಲ್‌ಗಳ ಮುಖ್ಯೋಪಾಧ್ಯಾಯರುಗಳಿಗೂ, ತೃಪ್ತಿಕರವಾದ ಒಂದು ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ತಮ್ಮ ಸ್ವಂತ ಕಾಲೀಜ್ ಅಥವಾ ಹೈ ಸ್ಕೂಲಿನ ವಿದ್ಯಾರ್ಥಿಗಳನ್ನೂ ಅಂಗೀಕೃತವಾದ ಇತರ ಪಾಠಶಾಲೆಗಳ ಮೂರನೆಯ ಶ್ರೇಣಿಯ ವಿದ್ಯಾರ್ಥಿಗಳನ್ನೂ ನಾಲ್ಕನೆಯ ಶ್ರೇಣಿಗೆ ಸೇರಿಸಿಕೊಳ್ಳಲು ಅಧಿಕಾರ ಉಂಟು. ಪರಂತು ಈ ಮೇಲೆ ಕಂಡ ವಿದ್ಯಾರ್ಥಿಗಳು ಪ್ರವೇಶಕಾಲಕ್ಕೆ ಹಿಂದೆ ನಡೆದ ಕಡೇ ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ಇಂಗ್ಲೀಷ ಭಾಷೆಯಲ್ಲಿ ತೇರ್ಗಡೆಯಾಗಿರಬೇಕು.

16. ಪರೀಕ್ಷೆಗೆ ಸೇರುವವರು ತಮ್ಮ ದರಖಾಸ್ತುಗಳನ್ನು ಅಚ್ಚು ಹಾಕಲ್ಪಟ್ಟ ನಮೂನೆಗಳಲ್ಲಿ ಕಳುಹಿಸಬೇಕು. ಅಂಥಾ ನಮೂನೆಗಳನ್ನು ಬೆಂಗಳೂರಲ್ಲಿರುವ ದೇಶೀಯ ಪರೀಕ್ಷಾ ಮ್ಯಾನೇಜರವರ ಆಫೀಸಿನಿಂದ ತರಿಸಿಕೊಳ್ಳಬಹುದು. A. B. C. D. E. F. ಎಂಬ ಚಿಹ್ನೆಗಳುಳ್ಳ ಬೇರೆ ಬೇರೆ ನಮೂನೆಗಳು ಕೊಡಲ್ಪಡುವುವು.

ಇಂಗ್ಲಿಷ ಪಾಠಶಾಲೆಗಳ ಮೂರನೇ ಶ್ರೇಣಿಯ ವಿದ್ಯಾರ್ಥಿಗಳಿಗಾಗಿ ಉಪಯೋಗಿಸತಕ್ಕ ನಮೂನೆ	A
ದೇಶಭಾಷಾ ಪಾಠಶಾಲೆಗಳ ವಿದ್ಯಾರ್ಥಿಗಳಿಗಾಗಿ ಉಪಯೋಗಿಸತಕ್ಕ ನಮೂನೆ	B
ಸಂಸ್ಕೃತ ಪಾಠಶಾಲೆಗಳ ವಿದ್ಯಾರ್ಥಿಗಳಿಗಾಗಿ ಉಪಯೋಗಿಸತಕ್ಕ ನಮೂನೆ	C
ದೇಶಭಾಷಾ ಪಾಠಶಾಲೆಗಳ ಉಪಾಧ್ಯಾಯರುಗಳಿಗಾಗಿ ಉಪಯೋಗಿಸತಕ್ಕ ನಮೂನೆ	D
ಸ್ವಂತ ವ್ಯಾಸಂಗಿಗಳಿಗಾಗಿ ಉಪಯೋಗಿಸತಕ್ಕ ನಮೂನೆ	E
ಎಲ್ಲಾ ಪರೀಕ್ಷೆಯರಿಗಾಗಿ ಉಪಯೋಗಿಸತಕ್ಕ ನಮೂನೆ	F

17. ಈ ಪ್ರಕಟನೆಯು ಸ್ 1904ನೆ ಇಸವಿ ಜನವರಿ ತಿಂಗಳಿಂದ ಆಚರಣೆಯಲ್ಲಿ ತರಲ್ಪಡುತ್ತದೆ.

ಹೆಚ್. ಜೆ. ಭಾಭಾ,
ಇನ್ಸ್‌ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಫಾರೆಸ್ಟ್ ಇಲಾಖಾ.

ನೋಟಿಸ.

ತಾ|| ನೆ ಫೆಬ್ರುವರಿ 1904ನೆ ಇಸವಿ.

1900ನೆ ಇಸವಿ ಫಾರೆಸ್ಟ್ ರೆಗ್ಯುಲೇಷನ್ 40ನೆ ಸೆಕ್ಷನ್ ಮೇರೆ ಈ ಕೆಳಗೆ ನಮೂದಿಸಿರುವ ಸಾಗುವಾನಿ ಪಟ್ಟೆಗಳು ಹೆಗ್ಗಡದೇವನಕೋಟೆ ತಾಲ್ಲೂಕು ಸಾಗರೆ ಇನಾಂ ಗ್ರಾಮದ ಶಂಭುಗೌಡನ ಕಟ್ಟೆಯಲ್ಲಿ ಬಿದ್ದಿದ್ದದ್ದು ಹಾಲಿ ಸಾಗರ ಪಟೇಲನ ವಶದಲ್ಲಿ ಇರುವದು. ಅದರ ಹಕ್ಕುದಾರರು ಯಾರಾದರೂ ಇದ್ದಲ್ಲಿ ಸದರಿ ಪಟ್ಟೆಗಳ ಹಕ್ಕನ್ನು ಸ್ಥಿರಪಡಿಸು ಇರತಕ್ಕ ಲಿಖಿತವಾದ ಸ್ಟೇಟಮೆಂಟನ್ನು ಈ ಲಾಗಾಯಿತು ಒಂದು ತಿಂಗಳ ವಳಗಾಗಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಲ್ಲಿ ಹಾಜರು ಪಡಿಸತಕ್ಕದ್ದು. ತಪ್ಪಿದಲ್ಲಿ ಸದರಿ ತೊಲೆಗಳ ಬಾಧ್ಯತೆಯು ಯಾವ ಅಟಂಕವೂ ಇಲ್ಲದಂತೆ ಸರ್ಕಾರಕ್ಕೆ ವಳಪಡಿಸಿಕೊಳ್ಳುವದು.

ಸದರಿ ಪಟ್ಟೆಗಳನ್ನು ಸ್ವಾಧೀನಪಡಿಸಿಕೊಳ್ಳಲು ಹಕ್ಕುದಾರರಾಗತಕ್ಕವರು ಸದರಿ ತೊಲೆ ಪತ್ತೆದಾರಿ ಮತ್ತು ಭದ್ರಪಡಿಸಿದ್ದಕ್ಕೆ ತಗಲಿದ ಲಾಗವಡನ್ನು ಫಾರೆಸ್ಟು ಅಧಿಕಾರಿಗಳಿಗೆ ಕೊಡಲು ಬದ್ಧರಾಗಿರುತ್ತಾರೆ :—

ನಂಬರು.	ತೊಲೆ ವಿವರ.	ಗುರ್ತು.	ಲಾಂಬಿ.		ಸುತ್ತು.	ಸಲೆ ಅಡಿ.
1	ಸಾಗುವಾನಿ ಪಟ್ಟೆ ...	ಪಟ್ಟೆಗಳ ಮೇಲೆ ನಂಬರು ಸ್ಟ್ಯಾಂಪು ಯು ಇತರ ವಿಧವಾದ ಗುರ್ತುಗಳು ಯಾವವೂ ಇಲ್ಲ.	9	9	1—10	2
2	ಡಿಟೋ ...		9	3	1— 7	1
3	ಡಿಟೋ ...		8	9	2— 0	2
4	ಡಿಟೋ		7	0	1— 3	1
5	ಡಿಟೋ		9	9	2— 0	2
6	ಡಿಟೋ ...		9	9	3— 3	6
7	ಡಿಟೋ (ಗುಂಡು) ...		7	9	2— 0	2
8	ಡಿಟೋ ಡಿಟೋ ...		8	0	1— 9	2

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು.

ಮೈಸೂರು ಡಿಸ್ಟ್ರಿಕ್ಟ್.

ಇಸಿ. ಹಾರ್.

ತಾರೀಖು 5—6ನೇ ಫೆಬ್ರವರಿ 1904.

ಇದರಲ್ಲಿ ನಮೂದಾಗುವ ಸಬ್ ರಿಜಿಸ್ಟ್ರಾರ್ ಆಫೀಸುಗಳಲ್ಲಿ ಈ ಕೆಳಗೆ ನಮೂದಿಸಿರುವ ಬೇವಾರಸು ದಸ್ತಾವೇಜುಗಳನ್ನು ಕ್ರಮವಾದ ವಾರಸುದಾರರಾಗಲಿ ಅಥವಾ ಅಧಿಕಾರ ಹೊಂದಿದ ಮುಖ್ತಾರ್‌ಕಾರರಾಗಲಿ ಈ ತಾರೀಖು ಮೊದಲುಗೊಂಡು ಒಂದು ತಿಂಗಳೊಳಗಾಗಿ ಆಯಾಯ ಸಬ್ ರಿಜಿಸ್ಟ್ರಾರ್ ಆಫೀಸುಗಳಲ್ಲಿ ಹಾಜರಾಗಿ ವಾಪಸು ಪಡೆಯದೇಹೋದ ಪಕ್ಷದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ಕ್ರಮಸಂಖ್ಯೆ	ಸಬ್ ರಿಜಿಸ್ಟ್ರಿ ಆಫೀಸಿನ ಹೆಸರು.	ಪುಸ್ತಕದ ನಂಬರು	ದಸ್ತಾವೇಜಿನ ನಂಬರು.	ದಸ್ತಾವೇಜಿನ ತಾರೀಖು.	ರಿಜಿಸ್ಟ್ರಿಗೆ ಅಥವಾ ತಿರಸ್ಕರಿಸಿದ ತಾರೀಖು.	ಬರೆದುಕೊಟ್ಟವರ ಹೆಸರು.	ಬರೆಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1	ಮಳವಳ್ಳಿ	I	1363 / 1899—1900	22 5 1900	23 6 1900	ಕಲ್ಕುಣಿ ದಾಖಲೆ ದೊಡ್ಡಗೌಡನ ಕೊಪ್ಪಲಲ್ಲಿರುವ ಮುದ್ದೆಗೌಡನ ಮಗ ಹೊನ್ನ	ಸದರಿ ದೊಡ್ಡಗೌಡನ ಕೊಪ್ಪಲಲ್ಲಿರುವ ಹೊನ್ನೆಗೌಡ ಉರುಫ್ ಪುಟ್ಟೇಗೌಡ	50 ರೂಪಾಯಿನ ಆಧಾರ
2	ಡಿಟೋ	I	940 / 1900—1901	21 9 1900	15 1 1901	ಕೃಷ್ಣಯ್ಯಂಗಾರ್ ಹುಂಡಿಯಲ್ಲಿರುವ ಕೃಷ್ಣಮಾಚಾರ್ರ ಮಗ ವೆಂಕಟನರಸಿಹ್ಮಾಚಾರಿ	ಸದರಿ ಕೃಷ್ಣಯ್ಯಂಗಾರ್ರ ಹುಂಡಿಯಲ್ಲಿರುವ ಲಿಂಗಶೆಟ್ಟಿ ಮಗ ಕರಿಂಗಶೆಟ್ಟಿ	90 ರೂಪಾಯಿನ ಕ್ರಯ
3	ಡಿಟೋ	I	941 / 1900—1901	20 9 1900	15 1 1901	ಡಿಟೋ	ಡಿಟೋ ಹುಂಡಿಯಲ್ಲಿರುವ ಕಾಳನ ಮಗ ಸಿದ್ದಾಬೋಯಿ	75 ರೂಪಾಯಿನ ಕ್ರಯ
4	ಡಿಟೋ	I	139 / 1901—1902	28 4 1901	12 7 1901	ಗುಳಗಟ್ಟದಲ್ಲಿರುವ ಮುದ್ದೆಗೌಡನ ಮಗ ಮುದ್ದೆಗೌಡ	ಗುಳಗಟ್ಟದಲ್ಲಿರುವ ವೀರನ ಮಗಪಾತ ಮತ್ತು ಮಗಳು ಚಾಡಿ	35 ಡಿಟೋ
5	ಡಿಟೋ	I	595 / 1901—1902	26 9 1901	26 9 1901	ಗೌಡಗೆರೆ ಮುದ್ದೆಗೌಡನ ಮಗ ಪಟೇಲ್ ಚಿಕ್ಕೆಗೌಡ	ಗೌಡಗೆರೆಯಲ್ಲಿರುವ ಮಾದೈರ್ಯನ ಮಗ ಲಿಂಗಯ್ಯ	200 ರೂಪಾಯಿನ ಕ್ರಯ
6	..	I	806 / 1901—1902	11 7 1901	8 11 1901	ಹುಲಂಬಳ್ಳಿಯಲ್ಲಿರುವ ರಂಗಾಚಾರ್ರ ಮಗಳು ರಂಗಮ್ಮ	ತಿ. ನರಸೀಪುರ ತಾಲ್ಲೂಕು ಸರ್ವೆ ಮಾನ್ಯ ಕೃಷ್ಣಾಪುರದ ಅಗ್ರಹಾರದಲ್ಲಿರುವ ಶ್ರೀನಿವಾಸದೇಶಿಕಾಚಾರ್	25 ರೂಪಾಯಿನ ದಾನಪತ್ರ
7	ಹೆಗ್ಗಡದೇವನಕೋಟೆ.	I	30 / 1901—1902	3 8 1901	3 8 1901	ಕರಗಳದ ಪೆಂಡರ್ ರಾಮಕೃಷ್ಣಪ್ಪನವರ ಮಗ ಸುಬ್ರಾಯ	ಚಿನ್ನಹಳ್ಳಿ ಶ್ಯಾನಭೋಗ ಸುಬ್ರಾಯರ ಮಗ ನರಸಿಂಹೈಯ್ಯ	100 ರೂಪಾಯಿನ ಕ್ರಯ
8	ಡಿಟೋ	I	36 / 1901—1902	8 8 1901	8 8 1901	ಅಂಡುಗೆರೆ ಗುರುಕಾರ ಕಂಚುಮಳ್ಳಿದಾಸಪ್ಪನ ಮಗ ಶಂಭುಲಿಂಗಪ್ಪ ಉರುಫ್ ಸೋಮಪ್ಪ	ಮೈಸೂರು ದಾಸ ಬೊಕ್ಕಸದ ಗೌಜಲ್ ಕೆಂಪಣ್ಣ	700 ರೂಪಾಯಿನ ಭೋಗ್ಯ

9	ಡಿಟೋ ...	I	47 / 1901—1902	4 9 1901	4 9 1901	ವೆಜ್ಜರಪಾಳ್ಯದಲ್ಲಿರುವ ಹನುಮಾಬೋಯಿ ಮಗ ತಿರುಮಲಾಬೋಯಿ ಉರುಫ್ ದುದ್ದಾಬೋಯಿ	ಮೈಸೂರು ಕುಂದಿಲ್ ಮಾಯಂಣನ ಮಗ ನಂಜುಂಡಪ್ಪ	200 ರೂಪಾಯಿನ ಆಧಾರ
10	ಮೈಸೂರು ಸಿಟಿ ...	I	382 / 1901—1902	25 12 1900	9 1 1901	ಮೈಸೂರು ಲಷ್ಕರ್ ಮೊಹಲ್ಲೆಯಲ್ಲಿರುವ ಅಲ್ಲಿಸಾಬರ 2ನೆ ಹೆಂಡತಿ ಮಾಜುಬಿ	ಮೈಸೂರು ಲಷ್ಕರಿ ಮೊಹಲ್ಲೆಯಲ್ಲಿರುವ ಅಲ್ಲಿಸಾಬರ ಮಗ ಅಬ್ದುಲ್ ರಹಿಮಾನ್ ಮತ್ತು ಮಾಜುಬಿ ಮಕ್ಕಳು ಮಹಮದ್ ಸಾಬಿ, ಮಹಮದ್ ಹಯಾತ್, ಅಬ್ದುಲ್ಲಾ ಸಾಬಿ, ಗೆಯಿಪ್‌ಸಾಬಿ, ಉಮರ್‌ಸಾಬಿ ಸಹ	658 ರೂಪಾಯಿನ ವ್ಯವಸ್ಥಾ ಪತ್ರ
11	ಡಿಟೋ ...	I	111 / 1901—1902	29 7 1901	31 7 1901	ಮಡಿಕೆರೆಯಲ್ಲಿರುವ ಸ್ಮಾರ್ತಬ್ರಾಹ್ಮಣ ಶಾಮರಾಯರ ಮಗ ಪ್ಲೀಡರ್ ಅಂಬಾಜಿ ರಾವ್	ಮೈಸೂರು ಶ್ರೀರಾಂಪೇಟೆಲಿರುವ ಚಾಮರಾಜನಗರ ತಾಲ್ಲೂಕು ಅಂಚೆ ಮುತ್ಸದ್ದಿ ಸುಬ್ರಾಯರ ಹೆಂಡತಿ ತುಳಸಾಬಾಯಿ	300 ರೂಪಾಯಿನ ಭೋಗ್ಯ ಪತ್ರ
12	ಡಿಟೋ ..	I	224 / 1901—1902	9 5 1901	10 9 1901	ಮೈಸೂರು ಮಂಡಿ ಮೊಹಲ್ಲಾದಲ್ಲಿರುವ ಪಾಂಚಾನದ ಜಾತಿ ಮುದ್ದಲಿಂಗಾಚಾರಿ ಮಗ ಅಕ್ಕೇಶ್ವರಾಚಾರಿ	ಮೈಸೂರು ಮಂಡಿ ಮೊಹಲ್ಲಾದಲ್ಲಿರುವ ಪಾಂಚಾನ ಯಜಮಾನ ವೆಂಕಟದಾಸಪ್ಪನ ಮಗ ಕೃಷ್ಣಾಚಾರಿ	200 ರೂಪಾಯಿನ ಆಧಾರ ಪತ್ರ
13	ಡಿಟೋ ...	I	309 / 1901—1902	17 7 1901	28 10 1901	ಮೈಸೂರು ದೇವರಾಜ ಮೊಹಲಾ ದ್ರಾವಿಡ ಬ್ರಾಹ್ಮಣ ಭಸ್ಮ ನಾರಣಪ್ಪನವರ ಮಗ ಭಸ್ಮ ರಾಮೈಯ್ಯ	ಮೈಸೂರು ಮಂಡೀ ಮೊಹಲ್ಲಾ ಮುವಲ್ವಿ ಮೀರ್ ಹಯಾತ್ ಸಾಹೇಬರ ಹೆಂಡ್ತಿ ಮಕ್ಕಳು ಮಹಬೂಬಿ	ಬಾಡಿಗೆ ಖರಾರು ಮಾಹೆಯಾನಾ 10 ರೂಪಾಯಿನಂತೆ ಮತ್ತು ಈ ಒಗ್ಗೆ 200 ರೂಪಾಯಿ ಅಡ್ವಾನ್ಸು ಕೊಟ್ಟಿರುವಂತೆ.
14	ಡಿಟೋ ..	IV	4 / 1901—1902	21 5 1901	15 8 1901	ಬೆಂಗಳೂರು ಅರಳೇಪೇಟೆಗೆ ಶೇರಿದ ಪವಾಡಶೆಟ್ಟಿ ಪೇಟೆಲಿರುವ ಲಕ್ಕೂರು ಜಡಿಯಪ್ಪನ ಮಗಳು ಚಾಮುಂಡಮ್ಮ ಉರುಫ್ ಚಾಮಂತಮ್ಮ	ಬೆಂಗಳೂರು ಅರಳೆಪೇಟೆಗೆ ಶೇರಿದ ಪವಾಡಶೆಟ್ಟಿ ಪೇಟೆಲಿರುವ ನಂಜಪ್ಪನ ಮಗ ಅಣ್ಣೈಯ್ಯಶೆಟ್ಟಿ	ವಿವಾಹ ಪರಿತ್ಯಜನೆ ಪತ್ರ
15	ಡಿಟೋ ...	IV	5 / 1901—1902	1 7 1901	20 9 1901	ಮೈಸೂರು ದೇವರಾಜ ಮೊಹಲಾ ಕಿರಗಾಣಿಗ ಆಲಶೆಟ್ಟಿ ಮಗ ಶಿದ್ದಶೆಟ್ಟಿ	ಮೈಸೂರು ತಾಲ್ಲೂಕು ನಾಗನಹಳ್ಳಿ ಕಿರಗಾಣಿಗರ ಮೊಳಶೆಟ್ಟಿ ಮಗ ಅಂದಾಣಿಶೆಟ್ಟಿ	100 ರೂಪಾಯಿನ ಇನಾಂ ಪತ್ರ
16	ಡಿಟೋ ...	II	1 / 1901—1902	7 11 1901	18 7 1901 ತಿರಸ್ಕಾರವಾದದ್ದು	ಮೈಸೂರು ಇಟ್ಟಿಗೆ ಗೂಡಿನಲ್ಲಿರುವ ಗಂಗಡಿಕಾರ ಸರ್ದಿವಾಲ್ ಹುಚ್ಚಪ್ಪನ ಮಗ ಹುಚ್ಚಯ್ಯ ಉರುಫ್ ಚಿಕ್ಕ ಹುಚ್ಚಣ್ಣ	ಮೈಸೂರು ಇಟ್ಟಿಗೆ ಗೂಡಿನಲ್ಲಿರುವ ಗಂಗಡಿಕಾರ ಒಕ್ಕಲಿಗರ ಗೌಡಯ್ಯನ ಮಗ ಕಾಳಣ್ಣ	30 ರೂಪಾಯಿನ ಆಧಾರ ಪತ್ರ
17	ಮಂಡ್ಯ	I	899 / 1900—1901	12 2 1901	13 2 1901	ಈಚಗೆರೆ ಗ್ರಾಮದಲ್ಲಿರುವ ಆರಾಧ್ಯರು ಹುಚ್ಚಪ್ಪಾರಾಧ್ಯರ ಮಗ ಪುಟ್ಟಶಾಮಪ್ಪಾರಾಧ್ಯ	ಸಾತನೂರು ಗ್ರಾಮದಲ್ಲಿರುವ ಸ್ಮಾರ್ತಬ್ರಾಹ್ಮಣ ದಾಸಪ್ಪನವರ ಮಕ್ಕಳು ಗಿರಿಯಪ್ಪಯ್ಯ	170 ರೂಪಾಯಿನ ಕ್ರಯ ಪತ್ರ
18	ಡಿಟೋ ..	I	900 / 1900—1901	13 2 1901	13 2 1901	ಈಚಗೆರೆ ಗ್ರಾಮದಲ್ಲಿರುವ ಆರಾಧ್ಯರು ಪುಟ್ಟಶ್ಯಾಮಪ್ಪನವರ ಮಗ ಹುಚ್ಚಪ್ಪಾರಾಧ್ಯರು	ಡಿಟೋ ..	50 ಡಿಟೋ

ಕ್ರಮ ಸಂಖ್ಯೆ.	ಆಫೀಸಿನ ಹೆಸರು.	ಪುಸ್ತಕದ ನಂಬರು.	ದಸ್ತಾವೇಜಿನ ನಂಬರು.	ದಸ್ತಾವೇಜಿನ ತಾರೀಖು.	ರಿಜಿಸ್ಟ್ರುಮಾಡಿದ ಅಥವಾ ತಿರಸ್ಕರಿಸಿದ ತಾರೀಖು.	ಬರೆದು ಕೊಟ್ಟವರ ಹೆಸರು.	ಬರೆಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
19	ಮಂಡ್ಯ ..	I	906 / 1900—1901	14 2 1901	14 2 1901	ಕಾನಕಾನಹಳ್ಳಿ ತಾಲ್ಲೂಕು ಹಲಸೂರು ಗ್ರಾಮದಲ್ಲಿರುವ ಪಾಂಚಾಳದ ರಾಜಾಚಾರಿ ಮಗ ರಾಜಾಚಾರಿ	ಕಿರಂಗೂರು ಗ್ರಾಮದಲ್ಲಿರುವ ಒಕ್ಕಲಿಗರ ಜಾತಿ ಕೀರೂಗಾರ ಚನ್ನೆಗೌಡನ ಮಗ ತಿಮ್ಮೆಗೌಡ	125 ರೂಪಾಯಿನ ಆಧಾರ ಪತ್ರ
20	ಡಿಟೋ ...	I	1160 / 1900—1901	30 4 1901	30 4 1901	ಮದ್ದೂರು ಹೋಬಳಿ ವೈದ್ಯನಾಥಪುರದಲ್ಲಿರುವ ತಿಮ್ಮೇಗೌಡನ ಮಗ ನಂಜೆಗೌಡ	ಚನ್ನಪಟ್ಣ ತಾಲ್ಲೂಕು ಬೆಳಕೆರೆ ಗ್ರಾಮದಲ್ಲಿರುವ ಮಹಾರಾಷ್ಟ್ರ ಧರ್ಮಾಜಿ ರಾಯರ ಮಕ್ಕಳು ಧೋಂಡೋಜಿರಾಯರು	100 ಡಿಟೋ
21	ಹುಣಸೂರು ...	I	597 / 1899—1900	19 3 1900	20 3 1900	ಮರಕಾಳ ..	ಸಿದ್ದಲಿಂಗಯ್ಯ	50 ಡಿಟೋ
22	ಡಿಟೋ ...	I	664 / 1899—1900	1 4 1900	3 4 1900	ಮೋಟೇಗೌಡ ..	ಶ್ರೀನಿವಾಸ ಜೋಯಿಸರು ..	150 ರೂಪಾಯಿನ ಕ್ರಯ
23	ಡಿಟೋ ..	I	923 / 1899—1900	30 5 1900	18 6 1900	ಪೀರಾ :	ರಾಮಯ್ಯ ಉರುಫ್ ತಮ್ಮಣ್ಣಶೆಟ್ಟಿ ..	200 ಡಿಟೋ
24	ಡಿಟೋ ...	I	91 / 1900—1901	1 6 1900	20 7 1900	ವೀರಣ್ಣ, ಚನ್ನಯ್ಯ ..	ನಾಗಣ್ಣ ...	300 ಡಿಟೋ
25	ಡಿಟೋ ..	I	716 / 1900—1901	21 2 1901	22 2 1901	ಚಲುವ ಶೆಟ್ಟಿ .	ಪೀರಪಾಚ್ಛಾ ಸಾಬಿ .	200 ಡಿಟೋ
26	ಡಿಟೋ ...	I	1151 / 1900—1901	23 5 1901	23 5 1901	ರಜಾಖಾನ್ ಸಾಬಿ ...	ಕಾಳೇಗೌಡ ..	100 ಡಿಟೋ
27	ಡಿಟೋ ..	I	44 / 1901—1902	9 7 1901	10 7 1901	ಸಿದ್ದೆಗೌಡ ..	ವಿಷಕಂಠೆಗೌಡ ..	150 ರೂಪಾಯಿನ ಭೋಗ್ಯ
28	ಡಿಟೋ ..	I	65 / 1901—1902	1 4 1901	17 7 1901	ಬಸವಾ ...	ಮರಿಶೆಟ್ಟಿ ..	100 ಡಿಟೋ

29	ಡಿಟೋ	II	8 / 901 – 1902	23	5	1901	8	10	1901 ತಿರಸ್ಕರಿಸಿದ್ದು.	ಲಕ್ಷ್ಮಯ್ಯ	ಕರೀಗೌಡ	200 ರೂಪಾಯಿನ ಕ್ರಯ
30	ಶ್ರೀ|| ನರಸೀಪುರ	I	1991 / 1900 – 1901	11	4	1901	15	4	1901	ಕಿರಗಸೂರ್ ದಾಖ್ಲೆ ಬಿಳಗೆರೆ ಹುಂಡಿ ಮರಿ ಮಗ ಮಾದ	ಗರ್ಗೇಶ್ವರಿ ಮಹಮದ್ ಇಸ್ಮಾಯಿಲ್‌ಸಾಬಿ ಮಗ ಖಾದರ್‌ಸಾಬಿ	20 ರೂಪಾಯಿನ ಕ್ರಯ
31	ಡಿಟೋ	I	2137	26	4	1901	29	4	1901	ಕುಪ್ಪಾಳು ಗ್ರಾಮದ ಕುರುಬರ ಮಲ್ಲನ ಹೆಂಡತಿ ರಾಮಿ ಸೂಳೆಮಗ ಮಲ್ಲಾ ಸಹ	ಕುಪ್ಪಾಳು ಶ್ಯಾ|| ಕೃಷ್ಣಪ್ಪ	35 ಡಿಟೋ
32	ಡಿಟೋ	I	2332	6	5	1901	17	5	1901	ಚಾಮನಹಳ್ಳಿ ತಿಮ್ಮೇಗೌಡನ ಮಲ್ಲೆಗೌಡ ಮತ್ತು ಮಡಲಗೌಡ್ನ ಯಾಲಕ್ಕಿಗೌಡ	ಚನ್ನಪಟ್ಟಣ ಕಡವಾ ಮಸ್ತಫಾಖಾನ್‌ಸಾಬಿ ಮಗ ರಸೂಲ್‌ಖಾನ್‌ಸಾಬಿ ಮೈನರ್, ಗಾರ್ಡಿಯನ್ ಅಂಣ, ಮಲ್ಲಿಖಾನ್ ಸಾಬಿ ಮತ್ತು ಪೀರ್‌ಸಾಬಿ	5 ಸಾಲ್‌ಗೇಣಿ, ಸಾಲ್ 1ಕ್ಕೆ 175 ರೂಪಾಯಿ ಕಿಮ್ಮತ್ತಿನ ಭತ್ತ ಕೊಡುವದಾಗಿ
33	ಡಿಟೋ	I	2442	6	5	1901	27	5	1901	ಅತ್ತಹಳ್ಳಿ ಕುಂಟ ಜವನೈಯ್ಯನ ಮಗ ನಂಜೆಗೌಡ, ಡಿಟೋ ಊರು ಲಕ್ಷ್ಮಿರಾಮೈಯ್ಯನ ಮಗ ಲಾಲಿಂಗ್	ಡಿಟೋ	5 ಸಾಲ್‌ಗೇಣಿ, ಸಾಲ್ 1ಕ್ಕೆ 177 ರೂಪಾಯಿ ಕಿಮ್ಮತ್ತಿನ ಭತ್ತ ಕೊಡುವದಾಗಿ
34	ಡಿಟೋ	I	2820	13	6	1901	21	6	1901	ಶ್ರೀರಂಗರಾಜಪುರ ಅಗ್ರಹಾರದಲ್ಲಿರುವ ಕುಂಭಕೋಣ ತಾತಾಚಾರ್ರ ಮಕ್ಕಳು ಲಕ್ಷ್ಮೀಕುಮಾರ ತಾತಾಚಾರ್	ಕುಳ್ಳನಕೊಪ್ಪಲ್ ಕೆಂಪೀರಗೌಡ	24 – 8 – 0 ರೂಪಾಯಿನ ಕ್ರಯ ಪತ್ರ
35	ಡಿಟೋ	I	2881	13	4	1901	28	6	1901	ಕೃಷ್ಣಾಪುರದ ಬಳಿ ಹುಂಡಿ ಯಳೆ ಗೌಡನ ಮಗ ನಂಜೆಗೌಡ ಇವನ ಮಗ ಗವಿಯ ಉರುಫ್ ಬೋಡಯ್ಯ, 2ನೆ ಮಗ ಮಾದ, 3ನೆ ನಂಜ ಉರುಫ್ ಶಿವಡಾ	ಕಾರಗಹಳ್ಳಿ ದಾಖ್ಲೆ ಕೃಷ್ಣಾಪುರದ ಕುಂಬಾರಶೆಟ್ಟಿ ಮಗ ಲಿಂಗಶೆಟ್ಟಿ	100 ರೂಪಾಯಿನ ಆಧಾರ
36	ಡಿಟೋ	I	295 / 1901 – 1902	22	6	1901	6	8	1901	ಕುಕ್ಕೂರು ಬಸ್ತರ ಪಿಟ್ಟೆಕಾಳೆಗೌಡನ ಮಗ ಬಸವ	ತಲಕಾಡು ಷೇಕ್ ಹುಸೇನ್‌ಸಾಬಿ ಹೆಂಡತಿ ಹಯಾತ್‌ಬಿ	10 ರೂಪಾಯಿನ ಆಧಾರ
37	ಡಿಟೋ	I	586 / 1901 – 1902	28	5	1901	21	9	1901	ಚಾರ್ರೈನ ಹುಂಡಿಲಿರುವ ಕೋಟ್ಟಮಾಡಿ ಮಸಣನ ಮಾದ ಇವನ ಮಗ ನಂಜ	ಆಚಾರ್ರೈನಹುಂಡಿ ಬಿಳಿಗಿರಿ ರಂಗಾಚಾರ್ರ ಹೆಂಡತಿ ರಂಗಮ್ಮ	30 ರೂಪಾಯಿನ ಕ್ರಯ ಪತ್ರ
38	ಡಿಟೋ	I	762	10	9	1901	28	10	1901	ಬನ್ನೂರಲ್ಲಿರುವ ರಘುರಾಯರ ಮಗ ಲಕ್ಷ್ಮೀನಾರಣೈಯ್ಯ	ಬನ್ನೂರಲ್ಲಿರುವ ಬುಡ್ಡಾಸಾಬಿ ಮಗ ಅತ್ತಹಳ್ಳಿ ಪುರ್ಸ್ಮಾನ್‌ಸಾಬಿ	100 ರೂಪಾಯಿನ ಆಧಾರ ಪತ್ರ
39	ಡಿಟೋ	I	795	5	10	1901	30	10	1901	ದೊಡ್ಡಪುರದ ಲಿಂಗರಾಜಯ್ಯನ ಮಗ ಮಾದರಾಜಯ್ಯ	ಕೆಂಪಿನಪುರದ ಬಲಗೈ ಮೂಗಲಿ ಕಾಳನ ಮಗ ಗವಿಯ	35 ರೂಪಾಯಿನ ಕ್ರಯ ಪತ್ರ
40	ಡಿಟೋ	I	914	18	11	1901	19	11	1901	ಶ್ರೀರಂಗಪಟ್ಟಣದ ವೆಂಕಟಗಿರಿರಾಯರ ಮಗ ದೇವಿನಹಳ್ಳಿಲಿರುವ ಕೆ. ಸುಬ್ರಾಯ	ಬನ್ನೂರಲ್ಲಿರುವ ಕೆರಗೋಡು ರಾಮಣ್ಣನ ಮಗ ವೆಂಕಟಸುಬ್ಬಯ್ಯ	50 ರೂಪಾಯಿನ ಕ್ರಯ ಪತ್ರ
41	ಡಿಟೋ	I	960	27	11	1901	28	11	1901	ಹೆಮ್ಮಿಗೆಲಿರುವ ಮಾದಾಪುರದ ಈರಶೆಟ್ಟಿ ಮಗ ಚಿಕ್ಕಜಂಜಶೆಟ್ಟಿ	ಮೂಗೂರಲ್ಲಿರುವ ಪಟೇಲ್ ಸುಬ್ಬೇಗೌಡನ ಮಗ ಹೊಸಹಳ್ಳಿ ಪಟೇಲ್ ಪುಟ್ಟಸುಬ್ಬೇಗೌಡ	100 ರೂಪಾಯಿನ ಭೋಗ್ಯ ಪತ್ರ
42	ಡಿಟೋ	I	1053	22	8	1901	18	12	1901	ನಿಲಸೋಗೆ ಕುರುಬರ ಅಣ್ಣಯ್ಯನ ಸಿದ್ದಯ್ಯನ ಮಗ ಸಿದ್ದಾ, ಮಾದ ಸಹಾ	ಕುತ್ತಾಗಾಲದ ಹೊಟ್ಟೆ ಲಿಂಗಣ್ಣನ ಬಸಪ್ಪನ ಹೆಂಡತಿ ಪಾರ್ವತಮ್ಮ	50 ರೂಪಾಯಿನ ಕ್ರಯ ಪತ್ರ

ಸಂಖ್ಯೆ ನಂಬರು.	ಆಫೀಸಿನ ಹೆಸರು.	ಪು. ಸ್ತಾ ನಂಬರು.	ದಸ್ತಾವೇಜಿನ ನಂಬರು.	ದಸ್ತಾವೇಜಿನ ತಾರೀಖು.	ರಿಜಸ್ಟ್ರಿಯಾದ ಅಥವಾ ತಿರಸ್ಕರಿಸಿದ ತಾರೀಖು	ಬರೆದುಕೊಟ್ಟವರ ಹೆಸರು.	ಬರೆಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
43	ನಾಗಮಂಗಲ ..	I	565 / 1900—1901	29 4 1901	3 5 1901	ಕೊಕ್ಕರನ ಹೊಸಹಳ್ಳಿಯಲ್ಲಿರುವ ಚಿಕ್ಕಿಗೌಡನ ಮಗ ಗದ್ದೆಗೌಡ	ಕಂಚೇನಹಳ್ಳಿ ಗ್ರಾಮದಲ್ಲಿರುವ ಚಿಕ್ಕಣ್ಣಗೌಡನ ಮಗ ಕಪನಿಗೌಡ	80 ರೂಪಾಯಿನ ಕ್ರಯ ಪತ್ರ
44	ಡಿಟೋ ...	II	9 / 1900—1901	10 9 1901	14 5 1901 ತಿರಸ್ಕಾರವಾದ್ದು	ಬೊಮ್ಮನಹಳ್ಳಿಲಿರುವ ನಂಜೆಗೌಡನ ಮಗ ಚನ್ನಯ್ಯ	ಸುನಗನಹಳ್ಳಿಲಿರುವ ಬಲಗೈ ತಿಮ್ಮನ ಮಗ ಮರುಮಾಯಿ	25 ರೂಪಾಯಿನ ಕ್ರಯ ಪತ್ರ
45	ಗುಂಡ್ಲುಪೇಟೆ ..	I	42 / 1901—1902	23 7 1901	23 7 1901	ಕಗ್ಗಳಗ್ರಾಮದಲ್ಲಿರುವ ನಂಬು ಲಿಂಗೆಗೌಡನ ಮಗ ಲಿಂಗೆಗೌಡ ಇವನ ತಮ್ಮ ಬೋಲೆಗೌಡ ಸಹಾ	ತರಕಣಾಂಬಿ ಗ್ರಾಮದಲ್ಲಿರುವ ಸ್ಮಾರ್ತ ಬ್ರಾಹ್ಮಣ ಕಗ್ಗಳದ ಸುಬ್ರಾಯರ ಮಗ ದೇವಪ್ಪ	100 ರೂಪಾಯಿನ ಆಧಾರ ಪತ್ರ
46	ನಂಜನಗೂಡು	II	4 / 1900—1901	ಹಾಜರಾದ ತಾರೀಖು 5 2 1900	4 1 1901 ತಿರಸ್ಕಾರವಾದ್ದು	ಹೆಜ್ಜಿಗೆದಾಖಲೆ ಕೆಂಪಿಸಿದ್ದನಹುಂಡಿಲಿರುವ ದೊಡ್ಡಗೌಡನ ತಮ್ಮ ಕೋರನ ಮಗ ಪುಟ್ಟೆಗೌಡ	ಚಾಮುಂಡಿಪಟ್ಟದಲ್ಲಿರುವ ಸುಬ್ಬಾಭಟ್ಟರ ಮಗ ಪುಟ್ಟಣ್ಣ ಉರುಫ್ ಪುಟ್ಟದೇವರಭಟ್ಟ	500 ರೂಪಾಯಿನ ಕ್ರಯ ಪತ್ರ
47	ಡಿಟೋ ...	I	922 / 1900—1901	ಹಾಜರಾದ ತಾರೀಖು 8 3 1901	8 3 1901	ಶ್ರೀರಂಗರಾಜಪುರದಲ್ಲಿರುವ (ತಿ॥ ನರಸೀಪುರ ತಾಲ್ಲೂಕು) ಸುಬ್ಬಾಶಾಸ್ತ್ರಿಗಳ ಮಗ ಸುಬ್ಬಾಶಾಸ್ತ್ರಿ	ಮೈಸೂರು ಚಾಮರಾಜಪೇಟೆಲಿರುವ ನಂಜನಗೂಡು ಕೃಷ್ಣಾಶಾಸ್ತ್ರಿಗಳ ಮಗ ಅಗರದ ರಾಮಣ್ಣ	ಸಾಲ್ 1ಕ್ಕೆ 100 ರೂಪಾಯಿ ಕೊಡುವಂತೆ ಗೇಣಿ ಚೀಟಿ
48	ಡಿಟೋ ...	I	928 / 1900—1901	ಹಾಜರಾದ ತಾರೀಖು 9 3 1901	9 3 1901	ಹೊರಳವಾಡಿಲಿರುವ ತರಗ ಬಸವೈಯ್ಯನ ಮಗ ಕೆಂಪನಂಜಯ್ಯ ಡಿಟೋ ಗ್ರಾಮದಲ್ಲಿರುವ ಮುದ್ದುಮಲ್ಲನ ಚಿಕ್ಕನಮಗ ಮಸಣಾ	ಮುಳೂರು ಶ್ಯಾನುಭೋಗ ನಂಜನಗೂಡಿನಲ್ಲಿರುವ ಶ್ರೀಕಂಠಯ್ಯ	3 ಸಾಲ್ ಗೇಣಿ, ಸಾಲ್ 1ಕ್ಕೆ 176 ರೂಪಾಯಿನಂತೆ
49	ಡಿಟೋ ..	I	286 / 1901—1902	ಹಾಜರಾದ ತಾರೀಖು 7 8 1901	7 8 1901	ಹೊರಳವಾಡಿಲಿರುವ ಅಗಸರ ತಿಮ್ಮನ ಸಿದ್ದನ ಮಗಳು ಚನ್ನಿ	ಹೊರಳವಾಡಿಲಿರುವ ಆಡಿ ಸಿದ್ದ ಇವನ ತಮ್ಮ ಲಿಂಗನ ಮಗ ಸಿದ್ದ, ಮಾದ ಇವರು ಮೈನರ್, ಗಾರ್ಡಿಯನ್ ತಾಯಿ ಲಿಂಗಿ	100 ರೂಪಾಯಿನ ಕ್ರಯ ಪತ್ರ
50	ಡಿಟೋ	I	983 / 1901—1902	ಹಾಜರಾದ ತಾರೀಖು 12 12 1901	12 12 1901	ಅಳಗಂಚಿ ಗ್ರಾಮದಲ್ಲಿರುವ ಬಲಗೈ ಚಿಕ್ಕನಂಜನಮಗ ನಂಜ ಉರುಫ್ ಚಿಕ್ಕನಂಜ	ಅಳಗಂಚೀಗ್ರಾಮದಲ್ಲಿರುವ ಕುರುಬರಚಿಕ್ಕಲಿಂಗೇಗೌಡನ ಮಗ ಕೊಪ್ಪಮಾದೇಗೌಡ	75 ರೂಪಾಯಿನ ಭೋಗ್ಯ ಪತ್ರ
51	ಡಿಟೋ ...	I	1003 / 1901—1902	ಹಾಜರಾದ ತಾರೀಖು 14 12 1901	14 12 1901	ತರದಲೆ ಗ್ರಾಮದಲ್ಲಿರುವ ನಾರಣಯ್ಯನ ಮಗ ಶ್ಯಾ॥ ರಾಮಯ್ಯ	ಮಲ್ಲಹಳ್ಳಿಲಿರುವ ಮಲ್ಲಾಚಾರಿ	150 ರೂಪಾಯಿನ ಕ್ರಯ ಪತ್ರ
52	ಯಡತೊರೆ ...	I	91	9 7 1900	13 7 1900	ಈರಭದ್ರಯ್ಯ, ಈರಂಣ ...	ರಾಮೆಗೌಡ ..	600 ರೂಪಾಯಿನ ಕ್ರಯ ಪತ್ರ
53	ಡಿಟೋ ..	I	1305	11 2 1901	12 2 1901	ತಿಮ್ಮಶೆಟ್ಟಿ ..	ಎ. ಸುಬ್ಬಂಣ ..	46—12—0 ಗೇಣಿ ಚೀಟಿ
54	ಡಿಟೋ .	I	1307	11 2 1901	12 2 1901	ಲಿಂಗಶೆಟ್ಟಿ ..	ಎ. ರಾಮಂಣ ...	168 ಡಿಟೋ
55	ಡಿಟೋ ..	I	2195	9 5 1901	24 6 1901	ಜವರಾ ..	ಯಲ್ಲಮ್ಮ ಉರುಫ್ ಸಂಣಮ್ಮ ..	19 ರೂಪಾಯಿನ ಕ್ರಯ ಪತ್ರ
56	ಡಿಟೋ ...	I	2240	13 5 1901	25 6 1901	ಕಾಳ ...	ಲಿಂಗೇಗೌಡ ..	100 ರೂಪಾಯಿನ ಕ್ರಯ ಪತ್ರ

				ಹಾಜರಾದ ತಾರೀಖು				
57	ಯಡತೊರೆ ...	I	2332	20 5 1901	29 6 1901	ಅಪ್ಪಾಜಿಶೆಟ್ಟಿ ..	ಸಣ್ಣ ಮಾಶೆಟ್ಟಿ ...	100 ರೂಪಾಯಿನ ಕ್ರಯಪತ್ರ
58	ಡಿಟೋ ..	I	2506	31 5 1901	10 7 1901	ನಿಂಗಾ ...	ಕೇಶಣ್ಣ ...	180 ಡಿಟೋ
59	ಡಿಟೋ ..	I	2674	14 6 1901	6 8 1901	ಪದ್ಮರಾಜೈಯ್ಯ ..	ದ್ಯಾವರಾಜೆಗೌಡ	185 ಡಿಟೋ
60	ಡಿಟೋ ...	I	191 1901—1902	5 8 1901	6 9 1901	ನರಸಾಚಾರಿ ಪುರುಫ್ ನಾರಾಯಣಾಚಾರಿ	ಭಾಗೀರತಮ್ಮ ..	100 ರೂಪಾಯಿನ ಆಧಾರಪತ್ರ
61	ಡಿಟೋ ..	I	221	9 8 1901	7 9 1901	ದ್ಯಾವರಾಜೆ ಅರಸು ...	ಕೆಂಪರಾಜೆ ಅರಸು ...	40 ರೂಪಾಯಿನ ಕ್ರಯಪತ್ರ
62	ಡಿಟೋ .	I	224	9 8 1901	ಡಿಟೋ	ಕರಿಗೌಡ ...	ರಾಮೆಗೌಡ .	40 ಡಿಟೋ
63	ಡಿಟೋ .	I	228	ಡಿಟೋ	ಡಿಟೋ	ರಾಮೆಗೌಡ ...	ಪುಟ್ಟೆಗೌಡ ...	19 ಡಿಟೋ
64	ಡಿಟೋ	I	231	ಡಿಟೋ	9 9 1901	ಕೇಪಾ .	ವೆಂಕಟೆಗೌಡ ..	50 ಡಿಟೋ
65	ಡಿಟೋ	I	350	30 8 1901	24 9 1901	ಪುಟ್ಟಮ್ಮ ...	ದೊಡ್ಡೆಗೌಡ .	230 ಡಿಟೋ
66	ಡಿಟೋ .	I	359	ಡಿಟೋ	ಡಿಟೋ	ಕಾಳಾಪೋಯಿ .	ಕಾಳಶೆಟ್ಟಿ ಮೈನರ್, ಗಾರ್ಡಿಯನ್ ತಾಯಿ ಚನ್ನಮ್ಮ	200 ರೂಪಾಯಿನ ಆಧಾರಪತ್ರ
67	ಡಿಟೋ ...	I	420	12 9 1901	30 9 1901	ಪುಟ್ಟಮ್ಮ	ರಾಮಸ್ವಾಮೈಯ್ಯ ವಗೈರೆ ..	50 ರೂಪಾಯಿನ ಖುಲಾಸೆಪತ್ರ
68	ಡಿಟೋ ...	I	442	20 9 1901	ಡಿಟೋ	ದಾಸಶೆಟ್ಟಿ ...	ಚನ್ನಶೆಟ್ಟಿ ...	165 ರೂಪಾಯಿನ ಕ್ರಯಪತ್ರ
69	ಡಿಟೋ .	I	460	26 9 1901	10 10 1901	ಶಿದ್ದಣ್ಣ ಪುರುಫ್ ಶಿದ್ದೆಗೌಡ ..	ಸುಬ್ರಾಯಶೆಟ್ಟಿ ...	160 ರೂಪಾಯಿನ ಆಧಾರಪತ್ರ
70	ಡಿಟೋ ..	II	1	25 2 1901	5 7 1901 ತಿರಸ್ಕಾರವಾದ್ದು	ಗಂಗವಾಡಿ ರಾಮೈಯ್ಯಂಗಾರ್ ..	ಅಲ್ಲಿಸಾಬಿ	100 ರೂಪಾಯಿನ ಕ್ರಯಪತ್ರ
71	ಕೃಷ್ಣರಾಜಪೇಟೆ .	I	314 1901—1902	9 8 1901	10 8 1901	ಗುಮ್ಮನಹಳ್ಳಿ ದಾಖ್ಲೆ ಕುಂಬಾರ ಕೊಪ್ಪಲ್ ಚನ್ನಗೌಡ್ನ ಹೆಂಡತಿ ಕಾಳಿ	ಗುಮ್ಮನಹಳ್ಳಿ ದಾಖ್ಲೆ ಕುಂಬಾರ ಕೊಪ್ಪಲ್ ಚನ್ನಗೌಡನ ಮಗ ಮಲೆಗೌಡ	20 ಡಿಟೋ
72	ಡಿಟೋ .	I	313	ಡಿಟೋ	9 8 1901	ಡಿಟೋ	ಡಿಟೋ ಗ್ರಾಮದ ಚೌಡಶೆಟ್ಟಿ ಮಕ್ಕಳು ಕೆಂಪಶೆಟ್ಟಿ, ಚೌಡಶೆಟ್ಟಿ	40 ಡಿಟೋ
73	ಡಿಟೋ ..	I	467	17 8 1901	20 9 1901	ದಡದಹಳ್ಳಿ ದಾದಾಸಾಬಿ ಮಗ ಮಹಮದ್ಖಾನ್ ಸಾಬಿ ಪುರುಫ್ ಸುನ್ನಾಸಾಬಿ	ದಡದಹಳ್ಳಿಲಿರುವ ಕೆಂಪಶೆಟ್ಟಿ ಮೈನರ್, ಗಾರ್ಡಿಯನ್ ತಾಯಿ ಚನ್ನಮ್ಮ	150 ರೂಪಾಯಿನ ಆಧಾರಪತ್ರ
74	ಡಿಟೋ ..	II	6 1900—1901	16 5 1900	12 2 1901 ತಿರಸ್ಕಾರವಾದ್ದು	ಕೊಂಬನಹಳ್ಳಿ ನಂಜೆಗೌಡ್ನ ಮಗ ಮರಿನಂಜ	ಹಡಸೇನಹಳ್ಳಿ ಕಾಳೆಗೌಡ್ನ ಮಗ ಚಿಣ್ಣಮೇಸ್ತ್ರಿ	100 ರೂಪಾಯಿನ ಕ್ರಯಪತ್ರ

ಸಂಖ್ಯೆ ನಂ.	ಆಫೀಸಿನ ಹೆಸರು.	ಪುಸ್ತಕದ ನಂಬರು	ದಸ್ತಾವೇಜಿನ ನಂಬರು.	ದಸ್ತಾವೇಜಿನ ತಾರೀಖು.	ರಿಜಿಸ್ಟ್ರಿಯಾದ ಅಥವಾ ತಿರಸ್ಕರಿಸಿದ ತಾರೀಖು.	ಬರೆದುಕೊಟ್ಟವರ ಹೆಸರು.	ಬರೆಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
75	ಕೃಷ್ಣರಾಜಪೇಟೆ ..	II	16 1900—1901	28 4 1900	27 6 1901	ಹರಿಹರಪುರದ ಮಸೂದ್ ಇಸೂಫ್ ಅಲ್ಲಿಸಾಬರ ಮಗ ಮಹಮದ್‌ಜಾಫರ್ ಉರುಫ್ ಬಾಜಾಬಾ ಸಾಬರು	ಹರಿಹರಪುರದ ತವಕಲ್ ಆಗಾಸಾಬರ ಮಗ ರಹಿಮಾಂ ಸಾಬರು	250 ರೂಪಾಯಿನ ಕ್ರಯಪತ್ರ
76	ಡಿಟೋ ..	II	3 1901—1902	11 11 1900	13 7 1901	ಕನ್ನಂಬಾಡಿ ಚನ್ನಿಶಿದ್ದನ ಮಗ ಸವಣೆಜವರ	ಚಿಕ್ಕ ಆಯಿರಹಳ್ಳಿ ದೊಡ್ಡಗೌಡ್ನ ಮಗ ಚಿಕ್ಕ ಅಪ್ಪುಗೌಡ	200 ರೂಪಾಯಿನ ಆಧಾರಪತ್ರ
77	ಚಾಮರಾಜನಗರ ..	I	1632 1900—1901	ಹಾಜರಾದ್ದು 5 5 1900	20 5 1901	ಕೊಡಗ್ಲೂರು ಗ್ರಾಮದಲ್ಲಿರುವ ಉಪ್ಪಲಿಗರ ನಾರಣಿ ಮಾರಶೆಟ್ಟಿ ಮಗ ಶಿದ್ಧಶೆಟ್ಟಿ	ಮೈಸೂರು ದೇವರಾಜ ಮೊಹಲಾದಲ್ಲಿರುವ ಬಣಜಿಗರ ಸಾಹುಕಾರ್ ತೊಗರಿ ಲಿಂಗಣ್ಣನವರ ಮಕ್ಕಳು ಪುಟ್ಟಣ್ಣ	2,300 ಡಿಟೋ
78	ಡಿಟೋ ..		1990	16 4 1901	17 4 1901	ಬಸವಾಪುರದಲ್ಲಿರುವ ಬಲಗೈ ಜಾತಿ ಕತ್ತೆಮಾರನ ದುಂಡನ ಮಗ ಕುನ್ನ ಮಾದಾ	ಬಸವಾಪುರದಲ್ಲಿರುವ ಬಲಗೈ ರಂಗನ ಮಗ ವರದಾ	150 ರೂಪಾಯಿನ ಕ್ರಯಪತ್ರ
79	ಡಿಟೋ ..	I	2742	19 6 1901	20 6 1901	ಸರ್ವಮಾನ್ಯ ಬಾಗಳಿ ಗ್ರಾಮದಲ್ಲಿರುವ ಹಜಾಂ ದೊಡ್ಡಮಾದನ ಮಗ ಮರಿ	ಸರ್ವಮಾನ್ಯ ಬಾಗಳಿ ಗ್ರಾಮದಲ್ಲಿರುವ ಹಜಾಂ ದೊಡ್ಡಮಾದನ ಮರಿಯನ ಮಗಳು ಮಾದಿ	100 ಡಿಟೋ
80	ಡಿಟೋ ...	II	6	5 2 1900 ಹಾಜರಾದ್ದು	ತಿರಸ್ಕಾರವಾದ್ದು 7 8 1900	ಹರದನಹಳ್ಳಿಯಲ್ಲಿರುವ ಗೌರಿಲಕ್ಷ್ಮಿ ನಾರಾಯಣಶಾಸ್ತ್ರಿಗಳ ಮಗ ರಂಗಾಶಾಸ್ತ್ರಿ	ಹರದನಹಳ್ಳಿಯಲ್ಲಿರುವ ಕಸಬಾ ಲಿಂಗಪ್ಪಯ್ಯನ ಮಕ್ಕಳು ರಾಮಯ್ಯ	10 ಡಿಟೋ
81	ಡಿಟೋ	II	13 1900—1901	14 12 1900	13 4 1901	ಹೊಂಗನೂರಲ್ಲಿರುವ ಮಂಗಲದ ದ್ಯಾವಣ್ಣಯ್ಯನವರ ಮಗ ವೆಂಕಟಸುಬ್ಬಯ್ಯ	ಹೊಂಗನೂರಲ್ಲಿರುವ ಹಗ್ಗವಾಡಿ ಗಾಣಿಗರ ಚಿಕ್ಕ ಹೊನ್ನಶೆಟ್ಟಿ ಮಗಳು ದೊಡ್ಡಿ	80 ರೂಪಾಯಿನ ಭೋಗ್ಯ ಪತ್ರ
82	ಶ್ರೀರಂಗಪಟ್ಟಣ ...	I	627 1900—1901	5 1 1901	5 1 1901	ಬಳಗುಳದಲ್ಲಿರುವ ರಾಂಪುರದ ಚನ್ನಲಿಂಗೆಗೌಡ್ನ ಹೆಂಡತಿ ತಿಮ್ಮಿ ಉರುಫ್ ಚೆಳವಿ	ಬಳಗುಳದಲ್ಲಿರುವ ಮುದ್ದೆಗೌಡನ ಮಗ ವೆಂಕಟಪ್ಪ	100 ರೂಪಾಯಿನ ದಾನ ಪತ್ರ
83	ಡಿಟೋ ..	I	1105	23 12 1900	22 4 1901	ಮೈಸೂರು ಖಿಲ್ಲೆದಲ್ಲಿರುವ ಜಂಗಮಕೋಟೆ ರಾಮಭಟ್ರ ಹೆಂಡತಿ ವೆಂಕಟಲಕ್ಷ್ಮಮ್ಮ	ಮೈಸೂರು ಖಿಲ್ಲೆದಲ್ಲಿರುವ ನಾಮತೀರ್ಥದ ತೊಟ್ಟಿ ಪೊಫೆಸರ್ ಸಣ್ಣಾರಾಯರ ಮಕ್ಕಳು ಎಂ. ಶ್ರೀನಿವಾಸರಾವ್	5 ಸಾಲು ಗುತ್ತಿಗೆ ಪತ್ರದ ಯದರಿ 1ನೆ ಸಾಲಿಗೆ $10\frac{1}{2}$ ಖಂಡಿ ಭತ್ತ, ಬಾಕಿ 4 ಸಾಲಿಗೆ 11 ಖಂಡಿ ಕೊಡುವದಾಗಿ
84	ಡಿಟೋ ..	I	364 1901—1902	5 9 1901	6 9 1901	ಗಂಜಾಂದಲ್ಲಿರುವ ದೇವಾಂಗದ ಶಂಕರನ ಮಗಳು ಲಕ್ಷ್ಮಿದೇವಮ್ಮ ಈಕೆ ತಮ್ಮ ದೊಡ್ಡಣ್ಣನ ಮಗ ಮಲ್ಲೈಯ್ಯ ಡಿಟೋ ಶಂಕರಲಿಂಗಪ್ಪನ ಹೆಂಡತಿ ಕೆಂಚಮ್ಮ	ಗಂಜಾಂದಲ್ಲಿರುವ ಗಂಗಡಿಕಾರ ಕ್ರಿಸ್ತುಮತದ ಅಂತಪ್ಪನ ಮಗ ಚಿನ್ನಪ್ಪ	50 ರೂಪಾಯಿನ ಆಧಾರ ಪತ್ರ
85	ಡಿಟೋ ...	I	447 1901—1902	30 7 1901	28 9 1901	ಮೈಸೂರು ದೇವರಾಜ ಮೊಹಲಾ ತೋಟದಹಟ್ಟಿಯಲ್ಲಿರುವ ಕ್ಯಾತೈಯ್ಯನ ಮಗ ಹನುಮಂತೈಯ್ಯ	ಮೈಸೂರು ದೇವರಾಜ ಮೊಹಲಾ ತೋಟದಹಟ್ಟಿಯಲ್ಲಿರುವ ಕರಿಮುದ್ದಯ್ಯನ ಹೆಂಡತಿ ದೊಡ್ಡಕ್ಕ	150 ರೂಪಾಯಿನ ಕ್ರಯ ಪತ್ರ

ಬಿ. ಕೆ. ವೆಂಕಟವರದೈಯ್ಯಂಗಾರ್, ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟು

ಸ್ಥಿರಸ್ವತ್ತಿನ ಹರಾಜಿನ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 18ನೇ ಜನವರಿ 1904.

1. ಕಂದಾಯದ ಬಾಕೀದಾರರಾದ ಬಾಯಂಗುತ್ತಾ ಚಿಮ್ಮತ್ತಿ ಗ್ರಾಮದ ಅಂಕ್ಕೈಯ್ಯ ವಗೈರೆರಿಂದ ಬರಬೇಕಾದ ಜವಿರ್ಣ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ಹುಣಸೂರು ತಾಲ್ಲೂಕು ಕಛೇರಿಯಲ್ಲಿ 1904ನೇ ಇಸವಿ ಮಾರ್ಚಿ 22ನೇ ತಾರೀಖಿನಲ್ಲಿ ಈ ತಾಲ್ಲೂಕು ಅಸಿಸ್ಟೆಂಟ್ ಅ|| ಕಮಿಷನರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಾಸ್ತಿದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡದೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 183—11—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡ ಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಆವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಏಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಿಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನ್‌ಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನ್‌ಮೆಂಟಿನವರಿಗೆ ಅಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ಸ್ವತ್ತಿನ ತಪ್ಸೀಲ್:

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ(ರ) ಹೆಸರು.	[illegible]	ಕಟ್ಟಡಗಳು: ಅಂದಾಜು ಕಿಮ್ಮತ್ತು.	ಜಮೀನು: ನಂಬರ ...	ಜಮೀನು: [illegible]	ಜಮೀನು: [illegible]	ಜಮೀನು: ಕಿಮ್ಮತ್ತು.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.
					ರೂ. ಆ. ಪೈ.	ಬಾಯಂಗುತ್ತಾ ಗ್ರಾಮ ಪೂರ್ತಾ				ರೂ. ಆ. ಪೈ.
ಹುಣಸೂರು	ಹಗ್ಗ[illegible]	ಬಾಯಂಗುತ್ತಾ	ಅಂಕ್ಕೈಯ್ಯ ವಗೈರೆ	...	...	ಚಾಲ್ತಿ ಸಾಲ್ ಕಂದಾಯ ಮತ್ತು ಪಾವತಿ ತಾರೀಖು ವರಿಗಿನ ಬಡ್ಡಿ				171—0—0 ಗುತ್ತಾ ಮೊಬಲಗು 10—11—0 ಲೋಕಲ್ ಸೆಸ್ 2—0—0 ನೋಟಿಸ್ ಫೀ 183—11—0

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ತಾರೀಖು 20ನೆ ಜನವರಿ 1904ನೆ ಇಸವಿ

ಮಾಲೂರು ತಾಲ್ಲೂಕು ನರಸಾಪುರದ ಹೋಬಳೀಗೆ ಸೇರಿದ ಮಾರ್ಜನ್ನಲ್ಲಿ ನಮೂದಾಗಿ ಇರತಕ್ಕ ಇನಾಂ ಗ್ರಾಮಗಳು, ಸರಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ ತಾಲ್ಲೂಕು ಅಮಲ್ದಾರ್ರ ಕಚೇರಿಯಲ್ಲಿ 1904ನೆ ಇಸವಿ ಮಾರ್ಚಿ ಮಾಹೆ 10ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

1. ಜೋಡಿ ಬೆಳ್ಳೂರು ಗ್ರಾಮ
2. ಖಾಯಂಗುತ್ತಾ ಪ್ಯರಸಂದ್ರ ಗ್ರಾಮ

(ಹೆಚ್ಚು ತಪಶೀಲ್ ಬಗ್ಯೆ 1904ನೆ ಫೆಬ್ರವರಿ 4ನೆ ಮಾರ್ಚ್ಯಂ 5ನೆ ನಂಬರ ಮೈಸೂರ ಗೆಜೆಟ್ಟಿನ 2ನೆ ಭಾಗದ 65—64ನೆ ನಂಬರ ಪೇಜು ನೋಡತಕ್ಕದ್ದು.)

ತಾರೀಖು 29ನೆ ಜನವರಿ 1904ನೆ ಇಸವಿ.

ಮಾಲೂರು ತಾಲ್ಲೂಕು ನರಸಾಪುರದ ಹೋಬಳಿಗೆ ಸೇರಿದ ಮಾರ್ಜನ್ನಲ್ಲಿ ನಮೂದುಮಾಡಿ ಇರತಕ್ಕ ಜೋಡಿ ಗ್ರಾಮಗಳು ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕಿಗೋಸ್ಕರವಾಗಿ ಆ ತಾಲೂಕು ಅಮಲ್ದಾರ್ರ ಕಛೇರಿಯಲ್ಲಿ 1904ನೆ ಇಸವಿ ಮಾರ್ಚಿ ಮಹೆ 24ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಜೋಡಿ ಚಿನ್ನಪ್ಪಗಾನ ಪಲ್ಲಿ.
ಜೋಡಿ ಮುತಕದಹಳ್ಳಿ.

(ಹೆಚ್ಚು ತಪಶೀಲ್ ಬಗ್ಯೆ 1904ನೆ ಫೆಬ್ರವರಿ 11ನೆ ಮಾರ್ಚ್ಯಂ 6ನೆ ನಂಬರ ಮೈಸೂರ ಗೆಜೆಟ್ಟಿನ 2ನೆ ಭಾಗದ 112—111ನೆ ನಂಬರ ಪೇಜು ನೋಡತಕ್ಕದ್ದು.)

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನರ.

ಕಡೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 30ನೆ ಜನವರಿ 1904, ಮೊಕ್ಕಾಂ ಚಿಕ್ಕಮಗಳೂರು.

ಮೈಸೂರು ಸರ್ಕಾರದವರ ನಂಬರು 9007—ಲೆಜಿಸ. 56, ತಾರೀಖು 11ನೆ ಡಿಸೆಂಬರ 1901ರ ಇಸ್ತಿಹಾರಿನ ಪ್ಯಾರಾ 5ಕ್ಕೆ ಅನುಗುಣವಾಗಿ ಕಡೂರು ಡಿಸ್ಟ್ರಿಕ್ಟಿನಲ್ಲಿ ಹರಿಯುವ ತುಂಗಾ ಮತ್ತು ಭದ್ರಾ ನದಿಗಳಲ್ಲಿ ಚಾಲ್ತಿ ಸಾಲ್ ಮೇ ಮಾಹೆ 1ನೆ ತಾರೀಖು ಲಾಗಾಯಿತು ನವಂಬರು ಮಾಹೆ ಆಖೈರ ವರೆಗೂ ಯಾರೂ ಮೀನು ಹಿಡಿಯಕೂಡದೆಂಬದಾಗಿ ಇದರಿಂದ ವಿಧಿಸಿರುತ್ತೆ ತಿಳಿಯುವದು.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ.

ಹಾಸನ ಡಿವಿಜನ್.

ಪ್ರ ಸಿ ದ್ಧ ಪ ತ್ರಿ ಕೆ.

ತಾರೀಖು 8ನೆ ಮಾಹೆ ಫೆಬ್ರವರಿ 1904.

I. ಹಾಸನ ತಾಲ್ಲೂಕು ರಿಜಸ್ಟರ 838ನೆ ನಂಬರು ಗ್ರಾಮದ ತಲಾವ್ ರೆಸ್ಟೋರ್ ಮಾಡತಕ್ಕ ಕಾಂಗಾರಿ ಉದ್ದಿಶ್ಯ 1904ನೆ ಇಸವಿ ಮಾರ್ಚಿ ಮಾಹೆ 8ನೆ ತಾರೀಖು ವರಿವಿಗೂ ದರಖಾಸ್ತುಗಳು ಹಾಸನ ಡಿವಿಜನ್ ಎಗ್ಸಿಕ್ಯೂಟಿವ್ ಇಂಜಿನಿಯರ ಸಾಹೇಬರವರಿಂದ ತೆಗದುಕೊಳ್ಳಲ್ಪಡುತ್ತವೆ. ಈ ಕೆಳಗೆ ಕಂಡ ಅಂದಾಜಿನಲ್ಲಿನ ಐಟಂಗಳ ಮೊತ್ತವನ್ನು ಕಾಣಿಸಲ್ಪಟ್ಟಿರುತ್ತದೆ. ಇದು ನಿಷ್ಕರ್ಷೆಯಾದದ್ದಾಗಿರುವದಿಲ್ಲಾ. ಕಾಂಗಾರಿಯು 1905ನೆ ಇಸವಿ ಏಪ್ರಲ್ ತಿಂಗಳು ಆಖೈರೊಳಗಾಗಿ ಪೂರೈಸತಕ್ಕದ್ದು.

II. ಪ್ಲಾನ್ ತಪಶೀಲ್ ಅಂದಾಜು ಮತ್ತು ಷರತ್ತು ವಗ್ಯೆರೆಗಳು ಹಾಸನ ಡಿವಿಜನ್ ಎಗ್ಸಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫೀಸಿನಲ್ಲಿ ಎಲ್ಲಾ ಕಛೇರಿಯ ದಿವಸಗಳ ಪ್ರಾತಃಕಾಲ 11 ಘಂಟೆ ಲಾಗಾಯಿತು ಸಾಯಂಕಾಲ 5 ಘಂಟೆ ವರಿವಿಗೆ ನೋಡಲು ಅವಕಾಶ ಕೊಡಲ್ಪಡುತ್ತೆ.

III. ದರಖಾಸ್ತುಗಳು ಅಚ್ಚು ಹಾಕಿದ ಫಾರಂನಲ್ಲೇ ಬರೆಯಬೇಕು. ಈ ಫಾರಂಗಳು ಎಗ್ಸಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫೀಸಿನಲ್ಲಿ ದೊರಿಯುತ್ತವೆ. ದರಖಾಸ್ತುಗಳಿಗೆ ಈ ಕೆಳಗೆ ಕಾಣಿಸಲ್ಪಟ್ಟಿರುವ ನಮೂನೆಯ ಪ್ರಕಾರ ಒಂದು ಸ್ಟೇಟಿಮೆಂಟ ಲಗತ್ತು ಮಾಡಿರಬೇಕು. ಅದರಲ್ಲಿ ಕಂಟ್ರಾಕ್ಟುದಾರನು ಯಾವ ರೇಟ ಪ್ರಕಾರ ಪ್ರತಿ ಐಟಂಗಳ ಕೆಲಸವನ್ನು ಮಾಡಿಸಬಲ್ಲನೋ ಆ ರೇಟನ್ನು ಅಥವಾ ಆ ದರವನ್ನು ನಮೂದು ಮಾಡಬೇಕು.

ಫಾರಂ.

ಕೆಲಸದ ವಿವರ.	ಪ್ರತಿಯೊಂದು.	ಮೊತ್ತ.	ಕಂಟ್ರಾಕ್ಟುದಾರ ಕೆಲಸಮಾಡುವದಕ್ಕೆ ಒಪ್ಪುವ ದರ

IV. ಪ್ರತಿ ಒಂದು ದರಖಾಸ್ತಿನಸಂಗಡಲು 150 ರೂಪಾಯಿಗಳ ಕರೆನ್ಸಿ ನೋಟುಗಳಾಗಲಿ, ಗವರ್ನಮೆಂಟ್ ಪ್ರಾಂಸರಿ ಆಗಲಿ ಅಥವಾ ನಗದಾಗಲಿ ಡಿಪಾಜಿಟ ಹಣವನ್ನು ಠೇವಣಾತಿಯಾಗಿ ಹಾಜರ್ಮಾಡಬೇಕು, ಮತ್ತು ಲಕೋಟೆ ಮೇಲೆ "ಗ್ರಾಮದ ತಲಾವ್ ರೆಸ್ಟೋರ್ ಮಾಡತಕ್ಕ ಕಾಂಗಾರಿ ಬಗ್ಯೆ ದರಖಾಸ್ತು" ಎಂಬದಾಗಿ ಬರಿಯಬೇಕು, ತಪ್ಪಿದಲ್ಲಿ ಅಂಥಾ ದರಖಾಸ್ತುಗಳನ್ನ ತಿರಸ್ಕರಿಸಲಾದೀತ.

V. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡತಕ್ಕದ್ದಕ್ಕೆ ಪಶ್ಚಿಮ ಸರ್ಕಲ್ ಹಾ॥ ಸೂಪರಿಂಟೆಂಡಿಂಗ್ ಇಂಜನಿಯರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ. ಹಾಗೆ ಮಂಜೂರ್ಮಾಡತಕ್ಕದ್ದರಲ್ಲಿ ಕೀಳ್ಪಟ್ಟ ದರಖಾಸ್ತನ್ನೇ ಆಗಲಿ ಅಥವಾ ಇನ್ನ್ಯಾವ ದರಖಾಸ್ತನ್ನೇ ಆಗಲಿ ವಪ್ಪಿಕೊಳ್ಳಬೇಕೆಂಬ ನಿರ್ಬಂಧವಿರುವದಿಲ್ಲ ಅಲ್ಲದೆ ತಿರಸ್ಕರಿಸಿದ ದರಖಾಸ್ತುಗಳಿಗೆ ಕಾರಣಗಳನ್ನು ಕೊಡುವದಿಲ್ಲಾ.

VI. ಯಾವ ದರಖಾಸ್ತನ್ನೇ ಆಗಲಿ ಮಂಜೂರ್ಮಾಡಿದ 8 ಎಂಟು ದಿನಗಳ ವಳಗಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಕಂಟ್ರ್ಯಾಕ್ಟು ಬಾಂಡ್ ಎಂಬ ಕರಾರು ಪತ್ರವನ್ನ ಬರೆದುಕೊಡಬೇಕು. ತಪ್ಪಿದಲ್ಲಿ ಅವನ ದರಖಾಸ್ತು ರದ್ದು ಮಾಡಲ್ಪಟ್ಟು ಠೇವಣಾತಿ ಹಣವನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುತ್ತೆ.

VII. ಮಂಜೂರಾದ ದರಖಾಸ್ತುದಾರನ ಹೆಸರು ಹಾಸನ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ ಆಫೀಸ್ ಮುಂಭಾಗದಲ್ಲಿ ನೋಟೀಸ್ ಬೋರ್ಡ್ ಮೇಲೆ ಬರದು ಚಿಕಟಾಯಿಸಲ್ಪಡುತ್ತೆ. ಅಂಗೀಕರಿಸಿದ ಅಥವಾ ತಿರಸ್ಕರಿಸಿದ ದರಖಾಸ್ತುದಾರರುಗಳ ವಿಷಯದಲ್ಲಿ ಯಾವದೊಂದು ಜವಾಬ್ ದೊರಿಯಲಾರದು.

VIII. ಯಾವದಾದರು ದರಖಾಸ್ತು ಮಂಜೂರಾದನಂತರ ತಿರಸ್ಕರಿಸಲ್ಪಟ್ಟ ದರಖಾಸ್ತುದಾರರ ಹಣವನ್ನ ಅವರವರಿಗೆ ವಾಪಸ್ ಮಾಡಲ್ಪಡುತ್ತೆ.

ತಾರೀಖು 8 ಫೆಬ್ರುವರಿ 1904.

ಹಾಸನ ತಾಲ್ಲೂಕು ರಿಜಿಸ್ಟರ್ 838ನೆ ನಂಬರು ಗ್ರಾಮದ ತಲಾವ್ ರೆಸ್ಟೋರ್ ಮಾಡತಕ್ಕ ಕಾಂಗಾರಿಯ ಅಂದಾಜು ಗೋಷ್ವಾರೆ :—

ಕೆಲಸದ ವಿವರ.	ಪ್ರತಿಯೊಂದಕ್ಕೆ.	ಮೊತ್ತ.
ಏರಿ.		
ಮಟ್ಟಿ ಕೆಲಸ, ನೀರುಹಾಕಿ ಧಮ್ಮಾಸ್ ಮಾಡತಕ್ಕದ್ದು ಶೇರಿ ...	ಸಲೆ ಗಜ	22,233
ಹೊಸ ಕಾಡುಕಲ್ಲು ಕೆಲಸ ...	ಡಿಟೋ	2,121
ಹಳೇ ಕಾಡುಕಲ್ಲು ಕೆಲಸ ...	ಡಿಟೋ	982
ಗ್ರಾವಲ್ ಬ್ಯಾಕಿಂಗ್ ಯಾನೆ ರಿವೆಟ್‌ಮೆಂಟಿನ ಹಿಂದೆ ಹಾಕತಕ್ಕ ಗ್ರಾವಲ್ ...	ಡಿಟೋ	993
ಹಪ್ಪುಗಟ್ಟುವದು ...	ಚದ್ರ ಗಜ	20,942
ಗ್ರೇಡು ಕಲ್ಲುಗಳು ತಳಭಪಡಿ ಸಮೇತ ...	ನಂ.	51
ಏಸ್ ಏಸ್ ಕಲ್ಲುಗಳು ...	ಡಿಟೋ	51
ಬೆಂಚು ಮಾರ್ಕರ್ ಕಲ್ಲುಗಳು ...	ಡಿಟೋ	2
ಗೇಜು ಕಲ್ಲುಗಳು ...	ಡಿಟೋ	2
ಸಂವತ್ಸರ ಮತ್ತು ರಿಜಿಸ್ಟರ್ ನಂ. ಕಲ್ಲು ...	ಡಿಟೋ	1
ಏರಿಯನ್ನು ಎರಡು ಸ್ಥಳದಲ್ಲಿ ಅಗಲ ಮಾಡತಕ್ಕದ್ದು ...	ಒಟ್ಟು ಮೊಬಲಗು	
ಏರಿಯ ಜುಮ್ಲಾ ...		
ತೂಬುಗಳು.		
ಎಡಗಡೆ ತೂಬು — ಮಟ್ಟಿ ಕೆಲಸ ...	ಸಲೆ ಗಜ	13
ಸುಟ್ಟ ಇಟ್ಟಿಗೆಯಿಂದ ಸುರ್ಕಿ ಗಾರೆಕೆಲಸ ...	ಸಲೆ ಅಡಿ	397
ಸುಟ್ಟ ಕಲ್ಲುಭಪಡಿಗಳು ...	ಚದ್ರ ಅಡಿ	10
ಸುರ್ಕಿ ಗಾರೆಯಿಂದ ಗಿಲಾವ್ ...	ಚದ್ರ	2·00
ಜುಮ್ಲಾ ...		
ಬಲಗಡೆ ತೂಬು—ಮೇಲ್ಕಂಡ ಎಡಗಡೆ ತೂಬಿಗೆ ನಮೂದಿಸಿರುವ ತಪಶೀಲ್‌ನಂತೆ ...		
ತೂಬುಗಳ ಜುಮ್ಲಾ ...		
ಕೋಡಿ.		
ಮಟ್ಟಿ ಕೆಲಸ—ಟ್ರೇನಿಂಗ್ ಬ್ಯಾಂಕ್‌ಯಾನೆ ಏರೀಗೆ ...	ಸಲೆ ಗಜ	150
ಸುರ್ಕಿ ಗಾರೆಯಿಂದ ಕಾಡುಕಲ್ಲು ಕೆಲಸ ...	ಸಲೆ ಅಡಿ	1425
ಸುಟ್ಟ ಕಲ್ಲುಭಪಡಿಗಳು 9 ಅಂಗುಲ ಮಂದವುಳ್ಳದ್ದು ...	ಚದ್ರ ಅಡಿ	83
ಹೊಸ ಕಾಡುಕಲ್ಲು ಕೆಲಸ ...	ಸಲೆ ಗಜ	92
ಸುಟ್ಟ ಕಲ್ಲುಭಪಡಿ 4 ಮತ್ತು 6 ಅಂಗುಲದ ವರಿಗೆ ಮಂದವುಳ್ಳದ್ದು ...	ಚದ್ರ ಅಡಿ	397
ಹಳೇ ಕಾಡುಕಲ್ಲು ಕೆಲಸ ...	ಸಲೆ ಗಜ	94
ಸುರ್ಕಿ ಗಾರೆಯಿಂದ ಪಾಯಿಂಟಿಂಗ್ ...	ಚದ್ರ	10·22
ಹಾಲಿ ಇರತಕ್ಕ ಕೋಡೀಗೆ ಅವಶ್ಯಕವಾದ ಸ್ಥಳಗಳಲ್ಲಿ ರಿಪೇರಿ ಮಾಡತಕ್ಕದ್ದು ...	ಒಟ್ಟು ಮೊಬಲಗು	

ಕೆ. ನಂಜುಂಡೈಯ್ಯ,
ಫೋರ್ ಎಗ್ಜಿಕ್ಯೂಟಿವ್ ಇಂಜನಿಯರ್.

೨೮೮

ಚಿತ್ರದುರ್ಗ ಡಿವಿಜನ್.

ನೋಟಿಸ್.

ತಾರೀಖು 27ನೆ ಜನವರಿ 1904.

ಚಿತ್ರದುರ್ಗ ಡಿವಿಜನ್ ಎಗ್ಸಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫೀಸಿನಲ್ಲಿ ಟೈಮ್ಸ್ ವರ್ಕರ್ ವೆಂಕಟರಾವು ಎಂಬುವರಿಗೆ ಸೇಲಂ–ಬಳ್ಳಾರಿ ರೋಡ್ ರಿಪೇರಿ ಮಾಡಿದ್ದರ ಬಾಬತು ಪಾವತಿ ಆಗಬೇಕಾಗಿರುವ ರೂಪಾಯಿ 10—12—1ಪೈ ಬಾಕಿ ನಿಂತಿರುತ್ತೆ. ಈ ತಾರೀಖು ಲಾಗಾಯತು 3 ತಿಂಗಳೊಳಗಾಗಿ ಮೇಲ್ಕಂಡ ಟೈಮ್ಸ್ ವರ್ಕರ್ ಆಗಲಿ ಅಥವಾ ಅವರ ಸರಿಯಾದ ವಾರಸ್ದಾರರೆ ಆಗಲಿ ಚಿತ್ರದುರ್ಗ ಡಿವಿಜನ್ ಎಗ್ಸಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ರೂಬರೂಬು ಹಾಜರಾಗಿ ಹಣಾ ತೆಗದುಕೊಳ್ಳತಕ್ಕದ್ದು ತಪ್ಪಿದಲ್ಲಿ ಮೊಬಲಗು ಸರಕಾರಕ್ಕೆ ಜಮಾ ಮಾಡಿಕೊಳ್ಳಲ್ಪಡುತ್ತೆ.

ವೈ. ಶ್ರೀನಿವಾಸರಾವ್,
ಎಗ್ಸಿಕ್ಯೂಟಿವ್ ಇಂಜನಿಯರ್.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ನೋಟಿಸ್.

ತಾರೀಖು 3ನೆ ಫೆಬ್ರುವರಿ 1904ನೆ ಇಸವಿ.

ಮೈಸೂರು ಗೌರ್ನಮೆಂಟ್ 30—11—1903ನೆ ತಾರೀಖು 2029—30—L. F. 161–92ನೆ ನಂಬರು ಪ್ರೊಸಿಡಿಂಗ್ಸಿನಲ್ಲಿ ಮಂಜೂರು ಮಾಡಿರುವ ಮೇರೆಗೆ ಮೈಸೂರು ಷಹರಿನಲ್ಲಿ ಮನೆಗಳ ಕಟ್ಟಡಗಳ ಮತ್ತು ಖಾಲಿ ಜಾಗಗಳಿಗೆ ಹಾಲಿ ದಾಖಲಾಗಿ ಇರತಕ್ಕ ಸಾಲೀಯಾನಾ ಬಾಡಿಗೆ ರಿವಾಜು ಅಳತೆ ಮತ್ತು ಕಂದಾಯವನ್ನು ಇಬ್ಬರು ಕಮಿಷನರುಗಳ ಸಹಾಯದೊಂದಿಗೆ ಮೈಸೂರು ಸಿಟಿ ಮ್ಯುನಿಸಿಪಲ್ ವೈಸ ಪ್ರೆಸಿಡೆಂಟರವರು ಇದರಡಿಯಲ್ಲಿ ಕಾಣಿಸಿರುವ ಮೊಹಲಾಗಳ ಪಕ್ಕದಲ್ಲಿ ನಮೂದಿಸಿರುವ ವಾರಗಳಲ್ಲಿ ರೀವಿಜನ್‌ಯಾನೆ ಪುನರ್ವಿಮರ್ಶೆ ಮಾಡಲು ಪ್ರಾರಂಭಿಸುತ್ತಾರಾದ್ದರಿಂದ ಮೈಸೂರು ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನ್ 73ನೆ ಸೆಕ್ಷನ್ ಅನುಸರಿಸಿ ಸಮಸ್ತರಿಗೂ ಈ ಮೂಲಕ ತಿಳಿಯಪಡಿಸಿದೆ.

1. ಮಂಡಿಮೊಹಲಾ 1904ನೆ ಮಾರ್ಚಿ 3ನೆ ಗುರುವಾರದ ಲಾಗಾಯಿತು ಈ ಮೊಹಲಾ ಪೂರ್ತಿಯಾಗುವ ವರಿಗೆ ಎಲ್ಲಾ ಗುರುವಾರಗಳಲ್ಲಿಯೂ
2. ನಜರುಬಾದುಮೊಹಲಾ 1904ನೆ ಮಾರ್ಚಿ 4ನೆ ಶುಕ್ರವಾರದ ಲಾಗಾಯಿತು ಈ ಮೊಹಲಾ ಪೂರ್ತಿಯಾಗುವ ವರಿಗೆ ಎಲ್ಲಾ ಶುಕ್ರವಾರಗಳಲ್ಲಿಯೂ.
3. ದೇವರಾಜಮೊಹಲಾ 1904ನೆ ಮಾರ್ಚಿ 5ನೆ ಶನಿವಾರದ ಲಾಗಾಯಿತು ಡಿಟೋ
4. ಕಿಲ್ಲೆ ಮೊಹಲಾ 1904ನೆ ಮಾರ್ಚಿ 6ನೆ ಭಾನುವಾರದ ಲಾಗಾಯಿತು ಡಿಟೋ
5. ಲಷ್ಕರಮೊಹಲಾ 1904ನೆ ಮಾರ್ಚಿ 8ನೆ ಮಂಗಳವಾರದ ಲಾಗಾಯಿತು ಡಿಟೋ
6. ಕೃಷ್ಣರಾಜಮೊಹಲಾ }
7. ಚಾಮರಾಜಮೊಹಲಾ } 1904ನೆ ಮಾರ್ಚಿ 9ನೆ ಬುಧವಾರದ ಲಾಗಾಯಿತು ಈ ಮೊಹಲಾ ಪೂರ್ತಿಯಾಗುವ ವರಿಗೆ ಎಲ್ಲಾ ಶುಕ್ರವಾರಗಳಲ್ಲಿಯೂ.

2. ಮೊಹತರ್ಫಾ ಕಂದಾಯುಗಳು ಅಂದರೆ-ಅಂಗಡಿ ಗಾಣಾ ಮತ್ತು ಗಾಡಿಗಳಮೇಲಿನ ಕಂದಾಯುವನ್ನು ಲೇಟ್ ಚೀಫ್ ಕಮಿಷನರ್ ಸಾಹೇಬರವರ 28—9—1860ನೆ ತಾರೀಖು 265ನೆ ನಂಬರು ಅಫಿಷಿಯಲ್ ಮಿಮೋರಾಂಡಂನಲ್ಲಿ ನಮೂದಿರುವ ತಪಶೀಲು ಮೇರೆಗೆ ರಿವಿಜನ್‌ಯಾನೆ ಪುನರ್ವಿಮರ್ಶೆ ಮಾಡಲ್ಪಡುವದು.

ಕೆ. ಶ್ರೀನಿವಾಸರಾವ್,
ವೈಸ ಪ್ರೆಸಿಡೆಂಟ್.

ಮೈಸೂರ ಗೆಜೆಟ್.

ನಂ. 39]　ಸರ್ಕಾರದಿಂದ ಪ್ರಾಯಿಷ್ ಆದ್ದು.　[ನಂ. 7.

ಬೆಂಗಳೂರು, ಗುರುವಾರ, ಫೆಬ್ರವರಿ ತಾ॥ 18, ಸನ್ 1904.

IIIನ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವು ಇಲಾಖೆ.

ಇಸ್ತಿಹಾರ್ನಾಮಾ.

ತಾರೀಖು 21ನೇ ಡಿಸೆಂಬರ್ 1903ನೇ ವರುಷ.

ನಂಬರ್ 77—ಲೆಜಿಸ್. 23-03, ಮೈಸೂರು ಗವರ್ನಮೆಂಟಿನವರ ಆಲೋಚನೆಯಲ್ಲಿರುವ ಇದರಡಿ ಕಂಡ ಮೈಸೂರು ಸೀಮೆಯ ಹುಚ್ಚುತನ ಮತ್ತು ಹುಚ್ಚರ ಆಸ್ತಿಗಳು—ಇವುಗಳನ್ನು ಕುರಿತ ನಿಬಂಧನೆಯನ್ನು ಒಂದಾಗಿ ಮಾಡಿ ತಿದ್ದುಪಡಿಸುವ ಬಗ್ಗೆ ಉಂಟಾದ ಮಸ್ವಿದಾ ರೆಗ್ಯುಲೇಷನನ್ನು ಉದ್ದೇಶಗಳು ಮತ್ತು ಕಾರಣಗಳು ಇವುಗಳೊಡನೆ, ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧ ಪಡಿಸಿರುತ್ತೆ.

ಕೆ. ಎಸ್. ಚಂದ್ರಶೇಖರ ಅಯ್ಯರ್,
ಛೀಫ್ ಮೈಸೂರು ಗವರ್ನಮೆಂಟಿನ ಜನರಲ್ ವ ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

190　ನೇ ವರುಷದ　　ನಂಬರಿನ ರೆಗ್ಯುಲೇಷನು.

(ಮಸ್ವಿದಾ)

ಮೈಸೂರು ಸೀಮೆಯಲ್ಲಿ ಹುಚ್ಚುತನ ಮತ್ತು ಹುಚ್ಚರ ಆಸ್ತಿಗಳು—ಇವುಗಳನ್ನು ಕುರಿತ ನಿಬಂಧನೆಯನ್ನು ಒಂದಾಗಿ ಮಾಡಿ ತಿದ್ದುಪಡಿಸುವ ಬಗ್ಗೆ ಉಂಟಾದ ರೆಗ್ಯುಲೇಷನು.

ಪೀಠಿಕೆ.　ಮೈಸೂರು ಸೀಮೆಯಲ್ಲಿ ಹುಚ್ಚುತನ ಮತ್ತು ಹುಚ್ಚರ ಆಸ್ತಿಗಳು—ಇವುಗಳನ್ನು ಕುರಿತ ನಿಬಂಧನೆಯನ್ನು ಒಂದಾಗಿ ಮಾಡಿ ತಿದ್ದುಪಡಿಸುವದು ಯುಕ್ತವಾಗಿರುವದರಿಂದ, ಘನವನ್ನು ಹೊಂದಿದ ಶ್ರೀಮನ್ ಮಹಾರಾಜಾ ಸಾಹೇಬರು ನಿರ್ಣೈಸುವದೇನಂದರೆ:—

Iನೇ ಅಧ್ಯಾಯ—ಅವತರಣಿಕೆ.

ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.　1. (1) ಈ ರೆಗ್ಯುಲೇಷನು, "190　ನೇ ವರುಷದ ಮೈಸೂರು ಲೂನಸಿ ರೆಗ್ಯುಲೇಷನ್" ಎಂದು ಕರಿಯಲ್ಪಡಬಹುದು.

(2) ಇದು ಮೈಸೂರು ಸೀಮೆಗೆಲ್ಲಾ ವ್ಯಾಪಿಸತಕ್ಕದ್ದು; ಮತ್ತು

(3) ಇದು 190　ನೇ ವರುಷದ　　ಮೊದಲನೆ ತಾರೀಖಿನಲ್ಲಿ ಜಾರಿಯಲ್ಲಿ ಬರತಕ್ಕದ್ದು.

ರದ್ದಿಯಾತಿ.

2. 1872ನೇ ವರುಷದ ಏಪ್ರಿಲ್ 25ನೇ ತಾರೀಖು 75-J. ನಂಬರಿನ ಗವರ್ನ್‌ಮೆಂಟ್ ಆಫ್ ಇಂಡಿಯ ಫಾರ್ ಡಿಪಾರ್ಟ್‌ಮೆಂಟ್ ಇಸ್ತಿಹಾರಿನೊಡನೆ ಪ್ರಕಟಿಸಲ್ಪಟ್ಟು, "ಮೈಸೂರು ಸೀಮೆಯಲ್ಲಿರುವ ಅಪ್ರಾಯಸ್ಥರು, ಜಡರು ಮತ್ತು ಇತರ ಅನರ್ಹರು — ಇವರ ಕಾವಲಿ ಮತ್ತು ಸಂರಕ್ಷಣೆ ಬಗ್ಗೆ ಅದ ನಿಯಮಗಳ ಯಾವ ಭಾಗವು, 190 ನೇ ವರುಷದ ಗಾರ್ಡಿಯನ್ಸ್ ಅಂಡ್ ವಾರ್ಡ್ಸ್ ರೆಗ್ಯುಲೇಷನಿನಿಂದ ರದ್ದು ಮಾಡಲ್ಪಡದೆ ಇದೆಯೋ ಆ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ಅರ್ಥ ವಿವರಣೆಗಳು.

3. ಈ ರೆಗ್ಯುಲೇಷನಿನಲ್ಲಿ ಪ್ರಮೇಯದಿಂದಾಗಲಿ, ಸಂದರ್ಭದಿಂದಾಗಲಿ, ವಿರೋಧವಾದ್ದೇನಾದರು ಇದ್ದರೇನೇ ಅಲ್ಲದೆ—

"ಹುಚ್ಚ"

(1) "ಹುಚ್ಚ" ಅಂದರೆ ದುರ್ಬಲ ಮನಸ್ಕನಾಗಿಯೂ ತನ್ನ ಕಾರ್ಯಗಳನ್ನು ನಿರ್ವಹಿಸಲು ಅಶಕ್ತನಾಗಿಯೂ ಇರುವನೆಂದು ನಿಬಂಧನೆಗೊಳಪಟ್ಟ ಕ್ರಮವಾದ ರೀತಿಯಲ್ಲಿ ನಿರ್ಣಯಿಸಲ್ಪಟ್ಟ ಮನುಷ್ಯನೆಂಬರ್ಥ.

"ಡಿಸ್ಟ್ರಿಕ್ಟ್ ಕೋರ್ಟ್"

(2) "ಡಿಸ್ಟ್ರಿಕ್ಟ್ ಕೋರ್ಟು" ಅಂದರೆ ಒಂದು ಡಿಸ್ಟ್ರಿಕ್ಟಿನಲ್ಲಿ ಸಿವಿಲ್ ಮೂಲಾಧಿಕಾರವನ್ನುಳ್ಳ ಮುಖ್ಯ ಕೋರ್ಟೆಂದು ಅರ್ಥ.

IIನೇ ಅಧ್ಯಾಯ—ಹುಚ್ಚುತನದ ವಿಷಯದಲ್ಲಿ ವಿಚಾರಣೆ.

ಆಸ್ತಿವಂತನಾದ ಮನುಷ್ಯನು ಹುಚ್ಚನೆಂತ ಎಣಿಸಲ್ಪಟ್ಟಲ್ಲಿ ಡಿಸ್ಟ್ರಿಕ್ಟು ಕೋರ್ಟಿನವರು ಅರ್ಜಿ ಬಂದಮೇಲೆ ವಿಚಾರಿಸಬಹುದು.

4. ಒಂದು ಡಿಸ್ಟ್ರಿಕ್ಟ್ ಕೋರ್ಟಿನ ಅಧಿಕಾರದ ಸರಹದ್ದುಗಳ ಒಳಗೆ ವಾಸಮಾಡುವ ಆಸ್ತಿವಂತನಾದ ಯಾವ ಮನುಷ್ಯನಾದರೂ ಹುಚ್ಚನಾಗಿ ಇದ್ದಾನೆಂತ ಹೇಳೋಣಾದ್ದಲ್ಲಿ ಆ ಕೋರ್ಟಿನವರು, ಈ ಕೆಳಗೆ ನಮೂದಿರುವಂಥಾ ಅರ್ಜಿ ಬಂದಮೇಲೆ, ಅಂಥಾ ಮನುಷ್ಯನು ಚಿತ್ತಸ್ವಾಸ್ಥ್ಯ ಉಂಟಾದವನೊ ಅಥವಾ ಇಲ್ಲದವನೊ ಎಂಬುವದನ್ನು ತನ್ನ ಕೆಲಸಗಳನ್ನು ನಿರ್ವಹಿಸಿಕೊಳ್ಳುವದಕ್ಕೆ ಸಮರ್ಥನೊ ಅಲ್ಲವೊ ಎಂಬುವದನ್ನು ಸಹ ನಿಶ್ಚಯಿಸತಕ್ಕ ಬಗ್ಗೆ ವಿಚಾರಣೆ ಮಾಡಬಹುದು.

ಅರ್ಜಿ ಕೊಡತಕ್ಕವರು.

5. ಅಂಥಾ ವಿಚಾರಣೆ ಮಾಡುವ ಉದ್ದೇಶ್ಯ ಅರ್ಜಿಯನ್ನು, ಹುಚ್ಚನೆಂತ ಹೇಳಲಾದಂಥಾವನ ನೆಂಟನಾದರೂ, ಗವರ್ನಮೆಂಟು ಅಡ್ವಕೇಟಾದರೂ, ಅಥವಾ ಪಬ್ಲಿಕ್ ಪ್ರಾಸಿಕ್ಯೂಟರಾದರೂ, ಅಥವಾ ಹುಚ್ಚನೆಂಬದಾಗಿ ಹೇಳಲಾದವನ ಆಸ್ತಿ ಪೂರಾ ಯಾ ಕೆಲವು ಮಟ್ಟಿಗೆ ಭೂರೂಪವಾಗಿಯಾಗಲಿ ಭೂಮಿಯಲ್ಲಿಯ ಹಕ್ಕು ರೂಪವಾಗಿಯಾಗಲಿ ಇದ್ದಲ್ಲಿ, ಅದು ಇರುವ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಾದರೂ ಕೊಡಬಹುದು.

ಹುಚ್ಚನಿಗೆ ವಿಚಾರಣೆ ಕುರಿತು ನೋಟೀಸು ಕೊಡಬೇಕು.

6. (1) ಸದರೀ ಪ್ರಕಾರ ವಿಚಾರಣೆ ಮಾಡಲಿಕ್ಕೆ ಡಿಸ್ಟ್ರಿಕ್ಟು ಕೋರ್ಟಿನವರು ಉದ್ಯುಕ್ತರಾದಾಗ, ಅವರು ವಿಚಾರಣೆ ನಡೆಯಿಸುವದಾಗಿರುವ ಕಾಲವನ್ನು ಸ್ಥಳವನ್ನು ಕುರಿತು ಒಂದು ನೋಟೀಸನ್ನು ಹುಚ್ಚನೆಂತ ಹೇಳಲಾದವನಿಗೆ ಸಾದರು ಮಾಡಿಸತಕ್ಕದ್ದು.

ನೋಟೀಸು ಸಾದರು ಮಾಡೋಣ.

(2) ಸದರೀ ಹುಚ್ಚನಿಗೆ ನೋಟೀಸನ್ನು ಖುದ್ದಾಗಿ ಸಾದರು ಮಾಡೋಣ ವೃಥಾವೆಂತ ಅವನ ಸ್ಥಿತಿಯಿಂದ ಕಾಣುವದರೆ, ಡಿಸ್ಟ್ರಿಕ್ಟು ಕೋರ್ಟಿನವರು ತಮಗೆ ಯುಕ್ತವಾಗಿ ತೋರುವ ಇತರ ರೀತಿಯಲ್ಲಿ ಅವನಿಗೆ ನೋಟೀಸನ್ನು ಸಾದರು ಮಾಡಿಸಬಹುದು.

(3) ಡಿಸ್ಟ್ರಿಕ್ಟು ಕೋರ್ಟಿನವರು ಅಂಥಾ ನೋಟೀಸಿನ ಒಂದು ಪ್ರತಿಯನ್ನು ಸದರೀ ಹುಚ್ಚನೆಂತ ಹೇಳಲಾದವನ ಯಾವ ನೆಂಟನಿಗಾಗಲಿ ಕೂಡ ಸಾದರು ಮಾಡಿಸಬಹುದು.

ಹುಚ್ಚನ ಹಾಜರಿಯನ್ನಾಗಲಿ ವಿಚಾರಣೆಯನ್ನಾಗಲಿ ವಿಧಿಸುವ ಅಧಿಕಾರ.

7. (1) ಡಿಸ್ಟ್ರಿಕ್ಟು ಕೋರ್ಟಿನವರಿಂದಲಾದರೂ, ಅಥವಾ ಅಂಥಾ ಹುಚ್ಚನೆಂದು ಹೇಳಲಾದವನ ಮನೋಗುಣವನ್ನು ಮತ್ತು ಸ್ಥಿತಿಯನ್ನು ಕುರಿತು ಜಾಹಿರ್ ಮಾಡಹೇಳಿ ಕೋರ್ಟಿನವರು ಯಾರನ್ನು ಅಪೇಕ್ಷಿಸುತ್ತಾರೋ ಅಂಥಾ ಮನುಷ್ಯನಿಂದಲಾದರೂ ಖುದ್ದು ವಿಚಾರಣೆ ಮಾಡಲ್ಪಡುವ ನಿಮಿತ್ತ, ಕೋರ್ಟಿನವರು ಗೊತ್ತುಮಾಡುವಂಥಾ ಅನುಕೂಲವಾದ ಕಾಲದಲ್ಲೂ ಸ್ಥಳದಲ್ಲೂ ಹಾಜರಾಗಬೇಕಾಗಿ ಸದರೀ ಹುಚ್ಚನೆಂದು ಹೇಳಲಾದವನಿಗೆ ಸದರೀ ಕೋರ್ಟಿನವರು ವಿಧಿಸಬಹುದು. ಡಿಸ್ಟ್ರಿಕ್ಟು ಕೋರ್ಟಿನವರು, ಅದೇರೀತಿಯಲ್ಲಿ ಸದರೀ ಹುಚ್ಚನೆಂದು ಹೇಳಲಾದವನ ಖಾಸಾ ವಿಚಾರಣೆ ಮಾಡುವಂತೆ ಒಂದು ಹುಕುಂ, ಅದರಲ್ಲಿ ನಮೂದಿರುವ ಮನುಷ್ಯನಿಗೆ ಅಥವಾ ಮನುಷ್ಯರಿಗೆ ಮಾಡಿ, ಆ ಹುಚ್ಚನೆಂದು ಹೇಳಲಾದವನ ಬಳಿಗೆ ಹೋಗಿ ನೋಡಲಿಕ್ಕೆ ಅವರಿಗೆ ಅಧಿಕಾರಸಹ ಕೊಡಬಹುದು.

281

287

(2) ಸದರೀ ಹುಚ್ಚನೆಂದು ಹೇಳಲಾದ ಆಸಾಮಿಯು, ದೇಶಾಚಾರ ಮತ್ತು ಪದ್ಧತಿಗಳ ಪ್ರಕಾರ ಬಹಿರಂಗವಾಗಿ ಹಾಜರಾಗುವಂತೆ ಬಲಾತ್ಕಾರಿಸಲ್ಪಡಕೂಡದಂಥಾ ಹೆಂಗಸಾಗಿ ಇದ್ದರೆ, ಇತರ ಸಂಗತಿಗಳಲ್ಲಿ ಅಂಥಾ ಮನುಷ್ಯರನ್ನು ವಿಚಾರಣೆ ಮಾಡುವ ವಿಷಯದಲ್ಲಿ ಜಾರೀಲಿರುವ ನಿಬಂಧನೆಗಳ ಪ್ರಕಾರವೇ, (1) ನೇ ಉಪ ಪ್ರಕರಣದ ನಿಯಮಗಳಲ್ಲಿ ಕಂಡ ಸದರೀ ಹುಚ್ಚನೆಂದು ಹೇಳಲಾದ ಆಸಾಮಿಯ ಹಾಜರುಭಾಷ್ಪಿಯೂ ವಿಚಾರಣೆಯೂ ನಡಿಯತಕ್ಕದ್ದು.

ಅಸ್ಸೆಸ್ಸರುಗಳ ನೊಕರರಾತಿಯು.

8. ಡಿಸ್ಟ್ರಿಕ್ಟು ಕೋರ್ಟಿನವರು, ತಮಗೆ ಯುಕ್ತವಾಗಿ ತೋರಿದಲ್ಲಿ, ಮೇಲ್ಕಂಡ ವಿಚಾರಣೆಗಾಗಿ ತಮ್ಮ ಕೆಳಗೆ ಅಸ್ಸೆಸ್ಸರುಗಳಾಗಿ ಕೆಲಸ ನೋಡತಕ್ಕ ಬಗ್ಯೆ ಎರಡು ಅಥವಾ ಹೆಚ್ಚುಮಂದಿ ಜನರನ್ನು ನೊಕರರು ಮಾಡಬಹುದು.

ಕೋರ್ಟಿನವರ ಹುಕುಂ.

9. ಆ ವಿಚಾರಣೆಯು ಪೂರ್ತಿಯಾದ ಮೇಲೆ, ಡಿಸ್ಟ್ರಿಕ್ಟು ಕೋರ್ಟಿನವರು, ಸದರೀ ಹುಚ್ಚನೆಂದು ಹೇಳಲಾದವನು ಚಿತ್ತಸ್ವಾಸ್ಥ್ಯವಿಲ್ಲದವನೋ ಅಲ್ಲವೋ ಎಂಬ ಸಂಗತಿಯನ್ನು ನಿಶ್ಚಯಿಸತಕ್ಕದ್ದು, ಮತ್ತು ವಿಚಾರಣೆ ಬಾಬತು ಖರ್ಚುಗಳನ್ನು, ಯಾರ ಅರ್ಜಿಯ ಮೇಲೆ ವಿಚಾರಣೆ ನಡಿಯಿತೊ ಆ ಮನುಷ್ಯನಕಡೆಯಿಂದಲಾದರು, ಸದರೀ ಹುಚ್ಚನೆಂದು ಹೇಳಲಾದವನು ಚಿತ್ತಸ್ವಾಸ್ಥ್ಯವಿಲ್ಲದವನಾಗಿ ನಿಶ್ಚಯಿಸಲ್ಪಟ್ಟಲ್ಲಿ ಆ ಹುಚ್ಚನ ಸೊತ್ತಿನಿಂದಲಾದರೂ, ಅಥವಾ ಪ್ರಕಾರಾಂತರವಾಗಿ ಯಾದರೂ ಸಂದಾಯ ಪಡಿಸುವಂತೆ, ತಮ್ಮ ಯುಕ್ತಾನುಸಾರ ಹುಕುಂ ಮಾಡಬಹುದು.

ಕೆಳಗಿನ ಕೋರ್ಟಿಗೆ ಕಮ್ಮಿಷನೆಂಬ ಅಧಿಕಾರ ಕೊಡೋಣ.

10. (1) ಅರ್ಜಿ ಕೊಡೋಣಾದ ಡಿಸ್ಟ್ರಿಕ್ಟು ಕೋರ್ಟು ಇರುವ ಸ್ಥಳದಿಂದ ಅಯಿವತ್ತು ಮೈಯಿಲಿಗಿಂತ ಹೆಚ್ಚು ದೂರದಲ್ಲಿ ಸದರಿ ಹುಚ್ಚನೆಂದು ಹೇಳಲಾದವನು ವಾಸಸ್ಥನಾಗಿದ್ದರೆ, ಸದರೀ ಕೋರ್ಟಿನವರು ಆ ವಿಚಾರಣೆಯನ್ನು ನುಡಿಸ ಹೇಳಿ ತಮ್ಮ ಕೆಳಗಿನ ಯಾವ ಕೋರ್ಟಿನವರಿಗಾದರೂ ಕಮ್ಮಿಷನ್ ಎಂಬ ಅಧಿಕಾರ ಕೊಡಬಹುದು. ಆಮೇಲೆ ಸದರೀ ಕೆಳಗಿನ ಕೋರ್ಟಿನವರು ಇದರ ಬಳಿಗೆ ಮೇಲೆ ವಿಧಿಸಲಾದ ರೀತೀಲಿ ವಿಚಾರಣೆಯನ್ನು ನಡಿಸತಕ್ಕದ್ದು.

ಕೆಳಗಿನ ಕೋರ್ಟಿನವರ ರಿಪೋರ್ಟು.

(2) ವಿಚಾರಣೆ ಸಂಪೂರ್ಣವಾದ ಮೇಲೆ ಆ ವಿಷಯದಲ್ಲಿ ಕೆಳಗಿನ ಕೋರ್ಟಿನವರು ತಮ್ಮ ಪ್ರೊಸೀಡಿಂಗ್ಸ್ ಎಂಬ ನಡವಳಿಕೆಗಳನ್ನು, ಅಸ್ಸೆಸ್ಸರುಗಳು ನೊಕರರಾಗಿ ಇದ್ದಲ್ಲಿ ಅವರ ಅಭಿಪ್ರಾಯವನ್ನು, ತಮ್ಮ ಸ್ವಂತ ಅಭಿಪ್ರಾಯವನ್ನುಸಹ ಅರಿಕೆ ಮಾಡತಕ್ಕದ್ದು. ಅನಂತರ

ಡಿಸ್ಟ್ರಿಕ್ಟು ಕೋರ್ಟಿನ ಹುಕುಂ.

ಡಿಸ್ಟ್ರಿಕ್ಟು ಕೋರ್ಟಿನವರು ಆ ಸಂಗತಿಯಲ್ಲಿ ತಮಗೆ ಯುಕ್ತವಾಗಿ ತೋರುವಂಥಾ ಹುಕುಂ ಮಾಡತಕ್ಕದ್ದು.

ಹುಚ್ಚನ ಅಸ್ತಿಯ ಆಡಳಿತ.

11. (1) ಯಾವ ಮನುಷ್ಯನಾದರು ಚಿತ್ತ ಸ್ವಾಸ್ಥ್ಯವಿಲ್ಲದವನೆಂತಲೂ ತನ್ನ ಕೆಲಸಗಳ ಆಡಳಿತ ನಡಿಸಲಿಕ್ಕೆ ಅಸಮರ್ಥನೆಂತಲೂ ತೀರ್ಮಾನವಾದ ಸಂಗತಿಯಲ್ಲಿ, ಡಿಸ್ಟ್ರಿಕ್ಟು ಕೋರ್ಟಿನವರು, ಈ ಕೆಳಗೆ ಅನ್ಯಥಾ ನಿರ್ಣಯಿಸಲಾಗಿ ಇರುವಲ್ಲಿ ಹೊರ್ತು, ಸದರೀ ಅಸ್ತಿಗೆ ಮಾನೇಜರ್ ಎಂಬ ಒಬ್ಬ ಪಾರುಪತ್ಯಗಾರನನ್ನು ಏರ್ಪಡಿಸತಕ್ಕದ್ದು.

ಯಾರನ್ನು ಮಾನೇಜರಾಗಿ ನೊಕರರು ಮಾಡತಕ್ಕದ್ದು.

(2) ಸದರೀ ಹುಚ್ಚನ ಸಮೀಪವಾದ ನೆಂಟನಾದರೂ, ಇತರ ಯಾವ ತಕ್ಕ ಮನುಷ್ಯನಾದರೂ, ಮಾನೇಜರಾಗಿ ನೊಕರರು ಮಾಡಲ್ಪಡಬಹುದು.

ಡಿಸ್ಟ್ರಿಕ್ಟು ಕೋರ್ಟಿನವರು ಗಾರ್ಡಿಯನ್ ಎಂಬ ಸಂರಕ್ಷಕನನ್ನು ಏರ್ಪಡಿಸಬೇಕು.

12. ಹುಚ್ಚನ ಅಸ್ತಿಗೆ ಒಬ್ಬ ಮಾನೇಜರನ್ನು ಡಿಸ್ಟ್ರಿಕ್ಟು ಕೋರ್ಟಿನವರು ಏರ್ಪಡಿಸಿದಾಗ ಆ ಕೋರ್ಟಿನವರು ಆ ಹುಚ್ಚನ ಶರೀರ ಸಂರಕ್ಷಣಾರ್ಥ ಒಬ್ಬ ಸರಿಯಾದ ಮನುಷ್ಯನನ್ನು ಗಾರ್ಡಿಯನ್ ಎಂಬ ಸಂರಕ್ಷಕನಾಗಿ ನೊಕರರು ಮಾಡತಕ್ಕದ್ದು. ಆ ಮಾನೇಜರನ್ನೇ ಸಂರಕ್ಷಕನಾಗಿ ನೊಕರರು ಮಾಡಬಹುದು.

ಪರಂತು ಸದರೀ ಹುಚ್ಚನಿಗೆ ಸಂರಕ್ಷಕನಾಗಿ ಅವನ ವಾರಸುವಾರಸನ್ನು ಯೆಷ್ಟುಮಾತ್ರವೂ ನೇಮಕ ಮಾಡಕೂಡದು.

ಹುಚ್ಚನ ಅಸ್ತಿಯು ಭೂರೂಪವಾಗಿ ಇದ್ದಲ್ಲಿ ಡೆಪ್ಯುಟಿ ಕಮ್ಮಿಷನರು ಅದರ ಆಡಳಿತವನ್ನು ವಹಿಸುವಂತೆ ಕೋರ್ಟಿನವರು ಆಜ್ಞಾಪಿಸಬಹುದು.

13. (1) ಸದರೀ ಅಸ್ತಿಯು ಪೂರಾ ಆದರೂ ಎಷ್ಟುಮಾತ್ರವಾದರೂ ಭೂ ರೂಪವಾಗಿಯಾಗಲಿ ಭೂ ಬಾಧ್ಯತೇ ರೂಪವಾಗಿಯಾಗಲಿ ಇದ್ದಲ್ಲಿ, ಡಿಸ್ಟ್ರಿಕ್ಟು ಕೋರ್ಟಿನವರು, ಮಾನೇಜರನ್ನು ನೊಕರರು ಮಾಡುವದಕ್ಕೆ ಬದಲಾಗಿ, ಡೆಪ್ಯುಟಿ ಕಮ್ಮಿಷನರನ್ನು ಸದರೀ ಅಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳುವಂತೆ ವಿಧಿಸಬಹುದು. ಆಮೇಲೆ ಡೆಪ್ಯುಟಿ ಕಮ್ಮಿಷನರು ಸದರೀ ಅಸ್ತಿಗೆ ಒಬ್ಬ ಮಾನೇಜರನ್ನೂ, ಹುಚ್ಚನ ಶರೀರ ರಕ್ಷಣಾರ್ಥ ಒಬ್ಬ ಸಂರಕ್ಷಕನನ್ನೂ ಸಹ ಏರ್ಪಡಿಸತಕ್ಕದ್ದು.

ಡೆಪ್ಯುಟಿ ಕಮ್ಮಿಷನರಿನ ನಡವಳಿಕೆಗಳು ಮೇಲಾದ ರೆವಿನ್ಯೂ ಅಧಿಕಾರಸ್ಥರ ಅಧಿಕಾರಕ್ಕೆ ಒಳಗಾದ್ದು.

(2) ಈ ರೆಗ್ಯುಲೇಷನಿಗೆ ಅನುಗುಣವಾಗಿ ಅಸ್ತಿಗಳನ್ನು ಸ್ವಾಧೀನ ಪಡಿಸಿಕೊಂಡ ಡೆಪ್ಯುಟಿ ಕಮ್ಮಿಷನರಿನ ಸಮಸ್ತ ನಡವಳಿಕೆಗಳೂ ಮೇಲಾದ ರೆವಿನ್ಯೂ ಅಧಿಕಾರಸರ ಅಧಿಕಾರಕ್ಕೆ ಒಳಗಾಗಿರತಕ್ಕದ್ದು.

ಮಾನೇಜರುಗಳಿಗೂ ಗಾರ್ಡಿಯರ್ನಗಳಿಗೂ ಸಂಬಳ.

14. ಹುಚ್ಚನ ಆಸ್ತಿಗೆ ಮಾನೇಜರಾಗಿ ನೇಮಕರಾದ ಮನುಷ್ಯನಿಗಾದರೂ, ಹುಚ್ಚನ ಶರೀರ ಸಂರಕ್ಷಣಾರ್ಥ ಗಾರ್ಡಿಯರ್ನ ಎಂಬ ಸಂರಕ್ಷಕನಾಗಿ ನೇಮಕವಾದ ಮನುಷ್ಯನಿಗಾದರೂ, ಈ ನಂಬಿಕೆ ಕೆಲಸವನ್ನು ಸುಮ್ಮಗೆ ಮಾಡಲಿಕ್ಕೆ ಮನಸ್ಸಿಲ್ಲದೆ ಇದ್ದರೆ; ಸಂಗತ್ಯಾನುಸಾರವಾಗಿ ಡಿಸ್ಟ್ರಿಕ್ಟು ಕೋರ್ಟಿನವರಾದರೂ ಡೆಪ್ಯುಟಿ ಕಮಿಷನರಾದರೂ, ಸಂಗತಿಯ ವಿವ್ಯವಹಾರಪ್ರಕಾರ ಉಚಿತವಾಗಿ ತೋರುವಷ್ಟು ಸಂಬಳವನ್ನು ಅಥವಾ ಸಂಬಳಗಳನ್ನು ಅಥವಾ ಹುಚ್ಚನ ಆಸ್ತಿಯಿಂದ ಅವರಿಗೆ ಕೊಡುವಂತೆ ಗೊತ್ತು ಮಾಡತಕ್ಕದ್ದು.

ಸಂರಕ್ಷಕನ ಕರ್ತವ್ಯಗಳು.

15. (1) ಹುಚ್ಚನ ಶರೀರ ಸಂರಕ್ಷಣಾರ್ಥ ನೇಮಕರಾದ ಸಂರಕ್ಷಕನು ಆ ಹುಚ್ಚನ ಶರೀರವನ್ನು ನೋಡಿಕೊಂಡು ಅವನನ್ನು ಪೋಷಿಸತಕ್ಕದ್ದು.

ಪೋಷಣೆ ಬಗ್ಯೆ ಅಲೋವೆನ್ಸು.

(2) ಬೇರೆ ಸಂರಕ್ಷಕನು ನೇಮಕರಾಗಿರುವ ಸಂದರ್ಭದಲ್ಲಿ ಹುಚ್ಚನ ಮತ್ತು ಅವನ ಕುಟುಂಬದ ಜೀವನಾರ್ಥ ಡಿಸ್ಟ್ರಿಕ್ಟು ಕೋರ್ಟಿನವರಿಂದಾದರೂ ಡೆಪ್ಯುಟಿ ಕಮಿಷನರಿಂದಾದರೂ ಗೊತ್ತು ಮಾಡಲಾಗುವಷ್ಟು ಅಯಿವಜನ್ನು ಮಾನೇಜರು ಸಂರಕ್ಷಕನಿಗೆ ಕೊಡತಕ್ಕದ್ದು.

ಮಾನೇಜರುಗಳ ಅಧಿಕಾರಗಳು.

16. ಹುಚ್ಚನ ಆಸ್ತಿಗೆ ಸದರೀ ಮೇರೆಗೆ ನೇಮಕರಾದ ಮಾನೇಜರು, ಸದರೀ ಆಸ್ತಿಯ ಆಡಳಿತದ ವಿಷಯದಲ್ಲಿ, ಮಾಲೀಕನು ಹುಚ್ಚನಲ್ಲದೆ ಇದ್ದರೆ ಯಾವ ಯಾವ ಅಧಿಕಾರಗಳನ್ನು ನಡೆಸುವನೋ ಅದೇ ಅಧಿಕಾರಗಳನ್ನು ನಡೆಯಿಸಬಹುದು; ಮತ್ತು ಹುಚ್ಚನ ಆಸ್ತಿಗೆ ಸೇರಬೇಕಾದ, ನ್ಯಾಯವಾದ ಎಲ್ಲಾ ಬಾಕಿಗಳನ್ನೂ ಸಾಲಗಳನ್ನೂ ವಿಲ್ಲಂಗಗಳನ್ನೂ ವಸೂಲು ಮಾಡುವದುಮಾತ್ರವೇ ಅಲ್ಲದೆ, ಆ ಆಸ್ತಿಯಿಂದ ತೆರಬೇಕಾದ ನ್ಯಾಯವಾದ ಎಲ್ಲಾ ಬಾಕಿಗಳನ್ನೂ ಸಾಲಗಳನ್ನೂ ವಿಲ್ಲಂಗಗಳನ್ನೂ ಸಂದಾಯ ಪಡಿಸಲೂಬಹುದು. ಪರಂತು ಅಂಥಾ ಮಾನೇಜರು, ಡಿಸ್ಟ್ರಿಕ್ಟು ಕೋರ್ಟಿನವರ ಹುಕುಮನ್ನು ಮುಂಚಿತವಾಗಿ ಪಡಕೊಂಡಿದ್ದರೇನೇಹೊರ್ತು, ಆ ಆಸ್ತಿಯನ್ನಾದರೂ ಆ ಪೈಕಿ ಎಷ್ಟುಮಾತ್ರವನ್ನಾದರೂ ಮಾರುವದಕ್ಕಾಗಲಿ ಅಡಮಾನ ಇಡುವದಕ್ಕಾಗಲಿ, ಸ್ಥಿರ ಸೊತ್ತನ್ನು ಅಯಿದು ಸಂವತ್ಸರಕ್ಕೆ ಮೀರಿದ ಮಾಯಿಧೆಗೆ ಗೇಣಿಗೆ ಕೊಡುವದಕ್ಕಾಗಲಿ, ಅಧಿಕಾರ ವುಂಟಾಗಿರುವದಿಲ್ಲ.

ಮಾನೇಜರುಗಳು ಫೇರಿಸ್ತನ್ನು ಮತ್ತು ವರುಷಗಳಲ್ಲಿಯ ಲೆಖ್ಖಗಳನ್ನು ಕೊಡಬೇಕು.

17. (1) ಹುಚ್ಚನ ಆಸ್ತಿಗೆ ಮಾನೇಜರಾಗಿ ಡಿಸ್ಟ್ರಿಕ್ಟು ಕೋರ್ಟಿನವರಿಂದಾದರೂ, ಡೆಪ್ಯುಟಿ ಕಮಿಷನರಿಂದಾದರೂ, ನೇಮಕರರು ಮಾಡಲ್ಪಡುವ ಪ್ರತಿ ಮನುಷ್ಯನು ತಾನು ಹಾಂಗೆ ನೇಮಕರಾದ ತಾರೀಖು ಮೊದಲು ಆರುತಿಂಗಳ ವೊಳಗೆ ಸಂಗತ್ಯಾನುಸಾರವಾಗಿ ಡಿಸ್ಟ್ರಿಕ್ಟು ಕೋರ್ಟಿನಲ್ಲಾದರೂ ಡೆಪ್ಯುಟಿ ಕಮಿಷನರ ಬಳಿಯಲ್ಲಾದರೂ ಹುಚ್ಚನ ಭೂಸ್ಥಿತಿಗೂ, ಸದರೀ ಆಸ್ತಿಯ ಬಗ್ಯೆ ತನ್ನ ವಶಕ್ಕೆ ಬರುವ ಸಮಸ್ತ ಹಣಗಳಿಗೂ, ಜಿಂದಗಿಗಳಿಗೂ ಸೊತ್ತುಗಳಿಗೂ ಒಂದು ಫೇರಿಸ್ತನ್ನು ತಯಾರ್ಮಾಡಿ ಅದನ್ನು, ಸದರೀ ಆಸ್ತಿಗೆ ಸೇರಬೇಕಾದ ಯಾ ಅದರಿಂದ ತೆರಬೇಕಾದ ಸಾಲಗಳ ಪಟ್ಟೀಸಮೇತ ಒಪ್ಪಿಸತಕ್ಕದ್ದು. ಮತ್ತು ಅಂಥಾ ಪ್ರತಿ ಮಾನೇಜರೂ ತನ್ನ ಸ್ವಾಧೀನದಲ್ಲಿರುವ ಸೊತ್ತಿಗೆ ಒಂದು ಲೆಖ್ಖಾ ತಯಾರ್ಮಾಡಿ ಅದರಲ್ಲಿ ಸದರೀ ಆಸ್ತಿಯ ಬಗ್ಯೆ ಆದ ಜಮಾ ಖರ್ಚುಗಳನ್ನೂ ತನ್ನ ಕೈಯಲ್ಲಿ ವುಳದಿರುವ ಬಾಕಿಯನ್ನೂ ಸಹ ಬರದು, ಅದನ್ನು ಸರ್ಕಾರಿ ಸಂವತ್ಸರ ಆಖ್ಯೆರಾದ್ದು ಮೊದಲು ಮೂರು ತಿಂಗಳೊಳಗೆ ಪ್ರತಿ ಸಂವತ್ಸರದಲ್ಲೂ ಡಿಸ್ಟ್ರಿಕ್ಟು ಕೋರ್ಟಿನವರಿಗಾದರೂ ಡೆಪ್ಯುಟಿ ಕಮಿಷನರಿಗಾದರೂ ಕೊಡತಕ್ಕದ್ದು.

ಫೇರಿಸ್ತು-ಯಾ-ಲೆಕ್ಕ ಸಮನಾದ್ದಲ್ಲವೆಂತ ಫಿರ್ಯಾದು ಬಂದರೆ ನಡಿಸತಕ್ಕ ಪದ್ಧತಿ.

(2) ಹುಚ್ಚನ ನೆಂಟನಾದ ಯಾವನಾದರೂ ಅಥವಾ ಸರ್ಕಾರದ ಉದ್ಯೋಗಸ್ತನಾದ ಯಾವನಾದರೂ ಸದರೀ ಫೇರಿಸ್ತಾಗಲಿ ಪಟ್ಟಿಯಾಗಲಿ ಅಥವಾ ಯಾವ ಸಂವತ್ಸರದ ಲೆಕ್ಕವಾಗಲಿ ಸಮನಾದ್ದಲ್ಲವೆಂತ ಡಿಸ್ಟ್ರಿಕ್ಟು ಕೋರ್ಟಿನವರಿಗೆ ಅರ್ಜಿ ಕೊಟ್ಟರೆ, ಕೋರ್ಟಿನವರು ಮಾನೇಜರನ್ನು ಸಮ್ಮನ್ಸ್ ಮೂಲಕವಾಗಿ ಹಾಜರು ಪಡಿಸಿಕೊಂಡು ಆ ಸಂಗತಿಯನ್ನು ಸಮ್ಮೇರಿಯಾಗಿ ವಿಚಾರಿಸಿ ಆ ಮೇಲೆ ತಮಗೆ ಯುಕ್ತವಾಗಿ ತೋರುವಂಥಾ ಹುಕುಂ ಮಾಡಬಹುದು; ಅಥವಾ ಕೋರ್ಟಿನವರು ತಮ್ಮ ಚಿತ್ತಾನುಸಾರ, ಅಂಥಾ ಅರ್ಜಿಯನ್ನು ವಿಚಾರಣೆ ಬಗ್ಯೆ ಕೆಳಗಿನ ಕೋರ್ಟಿಗಾದರೂ ಅಥವಾ ಮಾನೇಜರು ಡಿಪ್ಯುಟಿ ಕಮಿಷನರ ಕಡೆಯಿಂದ ನೇಮಕರರು ಆಗಿದ್ದಲ್ಲಿ ಡೆಪ್ಯುಟಿ ಕಮಿಷನರಿಗಾದರೂ ಕಳುಹಿಸಿಕೊಡಬಹುದು.

ಮಾನೇಜರು ಆಸ್ತಿಯಿಂದ ಬರುವ ಆದಾಯವನ್ನು ಸರ್ಕಾರಿ ಖಜಾನೆಗೆ ಇರಸಾಲು ಮಾಡಬೇಕು.

18. ಹುಚ್ಚನ ನಿಮಿತ್ತವಾಗಿಯಾದರೂ, ಆಸ್ತಿಯ ನಿಮಿತ್ತವಾಗಿಯಾದರೂ, ಸಾಧಾರಣವಾಗಿ ಖರ್ಚಿಗೆ ಬೇಕಾದ್ದಕ್ಕಿಂತ ಹೆಚ್ಚಾಗಿ ಸದರೀ ಆಸ್ತಿಯ ಬಗ್ಯೆ ಮಾನೇಜರ ವಶದಲ್ಲಿ ಜಮೆಯಾದ ಸಮಸ್ತ ಹಣವನ್ನೂ, ಸದರಿ ಮಾನೇಜರು ಸದರೀ ಆಸ್ತಿಯ ಉದ್ದಿಶ್ಯ ಸರ್ಕಾರಿ ಖಜಾನೆಗೆ ಇರಸಾಲು ಮಾಡತಕ್ಕದ್ದು, ಮತ್ತು ಆ ಅಯಿವಜನ್ನು ಆಗಿಂದಾಗ್ಯೆ ಗವರ್ನಮೆಂಟು ಪತ್ರ ರೂಪ ಪಡಿಸಬಹುದು.

ನೆಂಟನು ಲೆಖ್ಖದ ಬಗ್ಗೆ ವ್ಯಾಜ್ಯ ಹೂಡಬಹುದು.

19. ಈ ರೆಗ್ಯುಲೇಷನಿನ ಮೇರಿಗೆ ನೌಕರರಾದ ಮಾನೇಜರನ್ನಾದರೂ, ಸದರೀ ಕೆಲಸದಿಂದ ಯಾ ನಂಬಿಕೆ ಕೆಲಸದಿಂದ ಅವನಿಗೆ ಬರತರಫು ಆಗಿದ್ದಲ್ಲಿ ಅವನ ಉತ್ತರಾಧಿಕಾರಿಯನ್ನಾದರೂ, ಅವನು ಮೃತಪಟ್ಟಿದ್ದಲ್ಲಿ ಅವನ ವಾರಸುದಾರನನ್ನಾದರೂ, ಸದರೀ ಆಸ್ತಿಯ ನಿಮಿತ್ತಾರ್ಥ ಆಗ-ಯು-ತತ್ಪೂರ್ವ ಅವನ ವಶದಲ್ಲಿ ಅಥವಾ ಆಡಳಿತದ ಕೆಳಗೆ ಇದ್ದ ಯಾವ ಸೊತ್ತನ್ನು ಕುರಿತಾಗಲಿ, ಅಥವಾ ಆ ಬಗ್ಗೆ ಅವನ ವಶಕ್ಕೆ ಬಂದ್ದ ಯಾವ ಹಣವನ್ನು ಕುರಿತಾಗಲಿ, ಇತರ ಜೆಂದಗಿಯನ್ನು ಕುರಿತಾಗಲಿ, ಲೆಖ್ಖಾ ಕೊಡಹೇಳಿ ಅವನ ಮೇಲೆ ವ್ಯಾಜ್ಯ ಮಾಡಲಿಕ್ಕೆ, ಹುಚ್ಚನ ಯಾವ ನೆಂಟನಾದರೂ ಅರ್ಹನಾಗಿರತಕ್ಕದ್ದು.

ಡಿಸ್ಟ್ರಿಕ್ಟ್ ಕೋರ್ಟಿನವರಿಂದ ಮಾನೇಜರ ಯಾ ಸಂರಕ್ಷಕನ ಬರತರಫು.

20. (1) ಡಿಸ್ಟ್ರಿಕ್ಟ್ ಕೋರ್ಟಿನವರು, ಕೋರ್ಟಿನವರ ಕಡೆಯಿಂದ ನೌಕರರಾದ ಮಾನೇಜರನ್ನು ಸಾಕಾದ ಕಾರಣದ ಮೇಲೆ ಬರತರಫು ಮಾಡಬಹುದು, ಮತ್ತು ಅವನಿಗೆ ಬದಲಾಗಿ ಸರಿಯಾದ ಮನುಷ್ಯನನ್ನು ನೌಕರರು ಮಾಡಬಹುದು, ಮತ್ತು ಹಾಂಗೆ ಬರತರಫಾದ ಮನುಷ್ಯನನ್ನು, ಅವನ ಕೈಲಿರುವ ಸೊತ್ತನ್ನು ಅವನ ಉತ್ತರಾಧಿಕಾರಿಗೆ ಒಪ್ಪಿಸ ಹೇಳಿಯೂ ಅವನ ದ್ವಾರಾ ನಡೆದ ಜಮಾ ಖರ್ಚುಗಳಿಗೆ ಆ ಉತ್ತರಾಧಿಕಾರಿಗೆ ಲೆಖ್ಖಾ ಕೊಡಹೇಳಿಯೂ, ಬಲಾತ್ಕರಿಸಲೂ ಬಹುದು.

(2) ಡಿಸ್ಟ್ರಿಕ್ಟ್ ಕೋರ್ಟಿನವರು, ತಮ್ಮಿಂದ ನೌಕರರು ಮಾಡಲಾದ ಸಂರಕ್ಷಕನನ್ನು ಸಾಕಾದ ಕಾರಣದ ಮೇಲೆ ಬರತರಫು ಮಾಡಬಹುದು.

ಡೆಪ್ಯುಟಿ ಕಮ್ಮಿಷನರಿಂದ ಬರತರಫು.

(3) ಅದೇ ರೀತಿಯಲ್ಲಿ ಡೆಪ್ಯುಟಿ ಕಮ್ಮಿಷನರು, ತಮ್ಮಿಂದ ನೌಕರರು ಮಾಡಲಾದ ಮಾನೇಜರನ್ನು ಯಾ ಗಾರ್ಡಿಯನನ್ನು, ಸಾಕಾದ ಕಾರಣದ ಮೇಲೆ ಬರತರಫು ಮಾಡಬಹುದು ; ಮತ್ತು ಡೆಪ್ಯುಟಿ ಕಮ್ಮಿಷನರ ಕಡೆಯಿಂದ ಅರ್ಜಿ ಬಂದ ಮೇಲೆ, ಡಿಸ್ಟ್ರಿಕ್ಟ್ ಕೋರ್ಟಿನವರು, ಯಾವ ಮಾನೇಜರನ್ನಾದರೂ, ಅವನ ಲೆಖ್ಖಗಳನ್ನೂ ಅವನ ಕೈಲಿರುವ ಸೊತ್ತನ್ನೂ ಸಹ ಒಪ್ಪಿಸುವಂತೆ, ಬಲಾತ್ಕರಿಸಬಹುದು.

ಲೆಖ್ಖಗಳನ್ನು ಕೊಡದೆ ನಿರಾಕರಿಸುವ ಮಾನೇಜರಿಗೆ ದಂಡನೆ ವಿಧಿಸುವ ಅಧಿಕಾರ.

21. ಹುಚ್ಚನ ಆಸ್ತಿಯ ಮಾನೇಜರಾದ ಯಾವನು, ಗೊತ್ತಾದ ವಾಯಿದೆಯೊಳಗೆ, ಅಥವಾ ಕೋರ್ಟಿನವರಿಂದ ಗೊತ್ತು ಮಾಡಲಾದ ವಾಯಿದೆಯೊಳಗೆ, ತನ್ನ ಲೆಖ್ಖಗಳನ್ನು ಅಥವಾ ತನ್ನ ಕೈಯಲ್ಲಿರುವ ಸೊತ್ತನ್ನು ಮನಃಪೂರ್ತಿಯಾಗಿ ಒಪ್ಪಿಸದೆ ನಿರಾಕರಿಸುತ್ತಾನೋ ಯಾ ಉಪೇಕ್ಷಿಸುತ್ತಾನೊ ಅಂಥಾ ಮಾನೇಜರಿಗೆ, ಡಿಸ್ಟ್ರಿಕ್ಟ್ ಕೋರ್ಟಿನವರು, ಅಯಿನೂರು ರೂಪಾಯಿಗೆ ಮೀರದ ಜುಲುಮಾನೆ ವಿಧಿಸಬಹುದು ; ಮತ್ತು ಕೋರ್ಟಿನ ಫೈಸಲುಗಳ ಅಮಲುಜಾರಿ ಬಗ್ಗೆ ಜಾರಿಯಲ್ಲಿರುವ ನೇಮಗಳಂತೆ, ಮಾನೇಜರ ಸೊತ್ತಿನ ಜಫ್ತಿ ವಿಕ್ರಯಗಳ ಮೂಲಕವಾಗಿ ಸದರೀ ಜುಲುಮಾನೆಯನ್ನು ವಸೂಲು ಮಾಡುವದು ಶಿವಾಯಿ, ಅಂಥಾ ಲೆಖ್ಖಗಳನ್ನೂ ಸೊತ್ತನ್ನೂ ಅವನು ಒಪ್ಪಿಸುವ ತನಕ, ಅಂಥಾ ನಿರಾಕರಣೆದಾರನನ್ನು ನಿರ್ಬಂಧವಾದ ಕೈದುಖಾನೆಗೆ ದಾಖಲು ಸಹ ಮಾಡಬಹುದು.

ಡಿಸ್ಟ್ರಿಕ್ಟ್ ಕೋರ್ಟಿನವರು ಮಾನೇಜರನ್ನು ನೌಕರರು ಮಾಡದೇನೇ ಕೆಲವು ಸಂಗತಿಗಳಲ್ಲಿ ಹುಚ್ಚನ ಜೀವನಾರ್ಥ ಸೊತ್ತನ್ನು ಉಪಯೋಗಪಡಿಸಬಹುದು.

22. ಹುಚ್ಚನ ಮತ್ತು ಅವನ ಕುಟುಂಬದ ಸ್ಥಿತಿಯನ್ನೂ ವಿದ್ಯಮಾನವನ್ನೂ ಅವನ ಆಸ್ತಿಯ ಮೊಬಲಗನ್ನೂ ಅದರ ತರಹಾವನ್ನು ನಿಧಾನಿಸಿ ನೋಡಲಾಗಿ, ಇದರಮೇಲೆ ನಿರ್ಣಯಿಸಲಾಗಿರುವ ರೀತೀಲಿ ಆಸ್ತಿಗೆ ಮಾನೇಜರನ್ನು ನೌಕರರು ಮಾಡೋಣ ಅನಾವಶ್ಯಕವೆಂತ ಡಿಸ್ಟ್ರಿಕ್ಟ್ ಕೋರ್ಟಿನವರಿಗೆ ತೋರಿದರೆ, ಕೋರ್ಟಿನವರು, ಅಂಥಾ ಮಾನೇಜರನ್ನು ನೌಕರರು ಮಾಡುವದಕ್ಕೆ ಬದಲಾಗಿ, ಆ ಆಸ್ತಿ ಹಣವಾಗಿದ್ದಲ್ಲಿ ಆ ಆಸ್ತಿಯನ್ನು, ಅಥವಾ ಅದು ಬೇರೆ ತರಹಾದ್ದಾಗಿದ್ದಲ್ಲಿ ಅದರ ಹುಟ್ಟುವಳಿಯನ್ನು, ವಸೂಲಾದಾಗ, ಹುಚ್ಚನ ಮತ್ತು ಅವನ ಕುಟುಂಬದ ಜೀವನಾರ್ಥ, ತಮಗೆ ಸರಿಯಾಗಿ ತೋರುವ ಮನುಷ್ಯನಿಗೆ ಕೊಡುವಂತೆ ಹುಕುಂ ಮಾಡಬಹುದು.

ಚಿತ್ತಸ್ವಾಸ್ಥ್ಯತೆ ತಪ್ಪಿಯಿದ್ದ ಮನುಷ್ಯನಿಗೆ ವಾಸಿಯಾಗಿದೆಯೋ ಇಲ್ಲವೋ ಎಂಬುವದನ್ನು ಡಿಸ್ಟ್ರಿಕ್ಟ್ ಕೋರ್ಟಿನವರು ವಿಚಾರಣೆ ಮಾಡಬಹುದು.

23. (1) ಮನೋಸ್ವಾಸ್ಥ್ಯತೆ ಇಲ್ಲದವನೆಂತಲೂ ತನ್ನ ಕೆಲಸಗಳನ್ನು ನಿರ್ವಹಿಸಲಿಕ್ಕೆ ಅಸಮರ್ಥನೆಂತಲೂ ಯಾವ ಮನುಷ್ಯನ ಮೇಲಾದರೂ ತೀರ್ಮಾನದ ಬಳಿಕ, ಅವನಾದರೂ, ಅವನಪರವಾಗಿ ಕೆಲಸ ನೋಡುವ ಅಥವಾ ಅವನ ಆಸ್ತಿಯಲ್ಲಿ ಸಂಬಂಧಿಕ ಹಕ್ಕು ಉಂಟೆಂತ ದಾವೆ ಮಾಡುವ ಮತ್ಯಾವನಾದರೂ ಅಂಥಾ ಮನುಷ್ಯನ ಮನೋಸ್ವಾಸ್ಥ್ಯತೆ ತಪ್ಪಿಯಿದ್ದದ್ದು ಪರಿಹಾರವಾಯಿತೆಂದು ಡಿಸ್ಟ್ರಿಕ್ಟ್ ಕೋರ್ಟಿನವರಿಗೆ ಅರ್ಜಿದ್ವಾರಾ ಅರಿಕೆ ಮಾಡಿದರೂ, ಅಥವಾ ಬೇರೇ ರೀತೀಲಿ (ಹಾಗೆ ಪರಿಹಾರವಾದ ಸಂಗತಿಯು) ಡಿಸ್ಟ್ರಿಕ್ಟ್ ಕೋರ್ಟಿನವರ ತಿಳುವಳಿಕೆಗೆ ಬಂದರೂ, ಅಂಥಾ (ಸಂದರ್ಭದಲ್ಲಿ) ಅಂಥಾ ಮನುಷ್ಯನು ಇನ್ನೂ ಚಿತ್ತಸ್ವಾಸ್ಥ್ಯತೆ ತಪ್ಪಿ ತನ್ನ ಕೆಲಸಗಳನ್ನು ನಿರ್ವಹಿಸಿಕೊಳ್ಳಲಿಕ್ಕೆ ಅಸಮರ್ಥನಾಗಿ ಇದ್ದಾನೋ ಇಲ್ಲವೋ ಎಂಬುವದನ್ನು, ಸದರಿ ಕೋರ್ಟಿನವರು ವಿಚಾರಣೆ ಮಾಡಿ ನಿಶ್ಚಯಿಸಬಹುದು.

(2) ಸದರೀ ವಿಚಾರಣೆಯು ಈ ರೆಗ್ಯುಲೇಷನಿನ ಆರಿಂದ ಹತ್ತನೇ ಪ್ರಕರಣಗಳಲ್ಲಿ ವಿಧಿಸಲಾಗಿರುವ ರೀತಿಯಲ್ಲಿ ನಡಿಯುತಕ್ಕದ್ದು; ಮತ್ತು ಅಂಥಾ ಮನುಷ್ಯನಿಗೆ, ಚಿತ್ತ ಸ್ವಾಸ್ಥ್ಯತೆ ತಪ್ಪಿ ತನ್ನ ಕೆಲಸಗಳನ್ನು ನಿರ್ವಹಿಸಿಕೊಳ್ಳಲಿಕ್ಕೆ ಅಸಮರ್ಥನಾಗಿದ್ದದ್ದು ಪರಿಹಾರವಾಯಿತೆಂತ ತೀರ್ಮಾನವಾದರೆ, ಸದರೀ ಕೋರ್ಟಿನವರು ಅವನ ಆಸ್ತಿಯನ್ನು ಅವನಿಗೆ ಒಪ್ಪಿಸುವಂತೆ ಹುಕುಂ ಮಾಡತಕ್ಕದ್ದು, ಮತ್ತು ಅಂಥಾ ಹುಕುಂ ಕಡೇದಾದ್ದಾಗಿ ಇರತಕ್ಕದ್ದು.

ಮತ್ತು ಅವನ ಆಸ್ತಿಯನ್ನು ಅವನಿಗೆ ಒಪ್ಪಿಸಬಹುದು.

24. ಇದರಲ್ಲಿ ಅನ್ಯಥಾ ವಿಧಿಸಲ್ಪಟ್ಟಲ್ಲಿ ಹೊರ್ತು ಈ ರೆಗ್ಯುಲೇಷನಿನ ಮೇರಿಗೆ ಡಿಸ್ಟ್ರಿಕ್ಟ್ ಕೋರ್ಟಿನವರಿಂದಾದರೂ ಅಥವಾ ಅವರ ಕೆಳಗಿನ ಕೋರ್ಟಿನವರಿಂದಾದರೂ ಆದಂಥಾ ಸಮಸ್ತ ಹುಕುಂಗಳೂ, ಚಿಲ್ಲರೆ ಮೊಕದ್ದಮೆಗಳಲ್ಲಿ ಅಪ್ಪೀಲನ್ನು ಕುರಿತು ಜಾರಿಯಲ್ಲಿರುವ ನೇಮಗಳ ಪ್ರಕಾರ, ಅಪ್ಪೀಲಿಗೆ ಗುರಿಯಾಗಿರತಕ್ಕದ್ದು.

ಹುಕುಮುಗಳಮೇಲೆ ಅಪೀಲು ಉಂಟು.

25. ಈ ರೆಗ್ಯುಲೇಷನಿನ ನಿಯಮಗಳನ್ನು ಜಾರಿಯಲ್ಲಿ ತರುವ ಬಗ್ಯೆ, ಕೋರ್ಟುಗಳ ಉಪದೇಶಕ್ಕೋಸ್ಕರ ಈ ರೆಗ್ಯುಲೇಷನಿಗೆ ವಿರೋಧವಿಲ್ಲದಂತೆ ಚೀಫ್ ಕೋರ್ಟಿನವರು ಆಗಿಂದಾಗ್ಯೆ ಸರ್ಕಾರಿ ಗೆಜೆಟ್ಟಿನಲ್ಲಿ ಇಸ್ತಿಹಾರು ಮೂಲಕ ನೇಮಗಳನ್ನು ನಿರ್ಣಯಿಸಬಹುದು.

ನೇಮಗಳನ್ನು ವಿಧಿಸಲು ಚೀಫ್ ಕೋರ್ಟಿನವರಿಗೆ ಅಧಿಕಾರ.

26. ಸಿವಿಲ್ ಪ್ರೊಸೀಡ್ಯೂರ್ ಕೋಡಿನ 463ನೇ ಪ್ರಕರಣದಲ್ಲಿ, "1874ನೇ ವರುಷದ ಜುಲೈ 31ನೇ ತಾರೀಖು 141ನೇ ನಂಬರಿನ ಲೇಟ್ ಚೀಫ್ ಕಮ್ಮಿಷನರವರ ಇಸ್ತಿಹಾರಿನೊಡನೆ ಪ್ರಕಟಿಸಲ್ಪಟ್ಟ ಚಿತ್ತ ಸ್ವಾಸ್ಥ್ಯತೆಯಿಲ್ಲದ ಮನುಷ್ಯರಿಗೆ ಸಮ್ಮಂಧವಾದ ನೇಮಗಳು" ಎಂಬ ಪದಗಳಿಗೂ ಸಂಖ್ಯೆಗಳಿಗೂ ಬದಲಾಗಿ, "190 ನೇ ವರುಷದ ಮೈಸೂರು ಲೂನಸಿ ರೆಗ್ಯುಲೇಷನು" ಎಂಬ ಪದಗಳನ್ನು ಮತ್ತು ಸಂಖ್ಯೆಗಳನ್ನು ಇಡತಕ್ಕದ್ದು.

ಸಿವಿಲ್ ಪ್ರೊಸೀಡ್ಯೂರ್ ಕೋಡಿನ 463ನೆ ಪ್ರಕರಣದ ತಿದ್ದುಪಾಟು.

ಕೆ. ಎಸ್. ಸಿ.

21—11—03.

ಮೈಸೂರು ಸೀಮೆಯ ಹುಚ್ಚರ ವಿಷಯವಾದ ಮಸ್ವಿದ ರೆಗ್ಯುಲೇಷನ್.

ಈ ರೆಗ್ಯುಲೇಷನಿನ ಉದ್ದೇಶಗಳು ಮತ್ತು ಕಾರಣಗಳು ಇವುಗಳ ವಿವರ.

ಮೈಸೂರು ಸೀಮೆಯಲ್ಲಿರುವ ಹುಚ್ಚುತನ ಮತ್ತು ಹುಚ್ಚನ ಸೊತ್ತುಗಳು—ಇವುಗಳ ಸಮ್ಮಂಧವಾಗಿರುವ ಕಟ್ಟಳೆಯು, ಗವರ್ನಮೆಂಟ್ ಆಫ್ ಇಂಡಿಯ ಫಾರಿನ್ ಡಿಪಾರ್ಟ್ಮೆಂಟಿನ 1872ನೇ ವರುಷದ ಏಪ್ರಿಲ್ 25ನೇ ತಾರೀಖು 75—J, ನಂಬರಿನ ಇಸ್ತಿಹಾರ್ ಜೊತೆಯಲ್ಲಿ ಪ್ರಕಟಿಸಲ್ಪಟ್ಟ ನಿಯಮಗಳ ಪೈಕಿ 22ನೇ ನಿಯಮದಲ್ಲಿ ಅಡಗಿರುತ್ತೆ. ಈ ನಿಯಮದಲ್ಲಿ ಏರ್ಪಡಿಸಿರುವದರ ಫಲಿತಾಂಶವೇನೆಂದರೆ:—ಹುಚ್ಚರಾಗಿ ಎಣಿಸಲ್ಪಟ್ಟ ಜನಗಳ ಬುದ್ಧಿಯು ಯಾವ ಸ್ಥಿತಿಯಲ್ಲಿದೆ ಎಂಬುವದನ್ನು ವಿಚಾರಿಸಿ ಅರಿಯುವ ಬಗ್ಯೆ ಕೋರ್ಟುಗಳು 1858 ವರುಷದ XXXVನೇ ನಂಬರಿನ ಆಕ್ಟಿನ ನಿಯಮಗಳನ್ನು ಅನುಸರಿಸಬೇಕೆಂಬುವದಲ್ಲದೆ ಹುಚ್ಚರ ದೇಹ ಸಂರಕ್ಷಣೆಯು ಮತ್ತು ಅವರ ಸೊತ್ತುಗಳ ನಿರ್ವಾಹದ ವಿಷಯಗಳಲ್ಲಿ ಮೈನರು (ಅಪ್ರಾಯಸ್ಥರು) ಗಳಿಗೆ ಸಮ್ಮಂಧಪಟ್ಟ 1872 ವರುಷದ ನಿಯಮಗಳಂತೆ ನಡಿಸಬೇಕೆಂಬುವದು—ಇದಾಗಿರುತ್ತೆ.

ಕಡೇಲಿ ಸೂಚಿಸಿರುವ ನಿಯಮಗಳಿಗೆ ಬದಲಾಗಿ, ಸಂರಕ್ಷಕರನ್ನು ಮತ್ತು ಸಂರಕ್ಷಣೆಯಲ್ಲಿರುವರನ್ನು ಕುರಿತ 1890ನೆ ವರುಷದ 8ನೇ ನಂಬರಿನ ಆಕ್ಟಿನ ಆಧಾರದ ಮೇಲೆ ಒಂದು ರೆಗ್ಯುಲೇಷನ್ ಕ್ಷಿಪ್ರದಲ್ಲಿ ನಿರ್ಣಯಿಸಲ್ಪಡುತ್ತೆ. ಈ ರೆಗ್ಯುಲೇಷನಿನ ಪಟ್ಟಿಯಲ್ಲಿ, "22ನೇ ನಿಯಮ ವಿನಹ ಮತ್ತು 22ನೇ ನಿಯಮದಂತೆ ಮಾಡಲ್ಪಟ್ಟ ಹುಕುಮುಗಳಿಗೆ 23 ನಿಯಮವು ಎಷ್ಟುಮಟ್ಟಿಗೆ ಸಮ್ಮಂಧಪಡುತ್ತೋ ಅದು ವಿನಹ ಮತ್ತು 22ನೆ ನಿಯಮವನ್ನು ಜಾರಿಯಲ್ಲಿ ತರುವ ಬಗ್ಯೆ ಎಷ್ಟುಮಟ್ಟಿಗೆ ಆವಶ್ಯವಿರಬಹುದೋ ಅದು ವಿನಹ, ಮಿಕ್ಕ 1872ನೇ ವರುಷದ ಎಲ್ಲಾ ನಿಯಮಗಳು ರದ್ದುಮಾಡಲ್ಪಡುತ್ತವೆ."

ಆ ವಿನಹಾಯಿಸಲ್ಪಟ್ಟ ನಿಯಮಗಳನ್ನು ಕೂಡ ರದ್ದುಮಾಡಿ, 1858ನೇ ವರುಷದ XXXVನೇ ನಂಬರಿನ ಆಕ್ಟಿನಂತೆ, ಪ್ರತ್ಯೇಕಕರವಾಗಿಯೂ ಮತ್ತು ಸಮ್ಮಂಧಪಟ್ಟ ವಿಷಯಗಳೆಲ್ಲಾ ಅಡಗಿಸಿಕೊಂಡದ್ದಾಗಿಯು ಇರುವ ಒಂದು ರೆಗ್ಯುಲೇಷನನ್ನು ನಿರ್ಣಯಿಸಲು ಈಗ ಉದ್ದೇಶಿಸಲ್ಪಟ್ಟಿರುತ್ತೆ. ಈ ರೆಗ್ಯುಲೇಷನಿನಲ್ಲಿ ಹುಚ್ಚುತನ ಸ್ಥಿರಪಡಿಸುವ ವಿಷಯವು ಮತ್ತು ಹುಚ್ಚರ ಸೊತ್ತುಗಳನ್ನು ನಿರ್ವಹಿಸುವ ವಿಷಯವು ವ್ಯವಹರಿಸಲ್ಪಡುತ್ತವೆ.

2. ಈ ರಗ್ಯುಲೇಷನಿನ ನಿಯಮಗಳ ಪೈಕಿ, 3 (2) ನೇ ಮತ್ತು 26ನೇ ಪ್ರಕರಣಗಳನ್ನು ಮಾತ್ರ ವಿವರಿಸುವದು ಅಗತ್ಯ ತೋರಿಬರುತ್ತೆ.

3 (2) ನೇ ಪ್ರಕರಣ.—ಡಿಸ್ಟ್ರಿಕ್ಟು ಕೋರ್ಟಿನ ಕೆಳಗಿರುವ ಕೋರ್ಟುಗಳಿಗೆ, 10ನೇ ಪ್ರಕರಣದಂತೆ ವಿಚಾರಣೆ ಮಾಡಲು ಅಧಿಕಾರ ಕೊಡಲ್ಪಟ್ಟ ವಿಧಾನದಲ್ಲಿ ಹೊರತು ಬೇರೆ ರೀತಿಯಾಗಿ ಹುಚ್ಚು ತನದ ವಿಷಯಗಳಲ್ಲಿ ವಿಚಾರಣೆ ಮಾಡುವ ಅಧಿಕಾರವನ್ನು ಕೊಡುವದು ಅಯುಕ್ತವಾಗಿ ಎಣಿಸಲ್ಪಟ್ಟಿರುತ್ತೆ. ಆದಕಾರಣ ಇದಕ್ಕೆ ಸರಿಬೀಳುವ ಬ್ರಿಟಿಷ್ ಇಂಡಿಯನ್ ಆಕ್ಟಿನಂತೆ "ಡಿಸ್ಟ್ರಿಕ್ಟ್ ಕೋರ್ಟು" ಎಂಬುವದರ ಅರ್ಥವನ್ನು ಒಂದು ಡಿಸ್ಟ್ರಿಕ್ಟಿನಲ್ಲಿ ಸಿವಿಲ್ ಮೂಲಾಧಿಕಾರವನ್ನು ಚಲಾಯಿಸುವ ಮುಖ್ಯವಾದ ಕೋರ್ಟೆಂದು ನಿಬಂಧಿಸಿರುತ್ತೆ.

26ನೇ ಪ್ರಕರಣ.—ಸಿವಿಲ್ ಪ್ರೊಸೀಡ್ಯೂರ್ ಕೋಡಿನಲ್ಲಿ 1858ನೇ ವರುಷದ XXXVನೇ ನಂಬರಿನ ಆಕ್ಟಿಗೆ ಇರುವ ದಾಖಲೆಯು, "1874ನೇ ವರುಷದ ಜುಲೈ ತಿಂಗಳು 31ನೇ ತಾರೀಖು 141ನೇ ನಂಬರಿನ ಕಳದ ಚೀಫ್ ಕಮಿಷನರ ಇಸ್ತಿಹಾರೊಡನೆ ಪ್ರಕಟಿಸಲ್ಪಟ್ಟ ಹುಚ್ಚರ ಸಮ್ಮಂಧವಾದ ನಿಯಮಗಳಿಗೆ" ದಾಖಲೆಯಾಗಿಧೆ ಎಂದು, 1884ನೇ ವರುಷದ 11ನೇ ನಂಬರಿನ ರೆಗ್ಯುಲೇಷನಿನ 40ನೇ ಪ್ರಕರಣದಲ್ಲಿ ತಪ್ಪಾಗಿ ಬದಲಾಯಿಸಲ್ಪಟ್ಟಿತು. 1858ನೇ ವರುಷದ ಇಂಡಿಯನ್ ಲೂನಟಿಕ್ ಅಸೈಲಂ ಆಕ್ಟಿಗೆ ಸರಿಬೀಳುವ ಈ ನಿಯಮಗಳು, "ಮೈಸೂರು ಸೀಮೆಯಲ್ಲಿ ಹುಚ್ಚರನ್ನು ಶಾಲೆಗಳಲ್ಲಿ ಕರಕೊಳ್ಳೋಣ ಮತ್ತು ಕಾವಲಿಯಲ್ಲಿಡೋಣ ಈ ಬಗ್ಯೆ ಆಧ ನಿಯಮಗಳಾಗಿ" ಇರುತ್ತವೆ. ಅವುಗಳಲ್ಲಿ, ದುರ್ಬಲ ಮನಸ್ಕರಾಗಿರುವರೆಂದು ಎಣಿಸಲ್ಪಟ್ಟವರನ್ನು ಹುಚ್ಚರೆಂದು ನಿರ್ಣಯಿಸಲು ಅವಕಾಶವಿರುವದಿಲ್ಲವು. ಆ ತಪ್ಪಾದ ದಾಖಲೆಗೆ ಬದಲಾಗಿ ಈ ರೆಗ್ಯುಲೇಷನಿಗೆ ದಾಖಲೆ ಮಾಡುವದಾಗಿ ಈಗ ಉದ್ದೇಶಿಸಲ್ಪಟ್ಟಿರುತ್ತದೆ.

21—11—03.

ಕೆ. ಎಸ್. ಚಂದ್ರಶೇಖರ ಅಯ್ಯರ್,

ಮೈಸೂರ ಗೆಜೆಟ್.

ಸಂ. 39] ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. [ಸಂ. 7.

ಬೆಂಗಳೂರು, ಗುರುವಾರ, ಫೆಬ್ರವರಿ ತಾ|| 18, ಸನ 1904.

IIನೆ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನ್ಮೆಂಟು.

ಲೆಜಿಸ್ಲೆಟಿವು ಇಲಾಖೆ.

ಇಸ್ತಿಹಾರ್ನಾಮಾ.

ತಾರೀಖು 21ನೇ ಡಿಸೆಂಬರ್ 1903ನೇ ವರುಷ.

ನಂಬರ್ 77—ಲೆಜಿಸ್. 23-03, ಮೈಸೂರು ಗವರ್ನಮೆಂಟಿನವರ ಆಲೋಚನೆಯಲ್ಲಿರುವ ಇದರಡಿ ಕಂಡ ಮೈಸೂರು ಸೀಮೆಯ ಹುಚ್ಚುತನ ಮತ್ತು ಹುಚ್ಚರ ಆಸ್ತಿಗಳು—ಇವುಗಳನ್ನು ಕುರಿತ ನಿಬಂಧನೆಯನ್ನು ಒಂದಾಗಿ ಮಾಡಿ ತಿದ್ದುಪಡಿಸುವ ಬಗ್ಗೆ ಉಂಟಾದ ಮುಸ್ವಿದಾ ರೆಗ್ಯುಲೇಷನನ್ನು ಉದ್ದೇಶಗಳು ಮತ್ತು ಕಾರಣಗಳು ಇವುಗಳೊಡನೆ, ಸಮಸ್ತ ಜನಗಳ ತಿಳಿವಳಿಕೆ ಬಗ್ಗೆ ಪ್ರಸಿದ್ಧ ಪಡಿಸಿರುತ್ತೆ.

ಕೆ. ಎಸ್. ಚಂದ್ರಶೇಖರ ಅಯ್ಯ

ಛೀಫ್ ಮೈಸೂರು ಗವರ್ನಮೆಂಟಿನ ಜನರಲ್ ವ ರವಿನ್ಯೂ ಇಲಾಖೆಗಳ ಸೆಕ್ರೆಟರಿ.

---

190 ನೇ ವರುಷದ ನಂಬರಿನ ರೆಗ್ಯುಲೇಷನು.

(ಮುಸ್ವಿದಾ)

ಮೈಸೂರು ಸೀಮೆಯಲ್ಲಿ ಹುಚ್ಚುತನ ಮತ್ತು ಹುಚ್ಚರ ಆಸ್ತಿಗಳು—ಇವುಗಳನ್ನು ಕುರಿತ ನಿಬಂಧನೆಯನ್ನು ಒಂದಾಗಿ ಮಾಡಿ ತಿದ್ದುಪಡಿಸುವ ಬಗ್ಗೆ ಉಂಟಾದ ರೆಗ್ಯುಲೇಷನು.

ಪೀಠಿಕೆ.

ಮೈಸೂರು ಸೀಮೆಯಲ್ಲಿ ಹುಚ್ಚುತನ ಮತ್ತು ಹುಚ್ಚರ ಆಸ್ತಿಗಳು—ಇವುಗಳನ್ನು ಕುರಿತ ನಿಬಂಧನೆಯನ್ನು ಒಂದಾಗಿ ಮಾಡಿ ತಿದ್ದುಪಡಿಸುವದು ಯುಕ್ತವಾಗಿರುವದರಿಂದ, ಘನವನ್ನು ಹೊಂದಿದ ಶ್ರೀಮನ್ ಮಹಾರಾಜಾ ಸಾಹೇಬರು ನಿರ್ಣೈಸುವದೇನಂದರೆ:—

Iನೇ ಅಧ್ಯಾಯ—ಅವತರಣಿಕೆ.

ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.

1. (1) ಈ ರೆಗ್ಯುಲೇಷನು, "190 ನೇ ವರುಷದ ಮೈಸೂರು ಲೂನಸಿ ರೆಗ್ಯುಲೇಷನ್" ಎಂದು ಕರಿಯಲ್ಪಡಬಹುದು.

(2) ಇದು ಮೈಸೂರು ಸೀಮೆಗೆಲ್ಲಾ ವ್ಯಾಪಿಸತಕ್ಕದ್ದು; ಮತ್ತು

(3) ಇದು 190 ನೇ ವರುಷದ ಮೊದಲನೆ ತಾರೀಖಿನಲ್ಲಿ ಜಾರಿಯಲ್ಲಿ ಬರತಕ್ಕದ್ದು.

287

ರದ್ದಿಯಾತಿ.

2. 1872ನೇ ವರುಷದ ಏಪ್ರಿಲ್ 25ನೇ ತಾರೀಖು 73-1. ನಂಬರಿನ ಗವರ್ನ್ ಮೆಂಟ್ ಆಫ್ ಇಂಡಿಯಾ ಫಾರಿನ್ ಡಿಪಾರ್ಟ್ ಮೆಂಟ್ ಇಸ್ತಿಹಾರಿನೊಡನೆ ಪ್ರಕಟಿಸಲ್ಪಟ್ಟ, "ಮೈಸೂರು ಸೀಮೆಯಲ್ಲಿರುವ ಅಪ್ರಾಯಸ್ಥರು, ಜಡರು ಮತ್ತು ಇತರ ಅನರ್ಹರು – ಇವರ ಕಾವಲಿ ಮತ್ತು ಸಂರಕ್ಷಣೆ ಬಗ್ಗೆ ಆದ ನಿಯಮಗಳ ಯಾವ ಭಾಗವು, 190 ನೇ ವರುಷದ ಗಾರ್ಡಿಯನ್ಸ್ ಆಂಡ್ ವಾರ್ಡ್ಸ್ ರೆಗ್ಯುಲೇಷನಿನಿಂದ ರದ್ದು ಮಾಡಲ್ಪಡದೆ ಇದೆಯೋ ಆ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ಅರ್ಥ ವಿವರಣೆಗಳು.

3. ಈ ರೆಗ್ಯುಲೇಷನಿನಲ್ಲಿ ಪ್ರಮೇಯದಿಂದಾಗಲಿ, ಸಂದರ್ಭದಿಂದಾಗಲಿ, ವಿರೋಧವಾದ್ದೇನಾದರು ಇದ್ದರೇನೇ ಅಲ್ಲದೆ—

"ಹುಚ್ಚ"

(1) "ಹುಚ್ಚ" ಅಂದರೆ ದುರ್ಬಲ ಮನಸ್ಕನಾಗಿಯೂ ತನ್ನ ಕಾರ್ಯಗಳನ್ನು ನಿರ್ವಹಿಸಲು ಅಶಕ್ತನಾಗಿಯೂ ಇರುವನೆಂದು ನಿಬಂಧನೆಗೊಳಪಟ್ಟ ಕ್ರಮವಾದ ರೀತಿಯಲ್ಲಿ ನಿರ್ಣಯಿಸಲ್ಪಟ್ಟ ಮನುಷ್ಯನೆಂಬರ್ಥ.

"ಡಿಸ್ಟ್ರಿಕ್ಟ್ ಕೋರ್ಟ"

(2) "ಡಿಸ್ಟ್ರಿಕ್ಟ್ ಕೋರ್ಟು" ಅಂದರೆ ಒಂದು ಡಿಸ್ಟ್ರಿಕ್ಟಿನಲ್ಲಿ ಸಿವಿಲ್ ಮೂಲಾಧಿಕಾರವನ್ನುಳ್ಳ ಮುಖ್ಯ ಕೋರ್ಟೆಂದು ಅರ್ಥ.

IIನೇ ಅಧ್ಯಾಯ—ಹುಚ್ಚುತನದ ವಿಷಯದಲ್ಲಿ ವಿಚಾರಣೆ.

ಆಸ್ತಿವಂತನಾದ ಮನುಷ್ಯನು ಹುಚ್ಚನೆಂತ ಎಣಿಸಲ್ಪಟ್ಟಲ್ಲಿ ಡಿಸ್ಟ್ರಿಕ್ಟು ಕೋರ್ಟಿನವರು ಅರ್ಜಿ ಬಂದಮೇಲೆ ವಿಚಾರಿಸಬಹುದು.

4. ಒಂದು ಡಿಸ್ಟ್ರಿಕ್ಟ್ ಕೋರ್ಟಿನ ಅಧಿಕಾರದ ಸರಹದ್ದುಗಳ ಒಳಗೆ ವಾಸಮಾಡುವ ಆಸ್ತಿವಂತನಾದ ಯಾವ ಮನುಷ್ಯನಾದರೂ ಹುಚ್ಚನಾಗಿ ಇಧಾನೆಂತ ಹೇಳೋಣಾದ್ದಲ್ಲಿ ಆ ಕೋರ್ಟಿನವರು, ಈ ಕೆಳಗೆ ನಮೂದಿರುವಂಥಾ ಅರ್ಜಿ ಬಂದಮೇಲೆ, ಅಂಥಾ ಮನುಷ್ಯನು ಚಿತ್ತಸ್ವಾಸ್ಥ್ಯ ಉಂಟಾದವನೊ ಅಥವಾ ಇಲ್ಲದವನೊ ಎಂಬುವದನ್ನು ತನ್ನ ಕೆಲಸಗಳನ್ನು ನಿರ್ವಹಿಸಿಕೊಳ್ಳುವದಕ್ಕೆ ಸಮರ್ಥನೊ ಅಲ್ಲವೊ ಎಂಬುವದನ್ನು ಸಹ ನಿಶ್ಚಯಿಸತಕ್ಕ ಬಗ್ಗೆ ವಿಚಾರಣೆ ಮಾಡಬಹುದು.

ಅರ್ಜಿ ಕೊಡತಕ್ಕವರು.

5. ಅಂಥಾ ವಿಚಾರಣೆ ಮಾಡುವ ಉದ್ದೇಶ್ಯ ಅರ್ಜಿಯನ್ನು, ಹುಚ್ಚನೆಂತ ಹೇಳಲಾದಂಥಾವನ ನೆಂಟನಾದರೂ, ಗವರ್ನಮೆಂಟು ಅಡ್ವಕೇಟಾದರೂ, ಅಥವಾ ಪಬ್ಲಿಕ್ ಪ್ರಾಸಿಕ್ಯೂಟರಾದರೂ, ಅಥವಾ ಹುಚ್ಚನೆಂಬದಾಗಿ ಹೇಳಲಾದವನ ಆಸ್ತಿ ಪೂರಾ ಯಾ ಕೆಲವು ಮಟ್ಟಿಗೆ ಭೂರೂಪವಾಗಿಯಾಗಲಿ ಭೂಮಿಯಲ್ಲಿಯ ಹಕ್ಕು ರೂಪವಾಗಿಯಾಗಲಿ ಇದ್ದಲ್ಲಿ, ಅದು ಇರುವ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಾದರೂ ಕೊಡಬಹುದು.

ಹುಚ್ಚನಿಗೆ ವಿಚಾರಣೆ ಕುರಿತು ನೋಟೀಸು ಕೊಡಬೇಕು.

6. (1) ಸದರೀ ಪ್ರಕಾರ ವಿಚಾರಣೆ ಮಾಡಲಿಕ್ಕೆ ಡಿಸ್ಟ್ರಿಕ್ಟು ಕೋರ್ಟಿನವರು ಉದ್ಯುಕ್ತರಾದಾಗ, ಅವರು ವಿಚಾರಣೆ ನಡೆಯಿಸುವದಾಗಿರುವ ಕಾಲವನ್ನು ಸ್ಥಳವನ್ನು ಕುರಿತು ಒಂದು ನೋಟೀಸನ್ನು ಹುಚ್ಚನೆಂತ ಹೇಳಲಾದವನಿಗೆ ಸಾದರು ಮಾಡಿಸತಕ್ಕದ್ದು.

ನೋಟೀಸು ಸಾದರು ಮಾಡೋಣ.

(2) ಸದರೀ ಹುಚ್ಚನಿಗೆ ನೋಟೀಸನ್ನು ಖುದ್ದಾಗಿ ಸಾದರು ಮಾಡೋಣ ವ್ಯರ್ಥವಾಯೆಂತ ಅವನ ಸ್ಥಿತಿಯಿಂದ ಕಾಣಬಂದರೆ, ಡಿಸ್ಟ್ರಿಕ್ಟು ಕೋರ್ಟಿನವರು ತಮಗೆ ಯುಕ್ತವಾಗಿ ತೋರುವ ಇತರ ರೀತಿಯಲ್ಲಿ ಅವನಿಗೆ ನೋಟೀಸನ್ನು ಸಾದರು ಮಾಡಿಸಬಹುದು.

(3) ಡಿಸ್ಟ್ರಿಕ್ಟು ಕೋರ್ಟಿನವರು ಅಂಥಾ ನೋಟೀಸಿನ ಒಂದು ಪ್ರತಿಯನ್ನು ಸದರೀ ಹುಚ್ಚನೆಂತ ಹೇಳಲಾದವನ ಯಾವ ನೆಂಟನಿಗಾಗಲಿ ಕೂಡ ಸಾದರು ಮಾಡಿಸಬಹುದು.

ಹುಚ್ಚನ ಹಾಜರಿಯನ್ನಾಗಲಿ ವಿಚಾರಣೆಯನ್ನಾಗಲಿ ವಿಧಿಸುವ ಅಧಿಕಾರ.

7. (1) ಡಿಸ್ಟ್ರಿಕ್ಟು ಕೋರ್ಟಿನವರಿಂದಲಾದರೂ, ಅಥವಾ ಅಂಥಾ ಹುಚ್ಚನೆಂದು ಹೇಳಲಾದವನ ಮನೋಗುಣವನ್ನು ಮತ್ತು ಸ್ಥಿತಿಯನ್ನು ಕುರಿತು ಜಾಹಿರ್ ಮಾಡಹೇಳಿ ಕೋರ್ಟಿನವರು ಯಾರನ್ನು ಅಪೇಕ್ಷಿಸುತ್ತಾರೋ ಅಂಥಾ ಮನುಷ್ಯನಿಂದಲಾದರೂ ಖುದ್ದು ವಿಚಾರಣೆ ಮಾಡಲ್ಪಡುವ ನಿಮಿತ್ತ, ಕೋರ್ಟಿನವರು ಗೊತ್ತುಮಾಡುವಂಥಾ ಅನುಕೂಲವಾದ ಕಾಲವಲ್ಲೂ ಸ್ಥಳದಲ್ಲೂ ಹಾಜರಾಗಬೇಕಾಗಿ ಸದರೀ ಹುಚ್ಚನೆಂದು ಹೇಳಲಾದವನಿಗೆ ಸದರೀ ಕೋರ್ಟಿನವರು ವಿಧಿಸಬಹುದು. ಡಿಸ್ಟ್ರಿಕ್ಟು ಕೋರ್ಟಿನವರು, ಅದೇರೀತಿಯಲ್ಲಿ ಸದರೀ ಹುಚ್ಚನೆಂದು ಹೇಳಲಾದವನ ಖಾಸಾ ವಿಚಾರಣೆ ಮಾಡುವಂತೆ ಒಂದು ಹುಕುಂ, ಅದರಲ್ಲಿ ನಮೂದಿರುವ ಮನುಷ್ಯನಿಗೆ ಅಥವಾ ಮನುಷ್ಯರಿಗೆ ಮಾಡಿ, ಆ ಹುಚ್ಚನೆಂದು ಹೇಳಲಾದವನ ಬಳಿಗೆ ಹೋಗಿ ನೋಡಲಿಕ್ಕೆ ಅವರಿಗೆ ಅಧಿಕಾರಸಹ ಕೊಡಬಹುದು.

295 278 978

(2) ಸದರೀ ಹುಚ್ಚನೆಂದು ಹೇಳಲಾದ ಆಸಾಮಿ, ದೇಶಾಚಾರ ಮತ್ತು ಪದ್ಧತಿಗಳ ಪ್ರಕಾರ ಬಹಿರಂಗವಾಗಿ ಹಾಜರಾಗುವಂತೆ ಬಲಾತ್ಕಾರಿಸಲ್ಪಡಕೂಡದಂಥಾ ಹೆಂಗಸಾಗಿ ಇದ್ದರೆ, ಇತರ ಸಂಗತಿಗಳಲ್ಲಿ ಅಂಥಾ ಮನುಷ್ಯರನ್ನು ವಿಚಾರಣೆ ಮಾಡುವ ವಿಷಯದಲ್ಲಿ ಜಾರೀಲಿರುವ ನಿಬಂಧನೆಗಳ ಪ್ರಕಾರವೇ, (1) ನೇ ಉಪ ಪ್ರಕರಣದ ನಿಯಮಗಳಲ್ಲಿ ಕಂಡ ಸದರೀ ಹುಚ್ಚನೆಂದು ಹೇಳಲಾದ ಆಸಾಮಿಯು ಹಾಜರುಭಾಷಿಯೂ ವಿಚಾರಣೆಯೂ ನಡೆಯತಕ್ಕದ್ದು.

ಅಸ್ಸೆಸ್ಸರುಗಳ ನೊಕರರಾತಿಯು.

8. ಡಿಸ್ಟ್ರಿಕ್ಟ್ ಕೋರ್ಟಿನವರು, ತಮಗೆ ಯುಕ್ತವಾಗಿ ತೋರಿದಲ್ಲಿ, ನೇಲ್ಕಂಡ ವಿಚಾರಣೆಗಾಗಿ ತಮ್ಮ ಕೆಳಗೆ ಅಸ್ಸೆಸ್ಸರುಗಳಾಗಿ ಕೆಲಸ ನೋಡತಕ್ಕ ಬಗ್ಯೆ ಎರಡು ಅಥವಾ ಹೆಚ್ಚುಮಂದಿ ಜನರನ್ನು ನೊಕರರು ಮಾಡಬಹುದು.

ಕೋರ್ಟಿನವರ ಹುಕುಂ.

9. ಆ ವಿಚಾರಣೆಯು ಪೂರ್ತಿಯಾದ ಮೇಲೆ, ಡಿಸ್ಟ್ರಿಕ್ಟ್ ಕೋರ್ಟಿನವರು, ಸದರೀ ಹುಚ್ಚನೆಂದು ಹೇಳಲಾದವನು ಚಿತ್ತಸ್ವಾಸ್ಥ್ಯವಿಲ್ಲದವನೋ ಅಲ್ಲವೊ ಎಂಬ ಸಂಗತಿಯನ್ನು ನಿಶ್ಚಯಿಸತಕ್ಕದ್ದು, ಮತ್ತು ವಿಚಾರಣೆ ಬಾಬತು ಖರ್ಚುಗಳನ್ನು, ಯಾರ ಅರ್ಜಿಯ ಮೇಲೆ ವಿಚಾರಣೆ ನಡೆಯಿತೊ ಆ ಮನುಷ್ಯನಕಡೆಯಿಂದಲಾದರು, ಸದರೀ ಹುಚ್ಚನೆಂದು ಹೇಳಲಾದವನು ಚಿತ್ತಸ್ವಾಸ್ಥ್ಯವಿಲ್ಲದವನಾಗಿ ನಿಶ್ಚಯಿಸಲ್ಪಟ್ಟಲ್ಲಿ ಆ ಹುಚ್ಚನ ಸೊತ್ತಿನಿಂದಲಾದರೂ, ಅಥವಾ ಪ್ರಕಾರಾಂತರವಾಗಿಯಾದರೂ ಸಂದಾಯ ಪಡಿಸುವಂತೆ, ತಮ್ಮ ಯುಕ್ತಾನುಸಾರ ಹುಕುಂ ಮಾಡಬಹುದು.

ಕೆಳಗಿನ ಕೋರ್ಟಿಗೆ ಕಮ್ಮಿಷನೆಂಬ ಅಧಿಕಾರ ಕೊಡೋಣ.

10. (1) ಅರ್ಜಿ ಕೊಡೋಣಾದ ಡಿಸ್ಟ್ರಿಕ್ಟ್ ಕೋರ್ಟು ಇರುವ ಸ್ಥಳದಿಂದ ಅಯಿವತ್ತು ಮೈಯಿಲಿಗಿಂತ ಹೆಚ್ಚು ದೂರದಲ್ಲಿ ಸದರಿ ಹುಚ್ಚನೆಂದು ಹೇಳಲಾದವನು ವಾಸಸ್ಥನಾಗಿದ್ದರೆ, ಸದರೀ ಕೋರ್ಟಿನವರು ಆ ವಿಚಾರಣೆಯನ್ನು ನಡಿಸ ಹೇಳಿ ತಮ್ಮ ಕೆಳಗಿನ ಯಾವ ಕೋರ್ಟಿನವರಿಗಾದರೂ ಕಮ್ಮಿಷನ್ ಎಂಬ ಅಧಿಕಾರ ಕೊಡಬಹುದು. ಆಮೇಲೆ ಸದರೀ ಕೆಳಗಿನ ಕೋರ್ಟಿನವರು ಇದರ ಒಳಗೆ ಮೇಲೆ ವಿಧಿಸಲಾದ ರೀತೀಲಿ ವಿಚಾರಣೆಯನ್ನು ನಡಿಸತಕ್ಕದ್ದು.

ಕೆಳಗಿನ ಕೋರ್ಟಿನವರ ರಿಪೋರ್ಟು.

(2) ವಿಚಾರಣೆ ಸಂಪೂರ್ಣವಾದ ಮೇಲೆ ಆ ವಿಷಯದಲ್ಲಿ ಕೆಳಗಿನ ಕೋರ್ಟಿನವರು ತಮ್ಮ ಪ್ರೊಸೀಡಿಂಗ್ಸ್ ಎಂಬ ನಡವಳಿಕೆಗಳನ್ನು, ಅಸ್ಸೆಸ್ಸರುಗಳು ನೊಕರರಾಗಿ ಇದ್ದಲ್ಲಿ ಅವರ ಅಭಿಪ್ರಾಯವನ್ನು, ತಮ್ಮ ಸ್ವಂತ ಅಭಿಪ್ರಾಯವನ್ನುಸಹ ಅರಿಕೆ ಮಾಡತಕ್ಕದ್ದು. ಅನಂತರ

ಡಿಸ್ಟ್ರಿಕ್ಟ್ ಕೋರ್ಟಿನ ಹುಕುಂ.

ಡಿಸ್ಟ್ರಿಕ್ಟ್ ಕೋರ್ಟಿನವರು ಆ ಸಂಗತಿಯಲ್ಲಿ ತಮಗೆ ಯುಕ್ತವಾಗಿ ತೋರುವಂಥಾ ಹುಕುಂ ಮಾಡತಕ್ಕದ್ದು.

ಹುಚ್ಚನ ಆಸ್ತಿಯ ಆಡಳಿತ.

11. (1) ಯಾವ ಮನುಷ್ಯನಾದರು ಚಿತ್ತ ಸ್ವಾಸ್ಥ್ಯವಿಲ್ಲದವನೆಂತಲೂ ತನ್ನ ಕೆಲಸಗಳ ಆಡಳಿತ ನಡಿಸಲಿಕ್ಕೆ ಅಸಮರ್ಥನೆಂತಲೂ ತೀರ್ಮಾನವಾದ ಸಂಗತಿಯಲ್ಲಿ, ಡಿಸ್ಟ್ರಿಕ್ಟ್ ಕೋರ್ಟಿನವರು, ಈ ಕೆಳಗೆ ಅನ್ಯಥಾ ನಿರ್ಣಯಿಸಲಾಗಿ ಇರುವಲ್ಲಿ ಹೊರ್ತು, ಸದರೀ ಆಸ್ತಿಗೆ ಮಾನೇಜರ್ ಎಂಬ ಒಬ್ಬ ಪಾರುಪತ್ಯಗಾರನನ್ನು ಏರ್ಪಡಿಸತಕ್ಕದ್ದು.

ಯಾರನ್ನು ಮಾನೇಜರಾಗಿ ನೊಕರರು ಮಾಡತಕ್ಕದ್ದು.

(2) ಸದರೀ ಹುಚ್ಚನ ಸಮೀಪವಾದ ನೆಂಟನಾದರೂ, ಇತರ ಯಾವತಕ್ಕ ಮನುಷ್ಯನಾದರೂ, ಮಾನೇಜರಾಗಿ ನೊಕರರು ಮಾಡಲ್ಪಡ ಬಹುದು.

ಡಿಸ್ಟ್ರಿಕ್ಟ್ ಕೋರ್ಟಿನವರು ಗಾರ್ಡಿಯನ್ ಎಂಬ ಸಂರಕ್ಷಕನನ್ನು ಏರ್ಪಡಿಸಬೇಕು.

12. ಹುಚ್ಚನ ಆಸ್ತಿಗೆ ಒಬ್ಬ ಮಾನೇಜರನ್ನು ಡಿಸ್ಟ್ರಿಕ್ಟ್ ಕೋರ್ಟಿನವರು ಏರ್ಪಡಿಸದಾಗ ಆ ಕೋರ್ಟಿನವರು ಆ ಹುಚ್ಚನ ಶರೀರ ಸಂರಕ್ಷಣಾರ್ಥ ಒಬ್ಬ ಸರಿಯಾದ ಮನುಷ್ಯನನ್ನು ಗಾರ್ಡಿಯನ್ ಎಂಬ ಸಂರಕ್ಷಕನಾಗಿ ನೊಕರರು ಮಾಡತಕ್ಕದ್ದು. ಆ ಮಾನೇಜರನ್ನೇ ಸಂರಕ್ಷಕನಾಗಿ ನೊಕರರು ಮಾಡಬಹುದು.

ಪರಂತು ಸದರೀ ಹುಚ್ಚನಿಗೆ ಸಂರಕ್ಷಕನಾಗಿ ಅವನ ಕ್ರಮವಾರಸನ್ನು ಯಷ್ಟುಮಾತ್ರವೂ ನೇಮಕ ಮಾಡಕೂಡದು.

ಹುಚ್ಚನ ಆಸ್ತಿಯು ಭೂರೂಪವಾಗಿ ಇದ್ದಲ್ಲಿ ಡೆಪ್ಯುಟಿ ಕಮ್ಮಿಷನರು ಅದರ ಆಡಳಿತವನ್ನು ವಹಿಸುವಂತೆ ಕೋರ್ಟಿನವರು ಆಜ್ಞಾಪಿಸಬಹುದು.

13. (1) ಸದರೀ ಆಸ್ತಿಯು ಪೂರಾ ಆದರೂ ಎಷ್ಟುಮಾತ್ರವಾದರೂ ಭೂ ರೂಪವಾಗಿಯಾಗಲಿ ಭೂ ಬಾಧ್ಯತೇ ರೂಪವಾಗಿಯಾಗಲಿ ಇದ್ದಲ್ಲಿ, ಡಿಸ್ಟ್ರಿಕ್ಟ್ ಕೋರ್ಟಿನವರು, ಮಾನೇಜರನ್ನು ನೊಕರರು ಮಾಡುವದಕ್ಕೆ ಬದಲಾಗಿ, ಡೆಪ್ಯುಟಿ ಕಮ್ಮಿಷನರನ್ನು ಸದರೀ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳುವಂತೆ ವಿಧಿಸಬಹುದು. ಆಮೇಲೆ ಡೆಪ್ಯುಟಿ ಕಮ್ಮಿಷನರು ಸದರೀ ಆಸ್ತಿಗೆ ಒಬ್ಬ ಮಾನೇಜರನ್ನೂ, ಹುಚ್ಚನ ಶರೀರ ರಕ್ಷಣಾರ್ಥ ಒಂದು ಸಂರಕ್ಷಕನನ್ನೂ ಸಹ ಏರ್ಪಡಿಸತಕ್ಕದ್ದು.

ಡೆಪ್ಯುಟಿ ಕಮ್ಮಿಷನರಿನ ನಡವಳಿಕೆಗಳು ಮೇಲಾದ ರೆವಿನ್ಯೂ ಅಧಿಕಾರಸ್ಥರ ಅಧಿಕಾರಕ್ಕೆ ಒಳಗಾದ್ದು.

(2) ಈ ರೆಗ್ಯುಲೇಷನಿಗೆ ಅನುಗುಣವಾಗಿ ಆಸ್ತಿಗಳನ್ನು ಸ್ವಾಧೀನ ಪಡಿಸಿಕೊಂಡ ಡೆಪ್ಯುಟಿ ಕಮ್ಮಿಷನರಿನ ಸಮಸ್ತ ನಡವಳಿಕೆಗಳೂ ಮೇಲಾದ ರೆವಿನ್ಯೂ ಅಧಿಕಾರಸ್ಥರ ಅಧಿಕಾರಕ್ಕೆ ಒಳಗಾಗಿರತಕ್ಕದ್ದು.

ಮಾನೇಜರುಗಳಿಗೂ ಗಾರ್ಡಿಯರ್ನಗಳಿಗೂ ಸಂಬಳ.

14. ಹುಚ್ಚನ ಆಸ್ತಿಗೆ ಮಾನೇಜರಾಗಿ ನೇಮಕರಾದ ಮನುಷ್ಯನಿಗಾದರೂ, ಹುಚ್ಚನ ಶರೀರ ಸಂರಕ್ಷಣಾರ್ಥ ಗಾರ್ಡಿಯರ್ ಎಂಬ ಸಂರಕ್ಷಕನಾಗಿ ನೇಮಕವಾದ ಮನುಷ್ಯನಿಗಾದರೂ, ಈ ನಂಬಿಕೆ ಕೆಲಸವನ್ನು ಸುಮ್ಮಗೆ ಮಾಡಲಿಕ್ಕೆ ಮನಸಿಲ್ಲದೆ ಇದ್ದರೆ, ಸಂಗತ್ಯಾನುಸಾರವಾಗಿ ಡಿಸ್ಟ್ರಿಕ್ಟ ಕೋರ್ಟನವರಾದರೂ ಡೆಪ್ಯುಟಿ ಕಮ್ಮಿಷನರಾದರೂ, ಸಂಗತಿಯ ವಿಧ್ಯಮಾನಪ್ರಕಾರ ಉಚಿತವಾಗಿ ತೋರುವಷ್ಟು ಸಂಬಳವನ್ನು ಅಥವಾ ಸಂಬಳಗಳನ್ನು ಅಥವಾ ಹುಚ್ಚನ ಆಸ್ತಿಯಿಂದ ಅವರಿಗೆ ಕೊಡುವಂತೆ ಗೊತ್ತು ಮಾಡತಕ್ಕದ್ದು.

ಸಂರಕ್ಷಕನ ಕರ್ತವ್ಯಗಳು.

15. (1) ಹುಚ್ಚನ ಶರೀರ ಸಂರಕ್ಷಣಾರ್ಥ ನೇಮಕರಾದ ಸಂರಕ್ಷಕನು ಆ ಹುಚ್ಚನ ಶರೀರವನ್ನು ನೋಡಿಕೊಂಡು ಅವನನ್ನು ಪೋಷಿಸತಕ್ಕದ್ದು.

ಪೋಷಣೆ ಬಗ್ಯೆ ಅಲೋವೆನ್ಸು.

(2) ಬೇರೆ ಸಂರಕ್ಷಕನು ನೇಮಕರಾಗಿರುವ ಸಂದರ್ಭದಲ್ಲಿ ಹುಚ್ಚನ ಮತ್ತು ಅವನ ಕುಟುಂಬದ ಜೀವನಾರ್ಥ ಡಿಸ್ಟ್ರಿಕ್ಟ ಕೋರ್ಟನವರಿಂದಾದರೂ ಡೆಪ್ಯುಟಿ ಕಮ್ಮಿಷನರಿಂದಾದರೂ ಗೊತ್ತು ಮಾಡಲಾಗುವಷ್ಟು ಅಯಿವಜನ್ನು ಮಾನೇಜರು ಸಂರಕ್ಷಕನಿಗೆ ಕೊಡತಕ್ಕದ್ದು.

ಮಾನೇಜರುಗಳ ಅಧಿಕಾರಗಳು.

16. ಹುಚ್ಚನ ಆಸ್ತಿಗೆ ಸದರೀ ಮೇರೆಗೆ ನೇಮಕರಾದ ಮಾನೇಜರು, ಸದರೀ ಆಸ್ತಿಯ ಆಡಳಿತದ ವಿಷಯದಲ್ಲಿ, ಮಾಲೀಕನು ಹುಚ್ಚನಲ್ಲದೆ ಇದ್ದರೆ ಯಾವ ಯಾವ ಅಧಿಕಾರಗಳನ್ನು ನಡೆಸಿಯಾನೋ ಅದೇ ಅಧಿಕಾರಗಳನ್ನ ನಡೆಯಿಸಬಹುದು ; ಮತ್ತು ಹುಚ್ಚನ ಆಸ್ತಿಗೆ ಸೇರಬೇಕಾದ, ನ್ಯಾಯವಾದ ಎಲ್ಲಾ ಬಾಕಿಗಳನ್ನೂ ಸಾಲಗಳನ್ನೂ ವಿಲ್ಲಂಗಗಳನ್ನೂ ವಸೂಲು ಮಾಡುವದುಮಾತ್ರವೇ ಅಲ್ಲದೆ, ಆ ಆಸ್ತಿಯಿಂದ ತೆರಬೇಕಾದ ನ್ಯಾಯವಾದ ಎಲ್ಲಾ ಬಾಕಿಗಳನ್ನೂ ಸಾಲಗಳನ್ನೂ ವಿಲ್ಲಂಗಗಳನ್ನೂ ಸಂದಾಯ ಪಡಿಸಲೂಬಹುದು. ಪರಂತು ಅಂಥಾ ಮಾನೇಜರು, ಡಿಸ್ಟ್ರಿಕ್ಟ ಕೋರ್ಟನವರ ಹುಕುಮನ್ನು ಮುಂಚಿತವಾಗಿ ಪಡಕೊಂಡಿದ್ದರೇನೇಹೊರ್ತು, ಆ ಆಸ್ತಿಯನ್ನಾದರೂ ಆ ಪೈಕಿ ಎಷ್ಟುಮಾತ್ರವನ್ನಾದರೂ ಮಾರುವದಕ್ಕಾಗಲಿ ಅಡಮಾನ ಇಡುವದಕ್ಕಾಗಲಿ, ಸ್ಥಿರ ಸೊತ್ತನ್ನು ಅಯಿದು ಸಂವತ್ಸರಕ್ಕೆ ಮೀರಿದ ಮಾಯಿದೆಗೆ ಗೇಣಿಗೆ ಕೊಡುವದಕ್ಕಾಗಲಿ, ಅಧಿಕಾರ ವುಂಟಾಗಿರುವದಿಲ್ಲ.

ಮಾನೇಜರುಗಳು ಫೇರಿಸ್ತನ್ನು ಮತ್ತು ವರುಷಗಟ್ಟಲೆಯ ಲೆಖ್ಖಗಳನ್ನು ಕೊಡಬೇಕು.

17. (1) ಹುಚ್ಚನ ಆಸ್ತಿಗೆ ಮಾನೇಜರಾಗಿ ಡಿಸ್ಟ್ರಿಕ್ಟ ಕೋರ್ಟನವರಿಂದಾದರೂ, ಡೆಪ್ಯುಟಿ ಕಮ್ಮಿಷನರಿಂದಾದರೂ, ನೇಮಕರರು ಮಾಡಲಾದ ಪ್ರತಿ ಮನುಷ್ಯನು ತಾನು ಹಾಂಗೆ ನೇಮಕರರಾದ ತಾರೀಖು ಮೊದಲು ಆರುತಿಂಗಳ ವೊಳಗೆ ಸಂಗತ್ಯಾನುಸಾರವಾಗಿ ಡಿಸ್ಟ್ರಿಕ್ಟ ಕೋರ್ಟನಲ್ಲಾದರೂ ಡೆಪ್ಯುಟಿ ಕಮ್ಮಿಷನರ ಬಳಿಯಲ್ಲಾದರೂ ಹುಚ್ಚನ ಭೂಸ್ಥಿತಿಗೂ, ಸದರೀ ಆಸ್ತಿಯ ಬಗ್ಯೆ ತನ್ನ ವಶಕ್ಕೆ ಬರುವ ಸಮಸ್ತ ಹಣಗಳಿಗೂ, ಜಿಂದಗಿಗಳಿಗೂ ಸೊತ್ತುಗಳಿಗೂ ಒಂದು ಫೇರಿಸ್ತನ್ನು ತಯಾರ್ಮಾಡಿ ಅದನ್ನು, ಸದರೀ ಆಸ್ತಿಗೆ ಸೇರಬೇಕಾದ ಯಾ ಅದರಿಂದ ತೆರಬೇಕಾದ ಸಾಲಗಳ ಪಟ್ಟೀಸಮೇತ ಒಪ್ಪಿಸತಕ್ಕದ್ದು. ಮತ್ತು ಅಂಥಾ ಪ್ರತಿ ಮಾನೇಜರೂ ತನ್ನ ಸ್ವಾಧೀನದಲ್ಲಿರುವ ಸೊತ್ತಿಗೆ ಒಂದು ಲೆಖ್ಖಾ ತಯಾರ್ಮಾಡಿ ಅದರಲ್ಲಿ ಸದರೀ ಆಸ್ತಿಯ ಬಗ್ಯೆ ಆದ ಜಮಾ ಖರ್ಚುಗಳನ್ನೂ ತನ್ನ ಕೈಯಲ್ಲಿ ವುಳದಿರುವ ಬಾಕಿಯನ್ನೂ ಸಹ ಬರದು, ಅದನ್ನು ಸರ್ಕಾರಿ ಸಂವತ್ಸರ ಆಖೈರಾದ್ದು ಮೊದಲು ಮೂರು ತಿಂಗಳೊಳಗೆ ಪ್ರತಿ ಸಂವತ್ಸರದಲ್ಲೂ ಡಿಸ್ಟ್ರಿಕ್ಟ ಕೋರ್ಟನವರಿಗಾದರೂ ಡೆಪ್ಯುಟಿ ಕಮ್ಮಿಷನರಿಗಾದರೂ ಕೊಡತಕ್ಕದ್ದು.

ಫೇರಿಸ್ತು–ಯಾ–ಲೆಕ್ಕ ಸಮನಾದ್ದಲ್ಲವೆಂತ ಫಿರ್ಯಾದು ಬಂದರೆ ನಡಿಸತಕ್ಕ ಪದ್ಧತಿ.

(2) ಹುಚ್ಚನ ನೆಂಟನಾದ ಯಾವನಾದರೂ ಅಥವಾ ಸರ್ಕಾರದ ಉದ್ಯೋಗಸ್ತನಾದ ಯಾವನಾದರೂ ಸದರೀ ಫೇರಿಸ್ತಾಗಲಿ ಪಟ್ಟಿಯಾಗಲಿ ಅಥವಾ ಯಾವ ಸಂವತ್ಸರದ ಲೆಕ್ಕವಾಗಲಿ ಸಮನಾದ್ದಲ್ಲವೆಂತ ಡಿಸ್ಟ್ರಿಕ್ಟ ಕೋರ್ಟನವರಿಗೆ ಅರ್ಜಿ ಕೊಟ್ಟರೆ, ಕೋರ್ಟನವರು ಮಾನೇಜರನ್ನು ಸಮ್ಮನ್ಸ ಮೂಲಕವಾಗಿ ಹಾಜರು ಪಡಿಸಿಕೊಂಡು ಆ ಸಂಗತಿಯನ್ನು ಸಮ್ಮರಿಯಾಗಿ ವಿಚಾರಿಸಿ ಆ ಮೇಲೆ ತಮಗೆ ಯುಕ್ತವಾಗಿ ತೋರುವಂಥಾ ಹುಕುಂ ಮಾಡಬಹುದು ; ಅಥವಾ ಕೋರ್ಟನವರು ತಮ್ಮ ಚಿತ್ತಾನುಸಾರ, ಅಂಥಾ ಅರ್ಜಿಯನ್ನು ವಿಚಾರಣೆ ಬಗ್ಯೆ ಕೆಳಗಿನ ಕೋರ್ಟಿಗಾದರೂ ಅಥವಾ ಮಾನೇಜರು ಡಿಪ್ಯುಟಿ ಕಮ್ಮಿಷನರ ಕಡೆಯಿಂದ ನೇಮಕರರು ಆಗಿದ್ದಲ್ಲಿ ಡೆಪ್ಯುಟಿ ಕಮ್ಮಿಷನರಿಗಾದರೂ ಕಳುಹಿಸಿಕೊಡಬಹುದು.

ಮಾನೇಜರು ಆಸ್ತಿಯಿಂದ ಬರುವ ಆದಾಯವನ್ನು ಸರ್ಕಾರಿ ಖಜಾನೆಗೆ ಇರಸಾಲು ಮಾಡಬೇಕು.

18. ಹುಚ್ಚನ ನಿಮಿತ್ತವಾಗಿಯಾದರೂ, ಆಸ್ತಿಯ ನಿಮಿತ್ತವಾಗಿಯಾದರೂ, ಸಾಧಾರಣವಾಗಿ ಖರ್ಚಿಗೆ ಬೇಕಾದ್ದಕ್ಕಿಂತ ಹೆಚ್ಚಾಗಿ ಸದರೀ ಆಸ್ತಿಯ ಬಗ್ಯೆ ಮಾನೇಜರ ವಶದಲ್ಲಿ ಜಮೆಯಾದ ಸಮಸ್ತ ಹಣವನ್ನೂ, ಸದರಿ ಮಾನೇಜರು ಸದರೀ ಆಸ್ತಿಯ ಉದ್ದಿಶ್ಯ ಸರ್ಕಾರಿ ಖಜಾನೆಗೆ ಇರಸಾಲು ಮಾಡತಕ್ಕದ್ದು, ಮತ್ತು ಆ ಅಯಿವಜನ್ನು ಆಗಿಂದಾಗ್ಯೆ ಗವರ್ನಮೆಂಟು ಪತ್ರ ರೂಪ ಪಡಿಸಬಹುದು.

19. ಈ ರೆಗ್ಯುಲೇಷನಿನ ಮೇರಿಗೆ ನೊಕರರಾದ ಮಾನೇಜರನ್ನಾದರೂ, ಸದರೀ ಕೆಲಸದಿಂದ ಯಾ ನಂಬಿಕೆ ಕೆಲಸದಿಂದ ಅವನಿಗೆ ಬರತರಫು ಆಗಿದ್ದಲ್ಲಿ ಅವನ ಉತ್ತರಾಧಿಕಾರಿಯನ್ನಾದರೂ, ಅವನು ಮೃತಪಟ್ಟಿದ್ದಲ್ಲಿ ಅವನ ವಾರಸುದಾರನನ್ನಾದರೂ, ಸದರೀ ಆಸ್ತಿಯ ನಿಮಿತ್ತಾರ್ಥ ... ಆಗ -ಯ- ತತ್ಪೂರ್ವ ಅವನ ವಶದಲ್ಲಿ ಅಥವಾ ಆಡಳಿತದ ಕೆಳಗೆ ಇದ್ದ ಯಾವ ಸೊತ್ತನ್ನು ಕುರಿತಾಗಲಿ, ಅಥವಾ ಆ ಬಗ್ಗೆ ಅವನ ವಶಕ್ಕೆ ಬಂದ ಯಾವ ಹಣವನ್ನು ಕುರಿತಾಗಲಿ, ಇತರ ಜಿಂದಗಿಯನ್ನು ಕುರಿತಾಗಲಿ, ಲೆಖ್ಖಾ ಕೊಡಹೇಳಿ ಅವನ ಮೇಲೆ ವ್ಯಾಜ್ಯ ಮಾಡಲಿಕ್ಕೆ, ಹುಚ್ಚನ ಯಾವ ನೆಂಟನಾದರೂ ಅರ್ಹನಾಗಿರತಕ್ಕದ್ದು.

ನೆಂಟನು ಲೆಖ್ಖದ ಬಗ್ಗೆ ವ್ಯಾಜ್ಯ ಮಾ... ಡಬಹುದು.

ಡಿಸ್ಟ್ರಿಕ್ಟು ಕೋರ್ಟನವರಿಂದ ಮಾನೇಜರ ಯಾ ಸಂರಕ್ಷಕನ ಬರತರಫು.

20. (1) ಡಿಸ್ಟ್ರಿಕ್ಟು ಕೋರ್ಟನವರು, ಕೋರ್ಟನವರ ಕಡೆಯಿಂದ ನೊಕರರಾದ ಮಾನೇಜರನ್ನು ಸಾಕಾದ ಕಾರಣದ ಮೇಲೆ ಬರತರಫು ಮಾಡಬಹುದು, ಮತ್ತು ಅವನಿಗೆ ಬದಲಾಗಿ ಸರಿಯಾದ ಮನುಷ್ಯನನ್ನು ನೊಕರರು ಮಾಡಬಹುದು, ಮತ್ತು ಹಾಂಗೆ ಬರತರಫಾದ ಮನುಷ್ಯನನ್ನು, ಅವನ ಕೈಯಲಿರುವ ಸೊತ್ತನ್ನು ಅವನ ಉತ್ತರಾಧಿಕಾರಿಗೆ ಒಪ್ಪಿಸ ಹೇಳಿಯೂ ಅವನ ದ್ವಾರಾ ನಡೆದ ಜಮಾ ಖರ್ಚುಗಳಿಗೆ ಆ ಉತ್ತರಾಧಿಕಾರಿಗೆ ಲೆಖ್ಖಾ ಕೊಡಹೇಳಿಯೂ, ಬಲಾತ್ಕರಿಸಲೂ ಬಹುದು.

(2) ಡಿಸ್ಟ್ರಿಕ್ಟು ಕೋರ್ಟನವರು, ತಮ್ಮಿಂದ ನೊಕರರು ಮಾಡಲಾದ ಸಂರಕ್ಷಕನನ್ನು ಸಾಕಾದ ಕಾರಣದ ಮೇಲೆ ಬರತರಫು ಮಾಡಬಹುದು.

ಡೆಪ್ಯುಟಿ ಕಮಿಷನರಿಂದ ಬರತರಫು.

(3) ಅದೇ ರೀತಿಯಲ್ಲಿ ಡೆಪ್ಯುಟಿ ಕಮಿಷನರು, ತಮ್ಮಿಂದ ನೊಕರರು ಮಾಡಲಾದ ಮಾನೇಜರನ್ನು ಯಾ ಗಾರ್ಡಿಯನ್ನು, ಸಾಕಾದ ಕಾರಣದ ಮೇಲೆ ಬರತರಫು ಮಾಡಬಹುದು ; ಮತ್ತು ಡೆಪ್ಯುಟಿ ಕಮಿಷನರ ಕಡೆಯಿಂದ ಅರ್ಜಿ ಬಂದ ಮೇಲೆ, ಡಿಸ್ಟ್ರಿಕ್ಟು ಕೋರ್ಟನವರು, ಯಾವ ಮಾನೇಜರನ್ನಾದರೂ, ಅವನ ಲೆಖ್ಖಗಳನ್ನೂ ಅವನ ಕೈಲಿರುವ ಸೊತ್ತನ್ನೂ ಸಹ ಒಪ್ಪಿಸುವಂತೆ, ಬಲಾತ್ಕರಿಸಬಹುದು.

ಲೆಖ್ಖಗಳನ್ನು ಕೊಡದೆ ನಿರಾಕರಿಸುವ ಮಾನೇಜರಿಗೆ ದಂಡನೆ ವಿಧಿಸುವ ಅಧಿಕಾರ.

21. ಹುಚ್ಚನ ಆಸ್ತಿಯ ಮಾನೇಜರಾದ ಯಾವನು, ಗೊತ್ತಾದ ವಾಯಿದೆಯೊಳಗೆ, ಅಥವಾ ಕೋರ್ಟನವರಿಂದ ಗೊತ್ತು ಮಾಡಲಾದ ವಾಯಿದೆಯೊಳಗೆ, ತನ್ನ ಲೆಖ್ಖಗಳನ್ನು ಅಥವಾ ತನ್ನ ಕೈಯಲ್ಲಿರುವ ಸೊತ್ತನ್ನು ಮನಃಪೂರ್ತಿಯಾಗಿ ಒಪ್ಪಿಸದೆ ನಿರಾಕರಿಸುತ್ತಾನೋ ಯಾ ಉಪೇಕ್ಷಿಸುತ್ತಾನೊ ಅಂಥಾ ಮಾನೇಜರಿಗೆ, ಡಿಸ್ಟ್ರಿಕ್ಟು ಕೋರ್ಟನವರು, ಅಯಿನೂರು ರೂಪಾಯಿಗೆ ಮೀರದ ಜುಲುಮಾನೆ ವಿಧಿಸಬಹುದು ; ಮತ್ತು ಕೋರ್ಟಿನ ಫೈಸಲುಗಳ ಅಮಲುಜಾರಿ ಬಗ್ಯೆ ಜಾರಿಯಲ್ಲಿರುವ ನೇಮಗಳಂತೆ, ಮಾನೇಜರ ಸೊತ್ತಿನ ಜಫ್ತಿ ವಿಕ್ರಯಗಳ ಮೂಲಕವಾಗಿ ಸದರೀ ಜುಲುಮಾನೆಯನ್ನು ವಸೂಲು ಮಾಡುವದು ಶಿವಾಯಿ, ಅಂಥಾ ಲೆಖ್ಖಗಳನ್ನೂ ಸೊತ್ತನ್ನೂ ಅವನು ಒಪ್ಪಿಸುವ ತನಕ, ಅಂಥಾ ನಿರಾಕರಣೆದಾರನನ್ನು ನಿರ್ಬಂಧವಾದ ಕೈದುಖಾನೆಗೆ ದಾಖಲು ಸಹ ಮಾಡಬಹುದು.

ಡಿಸ್ಟ್ರಿಕ್ಟು ಕೋರ್ಟನವರು ಮಾನೇಜರನ್ನು ನೊಕರರು ಮಾಡದೇನೇ ಕೆಲವು ಸಂಗತಿಗಳಲ್ಲಿ ಹುಚ್ಚನ ಜೀವನಾರ್ಥ ಸೊತ್ತನ್ನು ಉಪಯೋಗಪಡಿಸಬಹುದು.

22. ಹುಚ್ಚನ ಮತ್ತು ಅವನ ಕುಟುಂಬದ ಸ್ಥಿತಿಯನ್ನೂ ವಿಧ್ಯಮಾನವನ್ನೂ ಅವನ ಆಸ್ತಿಯ ಮೊಬಲಗನ್ನೂ ಅದರ ತರಹಾವನ್ನು ನಿಧಾನಿಸಿ ನೋಡಲಾಗಿ, ಇದರಮೇಲೆ ನಿರ್ಣಯಿಸಲಾಗಿರುವ ರೀತೀಲಿ ಆಸ್ತಿಗೆ ಮಾನೇಜರನ್ನು ನೊಕರರು ಮಾಡೋಣ ಅನಾವಶ್ಯಕವೆಂತ ಡಿಸ್ಟ್ರಿಕ್ಟು ಕೋರ್ಟನವರಿಗೆ ತೋರಿದರೆ, ಕೋರ್ಟನವರು, ಅಂಥಾ ಮಾನೇಜರನ್ನು ನೊಕರರು ಮಾಡುವದಕ್ಕೆ ಬದಲಾಗಿ, ಆ ಆಸ್ತಿ ಹಣವಾಗಿದ್ದಲ್ಲಿ ಆ ಆಸ್ತಿಯನ್ನು, [ಅಥವಾ ಅದು ಬೇರೆ ತರಹಾದ್ದಾಗಿದ್ದಲ್ಲಿ ಅದರ ಹುಟ್ಟುವಳಿಯನ್ನು, ವಸೂಲಾದಾಗ, ಹುಚ್ಚನ ಮತ್ತು ಅವನ ಕುಟುಂಬದ ಜೀವನಾರ್ಥ, ತಮಗೆ ಸರಿಯಾಗಿ ತೋರುವ ಮನುಷ್ಯನಿಗೆ ಕೊಡುವಂತೆ ಹುಕುಂ ಮಾಡಬಹುದು.

ಚಿತ್ತಸ್ವಾಸ್ಥ್ಯತೆ ತಪ್ಪಿಯಿದ್ದ ಮನುಷ್ಯನಿಗೆ ವಾಶಿಯಾಗಿಧೆಯೋ ಇಲ್ಲವೋ ಎಂಬುವದನ್ನು ಡಿಸ್ಟ್ರಿಕ್ಟು ಕೋರ್ಟನವರು ವಿಚಾರಣೆ ಮಾಡಬಹುದು.

23. (1) ಮನೋಸ್ವಾಸ್ಥ್ಯತೆ ಇಲ್ಲದವನೆಂತಲೂ ತನ್ನ ಕೆಲಸಗಳನ್ನು ನಿರ್ವಹಿಸಲಿಕ್ಕೆ ಅಸಮರ್ಥನೆಂತಲೂ ಯಾವ ಮನುಷ್ಯನ ಮೇಲಾದರೂ ತೀರ್ಮಾದ ಬಳಿಕ, ಅವನಾದರೂ, ಅವನಪರವಾಗಿ ಕೆಲಸ ನೋಡುವ ಅಥವಾ ಅವನ ಆಸ್ತಿಯಲ್ಲಿ ಸಂಬಂಧವಿಯಾ ಹಕ್ಕು ಉಂಟೆಂತ ದಾವೆ ಮಾಡುವ ಮತ್ಯಾವನಾದ್ದರೂ ಅಂಥಾ ಮನುಷ್ಯನ ಮನೋಸ್ವಾಸ್ಥ್ಯತೆ ತಪ್ಪಿಯಿದ್ದದ್ದು ಪರಿಹಾರವಾಯಿತೆಂದು ಡಿಸ್ಟ್ರಿಕ್ಟು ಕೋರ್ಟನವರಿಗೆ ಅರ್ಜಿದ್ವಾರಾ ಅರಿಕೆ ಮಾಡಿದರೂ, ಅಥವಾ ಬೇರೇ ರೀತೀಲಿ (ಹಾಗೆ ಪರಿಹಾರವಾದ ಸಂಗತಿಯು) ಡಿಸ್ಟ್ರಿಕ್ಟು ಕೋರ್ಟನವರ ತಿಳುವಳಿಕೆಗೆ ಬಂದರೂ, ಅಂಥಾ (ಸಂದರ್ಭದಲ್ಲಿ) ಅಂಥಾ ಮನುಷ್ಯನು ಇನ್ನೂ ಚಿತ್ತಸ್ವಾಸ್ಥ್ಯತೆ ತಪ್ಪಿ ತನ್ನ ಕೆಲಸಗಳನ್ನು ನಿರ್ವಹಿಸಿಕೊಳ್ಳಲಿಕ್ಕೆ ಅಸಮರ್ಥನಾಗಿ ಇದ್ದಾನೋ ಇಲ್ಲವೋ ಎಂಬುವದನ್ನು, ಸದರಿ ಕೋರ್ಟನವರು ವಿಚಾರಣೆ ಮಾಡಿ ನಿಶ್ಚಯಿಸಬಹುದು.

ಮತ್ತು ಅವನ ಆಸ್ತಿಯನ್ನು ಅವನಿಗೆ ಒಪ್ಪಿಸಬಹುದು.

(2) ಸದರೀ ವಿಚಾರಣೆಯು ಈ ರೆಗ್ಯುಲೇಷನಿನ ಆರಂಭ ಹತ್ತನೇ ಪ್ರಕರಣಗಳಲ್ಲಿ ವಿಧಿಸಲ್ಪಟ್ಟಿರುವ ರೀತಿಯಲ್ಲಿ ನಡೆಯತಕ್ಕದ್ದು; ಮತ್ತು ಅಂಥಾ ಮನುಷ್ಯನಿಗೆ, ಚಿತ್ತಸ್ವಾಸ್ಥ್ಯತೆ ತಪ್ಪಿ ತನ್ನ ಕೆಲಸಗಳನ್ನು ನಿರ್ವಹಿಸಿಕೊಳ್ಳಲಿಕ್ಕೆ ಅಸಮರ್ಥನಾಗಿದ್ದದ್ದು ಪರಿಹಾರವಾಯಿತೆಂತ ತೀರ್ಮಾನವಾದರೆ, ಸದರೀ ಕೋರ್ಟಿನವರು ಅವನ ಆಸ್ತಿಯನ್ನು ಅವನಿಗೆ ಒಪ್ಪಿಸುವಂತೆ ಹುಕುಂ ಮಾಡತಕ್ಕದ್ದು, ಮತ್ತು ಅಂಥಾ ಹುಕುಂ ಕಡೇದಾದ್ದಾಗಿ ಇರತಕ್ಕದ್ದು.

ಹುಕುಮುಗಳಮೇಲೆ ಅಪೀಲು ಉಂಟು.

24. ಇದರಲ್ಲಿ ಅನ್ಯಥಾ ವಿಧಿಸಲ್ಪಟ್ಟಲ್ಲಿ ಹೊರ್ತು ಈ ರೆಗ್ಯುಲೇಷನಿನ ಮೇರಿಗೆ ಡಿಸ್ಟ್ರಿಕ್ಟ್ ಕೋರ್ಟಿನವರಿಂದಾದರೂ ಅಥವಾ ಅವರ ಕೆಳಗಿನ ಕೋರ್ಟಿನವರಿಂದಾದರೂ ಮಾಡಲ್ಪಡುವ ಸಮಸ್ತ ಹುಕುಂಗಳೂ, ಚಿಲ್ಲರೆ ಮೊಕದ್ದಮೆಗಳಲ್ಲಿ ಅಪ್ಪೀಲನ್ನು ಕುರಿತು ಜಾರಿಯಲ್ಲಿರುವ ನೇಮಗಳ ಪ್ರಕಾರ, ಅಪ್ಪೀಲಿಗೆ ಗುರಿಯಾಗಿರತಕ್ಕದ್ದು.

ನೇಮಗಳನ್ನು ವಿಧಿಸಲು ಚೀಫ್ ಕೋರ್ಟಿನವರಿಗೆ ಅಧಿಕಾರ.

25. ಈ ರೆಗ್ಯುಲೇಷನಿನ ನಿಯಮಗಳನ್ನು ಜಾರಿಯಲ್ಲಿ ತರುವ ಬಗ್ಯೆ, ಕೋರ್ಟುಗಳ ಉಪದೇಶಕ್ಕೋಸ್ಕರ ಈ ರೆಗ್ಯುಲೇಷನಿಗೆ ವಿರೋಧವಿಲ್ಲದಂತೆ ಚೀಫ್ ಕೋರ್ಟಿನವರು ಆಗಿಂದಾಗ್ಯೆ ಸರ್ಕಾರಿ ಗೆಜೆಟ್ಟಿನಲ್ಲಿ ಇಸ್ತಿಹಾರು ಮೂಲಕ ನೇಮಗಳನ್ನು ನಿರ್ಣಯಿಸಬಹುದು.

ಸಿವಿಲ್ ಪ್ರೊಸೀಡ್ಯೂರ್ ಕೋಡಿನ 463ನೆ ಪ್ರಕರಣದ ತಿದ್ದುಪಾಟು.

26. ಸಿವಿಲ್ ಪ್ರೊಸೀಡ್ಯೂರ್ ಕೋಡಿನ 463ನೇ ಪ್ರಕರಣದಲ್ಲಿ, "1874ನೇ ವರುಷದ ಜುಲೈ 31ನೇ ತಾರೀಖು 141ನೇ ನಂಬರಿನ ಲೇಟ್ ಚೀಫ್ ಕಮ್ಮಿಷನರವರ ಇಸ್ತಿಹಾರಿನೊಡನೆ ಪ್ರಕಟಿಸಲ್ಪಟ್ಟ ಚಿತ್ತಸ್ವಾಸ್ಥ್ಯತೆಯಿಲ್ಲದ ಮನುಷ್ಯರಿಗೆ ಸಮ್ಮಂಧವಾದ ನೇಮಗಳು" ಎಂಬ ಪದಗಳಿಗೂ ಸಂಖ್ಯೆಗಳಿಗೂ ಬದಲಾಗಿ, "190 ನೇ ವರುಷದ ಮೈಸೂರು ಲೂನಸಿ ರೆಗ್ಯುಲೇಷನು" ಎಂಬ ಪದಗಳನ್ನು ಮತ್ತು ಸಂಖ್ಯೆಗಳನ್ನು ಇಡತಕ್ಕದ್ದು.

21—11—03. ಕೆ. ಎಸ್. ಸಿ.

ಮೈಸೂರು ಸೀಮೆಯ ಹುಚ್ಚರ ವಿಷಯವಾದ ಮಸ್ವಿದ ರೆಗ್ಯುಲೇಷನ್.

ಈ ರೆಗ್ಯುಲೇಷನಿನ ಉದ್ದೇಶಗಳು ಮತ್ತು ಕಾರಣಗಳು ಇವುಗಳ ವಿವರ.

ಮೈಸೂರು ಸೀಮೆಯಲ್ಲಿರುವ ಹುಚ್ಚುತನ ಮತ್ತು ಹುಚ್ಚನ ಸೊತ್ತುಗಳು—ಇವುಗಳ ಸಮ್ಮಂಧವಾಗಿರುವ ಕಟ್ಟಳೆಯು, ಗವರ್ನಮೆಂಟ್ ಆಫ್ ಇಂಡಿಯ ಫಾರಿನ್ ಡಿಪಾರ್ಟ್ಮೆಂಟಿನ 1872ನೇ ವರುಷದ ಏಪ್ರಿಲ್ 25ನೇ ತಾರೀಖು 75—J, ನಂಬರಿನ ಇಸ್ತಿಹಾರ್ ಜೊತೆಯಲ್ಲಿ ಪ್ರಕಟಿಸಲ್ಪಟ್ಟ ನಿಯಮಗಳ ಪೈಕಿ 22ನೇ ನಿಯಮದಲ್ಲಿ ಅಡಗಿರುತ್ತೆ. ಈ ನಿಯಮದಲ್ಲಿ ಏರ್ಪಡಿಸಿರುವದರ ಫಲಿತಾಂಶವೇನಂದರೆ:—ಹುಚ್ಚರಾಗಿ ಎಣಿಸಲ್ಪಟ್ಟ ಜನಗಳ ಬುದ್ಧಿಯು ಯಾವ ಸ್ಥಿತಿಯಲ್ಲಿದೆ ಎಂಬುವದನ್ನು ವಿಚಾರಿಸಿ ಅರಿಯುವ ಬಗ್ಯೆ ಕೋರ್ಟುಗಳು 1858 ವರುಷದ XXXVನೇ ನಂಬರಿನ ಆಕ್ಟಿನ ನಿಯಮಗಳನ್ನು ಅನುಸರಿಸಬೇಕೆಂಬುವದಲ್ಲದೆ ಹುಚ್ಚರ ದೇಹ ಸಂರಕ್ಷಣೆಯು ಮತ್ತು ಅವರ ಸೊತ್ತುಗಳ ನಿರ್ವಾಹದ ವಿಷಯಗಳಲ್ಲಿ ಮೈನರು (ಅಪ್ರಾಪ್ತವಯಸ್ಕರು) ಗಳಿಗೆ ಸಮ್ಮಂಧಪಟ್ಟ 1872 ವರುಷದ ನಿಯಮಗಳಂತೆ ನಡಿಸಬೇಕೆಂಬುವದು—ಇದಾಗಿರುತ್ತೆ.

ಈಚೇಲಿ ಸೂಚಿಸಿರುವ ನಿಯಮಗಳಿಗೆ ಬದಲಾಗಿ, ಸಂರಕ್ಷಕರನ್ನು ಮತ್ತು ಸಂರಕ್ಷಣೆಯಲ್ಲಿರುವವರನ್ನು ಕುರಿತ 1890ನೆ ವರುಷದ 8ನೇ ನಂಬರಿನ ಆಕ್ಟಿನ ಆಧಾರದ ಮೇಲೆ ಒಂದು ರೆಗ್ಯುಲೇಷನ್ ಕ್ಷಿಪ್ರದಲ್ಲಿ ನಿರ್ಣಯಿಸಲ್ಪಡುತ್ತೆ. ಈ ರೆಗ್ಯುಲೇಷನಿನ ಪಟ್ಟಿಯಲ್ಲಿ, "22ನೇ ನಿಯಮ ವಿನಹ ಮತ್ತು 22ನೇ ನಿಯಮದಂತೆ ಮಾಡಲ್ಪಟ್ಟ ಹುಕುಮುಗಳಿಗೆ 23 ನಿಯಮವು ಎಷ್ಟುಮಟ್ಟಿಗೆ ಸಮ್ಮಂಧಪಡುತ್ತೊ ಅದು ವಿನಹ ಮತ್ತು 22ನೆ ನಿಯಮವನ್ನು ಜಾರಿಯಲ್ಲಿ ತರುವ ಬಗ್ಯೆ ಎಷ್ಟುಮಟ್ಟಿಗೆ ಅವಶ್ಯವಿರಬಹುದೋ ಅದು ವಿನಹ, ಮಿಕ್ಕ 1872ನೇ ವರುಷದ ಎಲ್ಲಾ ನಿಯಮಗಳು ರದ್ದುಮಾಡಲ್ಪಡುತ್ತವೆ."

ಆ ವಿನಹಾಯಿಸಲ್ಪಟ್ಟ ನಿಯಮಗಳನ್ನು ಕೂಡ ರದ್ದು ಮಾಡಿ, 1858ನೇ ವರುಷದ XXXVನೇ ನಂಬರಿನ ಆಕ್ಟಿನಂತೆ, ಪ್ರತ್ಯೇಕಕರವಾಗಿಯು ಮತ್ತು ಸಮ್ಮಂಧಪಟ್ಟ ವಿಷಯಗಳೆಲ್ಲಾ ಅಡಗಿಸಿಕೊಂಡದ್ದಾಗಿಯು ಇರುವ ಒಂದು ರೆಗ್ಯುಲೇಷನನ್ನು ನಿರ್ಣಯಿಸಲು ಈಗ ಉದ್ದೇಶಿಸಲ್ಪಟ್ಟಿರುತ್ತೆ. ಈ ರೆಗ್ಯುಲೇಷನಿನಲ್ಲಿ ಹುಚ್ಚುತನ ಸ್ಥಿರಪಡಿಸುವ ವಿಷಯವು ಮತ್ತು ಹುಚ್ಚರ ಸೊತ್ತುಗಳನ್ನು ನಿರ್ವಹಿಸುವ ವಿಷಯವು ವ್ಯವಹರಿಸಲ್ಪಡುತ್ತವೆ.

2. ರೆಗ್ಯುಲೇಷನಿನ ನಿಯಮಗಳ ಪೈಕಿ, 3 (2) ನೇ ಮತ್ತು 26ನೇ ಪ್ರಕರಣಗಳನ್ನು ಮಾತ್ರ ವಿವರಿಸುವದು ಅಗತ್ಯ ತೋರಿಬರುತ್ತೆ.

3 (2) ನೇ ಪ್ರಕರಣ.—ಡಿಸ್ಟ್ರಿಕ್ಟು ಕೋರ್ಟಿನ ಕೆಳಗಿರುವ ಕೋರ್ಟುಗಳಿಗೆ, 10ನೇ ಪ್ರಕರಣದಂತೆ ವಿಚಾರಣೆ ಮಾಡಲು ಅಧಿಕಾರ ಕೊಡಲ್ಪಟ್ಟ ವಿಧಾನದಲ್ಲಿ ಹೊರತು ಬೇರೆ ರೀತಿಯಾಗಿ ಹುಚ್ಚು ತನದ ವಿಷಯಗಳಲ್ಲಿ ವಿಚಾರಣೆ ಮಾಡುವ ಅಧಿಕಾರವನ್ನು ಕೊಡುವದು ಅಯುಕ್ತವಾಗಿ ಎಣಿಸಲ್ಪಟ್ಟಿರುತ್ತೆ. ಆದಕಾರಣ ಇದಕ್ಕೆ ಸರಿಬೀಳುವ ಬ್ರಿಟಿಷ್ ಇಂಡಿಯನ್ ಆಕ್ಟಿನಂತೆ "ಡಿಸ್ಟ್ರಿಕ್ಟ್ ಕೋರ್ಟು" ಎಂಬುವದರ ಅರ್ಥವನ್ನು ಒಂದು ಡಿಸ್ಟ್ರಿಕ್ಟಿನಲ್ಲಿ ಸಿವಿಲ್ ಮೂಲಾಧಿಕಾರವನ್ನು ಚಲಾಯಿಸುವ ಮುಖ್ಯವಾದ ಕೋರ್ಟೆಂದು ನಿಬಂಧಿಸಿರುತ್ತೆ.

26ನೇ ಪ್ರಕರಣ.—ಸಿವಿಲ್ ಪ್ರೊಸೀಡ್ಯೂರ್ ಕೋಡಿನಲ್ಲಿ 1858ನೇ ವರುಷದ XXXVನೇ ನಂಬರಿನ ಆಕ್ಟಿಗೆ ಇರುವ ದಾಖಲೆಯು, "1874ನೇ ವರುಷದ ಜುಲೈ ತಿಂಗಳು 31ನೇ ತಾರೀಖು 141ನೇ ನಂಬರಿನ ಕಳದ ಚೀಫ್ ಕಮ್ಮಿಷನರ ಇಸ್ತಿಹಾರೊಡನೆ ಪ್ರಕಟಿಸಲ್ಪಟ್ಟ ಹುಚ್ಚರ ಸಮ್ಮಂಧವಾದ ನಿಯಮಗಳಿಗೆ" ದಾಖಲೆಯಾಗಿದೆ ಎಂದು, 1884ನೇ ವರುಷದ 11ನೇ ನಂಬರಿನ ರೆಗ್ಯುಲೇಷನಿನ 40ನೇ ಪ್ರಕರಣದಲ್ಲಿ ತಪ್ಪಾಗಿ ಬದಲಾಯಿಸಲ್ಪಟ್ಟಿತು. 1858ನೇ ವರುಷದ ಇಂಡಿಯನ್ ಲೂನಟಿಕ್ ಅಸೈಲಂ ಆಕ್ಟಿಗೆ ಸರಿಬೀಳುವ ಈ ನಿಯಮಗಳು, "ಮೈಸೂರು ಸೀಮೆಯಲ್ಲಿ ಹುಚ್ಚರನ್ನು ಶಾಲೆಗಳಲ್ಲಿ ಕರಕೊಳ್ಳೋಣ ಮತ್ತು ಕಾವಲಿಯಲ್ಲಿಡೋಣ ಈ ಬಗ್ಯೆ ಆದ ನಿಯಮಗಳಾಗಿ" ಇರುತ್ತವೆ. ಅವುಗಳಲ್ಲಿ, ದುರ್ಬಲ ಮನಸ್ಕರಾಗಿರುವರೆಂದು ಎಣಿಸಲ್ಪಟ್ಟವರನ್ನು ಹುಚ್ಚರೆಂದು ನಿರ್ಣಯಿಸಲು ಅವಕಾಶವಿರುವದಿಲ್ಲವು. ಆ ತಪ್ಪಾದ ದಾಖಲೆಗೆ ಬದಲಾಗಿ ಈ ರೆಗ್ಯುಲೇಷನಿಗೆ ದಾಖಲೆ ಮಾಡುವಹಾಗೆ ಈಗ ಉದ್ದೇಶಿಸಲ್ಪಟ್ಟಿರುತ್ತದೆ.

21—11—03.

ಕೆ. ಎಸ್. ಚಂದ್ರಶೇಖರ ಅಯ್ಯರ್,

ಮೈಸೂರ ಗೆಜೆಟ್.

ನಂ. 39.] ಸರ್ಕಾರದಿಂದ ಪ್ರಾಮಿಷ್ ಆದ್ದು. [ಸಂ. 7.

ಬೆಂಗಳೂರು, ಗುರುವಾರ, ಫೆಬ್ರುವರಿ ತಾ॥ 18, ಸ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

ವಿಷಯಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಇಂಟೆಂಡೆಂಟರು, ಕಾಂಪ್‌ಟ್ರೋಲರ್‌ವರು, ಪಬ್ಲಿಕ್ ವರ್ಕಸ್ ಆಫಿಸರಗಳು, ಫಾರೆಸ್ಟು, ರಜಿಸ್ಟ್ರೇಷನ ವ ಯಜ್ಯುಕೇಷನ ಇನ್ಸ್‌ಪೆಕ್ಟರಿ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ ಸೂಪರ್ಇಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದಪತ್ರಗಳು — ಇಲ್ಲಾ.

1ನೆ ಭಾಗ

ಮೈಸೂರು ಸೀಮೆಯ ಶ್ರೀಮನ್ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 2ನೆ ಫೆಬ್ರುವರಿ 1904.

ನಂ. ಲೋ. ಬೋ. ಪಿ. 1013, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ ಅನುಸರಿಸಿ 1898ನೆ ಫೆಬ್ರುವರಿ 10ನೆ ಮಾರ್ಕ್ಯಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರು ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನಗಳ ಉದ್ದೇಶಗಳಿಗೋಸ್ಕರ ತುಮಕೂರು, ಕಡೂರು ವ ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ತುಮಕೂರು ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಗೂಳೂರು	... ತುಮಕೂರು	5. ವೀರಪ್ಪಾನಹಳ್ಳಿ	... ತುಮಕೂರು
2. ಬಳ್ಳಾಪುರ	... ಡಿಟೋ	6. ತಿಪಟೂರು	... ತಿಪಟೂರು
3. ದಿಬ್ಬೂರು	... ಡಿಟೋ	7. ಹರನಸಂದ್ರ	... ಗುಬ್ಬಿ
4. ಕೋರಂಗಿ	... ಡಿಟೋ		

ಕಡೂರು ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಚಿಕ್ಕಮಗಳೂರು ಟವನ	... ಚಿಕ್ಕಮಗಳೂರು	3. ಯರದಹಂಕಲು	.. ತರೀಕೆರೆ
2. ಮಾವಿನಕೆರೆ	.. ಡಿಟೋ		

ಶಿವಮೊಗ್ಗ ಡಿಸ್ಟ್ರಿಕ್ಟು.

1. ಸ್ವೈದರಕಲ್ಲಹಳ್ಳಿ	... ಶಿವಮೊಗ್ಗ	15. ಸುರಹೊನ್ನೆ	.. ಹೊನ್ನಾಳಿ
2. ಹರಕೆರೆ	.. ಡಿಟೋ	16. ಹೊಸಹಳ್ಳಿ	.... ಡಿಟೋ
3. ಪ ಂಗೋಟ	.. ಡಿಟೋ	17. ಹುಣಸಗಟ್ಟೆ	.. ಡಿಟೋ
4. ಯಡಹಳ್ಳಿ	.. ಡಿಟೋ	18. ಬೆಲೂರು	.. ಚೆನ್ನಗಿರಿ
5. ಕೂಡಿ	... ಡಿಟೋ	19. ಕಾರಕಟ್ಟೆ	.. ಡಿಟೋ
6. ಕಲ್ಲಿಹಾಳು	.. ಡಿಟೋ	20. ಮಲ್ಲಾಪುರ	.. ಡಿಟೋ
7. ಹೊಲೆಜೇನವಳ್ಳಿ	... ಡಿಟೋ	21. ಲಿಂಗದಹಳ್ಳಿ	... ಡಿಟೋ
8. ಇಟ್ಟಿಗೆಹಳ್ಳಿ	.. ಡಿಟೋ	22. ಚಿಕ್ಕ ಕೋಗಲೂರು	. ಡಿಟೋ
9. ನವಲೆ	... ಡಿಟೋ	23. ಅಸ್ತಪಾನಹಳ್ಳಿ	.. ಡಿಟೋ
10. ಸಂತೆಕಡೂರು	... ಡಿಟೋ	24. ಸೋಮಲಾಪುರ	.. ಡಿಟೋ
11. ಕುಂಸಿ	.. ಕುಂಸಿ ಸಬ್ ತಾಲ್ಲೂಕು	25. ಚಿಕ್ಕ ಗಂಗೂರು	.. ಡಿಟೋ
12. ಪುರ	.. ಸೊರಬ	26. ಪಾಂಡವಗೆರೆ	.. ಡಿಟೋ
13. ಬೆನ್ನೂರು	.. ಡಿಟೋ	27. ಸಾಗರ	... ಸಾಗರ
14. ನಿರ್ಗುಂಡಿ	... ಹೊನ್ನಾಳಿ		

ತಾರೀಖು 30ನೆ ಜನವರಿ 1904.

ನಂ. ಲೋ. ಜೋ. ಪಿ. 977, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರಗ್ಯುಲೇಷ॰ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಕು॰ 9383—ಮಿ. ಫೈ. 21–96ನೆ ಮತ್ತು 9384—ಮಿ. ಫೈ. 21–96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರಗ್ಯುಲೇಷನ್‌ಗಳ ಉದ್ದೇಶದಲ್ಲಿಗೋಸ್ಕರ ಬೆಂಗಳೂರು, ತುಮಕೂರು ವ ಕೋಲಾರ ಡಿಸ್ಟ್ರಿಕ್ಟುಗಳಲ್ಲಿರುವ ಇದ್ದಡಿ ಕಂಡ ಸ್ಥಳಗಳು ರೋಗತಗಲಿದ್ದ ಪ್ರದೇಶಗಳಾಗಿ ಎಣಿಸಲ್ಪಡ ತಕ್ಕದ್ದು:—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಚತ್ರಪಾಳ್ಯ	.. ಬೆಂಗಳೂರು	23. ಮದಗೊಂಡಹಳ್ಳಿ	... ದೊಡ್ಡಬಳ್ಳಾಪುರ
2. ಆಗರ	.. ಡಿಟೋ	24. ತಿಮ್ಮಸಂದ್ರ	.... ಡಿಟೋ
3. ಯಸವಂತಪುರ	.. ಡಿಟೋ	25. ಸಾರನಹಳ್ಳಿ	.... ಡಿಟೋ
4. ಯಲಹಂಕ	.. ಡಿಟೋ	26. ವ್ಯಾದಿನಹಳ್ಳಿ	.. ಡಿಟೋ
5. ದೊಡ್ಡ ನಾಗಮಂಗಲ	.. ಡಿಟೋ	27. ದೊಡ್ಡ ರಾಯಪ್ಪನಹಳ್ಳಿ	.. ಡಿಟೋ
6. ಮತ್ತಿಕೆರ	.. ಡಿಟೋ	28. ನೆಲಮಂಗಲ	... ನೆಲಮಂಗಲ
7. ಮಡಿವಾಳ	.. ಡಿಟೋ	29. ಗಬೂರು	.. ಡಿಟೋ
8. ಕೈಕೊಂಡಹಳ್ಳಿ	.. ಡಿಟೋ	30. ಹೊಸಹಳ್ಳಿ	... ಡಿಟೋ
9. ಹೆಬ್ಬಾಳ	.. ಡಿಟೋ	31. ಸೋಲದೇವನಹಳ್ಳಿ	.. ಡಿಟೋ
10. ಜರಗನಹಳ್ಳಿ	.. ಡಿಟೋ	32. ದಾಸನಪುರ	... ಡಿಟೋ
11. ಆತಗುಡಿ	.. ಡಿಟೋ	33. ಕಾನಕಾನಹಳ್ಳಿ	... ಕಾನಕಾನಹಳ್ಳಿ
12. ಬ್ಯಾಕಹಳ್ಳಿ	... ಡಿಟೋ	34. ಚೆನ್ನಪಟ್ಣ	.. ಚೆನ್ನಪಟ್ಣ
13. ಬಿದರಗೆರೆ	... ಹೊಸಕೋಟೆ	35. ಚಕ್ಕೆರೆ	... ಡಿಟೋ
14. ಮುತ್ತಸಂದ್ರ	.. ಡಿಟೋ	36. ಹೊಸಹಳ್ಳಿ	.. ಡಿಟೋ
15. ಸೂಲಿಬೆಲೆ	... ಡಿಟೋ	37. ಬ್ಯಾಡರಹಳ್ಳಿ	.. ಡಿಟೋ
16. ಕೊಂಬಲಿಗಾನಹಳ್ಳಿ	.. ಡಿಟೋ	38. ಇತ್ತಂಗೂರು	.. ಆನೇಕಲ್
17. ಕಾಜೆ ಹೊಸಹಳ್ಳಿ	.. ಡಿಟೋ	39. ಚೂಡಮ್ಮಸಂದ್ರ	... ಡಿಟೋ
18. ದೊಡ್ಡ ನಲ್ಲೂರಹಳ್ಳಿ	.. ಡಿಟೋ	40. ಮುತ್ತನಲ್ಲೂರು	... ಡಿಟೋ
19. ತಿರಸಿಹಳ್ಳಿ	.. ದೊಡ್ಡಬಳ್ಳಾಪುರ	41. ಬಿದರಗೆರೆ	... ಡಿಟೋ
20. ಚಿಕ್ಕ ಮಂಕನಾಲ	... ಡಿಟೋ	42. ಸಿಡಿ ಹೊಸಕೋಟೆ	... ಡಿಟೋ
21. ನಾರಣಹಳ್ಳಿ	.... ಡಿಟೋ	43. ಭದ್ರಾಪುರ	.. ಡಿಟೋ
22. ಗಂಗಾಧರಪುರ	.. ಡಿಟೋ	44. ಬಳ್ಳಪುರ	.. ದೇವನಹಳ್ಳಿ

ತುಮಕೂರು ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಅಂತರಸನಹಳ್ಳಿ	.. ತುಮಕೂರು	5. ಮಜ್ಜಗೆಕೆಂಪನಹಳ್ಳಿ	... ತುಮಕೂರು
2. ಕಾಪ್ಪೂರು	... ಡಿಟೋ	6. ಗೋಪಗೌಡನಪಾಳ್ಯ	.. ತಿಪಟೂರು
3. ಸಿಂಗಾಪುರ	... ಡಿಟೋ	7. ಅಲ್ಲಬೂರು	.. ಡಿಟೋ
4. ಮಾಚನಪುರ	.. ಡಿಟೋ		

ಕೋಲಾರ ಡಿಸ್ಟ್ರಿಕ್ಟು.

1. ಸೆಟ್ಟಿವಾರಹಳ್ಳಿ	.... ಚಿಕ್ಕಬಳ್ಳಾಪುರ	10. ಕದಿರೇನಹಳ್ಳಿ	.. ಗೋರಿಬಿದನೂರು
2. ಹಿಮಾಕಲಹಳ್ಳಿ	... ಡಿಟೋ	11. ವಿದುರಾಶ್ವತ್ಥ	.. ಡಿಟೋ
3. ರಾಮಸಂದ್ರ	.. ಡಿಟೋ	12. ತೊಂಡೇಭಾವಿ	... ಡಿಟೋ
4. ಜೋದಗಾನಹಳ್ಳಿ	.. ಡಿಟೋ	13. ಆವಣಿ	... ಮುಳಬಾಗಲ್
5. ತಿನ್ನಕಲ್	.. ಚಿಂತಾಮಣಿ.	14. ಕೊಟಿಗಾನಹಳ್ಳಿ	ಕೋಲಾರ
6. ರಾಯಪಲ್ಲಿ	.. ಡಿಟೋ	15. ಅಬ್ಲೂಡು	... ಸಿಡ್ಲಘಟ್ಟ
7. ದೊಡ್ಡ ಕುಂಟೂರು	... ಮಾಲೂರು	16. ಶ್ರೀನಿವಾಸಪುರ ಟವ॰	.. ಶ್ರೀನಿವಾಸಪುರ
8. ದ್ಯಾವಸಂದ್ರ	.. ಡಿಟೋ	1 . ನಂಬಿಹಳ್ಳಿ	.. ಡಿಟೋ
9. ಚಿಜ್ಜಾಪುರ	.. ಡಿಟೋ		

ತಾರೀಖು 3ನೆ ಫೆಬ್ರವರಿ 1904.

ನಂ. ಲೋ. ಜೋ. ಪಿ. 1026, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಾತ್ರೆಗೆ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಕೊಡಗು ಸೀಮೆಯ ಚೀಫ್ ಕಮಿಷನರವರು ಅಡ್ಡೀ ಪಡಿಸುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ತಾರೀಖು.		ಅಥಾರಿಟಿ.
			ಯಾವ ಲಾಗಾಯತು.	ಯಾವ ವರಿವಿಗೆ.	
ಮಹಾ ಶಿವರಾತ್ರಿ ಉತ್ಸವದ ಕಾಲದಲ್ಲಿ ನಡೆಯುವ ಇರುಪ ಜಾತ್ರೆ.	ತಾ॥ ವಲ್ಗೇರಿ ಮುಕ್ಕೊಡ್ಲನಾಡಿನಲ್ಲಿನ ಗ್ರಾಮವಾದ ಕುಟ್ಟ	ಕೊಡಗಿನಲ್ಲಿರುವ ಕಿಗ್ಗತ್‌ನಾಡು	14—2—04	15—2—04	ಕೊಡಗು ಸೀಮೆಯ ಚೀಫ್ ಕಮಿಷನರವರ ಸೆಕ್ರೆಟೆರಿಯವರಿಂದ ತಲಪಿದ 1904ನೆ ಫೆಬ್ರವರಿ 3ನೆ ಮರ್ಕ್ಯಂ 215ನೆ ನಂಬರ ಲೆಟರ

ತಾರೀಖು 5ನೆ ಫೆಬ್ರವರಿ 1904.

ನಂ. ಲೋ. ಜೋ. ಪಿ. 1032, ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳಲ್ಲಿ ನಡೆಯುವ ಕೆಳಗೆ ನಮೂದು ಮಾಡಲ್ಪಟ್ಟ ಜಾತ್ರೆಗಳ ಸಂದರ್ಭದಲ್ಲಿ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಶ್ರೀಮನ್ಮಹಾರಾಜಾ ಸರ್ಕಾರದವರಿಗೆ ನಿಶ್ಚಯವಾಗಿರುವದರಿಂದ,

ಜಾತ್ರೆಯ ಹೆಸರು.	ಎಲ್ಲಿ ನಡೆಯುತ್ತದೆ.	ತಾಲ್ಲೂಕು.	ಯಾವ ಲಾಗಾಯತು.	ಯಾವ ವರಿವಿಗೆ.
ನಂದಿ ರಥೋತ್ಸವ	ನಂದಿ	ಚಿಕ್ಕಬಳ್ಳಾಪುರ	11—2—04	26—2—04
ಸಿಂಗ್ರೆಪಲ್ಲಿ ಶ್ರೀ ನರಸಿಂಹಸ್ವಾಮಿಯ ಜಾತ್ರೆ.	ಕೋತಗಲ್	ಚಿಂತಾಮಣಿ	2—3—04	4—3—04
ಶ್ರೀ ವೇಣುಗೋಪಾಲಸ್ವಾಮಿಯ ರಥೋತ್ಸವ.	ಉಳವಾಡಿ	ಡಿಟ್ಟೋ	10—3—04	12—3—04
ಶ್ರೀ ವೆಂಕಟರಮಣಸ್ವಾಮಿಯ ರಥೋತ್ಸವ.	ಆಲಂಗಿರಿ	ಡಿಟ್ಟೋ	31—3—04	2—4—04

ಸ್ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರ್ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, ಮೈಸೂರು ಸೀಮೆಯ ಶ್ರೀಮನ್ಮಹಾರಾಜಾ ಸರ್ಕಾರದವರು ಪ್ರತಿ ಒಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಿಗೆ ಬರುವದನ್ನು ಅಡ್ಡೀಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ಉತ್ಸವಗಳಿಗೆ ಯಾ ಜಾತ್ರೆಗೆ ಹೊರಡುವ ದರೋಬಸ್ತ್ ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 13ನೆ ಫೆಬ್ರವರಿ 1904.

ನಂ. ಲೋ. ಜೋ. ಪಿ. 1085, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಾತ್ರೆ ವ ಉತ್ಸವಗಳಿಗೆ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮದರಾಸು ಗವರ್ನ್‌ಮೆಂಟಿನವರು ಅಡ್ಡೀ ಪಡಿಸುತ್ತಾರೆ:—

ಉತ್ಸವದ ಹೆಸರು.	ಸ್ಥಳ.	ತಾಲ್ಲೂಕು	ಡಿಸ್ಟ್ರಿಕ್ಟು.	ತಾರೀಖು.		ಅಥಾರಿಟಿ.	ಷರಾ.
				ಯಾವ ಲಾಗಾಯತು.	ಯಾವ ವರಿವಿಗೆ.		
1. ವಳ್ಳೂರು ಕಾವು ಯಾ ಮತ್ತದೇವಸ್ಥಾನದ ಉತ್ಸವ ಮತ್ತು ಪರಿಸೆ	ಮಾನಂದವಾಡಿ ಮತ್ತು ಅದರ ಸಮೀಪದಲ್ಲಿ	ವೈನಾಡು	ಮಲಬಾರು	6—3—04	27—3—04	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಂಡಾರ್ಸ್‌ಮೆಂಟ ನಂ. 211-ಪಿ. ತಾ॥ 7-2-04	ಮಾನಂದವಾಡೀಗೆ ಯಾ ವಳ್ಳೂರು ಕಾವು ದೇವಸ್ಥಾನಕ್ಕೆ ಹೊರಡುವ ಜನಗಳು ವಾಪಸು ಕಳುಹಿಸಲ್ಪಡುವರು
2. ಕೋದಂಡರಾಮಸ್ವಾಮಿಯ ರಥೋತ್ಸವ	ಬೂದಿಗೊಟ್ಟೆ	ಹೊಸೂರು	ಸೇಲಂ	25—2—04	8—3—04	ಡಿಟ್ಟೋ ನಂ. 215-ಪಿ. ತಾ॥ 7-2-04	ಯಾತ್ರಾರ್ಥವಾಗಿ ಹೋಗುವದು ಅಡ್ಡೀ ಪಡಿಸಲ್ಪಟ್ಟಿರುತ್ತದೆ.
3. ಕೊಳ್ಳೂರು ರಥೋತ್ಸವ	ಕೊಳ್ಳೂರು	ಕುಂದಾಪುರ	ದಕ್ಷಿಣ ಕನ್ನಡ	26—2—04	10—3—04	ಡಿಟ್ಟೋ ನಂ. 213-ಪಿ., ತಾ॥ 7-2-04	

296

ತಾರೀಖು 13ನೆ ಫೆಬ್ರವರಿ 1904.

ನಂ. ಲೋ. ಬೋ. ಪಿ. 1086, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಉತ್ಸವಗಳಿಗೆ ಯಾತ್ರಾರ್ಥವಾಗಿ ಹೋಗುವದನ್ನು ಮದರಾಸು ಗವರ್ನಮೆಂಟನವರು ಅಡ್ಡೀಪಡಿಸಿರುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಥಾರಿಟಿ.
				ಯಾವ ಲಾಗಾಯತು.	ಯಾವ ವರಿವಿಗೆ.	
* 1. ಶ್ರೀ ಲಕ್ಷ್ಮೀ ನರಸಿಂಹಸ್ವಾಮಿಯ ಬ್ರಹ್ಮೋತ್ಸವ	ಕದಿರಿ	...	ಕಡಪಾ	19—2—04	10—3—04	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಂಡಾರ್ಸ್ಮೆಂಟ್ ನಂ. 224-ಪಿ., ತಾ|| 10-2-04
‡ 2. ಮಹಾ ಶಿವರಾತ್ರಿ ಉತ್ಸವ	ತಲಕೋಣ	ರೋಯಲ್ ಪಾಡ್	ಡಿಟೋ	7—2—04	17—2—04	ಡಿಟೋ

* ಸನ್ 1904ನೆ ಫೆಬ್ರವರಿ 4ನೆ ತಾರೀಖು ಮೈಸೂರು ಗೆಜೆಟ್ಟಿನ Iನೆ ಭಾಗದ 90ನೆ ಪುಟದಲ್ಲಿ ಛಾಯಿಸಿದ 1904ನೆ ಫೆಬ್ರವರಿ 2ನೆ ಮರ್ಕೂಂ ಲೋ. ಬೋ. ಪಿ. 1022ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿನ ಜಂಜರ್ 2ನೆ ನಂಬರನ್ನು ಮತ್ತು 1904ನೆ ಫೆಬ್ರವರಿ 11ನೆ ತಾರೀಖು ಮೈಸೂರು ಗೆಜೆಟ್ಟಿನ Iನೆ ಭಾಗದ 114ನೆ ಪುಟದಲ್ಲಿ ಛಾಯಿಸಿದ 1904ನೆ ಫೆಬ್ರವರಿ 3ನೆ ಮರ್ಕೂಂ ಲೋ. ಬೋ. ಪಿ. 1024ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿನ ಮೊದಲನೆಯ ಉತ್ಸವವನ್ನು ಇದು ರದ್ದುಪಡಿಸುತ್ತದೆ.

‡ ಸನ್ 1904ನೆ ಫೆಬ್ರವರಿ 4ನೆ ತಾರೀಖು ಮೈಸೂರು ಗೆಜೆಟ್ಟಿನ Iನೆ ಭಾಗದ 90ನೆ ಪುಟದಲ್ಲಿ ಛಾಯಿಸಿದ 1904ನೆ ಫೆಬ್ರವರಿ 2ನೆ ಮರ್ಕೂಂ ಲೋ. ಬೋ. ಪಿ. 1022ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿನ ಜಂಜರ್ 2ನೆ ನಂಬರನ್ನು ಇದು ರದ್ದುಪಡಿಸುತ್ತದೆ.

ತಾರೀಖು 13ನೆ ಫೆಬ್ರವರಿ 1904.

ನಂ. ಲೋ. ಬೋ. ಪಿ. 1087, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಇದರಡೀಕಂಡ ಉತ್ಸವಗಳಿಗೆ ಬರಲು ಉದ್ದೇಶಿಸಿರುವ ಜನಗಳಿಗೆ ಟಿಕೆಟ್ಟುಗಳು ಕೊಡುವದನ್ನು ಮದರಾಸು ಗವರ್ನಮೆಂಟನವರು ಅಡ್ಡೀಪಡಿಸುತ್ತಾರೆ:—

ಜಾತ್ರೆಯ ಉತ್ಸವದ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ಟಿಕೆಟ್ಟುಗಳು ವಿಕ್ರಯಿಸಲ್ಪಡದೆ ಇರುವ ತಾರೀಖುಗಳು ವ ಸ್ಟೇಷನುಗಳು.			ಅಥಾರಿಟಿ.
				ಯಾವ ಲಾಗಾಯತು.	ಯಾವ ವರಿವಿಗೆ.	ಸ್ಟೇಷನುಗಳು.	
* 1. ಶ್ರೀ ಲಕ್ಷ್ಮೀ ನರಸಿಂಹಸ್ವಾಮಿಯ ಬ್ರಹ್ಮೋತ್ಸವ	ಕದಿರಿ	...	ಕಡಪಾ	19—2—04	10—3—04	ದಕ್ಷಿಣ ಇಂಡಿಯನ್ ರೈಲ್ವೆಯಲ್ಲಿರುವ ಮುಲಕಲಚೆರುವು, ಕಾಳಸಮುದ್ರಂ, ಕದಿರಿ, ನಲ್ಲಚೆರುವು ಮತ್ತು ತನಕಲ್ಲು	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಂಡಾರ್ಸ್ಮೆಂಟ್ ನಂ. 224—ಪಿ., ತಾ|| 10-2-04
‡ 2. ಮಹಾ ಶಿವರಾತ್ರಿ ಉತ್ಸವ	ತಲಕೋಣ	ರೋಯಲ್ ಪಾಡ್	ಡಿಟೋ	7—2—04	17—2—04	ದಕ್ಷಿಣ ಇಂಡಿಯನ್ ರೈಲ್ವೆಯ ಧರ್ಮಾವರಂ ಪಕಲ ಸೆಕ್ಷನ್ನಲ್ಲಿರುವ ಮಂಗಲಂಪೇಟೆ, ಪುಲಿಚೆರ್ಲ ಮತ್ತು ಪಿಲೇರ್	ಡಿಟೋ

* 1. ಉತ್ತರ ಆರ್ಕಾಡ್, ಬಳ್ಳಾರಿ ವ ಅನಂತಪುರ ಡಿಸ್ಟ್ರಿಕ್ಟುಗಳಲ್ಲಿ ಟಿಕೆಟ್ಟುಗಳು ವಿಕ್ರಯಿಸುವದು ಅಡ್ಡೀಪಡಿಸಲ್ಪಟ್ಟಿರುತ್ತದೆ. 1904ನೆ ಫೆಬ್ರವರಿ 4ನೆ ತಾರೀಖು ಮೈಸೂರು ಗೆಜೆಟ್ಟಿನ Iನೆ ಭಾಗದ 90ನೆ ಪುಟದಲ್ಲಿ ಛಾಯಿಸಿದ 1904ನೆ ಫೆಬ್ರವರಿ 2ನೆ ಮರ್ಕೂಂ ಲೋ. ಬೋ. ಪಿ. 1022ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿನ ಜಂಜರ್ 2ನೆ ನಂಬರನ್ನು ಮತ್ತು 1904ನೆ ಫೆಬ್ರವರಿ 11ನೆ ತಾರೀಖು ಮೈಸೂರು ಗೆಜೆಟ್ಟಿನ Iನೆ ಭಾಗದ 114ನೆ ಪುಟದಲ್ಲಿ ಛಾಯಿಸಿದ 1904ನೆ ಫೆಬ್ರವರಿ 3ನೆ ಮರ್ಕೂಂ ಲೋ. ಬೋ. ಪಿ. 1024ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿನ ಮೊದಲನೇ ಉತ್ಸವವನ್ನು ಇದು ರದ್ದುಪಡಿಸುತ್ತದೆ.

‡ 2. ಸೇಲಂ, ಉತ್ತರ ಆರ್ಕಾಡ್, ಬಳ್ಳಾರಿ ವ ಅನಂತಪುರ ಡಿಸ್ಟ್ರಿಕ್ಟುಗಳಲ್ಲಿ ಟಿಕೆಟ್ಟುಗಳು ವಿಕ್ರಯಿಸುವದು ಅಡ್ಡೀಪಡಿಸಲ್ಪಟ್ಟಿರುತ್ತದೆ. 1904ನೆ ಫೆಬ್ರವರಿ 4ನೆ ತಾರೀಖು ಮೈಸೂರು ಗೆಜೆಟ್ಟಿನ Iನೆ ಭಾಗದ 90ನೆ ಪುಟದಲ್ಲಿ ಛಾಯಿಸಿದ 1904ನೆ ಫೆಬ್ರವರಿ 2ನೆ ಮರ್ಕೂಂ ಲೋ. ಬೋ. ಪಿ. 1022ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿನ ಜಂಜರ್ 1ನೆ ನಂಬರನ್ನು ಇದು ರದ್ದುಪಡಿಸುತ್ತದೆ.

ತಾರೀಖು 13ನೆ ಫೆಬ್ರುವರಿ 1904.

ನಂ. ಲೋ. ಬೋ. ಪಿ. 1088, ತುಮಕೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ಇರುವ ಇದರಡೀ ಕಂಡ ಸ್ಥಳಗಳಲ್ಲಿ ನಡೆಯುವ ಕೆಳಗೆ ನಮೂದು ಮಾಡಲ್ಪಟ್ಟ ರಥೋತ್ಸವಗಳ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯವು ಉಂಟೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಗೌರ್ನಮೆಂಟಿನವರಿಗೆ ನಿಷ್ಕರ್ಷೆಯಾಗಿರುವದರಿಂದ:—

ರಥೋತ್ಸವದ ಹೆಸರು.	ಸ್ಥಳ.	ತಾಲ್ಲೂಕು.	ತಾರೀಖು.	
			ಯಾವ ಲಾಗಾಯತು.	ಯಾವ ವರಿವಿಗೆ.
ತುಮಕೂರು ಡಿಸ್ಟ್ರಿಕ್ಟು.				
1. ಸಿದ್ಧಲಿಂಗೇಶ್ವರ ರಥೋತ್ಸವ ...	ಯಡಿಯೂರು ..	ಕುಣಿಗಲ್ ...	20—3—04	27—3—04
ಶಿವಮೊಗ್ಗಾ ಡಿಸ್ಟ್ರಿಕ್ಟು.				
2. ಶ್ರೀ ಅಶ್ವತ್ಥನಾರಾಯಣ ದೇವರ ರಥೋತ್ಸವ.	ಮಹಿಷಿ ..	ತೀರ್ಥಹಳ್ಳಿ	29—3—04	2—4—04

ಸನ್ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ 2ನೆ ನಂಬರ್ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಗವರ್ನಮೆಂಟಿನವರು, ಪ್ರತಿ ಒಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಮೇಲ್ಕಂಡ ಸ್ಥಳಗಳಿಗೆ ಪ್ಲೇಗ್ ರೋಗ ಪ್ರದೇಶಗಳಿಂದ ಜನಗಳು ಬರುವದನ್ನು ಅಡ್ಡೀಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ರಥೋತ್ಸವಗಳಿಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 13ನೆ ಫೆಬ್ರುವರಿ 1904.

ನಂ. ಲೋ. ಬೋ. ಪಿ. 1090, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ರೋಗ ತಗಲಿದ ಪ್ರದೇಶಗಳಾಗಿ ಈಗಿಂದಾಗ್ಯೆ ಪ್ರಸಿದ್ಧ ಪಡಿಸಲ್ಪಟ್ಟ ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗವಿಲ್ಲದೆ ಇರುವದ್ದರಿಂದ ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ:—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಊರಕೆರೆ ..	ತುಮಕೂರು	13. ಲಕ್ಕೇನಹಳ್ಳಿ	ತುಮಕೂರು
2. ಬೆಳಗುಂಬ ...	ಡಿಟೋ	14. ಗೂಳಹರವಿ ...	ಡಿಟೋ
3. ಶೆಟ್ಟಿಹಳ್ಳಿ ..	ಡಿಟೋ	15. ಬಿನ್ನಿ ಹನುಮಾನಪಾಳ್ಯ ..	ಡಿಟೋ
4. ಹೊನ್ನುಡಿಕೆ ...	ಡಿಟೋ	16. ಕಲ್ಲುಮಡ್ಡರಹಟ್ಟಿ ...	ಡಿಟೋ
5. ಕಳಸೆಗೌಡ್ನ ಪಾಳ್ಯ	ಡಿಟೋ	17. ದಾನಪ್ಪಶಾಸ್ತ್ರಿಪಾಳ್ಯ ...	ಡಿಟೋ
6. ಪಾತಗೋನಹಳ್ಳಿ ..	ಡಿಟೋ	18. ಹಾರೇನಹಳ್ಳಿ ..	ಡಿಟೋ
7. ರಾಮದಾಸಪ್ಪನ ಪಾಳ್ಯ ..	ಡಿಟೋ	19. ಗುಲಗಂಜಿಹಳ್ಳಿ ..	ಡಿಟೋ
8. ಮಾರನಾಯಿಕನಪಾಳ್ಯ ..	ಡಿಟೋ	20. ಕೈದಳ ..	ತಿಪಟೂರು
9. ಬೂಚನಹಳ್ಳಿ ..	ಡಿಟೋ	21. ನಾಗರಗಟ್ಟೆ ...	ಡಿಟೋ
10. ಬೊಮ್ಮನಹಳ್ಳಿ ...	ಡಿಟೋ	22. ವಿಗ್ನಸಂತೆ	ಡಿಟೋ
11. ಪುರ್ಲಕುಂಟೆ ..	ಡಿಟೋ	23. ಅರಚನಹಳ್ಳಿ	ಡಿಟೋ
12. ಮಲ್ಲಸಂದ್ರ ..	ಡಿಟೋ	24. ಅಕ್ಕೇನಹಳ್ಳಿ ...	ಕೊರಟಗೆರೆಸಬ್ ತಾ||

ತಾರೀಖು 13ನೆ ಫೆಬ್ರುವರಿ 1904.

ನಂ. ಲೋ. ಬೋ. ಪಿ. 1092, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರುವರಿ 10ನೆ ಮಾರ್ಕ್ಕಂ 9383—ಮಿ. ಫೈ. 21-96 ಮತ್ತು 96ನೆ ಮತ್ತು 9384—ಮಿ. ಫೈ. 21-96ನ ನಂಬರು ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಪ್ರದ್ದೇಶಗಳಿಗೋಸ್ಕರ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದ್ದರಡಿ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1 ಕಮಂಡಲಗುಂಡಿ ..	ಜಗಲೂರು	4. ಗೋಣಿವಾಡ ..	ದಾವಣಿಗೆರೆ
2. ಕುರುಬರಹಟ್ಟಿ ..	ಚಿತ್ರದುರ್ಗ	5. ಮಳೆ ಬೆನ್ನೂರು ..	ಹರಿಹರ ಸಬ್ ತಾಲ್ಲೂಕ್
3. ಕಂದಗಾಲ್ ..	ದಾವಣಿಗೆರೆ	6. ಜಗನೂರ ಹಟ್ಟಿ ..	ಚಳ್ಳಕೆರೆ

ತಾರೀಖು 15ನೆ ಫೆಬ್ರವರಿ 1904.

ನಂ. ಲೋ. ಬೋ. ಪಿ. 1097, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮುರ್ಕಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಸೇರ್‍ನಾಪುರ	.. ತುಮಕೂರು	6. ತುಮಕೂರು ಹೋಬಳಿಯ ತಿಮ್ಮಲಾಪುರ ...	ತುಮಕೂರು
2. ಕಮಲಾಪುರ ...	ಡಿಟೋ	7. ಚಿಕ್ಕತೊಟ್ಲುಗೆರೆಗೆ ಸೇರಿದ ಉಪ್ಪರಪಾಳ್ಯ ...	ಡಿಟೋ
3. ಬೆಳ್ಳಾವಿ ಹೋಬಳಿಯ ತಿಮ್ಮಲಾಪುರ ..	ಡಿಟೋ	8. ಚೊಡಿಗೆರೆ ...	ಗುಬ್ಬಿ
4. ನಾವಲಹಳ್ಳಿ ...	ಡಿಟೋ	9. ಹಿಂಡಿಸಗೆರೆ ..	ಡಿಟೋ
5. ಮುರಲೇಸಹಳ್ಳಿಗೆ ಸೇರಿದ ಗೊಲ್ಲರಹಟ್ಟಿ ..	ಡಿಟೋ	10. ಮಲ್ಲೆಕಾವು	ಕೊರಟಗೆರೆ ಸಬ್ ತಾಲ್ಲೂಕು

ತಾರೀಖು 16ನೆ ಫೆಬ್ರವರಿ 1904.

ನಂ. ಲೋ. ಬೋ. ಪಿ. 1108, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮುರ್ಕಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಹಾಸನದ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಅರಸೀಕೆರೆ ..	ಅರಸೀಕೆರೆ	10. ಹಂಗರಹಳ್ಳಿ ...	ಹೊಳೆನರಸೀಪುರ
2. ಕರಗುಂಡ .	ಡಿಟೋ	11. ದ್ಯಾವಲಾಪುರ ..	ಹಾಸನ
3. ಶಾಲ್ಗೆರೆ ..	ಡಿಟೋ	12. ಗುಡ್ಡೆನಹಳ್ಳಿ ...	ಡಿಟೋ
4. ಬಸವನಹಳ್ಳಿ .	ಡಿಟೋ	13. ಚೆನ್ನಪಟ್ಣ ..	ಡಿಟೋ
5. ಬಡ್ಡರಹಟ್ಟಿ ...	ಡಿಟೋ	14. ಚೆನ್ನೈಯ್ಯನಹಳ್ಳಿ ...	ಬೇಲೂರು
6. ಗೊಲ್ಲರಹಟ್ಟಿ ...	ಡಿಟೋ	15. ಶಂಕರದೇವರಪೇಟೆ ..	ಡಿಟೋ
7. ಮಾರನಹಳ್ಳಿ ...	ಡಿಟೋ	16. ಮಾಯನವಳೆ ...	ಚನ್ನರಾಯಪಟ್ಣ
8. ರಂಗಾಪುರ .	ಡಿಟೋ	17. ನವಲೆ ..	ಡಿಟೋ
9. ಬಸವಾಪಟ್ಣ ..	ಅರಕಲಗೂಡು		

ತಾರೀಖು 16ನೆ ಫೆಬ್ರವರಿ 1904.

ನಂ. ಲೋ. ಬೋ. ಪಿ. 1110, ಸ. 1904ನೆ ಫೆಬ್ರವರಿ 11ನ ತಾರೀಖು ಮೈಸೂರು ಗೆಜೆಟ್ಟಿನ Iನೆ ಭಾಗದ 116ನೆ ಪುಟದಲ್ಲಿ ಪ್ರಕಟಿಸಲ್ಪಟ್ಟ 1904ನೆ ಫೆಬ್ರವರಿ 10ನೆ ಮುರ್ಕಂ ಲೋ. ಬೋ. ಪಿ. 1074ನೆ ನಂಬರ ಇಸ್ತಿಹಾರ್ನಾಮೆಯಲ್ಲಿರುವ “ ಫೋಲಿಮಳ ಬಡೆಯು ” ಎಂಬದಕ್ಕೆ ಬದಲಾಗಿ “ ಮೇಲ ಮಲಯನೂರಿನ ” ಎಂಬದಾಗಿ ಓದಿಕೊಳ್ಳತಕ್ಕದ್ದು.

ತಾರೀಖು 27ನೆ ಜನವರಿ 1904.

ನಂ. 2727—ಲೋ. ಫಂ. 77–03, ಸ. 1902ನೆ ಇಸವಿಯ IIನೆ ನಂಬರ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ಮತ್ತು 1903ನೆ ಸೆಪ್ಟಂಬರ 9ನೆ ಮುರ್ಕಂ 30—ಲೆಜಿಸ್. 4–03ನೆ ನಂಬರ ಇಸ್ತಿಹಾರ್ನಾಮೆಯೊಡನೆ ಪ್ರಕಟಿಸಲಾದ ರೂಲುಗಳ 7ನೆ ರೂಲನುಸರಿಸಿ ಬೌರಿಂಗಪೇಟೆ ತಾಲ್ಲೂಕು ಬೋರ್ಡು ಇದರಡೀ ಕಂಡ ಮೆಂಬರುಗಳನ್ನು ಉಂಟುಮಾಡಿರತಕ್ಕದ್ದು :—

(I) (a) ಇಂದ (d) ವರಿವಿಗಿನ ಕ್ಲಾಜುಗಳನುಸರಿಸಿ.

ಎಕ್ಸ್ ಆಫೀಷಿಯೋ.

1. ಬೌರಿಂಗಪೇಟೆ, ಮಾಲೂರು ವ ಮುಳಬಾಗಲ್ ತಾಲ್ಲೂಕುಗಳ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟರು.
2. ಬೌರಿಂಗಪೇಟೆ ತಾಲ್ಲೂಕಿನ ಅಮಲ್ದಾರು, ವೈಸ್ ಪ್ರೆಸಿಡೆಂಟರು.
3. ಬೌರಿಂಗಪೇಟೆಯಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು, ಮೆಂಬರು.
4. ಬೌರಿಂಗಪೇಟೆಯಲ್ಲಿರುವ ಅಸಿಸ್ಟೆಂಟ್ ಇಂಜನಿಯರು, ಮೆಂಬರು.

(II) (e) ಕ್ಲಾಜ್ ಅನುಸರಿಸಿ.

ಅಪಿಷಿಯಲ್.

5. ಮ॥ ಸುಬ್ರಮಣ್ಯ ಸೆಟ್ಟರು ವರ್ತಕರು, ಮೆಂಬರು.
6. ,, ಸಬ್ಬನಿಜೇಗರು, ಮೆಂಬರು.
7. ,, ನಂಜಪ್ಪನವರು, ಡಿಟೋ
8. ,, ಕೊಕ್ರೇನ್ ಯವರು, ಮೆಂಬರು

(III) (f) ಕ್ಲಾಜ್ ಅನುಸರಿಸಿ.

9\. ಮೆ|| ಶಾಮರಾಯರು, ಬಾರಿಂಗಪೇಟೆ ಮ್ಯುನಿಸಿಪಲ್ ಬೋರ್ಡಿನ ಮೆಂಬರು, ಮೆಂಬರು.

(IV) (g) ಕ್ಲಾಜ್ ಅನುಸರಿಸಿ.

10\. ಮೆ|| ಉಮ್ಮಣ್ಣಯ್ಯನವರು, ಜೋಡಿದಾರು, ಮೆಂಬರು.
11\. ,, ರಾಮರೆಡ್ಡಿಯವರು, ಗೆನ್ನೇರಹಳ್ಳಿಯ ಪಟೇಲರು, ಮೆಂಬರು.
12\. ,, ಬಸಿರೆಡ್ಡಿಯವರು, ಕ್ಯಾಸಂಹಳ್ಳಿಯ ಪಟೇಲರು.

ತಾರೀಖು 30ನೆ ಜನವರಿ 1904.

ನಂ. 2792—ಲೋ. ಫಂ. 76—03, ಸ್ 1903ನೆ ಸೆಪ್ಟಂಬರ್ 9ನೆ ಮರ್ತ್ಕಂ 30—ಲೆಜಿಸ್. 4—03ನೆ ನಂಬರು ಇಸ್ತಿಹಾರ್ನಾ ಮೆಯೊಡನೆ ಫಾಯಿಷಾದ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ 8ನೆ ಪ್ಯಾರಾವಿನಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ಬೆಂಗಳೂರು ಡಿಸ್ಟ್ರಿಕ್ಟು ಬೋರ್ಡಿಗೋಸ್ಕರ ಮುಕರರು ಮಾಡಲ್ಪಟ್ಟ ಮೆಂಬರುಗಳ ಪಟ್ಟಿ:—

ಎಕ್ಸ್ ಅಫೀಷಿಯೋ ಮೆಂಬರುಗಳು.

1\. ಬೆಂಗಳೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರು, ಪ್ರೆಸಿಡೆಂಟರು.
2\. ಬೆಂಗಳೂರು ಡಿಸ್ಟ್ರಿಕ್ಟು ಟ್ರೆಜರಿ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, ವೈಸ ಪ್ರೆಸಿಡೆಂಟರು.
3\. ಕ್ಲೋಸೆಪೇಟೆ ರೇಂಜಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, ಮೆಂಬರು.
4\. ಬೆಂಗಳೂರು ರೇಂಜಿನ ಡಿಟ್ಟೋ ಡಿಟ್ಟೋ
5\. ದೊಡ್ಡಬಳ್ಳಾಪುರ ರೇಂಜಿನ ಡಿಟ್ಟೋ ಡಿಟ್ಟೋ
6\. ಬೆಂಗಳೂರು ಡಿಸ್ಟ್ರಿಕ್ಟು ಮೆಡಿಕಲ್ ಚಾರ್ಜಿನಲ್ಲಿರುವ ಆಫೀಸರು, ಮೆಂಬರು.
7\. ಬೆಂಗಳೂರು ಡಿವಿಜನಿನ ಎಗ್ಜಿಕ್ಯೂಟಿವ್ ಇಂಜನಿಯರು, ಮೆಂಬರು.
8\. ಬೆಂಗಳೂರು ಡಿಸ್ಟ್ರಿಕ್ಟಿನ ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರು, ಮೆಂಬರು.

ಬುಷ್ಬಾಷ ಮೆಂಬರುಗಳು.

(I) (d) ಕ್ಲಾಜು ಅನುಸರಿಸಿ.

9\. ಮೆ|| ವೇಲು ಮೊದಲಿಯಾರು, ಬೆಂಗಳೂರು ತಾಲ್ಲೂಕು.
10\. ,, ನಂದಗುಡಿ ರಾಮಣ್ಣನವರು, ಹೊಸಕೋಟೆ ತಾಲ್ಲೂಕು.
11\. ,, ಶಾನುಭೋಗ ಕರಿಗಿರಿಯಪ್ಪನವರು, ದೊಡ್ಡಬಳ್ಳಾಪುರ ತಾಲ್ಲೂಕು.
12\. ,, ಡಿ. ದಾಸಪ್ಪನವರು, ನೆಲಮಂಗಲ ತಾಲ್ಲೂಕು.
13\. ,, ಯಾಲಕ್ಕಿ ಗೌಡರು, ಕಾಕಾಹಳ್ಳಿ ತಾಲ್ಲೂಕು.
14\. ,, ಅರ್ನಿಕ ಕೃಷ್ಣಮೂರ್ತಿರಾಯರು, ಮಾಗಡಿ ತಾಲ್ಲೂಕು.
15\. ,, ಕರೆಭಾವ ನರಸಿಹ್ಮಯ್ಯ ಶೆಟ್ರು, ಕ್ಲೋಸುಪ್ಯಾಟೆ ಸಬ್ ತಾಲ್ಲೂಕು.
16\. ,, ಸಾಹುಕಾರ್ ಮುಸ್ತಫಸಾಬರು, ಚನ್ನಪಟ್ಣ ತಾಲ್ಲೂಕು.
17\. ,, ಕೆ. ಪುಟ್ಟಣ್ಣನವರು, ಆನೆಕಲ್ ತಾಲ್ಲೂಕು.
18\. ,, ಡಿ. ಶ್ರೀಕಂಠರಾಯರು, ದೇವನಹಳ್ಳಿ ತಾಲ್ಲೂಕು.

(II) (e) ಕ್ಲಾಜು ಅನುಸರಿಸಿ.

19\. ಮೆ|| ಟಿ. ತೋರ್ಪ್ ಯವರು, ಇ. ಮತ್ತು ಎ. ಐ. ಅಸ್ಸೋಸಿಯೇಷನ್, ವೈಟ್‌ಫೀಲ್ಡ್.
20\. ,, ಕಾಚರಕಹಳ್ಳಿ ಸುಬ್ಬಣ್ಣನವರು, ಬೆಂಗಳೂರು ವ ನೆಲಮಂಗಲ ತಾಲ್ಲೂಕುಗಳು.
21\. ,, ಶ್ಯಾನುಭೋಗ ಶೀನಪ್ಪನವರು, ಹೊಸಕೋಟೆ ವ ಆನೆಕಲ್ಲು ತಾಲ್ಲೂಕುಗಳು.
22\. ,, ಪುಟ್ಟ ಮಾಸ್ತಿಗೌಡರು, ಚನ್ನಪಟ್ಣ ವ ಕಾಕಾಹಳ್ಳಿ ತಾಲ್ಲೂಕುಗಳು.
23\. ,, ಬಾಳಾಜಿರಾಯರು, ಮಾಗಡಿ ತಾಲ್ಲೂಕು ವ ಕ್ಲೋಸುಪ್ಯಾಟೆ ಸಬ್ ತಾಲ್ಲೂಕು.
24\. ,, ಜೋಡಿದಾರ್ ರಾಮಚಂದ್ರಪ್ಪನವರು, ದೇವನಹಳ್ಳಿ ವ ದೊಡ್ಡಬಳ್ಳಾಪುರ ತಾಲ್ಲೂಕುಗಳು.
25\. ,, (ಖಾಲಿ) ಮುಂದೆ ಫಾಯಿಷ್ ಮಾಡಲ್ಪಡುವದು.

ತಾರೀಖು 1ನೆ ಫೆಬ್ರವರಿ 1904.

ನಂ. 2809—ಲೋ. ಫಂ. 77–03, ಸ್ 1903ನೆ ಸೆಪ್ಟಂಬರ್ 9ನೆ ಮರ್ತ್ಕಂ 30—ಲೆಜಿಸ್. 4–03ನೆ ನಂಬರ್ ಇಸ್ತಿಹಾರ್ನಾ ಮೆಯೊಡನೆ ಫಾಯಿಷಾದ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ 7ನೆ ಪ್ಯಾರಾವಿನಲ್ಲಿರುವ ನಿಯಮಗಳನುಸರಿಸಿ, ಇದರಡಿ ಕಂಡ ಮೆಂಬರುಗಳು ಮಾಲೂರು ತಾಲ್ಲೂಕು ಬೋರ್ಡಿಗಿರಲಿಕ್ಕೆ ಮುಕರರ್ಮಾಡಲ್ಪಟ್ಟಿರುತ್ತಾರೆ:—

ಎಕ್ಸ್ ಅಫೀಷಿಯೋ ಮೆಂಬರುಗಳು.

1\. ಮಾಲೂರು, ಬವರಿಂಗಪ್ಯಾಟೆ ವ ಮುಳಬಾಗಲ್ ತಾಲ್ಲೂಕುಗಳ ಚಾರ್ಜಿನಲ್ಲಿರುವ ಅಸಿಸ್ಟೆಂಟು ಕಮಿಷನರು, ಪ್ರೆಸಿಡೆಂಟರು.
2\. ಅಮಲ್ದಾರು, ವೈಸ ಪ್ರೆಸಿಡೆಂಟರು.
3\. ಅಸಿಸ್ಟೆಂಟ್ ಇಂಜಿನಿಯರು, ಮೆಂಬರು.
4\. ಹಾಸ್ಪಿಟಲ್ ಅಸಿಸ್ಟೆಂಟರು, ಮೆಂಬರು.

(*e*) ಕ್ಲಾಜು ಅನುಸರಿಸಿ ಇತರ ಮೆಂಬರುಗಳು.

5. ಮೆ|| ನಂಜುಂಡಪ್ಪನವರು, ಮೆಂಬರು.
6. ,, ವೀರಗೌಡರು, ಮೆಂಬರು.
7. ,, ರಾಮರಾಯರು, ಮೆಂಬರು.
8. ,, ವೆಂಕಟರಾಮಯ್ಯನವರು, ಮೆಂಬರು.

(*f*) ಕ್ಲಾಜು ಅನುಸರಿಸಿ.

9. ಮೆ|| ಬೋಡಿಯಪ್ಪ ಚೆಟ್ರು, ಮೆಂಬರು.

(*g*) ಕ್ಲಾಜು ಅನುಸರಿಸಿ.

10. ಮೆ|| ಸೀತಾರಾಮಯ್ಯನವರು, ಮೆಂಬರು.
11. ,, ಮಹಮದ್‌ಖಾನರವರು, ಡಿಟೋ
12. ,, ಕೆ. ರಾಮಸ್ವಾಮೈಯ್ಯಂಗಾರ್ರು, ಮೆಂಬರು.

ತಾರೀಖು 5ನೆ ಫೆಬ್ರವರಿ 1904.

ನಂ. 2881—ಲೋ. ಫಂ. 79–03, ಸರ್ 1903ನೆ ಸೆಪ್ಟಂಬರ 9ನೆ ತಾರೀಖು 30—ಲೆಜಿಸ. 4–03ನೆ ನಂಬರ ಇಸ್ತಿಹಾರ್ನಾಮೆಯೊಡನೆ ಪ್ರಕಟಿಸಲಾದ ಲೋಕಲ್ ಬೋರ್ಡುಗಳ ರಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ 7ನೆ ಪ್ಯಾರಾವಿನಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ತಾಲ್ಲೂಕು ಬೋರ್ಡುಗಳಿಗೋಸ್ಕರ ಮಕರರ್‌ಮಾಡಲ್ಪಟ್ಟ ಮೆಂಬರುಗಳ ಪಟ್ಟಿ :—

1. ಚಾಮರಾಜನಗರ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟರು.
2. ತಾಲ್ಲೂಕಿನ ಅಮಲ್‌ದಾರ್ರು, ವೈಸ್ ಪ್ರೆಸಿಡೆಂಟರು.
3. ತಾಲ್ಲೂಕಿನ ಹೆಡ್‌ಕ್ವಾರ್ಟರಿನಲ್ಲಿರುವ ಡಿಸ್ಪೆನ್ಸರಿಯ ಚಾರ್ಜಿನ ಮೆಡಿಕಲ್ ಆಫಿಸರು, ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖಾ ಸಬ್‌ಡಿವಿಜನ್ ಆಫಿಸರು, ಮೆಂಬರು.

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5. ಮೆ|| ದಾಸಪ್ಪನವರು, ಮೆಂಬರು.
6. ,, ವೆಂಕಟಸಾಮಯ್ಯನವರು, ಮೆಂಬರು.
7. ,, ಶ್ರೀಕಂಠಯ್ಯನವರು, ಮೆಂಬರು.
8. ,, ಪುಟ್ಟಣ್ಣನವರು, ಮೆಂಬರು.

(*f*) ಕ್ಲಾಜ್ ಅನುಸರಿಸಿ.

9. ಮೆ|| ದೊಡ್ಡಿಪುರದ ನರಸಿಂಹಯ್ಯನವರು.

(*g*) ಕ್ಲಾಜ್ ಅನುಸರಿಸಿ.

10. ಮೆ|| ಗೌಸ್ ಸಾಹೇಬರು, ವರ್ತಕರು ವ ಕಂಟ್ರಾಕ್ಟುದಾರ್ರು.
11. ,, ಅಡ್ಡಿ ನಂಜುಂಡಯ್ಯನವರು, ಜಮೀನ್‌ದಾರ್ರು.
12. ,, ವೆಂಕಟಸೆಟ್ಟರು, ವರ್ತಕರು.

2. ಕೃಷ್ಣರಾಜಪೇಟೆ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟರು.
2. ಅಮಲ್‌ದಾರ್ರು, ವೈಸ್ ಪ್ರೆಸಿಡೆಂಟರು.
3. ತಾಲ್ಲೂಕಿನ ಹೆಡ್‌ಕ್ವಾರ್ಟರಿನಲ್ಲಿರುವ ಡಿಸ್ಪೆನ್ಸರಿಯ ಚಾರ್ಜಿನ ಮೆಡಿಕಲ್ ಆಫಿಸರು, ಮೆಂಬರು.
ಪಬ್ಲಿಕ್ ವರ್ಕ್ಸ್ ಇಲಾಖಾ ಸಬ್ ಡಿವಿಜನ್ ಆಫಿಸರು, ಮೆಂಬರು.

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5. ಮೆ|| ರಂಗೈಯ್ಯಂಗಾರ್ರು, ಮೆಂಬರು ವ ಜಮೀನ್‌ದಾರ್ರು.
6. ,, ಸೀತಾರಾಮಯ್ಯನವರು, ಡಿಟೋ
7. ,, ಸೀಲನೆರೆ ತಿಮ್ಮೇಗೌಡರು, ಡಿಟೋ
8. ,, ನಂಜೇಗೌಡರು, ಮೆಂಬರು, ವ ಜಮೀನ್‌ದಾರ್ರು.

(*f*) ಕ್ಲಾಜ್ ಅನುಸರಿಸಿ.

9. ಮೆ|| ನಂಜುಂಡ ಸೆಟ್ಟರು, ಮೆಂಬರು ವರ್ತಕರು ವ ಜಮೀನ್‌ದಾರ್ರು.

(*g*) ಕ್ಲಾಜ್ ಅನುಸರಿಸಿ.

10. ಮೆ|| ನಾರಣಪ್ಪನವರು, ಮೆಂಬರು, ಶಾನಭೋಗರು ವ ಜಮೀನ್‌ದಾರ್ರು.
11. ,, ನರಸಿಂಹಾಚಾರ್ರು, ಡಿಟೋ ಜಮೀನ್‌ದಾರ್ರು.
12. ,, ವೆಂಕಟಾಚಲ ಸೆಟ್ಟರು, ಡಿಟೋ ಜಮೀನ್‌ದಾರ್ರು.

3. ಫ್ರೇಂಚ್‌ರಾಕ್ಸ್ ಸಬ್ ತಾಲ್ಲೂಕು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ಸಬ್ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟರು.
2. ಡೆಪ್ಯುಟಿ ಅಮಲ್ದಾರ್ರು, ವೈಸ್ ಪ್ರೆಸಿಡೆಂಟರು.
3. ಸಬ್ ತಾಲ್ಲೂಕಿನ ಹೆಡ್ ಕ್ವಾರ್ಟ್ರರಲ್ಲಿರುವ ಡಿಸ್ಪೆನ್ಸರಿಯ ಚಾರ್ಜಿನ ಮೆಡಿಕಲ್ ಆಫೀಸರ್ರು, ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖಾ ಸಬ್ ಡಿವಿಜನ್ ಆಫೀಸರು, ಮೆಂಬರು.

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5. ಮ|| ಯಂಕರ್ ಕೊಪ್ಪಲಿನ ಸಿಂಗಗೌಡರು, ಮೆಂಬರು ವ ಜಮೀನ್ದಾರರು.
6. ,, ಕ್ಯಾತನಹಳ್ಳಿಯ ನಂಜುಂಡಗೌಡರು, ಡಿಟ್ಟೋ ಡಿಟ್ಟೋ
7. ,, ಚಿಂದ್ರಿಯ ದ್ಯಾಕೆಗೌಡರು, ಡಿಟ್ಟೋ.
8. ,, ಮೇಲುಕೋಟೆ ಎಂ. ಶ್ರೀನಿವಾಸಯ್ಯಂಗಾರು, ಮೆಂಬರು.

(*f*) ಕ್ಲಾಜ್ ಅನುಸರಿಸಿ.

9. ಮ|| ಶ್ರೀಕಂಠ ಸೆಟ್ಟರು, ಮೆಂಬರು ವ ವರ್ತಕರು.

(*g*) ಕ್ಲಾಜ್ ಅನುಸರಿಸಿ.

10. ಮ|| ಮೈಲಾರಯ್ಯನವರು, ಮೆಂಬರು ವ ಪ್ಲೀಡರು.
11. ,, ವೆಂಕಟದಾಸಪ್ಪನವರು, ಪೆನ್ಷನ್ ಹೆಡ್ ಮುನಷೀರು.
12. ,, ರಾಂಜೀರಾಯರು, ಮೆಂಬರು ವ ಜಮೀನ್ದಾರರು.

4. ಮಂಡ್ಯ ತಾಲ್ಲೂಕು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟರು.
2. ಅಮಲ್ದಾರ್ರು, ವೈಸ್ ಪ್ರೆಸಿಡೆಂಟರು.
3. ತಾಲ್ಲೂಕು ಹೆಡ್‌ಕ್ವಾರ್ಟರಿನಲ್ಲಿರುವ ಡಿಸ್ಪೆನ್ಸರಿಯ ಚಾರ್ಜಿನ ಮೆಡಿಕಲ್ ಆಫೀಸರು, ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖಾ ಸಬ್ ಡಿವಿಜನ್ ಆಫೀಸರು, ಮೆಂಬರು.

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5. ಮ|| ವೆಂಕಟಪ್ಪನವರು, ಮೆಂಬರು ವ ಜಮೀನ್ದಾರರು.
6. ,, ಲಿಂಗಣ್ಣಯ್ಯನವರು, ಡಿಟ್ಟೋ ಡಿಟ್ಟೋ.
7. ,, ರಾಮನರಸಯ್ಯನವರು, ಡಿಟ್ಟೋ ಡಿಟ್ಟೋ
8. ,, ನಾರಣಪ್ಪನವರು, ಡಿಟ್ಟೋ ಡಿಟ್ಟೋ

(*f*) ಕ್ಲಾಜ್ ಅನುಸರಿಸಿ.

9. ಮ|| ಅಳಸಿಂಗ್ರಾಚಾರ್ರು, ಮೆಂಬರು ವ ಜಮೀನ್ದಾರರು.

(*g*) ಕ್ಲಾಜ್ ಅನುಸರಿಸಿ.

10. ಮ|| ಮಹಮದ್ ಯಾಕೂಬ್ ಸಾಹೇಬರು, ಮೆಂಬರು ವ ವರ್ತಕರು.
11. ,, ಚಿನ್ನಬೋರೆಗೌಡರು, ಮೆಂಬರು, ಜಮೀನ್ದಾರರು.
12. ,, ರಾಮಣ್ಣನವರು, ಮೆಂಬರು, ಇನಾಂದಾರರು.

5. ನಂಜನಗೂಡು ತಾಲ್ಲೂಕು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟರು.
2. ಅಮಲ್ದಾರ್ರು, ವೈಸ್ ಪ್ರೆಸಿಡೆಂಟರು.
3. ತಾಲ್ಲೂಕು ಹೆಡ್‌ಕ್ವಾರ್ಟರಿನಲ್ಲಿರುವ ಡಿಸ್ಪೆನ್ಸರಿಯ ಚಾರ್ಜಿನ ಮೆಡಿಕಲ್ ಆಫೀಸರು, ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖಾ ಸಬ್ ಡಿವಿಜನ್ ಆಫೀಸರು, ಮೆಂಬರು.

೩೦೨

(*e*) ಕ್ಲಾಜ್ ಅನುಸರಿಸಿ.

5. ಮೆ|| ಪದ್ಮಣ್ಣನವರು, ಮೆಂಬರು, ಜಮೀನ್ದಾರ್ರು ವ ವರ್ತಕರು.
6. ,, ಶ್ರೀನಿವಾಸಯ್ಯನವರು, ಮೆಂಬರು, ಶಾನಭೋಗರು ವ ಜಮೀನ್ದಾರ್ರು
7. ,, ಅಲತ್ತೂರು ರಾಮರಾಯರು, ಮೆಂಬರು ವ ಜಮೀನ್ದಾರ್ರು.
8. ,, ನಂಜಪ್ಪನವರು, ಮೆಂಬರು, ಪಟೇಲರು, ವ ಜಮೀನ್ದಾರ್ರು.

ಇತರ ಮೆಂಬರುಗಳು.

(*f*) ಕ್ಲಾಜ್ ಅನುಸರಿಸಿ.

9. ಮೆ|| ಗುರುರಾಯರು, ಮೆಂಬರು ವ ಪ್ಲೀಡರು.

(*g*) ಕ್ಲಾಜ್ ಅನುಸರಿಸಿ.

10. ಮೆ|| ವೆಂಕಟಸುಬ್ಬಯ್ಯನವರು, ಮೆಂಬರು, ಜಮೀನ್ದಾರ್ರು ವ ಪ್ಲೀಡರು.
11. ,, ಕುಪ್ಪೇರವಳ್ಳಿ ರಾಮಸ್ವಾಮಯ್ಯನವರು, ಮೆಂಬರು, ಜಮೀನ್ದಾರ್ರು.
12. ,, ಸೂರನಾರಣಪ್ಪನವರು, ಮೆಂಬರು, ಶಾನಭೋಗರು.

6. ಮಳವಳ್ಳಿ ತಾಲ್ಲೂಕು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟರು.
2. ಅಮಲ್ದಾರ್ರು, ವೈಸ್ ಪ್ರೆಸಿಡೆಂಟರು.
3. ತಾಲ್ಲೂಕಿನ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು, ಮೆಂಬರು.
4. ಪಬ್ಲಿಕ್ ವರ್ಕ್ಸ ಇಲಾಖಾ ಸಬ್ ಡಿವಿಜನ್ ಆಫಿಸರು, ಡಿಟೋ.

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5. ಮೆ|| ಎ. ನರಸಿಂಹಯ್ಯನವರು, ಮೆಂಬರು ವ ಜಮೀನ್ದಾರ್ರು.
6. ,, ರಾಮಣ್ಣನವರು, ಡಿಟೋ ಡಿಟೋ
7. ,, ಬೋರೆಗೌಡರು, ಡಿಟೋ ಡಿಟೋ
8. ,, ಚಿಕ್ಕೆಗೌಡರು, ಡಿಟೋ ಡಿಟೋ

(*f*) ಕ್ಲಾಜ್ ಅನುಸರಿಸಿ.

9. ಮೆ|| ಶಂಕರಪ್ಪನವರು, ಮೆಂಬರು ವ ಜಮೀನ್ದಾರ್ರು.

(*g*) ಕ್ಲಾಜ್ ಅನುಸರಿಸಿ.

10. ಮೆ|| ಕಾಳಲಿಂಗೆಗೌಡರು, ಮೆಂಬರು ವ ಜಮೀನ್ದಾರ್ರು.
11. ,, ಕಳಸಪ್ಪನವರು, ಡಿಟೋ ಡಿಟೋ
12. ,, ಬಾಳೆಗೌಡರು, ಡಿಟೋ ಡಿಟೋ

ತಾರೀಖು 6ನೆ ಫೆಬ್ರವರಿ 1904.

ನಂ. 2891—ಲೋ. ಫಂ. 79–03, ಮೈಸೂರು ಡಿಸ್ಟ್ರಿಕ್ಟು ಬೋರ್ಡಿನ ಮೆಂಬರಾಗಿ ನೇಮಕರಮಾಡಲ್ಪಟ್ಟ ಮೊದಲನೇ ಅಸಿಸ್ಟೆಂಟ್ ಕಮಿಷನರವರಿಗೆ ಬದಲಾಗಿ ಕೃಷ್ಣರಾಜಪೇಟೆ ವ ನಾಗಮಂಗಲ ತಾಲ್ಲೂಕುಗಳುಳ್ಳ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರು ಮೇಲ್ಕಂಡ ಬೋರ್ಡಿನ ಎಕ್ಸ್ ಅಫಿಷಿಯೋ ಮೆಂಬರಾಗಿರತಕ್ಕದ್ದು.

ತಾರೀಖು 10ನೆ ಫೆಬ್ರವರಿ 1904

ನಂ. ಜ. 3944, ಅಸಿಸ್ಟೆಂಟ್ ಸರ್ಜನ್ರಾದ ಮೆ|| ಸಿ. ಎ. ನಂಜಪ್ಪನವರಿಗೆ 1904ನೆ ಜನವರಿ 26ನೆ ಮರ್ಸ್ಕಂ ಜ. 3693ನೆ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟದ್ದ 20 ದಿನಗಳ ಪ್ರಿವಿಲೇಜ್ ರಜಾವನ್ನು ಅವರು ಉಪಯೋಗಿಸಿಕೊಂಡು 1904ನೆ ಜನವರಿ 22ನೆ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸು ಬಂದಿರುತ್ತಾರಾಗಿ ಉಪಯೋಗಿಸಿಕೊಳ್ಳದ ರಜಾಭಾಗ ವೆಂದರೆ 1 ದಿವಸ ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

ತಾರೀಖು 16ನೆ ಫೆಬ್ರವರಿ 1904.

ನಂ. 1654—ಜ. ಫೈ. 49—1902—03, ಸನ್ 1901ನೆ ನವೆಂಬರ 25ನೆ ಮಾರ್ಕ್ಕಂ 8106-7—ಜು. 714ನೆ ನಂಬರ್ ಗವರ್ನಮೆಂಟಿನ ಪ್ರೊಸೀಡಿಂಗ್ಸ್ ಅನುಸಾರವಾಗಿ ಹೊಸ್ಕೋಟೆ ವ ಚಿಕ್ಕನಾಯಕನಹಳ್ಳಿಗಳಲ್ಲಿ ಹಂಗಾಮಿ ತರೀಕು ಸ್ಥಾಪಿಸಲ್ಪಟ್ಟಿದ್ದ ಮೂರನೇ ಕ್ಲಾಸಿನ ಸ್ಪೆಷಿಯಲ್ ಸಬ್ ರಿಜಿಸ್ಟ್ರಿರ ಆಫೀಸುಗಳು ಇದರಿಂದ ಕಾಯಂ ಮಾಡಲ್ಪಟ್ಟಿರುತ್ತವೆ.

ತಾರೀಖು 16ನೆ ಫೆಬ್ರವರಿ 1904.

ನಂ. ಜ. 4106, ಮೈಸೂರ ಸರ್ವಿಸ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ ಅನುಸರಿಸಿ ಚಿಕ್ಕಮಗಳೂರಲ್ಲಿರುವ ಸಬ್ ಅಸಿಸ್ಟೆಂಟ್ ಸರ್ಜನ್‌ರಾದ ಮೆ|| ಕೆ. ಅನಂತರಾಮ ಅಯ್ಯಂಗಾರ್ರಿಗೆ 1904ನೆ ಜನವರಿ 24ನೆ ತಾರೀಖಿನ ಮಧ್ಯಾಹ್ನಾನ್ತರ ಲಾಗಾಯತು 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 17ನೆ ಫೆಬ್ರವರಿ 1904.

ನಂ. 3035—ಲೋ. ಫೆ. 89—03, ಅಸಿಸ್ಟೆಂಟ್ ಇಂಜಿನಿಯರರಾದ ಮೆ|| ಜೆ. ಇ. ಎ. ಡಿಕ್ರೂಜ್‌ಯವರು ಹಂಗಾಮಿ ನಾಲ್ಕನೇ ಕ್ಲಾಸಿನ ಎಗ್ಸಿಕ್ಯೂಟಿವ್ ಇಂಜಿನಿಯರಾಗಿ ಬಡ್ತಿ ಮಾಡಲ್ಪಟ್ಟು ಮೈಸೂರು ಷಹರ ಅಭಿವೃದ್ಧಿಗೋಸ್ಕರ ಉಂಟಾದ ಟ್ರಸ್ಟಿಗಳ ಬೋರ್ಡಿನ ಚೇರ್ಮ್ಯಾನರವರ ಅಜ್ಞಾನುಸಾರವಾಗಿ ಮೈಸೂರು ಸಿಟಿ ಇಂಪ್ರೂವಮೆಂಟ್ಸ್ ಡಿವಿಜನಿನ ಚಾರ್ಜಿನಲ್ಲಿ ಇಡಲ್ಪಟ್ಟಿರುತ್ತಾರೆ.

ತಾರೀಖು 30ನೆ ಜನವರಿ 1904.

ನಂ. ರೆ. 2156, ಸನ್ 1894ನೆ ಇಸವಿಯ VIIನೆ ನಂಬರ ಲ್ಯಾಂಡ ಅಕ್ವಿಜಿಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ಸಿರಾ ತಾಲ್ಲೂಕಿನ ಬುಕ್ಕಾಪಟ್ಣ ಸಮ್ಮತ್ತಿನಲ್ಲಿರುವ ಸ್ಯಾಗತಾಡು ಗ್ರಾಮದ ಗ್ರಾಮನಿವೇಶನವನ್ನು ಬಡಾಯಿಸುವ ಬಗ್ಗೆ ಬೇಕಾಗಿರುತ್ತದೆ. ಮತ್ತು ತುಮಕೂರು ಡಿಸ್ಟ್ರಿಕ್ಟಿನ ಮೊದಲನೇ ಜನರಲ ಅಸಿಸ್ಟೆಂಟ ಕಮಿಷನರಾದ ಮೆ|| ಸಿ. ಶೇಷಾದ್ರಯ್ಯಂಗಾರ್ರು, ಮೇಲ್ಕಂಡ ರೆಗ್ಯುಲೇಷನಿನ 3 (ಸಿ) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸರ್ವೆ ನಂ.	[illegible]	[illegible]	ಚಕ್ಕುಬಂದಿ. ಪೂರ್ವ.	ದಕ್ಷಿಣ.	ಪಶ್ಚಿಮ.	ಉತ್ತರ.
						ಎ. ಗು.	ಎ. ಗು.				
ತುಮಕೂರು	ಸಿರಾ	ಬುಕ್ಕಾಪಟ್ಣ	ಸ್ಯಾಗತಾಡು	ಲಿಂಗೇಗೌಡ ಬಿನ್ ಮುದ್ದರಾಮೇಗೌಡ	1	2 0 ಖುಷ್ಕಿ	2 11	ಸರ್ವೆ ನಂ. 1 [illegible] 70 [illegible]	ಸರ್ವೆ ನಂ. 1	ಸರ್ವೆ ನಂ. 1	[illegible]

ತಾರೀಖು 10ನೆ ಫೆಬ್ರವರಿ 1904.

ನಂ. ರೆ. 2341—ರೆ. ಫೈ. 57—1896, ಬೆಂಗಳೂರು ಡೆಪ್ಯುಟಿ ಕಮಿಷನರವರ ಆಫೀಸಿನ ಜ್ಯುಡಿಷಿಯಲ್ ಹೆಡ್ ಮುನಿಷಿಯರಾದ ದಾಸಪ್ಪನವರು ಮೆ|| ವೇದಾಂತದೇಸಿಗಂ ಅಯ್ಯಂಗಾರ್ರು ಇತರ ಕೆಲಸದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಹಂಗಾಮಿಯಾಗಿ ನೆಲಮಂಗಲ ತಾಲ್ಲೂಕಿನ ಅಮಲ್ದಾರ್ ವ ಮೂರನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಅಕ್ಟಿಂಗ್ ತರೀಕು ಮೊಕರರ್ರು ಮಾಡಲ್ಪಟ್ಟಿರುತ್ತಾರೆ.

ತಾರೀಖು 13ನೆ ಫೆಬ್ರವರಿ 1904.

ನಂ. ರೆ. 2382—ರೆ. ಫೈ. 143—1896, ಮೈಸೂರ ಸರ್ವಿಸ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ ಅನುಸರಿಸಿ ಕಡೂರು ಡಿಸ್ಟ್ರಿಕ್ಟ್ ತರೀಕೆರೆ ತಾಲ್ಲೂಕಿನ ಅಮಲ್ದಾರರಾದ ಮೆ|| ಜೆ. ಶ್ರೀನಿವಾಸರಾಯರಿಗೆ 1903ನೆ ಡಿಸೆಂಬರ 4ನೆ ತಾರೀಖಿನಾರಭ್ಯ 8 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

ಸದರೀಯವರು ಮೇಲ್ಕಂಡ ರಜಾದಲ್ಲಿದ್ದ ಕಾಲದಲ್ಲಿ ತಾಲ್ಲೂಕಿನ ಷಿರಸ್ತೇದಾರ್ರು ಸದರೀ ತಾಲ್ಲೂಕಿನ ಚಾಲ್ತಿ ಕೆಲಸಗಳ ಚಾರ್ಜಿನಲ್ಲಿದ್ದರು.

ತಾರೀಖು 31ನೆ ಜನವರಿ 1904.

ನಂ. ರೆ. 2214, ಸ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಬೆಂಗಳೂರು ಡಿಸ್ಟ್ರಿಕ್ಟು ಕಾನಕಾನಹಳ್ಳಿ ತಾಲ್ಲೂಕಿನಲ್ಲಿರುವ ಹಾಲಿ ಸಾತನೂರು ಗ್ರಾಮಠಾಣ ಬಡಾವಣೆ ಬಗ್ಯೆ ಬೇಕಾಗಿರುತ್ತದೆ. ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ನನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸರ್ವೆ ನಂ.	ಹಿಸ್ಸೆ ನಂಬರು.	ಜಮೀನಿನ ವಿವರ.	ವಿಸ್ತೀರ್ಣ.	ಆಕಾರ.	ಚಕ್ಕುಬಂದಿ. ಉತ್ತರ.	ಪೂರ್ವ.	ದಕ್ಷಿಣ.	ಪಶ್ಚಿಮ.	ಷರಾ.
ಬೆಂಗಳೂರು	ಕಾನಕಾನಹಳ್ಳಿ	ಸಾತನೂರು	ಸಾತನೂರು	ತಿರುಮಲಿಂಗ, ಸಿಂಗಿ (ಜಂಟಿ ಖಾತೆದಾರ)	148		ಖುಷ್ಕಿ	ಎ. ಗು. 3 7	ರೂ. ಆ. ಪೈ. 2 12 0	ಸರ್ವೆ ನಂ. 147	ಸರ್ವೆ ನಂ. 151 ವ 173	ಬಂಡಿ ದಾರಿ	ಸಾತನೂರು ಗ್ರಾಮ	ಸದರೀ ಜಮೀನಿಗೆ ಸ್ವಾಧೀನದಾರರಿಂದ ಬೆಲೆ ಕೊಡಬೇಕಾಗಿರುತ್ತದೆ.

ತಾರೀಖು 31ನೆ ಜನವರಿ 1904.

ನಂ. ರೆ. 3247, ಸ್1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ ಮ್ಯುನಿಸಿಪಾಲಿಟಿಯ ಗ್ರಾಮ ನಿವೇಶನವನ್ನು ಬಡಾಯಿಸುವ ಬಗ್ಯೆ ಬೇಕಾಗಿರುತ್ತವೆ. ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟಿನ 2ನೆ ಅಸಿಸ್ಟೆಂಟ್ ಕಮಿಷನರವರು ಮೇಲ್ಕಂಡ ರೆಗ್ಯುಲೇಷನಿನ 3 (ಸಿ) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಖಾತೇದಾರರ ಹೆಸರು	ಜಮೀನಿನ ವಿವರ.	ಸರ್ವೆ ನಂ.	ಒಟ್ಟು ವಿಸ್ತೀರ್ಣ.	ತೆಗೆದುಕೊಳ್ಳತಕ್ಕ ವಿಸ್ತೀರ್ಣ.	ಚಕ್ಕುಬಂದಿ. ಉತ್ತರ.	ದಕ್ಷಿಣ.	ಪೂರ್ವ.	ಪಶ್ಚಿಮ.
ಚಿತ್ರದುರ್ಗ	ಚಳ್ಳಕೆರೆ	ನಾಯಕನಹಟ್ಟಿ	ಕಳ್ಳಪ್ಪಗಾಲ ತಿಪ್ಪಯ್ಯ.	ತರಿ	48	ಎ. ಗು. 1—10	ಎ. ಗು. 1—10	ರಸ್ತೆ	ತಲವಾರ ತಿಪ್ಪಯ್ಯನ ಸರ್ವೆ ನಂ. 50	ಗ್ರಾಮ ನಿವೇಶನ	ತುರುವಾನೂರು ರಸ್ತೆ
			ಡಿಟೋ ...	ಡಿಟೋ	49	1 11	1—11	ತಿಪ್ಪಯ್ಯನ ಸರ್ವೆ ನಂ. 48	ಡಿಟೋ	ಡಿಟೋ	ಡಿಟೋ

ತಾರೀಖು 13ನೆ ಫೆಬ್ರುವರಿ 1904.

ನಂ. ರೆ. 2388—ರೆ. ಫೈ. 14—1901—2, ಕೃಷ್ಣರಾಜಪೇಟೆ ಅಮಲ್ದಾರ್ರಾದ ಮ॥ ಕೃಷ್ಣಾಚಿನಾರಾಯರ್ಣಯವರಿಗೆ ಕಳೆದ ಡಿಸೆಂಬರ್ 18ನೆ ಮುಕರ್ರಾ ರೆ. 1741ನೆ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ 10 ದಿನಗಳ ಪ್ರಿವಿಲೇಜ್ ರಜಾ ಅವರ ಕೋರಿಕೆಯಂತೆ ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

ತಾರೀಖು 10ನೇ ಫೆಬ್ರುವರಿ 1904.

ನಂ. ರೆ. 2334, ಸ್ನ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಬೆಂಗಳೂರು ಷಹರಿನ ಮಾಗಡಿ ರಸ್ತೆಯಲ್ಲಿ ಸಾಂಕ್ರಾಮಿಕ ರೋಗಗಳ ಆಸ್ಪತ್ರೆ ಮತ್ತು ಪ್ಲೇಗ್ ವ ಕಂಟಾಕ್ಟು ಕ್ಯಾಂಪಿಗೋಸ್ಕರ ಬೇಕಾಗಿರುತ್ತವೆ, ಮತ್ತು ಬೆಂಗಳೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು	ತಾಲ್ಲೋಕು	ಹೋಬಳಿ	ಗ್ರಾಮ	ಖಾತೆದಾರರ ಹೆಸರು	ಜಾತಿ	ಸ. ನಂ.	ಜಮೀನಿನ ತಪಶೀಲು				ಬೇಕಾಗಿರುವ ಜಮೀನು	ಚಕ್ಕುಬಂದಿ			
							ವಿಸ್ತೀರ್ಣ	ಅಕಾರ				ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
							ಎ. ಗು.	ರೂ.	ಆ.	ಪೈ.					
ಬೆಂಗಳೂರು.	ಬೆಂಗಳೂರು.	ಕಸಬಾ.	ಹನುಮಂತಪುರ.	ಗವರ್ನ್ಮೆಂಟ್	ಖುಷ್ಕಿ	9	5—13	5	8	0	5—13	ಸರ್ವೆ ನಂ. 1. ಖರಾಬ್ ಜಮೀನು	ಕೆಂಪಾಪುರ ಅಗ್ರಹಾರ ಗ್ರಾಮ	ಮಾಗಡಿ ರಸ್ತೆ	ಹೊಲೇರ ಪಾಳ್ಯ
					ಡಿಟೋ	10	3—30	3	8	0	3—30	ಸರ್ವೆ ನಂ. 11	ಕೆಂಪಾಪುರ ಅಗ್ರಹಾರ	ಬೆಂಗಳೂರು ರಸ್ತೆ	ಮಾಗಡಿ ರಸ್ತೆ

ತಾರೀಖು 13ನೆ ಫೆಬ್ರುವರಿ 1904.

ನಂ. ರೆ. 2379, ಸ್ನ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರಿ ಕೆಲಸಕ್ಕೆ ಅಂದರೆ, ಗುಬ್ಬಿ ತಾಲ್ಲೂಕಿನಲ್ಲಿರುವ ಅಮ್ಮನಘಟ್ಟಕೆರೆಯ ರಿಪೇರಿ ಬಗ್ಯೆ ಬೇಕಾಗಿರುತ್ತದೆ. ತುಮಕೂರು ಡಿಸ್ಟ್ರಿಕ್ಟಿನ ಎರಡನೇ ಜನರಲ್ ಅಸಿಸ್ಟೆಂಟ್ ಕಮಿಷನರಾದ ಮೆ॥ ಪಿ. ಶ್ರೀನಿವಾಸರಾಯರು ಮೇಲ್ಕಂಡ ರೆಗ್ಯುಲೇಷನಿನ 3 (c) ವ 7ನೆ ಸೆಕ್ಷನುಗಳನುಸರಿಸಿ ಸದರಿ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ತಾಲ್ಲೋಕು.	ಹೋಬಳಿ	ಗ್ರಾಮ.	ಖಾತೆದಾರರ ಹೆಸರು.	ಸ. ನಂ.	ಜಮೀನಿನ ವಿವರ ಮತ್ತು ವಿಸ್ತೀರ್ಣ.	ಬೇಕಾಗಿರುವ ವಿಸ್ತೀರ್ಣ.	ಚಕ್ಕುಬಂದಿ.			
							ಉತ್ತರ.	ಪೂರ್ವ.	ದಕ್ಷಿಣ	ಪಶ್ಚಿಮ.
ಗುಬ್ಬಿ	ಗುಬ್ಬಿ	ಅಮ್ಮನಘಟ್ಟ	ಗವರ್ನ್ಮೆಂಟ್	186	ತರಿ 2—0 ಖುಷ್ಕಿ 0—14	ಖುಷ್ಕಿ 0—11	ಸ. ನಂ. 162	ಸ. ನಂ. 187	ಸ. ನಂ. 188—185—184	ಸ. ನಂ. 182

ತಾರೀಖು 13ನೇ ಫೆಬ್ರುವರಿ 1904

ನಂ. ರೆ. 2385—ರೆ. ಫೈ. 138—1895, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಶಿವಮೊಗ್ಗ ಡಿಸ್ಟ್ರಿಕ್ಟು ಸಾಗರ ತಾಲ್ಲೂಕಿನ ಅಮಲ್ದಾರಾದ ಮೆ॥ ಜೆ. ಹನುಮಂತರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 2 ತಿಂಗಳು 11ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

2. ಶಿವಮೊಗ್ಗಾದಲ್ಲಿರುವ ಆಕ್ಟಿಂಗ್ ಡಿಸ್ಟ್ರಿಕ್ಟು ಶಿರಸ್ತೇದಾರಾದ ಎಸ್. ಶ್ಯಾಮರಾಯರು, ಸದರಿ ಅಮಲ್ದಾರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರ್ಯಂತ, ಸಾಗರ ತಾಲ್ಲೂಕಿನ ಅಮಲ್ದಾರ್ ವ 3ನೆ ಕ್ಲಾಸ್ ಮೇಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಖ್ ನೌಕರರ್ನ್ನಾಡಲ್ಪಟ್ಟಿರುತ್ತಾರೆ.

ತಾರೀಖು 13ನೇ ಫೆಬ್ರುವರಿ 1904.

ನಂ. ರೆ. 2992 ರೆ. ಫೈ. 50—91, ಬೆಂಗಳೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರಾದ ಮೆ|| ಎಚ್. ಎಚ್. ಸ್ಪಾರ್ಕ್ಸ ರವರು ರಜಾದಮೇಲೆ ಹೊರಡುವದರ ದೆಸೆಯಿಂದ ಇದರಡಿ ಕಂಡ ಏರ್ಪಾಡುಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

1. ಡೆಪ್ಯುಟಿ ಕಮಿಷನರಾದ ಮೆ|| ಡಿ. ದೇವರಾಜೇ ಅರಸಿನವರು ಹಾಸನ ಡಿಸ್ಟ್ರಿಕ್ಟಿನಿಂದ ಬೆಂಗಳೂರು ಡಿಸ್ಟ್ರಿಕ್ಟಿಗೆ ವರ್ಗವಾಗತಕ್ಕದ್ದು.

2. ಸಬ್ ಡಿವಿಜನ್ ಆಫಿಸರಾದ ಮೆ|| ಕೆ. ಎಸ್. ದೊರಸ್ವಾಮಿ ಐಯ್ಯರಿಯವರು ಡೆಪ್ಯುಟಿ ಕಮಿಷನರ್ ವ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕು ಮೊಕರರಾಗಿ ಹಾಸನ ಡಿಸ್ಟ್ರಿಕ್ಟಿಗೆ ನೇಮಿಸಲ್ಪಟ್ಟಿರುತ್ತಾರೆ.

3. ಬೆಂಗಳೂರಲ್ಲಿರುವ ಸಿಟಿ ಮ್ಯಾಜಿಸ್ಟ್ರೇಟರವರ ಕೋರ್ಟಿನ ಚಾರ್ಜಿನಲ್ಲಿರುವ ಸೀನಿಯರ್ ಅಸಿಸ್ಟೆಂಟ್ ಕಮಿಷನರಾದ ಮೆ|| ಎಸ್. ವೈದ್ಯನಾಥ ಅಯ್ಯರ್ ರವರು ಮೈಸೂರು ಡಿಸ್ಟ್ರಿಕ್ಟಿಗೆ ವರ್ಗವಾಗಿ ಫ್ರೆಂಚರಾಕ್ಸ್ ಸಬ್ ಡಿವಿಜನಿನ ಚಾರ್ಜಿನಲ್ಲಿರತಕ್ಕದ್ದು.

4. ಸ್ಪೆಷಿಯಲ್ ಡ್ಯೂಟಿಯಲ್ಲಿರುವ ಅಸಿಸ್ಟೆಂಟ್ ಕಮಿಷನರಾದ ಮೆ|| ಎ. ಆನಂದರಾಯರು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರವರ ಕೋರ್ಟಿನ ಚಾರ್ಜಿನಲ್ಲಿರತಕ್ಕದ್ದು.

ಹುಕುಂ ಬಮೋಜಿಬ್,

ಎಲ್. ಅನಂತಸ್ವಾಮಿರಾವ್,

ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್ಮೆಂಟ್ ಆಫೀಷಿಯೇಟಿಂಗ್ ಸೆಕ್ರೆಟರಿ.

ಫಾರೆಸ್ಟ್.

ಇಸ್ತಿಹಾರ್ನಾಮೆ.

ತಾರೀಖು 16ನೇ ಫೆಬ್ರುವರಿ 1904.

ನಂ. 536—6681, ಕೆಲಸದಿಂದ ನಿವೃತ್ತರಾದ ಇಂಡಿಯಾ ಸರ್ವೆಯು ಎಕ್ಸಟ್ರಾ ಡೆಪ್ಯುಟಿ ಸೂಪರಿಂಟೆಂಡೆಂಟರಾದ ಮೆ|| ಟಿ. ಇ. ಎಂ. ಕ್ಲಾಡಿಯಸ್‌ರವರು 1904ನೆ ಫೆಬ್ರುವರಿ 1ನೇ ತಾರೀಖಿನಾರಭ್ಯ ಮೂರು ವರುಷಗಳವರೆಗೆ ಮೈಸೂರು ಸೀಮೆಯ ಫಾರೆಸ್ಟ್ ಸರ್ವೆಗಳ ಸೂಪರಿಂಟೆಂಡೆಂಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜಿಬ್,

ಎಂ. ಮುತ್ತಣ್ಣ,

ಫಾರೆಸ್ಟ್ ಇಲಾಖೆಯ ಗವರ್ನ್ಮೆಂಟ್ ಆಫೀಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 16ನೇ ಫೆಬ್ರುವರಿ 1904.

ನಂ. 224—1184. ಸರ್ 1904ನೆ ಜನವರಿ 27ನೆ ಮರ್ಕೂಂ 96—547ನೇ ನಂಬರ್ ಪಬ್ಲಿಕ್ ವರ್ಕ್ಸ್ ಇಸ್ತಿಹಾರ್ನಾಮೆಗೆ ಸೇರಿಸುವಿಕೆ.

ಸರ್ 1904ನೆ ಜನವರಿ 1ನೆ ತಾರೀಖಿನಾರಭ್ಯ ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖೆಯ ಇಂಜನಿಯರ್ ಸಿಬ್ಬಂದಿಯಲ್ಲಿ ಇದರಡಿ ಕಂಡ ವಾಪಸು ಬರೋಣವು ಹುಕುಂ ಮಾಡಲ್ಪಟ್ಟಿರುತ್ತದೆ.—

ಹೆಸರು	ಹಾಲಿ ಕ್ಲಾಸು.	ವಾಪಸು ಮಾಡಲ್ಪಟ್ಟ ಕ್ಲಾಸು.	ವಾಪಸಿನ ಸ್ವಭಾವ.	ಷರಾ.
ಮೆ|| ಟಿ. ಜಿ. ಲಕ್ಷ್ಮಣರಾಯರು.	ಹಂಗಾಮಿ ಮೂರನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರ್.	ಮೊದಲನೇ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರ್.	ಕಾಯಂ.	ಮೆ|| ಟಿ. ಎಸ್. ಶೇಷೈಯ್ಯಂಗಾರರು ರಜಾದಿಂದ ವಾಪಸು ಬಂದಿರುವದ್ದರಿಂದ.

ತಾರೀಖು 16ನೇ ಫೆಬ್ರುವರಿ 1904.

ನಂ. 225—1186, ಸರ್ 1904ನೆ ಫೆಬ್ರುವರಿ 9ನೆ ತಾರೀಖು ಮದರಾಸು ಫೋರ್ಟ್ ಸೆಂಟ್ ಜಾರ್ಜ್ ಗಜೆಟ್ಟಿನ ಇದರಡಿ ಕಂಡ ಎಕ್ಸ್‌ಟ್ರಾಕ್ಟ್ ತಿಳುವಳಿಕೆ ಬಗ್ಗೆ ಪುನಃ ಪ್ರಾಯಿಷ್ ಮಾಡಲ್ಪಟ್ಟಿರುತ್ತದೆ:—

ಪಬ್ಲಿಕ್ ವರ್ಕ್ಸ್ ಇಲಾಖಾ.

ಬಡ್ತಿಗಳು ವ ವಾಪಸು ಬರೋಣಗಳು.

ಸರ್ 1904ನೆ ಫೆಬ್ರುವರಿ 1 ಫೋರ್ಟ್ ಸೆಂಟ್ ಜಾರ್ಜ್.

ನಂ. 11.—ಕೆಲಸದಿಂದ ನಿವೃತ್ತರಾದ ಕರ್ನಲ್ ಜಾರ್ಜ್ ಕ್ಲಾರ್ಕ್ ರಾರ್ಸ್, ಆರ್. ಇ., ಯವರಿಗೆ ಬದಲಾಗಿ 1904ನೆ ಜನವರಿ 21ನೆ ತಾರೀಖಿನಾರಭ್ಯ ಇದರಡಿ ಕಂಡ ಬಡ್ತಿಗಳು ಮತ್ತು ವಾಪಸು ಬರೋಣಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

* * * * * * *

(17) ಮೆ|| ಜಾನ್ ಜೋಸೆಫ್ ವೈಟ್ಲಿಯವರು, ಸೂಪರ್‌ನ್ಯೂಮರರಿ ಮೊದಲನೇ ಗ್ರೇಡಿನ ಎಕ್ಸಿಕ್ಯೂಟಿವ್ ಇಂಜನಿಯರಾದ ಸೂಪರ್‌ನ್ಯೂಮರರಿ ಹಂಗಾಮಿ ದರ್ಜೆಯ ಮೂರನೇ ಕ್ಲಾಸಿನ ಸೂಪರಿಂಟೆಂಡಿಂಗ್ ಇಂಜನಿಯರಿಗೆ.

* * * * * * *

(ಸೈನ್ಡ್) ಡಬ್ಲ್ಯೂ. ಬಿ. ಡೀವಿರ್ಟರ್,

ಪಬ್ಲಿಕ್ ವರ್ಕ್ಸ್ ಇಲಾಖಾ, ಮದರಾಸು ಗವರ್ನ್ಮೆಂಟಿನ ಸೆಕ್ರೆಟರಿ.

315

ತಾರೀಖು 16ನೆ ಫೆಬ್ರವರಿ 1904.

ನಂ. 228—1189, ಮೆ|| ಎಂ. ಜೆ. ರಂಗಯ್ಯ, ಬಿ. ಇ, ಯವರು 1904ನೆ ಜನವರಿ 9ನೆ ತಾರೀಖಿನಾರಭ್ಯ ಮಾಹೆಯಾನ 80 ರೂಪಾಯಿಗಳ ತಲಬಿನ ಮೇಲೆ ಹಂಗಾಮಿ ಸಬ್ ಅಸಿಸ್ಟೆಂಟ್ ಇಂಜನಿಯರಾಗಿ ನೊಕರರ್ಮಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜೀಬ್,

ಡಬ್ಲ್ಯು. ಮೆಕಹಚೀ,

ಪಬ್ಲಿಕ್ ವರ್ಕ್ಸ್ ಇಲಾಖಾ, ಮೈಸೂರು ಗವರ್ನ್‌ಮೆಂಟ ಸೆಕ್ರೆಟರಿ.

ಮುಜರೈ.

ಇಸ್ತಿಹಾರ್‌ನಾಮೆ.

ತಾರೀಖು 10ನೇ ಫೆಬ್ರವರಿ 1904.

ನಂ. 2368, ಕಾಲಾತಿಕ್ರಮಣ ಯಾ ಇತರ ಕಾರಣಗಳಿಂದ ಖಾಲಿಗಳು ಉಂಟಾಗಿರುವದ್ದರ ದೆಶೆಯಿಂದ, ಮೈಸೂರ ಪ್ಯಾಲೆಸ ಕಂಟ್ರೋಲರವರ ಆಡಳಿತದಲ್ಲಿರುವ ಮುಜರಾಯಿಗೆ ಸಂಬಂಧಪಟ್ಟ ದೇವಸ್ಥಾನ ವಗೈರೆಗಳ ಕೆಲಸಗಳ ಮೇಲ್ವಿಚಾರಣೆ ಬಗ್ಯೆ ಧರ್ಮದರ್ಶಿಗಳ ಪರಿಷ್ಕರಿಸಲ್ಪಟ್ಟ ಇದರಡೀ ಕಂಡ ಪಟ್ಟಿಯು 1898ನೆ ಅಕ್ಟೋಬರ 10ನೆ ಮರ್ಕುಂ 460-8ನೆ ನಂಬರ ಗವರ್ನ್ಮೆಂಟಿನ ಪ್ರೊಸೀಡಿಂಗ್ಸಿನಲ್ಲಿ ಮಂಜೂರ್ಮಾಡಲ್ಪಟ್ಟ ಧರ್ಮದರ್ಶಿ ರೂಲುಗಳ 11ನೆ ಪ್ಯಾರಾ ಅನುಸರಿಸಿ ಖಾಯಿಮ್ಮಾಡಲ್ಪಟ್ಟಿರುತ್ತದೆ:—

ಮ|| ರಾ|| ರಾ|| ಅಂಬ್ಲೆ ಅಣ್ಣಯ್ಯಪಂಡಿತರು.
,, ಲಕ್ಷ್ಮೀನಾರಣಪ್ಪನವರು.
,, ಅಡ್ವೊಕೇಟರಾದ ಎಂ. ಸಿ. ರಂಗಯ್ಯಂಗಾರ್ರು.
,, ಅಡ್ವೊಕೇಟರಾದ ಎಚ್. ನರಸಿಂಗರಾಯರು.
,, ಧರ್ಮಾಧಿಕಾರಿ ಕುಟ್ಟಿ ನರಸಿಂಹ ಶಾಸ್ತ್ರಿಯವರು.

ಹುಕುಂ ಬಮೋಜೀಬ್,

ಎಲ್. ಅನಂತಸ್ವಾಮಿ ರಾವ್,

ಮುಜರೈ ಇಲಾಖೆಯ ಡೆಪ್ಯುಟಿ ಸೆಕ್ರೆಟರಿ.

ಮಿಲಿಟರಿ.

ಇಸ್ತಿಹಾರ್‌ನಾಮೆ.

ತಾರೀಖು 15ನೆ ಫೆಬ್ರವರಿ 1904.

ನಂ. 2547—9, ಸ್ 1903ನೆ ನವಂಬರ್ ಗುರ್ರೆ ಲಾಗಾಯಿತು ಲೋಕಲ್ ಸರ್ವಿಸ್ ರೆಜಿಮೆಂಟಿನ ಕವರ್ಟ್ಯಾಜೆಂಟರಾಗಿ ಇಂಪೀರಿಯಲ್ ಸರ್ವಿಸ್ ಲ್ಯಾನ್ಸರುಗಳ ಜಮೇದಾರ್ ಸೈಯದ್ ಲತೀಫ್ ಯವರ ನೊಕರರಾತಿಯನ್ನು ಮೈಸೂರು ಶೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜರವರು ಮಂಜೂರ್ಮಾಡಿರುತ್ತಾರೆ.

ಹುಕುಂ ಬಮೋಜೀಬ್,

ಆರ್. ಜೆ. ಜೋನ್ಸ್,

ಲೆಫಟಿನೆಂಟ್ ಕರ್ನಲ್, ಮಿಲಿಟರಿ ಅಸಿಸ್ಟೆಂಟ್.

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಪ್ರಸಿದ್ಧಿ ಮಾಡಲ್ಪಟ್ಟುದು. [ಸಂ. 7.

ಬೆಂಗಳೂರು, ಗುರುವಾರ, ಫೆಬ್ರವರಿ ತಾ॥ 18, ಸನ್ 1904.

II ನೇ ಭಾಗ.

ಇಂಡಿಯಾಗವರ್ನ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜಿಯರು ವಗೈರೆಯಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಇನಾಂ ಇಲಾಖಾ.

ಇಸ್ತಿಹಾರ್ನಾಮೆ.

ನಂಬರು 2, ತಾರೀಖು 12ನೆ ಫೆಬ್ರವರಿ ಸನ್ 1904ನೆ ಇಸವಿ.

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ, ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿರತಕ್ಕ ಚಿಲ್ಲರೆ ಇನಾಂಗಳ ಬಾಬತು ಫೈನಲ್ ಟೈಟಲ್ ಡೀಡ್ ಯಾನೆ ಖಾಯಂ ಪಟ್ಟೆಗಳು (100) ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರ ಬಳಿಗೆ ಬಟವಾಡೆ ಬಗ್ಗೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರಿ ತಾಲ್ಲೂಕಿನ ಅಮಲ್ದಾರರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸುಗಳು ಬಂದಮೇಲೆ ಅವುಗಳನ್ನು ತೆಗೆದುಕೊಳ್ಳುವ ಬಗ್ಗೆ ಸದರಿ ಇನಾಂದಾರರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರಿ ತಾಲ್ಲೂಕಿನ ಅಮಲ್ದಾರರು ಅಂಥಾ ನೋಟೀಸುಗಳನ್ನು ದೇರ್ ಮಾಡದೆ ಕೊಡತಕ್ಕದ್ದೆಂದು ನೇಮಿಸಲ್ಪಟ್ಟು ಇರುತ್ತಾರೆ.

3. ಸದರಿ ಚಿಲ್ಲರೆ ಇನಾಂಗಳ ಬಗ್ಗೆ ಈ ಆಫೀಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟು ಇರುತ್ತೆಂದು ಇದರ ದೆಶೆಯಿಂದ ಪ್ರಕಟಿಸಲ್ಪಟ್ಟು ಇರುತ್ತೆ.

ಜೆ. ಪಿ. ಗ್ರಾಂಟ್,
ಸೂಪರ್ರಿಂಟೆಂಡೆಂಟ್ ಆಫ್ ಇನಾಂ ಸೆಟಲ್ಮೆಂಟ್ಸ್, ಮೈಸೂರು.

ವಿದ್ಯಾಭ್ಯಾಸದ ಇಲಾಖೆ.

ಡಿ. ನಂಬರು 28ನೆಯ ಪ್ರಕಟನ ಪತ್ರಿಕೆ, ಸನ್ 1904ನೆಯ ಇಸವಿ ಜನವರಿ ತಾರೀಖು 9.

ಮೈಸೂರು ದೇಶೀಯ ಪರೀಕ್ಷಾ ಭಾಷಾ ಗ್ರಂಥಗಳು.

ಇದರಡಿ ಕಂಡ ಭಾಷಾ ಗ್ರಂಥಗಳು ಸನ್ 1905ನೆಯ ಇಸವಿ ನವಂಬರ್ ತಿಂಗಳಲ್ಲಿ ನಡೆವ ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ:—

ಕನ್ನಡ—ಗದ್ಯ:. ನಿಯಮಿಸಲ್ಪಟ್ಟಿರುವ ಭಾಗ. (ಇಲಾಖೆಯುವರಿಂದ ಮುದ್ರಿಸಲ್ಪಡುವುದು.)

ಪದ್ಯ:. ಹೊಸ ಪದ್ಯಸಾರ, Iನೆಯ ಭಾಗ, ಪದ್ಯಗಳು 196—342.

ತೆಲುಗು—ಗದ್ಯ...ರಾಜಶೇಖರ ಚರಿತ್ರ, ಪುಟಗಳು 1—42 (ಐದು ಪ್ರಕರಣಗಳು.)

ಪದ್ಯ...ನಳಚರಿತ್ರಮು.

ಸಂಸ್ಕೃತ— ಮೊದಲನೆಯ ಭಾಷೆ.

ಪದ್ಯ...ರಘುವಂಶ, V ಮತ್ತು VIನೆಯ ಸರ್ಗಗಳು.

ಗದ್ಯ...ಯುದ್ಧಕಾಂಡ, ಗರಳೆಪುರಿ ಶಾಸ್ತ್ರಿಗಳಿಂದ ರಚಿಸಲ್ಪಟ್ಟದು.

ಎರಡನೆಯ ಭಾಷೆ.

ಹಿತೋಪದೇಶ—ಮಿತ್ರಲಾಭ (ಇಲಾಖೆಯರ ಮುದ್ರಣ.)

ಲ್ಯಾಟಿನ್—ಸೀಜರ ಡಿ ಬೆಲ್ಲೊ ಗ್ಯಾಲಿಕೊ, Vನೆಯ ಪುಸ್ತಕ.

ಉರ್ದು—ನಿಸಬೆ-ಉರ್ದು, ಟ್ರೇನಿಂಗ್ ಕಾಲೇಜುಗಳಿಗೆ ನಿಯಮಿಸಲ್ಪಟ್ಟಿರುವುದು, ಮುನಷಿ ಗುಲಾಬ್ ಸಿಂಗ್ ರವರಿಂದ ರಚಿಸಲ್ಪಟ್ಟುದು, (ಪುಟಗಳು 98—108, 119-129 ಮತ್ತು 156—167, ವಿನಾ).

ಫಾರಿಷಿ— ಮೊದಲನೆಯ ಭಾಷೆ.

ಮುಂತಕಬಾತ್—ಇ—ಫಾರ್ಸಿ, IVನೆಯ ಭಾಗ, ರವರೇಡ್. ಇ. ಸಲ್ ಸಾಹೇಬರವರಿಂದ ರಚಿಸಲ್ಪಟ್ಟುದು.

ಇದರಡೀ ಕಂಡ ಭಾಷಾ ಗ್ರಂಥಗಳು ಸರ್ 1905ನೆಯ ಇಸವಿ ನವಂಬರ ತಿಂಗಳಲ್ಲಿ ನಡೆವ ಮೈಸೂರು ದೇಶಭಾಷೆಯ ಅಪ್ಪರ ಸೆಕೆಂಡರಿ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ:—

ಕನ್ನಡ – ಪದ್ಯ..(1) ಕಾದಂಬರಿ, ಪದ್ಯಗಳು 101—199.

(2) ರಾಮಾಯಣ ನಾಟಕ, ಪಂಡಿತ ಅಯ್ಯಾಶಾಸ್ತ್ರಿಗಳಿಂದ ರಚಿಸಲ್ಪಟ್ಟಿರು. (ಗ್ರಂಥಮಾಲೆಯಲ್ಲಿ ಮುದ್ರಿತವಾದುದು.)

(3) ನಳರಾಜೇಂದ್ರ ಚರಿತ್ರೆ, ಪಂಡಿತ ಬಸಪ್ಪ ಶಾಸ್ತ್ರಿಗಳಿಂದ ರಚಿಸಲ್ಪಟ್ಟುದು, Iನೆಯ ಅಧ್ಯಾಯ.

ಗದ್ಯ..(1) ಪ್ರಬಂಧಾವಳಿ, ಮೆ|| ಎಂ. ಎ. ರಾಮಾನುಜೈಯ್ಯಂಗಾರ್ಯರವರಿಂದ ರಚಿಸಲ್ಪಟ್ಟುದು—(ಪೂರ್ತಿಯಾಗಿ)

(2) ಅರ್ಥಶಾಸ್ತ್ರ, ಮೆ|| ಎಚ್. ವಿ. ನಂಜುಂಡೈಯ್ಯನವರಿಂದ ರಚಿಸಲ್ಪಟ್ಟುದು, IIನೆಯ ಭಾಗ, ಪುಟಗಳು 69—111.

(3) ರಾಮಾಶ್ವಮೇಧ—ಪುಟಗಳು 58—95.

ಸಂಸ್ಕೃತ—(1) ರಘುವಂಶ, IX ಮತ್ತು Xನೆಯ ಸರ್ಗಗಳು.

(2) ಪಂಚತಂತ್ರ, (ಮುಂಬೈ ಛಾಪೆ) Vನೆಯ ತಂತ್ರ.

ಉರ್ದು—ಗದ್ಯ...ಖನಿಸೆ ಘಟಮ (ಮುನಷಿ ಗಂಗಪರಸಾದ್ ರವರ ಪ್ರೆಸ್, ಲಕ್ನೊ).

ಸಂರಏ—ದಿ ಆನತ್ (ಮುನಷಿ ಗಂಗಪರಸಾದ್ ರವರ ಪ್ರೆಸ್, ಲಕ್ನೊ).

ಪದ್ಯ..ದಿವಾನ್—ಇ—ನಾಸಿಖ್, ರಡಿಫ್ ಅಲಿಫ್ ಇಂದ ನೂನ್ ಅಂತ್ಯದ ವರೆಗೆ.

ಫಾರಷಿ—ಪದ್ಯ..ದಿವಾನ್—ಇ—ಹಾಫಿಜ್, ರಡಿಫೆ-ಜೆ ಇಂದ್ರ ಕೊನೆಯ ವರೆಗೆ, (ನವಲ್ ಕಿಶೋರೀ ಪ್ರೆಸ್).

ಗದ್ಯ ಕಿಸ್ಸನಾಮ (ಫಿರ್ಡೋಸ್ ಪ್ರೆಸ್, ಕಲ್ಕತ್ತ).

ಪ್ರ ಕ ಟ ನ ಪ ತ್ರಿ ಕೆ

ಸರ್ 1904ನೆ ಇಸವಿ ಜನವರಿ 26ನೆ ತಾರೀಖಿನ ಡಿ. ನಂಬರು 39.

ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆ.

ಹೊಸದಾಗಿ ತಿದ್ದುಪಾಟು ಮಾಡಿದ ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಯ ನಿಬಂಧನೆಗಳು ಜನಗಳ ತಿಳುವಳಿಕೆ ಬಗ್ಗೆ ಈ ಕೆಳಗೆ ಪ್ರಕಟಿಸಲ್ಪಟ್ಟಿವೆ. [2, 3, 6, 7, 8, 9 ಮತ್ತು 15ನೆ ಅಂಶಗಳಲ್ಲಿನ ಬದಲಾವಣೆಗಳಿಗೆ ವಿಶೇಷ ಗಮನ ಕೊಡತಕ್ಕದ್ದು.]

1. ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಯು ಪ್ರತಿ ವರುಷವೂ ನವಂಬರು ತಿಂಗಳು ಹದಿನೈದನೇ ತಾರೀಖಿನಲ್ಲಿ ಅಥವಾ ಆ ತಾರೀಖು ಭಾನುವಾರವಾದಪಕ್ಷದಲ್ಲಿ ನವಂಬರು ತಿಂಗಳು 16ನೆ ತಾರೀಖಿನಲ್ಲಿ ಆರಂಭವಾಗಿ ಆ ದಿವಸದಲ್ಲಿಯೂ ಮುಂದಿನ ದಿವಸಗಳಲ್ಲಿಯೂ ಒಂದೊಂದು ಡಿಸ್ಟ್ರಿಕ್ಟಿನ ಮುಖ್ಯಸ್ಥಳದಲ್ಲಿಯೂ (Head quarters) ಚಿಕ್ಕಬಳ್ಳಾಪುರ ಮತ್ತು ಚನ್ನಪಟ್ಟಣ ಈ ಸ್ಥಳಗಳಲ್ಲಿಯೂ ಪರೀಕ್ಷಾ ಕಾಲಕ್ಕೆ ಪೂರ್ವವೇ ನೇಮಿಸಲ್ಪಡಬಹುದಾದ ಇತರ ಸ್ಥಳಗಳಲ್ಲಿಯೂ ನಡೆಯಿಸಲ್ಪಡುವುದು—

2. ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಗೆ ಅಡಿಯಲ್ಲಿ ವಿವರಿಸಲ್ಪಟ್ಟಿರುವವರು ಸೇರಬಹುದು.

(a) ಸರ್ಕಾರದ, ದ್ರವ್ಯಸಹಾಯದ ಅಥವಾ ಮುನಿಸಿಪಾಲಿಟಿಯ ಯಾವುದಾದರೂ ಒಂದು ಆಂಗ್ಲ—ದೇಶಭಾಷಾ ಪಾಠಶಾಲೆಯ ಅಥವಾ ಸರ್ಕಾರದಿಂದ ಅಂಗೀಕೃತವಾದ ಇತರ ಆಂಗ್ಲ—ದೇಶಭಾಷಾ ಪಾಠಶಾಲೆಯ ಮೂರನೇ ಶ್ರೇಣಿಯ (Form) ವಿದ್ಯಾರ್ಥಿಗಳು.

(b) ಸರ್ಕಾರದ, ದ್ರವ್ಯಸಹಾಯದ ಅಥವಾ ಸರ್ಕಾರದಿಂದ ಅಂಗೀಕೃತವಾಗಿ ಸ್ವಂತವಾಗಿಟ್ಟುಕೊಂಡಿರುವ ಯಾವದಾದರೂ ಒಂದು ದೇಶಭಾಷಾ ಪಾಠಶಾಲೆಯ ಐದನೇ ವರ್ಗದಲ್ಲಿರುವ (Class) ವಿದ್ಯಾರ್ಥಿಗಳು.

(c) ಸರ್ಕಾರದ, ದ್ರವ್ಯಸಹಾಯದ ಅಥವಾ ಸರ್ಕಾರದಿಂದ ಅಂಗೀಕೃತವಾಗಿ ಸ್ವಂತವಾಗಿಟ್ಟುಕೊಂಡಿರುವ ಸಂಸ್ಕೃತ ಮಿಡಿಲ್ ಪಾಠಶಾಲೆಗಳ ಮೇಲ್ಪಟ್ಟ ವರ್ಗದ ವಿದ್ಯಾರ್ಥಿಗಳು.

ಪರಂತು ಈ ಮೇಲ್ಕಂಡ ವಿದ್ಯಾರ್ಥಿಗಳು ಪರೀಕ್ಷೆಗೆ ಹಿಂದಿನ ಫೆಬ್ರವರಿ ತಿಂಗಳು 1ನೇ ತಾರೀಖಿನಿಂದ ದರಖಾಸ್ತು ಕೊಡುವ ತಾರೀಖಿನ ವರೆಗೆ ಕ್ರಮವಾಗಿ ವ್ಯಾಸಂಗಮಾಡುತ್ತಾ ಇದ್ದರೆಂದು ಪ್ರಮಾಣೀಕರಿಸಲ್ಪಡಬೇಕು.

[ಟಿಪ್ಪಣಿ 1. ವಿದ್ಯಾರ್ಥಿಗಳಾದ ಪರೀಕ್ಷ್ಯರೆಲ್ಲರೂ (Candidates) ಸಂವತ್ಸರಾಂತದವರೆಗೂ ಪಾಠಶಾಲೆಯಲ್ಲಿ ವ್ಯಾಸಂಗ ಮಾಡುತ್ತೇವೆಂದು ಪ್ರಮಾಣೀಕರಿಸಬೇಕು. ಪರೀಕ್ಷೆಗೆ ದರಖಾಸ್ತು ಕೊಟ್ಟ ತರುವಾಯ ಮನಃಪೂರ್ವಕವಾಗಿ ಪಾಠಶಾಲೆಗೆ ಕ್ರಮವಾಗಿ ಬಾರದೆ ಇರುವ ಅಥವಾ ಪಾಠಶಾಲೆಯ ವೇತನವನ್ನು (School Fee) ಕೊಡದೆ ಇರುವ ಯಾವ ವಿದ್ಯಾರ್ಥಿಯ ವಿಷಯವಾಗಿಯಾಗಲಿ ಹೆಡ್‌ಮಾಸ್ಟರ್ ಎಂಬರೆ ಮುಖ್ಯೋಪಾಧ್ಯಾಯರುಗಳು ದೇಶೀಯ ಪರೀಕ್ಷಾ ಆಫೀಸ್ ಮ್ಯಾನೇಜರವರಿಗೆ ಬರೆದುಕೊಂಡಲ್ಲಿ ಅಂಥಾ ಪರೀಕ್ಷ್ಯರು ಪರೀಕ್ಷೆಗೆ ಸೇರಿಸಲ್ಪಡುವದಿಲ್ಲ.

ಟಿಪ್ಪಣಿ 2. ಹಿಂದಿನ ಯಾವುದಾದರೂ ಒಂದು ವರ್ಷದಲ್ಲಿ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗಿ ತೇರ್ಗಡೆಯಾಗದ ಬಬ್ಬ ವಿದ್ಯಾರ್ಥಿ ಪರೀಕ್ಷ್ಯನ (Pupil Candidate) ವಿಷಯದಲ್ಲಿ ಮುಖ್ಯೋಪಾಧ್ಯಾಯರು ಇವನು ಪುನಃ ಪರೀಕ್ಷೆಗೆ ಹೋಗುವ ವರುಷದಲ್ಲಿ ಆ ವರ್ಷದ ಒಂದು ಭಾಗ ಯಾವುದಾದರೂ ಒಂದು ಅಂಗೀಕೃತವಾದ ಪಾಠಶಾಲೆಯಲ್ಲಿ ಓದುತ್ತಿದ್ದನೆಂಬ ಪ್ರಮಾಣ ಪತ್ರಿಕೆ ಇಲ್ಲದೆಯೇ ಸೇರಿಸಿಕೊಳ್ಳಬೇಕೆಂದು ಜುಲೈ ಗುರ್‍ಶೀ ತಾರೀಖಿಗೆ ಮುಂಚಿತವಾಗಿ ಶಿಫಾರಸು ಮಾಡಿದರೆ ಆ ಪರೀಕ್ಷ್ಯನನ್ನು ಹಾಗೆ ಸೇರಿಸಿಕೊಳ್ಳಬಹುದು.

ಟಿಪ್ಪಣಿ 3. ಈ ಪರೀಕ್ಷೆಯ ಸಂಬಂಧದಲ್ಲಿ ಸ್ವಂತವಾಗಿಟ್ಟಿರುವ ಪಾಠಶಾಲೆಗಳು ಸರ್ಕಾರದಿಂದ ಅಂಗೀಕರಿಸಲ್ಪಡಬಹುದು.

ಟಿಪ್ಪಣಿ 4. ಯಾವುದಾದರೂ ಒಂದು ಅಂಗೀಕೃತವಾದ ಪಾಠಶಾಲೆಯ ಮುಖ್ಯೋಪಾಧ್ಯಾಯನು ಲೋವರ್ ಸೆಕೆಂಡರಿ ಪರೀಕ್ಷೆಯ ಪ್ರಕಟನ ಪತ್ರಿಕೆಯ ತತ್ಕಾಲದಲ್ಲಿ ಆಚರಣೆಯಲ್ಲಿರುವ ಯಾವ ಕಟ್ಟಳೆಗಾದರೂ ವ್ಯತಿರಿಕ್ತವಾಗಿ ನಡೆದ ಪಕ್ಷದಲ್ಲಿ ಪರೀಕ್ಷಾ ನಿರ್ವಾಹಕ ಸಭೆಯವರು ಲೋವರ್ ಸೆಕೆಂಡರಿ ಪರೀಕ್ಷೆಯ ಸಂಬಂಧದಲ್ಲಿ ಆ ಪಾಠಶಾಲೆಯನ್ನು ಅಂಗೀಕರಿಸದೆ ಇರಬಹುದು.]

(d) ಸರ್ಕಾರದ, ದ್ರವ್ಯಸಹಾಯದ ಅಥವಾ ಅಂಗೀಕೃತವಾದ ದೇಶಭಾಷಾ ಪಾಠಶಾಲೆಗಳ ಉಪಾಧ್ಯಾಯರುಗಳು.

(e) ಮೇಲ್ಕಂಡವರಲ್ಲದೆ ಪರೀಕ್ಷೆಗೆ ಬರುವವರೆಲ್ಲರೂ ಸ್ವಂತ ವ್ಯಾಸಂಗಿಗಳೆಂದು ಭಾವಿಸಲ್ಪಡುವರು. ಈ ಪರೀಕ್ಷ್ಯರು ಸರ್ಕಾರದ ಉದ್ಯೋಗಸ್ಥರಾಗಿರುವ ಪಕ್ಷದಲ್ಲಿ ಯಾವ ವಯಸ್ಸಿನವರಾಗಿದ್ದರೂ ಇರಬಹುದು. ಸರ್ಕಾರದ ಉದ್ಯೋಗಸ್ಥರಲ್ಲದ ಪಕ್ಷದಲ್ಲಿ ಅವರು ಹದಿನಾರು ವರುಷಕ್ಕಿಂತ ಕಡಮೆಯಾದ ವಯಸ್ಸುಳ್ಳವರಾಗಿರಕೂಡದು.

[ಟಿಪ್ಪಣಿ. ಬಬ್ಬ ಹೆಡ್ ಮಾಸ್ಟರ್ ಎಂದರೆ ಮುಖ್ಯೋಪಾಧ್ಯಾಯನು ಲೋವರ್ ಸೆಕೆಂಡರಿ ಪರೀಕ್ಷೆಗೆ ಸ್ವಂತ ವ್ಯಾಸಂಗಿಯಂತೆ ಸೇರಿದ್ದ ತನ್ನ ಪಾಠಶಾಲೆಯ ಯಾವನಾದರೂ ಬಬ್ಬ ವಿದ್ಯಾರ್ಥಿಯ ಪರೀಕ್ಷೆಯ ಫಲಿತಾಂಶವು ತನ್ನ ಪಾಠಶಾಲೆಗೆ ಸೇರಬೇಕೆಂದರೆ ಪರೀಕ್ಷೆ ನಡೆಯುವ ಕಾಲಕ್ಕೆ ಪೂರ್ವವೇ ದೇಶೀಯ ಪರೀಕ್ಷೆಗಳ ಮ್ಯಾನೇಜರವರಿಗೆ ಬರೆದುಕೊಂಡ ಪಕ್ಷ ಅದಲ್ಲಿ ಫಲಿತಾಂಶವನ್ನು ಸೇರಿಸಿಕೊಡಬಹುದು.]

3. ಯಾವುದಾದರೂ ಒಂದು ದೇಶಭಾಷೆಯನ್ನು ಪ್ರಥಮ ಭಾಷೆಯಾಗಿ ತೆಗದುಕೊಂಡು ಮೈಸೂರು ಉಪಾಧ್ಯಾಯರ ಅಥವಾ ವಿದ್ಯಾರ್ಥಿಗಳ ಪರೀಕ್ಷೆಯಲ್ಲಾಗಲಿ, ಮೈಸೂರು ಅಥವಾ ಮದರಾಸ್ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಾಗಲಿ, ಅಥವಾ ಮದರಾಸ್ ಮಿಡಿಲ್ ಸ್ಕೂಲ್ ಪರೀಕ್ಷೆಯಲ್ಲಾಗಲಿ ಮೊದಲೇ ತೇರ್ಗಡೆಯಾಗಿರುವವರು, ನಿಯಮಿಸಲ್ಪಟ್ಟ ವೇತನವನ್ನು (Fee) ಕೊಟ್ಟು ಪರೀಕ್ಷೆಗೆ ಸೇರಿಸಿಕೊಳ್ಳಲು ಬರೆದುಕೊಳ್ಳುವ ದರಖಾಸ್ತುಗಳೊಡನೆ ತಾವು ತೇರ್ಗಡೆಯಾಗಿರುವ ಅಂಶವನ್ನು ತಿಳಿಸುವ ನಿರ್ಣಯ ಪತ್ರಿಕೆಯನ್ನು (Certificate) ಕಳುಹಿಸಿಕೊಟ್ಟರೆ, ಇಂಗ್ಲಿಷ್ ಭಾಷೆಯಲ್ಲಿ ಮಾತ್ರವೇ ಆಗಲಿ, ಸಂಸ್ಕೃತ ಭಾಷೆಯಲ್ಲಿ ಮಾತ್ರವೇ ಆಗಲಿ, ಅಥವಾ ಪರೀಕ್ಷ್ಯರು ಮೊದಲೇ ತೇರ್ಗಡೆಯಾಗಿರುವ ದೇಶಭಾಷೆಯಲ್ಲದ ಬೇರೆ ಯಾವ ದೇಶಭಾಷೆಯಲ್ಲಿ ಮಾತ್ರವೇ ಆಗಲಿ, ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಗೆ ಸೇರಬಹುದು.

4. ಕನ್ನಡವನ್ನು ಐಚ್ಛಿಕ ಭಾಷೆಯಾಗಿ ತೆಗೆದುಕೊಂಡು ಮದ್ರಾಸ್ ಮಿಡಲ್ ಸ್ಕೂಲ್ ಅಥವಾ ಅದಕ್ಕಿಂತ ಅಧಿಕವಾದ ಬೇರೆ ಯಾವುದಾದರೂ ಒಂದು ಪರೀಕ್ಷೆಯಲ್ಲಿ ತೇರ್ಗಡೆಯಾಗಿಲ್ಲದಿದ್ದರೆ ಮೈಸೂರು ಸರ್ಕಾರದ ದೇಶಭಾಷಾ ಸಂಬಂಧವಾದ ಇಲಾಖೆಗಳಲ್ಲಿ ಉದ್ಯೋಗವನ್ನು ಅಪೇಕ್ಷಿಸುವವರೆಲ್ಲರೂ ಕನ್ನಡವನ್ನು ಒಂದು ಭಾಷೆಯಾಗಿ ತೆಗದುಕೊಂಡು ಈ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಅವಶ್ಯಕವಾಗಿರುತ್ತದೆ.

5. ಸರ್ಕಾರದ ದೇಶಭಾಷಾ ಪಾಠಶಾಲೆಯಲ್ಲಿ ಉಪಾಧ್ಯಾಯರ ಕೆಲಸವನ್ನು ಅಪೇಕ್ಷಿಸುವವರು ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕಲ್ಲದೆ ಮತ್ತು ತತ್ಕಾಲದಲ್ಲಿ ಸರ್ಕಾರದ ಪಾಠಶಾಲೆಗಳಲ್ಲಿರುವ ಉಪಾಧ್ಯಾಯರುಗಳು ತಾವು ಅಭಿವೃದ್ಧಿಯನ್ನು ಹೊಂದಲು ಅರ್ಹರಾಗಬೇಕಾದಲ್ಲಿ ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು.

6. ಈ ಪರೀಕ್ಷೆಯ ವಿಷಯಗಳು ಕೆಳಗೆ ವಿವರಿಸಲ್ಪಟ್ಟಿವೆ :—

ಅವಶ್ಯಕ ವಿಷಯಗಳು.

I. ಪ್ರಥಮ ಭಾಷೆ—A. ಇಂಗ್ಲಿಷ್, B. ಕನ್ನಡ, ತೆಲುಗು ಅಥವಾ ಉರ್ದು C. ಸಂಸ್ಕೃತ, D. ಫಾರಸಿ.

A. ಇಂಗ್ಲಿಷ್.—120 ಅಂಕಗಳು.

ಇಂಗ್ಲಿಷ್ ಭಾಷೆಯು ಪ್ರತಿಯೊಂದಕ್ಕೂ 60 ಅಂಕಗಳುಳ್ಳ ಎರಡು ಶಾಖೆಗಳಾಗಿ ವಿಭಾಗಿಸಲ್ಪಟ್ಟಿರುವುದು.

I ನೆಯ ಶಾಖೆ—

(*a*) **ಕೈ ಬರವಣಿಗೆ**.—ಅಚ್ಚು ಹಾಕಲ್ಪಟ್ಟ ಅಥವಾ ಶಿಲಾಯಂತ್ರದಿಂದ ಛಾಪಿಸಲ್ಪಟ್ಟ ಒಂದು ಪತ್ರಿಕೆಯನ್ನು ಶೀಘ್ರವಾಗಿಯೂ ಸ್ಪಷ್ಟವಾಗಿಯೂ ಚೆನ್ನಾಗಿಯೂ ಬರೆಯುವುದು.—10 ಅಂಕಗಳು.

(*b*) ಉಕ್ತಲೇಖನ.—ಸಮ್ಮತವಾದ ಯಾವುದಾದರೂ ಒಂದು ಮೂರನೇ ಇಂಗ್ಲಿಷ್ ರೀಡರಿಗೆ ಸಮಾನವಾದ ಒಂದು ಪುಸ್ತಕದಿಂದ ಓದಲ್ಪಡುವ ಒಂದು ಭಾಗವನ್ನು ಮತ್ತು ವಿಶೇಷ ಕಷ್ಟವಿಲ್ಲದ ಕೆಲವು ಪದಗಳನ್ನು ಬರೆಯುವುದು.—15 ಅಂಕಗಳು.

(*c*) ಭಾಷಾಂತರೀಕರಣ ಅಥವಾ ಇಂಗ್ಲಿಷ್ ಪ್ರಬಂಧರಚನೆ.

ಭಾಷಾಂತರೀಕರಣ.

(1) ಕಥಾರೂಪವಾದ ವಚನಕಾವ್ಯದ ಒಂದು ಸಾಧಾರಣವಾದ ಭಾಗವನ್ನು ಇಂಗ್ಲಿಷ್ ಭಾಷೆಯಿಂದ ಪರೀಕ್ಷ್ಯನ ದೇಶಭಾಷೆಗೆ ಭಾಷಾಂತರ ಮಾಡುವುದು.—15 ಅಂಕಗಳು.

(2) ಕಥಾರೂಪವಾದ ವಚನಕಾವ್ಯದ ಒಂದು ಸಾಧಾರಣವಾದ ಭಾಗವನ್ನು ಸುಲಭವಾದ ಚಿಕ್ಕ ವಾಕ್ಯಗಳನ್ನು ದೇಶಭಾಷೆಯಿಂದ ಇಂಗ್ಲಿಷ್ ಭಾಷೆಗೆ ಭಾಷಾಂತರ ಮಾಡುವುದು.—20 ಅಂಕಗಳು.

ಇಂಗ್ಲಿಷ್ ಪ್ರಬಂಧರಚನೆ (ಇಂಗ್ಲಿಷ್ ದೇಶಭಾಷೆಯಾಗಿರುವ ಪರೀಕ್ಷ್ಯರಿಗೆ ಮಾತ್ರ) :—

(1) ಕೊಡಲ್ಪಡುವ ಯಾವುದಾದರೂ ಒಂದು ಸಂಗತಿಯನ್ನು ಕುರಿತು ಸಂಕ್ಷೇಪವಾದ ಒಂದು ಪತ್ರಿಕೆಯನ್ನಾಗಲಿ, ಯಾವುದಾದರೂ ಒಂದು ಸ್ಥಳದ ಸಂಕ್ಷೇಪವಾದ ವರ್ಣನೆಯನ್ನಾಗಲಿ, ಯಾವುದಾದರೂ ಒಂದು ಉಪಯೋಗವಾದ ಪದಾರ್ಥದ ವಿವರವನ್ನಾಗಲಿ ಅಥವಾ ಪ್ರಖ್ಯಾತವಾದ ಯಾವುದಾದರೂ ಒಂದು ಸಂಗತಿಯ ಕಥೆಯನ್ನಾಗಲಿ ಬರೆಯುವುದು.—20 ಅಂಕಗಳು.

(2) ಹಿಂದೆ ಓದದಿರುವ ಪದ್ಯಕಾವ್ಯದ ಒಂದು ಚಿಕ್ಕ ಭಾಗವನ್ನು ಅನುವಾದ ಮಾಡುವುದು. (Paraphrasing) 15 ಅಂಕಗಳು.

II ನೆಯ ಶಾಖೆ.—

(*d*) ವ್ಯಾಕರಣ.—ಅಕ್ಷರಲಕ್ಷಣ, ಶಬ್ದಲಕ್ಷಣ, ವಾಕ್ಯಲಕ್ಷಣ, ನಾಮಪದಗಳು, ಕ್ರಿಯಾಪದಗಳು, ಗುಣವಾಚಕಗಳು ಮತ್ತು ಕ್ರಿಯಾವಿಶೇಷಣಗಳು ಇವುಗಳ ಉತ್ಪತ್ತಿ ; ಸಾಧಾರಣ ವಾಕ್ಯಗಳು, ಸಂಯೋಜಿತ ವಾಕ್ಯಗಳು ಮತ್ತು ಸಂಮಿಶ್ರಿತ ವಾಕ್ಯಗಳು ಇವುಗಳ ವಿಭಜನೆ ; ಇವುಗಳ ವಿಷಯವಾದ ಸಿ. ವಿ. ಇ. ಸಮಾಜದ ನ್ಯೂ ಮಾನ್ಯುಯಲ್ ಆಫ್ ಇಂಗ್ಲಿಷ್ ಗ್ರಾಮರ್ ಎಂಬ ವ್ಯಾಕರಣಕ್ಕಾಗಲಿ ಅಥವಾ ಮೇಸನ್ನವರ ಫಸ್ಟ್ ನೋಷನ್ಸ್ ಆಫ್ ಗ್ರಾಮರ್ ಎಂಬ ವ್ಯಾಕರಣಕ್ಕಾಗಲಿ ವಿಶೇಷವಾಗಿ ಸಂಬಂಧಪಟ್ಟ ಅಭ್ಯಾಸ ಪಾಠಗಳು.—20 ಅಂಕಗಳು.

(*e*). ಭಾಷೆ.—ಪ್ರಶ್ನೆಗಳು ಇದರಡಿ ಕಂಡ ಸಂಗತಿಗಳಿಗೆ ವಿಶೇಷವಾಗಿ ಸಂಬಂಧಪಟ್ಟಿರುವುವು :—ಪದಗಳ, ಪದಸ್ತೋಮಗಳ ಮತ್ತು ಭಾಷಾ ಸಂಪ್ರದಾಯಗಳ ಅರ್ಥ ವಿವರಣೆ ಮತ್ತು ಪ್ರಯೋಗ; ವಾಕ್ಯಗಳ ಅರ್ಥ ವಿವರಣೆ; ಲೋಪಿಸಿ ಇರುವುವನ್ನು ಬರೆಯುವುದು ; ಕೊಡಲ್ಪಡುವ ಪದಗಳನ್ನಾಗಲಿ, ಪದಸ್ತೋಮಗಳನ್ನಾಗಲಿ, ಭಾಷಾ ಸಂಪ್ರದಾಯಗಳನ್ನಾಗಲಿ ಸರಿಯಾಗಿ ಉಪಯೋಗಿಸಿ ಸಣ್ಣ ಸಣ್ಣ ವಾಕ್ಯಗಳನ್ನು ಬರೆಯುವುದು ; ಸೂಚಿಸಲ್ಪಡುವ ಪ್ರಕಾರ ಅನ್ವಯಗಳನ್ನು ಬದಲಾಯಿಸಿ ವಾಕ್ಯಗಳನ್ನು ಪುನಃ ಬರೆಯುವುದು : ಮುರ್ರೆರವರ ಫಸ್ಟ್ ವರ್ಕ್ ಇನ್ ಇಂಗ್ಲಿಷ್, Iನೆಯ ಭಾಗ, ಅಧ್ಯಾಯಗಳು I—V ಮತ್ತು ಹೈಡ್ ಎಂಬಾತನ ಲೆಸನ್ಸ್ ಇನ್ ದಿ ಯೂಸ್ ಆಫ್ ಇಂಗ್ಲಿಷ್, I ಮತ್ತು IIನೆಯ ಭಾಗಗಳು, ಈ ಪುಸ್ತಕಗಳಲ್ಲಿರುವಂತೆ ಇಂಗ್ಲಿಷ್ ಭಾಷಾ ಪ್ರಯೋಗದ ಸುಲಭವಾದ ಅಭ್ಯಾಸ ಪಾಠಗಳು.—40 ಅಂಕಗಳು.

B. ಕನ್ನಡ, ತೆಲುಗು, ಅಥವಾ ಉರ್ದು.—

(a) ಕೈ ಬರವಣಿಗೆ.—ಅಚ್ಚು ಹಾಕಲ್ಪಟ್ಟ ಅಥವಾ ಶಿಲಾಯಂತ್ರದಿಂದ ಛಾಪಿಸಲ್ಪಟ್ಟ ಒಂದು ಪತ್ರಿಕೆಯನ್ನು ಸ್ಪಷ್ಟವಾಗಿಯೂ, ಚೆನ್ನಾಗಿಯೂ ಬರೆಯುವುದು.—10 ಅಂಕಗಳು.

(b) ಅಕ್ಷರಸಂಯೋಜನ.—ಅಪ್ಪರ್ ಪ್ರೈಮರಿ ಇಯತ್ತೆಯ (Standard) ಒಂದು ಪುಸ್ತಕದಿಂದ ಓದಲ್ಪಡುವದನ್ನು ಬರೆಯುವುದು.—10 ಅಂಕಗಳು.

(c) ವ್ಯಾಕರಣ.—ಪಾಠಶಾಲೆಯಲ್ಲಿ ಓದಲು ಯೋಗ್ಯವೆಂದು ಅಂಗೀಕರಿಸಲ್ಪಟ್ಟ ಯಾವುದಾದರೂ ಒಂದು ವ್ಯಾಕರಣದಲ್ಲಿ ಬರೆದಿರುವಂತೆ, ಅಕ್ಷರಲಕ್ಷಣ, ಶಬ್ದಲಕ್ಷಣ, ವಾಕ್ಯಲಕ್ಷಣ ಇವುಗಳ ವಿಷಯವಾದ ಅಭ್ಯಾಸ ಪಾಠಗಳು.—25 ಅಂಕಗಳು.

(d) ಭಾಷಾಗ್ರಂಥ.—ಪ್ರಕಟಿಸಲ್ಪಡುವ ಗ್ರಂಥ, ಪದಗಳು, ಪದಸ್ತೋಮಗಳು, ಭಾಷಾಸಂಪ್ರದಾಯಗಳು, ವಾಕ್ಯಗಳು ಮತ್ತು ವಾಕ್ಯಸ್ತೋಮಗಳು ಇವುಗಳ ವಿವರಣೆ; ಲುಪ್ತವಾದುದನ್ನು ಸೇರಿಸಿ ಬರೆಯುವುದು; ಸಾಧಾರಣ ಪದಗಳ ಉತ್ಪತ್ತಿ ಮತ್ತು ಅವುಗಳ ರೂಪನಿಷ್ಪತ್ತಿ ಮತ್ತು ಪೂರ್ವಪದ ಪ್ರತ್ಯಯಗಳ ಅನುಬಂಧನೆಯಿಂದಾಗುವ ಅರ್ಥಭೇದಗಳು; ಪದ್ಯಗಳ ಮುಖ್ಯ ತಾತ್ಪರ್ಯದ ವಿವರಣೆ.—40 ಅಂಕಗಳು.

(e) ಪ್ರಬಂಧರಚನ.—

(1) ಕೊಡಲ್ಪಡುವ ಯಾವುದಾದರೂ ಒಂದು ಸಂಗತಿಯನ್ನು ಕುರಿತು ಸಂಕ್ಷೇಪವಾದ ಒಂದು ಪತ್ರಿಕೆಯನ್ನು ಬರೆಯುವುದು.—15 ಅಂಕಗಳು.

(2) ಯಾವುದಾದರೂ ಒಂದು ಸ್ಥಳದ ಸಂಕ್ಷೇಪವಾದ ವರ್ಣನೆಯನ್ನಾಗಲಿ (ಸ್ವಾಭಾವಿಕವಾದ ಅಥವಾ ಮನುಷ್ಯಕೃತವಾದ) ಯಾವುದಾದರೂ ಒಂದು ಉಪಯೋಗವಾದ ಪದಾರ್ಥದ ವಿವರವನ್ನಾಗಲಿ ಪ್ರಖ್ಯಾತವಾದ ಯಾವುದಾದರೂ ಒಂದು ಸಂಗತಿಯ ಕಥೆಯನ್ನಾಗಲಿ ಪರೀಕ್ಷ್ಯನ ಸ್ವಂತ ಮಾತುಗಳಿಂದ ಬರೆಯುವುದು.—20 ಅಂಕಗಳು.

C. ಸಂಸ್ಕೃತ.—120 ಅಂಕಗಳು.

(a) ಕೈ ಬರವಣಿಗೆ.—ದೇವನಾಗರಿಯ ಅಕ್ಷರದಲ್ಲಿ ಛಾಪಿಸಲ್ಪಟ್ಟಿರುವ ಒಂದು ಪತ್ರಿಕೆಯನ್ನು ಸ್ಪಷ್ಟವಾಗಿಯೂ ಚನ್ನಾಗಿಯೂ ಬರೆಯುವುದು.—10 ಅಂಕಗಳು.

(b) ಅಕ್ಷರಸಂಯೋಜನ.—ಹೇಳಲ್ಪಡುವ ಕೆಲವು ಕಠಿಣವಾದ ಪದಗಳನ್ನೂ ಮತ್ತು ನಿಯಮಿಸಲ್ಪಟ್ಟ ಭಾಷಾಗ್ರಂಥಕ್ಕೆ ಸಮಾನವಾದ ಯಾವುದಾದರೂ ಒಂದು ಪುಸ್ತಕದಿಂದ ಓದಲ್ಪಡುವ ಒಂದು ಚಿಕ್ಕ ಭಾಗವನ್ನೂ ದೇವನಾಗರಿಯಕ್ಷರದಲ್ಲಿ ಬರೆಯುವುದು.—10 ಅಂಕಗಳು.

(c) ವ್ಯಾಕರಣ.—ಸಂಧಿಸೂತ್ರಗಳು, ಸ್ವರಾಂತವಾದ ಅಥವಾ ವ್ಯಂಜನಾಂತವಾದ ನಾಮಪದಗಳು ಮತ್ತು ಗುಣವಾಚಕಗಳು, ಸರ್ವನಾಮಗಳು, ಮತ್ತು ಸರ್ವನಾಮಾತ್ಮಕ ಗುಣವಾಚಕಗಳು, ಇವುಗಳ ವಿಭಕ್ತಿರೂಪಗಳು; ಅಪೂರ್ವವಾದ ಮತ್ತು ವಿಕಾರವನ್ನು ಹೊಂದಿದ ವಿಭಕ್ತಿರೂಪಗಳು; ಗುಣವಾಚಕಗಳ ತಾರತಮ್ಯಗಳು; ಸಂಖ್ಯಾವಾಚಕಗಳು; ಎಲ್ಲಾ ಹತ್ತು ವಿಕರಣಿಯ ಧಾತುಗಳ ಸಾರ್ವಧಾತುಕ ರೂಪಗಳು; ಒಂದನೇ, ನಾಲ್ಕನೇ, ಆರನೇ ಮತ್ತು ಹತ್ತನೇ ವಿಕರಣಿಯ ಧಾತುಗಳ ಲಿಙ್ ರೂಪಗಳು; ಲಿಟ್, ಲುಟ್ ಲೃಟ್, ಮತ್ತು ಲೃಙ್; ಕರ್ಮಣಿ ಪ್ರಯೋಗ; ಸಮಾಸಪದಗಳು. [ಡಾಕ್ಟರ್ ಭಂಡಾರ್ಕರರವರ ಸಂಸ್ಕೃತದ ಮೊದಲನೇ ಪುಸ್ತಕದಲ್ಲಿಯೂ ಮತ್ತು ಎರಡನೇ ಪುಸ್ತಕದ ಮೊದಲು 20 ಪಾಠಗಳಲ್ಲಿಯೂ ಹೇಳಿರುವಂತೆ.]—25 ಅಂಕಗಳು.

(d) ಭಾಷಾಗ್ರಂಥಗಳು.—ಪತ್ರಿ ವರ್ಷದಲ್ಲಿಯೂ ನಿಯಮಿಸಲ್ಪಡಬಹುದಾದ ಗ್ರಂಥಗಳು; ವಚನಕಾವ್ಯದಲ್ಲಿ ಸುಮಾರು 80 ಪುಟಗಳು ಮತ್ತು ಪದ್ಯಕಾವ್ಯದಲ್ಲಿ 1,000 ಪಙ್ತಿಗಳಿಗೆ ಅಧಿಕವಿಲ್ಲದೆ.

ಪರೀಕ್ಷೆಯು ಅನ್ವಯ, ಅರ್ಥವಿವರಣೆ ಮತ್ತು ಸರಳಾನುವಾದ ಇವುಗಳಿಗೆ ವಿಶೇಷವಾಗಿ ಸಂಬಂಧಪಡುವುದು.—40 ಅಂಕಗಳು.

(e) ಭಾಷಾಂತರೀಕರಣ.—35 ಅಂಕಗಳು.

(1) ಪಂಚತಂತ್ರಕ್ಕೆ ಸಮಾನವಾದ ಯಾವುದಾದರೂ ಒಂದು ಸಂಸ್ಕೃತ ಗ್ರಂಥದಿಂದ ತೆಗೆದು ಕೊಡಲ್ಪಡುವ ವಚನರೂಪವಾದ ಒಂದು ಭಾಗವನ್ನು ಪರೀಕ್ಷ್ಯನ ದೇಶಭಾಷೆಗೆ ಭಾಷಾಂತರ ಮಾಡುವುದು.—15 ಅಂಕಗಳು.

(2) ವಿಶೇಷ ಕಠಿಣವಲ್ಲದ ಒಂದು ದೇಶಭಾಷಾ ಗ್ರಂಥದಿಂದ ಕೊಡಲ್ಪಡುವ ವಚನರೂಪವಾದ ಒಂದು ಭಾಗವನ್ನು ಸಂಸ್ಕೃತಕ್ಕೆ ಭಾಷಾಂತರ ಮಾಡುವುದು.—20 ಅಂಕಗಳು.

D. ಫಾರಸಿ.—

(a) ಕೈ ಬರವಣಿಗೆ.—ಬರೆಯಲ್ಪಟ್ಟ ಅಥವಾ ಶಿಲಾಯಂತ್ರದಿಂದ ಛಾಪಿಸಲ್ಪಟ್ಟ ಒಂದು ಪತ್ರಿಕೆಯನ್ನು ಸ್ಪಷ್ಟವಾಗಿಯೂ ಚೆನ್ನಾಗಿಯೂ ಬರೆಯುವುದು.—10 ಅಂಕಗಳು.

(*b*) ಅಕ್ಷರಸಂಯೋಜನ.—ಸಾದಿ ಎಂಬವರಿಂದ ರಚಿಸಲ್ಪಟ್ಟ ಗುಲಿಸ್ತಾನ್ ಗ್ರಂಥಕ್ಕೆ ಸಮಾನವಾಗಿರುವ ಯಾವುದಾದರೂ ಒಂದು ಫಾರಸಿ ಪುಸ್ತಕದಿಂದ ಓದಲ್ಪಡುವ ಒಂದು ಭಾಗವನ್ನೂ ಮತ್ತು ವಿಶೇಷ ಕಠಿಣವಿಲ್ಲದ ಕೆಲವು ಪದಗಳನ್ನೂ ಬರೆಯುವುದು.—10 ಅಂಕಗಳು.

(*c*) ವ್ಯಾಕರಣ.—ಮೌಲ್ವಿ ಮಹಮ್ಮದ್ ಹುಸೇನ್ ಅಜಾದ್ ಎಂಬವರ ಫಾರಸಿ ವ್ಯಾಕರಣದಲ್ಲಿ ಅಥವಾ ಜಮಿಉಲ್ ಖವಾಡ್ (ಪಂಜಾಬ್ ಛಾಪಾ) ನಲ್ಲಿ ಬರೆದಿರುವಂತೆ ಶಬ್ದಲಕ್ಷಣ ಮತ್ತು ವಾಕ್ಯಲಕ್ಷಣ, ಮತ್ತು ಫಾರ್ಬಸ್ ಎಂಬವರಿಂದ ರಚಿಸಲ್ಪಟ್ಟ ಫಾರಸಿ ವ್ಯಾಕರಣದ ಆರನೇ ಪ್ರಕರಣವನ್ನು ವ್ಯಾಸಂಗ ಮಾಡುವುದರಿಂದ ಫಾರಸಿ ಭಾಷೆಗೆ ಸೇರಿರುವ ಅರಬೀಪದಗಳ ಸ್ವಭಾವ ಮತ್ತು ಉಪಯೋಗ ಇವುಗಳನ್ನು ಕುರಿತು ಎಷ್ಟು ಜ್ಞಾನ ಉಂಟಾಗುತ್ತದೋ ಅಷ್ಟು ಜ್ಞಾನವಿರಬೇಕು.—25 ಅಂಕಗಳು.

(*d*) ಭಾಷಾಗ್ರಂಥಗಳು.—ಪ್ರಕಟಿಸಲ್ಪಡುವ ಗ್ರಂಥ—40 ಅಂಕಗಳು.

(*e*) ಭಾಷಾಂತರೀಕರಣ.—

(1) ನಿಯಮಿಸಲ್ಪಟ್ಟ ಫಾರಸಿ ಭಾಷಾಗ್ರಂಥಕ್ಕೆ ಸಮಾನವಾದ ಯಾವುದಾದರೂ ಒಂದು ಫಾರಸಿ ಪುಸ್ತಕದ ವಚನ ರೂಪವಾದ ಒಂದು ಭಾಗವನ್ನು ಉರ್ದುವಿಗೆ ಭಾಷಾಂತರ ಮಾಡುವುದು.—15 ಅಂಕಗಳು.

(2) ವಿಶೇಷ ಕಾಠಿಣ್ಯವಲ್ಲದ ಉರ್ದು ವಚನಕಾವ್ಯದ ಒಂದು ಭಾಗವನ್ನು ಫಾರಸಿಗೆ ಭಾಷಾಂತರ ಮಾಡುವುದು — 20 ಅಂಕಗಳು.

II. ಅಂಕಗಣಿತ.—ಶುದ್ಧ ದಶಮಾಂಶಗಳು ಮತ್ತು ಭಿನ್ನರಾಶಿಗಳು ; ಇಂಡಿಯಾ ಮತ್ತು ಇಂಗ್ಲೆಂಡ್ ದೇಶಗಳ ನಾಣ್ಯಗಳು ಮೈಸೂರು ಸಂಸ್ಥಾನದಲ್ಲಿ ಉಪಯೋಗಿಸಲ್ಪಡುವ ಉದ್ದಳತೆ ದ್ರವ ವಸ್ತುಗಳ ಅಳತೆ ಮತ್ತು ತೂಕ, ಇಂಡಿಯಾ ಸರ್ಕಾರದಲ್ಲಿ ರೂಢಿಯಾಗಿರುವ ಉದ್ದಳತೆ ದ್ರವ ವಸ್ತುಗಳ ಅಳತೆ ಮತ್ತು ತೂಕ, ಇಂಗ್ಲಿಷ್ ಕಾಲಪ್ರಮಾಣ, ಇಂಗ್ಲಿಷ್ ಉದ್ದಳತೆ, ಚದರಳತೆ, ಘನ ಅಳತೆ, ಮತ್ತು ಭಾರವಾದ ದಿನಸಿನ ತೂಕಗಳು, ಇವುಗಳಿಗೆ ಸಂಬಂಧಪಟ್ಟ ವಿವಿಧ ಸಂಕಲನ, ವ್ಯವಕಲನ, ಗುಣಾಕಾರ ಭಾಗಹಾರಗಳು ; ತ್ರೈರಾಶಿಕ ; ಸಂಯುಕ್ತತ್ರೈರಾಶಿಕ ; ರೂಢಿಗಣಿತ ; ಮತ್ತು ಸರಳ ಬಡ್ಡಿ, ಸರಾಸರಿ, ಶೇಕಡ ಕ್ರಮಗಳ ವಿಷಯವಾಗಿ ಸುಲಭವಾದ ರೀತಿ ಪ್ರಶ್ನೆಗಳು (ಎಲ್ಲಾ ಪರೀಕ್ಷ್ಯರೂ ಇಂಗ್ಲಿಷ್ ಅಂಕೆಗಳನ್ನೇ ಉಪಯೋಗಿಸಬೇಕು).—100 ಅಂಕಗಳು.

III. ಭೂಗೋಳಶಾಸ್ತ್ರ ಮತ್ತು ಹಿಂದೂ ದೇಶದ ಚರಿತ್ರೆ.—120 ಅಂಕಗಳು.

(*a*) ಭೂಗೋಳಶಾಸ್ತ್ರ—60 ಅಂಕಗಳು.

(1) ಯಾವುದಾದರೂ ಒಂದು ಸಮ್ಮತವಾದ ಪುಸ್ತಕದಲ್ಲಿರುವಂತೆ ಸಾಮಾನ್ಯ ಭೂವಿವರಣೆಯ ಸಂಕ್ಷೇಪ.—25 ಅಂಕಗಳು.

(2) ಯಾವುದಾದರೂ ಒಂದು ಸಮ್ಮತವಾದ ಪುಸ್ತಕದಲ್ಲಿರುವಂತೆ ಇಂಡಿಯಾ ದೇಶದ ಭೂವಿವರಣೆ.—25 ಅಂಕಗಳು.

(3) ಭೂಪಟ ಬರೆಯುವುದು.—ಯಾವುದಾದರೂ ಒಂದು ಭೂ ಖಂಡದ ಅಥವಾ ಯೂರೋಪಿನಲ್ಲಾಗಲಿ ಏಷಿಯಾವಿನಲ್ಲಾಗಲಿ ಇರುವ ಯಾವುದಾದರೂ ಒಂದು ದೊಡ್ಡದೇಶದ ಆಕಾರವನ್ನು ಬರೆಯುವುದು. ಕೊಡಲ್ಪಡುವ ಬಾಹ್ಯರೇಖೆಯುಳ್ಳ ನಕ್ಷೆಯಲ್ಲಿ ಯಾವುದಾದರೂ ಒಂದು ಭೂ ಖಂಡದ ಅಥವಾ ಯೂರೋಪಿನಲ್ಲಾಗಲಿ ಏಷಿಯಾವಿನಲ್ಲಾಗಲಿ ಇರುವ ಯಾವುದಾದರೂ ಒಂದು ದೊಡ್ಡದೇಶದ ಮುಖ್ಯ ನದಿಗಳನ್ನೂ ಪರ್ವತಶ್ರೇಣಿಗಳನ್ನೂ ಮುಖ್ಯ ಪಟ್ಟಣಗಳನ್ನೂ ಬರೆಯುವುದು.—10 ಅಂಕಗಳು.

(*b*) ಹಿಂದೂದೇಶದ ಚರಿತ್ರೆ.—ಮಿಡಿಲ್ ಸ್ಕೂಲುಗಳಿಗಾಗಿ ಮಾರ್ಸ್‌ಡನ್ ಎಂಬವರಿಂದ ರಚಿಸಲ್ಪಟ್ಟ ಹಿಂದೂ ದೇಶದ ಚರಿತ್ರೆಯಲ್ಲಿರುವಂತೆ ತತ್ಕಾಲದವರೆಗೆ ಹಿಂದೂ ದೇಶದ ಚರಿತ್ರೆಯ ಸಂಕ್ಷೇಪ.—60 ಅಂಕಗಳು.

ಐಚ್ಛಿಕ ವಿಷಯಗಳು.

I. ದ್ವಿತೀಯ ಭಾಷೆ.—120 ಅಂಕಗಳು.

[ಟಿಪ್ಪಣಿ.—ಯಾವ ಪರೀಕ್ಷ್ಯನೂ ಪ್ರಥಮ ದ್ವಿತೀಯ ಭಾಷೆಗಳಿಗೆ ಒಂದೇ ಭಾಷೆಯನ್ನು ತೆಗೆದುಕೊಳ್ಳಕೂಡದು. ಕನ್ನಡವನ್ನು ಪ್ರಥಮಭಾಷೆಯಾಗಿ ತೆಗೆದುಕೊಳ್ಳುವವರು ಫಾರಸಿ ಅಥವಾ ತೆಲುಗನ್ನು ದ್ವಿತೀಯ ಭಾಷೆಯಾಗಿ ತೆಗೆದುಕೊಳ್ಳಕೂಡದು. ತೆಲುಗನ್ನು ಪ್ರಥಮ ಭಾಷೆಯಾಗಿ ತೆಗೆದುಕೊಳ್ಳುವವರು ಸಂಸ್ಕೃತ ಅಥವಾ ಕನ್ನಡವನ್ನು ದ್ವಿತೀಯ ಭಾಷೆಯಾಗಿ ತೆಗೆದುಕೊಳ್ಳಕೂಡದು. ಉರ್ದುವನ್ನು ಪ್ರಥಮ ಭಾಷೆಯಾಗಿ ತೆಗೆದುಕೊಳ್ಳುವವರು ಸಂಸ್ಕೃತವನ್ನು ದ್ವಿತೀಯ ಭಾಷೆಯಾಗಿ ತೆಗೆದುಕೊಳ್ಳಕೂಡದು]

A. ಸಂಸ್ಕೃತ.—

(*a*) ಕೈ ಬರವಣಿಗೆ.—ದೇವನಾಗರಿಯ ಅಕ್ಷರದಲ್ಲಿ ಛಾಪಿಸಲ್ಪಟ್ಟ ಒಂದು ಪತ್ರಿಕೆಯನ್ನು ಸ್ಪಷ್ಟವಾಗಿಯೂ ಚೆನ್ನಾಗಿಯೂ ಬರೆಯುವುದು.—10 ಅಂಕಗಳು.

(b) ಅಕ್ಷರಸಂಯೋಜನ.—ನಿಯಮಿಸಲ್ಪಟ್ಟ ಭಾಷಾಗ್ರಂಥಕ್ಕೆ ಸಮಾನವಾದ ಯಾವುದಾದರೂ ಒಂದು ಪುಸ್ತಕದಿಂದ ಓದಲ್ಪಡುವ ಒಂದು ಚಿಕ್ಕ ಭಾಗವನ್ನು ದೇವನಾಗರಿಯ ಅಕ್ಷರದಲ್ಲಿ ಬರೆಯುವುದು.—10 ಅಂಕಗಳು.

(c) ವ್ಯಾಕರಣ.—ಸಂಧಿಸೂತ್ರಗಳು; ಸ್ವರಾಂತವಾದ ಅಥವಾ ವ್ಯಂಜನಾಂತವಾದ ನಾಮಪದಗಳು ಮತ್ತು ಗುಣವಾಚಕಗಳು; ಸರ್ವನಾಮಗಳು ಮತ್ತು ಸರ್ವನಾಮಾತ್ಮಕ ಗುಣವಾಚಕಗಳು ಇವುಗಳ ವಿಭಕ್ತಿರೂಪಕಗಳು; ಹತ್ತು ವಿಕರಣಿಯ ಧಾತುಗಳ ಸಾರ್ವಧಾತುಕರೂಪಗಳು [ಡಾಕ್ಟರ್ ಭಂಡಾರ್ಕರರವರ ಸಂಸ್ಕೃತದ ಮೊದಲನೇ ಪುಸ್ತಕದಲ್ಲಿರುವಂತೆ].—25 ಅಂಕಗಳು.

(d) ಭಾಷಾಗ್ರಂಥಗಳು.—ವಚನಕಾವ್ಯ ಸುಮಾರು 20 ಪುಟಗಳು, ಪದ್ಯಕಾವ್ಯ ಸುಮಾರು 150 ಪಙ್ಕ್ತಿಗಳು, ಭಾಷಾಗ್ರಂಥಗಳು ನಿಯಮಿಸಲ್ಪಡುವುವು.

ಪರೀಕ್ಷೆಯು ಅನ್ವಯ ಮತ್ತು ಅರ್ಥ ವಿವರಣೆ ಇವುಗಳಿಗೆ ಮುಖ್ಯವಾಗಿ ಸಂಬಂಧಪಡುವುದು.—40 ಅಂಕಗಳು.

(e) ಭಾಷಾಂತರೀಕರಣ.—

(1) ಡಾಕ್ಟರ್ ಭಂಡಾರ್ಕರ್ ಎಂಬವರ ಸಂಸ್ಕೃತದ ಮೊದಲನೇ ಪುಸ್ತಕದ ಮೊದಲು 24 ಪಾಠಗಳಲ್ಲಿರುವ ಸಂಸ್ಕೃತದ ಅಭ್ಯಾಸ ಪಾಠಗಳನ್ನು ದೇಶಭಾಷೆಗೆ ಭಾಷಾಂತರ ಮಾಡುವುದು.—15 ಅಂಕಗಳು.

(2) ಇದೇ ಪಾಠಗಳಲ್ಲಿನ ಕನ್ನಡದ ಅಭ್ಯಾಸ ಪಾಠಗಳನ್ನು ಸಂಸ್ಕೃತಕ್ಕೆ ಭಾಷಾಂತರ ಮಾಡುವುದು.—20 ಅಂಕಗಳು.

B ಫಾರಸಿ.—

(a) ಕೈ ಬರವಣಿಗೆ.—ಬರೆಯಲ್ಪಟ್ಟ ಅಥವಾ ಶಿಲಾಯಂತ್ರದಿಂದ ಛಾಪಿಸಲ್ಪಟ್ಟ ಒಂದು ಪತ್ರಿಕೆಯನ್ನು ಸ್ಪಷ್ಟವಾಗಿಯೂ ಚೆನ್ನಾಗಿಯೂ ಬರೆಯುವುದು.—10 ಅಂಕಗಳು.

(b) ಅಕ್ಷರಸಂಯೋಜನ.—ಪಂಜಾಬ್ ಛಾಪ ಫಾರಸಿ ಎರಡನೇ ಪುಸ್ತಕಕ್ಕೆ ಸಮಾನವಾದ ಯಾವುದಾದರೂ ಒಂದು ಪುಸ್ತಕದಿಂದ ಓದಲ್ಪಡುವ ಒಂದು ಭಾಗವನ್ನು ಬರೆಯುವುದು.—10 ಅಂಕಗಳು.

(c) ವ್ಯಾಕರಣ.—ಪ್ರೈಮರಿ ಪಾಠಶಾಲೆಗಳಲ್ಲಿ ಉಪಯೋಗಿಸಲ್ಪಡುವ ಸೆಲ್ ಸಾಹೇಬರವರಿಂದ ರಚಿಸಲ್ಪಟ್ಟ ಜುಬ್ದತುಲ್-ಕವಾನೀನ್ (ಪಂಜಾಬ್ ಛಾಪ) ಫಾರಸಿ ವ್ಯಾಕರಣದಲ್ಲಿ ಬರೆದಿರುವಂತೆ.—25 ಅಂಕಗಳು.

(d) ಭಾಷಾಗ್ರಂಥ.—ಗುಲ್‌ದಸ್ತ-ಎ-ದನಿಷ್.—40 ಅಂಕಗಳು.

(e) ಭಾಷಾಂತರೀಕರಣ.—

(1) ಹಿಂದೆ ಓದದೇ ಇರುವ ಫಾರಸಿ ವಚನಕಾವ್ಯದ ಸಾಧಾರಣವಾದ ಒಂದು ಭಾಗವನ್ನು ಉರ್ದುವಿಗೆ ಭಾಷಾಂತರ ಮಾಡುವುದು.—15 ಅಂಕಗಳು.

(2) ಸುಲಭವಾದ ಉರ್ದು ವಾಕ್ಯಗಳನ್ನು ಫಾರಸಿ ಭಾಷೆಗೆ ಭಾಷಾಂತರ ಮಾಡುವುದು.—20 ಅಂಕಗಳು.

C ಲಾಟಿನ್.—

(a) ವ್ಯಾಕರಣ.—ಪಬ್ಲಿಕ್ ಸ್ಕೂಲ್ ಲಾಟಿನ್ ಪ್ರೈಮರಲ್ಲಿ ಅಥವಾ ಅದಕ್ಕೆ ಸಮಾನವಾದ ಮತ್ತೆ ಯಾವುದಾದರೂ ಒಂದು ಪುಸ್ತಕದಲ್ಲಿ ಇರುವಂತೆ.—40 ಅಂಕಗಳು.

(b) ಭಾಷಾಗ್ರಂಥ.—ವರ್ಷವರ್ಷವೂ ಭಾಷಾಗ್ರಂಥವು ನಿಯಮಿಸಲ್ಪಡುವುದು. ಪರೀಕ್ಷೆಯು ಅನ್ವಯ ಮತ್ತು ಅರ್ಥ ವಿವರಣೆ ಇವುಗಳಿಗೆ ವಿಶೇಷವಾಗಿ ಸಂಬಂಧಪಡುವುದು.—40 ಅಂಕಗಳು.

(c) ಭಾಷಾಂತರೀಕರಣ.—40 ಅಂಕಗಳು.

(1) ಹಿಂದೆ ಓದದ ಲಾಟಿನ್ ವಚನಕಾವ್ಯದ ಬಹಳ ಸುಲಭವಾದ ಒಂದು ಭಾಗವನ್ನು ಇಂಗ್ಲೀಷಿಗೆ ಭಾಷಾಂತರ ಮಾಡುವುದು.—15 ಅಂಕಗಳು.

(2) ಸುಲಭವಾದ ಇಂಗ್ಲೀಷ್ ವಾಕ್ಯಗಳನ್ನು ಲಾಟಿನಿಗೆ ಭಾಷಾಂತರ ಮಾಡುವುದು.—25 ಅಂಕಗಳು.

D ಇಂಗ್ಲೀಷ್—ಹೆಂಗಸು ಪರೀಕ್ಷ್ಯ (Female candidate) ಯರಿಗೂ ಮತ್ತು ಎಲ್ಲಾ ಮಹಮ್ಮದೀಯರಿಗೂ ಮಾತ್ರ—ಪರೀಕ್ಷೆಯ ಮೊದಲನೇ ದಿವಸ ಈ ಪರೀಕ್ಷೆಯು ಮುಖತಃ (*Viva voce*) ನಡೆಯಿಸಲ್ಪಡುವುದು. ಮತ್ತು ಪೂರ್ಣರನೇ ಆಂಗ್ಲ—ದೇಶಭಾಷಾ ಮಿಯಸ್ತೆಗೆ ಸಮಾನವಾಗಿರುವುದು.

(a) ಕೈ ಬರವಣಿಗೆ.—ದೊಡ್ಡ ಅಥವಾ ನಡುತರವಾದ ಅಕ್ಷರವನ್ನು ಬರೆಯುವುದು.—10 ಅಂಕಗಳು.

(b) ಅಕ್ಷರಸಂಯೋಜನ.—ಓದುವ ಪುಸ್ತಕದಲ್ಲಿ ಒಂದು ಭಾಗದಿಂದ ಹೇಳಲ್ಪಡುವ ಹತ್ತು ಪದಗಳನ್ನು ಎಂಟು ಪಙ್ಕ್ತಿಗಳನ್ನೂ ಬರೆಯುವುದು.—10 ಅಂಕಗಳು.

(c) ವ್ಯಾಕರಣ.—ಮೇಸನ್ರವರ ಫಸ್ಟ್ ಸ್ಟೆಪ್ಸ್ ಇನ್ ಇಂಗ್ಲೀಷ್ ಗ್ರಾಮರ್, ಪುಟಗಳು 1ರಿಂದ 21ರ ವರೆಗೆ ಅಭ್ಯಾಸ ಪಾಠಗಳೊಡನೆ ಅಥವಾ ಸಿ. ವಿ. ಇ. ಸಂಘದವರ ಪ್ರೈಮರ್ ಆಫ್ ಇಂಗ್ಲೀಷ್ ಗ್ರಾಮರ್, ಪುಟಗಳು 1ರಿಂದ 24ರ ವರೆಗೆ ಅಭ್ಯಾಸ ಪಾಠಗಳೊಡನೆ.—25 ಅಂಕಗಳು.

(d) ಭಾಷಾಗ್ರಂಥ.—ಯಾವುದಾದರೂ ಒಂದು ಸಮ್ಮತವಾದ ಎರಡನೇ ಪುಸ್ತಕ (Second Reader) ಪುಟಗಳು 1ರಿಂದ 50ರ ವರೆಗೆ; ದೇಶಭಾಷೆಗೆ ಮುಖತಃ ಭಾಷಾಂತರ ಮಾಡಬೇಕು. ಮತ್ತು ಪದಗಳ ಅರ್ಥವನ್ನು ಗ್ರಂಥ ವಿಷಯವನ್ನೂ ತಿಳಿದಿರಬೇಕು.—40 ಅಂಕಗಳು.

(e) ಭಾಷಾಂತರೀಕರಣ.—ಪರೀಕ್ಷೆಯ ದೇಶಭಾಷೆಯ ಆರು ಚಿಕ್ಕ ವಾಕ್ಯಗಳನ್ನು ಇಂಗ್ಲೀಷಿಗೆ ಭಾಷಾಂತರ ಮಾಡುವುದು.—35 ಅಂಕಗಳು.

E. ಕನ್ನಡ (ಉರ್ದುವೇ ತಮ್ಮ ದೇಶಭಾಷೆಯಾಗಿ ಆ ಭಾಷೆಯನ್ನೇ ಪ್ರಥಮ ಭಾಷೆಯಾಗಿ ತೆಗದುಕೊಳ್ಳುವ ಪರೀಕ್ಷ್ಯರಿಗೆ.) ಪರೀಕ್ಷೆಯ ಮೊದಲನೇ ದಿವಸ ಈ ಪರೀಕ್ಷೆಯ ೩ ಇದರಡಿ ಕಾಣಿಸಿರುವ ಪ್ರಕರಣಗಳಲ್ಲಿ ಮುಖತಃ (*Viva voce*) ನಡೆಯಿಸಲ್ಪಡುವುದು:—

(a) ಭಾಷಾಗ್ರಂಥ.—ಮ್ಯಾಕ್‌ಮಿಲ್ಲನ್‌ರವರ III ಮತ್ತು IVನೆಯ ಕನ್ನಡ ರೀಡರ್‌ಗಳು.—ಗ್ರಂಥ ವಿಷಯವನ್ನು ಉರ್ದುವಿನಲ್ಲಿ ತಡೆಯಿಲ್ಲದೆ ವಿವರಿಸಬೇಕು. ಮತ್ತು ಕಷ್ಟವಾದ ಪದಗಳ ಅರ್ಥವನ್ನು ಹೇಳಬೇಕು. ಪರೀಕ್ಷ್ಯನು ಭಾಷಾಗ್ರಂಥದ ಒಂದು ಚಿಕ್ಕ ಭಾಗವನ್ನು ಉರ್ದುವಿಗೆ ತಡೆಯಿಲ್ಲದೆ ಭಾಷಾಂತರ ಮಾಡಬೇಕು.—40 ಅಂಕಗಳು.

(b) ಭಾಷಾಂತರೀಕರಣ.—ಕಥಾರೂಪವಾದ ಉರ್ದು ವಚನಕಾವ್ಯದ ಒಂದು ಸಾಧಾರಣವಾದ ಭಾಗವನ್ನು ಕನ್ನಡಕ್ಕೆ ಭಾಷಾಂತರ ಮಾಡುವುದು.—35 ಅಂಕಗಳು.

(c) ವ್ಯಾಕರಣ.—ಶೇಷಾಚಾರ್ಯರಿಂದ ರಚಿಸಲ್ಪಟ್ಟ ವ್ಯಾಕರಣ ಸಂಗ್ರಹದಲ್ಲಿರುವಂತೆ.—25 ಅಂಕಗಳು

(d) ಕೈ ಬರವಣಿಗೆ.—ಸಣ್ಣಕ್ಷರವನ್ನು ಬರೆಯುವುದು.—10 ಅಂಕಗಳು.

(e) ಅಕ್ಷರಸಂಯೋಜನ—ಭಾಷಾಗ್ರಂಥಕ್ಕೆ ಸಮಾನವಾದ ಹಿಂದೆ ಓದದ ಯಾವುದಾದರೂ ಒಂದು ವಚನಕಾವ್ಯದಿಂದ ಓದಲ್ಪಡುವ ಎಂಟು ಪಜ್ತಿಗಳನ್ನು ಬರೆಯುವುದು.—10 ಅಂಕಗಳು.

F. ಕನ್ನಡ, ತೆಲುಗು, ಅಥವಾ ಉರ್ದು.—I. B. ಆವಶ್ಯಕ ಭಾಷೆಗಳಿಗೆ ನಿಯಮಿಸಿರುವಂತೆಯೇ.—120 ಅಂಕಗಳು

II. ಆರೋಗ್ಯಶಾಸ್ತ್ರ.—ನರಸಿಂಹಯ್ಯಂಗಾರ್ರವರಿಂದ ರಚಿಸಲ್ಪಟ್ಟ ಆರೋಗ್ಯಶಾಸ್ತ್ರದಲ್ಲಿರುವಂತೆ.—100 ಅಂಕಗಳು.

III. ವ್ಯವಸಾಯಶಾಸ್ತ್ರ.—ಶೇಷಾದ್ರಯ್ಯಂಗಾರ್ರವರಿಂದ ರಚಿಸಲ್ಪಟ್ಟ ವ್ಯವಸಾಯ ಬೋಧಿನಿಯಲ್ಲಿರುವಂತೆ.—100 ಅಂಕಗಳು.

IV. ಕ್ಷೇತ್ರಗಣಿತ.—ಡಾಕ್ಟರ್ ಕುಕ್ ಸಾಹೇಬರವರ ಕ್ಷೇತ್ರ ಗಣಿತದ ಆದಿ ಪುಸ್ತಕದಲ್ಲಿ ಇರುವಂತೆ.—100 ಅಂಕಗಳು.

V. ಪ್ರಾಕೃತಿಕ ಭೂಗೋಳಶಾಸ್ತ್ರ.—ವೆಂಕಟರಂಗೋಕಟ್ಟಿಯವರು ಭಾಷಾಂತರ ಮಾಡಿರುವ ಗೈಕಿಯವರ ಪ್ರಾಕೃತಿಕ ಭೂಗೋಳಶಾಸ್ತ್ರದ ಆದಿ ಪುಸ್ತಕದಲ್ಲಿಯೂ ಬ್ಲಾನ್‌ಫರ್ಡ್ ಎಂಬವರ ಪ್ರಾಕೃತಿಕ ಭೂಗೋಳಶಾಸ್ತ್ರದ ಪುಸ್ತಕದಲ್ಲಿಯೂ ಇರುವಂತೆ.—100 ಅಂಕಗಳು.

VI. (ಯಾವುದಾದರೂ ಒಂದು ದೇಶಭಾಷೆಯನ್ನು ಮಾತ್ರ ತೆಗದುಕೊಳ್ಳುವ ಪರೀಕ್ಷ್ಯೆಯರಿಗೆ ಹೊಲಿಗೆ ಮತ್ತು ಪಾಕಶಾಸ್ತ್ರ.—100 ಅಂಕಗಳು.

(a) ಸಾಧಾರಣ ಹೊಲಿಗೆ ಕೆಲಸ.—50 ಅಂಕಗಳು.

(1) ಕೊಡಲ್ಪಡುವ ಮಾದರಿ ಮೇರೆಗೆ ಕತ್ತರಿಸಿ ನೇಟಿವ್ ಗಂಡಸಿನ 12 ಅಂಗುಲ ಉದ್ದವುಳ್ಳ ಜುಬ್ಬವನ್ನು ಹೊಲಿಯುವುದು.

(2) ಅಂಚು ಅಥವಾ ಗೋಟು ಕಟ್ಟುವುದು, ಒಟ್ಟಿ ಹಾಕುವುದು, ರಫ್ಫು ಮಾಡುವುದು, ಮತ್ತು ತೇಪೆ ಹಾಕುವುದು ಮತ್ತು ಉಡುಪುಗಳ ಮೇಲೆ ಇಂಗ್ಲೀಷಿನ ಅಥವಾ ಕನ್ನಡದ ಹೆಸರುಗಳ ಪ್ರಥಮಾಕ್ಷರವನ್ನು ಹೊಲಿಯುವುದು.

(b) ಪಾಕಶಾಸ್ತ್ರ.—ಅಡಿಗೆ ಪಾತ್ರೆಗಳ ಉಪಯೋಗಗಳು, ಅವುಗಳನ್ನು ಶುದ್ಧಮಾಡುವ ವಿಧ ಮತ್ತು ನೇಟಿವ್ ಜನರಲ್ಲಿ ವಾಡತಕ್ಕ ಸಾಧಾರಣವಾದ ಅಡಿಗೆಯ ಸಾಮಗ್ರಿಗಳು ಮತ್ತು ಪಾಕ ಕ್ರಮ.—50 ಅಂಕಗಳು.

VII. ಇಂಗ್ಲೀಷ್ ಭಾಷೆಯನ್ನು ತಮ್ಮ ದೇಶಭಾಷೆಯಾಗಿ ಉಳ್ಳ ಪರೀಕ್ಷ್ಯೆಯರಿಗೆ.

(a) ಆಂಗ್ಲೇಯರ ಚರಿತ್ರೆ. ಕ್ರೇಟನ್ ಎಂಬವರಿಂದ ರಚಿಸಲ್ಪಟ್ಟ ಷಿಲಿಂಗ್ ಹಿಸ್ಟರಿ ಎಂಬ ಆಂಗ್ಲೇಯರ ಚರಿತ್ರೆಯಲ್ಲಿರುವ ಹಾಗೆ.—100 ಅಂಕಗಳು.

(b) ಗೃಹಕೃತ್ಯ ನಡೆಯಿಸುವ ಕ್ರಮ.—ಮಿಸ್ ಕೀಲಿಯವರಿಂದ ರಚಿಸಲ್ಪಟ್ಟ ಗೃಹಕೃತ್ಯ ನಡೆಯಿಸುವ ಕ್ರಮದ ಪುಸ್ತಕದಲ್ಲಿರುವ ಬಗೆ (ಈ ಪುಸ್ತಕವು ಹಿಗ್ಗಿನ್ ಬೋಥ್ಯಾಂ ಎಂಬವರಲ್ಲಿ ದೊರೆಯುತ್ತದೆ.—100 ಅಂಕಗಳು.

7. ಎಲ್ಲಾ ಪರೀಕ್ಷ್ಯೆಯರೂ ಐಚ್ಛಿಕ ವಿಷಯುಗಳಲ್ಲಿ ಎರಡನ್ನು ತೆಗದುಕೊಳ್ಳಬೇಕು. ಪರೀಕ್ಷ್ಯೆಯರೂ ಈ ಎರಡು ಐಚ್ಛಿಕ ವಿಷಯುಗಳಲ್ಲಿ ಸಾಧಾರಣವಾಗಿ ಹೊಲಿಗೆಯನ್ನೂ ಪಾಕಶಾಸ್ತ್ರವನ್ನೂ ಒಂದು ವಿಷಯುವಾಗಿ ತೆಗದುಕೊಳ್ಳಲೇಬೇಕು.

ಇಂಗ್ಲೀಷ್ ಪಾಠಶಾಲೆಗಳ ವಿದ್ಯಾರ್ಥಿಗಳು ಸಾಧಾರಣವಾಗಿ ಆರೋಗ್ಯಶಾಸ್ತ್ರವನ್ನೂ ಯಾವುದಾದರೂ ಒಂದು ಎರಡನೇ ಭಾಷೆಯುನ್ನೂ ಐಚ್ಛಿಕ ವಿಷಯಗಳಾಗಿ ತೆಗದುಕೊಳ್ಳಬೇಕು.

ದೇಶಭಾಷಾ ಪಾಠಶಾಲೆಗಳ ವಿದ್ಯಾರ್ಥಿಗಳು ಸಾಧಾರಣವಾಗಿ ಆರೋಗ್ಯಶಾಸ್ತ್ರವನ್ನೂ ಮತ್ತು ವ್ಯವಸಾಯುಶಾಸ್ತ್ರ ಅಥವಾ ಕ್ಷೇತ್ರಗಣಿತ ಅಥವಾ ಪ್ರಾಕೃತಿಕ ಭೂಗೋಳಶಾಸ್ತ್ರವನ್ನೂ ಐಚ್ಛಿಕ ವಿಷಯಗಳಾಗಿ ತೆಗದುಕೊಳ್ಳಬೇಕು.

ಸಂಸ್ಕೃತ ಪಾಠಶಾಲೆಗಳ ವಿದ್ಯಾರ್ಥಿಗಳು ಯಾವುದಾದರೂ ಒಂದು ದೇಶಭಾಷೆಯನ್ನು ದ್ವಿತೀಯ ಭಾಷೆಯಾಗಿಯೂ ಮತ್ತು ಆರೋಗ್ಯಶಾಸ್ತ್ರ, ವ್ಯವಸಾಯುಶಾಸ್ತ್ರ, ಕ್ಷೇತ್ರಗಣಿತ, ಪ್ರಾಕೃತಿಕ ಭೂಗೋಳಶಾಸ್ತ್ರ ಇವುಗಳಲ್ಲಿ ಯಾವುದಾದರೂ ಒಂದನ್ನು ತೆಗದುಕೊಳ್ಳಬೇಕು.

8. ಇಂಗ್ಲಿಷ್ ಭಾಷೆಯನ್ನು ಮೊದಲನೇ ಭಾಷೆಯಾಗಿ ತೆಗದುಕೊಳ್ಳುವ ಪರೀಕ್ಷ್ಯರಿಗೆ ಇಂಗ್ಲೀಷ್ ಭಾಷಾಗ್ರಂಥದಲ್ಲಿಯೂ ಅಂಕಗಣಿತದಲ್ಲಿಯೂ ಪ್ರಶ್ನೆ ಪತ್ರಿಕೆಗಳು ಇಂಗ್ಲಿಷನಲ್ಲಿ ಕೊಡಲ್ಪಡುವುವು ಮತ್ತು ಈ ಪ್ರಶ್ನೆಗಳಿಗೆ ಉತ್ತರಗಳನ್ನು ಇಂಗ್ಲೀಷನಲ್ಲಿಯೇ ಬರೆಯಬೇಕು. ಇಂಗ್ಲೀಷ್ ಭಾಷೆಯನ್ನು ಪ್ರಥಮ ಭಾಷೆಯಾಗಿ ತೆಗದುಕೊಳ್ಳುವ ಪರೀಕ್ಷ್ಯರಿಗೆ ಮಿಕ್ಕ ಎಲ್ಲಾ ವಿಷಯಗಳಲ್ಲಿಯೂ ಪ್ರಶ್ನೆ ಪತ್ರಿಕೆಗಳು ಅವರ ದೇಶಭಾಷೆಯಲ್ಲಿ ಕೊಡಲ್ಪಡುವುವು ಮತ್ತು ಪ್ರಶ್ನೆಗಳಿಗೆ ಉತ್ತರಗಳನ್ನು ಅವರ ದೇಶಭಾಷೆಯಲ್ಲಿಯೇ ಬರೆಯಬೇಕು. ಇಂಗ್ಲಿಷ್ ದೇಶಭಾಷೆಯಾಗಿರುವ ಪರೀಕ್ಷ್ಯರಿಗೆ ಎಲ್ಲಾ ವಿಷಯಗಳಲ್ಲಿಯೂ ಪ್ರಶ್ನೆ ಪತ್ರಿಕೆಗಳು ಇಂಗ್ಲೀಷಿನಲ್ಲಿಯೇ ಕೊಡಲ್ಪಡುವುವು ಮತ್ತು ಈ ಪ್ರಶ್ನೆಗಳಿಗೆ ಉತ್ತರಗಳನ್ನು ಇಂಗ್ಲೀಷಿನಲ್ಲಿಯೇ ಬರೆಯಬೇಕು. ಉಳಿದ ಪರೀಕ್ಷ್ಯರೆಲ್ಲರೂ ಒಂದೊಂದು ವಿಷಯದಲ್ಲಿಯೂ ಅವರ ದೇಶಭಾಷೆಯಲ್ಲಿಯೇ ಪರೀಕ್ಷಿಸಲ್ಪಡುವರು.

9. ಪರೀಕ್ಷ್ಯರು, ಆವಶ್ಯಕ ಭಾಷೆಯಲ್ಲಿ ಶೇಕಡಾ 33ಕ್ಕೆ ಕಡಿಮೆ ಇಲ್ಲದಂತೆ ಅಂಕಗಳನ್ನೂ, ಅಂಕಗಣಿತದಲ್ಲಿ ಶೇಕಡಾ 30 ಅಂಕಗಳನ್ನೂ, ಇತರ ಒಂದೊಂದು ವಿಷಯಗಳಲ್ಲಿಯೂ ಶೇಕಡಾ 25 ಅಂಕಗಳನ್ನೂ ಮತ್ತು ಒಟ್ಟು ಸಂಖ್ಯೆಯಲ್ಲಿ ಶೇಕಡಾ 33ಕ್ಕೆ ಕಡಿಮೆ ಇಲ್ಲದ ಅಂಕಗಳನ್ನೂ ಪಡೆಯದ ಪಕ್ಷದಲ್ಲಿ ತೇರ್ಗಡೆಯಾಗಲಾರರು. ಇಂಗ್ಲೀಷ್ ಭಾಷೆಯನ್ನು ಮೊದಲನೆಯ ಭಾಷೆಯಾಗಿ ತೆಗದುಕೊಳ್ಳುವ ಪರೀಕ್ಷ್ಯರು, ಇಂಗ್ಲೀಷ್ ಭಾಷೆಯ ಎರಡು ಶಾಖೆಗಳಲ್ಲಿಯೂ ಪ್ರತಿಯೊಂದರಲ್ಲೂ ಶೇಕಡಾ 25ಕ್ಕೆ ಕಡಿಮೆ ಇಲ್ಲದ ಅಂಕಗಳನ್ನೂ ಸದರಿ ಭಾಷೆಯ ಒಟ್ಟು ಅಂಕಗಳಲ್ಲಿ ಶೇಕಡಾ 33ಕ್ಕೆ ಕಡಿಮೆ ಇಲ್ಲದ ಅಂಕಗಳನ್ನೂ ಪಡೆಯದ ಪಕ್ಷದಲ್ಲಿ ತೇರ್ಗಡೆಯಾಗಲಾರರು. ಪರೀಕ್ಷ್ಯರು ಅಂಕಗಣಿತದಲ್ಲಿ ಅವರಿಗಾಗಿಯೇ ಬರೆಯಲ್ಪಟ್ಟ ಪರೀಕ್ಷ್ಯೆಯರಿಗೆ ಕೊಡಲ್ಪಡುವ ಅಂಕಗಣಿತದ ಪ್ರಶ್ನೆ ಪತ್ರಿಕೆಗಿಂತ ಸುಲಭವಾದ ಅಂಕಗಣಿತದ ಪ್ರಶ್ನೆ ಪತ್ರಿಕೆಯಲ್ಲಿ ತೇರ್ಗಡೆಯಾಗಬಹುದು.

ತೇರ್ಗಡೆಯಾಗುವಂಥಾವರು ಅವರವರ ಯೋಗ್ಯತಾನುಸಾರ ಎರಡು ವರ್ಗಗಳಾಗಿ ವಿಂಗಡಿಸಲ್ಪಡುವರು. ಒಟ್ಟು ಸಂಖ್ಯೆಯಲ್ಲಿ ಶೇಕಡಾ 60ಕ್ಕೆ ಕಡಮೆ ಇಲ್ಲದ ಅಂಕಗಳನ್ನು ಪಡೆಯುವಂಥಾವರು ಮೊದಲನೇ ವರ್ಗದಲ್ಲಿ ಸೇರಿಸಲ್ಪಡುವರು. ಒಟ್ಟು ಸಂಖ್ಯೆಯಲ್ಲಿ ಶೇಕಡಾ 60ಕ್ಕೆ ಕಡಮೆಯಾಗಿ ಅಂಕಗಳನ್ನು ಪಡೆಯುವವರು ಎರಡನೇ ವರ್ಗದಲ್ಲಿ ಸೇರಿಸಲ್ಪಡುವರು.

10. ಪರೀಕ್ಷಾ ವೇತನವು ಇದರಡೀ ಕಂಡಂತೆ ನಿಯಮಿಸಲ್ಪಟ್ಟಿರುತ್ತೆ:—

		ರೂ. ಆ. ಪೈ.
(1)	ಇಂಗ್ಲೀಷನ್ನು ತನ್ನ ಅವಶ್ಯಕ ಭಾಷೆಯಾಗಿ ತೆಗದುಕೊಳ್ಳುವಂಥಾ ಸರ್ಕಾರದ ಅಥವಾ ದ್ರವ್ಯ ಸಹಾಯದ ಪಾಠಶಾಲೆಯ ಉಪಾಧ್ಯಾಯನಿಗಾಗಲಿ ಅಥವಾ ಪರೀಕ್ಷಾ ರೂಲ್ಸಿನ ಎರಡನೇ ಪ್ರಕರಣದಲ್ಲಿ ವಿವರಿಸಲ್ಪಟ್ಟ ವಿದ್ಯಾರ್ಥಿಗಾಗಲಿ.	5—0—0
(2)	ಇತರ ಎಲ್ಲಾ ವಿದ್ಯಾರ್ಥಿಗಳಿಗೂ ಮತ್ತು ಸರಕಾರದ ಅಥವಾ ದ್ರವ್ಯ ಸಹಾಯದ ಪಾಠಶಾಲೆಯ ಉಪಾಧ್ಯಾಯರುಗಳಿಗೂ.	4—0—0
(3)	ಇಂಗ್ಲಿಷನ್ನು ಅವಶ್ಯಕ ಭಾಷೆಯಾಗಿ ತೆಗದುಕೊಂಡು ಸ್ವಂತ ವ್ಯಾಸಂಗ ಮಾಡುವಂಥಾವರಿಗೆ.	10—0—0
(4)	ಇತರ ಎಲ್ಲಾ ಸ್ವಂತ ವ್ಯಾಸಂಗಿಗಳಿಗೆ.	5—0—0
(5)	ಸಂಸ್ಕೃತದಲ್ಲಿ ಮಾತ್ರವೇ ಆಗಲಿ ಫಾರಶಿಯಲ್ಲಿ ಮಾತ್ರವೇ ಆಗಲಿ ಅಥವಾ ಇತರ ಯಾವ ದೇಶ ಭಾಷೆಯಲ್ಲಿ ಮಾತ್ರವೇ ಆಗಲಿ ಸೇರುವ ಪರೀಕ್ಷ್ಯರಿಗು ಮತ್ತು ಎಲ್ಲಾ ಪರೀಕ್ಷ್ಯೆಯರಿಗೂ.	2—8—0

11. ಪರೀಕ್ಷೆಗೆ ಬರುವವರಿಂದ ಒಂದು ಪರೀಕ್ಷೆಗೋಸ್ಕರ ಕೊಡಲ್ಪಟ್ಟಂಥಾ ಪರೀಕ್ಷಾ ವೇತನವು ಯಾವ ಸಂದರ್ಭದಲ್ಲಿಯೇ ಆಗಲಿ ಹಿಂದಕ್ಕೆ ಕೊಡಲ್ಪಡಲಾರದು ಮತ್ತು ಮುಂದಿನ ಯಾವ ಪರೀಕ್ಷೆಗೂ ಇಡಲ್ಪಡಲಾರದು.

12. ವಿದ್ಯಾರ್ಥಿಗಳಾಗಿರುವ ಪಕ್ಷದಲ್ಲಿ ಈ ಪರೀಕ್ಷೆಗೆ ಸೇರುವ ಬಗ್ಗೆ ಆಯಾ ಪಾಠಶಾಲೆಯ ಮುಖ್ಯೋಪಾಧ್ಯಾಯರುಗಳ ಮೂಲಕ ದರಖಾಸ್ತುಗಳನ್ನು ಕಳುಹಿಸಬೇಕು. ಎರಡನೇ ನಿಬಂಧನೆಯಲ್ಲಿ ಹೇಳಲ್ಪಟ್ಟ ಎಲ್ಲಾ ವಿದ್ಯಾರ್ಥಿಗಳೂ ಉಪಾಧ್ಯಾಯರುಗಳೂ ತಮ್ಮ ದರಖಾಸ್ತುಗಳನ್ನು ಆಗಸ್ಟ್ ತಿಂಗಳು 15ನೇ ತಾರೀಖನ್ನು ಅತಿಕ್ರಮಿಸದಂತೆ ದೇಶೀಯ ಪರೀಕ್ಷಾ ವ್ಯವಸ್ಥಾಪಕರವರಿಗೆ ತಲಪುವಂತೆ ಕಳುಹಿಸಬೇಕು. ಸ್ವಂತ ವ್ಯಾಸಂಗಿಗಳ ದರಖಾಸ್ತುಗಳೆಲ್ಲಾ ಜುಲೈ ತಿಂಗಳು 15ನೇ ತಾರೀಖನ್ನು ಅತಿಕ್ರಮಿಸದಂತೆ ದೇಶೀಯ ಪರೀಕ್ಷಾ ವ್ಯವಸ್ಥಾಪಕರವರಲ್ಲಿಗೆ ಬಂದು ತಲಪಬೇಕು.

13. ಪರೀಕ್ಷ್ಯರು, ತಮ್ಮ ಪಾಠಶಾಲೆಯಾಗಲಿ ಅಥವಾ ತಾವು ವಾಡಿಕೆಯಾಗಿ ವಾಸವಾಗಿರುವ ಸ್ಥಳವಾಗಲಿ ಯಾವ ಡಿಸ್ಟ್ರಿಕ್ಟಿಗೆ ಸೇರಿದೆಯೋ ಅಂಥಾ ಡಿಸ್ಟ್ರಿಕ್ಟಿನ ಮುಖ್ಯಸ್ಥಳದಲ್ಲಿ ಮಾತ್ರವೇ ಪರೀಕ್ಷೆಗೆ ಸೇರತಕ್ಕದ್ದು. ಆದರೆ ಕೋಲಾರ್ ಸಬ್ ಡಿವಿಜನಿಗೆ ಸೇರಿದ ಪರೀಕ್ಷ್ಯರು ಚೆನ್ನಪಟ್ಟಣದಲ್ಲಿಯೂ ಮತ್ತು ಚಿಕ್ಕಬಳ್ಳಾಪುರದ ಸಬ್ ಡಿವಿಜನಿಗೆ ಸೇರಿದ ಪರೀಕ್ಷ್ಯರು ಚಿಕ್ಕಬಳ್ಳಾಪುರದಲ್ಲಿಯೂ ಪರೀಕ್ಷೆಗೆ ಸೇರತಕ್ಕದ್ದು.

14. ಪರೀಕ್ಷೆಯು ಇದರಡಿ ವಿವರಿಸಲ್ಪಟ್ಟಿರುವ ಕಾಲ ಮತ್ತು ವಿಷಯಗಳ ಕ್ರಮಗಳನ್ನನುಸರಿಸಿ ನಡೆಯಿಸಲ್ಪಡುವುದು :—

ದಿವಸ.	ಕಾಲ.	ವಿಷಯಗಳು.	ಅಂಕಗಳು.
ಮೊದಲನೇ ದಿವಸ	10ರಿಂದ 12—30 ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಇಂಗ್ಲಿಷ ವ್ಯಾಕರಣ ಮತ್ತು ಭಾಷಾಗ್ರಂಥ.	60
		ಸಂಸ್ಕೃತದ ಮತ್ತು ಫಾರಸಿಯ ವ್ಯಾಕರಣ ಮತ್ತು ಭಾಷಾ ಗ್ರಂಥಗಳು	65
	1—30ರಿಂದ 2—30ರ ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಭಾಷಾಂತರೀಕರಣ —ಇಂಗ್ಲಿಷ್, ಸಂಸ್ಕೃತ, ಫಾರಸಿ.	35
		ಇಂಗ್ಲಿಷ ಪ್ರಬಂಧರಚನೆ, ಇಂಗ್ಲೀಷನ್ನು ದೇಶಭಾಷೆಯಾಗಿ ಉಳ್ಳಂಥಾವರಿಗೆ	
	2—35ರಿಂದ 3-5 ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಉಕ್ತಲೇಖನ—ಇಂಗ್ಲೀಷ್	15
		ಸಂಸ್ಕೃತ ; ಫಾರಸಿ	10
	3—10ರಿಂದ 3—40 ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಕೈಬರವಣಿಗೆ —ಇಂಗ್ಲೀಷ್ ; ಸಂಸ್ಕೃತ ; ಫಾರಸಿ ..	10
ಡಿಸ್ಟ್ರಿಕ್ಟ್ ಬೋರ್ಡ್ಸ್ (ಸಭೆ ಗಳು), ತಾಲ್ಲೂಕು ಬೋರ್ಡುಗಳು ಮತ್ತು ಪಂಚಾಯಿತಿಗಳು ಇವುಗಳ ಸ್ಥಾಪನ.

5. 1903ನೆಯ ಇಸವಿ ನವಂಬರ್ 1ನೆಯ ತಾರೀಖಿನಿಂದ, ಪ್ರತಿ ರೆವಿನ್ಯೂ ಡಿಸ್ಟ್ರಿಕ್ಟಿಗೂ ಒಂದು ಡಿಸ್ಟ್ರಿಕ್ಟ್ ಬೋರ್ಡು, ಮತ್ತು ಪ್ರತಿ ಕ್ರಮವಾದ ತಾಲ್ಲೂಕಿಗೂ ಮತ್ತು ಪ್ರತಿ ಸಬ್ ತಾಲ್ಲೂಕಿಗೂ ಒಂದು ತಾಲ್ಲೂಕು ಬೋರ್ಡು, ಮತ್ತು, 1904ನೆಯ ಜುಲೈ 1ನೆಯ ತಾರೀಖಿನಿಂದ, ಪ್ರತಿ ಒಂದು ಸಂಘಕ್ಕೂ ಒಂದು ಪಂಚಾಯಿತಿಯೂ, ಸ್ಥಾಪಿಸಲ್ಪಡತಕ್ಕದ್ದು.

ಪಂಚಾಯಿತಿಯ ಏರ್ಪಾಡು.

6. (1) ಪ್ರತಿ ಪಂಚಾಯಿತಿಯು, ಪ್ರತಿ ಸಂದರ್ಭದಲ್ಲಿಯೂ ಗೌರ್ನಮೆಂಟಿನವರಿಂದ ಗೊತ್ತು ಮಾಡಲ್ಪಡಬಹುದಾದಹಾಗೆ, 5ಕ್ಕೆ ಕಡಿಮೆ ಇಲ್ಲದ ಮತ್ತು 12ಕ್ಕೆ ಮೀರದ ಮೆಂಬರು (ಸಾಮಾಜಿಕರ) ಗಳ ಸಂಖ್ಯೆಯುಳ್ಳದ್ದಾಗಿರತಕ್ಕದ್ದು. ಅಂತಹ ಎಲ್ಲಾ ಮೆಂಬರುಗಳು ಇನ್ನೊಂದು ಹುಕುಂ ಕೊಡುವ ವರೆಗೂ ಡಪ್ಯುಟಿ ಕಮಿಷನರ ಶಿಫಾರಸಿನ ಮೇಲೆ ಗೌರ್ನಮೆಂಟಿನವರಿಂದ ನೇಮಿಸಲ್ಪಡತಕ್ಕವರಾಗಿರುತ್ತಾರೆ.

(2) ಪ್ರತಿ ಸಂದರ್ಭದಲ್ಲಿಯೂ ಗೌರ್ನಮೆಂಟಿನವರಿಂದ ಒಬ್ಬ ಅಧ್ಯಕ್ಷನು (Chairman) ಕೂಡ ನೇಮಿಸಲ್ಪಡತಕ್ಕದ್ದು.

ತಾಲ್ಲೂಕು ಬೋರ್ಡಿನ (ಸಭೆಯ) ಏರ್ಪಾಡು.

7. ಪ್ರತಿ ತಾಲ್ಲೂಕು ಬೋರ್ಡು ಕೆಳಗೆ ತೋರಿಸುವಂತೆ 12 ಮಂದಿ ಸಾಮಾಜಿಕರನ್ನುಳ್ಳದ್ದಾಗಿರತಕ್ಕದ್ದು.

ಉದ್ಯೋಗಪ್ರಯುಕ್ತವಾದ (Ex-Officio) ಸಾಮಾಜಿಕರು (ಮೆಂಬರುಗಳು.)

(ಎ) ತಾಲ್ಲೂಕಿನ ಅಥವಾ ಸಬ್ ತಾಲ್ಲೂಕಿನ) ರೆವಿನ್ಯೂ ಅಧಿಕಾರದಲ್ಲಿರುವ ಅಸಿಸ್ಟೆಂಟ್ ಕಮಿಷನರು, ಅಥವಾ ಯಾವ ಅಸಿಸ್ಟೆಂಟ್ ಕಮಿಷನರೂ ಅಂತಹ ತಾಲ್ಲೂಕು ಅಥವಾ ಸಬ್ ತಾಲ್ಲೂಕಿನ ರೆವಿನ್ಯೂ ಅಧಿಕಾರದಲ್ಲಿ ಇಡಲ್ಪಡದ ಇದ್ದರೆ, ಇದಕ್ಕಾಗಿ ಗೌರ್ನಮೆಂಟಿನವರಿಂದ ನೇಮಿಸಲ್ಪಟ್ಟಿರುವ ಅಮಲ್ದಾರರು ಅಥವಾ ಇತರ ಅಧಿಕಾರಿಯು, ತಾಲ್ಲೂಕು ಬೋರ್ಡಿನ ಪ್ರಸಿಡೆಂಟಾಗಿ ಇರತಕ್ಕದ್ದು;

(ಬಿ) ತಾಲ್ಲೂಕಿನ ಅಮಲ್ದಾರರು (ಎ) ಅಧಿಕರಣದಲ್ಲಿ ನಮೂದಿಸಿದ ಸಂದರ್ಭಗಳಲ್ಲಿ ಹಾಗೆ ಪ್ರಸಿಡೆಂಟರಾಗಿ ಕೆಲಸ ನೋಡುತ್ತಿರುವಾಗ ವಿನಾ ವೈಸ್‌ಪ್ರೆಸಿಡೆಂಟರಾಗಿರತಕ್ಕದ್ದು;

(ಸಿ). ತಾಲ್ಲೋಕು ಕಸಬೆಯ ಡಿಸ್ಪೆನ್ಸರಿಯ ಛಾರ್ಜಿನಲ್ಲಿರುವ ಮೆಡಿಕಲ್ ಆಫೀಸರು ;

(ಡಿ). ಆ ತಾಲ್ಲೋಕಿಗೆ ಸಂಬಂಧಪಟ್ಟ ಮುರಹಮತ್ತು ಇಲಾಖೆಯ ಸೀನಿಯರ್ ಆಫೀಸರು.

ಇತರ ಮೆಂಬರುಗಳು.

(ಇ) ಮುಂದೆ ತೋರಿಸುವರೀತ್ಯಾ ಇತರ ಹಿಡುವಳಿದಾರರು ಸ್ವಂತಗಾರರು ವಗೈರೆಯಿಂದ ಚುನಾಯಿಸಲ್ಪಡತಕ್ಕ ಅಥವಾ ಹಾಗೆ ಚುನಾಯಿಸಲ್ಪಡದೆ ಇದ್ದರೆ ಡೆಪ್ಯುಟಿ ಕಮಿಷನರವರ ಶಿಫಾರಸಿನ ಮೇಲೆ ಗಾರ್ನ್ನಮೆಂಟಿನವರಿಂದ ನೇಮಿಸಲ್ಪಡತಕ್ಕ ತಾಲ್ಲೋಕಿನ ನಾಲ್ಕು ಮಂದಿ ಜಮೀನಿನ ಹಿಡುವಳಿದಾರರು ಅಥವಾ ಮಾಲೀಕರು (ಅಥವಾ ಇತರ ವಿಧವಾದ ಯೋಗ್ಯತೆಯುಳ್ಳ ಮನುಷ್ಯರು) ;

(ಎಫ್) ಮ್ಯುನಿಸಿಪಲ್ ಮೆಂಬರುಗಳಿಂದ ತಮ್ಮ ಸಭೆಯಲ್ಲಿ ಚುನಾಯಿಸಲ್ಪಡತಕ್ಕ ಅಥವಾ ಹಾಗೆ ಚುನಾಯಿಸಲ್ಪಡದೆ ಇದ್ದರೆ, ಮೇಲ್ಕಂಡಂತೆ ಗಾರ್ನ್ನಮೆಂಟಿನವರಿಂದ ನೇಮಿಸಲ್ಪಟ್ಟ ತಾಲ್ಲೋಕು ಕಸಬಾ ಮ್ಯುನಿಸಿಪಲ್ ಬೋರ್ಡಿನ ಒಬ್ಬ ಮೆಂಬರು ;

(ಜಿ) ಉಳಿದ ಮೆಂಬರುಗಳು ಮೇಲ್ಕಂಡಂತೆ ಗಾರ್ನ್ನಮೆಂಟಿನವರಿಂದ ನೇಮಿಸಲ್ಪಡತಕ್ಕದ್ದು, ಮತ್ತು ಬೋರ್ಡಿನಲ್ಲಿ ಆಗಲೆ ಸಾಕಾದಷ್ಟು ಪ್ರತಿನಿಧಿಗಳಿಲ್ಲದೆ ಇರುವ ಮತ್ತು ಪ್ರತಿನಿಧಿಗಳನ್ನಿಡುವುದು ಅವಶ್ಯವೆಂದು ತೋರುವ ಆ ತಾಲ್ಲೋಕಿನಲ್ಲಿ ಸಂಬಂಧವಿರುವ ಜನಗಳಿಂದ ಅಥವಾ ಜನಸಮೂಹಗಳಿಂದ ಸಾಧ್ಯವಾದಮಟ್ಟಿಗೂ ತೆಗದುಕೊಳ್ಳಲ್ಪಡತಕ್ಕದ್ದು.

ಡಿಸ್ಟ್ರಿಕ್ಟು ಬೋರ್ಡಿನ ವಿಧಾನ.

8 * ಈ ಕೆಳಗೆ ಇರುವಂತೆ ಮೈಸೂರು ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಬೋರ್ಡು ಮೂವತ್ತು ಮೆಂಬರುಗಳನ್ನು ಮತ್ತು ಪ್ರತಿ ಇತರ ಡಿಸ್ಟ್ರಿಕ್ಟ್ ಬೋರ್ಡು ಇಪ್ಪತ್ತೈದು ಮೆಂಬರುಗಳನ್ನು ಉಳ್ಳದ್ದಾಗಿರತಕ್ಕದ್ದು.

ಉದ್ಯೋಗ ಯುಕ್ತವಾದ (Ex-Officio) ಮೆಂಬರುಗಳು.

(ಎ) ಡೆಪ್ಯುಟಿ ಕಮಿಷನರು—ಡಿಸ್ಟ್ರಿಕ್ಟು ಬೋರ್ಡಿನ ಪ್ರೆಸಿಡೆಂಟರಾಗಿರತಕ್ಕದ್ದು.

(ಬಿ) ಆಯಾ ಡಿಸ್ಟ್ರಿಕ್ಟಿನಲ್ಲಿರುವ ತಾಲ್ಲೋಕುಗಳ ರೆವಿನ್ಯೂ ಛಾರ್ಜಿನಲ್ಲಿರುವ ಎಲ್ಲಾ ಅಸಿಸ್ಟೆಂಟ್ ಕಮಿಷನರುಗಳು ; ಮತ್ತು ತಾಲ್ಲೋಕಿನ ರೆವಿನ್ಯೂ ಛಾರ್ಜಿನಲ್ಲಿಲ್ಲದ ಡಿಸ್ಟ್ರಿಕ್ಟು ಕಸಬೆಯಲ್ಲಿ ಯಾರಾದರು ಅಸಿಸ್ಟೆಂಟ್ ಕಮಿಷನರಿದ್ದರೆ ಅಂತಹ ಅಸಿಸ್ಟೆಂಟ್ ಕಮಿಷನರು ;

(ಸಿ) ಡಿಸ್ಟ್ರಿಕ್ಟಿನ ವೈದ್ಯ, ಮುರಹಮತ್ತು ಮತ್ತು ವಿದ್ಯಾಭ್ಯಾಸ (ಸ್ಕೂಲುಗಳ ಇನ್ಸ್ಪೆಕ್ಟರ್) ಈ ಪ್ರತಿ ಒಂದು ಇಲಾಖೆಯ ಮುಖ್ಯವಾದ ಅಥವಾ ದರ್ಜೆಯಲ್ಲಿ ಹೆಚ್ಚಾದ ಅಧಿಕಾರಿ ಮತ್ತು * ಮೈಸೂರು ಡಿಸ್ಟ್ರಿಕ್ಟಿನ ವಿಷಯದಲ್ಲಿ ಫ್ರೆಂಚ್‌ರಾಕ್ಸ್ (ಹಿರೋಡೆ) ಸಬ್ ಡಿವಿಜನಿನ ಮುರಹಮತ್ತು ಇಲಾಖೆಯ ಮುಖ್ಯವಾದ ಅಥವಾ ದರ್ಜೆಯಲ್ಲಿ ಹೆಚ್ಚಾದ ಅಧಿಕಾರಿಯೂಕೂಡ.

ಇತರ ಮೆಂಬರುಗಳು.

(ಡಿ) ಡಿಸ್ಟ್ರಿಕ್ಟಿನ ಪ್ರತಿ ತಾಲ್ಲೋಕಿನಿಂದಲೂ ಒಬ್ಬ ಗಾರ್ನ್ನಮೆಂಟು ನೌಕರನಲ್ಲದ ಪ್ರತಿನಿಧಿ; ಈ ಪ್ರತಿನಿಧಿಯು ಪ್ರಥಮತಃ ಡೆಪ್ಯುಟಿ ಕಮಿಷನರ ಶಿಫಾರಸಿನಮೇಲೆ ಗಾರ್ನ್ನಮೆಂಟಿನವರಿಂದ ನೇಮಿಸಲ್ಪಡತಕ್ಕದ್ದು, ಮತ್ತು ತರುವಾಯ ತಾಲ್ಲೋಕು ಬೋರ್ಡು ಮೆಂಬರುಗಳಿಂದ ತಮ್ಮ ಸ್ವಂತ ಸಭೆಯಲ್ಲಿ ಚುನಾಯಿಸಲ್ಪಡತಕ್ಕದ್ದು, ಅಥವಾ ಹಾಗೆ ಚುನಾಯಿಸುವುದಕ್ಕೆ ತಪ್ಪಿದರೆ, ಮೇಲ್ಕಂಡಂತೆ ಗಾರ್ನ್ನಮೆಂಟಿನವರಿಂದ ನೇಮಿಸಲ್ಪಡತಕ್ಕದ್ದು.

(ಇ) ಉಳಿದ ಮೆಂಬರುಗಳು ಡೆಪ್ಯುಟಿ ಕಮಿಷನರ ಶಿಫಾರಸಿನಮೇಲೆ ಗಾರ್ನ್ನಮೆಂಟಿನವರಿಂದ ನೇಮಿಸಲ್ಪಡತಕ್ಕದ್ದು. ಮತ್ತು ಬೋರ್ಡಿನಲ್ಲಿ ಆಗಲೆ ಸಾಕಾದಷ್ಟು ಪ್ರತಿನಿಧಿಗಳಿಲ್ಲದೆ ಇರುವ ಮತ್ತು ಪ್ರತಿನಿಧಿಗಳನ್ನು ಇಡುವುದು ಅವಶ್ಯಕವಾಗಿತೋರುವ ಡಿಸ್ಟ್ರಿಕ್ಟಿನಲ್ಲಿ ಸಂಬಂಧವಿರುವ ಜನಗಳಿಂದ ಅಥವಾ ಜನಸಮೂಹಗಳಿಂದ ಸಾಧ್ಯವಾದಮಟ್ಟಿಗೂ ತೆಗದುಕೊಳ್ಳಲ್ಪಡತಕ್ಕದ್ದು.

ವೈಸ್ ಪ್ರೆಸಿಡೆಂಟರು.

9 (i) ಪ್ರತಿ ಡಿಸ್ಟ್ರಿಕ್ಟು ಬೋರ್ಡಿನ ವೈಸ್ ಪ್ರೆಸಿಡೆಂಟು ಗಾರ್ನ್ನಮೆಂಟಿನವರಿಂದ ನೇಮಿಸಲ್ಪಡತಕ್ಕದ್ದು, ಅಥವಾ ಪ್ರತಿ ಸಂದರ್ಭದಲ್ಲಿಯೂ ಹುಕುಂ ಕೊಡಲ್ಪಡುವಹಾಗೆ ಸರ್ಕಾರದವರ ಮಂಜೂರಾತಿಗೆ ಒಳಪಟ್ಟು ಮೆಂಬರುಗಳಿಂದ ಚುನಾಯಿಸಲ್ಪಡುವುದಕ್ಕೆ ಸರ್ಕಾರದವರು ಅಧಿಕಾರ ಕೊಡತಕ್ಕದ್ದು.

(ii) 7ನೆಯ ನಿಬಂಧನೆಯ (ಎ) ಅಧಿಕರಣದಮೇರೆ ತಾಲ್ಲೋಕು ಬೋರ್ಡಿನ ಪ್ರೆಸಿಡೆಂಟರಾಗಿ ಅಮಲ್ದಾರರು ಕೆಲಸ ಮಾಡುವಾಗ ವೈಸ್ ಪ್ರೆಸಿಡೆಂಟು ಸರ್ಕಾರದವರ ಮಂಜೂರಾತಿಗೆ ಒಳಪಟ್ಟು ಅಂತಹ ಬೋರ್ಡಿನ ಇತರ ಮೆಂಬರುಗಳಿಂದ ಚುನಾಯಿಸಲ್ಪಡತಕ್ಕದ್ದು.

ತಾಲ್ಲೋಕನ್ನು ಗ್ರಾಮ ಸಮೂಹಗಳನ್ನಾಗಿ ವಿಭಾಗಿಸುವುದು.

10 (I) 7ನೆಯ ನಿಬಂಧನೆಯ (ಇ) ಅಧಿಕರಣದಲ್ಲಿ ಹೇಳಿರುವ ತಾಲ್ಲೋಕು ಬೋರ್ಡಿನ ಮೆಂಬರುಗಳ ಚುನಾವಣೆ ಬಗ್ಯೆ ಪ್ರತಿ ತಾಲ್ಲೋಕು ನಾಲ್ಕು ಗ್ರಾಮ ಸಮೂಹಗಳಾಗಿ ವಿಭಾಗಿಸಲ್ಪಡತಕ್ಕದ್ದು; ಪ್ರತಿ ಸಮೂಹವು ಅದರ ಸ್ವಂತಮೆಂಬರನ್ನು ಕಳುಹಿಸತಕ್ಕದ್ದು.

* 1903ನೆಯ ಇಸವಿ ಡಿಸೆಂಬರ್ 7ನೆಯ ತಾರೀಖಿನ ನಂ. 2153—ಲಿ. 66-03ನೆಯ ಇಸ್ತಿಹಾರನಾಮೆಯಿಂದ ತಿದ್ದುಪಾಟಾಗಿರುವಮೇರೆ.

(2) ರಸ್ತೆಗಳು, ಕಡವುಗಳು, ಆಸ್ಪತ್ರೆಗಳು, ಪಾಠಶಾಲೆಗಳು ಇವೇ ಮೊದಲಾದವುಗಳನ್ನು ಪರ್ಯಾಲೋಚಿಸಿ ಗ್ರಾಮಗಳನ್ನು ಸಮೂಹಗಳನ್ನಾಗಿ ಸೇರಿಸೋಣವು ಡೆಪ್ಯುಟಿ ಕಮಿಷನರವರಿಂದ ಮಾಡಲ್ಪಡತಕ್ಕದ್ದು; ಮತ್ತು ಅಂತಹ ನಾನಾ ಸಮೂಹಗಳಲ್ಲಿ ಪ್ರತಿ ಒಂದರಿಂದಲೂ ಕೊಡಲ್ಪಡತಕ್ಕ ಜಮೀನು ಕಂದಾಯ (ಪರಾಧೀನ ಮಾಡಿರತಕ್ಕ ಗ್ರಾಮಗಳ ಸರ್ವೆ ಬೆಲೆಯು ಸೇರಿ) ಮತ್ತು ಲೋಕಲ್ ಸೆಸ್ಸು ಇವುಗಳ ಒಟ್ಟು ಮೊಬಲಗು ಸುಮಾರು ಸಮವಾಗಿರುವಂತೆ ಸಾಧ್ಯವಾದ ಮಟ್ಟಿಗೂ ಏರ್ಪಾಡು ಮಾಡತಕ್ಕದ್ದು.

11. (1) 21 ವರ್ಷಗಳ ಪೂರ್ತಿಯಾದ ವಯಸ್ಸುಳ್ಳ ಸ್ವಸ್ಥ ಚಿತ್ತವುಳ್ಳ, ಮತ್ತು

ಚುನಾಯಿಸುವವರ ಯೋಗ್ಯತೆ.

(i) ತಾಲ್ಲೋಕಿನ ಒಂದು ಗ್ರಾಮ ಸಮೂಹದಲ್ಲಿರುವ ವರ್ಷ ಒಂದಕ್ಕೆ 50 ರೂಪಾಯಿಗಳಿಗೆ ಕಡಮೆ ಇಲ್ಲದೆ ಕಂದಾಯ ಬಿದ್ದಿರುವ ಜಮೀನಿನ ಹಿಡುವಳಿದಾರನಾದ ಅಥವಾ ಸ್ವಂತಗಾರನಾದ, ಅಥವಾ

(ii) ಆ ತಾಲ್ಲೋಕಿನ ಒಂದು ಗ್ರಾಮ ಸಮೂಹದಲ್ಲಿರುವ ಯಾವುದಾದರೂ ಗ್ರಾಮದ ಪಟೇಲನಾಗಿ ಕೆಲಸ ನೋಡುವುದಕ್ಕೆ ಕ್ರಮವಾಗಿ ನೇಮಿಸಲ್ಪಟ್ಟಿರುವ, ಅಥವಾ

(iii) ಆ ತಾಲ್ಲೋಕಿನ ಒಂದು ಗ್ರಾಮ ಸಮೂಹದಲ್ಲಿ ಈ ನಿಬಂಧನೆಗಳಿಗನುಸಾರವಾಗಿ ವರ್ಷ ಒಂದಕ್ಕೆ 5 ರೂಪಾಯಿಗಳಿಗೆ ಕಡಿಮೆ ಇಲ್ಲದೆ ಮನೆ ಕಂದಾಯವನ್ನು ಕೊಡುವ

ಪ್ರತಿ ಗಂಡಸೂ ಅಂತಹ ಗ್ರಾಮ ಸಮೂಹಕ್ಕಾಗಿ ತಾಲ್ಲೋಕು ಬೋರ್ಡಿನ ಮೆಂಬರಿನ ಚುನಾವಣೆಯ ಬಗ್ಗೆ ಸಮ್ಮತಿ (Vote) ಯನ್ನು ಕೊಡುವುದಕ್ಕೆ ಅರ್ಹನಾಗಿರತಕ್ಕದ್ದು.

ತಾಲ್ಲೋಕು ಬೋರ್ಡಿನ ಮೆಂಬರಾಗಿರುವುದಕ್ಕೆ ಯೋಗ್ಯತೆ.

(2) 16ನೆಯ ನಿಬಂಧನೆಯ ನಿಯಮಗಳಿಗೆ ಒಳಪಟ್ಟು ಈ ನಿಬಂಧನೆಯ 1ನೆಯ ಅಧಿಕರಣದಮೇರೆ ಯೋಗ್ಯತೆಯುಳ್ಳ ಮತ್ತು ಅದಲ್ಲದೆ ಓದು ಬರಹ ಬಲ್ಲ ಯಾವ ಮನುಷ್ಯನಾದರೂ ತಾನು ಸಾಧಾರಣವಾಗಿ ವಾಸವಾಗಿರುವ ತಾಲ್ಲೋಕು ಬೋರ್ಡಿನ ಮೆಂಬರಾಗಿ ಚುನಾಯಿಸಲ್ಪಡುವುದಕ್ಕಾಗಲಿ ಅಥವಾ ನೇಮಿಸಲ್ಪಡುವುದಕ್ಕಾಗಲಿ ಯೋಗ್ಯತೆಯುಳ್ಳವನಾಗಿರತಕ್ಕದ್ದು.

12. (1) ಪ್ರತಿ ತಾಲ್ಲೋಕಿನಲ್ಲಿಯೂ ಸಮ್ಮತಿ ಕೊಡುವುದಕ್ಕೆ ಅರ್ಹರಾಗಿರುವ ಮನುಷ್ಯರ ಪಟ್ಟಿಗಳನ್ನು ಡೆಪ್ಯುಟಿ ಕಮಿಷನರವರ ಹುಕುಂ ಪ್ರಕಾರ ತಯಾರುಮಾಡತಕ್ಕದ್ದು, ಮತ್ತು ಪ್ರತಿ ಸಾಮಾನ್ಯ ಚುನಾವಣೆಗೆ ಮೂರು ತಿಂಗಳಿಗೆ ಮುಂಚೆಯೂ ಅಂತಹ ಪಟ್ಟಿಗಳನ್ನು ಪುನರ್ವಿಮರ್ಶೆ ಮಾಡತಕ್ಕದ್ದು; ಮತ್ತು ಅವುಗಳ ಪ್ರತಿಗಳನ್ನು ಅಮಲ್ದಾರರ ಕಛೇರಿಯಲ್ಲಿಟ್ಟು ಸರಿಯಾದ ವೇಳೆಗಳಲ್ಲೆಲ್ಲಾ ಸರ್ವ ಜನರು ನೋಡುವುದಕ್ಕೆ ತಡೆ ಇಲ್ಲದೆ ಇಟ್ಟಿರತಕ್ಕದ್ದು.

ಸಮ್ಮತಿ ಕೊಡುವವರ (Voters) ಪಟ್ಟಿಗಳನ್ನು ತಯಾರುಮಾಡತಕ್ಕದ್ದು.

(2) ಅಂತಹ ಯಾವ ಪಟ್ಟಿಯಲ್ಲಾದರೂ ಯಾರ ಹೆಸರನ್ನಾದರೂ ಬಿಟ್ಟುಬಿಟ್ಟಿದ್ದರೆ ಅವನು ಪಟ್ಟಿಯಲ್ಲಿ ದಾಖಲಾಗುವ ಬಗ್ಗೆ ಡೆಪ್ಯುಟಿ ಕಮಿಷನರಿಗೆ ಹೇಳಿಕೊಳ್ಳಬಹುದು, ಅವರ ತೀರ್ಮಾನವೇ ಅಖೈರಾಗಿರತಕ್ಕದ್ದು.

13. (1) ಯಾವ ಚುನಾವಣೆಗಾದರೂ ಡೆಪ್ಯುಟಿ ಕಮಿಷನರವರಿಂದ ಗೊತ್ತು ಮಾಡಲ್ಪಟ್ಟಿರುವ ತಾರೀಖಿಗೆ ಮುಂಚೆ ಒಂದು ತಿಂಗಳಿಗೆ ಕಡಿಮೆ ಇಲ್ಲದೆ ಅಮಲ್ದಾರರು ಚುನಾವಣೆಯ ಕಾಲವನ್ನು ಸ್ಥಳವನ್ನು ನಮೂದಿಸಿ ಒಂದು ಲಿಖಿತವಾದ ನೋಟೀಸನ್ನು ಸಮ್ಮತಿ ಕೊಡುವುದಕ್ಕೆ ಅರ್ಹನಾಗಿರುವ ಪ್ರತಿ ಮನುಷ್ಯನಿಗೂ ಕಳುಹಿಸತಕ್ಕದ್ದು. ಹಾಗೆ ಗೊತ್ತು ಮಾಡಲ್ಪಟ್ಟ ಸ್ಥಳವು ಅದಕ್ಕೆ ಸಂಬಂಧಪಟ್ಟ ಗ್ರಾಮ ಸಮೂಹಕ್ಕೆ ಸಾಧ್ಯವಾದ ಮಟ್ಟಿಗೂ ಅನುಕೂಲವಾದ ಸ್ಥಳವಾಗಿರತಕ್ಕದ್ದು.

ತಾಲ್ಲೋಕು ಬೋರ್ಡಿನ ಮೆಂಬರುಗಳ ಚುನಾವಣೆಯ ಕ್ರಮ.

(2) ಸಮ್ಮತಿ ಕೊಡುವುದಕ್ಕೆ ಇಷ್ಟಪಡುವ ಮನುಷ್ಯರೆಲ್ಲರೂ ಚುನಾವಣೆಯ ಕಾಲದಲ್ಲಿ ಹಾಜರಿರಬೇಕು, ಮತ್ತು ಬದಲಿ ಮೂಲಕವಾಗಿ ಆಗಲಿ ಅಥವಾ ಬರಹ ಮೂಲಕವಾಗಿ ಆಗಲಿ ಬಂದ ಸಮ್ಮತಿಗಳು ಅಂಗೀಕರಿಸಲ್ಪಡತಕ್ಕವುಗಳಲ್ಲ.

(3) ಹಾಗೆ ಗೊತ್ತಾದ ದಿವಸದಲ್ಲಿ ಆ ತಾಲ್ಲೋಕಿನ ರೆವಿನ್ಯು ಛಾರ್ಜಿನಲ್ಲಿರುವ ರೆವಿನ್ಯೂ ಅಸಿಸ್ಟೆಂಟ್ ಕಮಿಷನರಾಗಲಿ, ಅಥವಾ ಅಮಲ್ದಾರರಾಗಲಿ ಅಥವಾ ಚುನಾವಣೆಯ ಕಾಲದಲ್ಲಿ ಅಗ್ರಾಸನವನ್ನು ವಹಿಸುವುದಕ್ಕೆ ಡೆಪ್ಯುಟಿ ಕಮಿಷನರವರಿಂದ ನೇಮಿಸಲ್ಪಟ್ಟ ಇತರ ಯಾವ ಅಧಿಕಾರಿಯಾಗಲಿ, ಖುದ್ದು ಹಾಜರಾಗಿ ಚುನಾವಣೆ ಮಾಡುವವರ ಸಮ್ಮತಿಗಳನ್ನು ಬರೆದುಕೊಳ್ಳತಕ್ಕದ್ದು.

(4) ಸಮ್ಮತಿ ಕೊಡುವವರ ವಿಷಯಕವಾದ ಎಲ್ಲಾ ಆಕ್ಷೇಪಗಳನ್ನು ಅಗ್ರಸ್ಥನಾದ ಅಧಿಕಾರಿಯು ಸಮ್ಮತಿ ಕೊಡುವವರ ಪಟ್ಟಿಯನ್ನು ನೋಡಿ ಸಾಧ್ಯವಾದರೆ ಸಂಕ್ಷೇಪವಾಗಿಯೇ ತೀರ್ಮಾನಿಸತಕ್ಕದ್ದು.

(5) ಗ್ರಾಮ ಸಮೂಹದ ಸಮ್ಮತಿ ಕೊಡುವವರಲ್ಲಿ ಶೇಕಡ 10ಕ್ಕೆ ಕಡಮೆ ಇಲ್ಲದಷ್ಟು ಮಂದಿ ಹಾಜರಾಗಿದ್ದಾರೆಂದು ಅಧ್ಯಕ್ಷನಾದ ಅಧಿಕಾರಿಯು ತೃಪ್ತಿಪಟ್ಟಿದ್ದಲ್ಲಿ ಸ್ಪಷ್ಟವಾಗಿ ಅಧಿಕವಾದ ಸಮ್ಮತಿಗಳನ್ನುಳ್ಳ ಉಮೇದುವಾರನನ್ನು ಕ್ರಮವಾಗಿ ಚುನಾಯಿಸಲ್ಪಟ್ಟನೆಂದು ತಿಳಿಸತಕ್ಕದ್ದು. ಹಾಜರಾಗಿದ್ದ ಸಮ್ಮತಿ ಕೊಡುವವರ ಸಂಖ್ಯೆಯು ಶೇಕಡ 10ಕ್ಕೆ ಕಡಮೆಯಾಗಿದ್ದರೆ, ಡೆಪ್ಯುಟಿ ಕಮಿಷನರು ತಿರುಗಿ ಚುನಾವಣೆ ನಡೆಯಬಹುದೆಂದು ಹುಕುಂ ಮಾಡಬಹುದು, ಅಥವಾ ಚುನಾಯಿಸತಕ್ಕವರು ಒಬ್ಬ ಮೆಂಬರನ್ನು ಚುನಾಯಿಸುವದಕ್ಕೆ ತಪ್ಪಿಹೋದರೆಂದು ತೀರ್ಮಾನಿಸಬಹುದು.

(6) ಕ್ರಮವಾಗಿ ಚುನಾಯಿಸಲ್ಪಟ್ಟ ಯಾವ ಉಮೇದುವಾರನಾದರೂ ಆ ಕೆಲಸವು ಬೇಡವೆಂದರೆ, ಇವನಿಗೆ ತರುವಾಯ ಅಧಿಕತಮವಾದ ಸಮ್ಮತಿಗಳನ್ನು ಹೊಂದಿ ನಿಷ್ಫಲನಾದ ಉಮೇದುವಾರನು ಯಾವನಾದರು ಇದ್ದರೆ ಅವನು ಚುನಾಯಿಸಲ್ಪಟ್ಟನೆಂದು ಅಂಗೀಕರಿಸತಕ್ಕದ್ದು. ಹಾಗೆ ನಿಷ್ಫಲನಾದ ಉಮೇದುವಾರನು ಇಲ್ಲದೆ ಇದ್ದರೆ ಹೀಗೆ ಆದ ಖಾಲಿಯನ್ನು ಭರ್ತಿ ಮಾಡುವುದಕ್ಕೆ ಹೊಸ ಚುನಾವಣೆಯನ್ನು ನಡಿಸತಕ್ಕದ್ದು.

(7) ಎಲ್ಲಾ ಚುನಾವಣೆಗಳ ಫಲಿತಾಂಶಗಳನ್ನು ಡೆಪ್ಯೂಟಿ ಕಮಿಷನರಿಗೆ ಸಾಧ್ಯವಾದಷ್ಟು ಜಾಗ್ರತೆಯಾಗಿ ತಿಳಿಸತಕ್ಕದ್ದು.

ತಾಲ್ಲೂಕು ಮತ್ತು ಮ್ಯುನಿಸಿಪಲ್ ಬೋರ್ಡುಗಳಿಗೆ ಪ್ರತಿನಿಧಿಗಳಾದ ಮೆಂಬರುಗಳ ಚುನಾವಣೆ.

14. ತಾಲ್ಲೂಕು ಬೋರ್ಡುಗಳಿಂದ ಡಿಸ್ಟ್ರಿಕ್ಟು ಬೋರ್ಡಿಗೂ, ಮ್ಯುನಿಸಿಪಲ್ ಬೋರ್ಡುಗಳಿಂದ ತಾಲ್ಲೂಕು ಬೋರ್ಡುಗಳಿಗೂ ಕಳುಹಿಸಲ್ಪಡುವ ಪ್ರತಿನಿಧಿಗಳ ಚುನಾವಣೆಯು ಆ ಕೆಲಸಕ್ಕಾಗಿ ಸೇರಿಸಲ್ಪಡುವ ಅಂತಹ ತಾಲ್ಲೂಕು ಮತ್ತು ಮ್ಯುನಿಸಿಪಲ್ ಬೋರ್ಡು ಸಭೆಗಳಲ್ಲಿ ನಡೆಯತಕ್ಕದ್ದು, ಮತ್ತು ಅದರ ಫಲಿತಾಂಶವು ಚುನಾವಣೆಯಾದ ಮೇಲೆ ಸಾಧ್ಯವಾದಷ್ಟು ಜಾಗ್ರತೆಯಾಗಿ ಡೆಪ್ಯೂಟಿ ಕಮಿಷನರಿಗೆ ತಿಳಿಸಲ್ಪಡತಕ್ಕದ್ದು.

ಎಲ್ಲಾ ಚುನಾವಣೆಗಳ ವಿಷಯವಾದ ಸಾಮಾನ್ಯ ನಿಯಮಗಳು.

15. (1) ಈ ನಿಬಂಧನೆಗಳಿಗೆ ಅನುಸಾರವಾದ ಮೆಂಬರುಗಳ ಎಲ್ಲಾ ಚುನಾವಣೆಗಳ ವಿಷಯದಲ್ಲೂ ಸಮ್ಮತಿಗಳು ಸಮವಾಗಿದ್ದಾಗ ಚುನಾವಣೆಯಲ್ಲಿ ಅಗ್ರಸ್ಥರಾದ ಆಫೀಸರು ಯುಕ್ತವಾಗಿ ಭಾವಿಸುವಂತೆ ಚುನಾವಣೆಯು ದೈವಗತಿ (Lot) ಇಂದ ನಿಶ್ಚೈಸಲ್ಪಡತಕ್ಕದ್ದು.

(2) ಲೋಕಲ್ ಬೋರ್ಡಿನ ನೌಕರಿಯಲ್ಲಿ ಅಥವಾ ಸಂಬಳದಲ್ಲಿ ಇರುವ ಯಾವ ಮನುಷ್ಯನೂ ತಾನು ಸಮ್ಮತಿಯನ್ನು ಕೊಡುವುದಕ್ಕೆ ಅರ್ಹನಾಗಿದ್ದರೆ ತನ್ನ ಸ್ವಂತ ಸಮ್ಮತಿಯನ್ನು ಕೊಡುವುದಕ್ಕಿಂತ ಬೇರೆ ರೀತಿಯಲ್ಲಿ ಸಮ್ಮತಿಗಳನ್ನು ಕೇಳುವ, ಅಥವಾ ಯಾವ ಉಮೇದುವಾರನ ಚುನಾವಣೆಯಲ್ಲಿಯಾದರೂ ಇತರ ವಿಧವಾಗಿ ಸಹಾಯ ಮಾಡುವ ಕೆಲಸಕ್ಕೆ ಪ್ರತ್ಯಕ್ಷವಾಗಿ ಆಗಲಿ ಪರೋಕ್ಷವಾಗಿ ಆಗಲಿ ಹೋಗತಕ್ಕದ್ದಲ್ಲ. ಈ ನಿಬಂಧನೆಯ ಯಾವ ವಿಧವಾದ ಉಲ್ಲಂಘನೆಯೂ ಅವನನ್ನು ಬರ್ತರ್ಫಿಗೆ ಗುರಿಮಾಡುವುದು.

ಮೆಂಬರಾಗುವುದಕ್ಕೆ ಅಯೋಗ್ಯತೆ.

16. (i) ಅಂತಹ ಲೋಕಲ್ ಬೋರ್ಡಿನ ಕಾರ್ಯ ನಿರ್ವಾಹಕ ಅಧಿಕಾರಿ ಅಥವಾ ಗುಮಾಸ್ತಾ ಅಥವಾ ಸೇವಕನಾಗಿರುವ ; ಅಥವಾ

(ii) ಅಂತಹ ಲೋಕಲ್ ಬೋರ್ಡಿಗೆ ಸಂಬಂಧಪಟ್ಟ ಯಾವ ಕಂಟ್ರಾಕ್ಟು ಕೆಲಸದಲ್ಲಿಯಾದರೂ ಪ್ರತ್ಯಕ್ಷವಾಗಿ ಆಗಲಿ ಅಥವಾ ಪರೋಕ್ಷವಾಗಿ ಆಗಲಿ ಭಾಗಿಯಾಗಿರುವ, ಅಥವಾ ಪ್ರಯೋಜನವುಳ್ಳವನಾಗಿರುವ ; ಅಥವಾ

(iii) ಸರ್ಕಾರದ ನೌಕರಿಯಿಂದ ಕೆಟ್ಟ ನಡತೆಗಾಗಿ ಬರ್ತರ್ಫು ಮಾಡಲ್ಪಟ್ಟಿರುವ, ಅಥವಾ

(iv) ದಿವಾಳಿ ಎಂದು ಪ್ರಕಟಿಸಲ್ಪಟ್ಟಿರುವ, ಅಥವಾ

(v) ಕ್ರಿಮಿನಲ್ ಕೋರ್ಟಿನಿಂದ ಕೈದು ಸಜಾ ವಿಧಿಸಲ್ಪಟ್ಟು ಅಥವಾ ಜಾಮೀನಿನ ಮೇಲೆ ಬಿಡುವುದಕ್ಕೆ ಅರ್ಹವಲ್ಲದ ತಪ್ಪು ಸಾಬೀತು ಮಾಡಲ್ಪಟ್ಟು ಅಂತಹ ಶಿಕ್ಷೆಯಾಗಲಿ, ತಪ್ಪು ಸಾಬೀತಾಗಲಿ ಅಪೀಲಿನಲ್ಲಿ ರದ್ದು ಆಗದೆ ಇರುವ,

ಯಾವ ಮನುಷ್ಯನೂ ಅಂತಹ ಲೋಕಲ್ ಬೋರ್ಡಿನ ಮೆಂಬರಾಗಿ ಚುನಾಯಿಸಲ್ಪಡುವುದಕ್ಕಾಗಲಿ ಅಥವಾ ನೇಮಿಸಲ್ಪಡುವುದಕ್ಕಾಗಲಿ ಯೋಗ್ಯನಾಗಿರತಕ್ಕದ್ದಲ್ಲ.

ಮೆಂಬರುಗಳ ಮತ್ತು ಉದ್ಯೋಗಸ್ಥರ ಉದ್ಯೋಗದ ಅವಧಿ.

17. (i) ಅಧಿಕಾರಪ್ರಯುಕ್ತವಾಗಿ ನೇಮಿಸಲ್ಪಟ್ಟ ಮೆಂಬರುಗಳಲ್ಲದ, ಲೋಕಲ್ ಬೋರ್ಡುಗಳ ಮೆಂಬರುಗಳು ಅವರ ನೇಮಕಗಳು ಅಥವಾ ಚುನಾವಣೆಗಳು ಪ್ರಕಟಿಸಲ್ಪಟ್ಟಿರುವ ಮೈಸೂರು ಗೆಜೆಟ್ಟಿನ ತಾರೀಖಿನಿಂದ 3 ವರ್ಷಗಳ ವರೆಗೂ ಅಥವಾ ಅವರ ಉತ್ತರಾಧಿಕಾರಿಗಳ ಹೆಸರುಗಳು ಪ್ರಕಟವಾಗುವುದಕ್ಕೆ ಮುಂಚೆ ಮೂರು ವರ್ಷಗಳ ಅವಧಿಯು ತೀರಿಹೋದರೆ ಹಾಗೆ ಪ್ರಕಟವಾಗುವವರೆಗೂ ಸಾಧಾರಣವಾಗಿ ಉದ್ಯೋಗವನ್ನು ವಹಿಸತಕ್ಕದ್ದು.

ಆದರೆ ಸಂದರ್ಭಾನುಸಾರ ಡಿಸ್ಟ್ರಿಕ್ಟು ಅಥವಾ ತಾಲ್ಲೂಕು ಬೋರ್ಡಿನ ಮೆಂಬರಾಗಿರುವುದಕ್ಕೆ ಕಳುಹಿಸಲ್ಪಟ್ಟಿರುವ ಯಾವ ತಾಲ್ಲೂಕು ಅಥವಾ ಮ್ಯುನಿಸಿಪಲ್ ಬೋರ್ಡಿನ ಮೆಂಬರಾದರೂ ತನಗೆ ತಾಲ್ಲೂಕು ಅಥವಾ ಮ್ಯುನಿಸಿಪಲ್ ಬೋರ್ಡಿನ ಮೆಂಬರ್ ಕೆಲಸವು ನಿಂತುಹೋದಾಗ ಅಂತಹ ಡಿಸ್ಟ್ರಿಕ್ಟು ಅಥವಾ ತಾಲ್ಲೂಕು ಬೋರ್ಡು ಮೆಂಬರು ಕೆಲಸವನ್ನು ಬಿಟ್ಟುಬಿಡತಕ್ಕದ್ದು.

ಆದರೆ ಸಂದರ್ಭಾನುಸಾರವಾಗಿ ತಾಲ್ಲೂಕು ಅಥವಾ ಮ್ಯುನಿಸಿಪಲ್ ಬೋರ್ಡಿನವರು ಕ್ರಮವಾಗಿ ಬರೆಯಲ್ಪಟ್ಟ ತೀರ್ಮಾನದ ಮೂಲಕ ಡಿಸ್ಟ್ರಿಕ್ಟು ಅಥವಾ ತಾಲ್ಲೂಕು ಬೋರ್ಡಿನ ಸಭೆಯು ಸೇರುವಾಗ ಅಲ್ಲಿ ಹಾಜರಿರುವುದಕ್ಕೆ ಅನುಕೂಲವಿಲ್ಲದ ತಮ್ಮ ಪ್ರತಿನಿಧಿಗೆ ಬದಲು ಹಂಗಾಮಿ ಬದಲಿಯಾಗಿರುವಹಾಗೆ ಇತರ ಯಾವ ಮೆಂಬರನ್ನಾದರೂ ನೇಮಿಸಬಹುದು.

(ii) 9ನೆಯ ನಿಬಂಧನೆಯ ಮೇರೆ ನೇಮಿಸಲ್ಪಟ್ಟ ಅಥವಾ ಚುನಾಯಿಸಲ್ಪಟ್ಟ ಡಿಸ್ಟ್ರಿಕ್ಟು ಅಥವಾ ತಾಲ್ಲೂಕು ಬೋರ್ಡಿನ ವೈಸ್ ಪ್ರೆಸಿಡೆಂಟು ಮತ್ತು ಪಂಚಾಯತಿಯ ಅಧ್ಯಕ್ಷನು, (Chairman) ಉದ್ಯೋಗ ಪ್ರಯುಕ್ತವಾದ ಮೆಂಬರಾಗಿದ್ದರೆ ವೈಸ್ ಪ್ರೆಸಿಡೆಂಟ್ ಅಥವಾ ಅಧ್ಯಕ್ಷನಾಗಿ (Chairman) ಅವರ ನೇಮಕ ಅಥವಾ ಚುನಾವಣೆಯು ಪ್ರಕಟಿಸಲ್ಪಟ್ಟಿರುವ ಮೈಸೂರು ಗೆಜೆಟ್ಟಿನ ತಾರೀಖಿನಿಂದ 3 ವರ್ಷಗಳ ವರೆಗೂ, ಇತರ ಸಂದರ್ಭಗಳಲ್ಲಿ ಮೆಂಬರಾಗಿರುವ ಅವಧಿಯಲ್ಲಿ ಉಳಿದಿರುವ ಕಾಲ ತೀರುವ ವರೆಗೂ ಸಾಧಾರಣವಾಗಿ ಉದ್ಯೋಗವನ್ನು ವಹಿಸತಕ್ಕದ್ದು.

(iii) ಲೋಕಲ್ ಬೋರ್ಡಿನ ಅವಧಿ ಕಳೆದು ಹೊರಟುಹೋಗತಕ್ಕ ಮೆಂಬರು, ವೈಸ್ ಪ್ರೆಸಿಡೆಂಟು, ಅಥವಾ ಅಧ್ಯಕ್ಷನು (Chairman), ಇತರ ವಿಧದಲ್ಲಿ ಯೋಗ್ಯತೆ ಉಳ್ಳವನಾಗಿದ್ದರೆ ಪುನಃ ಚುನಾವಣೆ ಮಾಡಲ್ಪಡುವುದಕ್ಕಾಗಲಿ ಅಥವಾ ನೇಮಿಸಲ್ಪಡುವುದಕ್ಕಾಗಲಿ ಅರ್ಹನಾಗಿರತಕ್ಕದ್ದು.

18. ಲೋಕಲ್ ಬೋರ್ಡಿನ ವೈಸ್ ಪ್ರೆಸಿಡೆಂಟು, ಅಧ್ಯಕ್ಷನು (Chairman) ಅಥವಾ ಮೆಂಬರಾಗಿ ನೇಮಿಸಲ್ಪಟ್ಟ ಅಥವಾ ಚುನಾಯಿಸಲ್ಪಟ್ಟವನು ತನ್ನ ಕೆಲಸಕ್ಕೆ ರಾಜಿನಾಮೆ ಕೊಡಬಹುದು, ಮತ್ತು ಅಂತಹ ರಾಜಿನಾಮೆಯು ಗೌರ್ನ್ಮೆಂಟಿನವರಿಂದ ಅಂಗೀಕರಿಸಲ್ಪಟ್ಟಾಗ ಅವನು ತನ್ನ ಕೆಲಸವನ್ನು ಖಾಲಿ ಮಾಡಿದನೆಂದು ಭಾವಿಸತಕ್ಕದ್ದು.

ಕೆಲಸಕ್ಕೆ ರಾಜೀನಾಮೆ.

(ii) ಲೋಕಲ್ ಬೋರ್ಡಿನ ಮೆಂಬರಾಗಿರುವ ಸಂಬಳವುಳ್ಳ ಸರ್ಕಾರಿ ನೌಕರಿಯಲ್ಲಿರುವ ಮನುಷ್ಯನು ಅಂತಹ ಬೋರ್ಡಿನ ಅಧಿಕಾರಕ್ಕೆ ಒಳಪಟ್ಟ ಪ್ರದೇಶದಿಂದ ಖಾಯಂ ಆಗಿ ವರ್ಗಾಯಿಸಲ್ಪಟ್ಟಾಗ, ಅಥವಾ ಮೂರು ತಿಂಗಳಿಗಿಂತ ಹೆಚ್ಚಾಗಿ ಅಲ್ಲಿಂದ ಗೈರು ಹಾಜರಾಗಿರಬೇಕೆಂಬ ಉದ್ದೇಶದಿಂದ ಅಂತಹ ಪ್ರದೇಶವನ್ನು ಬಿಟ್ಟಾಗ, ಅಥವಾ ಕೆಲಸಕ್ಕೆ ರಾಜಿನಾಮೆ ಕೊಟ್ಟಾಗ, ಅಥವಾ ಸಸಪೆಂಡ್ ಮಾಡಲ್ಪಟ್ಟಾಗ, ಅಥವಾ ಸರ್ಕಾರದ ನೌಕರಿಯಿಂದ ತೆಗೆದುಹಾಕಲ್ಪಟ್ಟಾಗ, ಅಥವಾ ಅಂತಹ ನೌಕರಿಯನ್ನು ಬಿಟ್ಟುಬಿಟ್ಟಾಗ ಅಂತಹ ಬೋರ್ಡಿನ ಮೆಂಬರು ಕೆಲಸವನ್ನು ಖಾಲಿ ಮಾಡಿದ ಹಾಗೆ ಭಾವಿಸತಕ್ಕದ್ದು.

ವರ್ಗಾವರ್ಗಿ ಅಥವಾ ಇತರ ಕಾರಣಗಳಿಂದ ಗೌರ್ನ್ಮೆಂಟ್ ನೌಕರರು ಕೆಲಸವನ್ನು ಖಾಲಿ ಮಾಡೋಣ.

ಲೋಕಲ್ ಬೋರ್ಡಿನ ವೈಸ್ ಪ್ರೆಸಿಡೆಂಟ್, ಅಧ್ಯಕ್ಷ (Chairman) ಅಥವಾ ಮೆಂಬರನ್ನು ಕೆಲಸದಿಂದ ತೆಗೆದುಹಾಕುವುದು.

19. (1) ಲೋಕಲ್ ಬೋರ್ಡಿನ ಉದ್ಯೋಗ ಪ್ರಯುಕ್ತವಾದ ಮೆಂಬರಲ್ಲದ ವೈಸ್ ಪ್ರೆಸಿಡೆಂಟ್, ಅಧ್ಯಕ್ಷ (Chairman) ಅಥವಾ ಮೆಂಬರನ್ನು ; —

(i) ಅವನು ಅಂತಹ ಲೋಕಲ್ ಬೋರ್ಡಿನ ಅಧಿಕಾರಕ್ಕೆ ಒಳಪಟ್ಟ ಪ್ರದೇಶದಿಂದ 6 ಅನುಕ್ರಮವಾದ ಮಾಸಗಳಿಗೆ ಅಧಿಕವಾಗಿ ಗೈರ್‌ಹಾಜರ್ ಆಗಿದ್ದರೆ, ಅಥವಾ ಕೆಲಸ ಮಾಡುವದಿಲ್ಲವೆಂದು ಹೇಳಿದರೆ, ಅಥವಾ ಕೆಲಸ ಮಾಡುವುದಕ್ಕೆ ಅಸಮರ್ಥನಾದರೆ, ಅಥವಾ ದಿವಾಳಿ ಎಂದು ಪ್ರಕಟಿಸಲ್ಪಟ್ಟರೆ, ಅಥವಾ ಲೋಕಲ್ ಬೋರ್ಡಿನ ವೈಸ್ ಪ್ರೆಸಿಡೆಂಟ್, ಅಧ್ಯಕ್ಷ (Chairman) ಅಥವಾ ಮೆಂಬರಾಗಿರುವುದಕ್ಕೆ ಅವನನ್ನು ಅನರ್ಹನನ್ನಾಗಿ ಮಾಡುವ ನಡತೆಯ ದೋಷವೆಂದು ಗೌರ್ನ್ಮೆಂಟಿನವರ ಅಭಿಪ್ರಾಯಕ್ಕೆ ಬರುವಂತಹ ಯಾವ ತಪ್ಪಾದರೂ ಸಾಬೀತು ಮಾಡಲ್ಪಟ್ಟರೆ ಅಥವಾ ಕ್ರಿಮಿನಲ್ ಕೋರ್ಟಿನಿಂದ ಯಾವ ಹುಕುಂಗಾದರೂ ಗುರಿಮಾಡಲ್ಪಟ್ಟರೆ ;

(ii) ಅವನು, ಗೌರ್ನ್ಮೆಂಟಿನವರ ಅಭಿಪ್ರಾಯದಲ್ಲಿ ಸಾಕಾದಷ್ಟು ಕಾರಣವಿಲ್ಲದೆ, ಲೋಕಲ್ ಬೋರ್ಡಿನ ಮೂರಕ್ಕಿಂತ ಹೆಚ್ಚಾದ ಅನುಕ್ರಮವಾದ ಸಭೆಗಳಲ್ಲಿ ಹಾಜರಾಗಿರುವುದಕ್ಕೆ ಉಪೇಕ್ಷಿಸಿದರೆ ;

(iii) ಅವನು, ಅಧಿಕಾರದಲ್ಲಿ ನಿಲ್ಲುವುದು, ಗೌರ್ನ್ಮೆಂಟಿನವರ ಅಭಿಪ್ರಾಯದಲ್ಲಿ, ಜನರ ಸಮಾಧಾನಕ್ಕಾಗಲಿ ಅಥವಾ ಕ್ರಮಕ್ಕಾಗಲಿ ಅಪಾಯಕರವಾಗಿದ್ದರೆ, ಅಥವಾ ಲೋಕಲ್ ಬೋರ್ಡಿನ ಆಡಳಿತವು ಅಸಡ್ಡೆಗೆ ಬರುವಹಾಗೆ ಆಗಬಹುದಾದರೆ ;

(iv) ಅವನ ಉದ್ಯೋಗದ ಕಾಲವು ಪ್ರಾರಂಭಿಸುವುದಕ್ಕೆ ಮುಂಚೆ ಇದ್ದಿದ್ದು ಆದರೆ ಅವನ ಚುನಾವಣೆಗಾಗಲಿ ನೇಮಕಕ್ಕೆ ಆಗಲಿ ಅವನನ್ನು ಅನರ್ಹನನ್ನಾಗಿ ಮಾಡುತ್ತಾ ಇದ್ದ ಯಾವ ಸಂಗತಿಯಾಗಲಿ ಸಂಭವಿಸಿದಾಗ,

ಗೌರ್ನ್ಮೆಂಟಿನವರು ಇಸ್ತಿಹಾರ್ ಮೂಲಕ ಅವನನ್ನು ನೌಕರಿಯಿಂದ ತೆಗೆದುಹಾಕಬಹುದು.

(2) ಹಾಗೆ ನೌಕರಿಯಿಂದ ತೆಗೆದುಹಾಕಲ್ಪಟ್ಟ ಮನುಷ್ಯನು ಪುನಃ ನೇಮಕಕ್ಕಾಗಲಿ ಚುನಾವಣೆಗಾಗಲಿ ಇಷ್ಟುಕಾಲಪರ್ಯಂತವೂ ಅರ್ಹನಾಗಿರತಕ್ಕದ್ದಲ್ಲವೆಂದು ಸರ್ಕಾರದವರು ಒಂದು ಅವಧಿಯನ್ನು ವಿಧಿಸಬಹುದು.

(20) ಲೋಕಲ್ ಬೋರ್ಡಿನ ವೈಸ್ ಪ್ರೆಸಿಡೆಂಟ್, ಅಧ್ಯಕ್ಷ (Chairman) ಅಥವಾ ಮೆಂಬರು, ಅವನು ಯಾವ ಕಾಲದ ವರೆಗೂ ನೇಮಿಸಲ್ಪಟ್ಟನೋ ಅಥವಾ ಚುನಾಯಿಸಲ್ಪಟ್ಟನೋ ಅಂತಹ ಕಾಲವು ಕಳೆಯುವುದಕ್ಕೆ ಮುಂಚೆ ಅವನು ಸತ್ತರೆ ಅಥವಾ ತನ್ನ ಕೆಲಸವನ್ನು ಖಾಲಿ ಮಾಡಿದರೆ, ಅಥವಾ ನೌಕರಿಯಿಂದ ತೆಗೆದುಹಾಕಲ್ಪಟ್ಟರೆ, ಹಾಗೆ ಸಾಯುವ, ಕೆಲಸವನ್ನು ಖಾಲಿ ಮಾಡುವ, ಅಥವಾ ಕೆಲಸದಿಂದ ತೆಗೆದುಹಾಕಲ್ಪಟ್ಟ ಮನುಷ್ಯನು ನೇಮಿಸಲ್ಪಟ್ಟನೋ ಅಥವಾ ಚುನಾಯಿಸಲ್ಪಟ್ಟನೋ ಅದಕ್ಕೆ ಅನುಸಾರವಾಗಿ, ಸರ್ಕಾರದವರು ಬೇರೆ ವಿಧವಾಗಿ ಹುಕುಂ ಮಾಡಿದ ಹೊರ್ತು, ಒಬ್ಬ ಉತ್ತರಾಧಿಕಾರಿಯು ನೇಮಿಸಲ್ಪಡತಕ್ಕದ್ದು ಅಥವಾ ಚುನಾಯಿಸಲ್ಪಡತಕ್ಕದ್ದು ; ಮತ್ತು ಅವನು ಯಾರಿಗೆ ಉತ್ತರಾಧಿಕಾರಿಯಾಗಿ ಬಂದಿರುತ್ತಾನೋ ಅಂತಹ ವೈಸ್ ಪ್ರೆಸಿಡೆಂಟ್, ಅಧ್ಯಕ್ಷ ಅಥವಾ ಮೆಂಬರ ಅಧಿಕಾರಾವಧಿಯಲ್ಲಿ ಉಳಿದಿರುವ ಕಾಲದ ವರೆಗೂ ಉದ್ಯೋಗವನ್ನು ವಹಿಸತಕ್ಕದ್ದು.

ಆಗಂತುಕವಾದ ಖಾಲಿಗಳನ್ನು ಭರ್ತಿ ಮಾಡುವುದು.

21. ಲೋಕಲ್ ಬೋರ್ಡಿನ ಪ್ರತಿ ವೈಸ್ ಪ್ರೆಸಿಡೆಂಟ್, ಅಧ್ಯಕ್ಷ (Chairman) ಅಥವಾ ಮೆಂಬರಿನ ಚುನಾವಣೆಯು ಅಥವಾ ನೇಮಕವು ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡತಕ್ಕದ್ದು.

ಚುನಾವಣೆಗಳ ಮತ್ತು ನೇಮಕಗಳ ಇಸ್ತಿಹಾರ್‌ನಾಮೆ.

22. ಲೋಕಲ್ ಬೋರ್ಡಿನ ಯಾವ ಮೆಂಬರೂ ಅವನ ಉದ್ಯೋಗಕ್ಕಾಗಿ ಯಾವ ಸಂಬಳಕ್ಕಾದರೂ ವೇತನಕ್ಕಾದರೂ ಹಕ್ಕುಳ್ಳವನಾಗಿರತಕ್ಕದ್ದಲ್ಲ. ಆದರೆ ಡೆಪ್ಯುಟಿ ಕಮಿಷನರವರ ಅನುಮತಿಯ ಮೇರೆಗೆ ಡಿಸ್ಟ್ರಿಕ್ಟ್ ಬೋರ್ಡಿನವರು ಲೋಕಲ್ ಬೋರ್ಡಿನ ಸರ್ಕಾರಿ ನೌಕರನಲ್ಲದ ಮೆಂಬರಿಗೆ ಅವನ ಸಾಧಾರಣವಾದ ವಾಸಸ್ಥಳದಿಂದ 5 ಮೈಲಿಗೆ ಅಧಿಕವಾದ ದೂರಗಳಿಗೆ ಸರ್ಕಾರದ ನೌಕರಿಯಲ್ಲಿ ಮಾತ್ರವೇ ಅವಶ್ಯವಾಗಿಯೂ ಯಥಾರ್ಥವಾಗಿಯೂ ಆದ ಪ್ರಯಾಣದ ಖರ್ಚುಗಳನ್ನು, ರಸ್ತೆಯಲ್ಲಿ ಮಾಡಿದ ಪ್ರಯಾಣಗಳಿಗೆ ಮೈಲಿಗೆ 4 ಆಣೆಗೆ ಮೀರದೆಯೂ ರೈಲ್ ಮೂಲಕವಾಡಿದ ಪ್ರಯಾಣಗಳಿಗೆ ಎರಡು ಸೆಕೆಂಡ್ ಕ್ಲಾಸ್ ಛಾರ್ಜಿಗೆ ಮೀರದೆಯೂ ಕೊಡಬಹುದು. ಸರ್ಕಾರದ ನೌಕರರಾದ ಮೆಂಬರುಗಳಿಗೆ ಕೊಡತಕ್ಕ ಅಲೋಯೆನ್ಸ್ ದರಗಳು ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್ ಪ್ರಕಾರ ಗೊತ್ತು ಮಾಡಲ್ಪಡತಕ್ಕದ್ದು, ಮತ್ತು ಅವರು ಸೇರಿರುವ ನೌಕರಿಯ ಬಾಬುಗಳಿಗೆ ಖರ್ಚು ಹಾಕಲ್ಪಡತಕ್ಕದ್ದು.

ಮೆಂಬರುಗಳಿಗೆ ಪ್ರಯಾಣದ ಭತ್ಯವಲ್ಲದೆ ಸಂಬಳಗಳನ್ನಾಗಲಿ ಅಥವಾ ವೇತನ (ಅಲೋಯೆನ್ಸ್) ಗಳನ್ನಾಗಲಿ ಕೊಡುವುದನ್ನು ನಿಷೇಧಿಸಿದೆ.

IIIನೆಯ ಭಾಗ.

ಲೋಕಲ್ ಬೋರ್ಡುಗಳು ಕೆಲಸ ನಡಿಸುವ ಕ್ರಮ.

ಡಿಸ್ಟ್ರಿಕ್ಟು ಬೋರ್ಡುಗಳ ಸಭೆ ಸೇರುವುದು.

23. (i) ಪ್ರತಿ ಡಿಸ್ಟ್ರಿಕ್ಟು ಬೋರ್ಡು ವರ್ಷದಲ್ಲಿ 4 ಸಲಕ್ಕೆ ಕಡಮೆ ಇಲ್ಲದೆ ಸಭೆ ಸೇರತಕ್ಕದ್ದು; ಯಾವ 2 ಅನುಕ್ರಮವಾದ ಸಭೆಗಳು ಸೇರುವುದಕ್ಕೆ ಮಧ್ಯೆ 4 ತಿಂಗಳುಗಳಿಗೆ ಅಧಿಕವಾದ ಕಾಲವು ಗತಿಸಲು ಅವಕಾಶಕೊಡತಕ್ಕದ್ದಲ್ಲ.

ತಾಲ್ಲೋಕು ಬೋರ್ಡುಗಳ ಸಭೆ ಸೇರುವುದು.

(ii) ಪ್ರತಿ ತಾಲ್ಲೋಕು ಬೋರ್ಡು ವರ್ಷದಲ್ಲಿ 6 ಸಲಕ್ಕೆ ಕಡಮೆ ಇಲ್ಲದೆ ಸಭೆ ಸೇರತಕ್ಕದ್ದು. ಯಾವ 2 ಅನುಕ್ರಮದ ಸಭೆಗಳು ಸೇರುವುದಕ್ಕೆ ಮಧ್ಯೆ 3 ತಿಂಗಳುಗಳಿಗೆ ಅಧಿಕವಾದ ಕಾಲವು ಗತಿಸಲು ಅವಕಾಶ ಕೊಡತಕ್ಕದ್ದಲ್ಲ.

ಪಂಚಾಯಿತಿಗಳ ಸಭೆ ಸೇರುವುದು.

(iii) ಪ್ರತಿ ಪಂಚಾಯಿತಿಯು ತಿಂಗಳಿಗೆ ಒಂದುಸಲಕ್ಕೆ ಕಡಮೆ ಇಲ್ಲದೆ ಸಭೆ ಸೇರತಕ್ಕದ್ದು.

ಸಭೆಯು ಸೇರುವ ತಾರೀಖುಗಳು.

24. (i) ಸಾಧಾರಣವಾಗಿ ಲೋಕಲ್ ಬೋರ್ಡಿನ ಪ್ರತಿ ಸಭೆಯು ಮುಗಿಯುವುದಕ್ಕೆ ಮುಂಚೆ ಮುಂದಿನ ಸಭೆಯು ಸಾಮಾನ್ಯವಾಗಿ ಸೇರುವ ತಾರೀಖು ಗೊತ್ತು ಮಾಡಲ್ಪಡತಕ್ಕದ್ದು.

(ii) ಆದರೆ ಪ್ರೆಸಿಡೆಂಟಾಗಲಿ ಅಥವಾ ಅಧ್ಯಕ್ಷನಾಗಲಿ (Chairman) ಸಭೆ ಸೇರಿಸುವುದಕ್ಕೆ ತಕ್ಕ ಅವಶ್ಯಕತೆ ಉಂಟಾಗಿರುವ ಹಾಗೆ ತನಗೆ ತೋರಿದಾಗ ಸಭೆಯನ್ನು ಸೇರಿಸಬಹುದು, ಮತ್ತು ಆ ಕಾಲದಲ್ಲಿರುವ ಬೋರ್ಡಿನ ಮೆಂಬರುಗಳಲ್ಲಿ 3ರಲ್ಲಿ ಒಂದು ಭಾಗಕ್ಕಿಂತ ಹೆಚ್ಚಾದವರ ಲಿಖಿತಮೂಲಕವಾದ ಕೋರಿಕೆಯ ಮೇಲೆ ಯಾವ ಕಾಲದಲ್ಲಿಯಾದರೂ ಸಭೆಯನ್ನು ಸೇರಿಸತಕ್ಕದ್ದು: ಆದರೆ ಸಭೆಯನ್ನು ಸೇರಿಸತಕ್ಕ ಕಾಲ, ಸ್ಥಳ ಮತ್ತು ಉದ್ದೇಶ ಇವುಗಳನ್ನು ನಮೂದಿಸಿ ಸಭೆ ಸೇರುವ ದಿವಸಕ್ಕೆ ಕಡೇಪಕ್ಷ ಆರು ದಿವಸಗಳಿಗೆ ಮುಂಚಿತವಾಗಿ ಪ್ರತಿ ಮೆಂಬರಿಗೂ ಒಂದು ನೋಟೀಸು ಕೊಡಲ್ಪಟ್ಟಿದ್ದ ಹೊರತು ಅಂತಹ ಯಾವ ಸಭೆಯು ಸೇರಿಸಲ್ಪಡತಕ್ಕದ್ದಲ್ಲ.

ಸಭೆಗಳಿಗೆ ಹೋಗುವುದಕ್ಕೆ ಜನಗಳಿಗೆ ತಡೆ ಇಲ್ಲದೆ ಇರುವುದು.

25. ಸಾಧಾರಣವಾಗಿ ಲೋಕಲ್ ಬೋರ್ಡಿನ ಸಭೆಯಲ್ಲಿ ಜನರ ಪ್ರವೇಶಕ್ಕೆ ತಡೆ ಇಲ್ಲದೆ ಇರತಕ್ಕದ್ದು. ಆದರೆ ಸಭಾಧ್ಯಕ್ಷನು ಯಾವದಾದರು ವಿಶೇಷವಾದ ಸಂದರ್ಭದಲ್ಲಿ ಸಾಧಾರಣವಾಗಿ ಜನಗಳು ಅಥವಾ ಒಬ್ಬ ಪ್ರತ್ಯೇಕವಾದ ಮನುಷ್ಯನು ಸಭೆಯಿಂದ ಹೊರಟು ಹೋಗತಕ್ಕದ್ದೆಂದು ಆಜ್ಞಾಪಿಸಬಹುದು.

ಸಾಕಾದಷ್ಟು ಮೆಂಬರುಗಳು.

26. ಪಂಚಾಯಿತಿಯಲ್ಲಿ ಕಡೇಪಕ್ಷ ಮೂರು ಮೆಂಬರುಗಳು, ತಾಲ್ಲೂಕು ಬೋರ್ಡಿನಲ್ಲಿ ನಾಲು, ಮತ್ತು ಡಿಸ್ಟ್ರಿಕ್ಟು ಬೋರ್ಡಿನಲ್ಲಿ ಏಳು ಮೆಂಬರುಗಳು ಹಾಜರಿದ್ದ ಹೊರತು ಯಾವ ಕೆಲಸವನ್ನೂ ನಡೆಸತಕ್ಕದ್ದಲ್ಲ. ಸಭೆ ಸೇರುವುದಕ್ಕೆ ಗೊತ್ತು ಮಾಡಿದ ಕಾಲದಲ್ಲಿ ಅಥವಾ ಆಮೇಲೆ ಅರ್ಧಘಂಟೆ ಒಳಗಾಗಿ ಸಾಕಾದಷ್ಟು ಮೆಂಬರುಗಳು ಹಾಜರಿಲ್ಲದೆ ಇದ್ದರೆ ಅಧ್ಯಕ್ಷನಾದ ಮೆಂಬರು ಮುಂದೆ ಯಾವದಾದರೂ ಒಂದು ದಿವಸದಲ್ಲಿ ಸಭೆ ಸೇರುವಂತೆ ಮಾಡಬಹುದು.

ಹೆಚ್ಚು ಮೆಂಬರುಗಳಿಂದ ತೀರ್ಮಾನ.

27. ಲೋಕಲ್ ಬೋರ್ಡಿನ ಸಭೆ ಸೇರಿರುವಾಗ ಪ್ರಸ್ತಾಪಿಸಲ್ಪಡುವ ಎಲ್ಲಾ ವಿಷಯಗಳು ಹೆಚ್ಚು ಮೆಂಬರುಗಳಿಂದ (Majority) ತೀರ್ಮಾನಿಸಲ್ಪಡತಕ್ಕದ್ದು; ಸಮವಾದ ಸಮ್ಮತಿಗಳು ಇರುವ ಪ್ರತಿ ಸಂದರ್ಭದಲ್ಲಿಯೂ ಪ್ರೆಸಿಡೆಂಟು ಅಥವಾ ಅಧ್ಯಕ್ಷ ಅಥವಾ ಇತರ ಅಗ್ರಸ್ಥನಾದ ಮೆಂಬರು ಎರಡನೆಯ ಅಥವಾ ನಿಶ್ಚಯಿಸುವ ಸಮ್ಮತಿಯನ್ನು ಉಂಟಾಗಿರತಕ್ಕದ್ದು.

ಸ್ವಪ್ರಯೋಜನಪರನಾದ ಮೆಂಬರು ಸಮ್ಮತಿ ಕೊಡಲಾಗದು.

28. ಲೋಕಲ್ ಬೋರ್ಡಿನ ಯಾವ ಮೆಂಬರು ತನಗೆ ಯಾವ ವಿಧವಾದ ಹಣದ ಪ್ರಯೋಜನವಿರುವ ವಿಷಯವು ಲೋಕಲ್ ಬೋರ್ಡಿನ ಆಲೋಚನೆ ಬಗ್ಯೆ ಬಂದಾಗ (ಲೋಕಲ್ ಬೋರ್ಡಿನ ಅಧಿಕಾರಕ್ಕೆ ಒಳಪಟ್ಟ ಪ್ರದೇಶದಲ್ಲಿರುವ ಜಮೀನುಗಳು ಮತ್ತು ಸ್ವತ್ತುಗಳಿಗೆ ಅದು ಸಾಮಾನ್ಯವಾಗಿ ಅನ್ವಯಿಸನೆ ಇದ್ದರೆ) ಸಮ್ಮತಿಯನ್ನು ಕೊಡತಕ್ಕದ್ದಲ್ಲ.

ಪ್ರಮೇಯಗಳು ಲಿಖಿತವಾಗಿರತಕ್ಕದ್ದು.

29. ಕ್ರಮವಾಗಿ ಮಾಡಲ್ಪಟ್ಟ ಮತ್ತು (ಮತ್ತೊಬ್ಬನಿಂದ) ಅನುಮೋದಿಸಲ್ಪಟ್ಟ ಮತ್ತು ಭಿನ್ನಾಭಿಪ್ರಾಯ ಹುಟ್ಟುವ ವರೆಗೂ ಒತ್ತಿ ಹೇಳಲ್ಪಟ್ಟ ಪ್ರತಿಸೂಚನೆ ಅಥವಾ ತಿದ್ದುಪಾಟು ಸಮ್ಮತಿ ಕೇಳುವುದಕ್ಕೆ ಮುಂಚೆ ಬರೆದಿಡಲ್ಪಡತಕ್ಕದ್ದು.

ತೀರ್ಮಾನಗಳ ಬದಲಾವಣೆ ಅಥವಾ ರದ್ದು.

30. ಲೋಕಲ್ ಬೋರ್ಡಿನ ಯಾವ ತೀರ್ಮಾನವು, ಅದಕ್ಕಾಗಿ ಪ್ರತ್ಯೇಕವಾಗಿ ಸೇರಿಸಲ್ಪಟ್ಟ ಸಭೆಯಲ್ಲಿ ಆಗ ಬೋರ್ಡಿನಲ್ಲಿ ಸೇರಿದ್ದ ಒಟ್ಟು ಮೆಂಬರುಗಳಲ್ಲಿ ಅರ್ಧ ಭಾಗಕ್ಕಿಂತ ಹೆಚ್ಚಾದವರು ಒಪ್ಪಿದ ತೀರ್ಮಾನದಿಂದ ಹೊರತು, ಅಂತಹ ಬೋರ್ಡಿನಿಂದ ಮೂರು ತಿಂಗಳೊಳಗಾಗಿ ಬದಲಾಯಿಸಲ್ಪಡತಕ್ಕದ್ದಲ್ಲ ಅಥವಾ ರದ್ದುಮಾಡಲ್ಪಡತಕ್ಕದ್ದಲ್ಲ.

ಬೋರ್ಡಿನ ನಡವಳಿಕೆಗಳ ಭಾಷೆ.

31. (1) ಲೋಕಲ್ ಬೋರ್ಡಿನ ನಡವಳಿಕೆಗಳು ಅಂತಹ ಬೋರ್ಡು ನಿರ್ಧರಿಸಬಹುದಾದಹಾಗೆ ಇಂಗ್ಲೀಷಿನಲ್ಲಿ ಯಾಗಲಿ ಅಥವಾ ಕನ್ನಡದಲ್ಲಿಯಾಗಲಿ ನಡೆಸಲ್ಪಡತಕ್ಕದ್ದು: ಆದರೆ ನಡವಳಿಕೆಗಳು ಇಂಗ್ಲೀಷಿನಲ್ಲಿ ನಡಿಸಲ್ಪಟ್ಟರೆ, ಇಂಗ್ಲೀಷು ತಿಳಿಯದ ಮೆಂಬರುಗಳ ಪ್ರಯೋಜನಕ್ಕಾಗಿ ಕನ್ನಡದಲ್ಲಿ ಅವುಗಳ ಅರ್ಥವನ್ನು ಹೇಳುವುದಕ್ಕೆ ಏರ್ಪಾಡು ಮಾಡತಕ್ಕದ್ದು.

ಹಾಜರು ಗೈರುಹಾಜರ್ ಇರುವ ಮೆಂಬರುಗಳ ಹೆಸರುಗಳು ನಮೂದು ಮಾಡಲ್ಪಡತಕ್ಕದ್ದು.

(2) ಲೋಕಲ್ ಬೋರ್ಡಿನ ಪ್ರತಿ ಸಂಗದ ನಡವಳಿಕೆಗಳು ಗೈರುಹಾಜರಾಗಿದ್ದ ಮತ್ತು ಹಾಜರಾಗಿದ್ದ ಮೆಂಬರುಗಳ ಹೆಸರುಗಳನ್ನು ನಮೂದಿಸತಕ್ಕದ್ದು ಮತ್ತು ಗೈರುಹಾಜರಾಗಿರುವ ಪ್ರತಿ ಮೆಂಬರ ವಿಷಯದಲ್ಲೂ ಕಾರಣವು ತಿಳಿಯಬಂದಿದೆಯೋ ಎಂಬದನ್ನು ಸೂಚಿಸತಕ್ಕದ್ದು.

ನಡವಳಿಕೆಗಳ ಪ್ರತಿಗಳನ್ನು ಇಂಗ್ಲಿಷ್ ತರ್ಜುಮೆ ಸಹಿತವಾಗಿ ಗೌರ್ನಮೆಂಟಿಗೆ ಕಳುಹಿಸತಕ್ಕದ್ದು.

(3) ಗೌರ್ನಮೆಂಟಿಗೆ ಕಳುಹಿಸಲ್ಪಡುವ ಸಂಗಗಳ ನಡವಳಿಕೆಗಳ ಪ್ರತಿಗಳು, ಇಂಗ್ಲಿಷ ಭಾಷೆಯಲ್ಲಿ ಇಲ್ಲದೆ ಇದ್ದರೆ, ಅವುಗಳೊಡನೆ ಅವುಗಳ ಇಂಗ್ಲಿಷ್ ತರ್ಜುಮೆಯನ್ನು ಡೆಪ್ಯುಟಿ ಕಮಿಷನರ ರುಜುವಿಗೆ ಕಳುಹಿಸತಕ್ಕದ್ದು.

ಲೋಕಲ್ ಬೋರ್ಡುಗಳ ಕಾಗದಪತ್ರಗಳು.

32. ಡಿಸ್ಟ್ರಿಕ್ಟ ಮತ್ತು ತಾಲ್ಲೋಕು ಬೋರ್ಡುಗಳು ಒಬ್ಬರಿಗೊಬ್ಬರು ಮತ್ತು ಮ್ಯುನಿಸಿಪಲ್ ಬೋರ್ಡುಗಳ ಸಂಗಡಲೂ ಶೀದಾ ಕಾಗದ ಪತ್ರಗಳನ್ನು ನಡಿಸಬಹುದು; ಆದರೆ ಪಂಚಾಯತಿಗಳು ಅವರ ತಾಲ್ಲೋಕು ಬೋರ್ಡುಗಳ ಮೂಲಕವಾಗಿ ಕಾಗದ ಪತ್ರಗಳನ್ನು ನಡಿಸತಕ್ಕದ್ದು. ತಾಲ್ಲೋಕು ಬೋರ್ಡುಗಳಿಂದ ಗೌರ್ನಮೆಂಟು ಆಫೀಸರುಗಳಿಗೆ ಹೋಗುವ ಕಾಗದ ಪತ್ರಗಳು ಸಾಧಾರಣವಾಗಿ ಡೆಪ್ಯುಟಿ ಕಮಿಷನರವರ ಮೂಲಕ, ಮತ್ತು ಅವರ ಹೆಸರಿಗೆ ಬರೆದ ಲೇಖನಗಳ ಮೂಲಕ (ಸುಮ್ಮನೆ ಅವರ ಮೂಲಕವಾಗಿ ಕಳುಹಿಸತಕ್ಕದ್ದಲ್ಲ) ಕಳುಹಿಸಲ್ಪಡತಕ್ಕದ್ದು; ಆದರೆ ಡೆಪ್ಯುಟಿ ಕಮಿಷನರು ಲಿಖಿತಮೂಲಕವಾದ ಸಾಮಾನ್ಯವಾದ ಅಥವಾ ವಿಶೇಷವಾದ ಹುಕುಂನಿಂದ ಯಾವ ಇಲಾಖೆಯಲ್ಲಾಗಲಿ ಇರುವ ತಮಗೆ ಕೀಳ್ಪಟ್ಟ ಯಾವ ಅಧಿಕಾರಿಯನ್ನಾದರೂ ಆತನ ಮೇಲ್ವಿಚಾರಣೆಗೆ ಕೊಟ್ಟಿರುವ ಕೆಲಸದ ವಿಷಯವಾಗಿ ಯಾವ ಲೋಕಲ್ ಬೋರ್ಡಿನ ಸಂಗಡಲಾದರೂ ಅಥವಾ ಯಾವ ಕಮಿಟಿಯ ಸಂಗಡಲಾದರೂ ಸಾಕ್ಷಾತ್ತಾಗಿ ಕಾಗದ ಪತ್ರಗಳನ್ನು ನಡಿಸಬಹುದೆಂದಾಗಲಿ ಆಲೋಚನೆ ಮಾಡಬಹುದೆಂದಾಗಲಿ ಹುಕುಂ ಮಾಡಬಹುದು.

ಗೌರ್ನಮೆಂಟು ಅಥವಾ ಡೆಪ್ಯುಟಿ ಕಮಿಷನರು, ಮುಂತಾದವರಿಂದ ಬರುವ ಸೂಚನೆಗಳು ಮುಂದಿನ ಸಂಗದಲ್ಲಿ ಆಲೋಚಿಸಲ್ಪಡತಕ್ಕದ್ದು.

33. ಗೌರ್ನಮೆಂಟು ಅಥವಾ ಡೆಪ್ಯುಟಿ ಕಮಿಷನರು ಅಥವಾ ವಿದ್ಯಾಭ್ಯಾಸ, ವೈದ್ಯ ಅಥವಾ ಮರಾಮತ್ತು ಇಲಾಖೆಯ ಡಿಸ್ಟ್ರಿಕ್ಟಿನ ಮುಖ್ಯ ಅಥವಾ ಹಿರಿ ಅಧಿಕಾರಿ, ಅಥವಾ ಅಂತಹ ಇಲಾಖೆಯ ಮುಖ್ಯಾಧಿಕಾರಿ ಇವರಿಂದ ಲೋಕಲ್ ಬೋರ್ಡಿಗೆ ಯಾವ ವಿಷಯವನ್ನಾದರೂ ಕುರಿತು ಲಿಖಿತಮೂಲಕವಾದ ಸೂಚನೆಯು ಬಂದಾಗ ಅದು ಮುಂದಿನ ಸಂಗದ ಮುಂದೆ ಇಡಲ್ಪಟ್ಟು ಚನ್ನಾಗಿ ಪರ್ಯಾಲೋಚಿಸಲ್ಪಡತಕ್ಕದ್ದು. ಮತ್ತು ಆ ವಿಷಯದಲ್ಲಿ ಒಂದು ಸ್ಪಷ್ಟವಾದ ತೀರ್ಮಾನವು ಬರೆದಿಡಲ್ಪಡತಕ್ಕದ್ದು.

ಪ್ರಸಿಡೆಂಟು ಅಥವಾ ಅಧ್ಯಕ್ಷನು ನಡವಳಿಕೆಗಳನ್ನು ಮತ್ತು ಕಾಗದಪತ್ರಗಳನ್ನು ತನ್ನ ವಶದಲ್ಲಿಟ್ಟುಕೊಂಡಿರತಕ್ಕದ್ದು.

34. ಲೋಕಲ್ ಬೋರ್ಡಿನ ಪ್ರಸಿಡೆಂಟು ಅಥವಾ ಅಧ್ಯಕ್ಷನು ನಡವಳಿಕೆಗಳನ್ನು ಅಥವಾ ಕಾಗದಪತ್ರಗಳನ್ನು ತನ್ನ ವಶದಲ್ಲಿಟ್ಟುಕೊಂಡಿರತಕ್ಕದ್ದು.

ಕಾರ್ಯನಿರ್ವಾಹಕ ಅಧಿಕಾರಗಳು ಪ್ರಸಿಡೆಂಟು ಅಥವಾ ಅಧ್ಯಕ್ಷರಲ್ಲಿ ಇರತಕ್ಕದ್ದು.

35. ಲೋಕಲ್ ಬೋರ್ಡಿನ ತೀರ್ಮಾನಗಳು ಆ ಬೋರ್ಡಿನ ಸಂಪೂರ್ಣವಾದ ಕಾರ್ಯನಿರ್ವಾಹಾಧಿಕಾರವುಳ್ಳ ಮತ್ತು ಲೋಕಲ್ ಬೋರ್ಡ್ ರೆಗ್ಯುಲೇಷನಿನ ಮತ್ತು ಈ ನಿಬಂಧನೆಗಳ ಉದ್ದೇಶಗಳನ್ನು ಸರಿಯಾಗಿ ನೆರವೇರಿಸುವುದಕ್ಕೆ ಸಾಕ್ಷಾತ್ತಾಗಿ ಜವಾಬುದಾರರಾಗಿರುವ ಅದರ ಪ್ರಸಿಡೆಂಟ್ ಅಥವಾ ಅಧ್ಯಕ್ಷರಿಂದ ನಿರ್ವಹಿಸಲ್ಪಡತಕ್ಕದ್ದು.

ಜರೂರು ಕೆಲಸಗಳಲ್ಲಿ ಪ್ರಸಿಡೆಂಟರ ಅಧಿಕಾರಗಳು.

36. ಡಿಸ್ಟ್ರಿಕ್ಟ ಅಥವಾ ತಾಲ್ಲೋಕು ಬೋರ್ಡಿನ ಪ್ರಸಿಡೆಂಟು ಜರೂರಾದ ಸಂದರ್ಭಗಳಲ್ಲಿ ನೆರವೇರಿಸುವುದಕ್ಕಾಗಲಿ ಅಥವಾ ಮಾಡುವುದಕ್ಕಾಗಲಿ ಅಂತಹ ಬೋರ್ಡಿಗೆ ಅಧಿಕಾರವಿರುವ ಮತ್ತು ಜನಗಳ ಪ್ರಯೋಜನಕ್ಕಾಗಲಿ ಅಥವಾ ಕ್ಷೇಮಕ್ಕಾಗಲಿ ಒಡನೆ ನೆರವೇರಿಸುವುದು ಅಥವಾ ಮಾಡುವುದು ಅವಶ್ಯವೆಂದು ಪ್ರಸಿಡೆಂಟು ಅಭಿಪ್ರಾಯ ಪಡುವ ಯಾವ ಕಾಮಗಾರಿಯನ್ನು ನಡೆಸುವುದಕ್ಕಾಗಲಿ ಅಥವಾ ಯಾವ ಕೆಲಸವನ್ನಾದರೂ ಮಾಡುವುದಕ್ಕಾಗಲಿ ಹುಕುಂ ಕೊಡುವುದಕ್ಕೂ ಮತ್ತು ಅಂತಹ ಜರೂರಾದ ಕಾಮಗಾರಿಯನ್ನು ನಡಿಸುವುದಕ್ಕಾಗಲಿ ಮತ್ತು ಕೆಲಸವನ್ನು ಮಾಡುವುದಕ್ಕಾಗಲಿ ಮುಟ್ಟುವ ಖರ್ಚು ಅಂತಹ ಬೋರ್ಡಿನ ವಶದಲ್ಲಿರುವ ಹಣದಿಂದ ಕೊಡಲ್ಪಡತಕ್ಕದ್ದೆಂದು ಹುಕುಂ ಮಾಡುವುದಕ್ಕೂ ನ್ಯಾಯವಾಗಿರತಕ್ಕದ್ದು.

ಕ್ಕೆ ಸಾಕಾದಷ್ಟು ಕಾರಣವನ್ನು ತೋರಿಸದೆ ಇರುವುದರಿಂದ — ಮೇಲ್ಕಂಡ .... ರೂಪಾಯಿಗಳ ವಾರಂಟಿನ ರುಸುಮು .... ರೂಪಾಯಿಗಳು ಸೇರಿ ಒಟ್ಟು .... ರೂಪಾಯಿಗಳು ಇದ್ದಲ್ಲದೆ ಅಂತಹ ಸ್ವತ್ತನ್ನು ತೆಗೆದುಕೊಳ್ಳುವುದಕ್ಕೂ, ಇಡುವುದಕ್ಕೂ ಮತ್ತು ಮಾರುವುದಕ್ಕೂ ತಗಲುವ ಖರ್ಚಿಗೆ ಸಾಕಾದಷ್ಟು ಮೊಬಲಗಿನವರೆಗೂ ಬಾಳತಕ್ಕ .... ನ ಸಾಮಾನುಗಳನ್ನು ಮತ್ತು ಚರ ಸ್ವತ್ತುಗಳನ್ನು ಅಥವಾ, ಸಂದರ್ಭಾನುಸಾರವಾಗಿ (ಮೇಲ್ಕಂಡ ಮನೆಯಲ್ಲಿ ಸಿಕ್ಕುವ ಯಾವ ಸಾಮಾನುಗಳನ್ನು ಮತ್ತು ಚರ ಸ್ವತ್ತುಗಳನ್ನಾದರೂ) ಜಪ್ತಿ ಮಾಡುವುದಕ್ಕೂ ಮತ್ತು ಅಂತಹ ಜಪ್ತಿಯ ತರುವಾಯ ಮುಂದಿನ 15 ದಿನಗಳೊಳಗಾಗಿ ಜಪ್ತಿ ಸ್ವತ್ತನ್ನು ತೆಗೆದುಕೊಳ್ಳುವುದಕ್ಕೂ ಇಡುವುದಕ್ಕೂ ಮುಟ್ಟುವ ಖರ್ಚಿಗೆ ಸಾಕಾದಷ್ಟು ಹೆಚ್ಚು ಮೊಬಲಗು ಸಹ ಮೇಲ್ಕಂಡ ಕಂದಾಯಗಳಿಗೂ ಮತ್ತು ರುಸುಮಿಗೋಸ್ಕರ ಸಲ್ಲಬೇಕಾದ ಒಟ್ಟು ಮೊಬಲಗು ಪಾವತಿ ಮಾಡಲ್ಪಡದೆ ಇದ್ದರೆ ಮೇಲ್ಕಂಡ ಸಾಮಾನುಗಳನ್ನು ಚರ ಸ್ವತ್ತುಗಳನ್ನು ಮಾರುವುದಕ್ಕೂ ; ಮತ್ತು ಮಾರಾಟದ ಹುಟ್ಟುವಳಿಯಿಂದ ಮೇಲ್ಕಂಡ ಕಂದಾಯಗಳು ಮತ್ತು ರುಸುಂ .... ರೂಪಾಯಿಗಳಿಗಾಗಿಯೂ ಮತ್ತು ಜಪ್ತಿ ಸ್ವತ್ತನ್ನು ತೆಗೆದುಕೊಳ್ಳುವುದು, ಇಡುವುದು ಮತ್ತು ಮಾರುವುದು ಇವುಗಳ ಖರ್ಚಿಗಾಗಿಯೂ ಬರಬೇಕಾದ ಒಟ್ಟು ಮೊಬಲಗನ್ನು ಕೊಟ್ಟು ಮತ್ತು ವಜಾ ಮಾಡಿ ಸಿಲ್ಕು ಏನಾದರು ಉಳಿದಿದ್ದರೆ ಮೇಲ್ಕಂಡ ಸಾಮಾನುಗಳು ಮತ್ತು ಚರ ಸ್ವತ್ತುಗಳು ಯಾರ ಸ್ವಾಧೀನದಲ್ಲಿದ್ದವೋ ಆ ಮನುಷ್ಯನಿಗೆ ವಾಪಸು ಕೊಡುವುದಕ್ಕೂ ಇದರಿಂದ ನಿಮಗೆ ಆಜ್ಞಾಪಿಸಿ ಇದೆ. ಮೇಲ್ಕಂಡ .... ನ ಸಾಮಾನು ಮತ್ತು ಚರ ಸ್ವತ್ತುಗಳಲ್ಲಿ ಸಾಕಾದಷ್ಟು ಜಪ್ತಿ ಮಾಡುವುದಕ್ಕೆ ಸಿಕ್ಕದಿದ್ದರೆ ಆ ಅಂಶವನ್ನು ನನಗೆ ಈ ವಾರಂಟಿನೊಡನೆ ನೀವು ತಿಳಿಸತಕ್ಕದ್ದಾಗಿರುತ್ತದೆ.

ತಾರೀಖು

(ಪಂಚಾಯಿತಿಯ ಅಧ್ಯಕ್ಷನ ರುಜು ಅಥವಾ ಮೊಹರು)

ಪಟ್ಟಿ.

ವಿಕ್ರಯ.

56. ಪಂಚಾಯಿತಿಯ ಅಧ್ಯಕ್ಷನು ಅಥವಾ ಮೇಲ್ಕಂಡಂತೆ ಕ್ರಮವಾಗಿ ಅಧಿಕಾರ ಹೊಂದಿದ ಇತರ ಮನುಷ್ಯನು ಜಪ್ತಿ ಮಾಡಲ್ಪಟ್ಟ ಸ್ವತ್ತಿನ ನಿಬಂಧುಪಟ್ಟಿಯನ್ನು ತಯಾರ್ಮಾಡತಕ್ಕದ್ದು, ಮತ್ತು ಜಪ್ತಿಯಾದ 15 ದಿನಗಳೊಳಗಾಗಿ ಬಾಕಿ ಬರಬೇಕಾದ ಮೊಬಲಗು ಕೊಡಲ್ಪಡದೆ ಇದ್ದರೆ ಸ್ವತ್ತು ಮಾರಲ್ಪಡಬಹುದು.

ವಾಸ ಮಾಡುವವನಿಂದ ಕೊಡಲ್ಪಟ್ಟಾಗ ಕಂದಾಯವು ಬಾಡಿಗೆಯಿಂದ ವಜಾ ಮಾಡಲ್ಪಡತಕ್ಕದ್ದು.

57. ಮನೆ ಕಂದಾಯವು ವಾಸಮಾಡುವವನಿಂದ ಕೊಡಲ್ಪಟ್ಟಿದ್ದರೆ, ಅಥವಾ ಆತನ ಸ್ವತ್ತಿನ ಜಪ್ತಿ ಹೊತ್ತು ವಿಕ್ರಯದಿಂದ ಅವನಿಂದ ವಸೂಲ್ಮಾಡಲ್ಪಟ್ಟಿದ್ದರೆ ಹಾಗೆ ಕೊಟ್ಟ ಅಥವಾ ವಸೂಲ್ಮಾಡಲ್ಪಟ್ಟ ಮೊಬಲಗನ್ನು ಮುಂದಿನ ಮತ್ತು ಅತ್ತೀಚರ ಕೊಡತಕ್ಕ ಬಾಡಿಗೆಯಿಂದ ವಜಾ ಮಾಡುವುದು ಅವನಿಗೆ ನ್ಯಾಯವಾಗಿರತಕ್ಕದ್ದು.

ಕಂದಾಯದ ಬುಕ್ಕುಗಳನ್ನು ಪ್ರತಿ ವರ್ಷವೆಲ್ಲಿಯೂ ತಯಾರ್ಮಾಡಬೇಕಾದ ಅವಶ್ಯಕವಿಲ್ಲ.

58. (1) ಪಂಚಾಯಿತಿಯ ಅಧ್ಯಕ್ಷನು ಪ್ರತಿ ವರ್ಷವು ಹೊಸ ಪಟ್ಟಿಗಳನ್ನಾಗಲಿ ಅಥವಾ ಕಂದಾಯದ ಬುಕ್ಕುಗಳನ್ನಾಗಲಿ ತಯಾರ್ಮಾಡಿಸುವುದಕ್ಕೆ ಬದ್ಧನಾಗಿರತಕ್ಕದ್ದಲ್ಲ, ಆದರೆ ಹಿಂದಿನ ವರ್ಷದವುಗಳನ್ನು ತನಗೆ ಅವಶ್ಯವಾಗಿ ತೋರುವ ಬದಲಾವಣೆ ಮತ್ತು ತಿದ್ದುಪಾಟುಗಳೊಡನೆ ಇಟ್ಟುಕೊಳ್ಳಬಹುದು ; ಆದರೆ 4 ವರ್ಷಕ್ಕೆ ಒಂದಾವರ್ತಿಗೆ ಕಡಮೆ ಇಲ್ಲದೆ ಎಲ್ಲಾ ಕಂದಾಯವನ್ನು ಹೊಸದಾಗಿ ಹಾಕಲ್ಪಡತಕ್ಕದ್ದು.

(2) 51ನೆಯ ನಿಬಂಧನೆಯಲ್ಲಿ ವಿಧಿಸಿರುವಂತೆ ಅವುಗಳ ಅಂತಹ ಬದಲಾವಣೆ ಮತ್ತು ತಿದ್ದುಪಾಟುಗಳನ್ನು ಕುರಿತು ಜನರಿಗೆ ನೋಟೀಸು ಕೊಡತಕ್ಕದ್ದು. 49 ಮತ್ತು 51ನೆಯ ನಿಬಂಧನೆಗಳ ನಿಯಮಗಳು ಅಂತಹ ಬುಕ್ಕುಗಳಿಗೂ ಅವುಗಳಲ್ಲಿ ಸಮೂದಿಸಿರುವ ಕಂದಾಯಗಳಿಗೂ ಲಗಾವಾಗತಕ್ಕದ್ದು.

ಅಪ್ಪೀಲುಗಳು.

59. (1) ಪಂಚಾಯಿತಿಯ ಅಧ್ಯಕ್ಷನಿಂದಾಗಲಿ ಅಥವಾ ತಾಲ್ಲೋಕು ಬೋರ್ಡಿನ ಪ್ರೆಸಿಡೆಂಟಿನಿಂದಾಗಲಿ ಹಾಕಲ್ಪಟ್ಟ ಕಂದಾಯದ ಅಥವಾ ತಗಾದೆ ಮಾಡಲ್ಪಟ್ಟ ಕಂದಾಯದ ವಿಷಯದಲ್ಲಿ ಅವರ ತೀರ್ಮಾನದ ಮೇಲೆ ತಾಲ್ಲೋಕು ಬೋರ್ಡಿಗೆ ಅಪ್ಪೀಲು ಮಾಡತಕ್ಕದ್ದು. ತಾಲ್ಲೋಕು ಬೋರ್ಡಿನವರು ಅಂತಹ ಅಪ್ಪೀಲನ್ನು ಮುಂದಿನ ಮೀಟಿಂಗಿನಲ್ಲಿ ವಿಚಾರಣೆ ಮಾಡಿ ಉಚಿತವಾಗಿ ತೋರುವ ಹಾಗೆ ತೀರ್ಮಾನಿಸತಕ್ಕದ್ದು.

(i) ಹಾಗೆ ಫಿರ್ಯಾದು ಮಾಡಲ್ಪಟ್ಟ ಕಂದಾಯಕ್ಕೆ ತಗಾದೆ ಮಾಡಿದ ಮುವ್ವತ್ತು ದಿನಗಳೊಳಗಾಗಿ ಅಪ್ಪೀಲು ಮಾಡಲ್ಪಟ್ಟ ಹೊರ್ತು

(ii) ಪಂಚಾಯಿತಿಯ ಅಧ್ಯಕ್ಷನಿಂದಾಗಲಿ ಅಥವಾ ತಾಲ್ಲೋಕು ಬೋರ್ಡಿನ ಪ್ರೆಸಿಡೆಂಟಿನಿಂದಾಗಲಿ ತಗಾದೆ ಮಾಡಲ್ಪಟ್ಟ ಅಂತಹ ಯಾವ ಕಂದಾಯವು, ತಾಲ್ಲೋಕು ಬೋರ್ಡಿನವರು ಬೇರೆ ವಿಧವಾಗಿ ಹುಕುಂ ಮಾಡಿದಾಗ ಹೊರ್ತು ಅಪ್ಪೀಲು ಮಾಡಲ್ಪಟ್ಟ ದಿನವೇ ಆಗಲಿ ಅಥವಾ ಅದಕ್ಕೆ ಮುಂಚೆ ಆಗಲಿ ಯೂನಿಯನಿನ ಆಫೀಸಿಗೆ ಕೊಡಲ್ಪಟ್ಟು ಅಥವಾ ಅಲ್ಲಿ ಅಮಾನತ್ತಾಗಿ ಇಡಲ್ಪಟ್ಟ ಹೊರ್ತು,

ಅಂತಹ ಯಾವ ಅಪ್ಪೀಲನ್ನು ಅಂಗೀಕರಿಸತಕ್ಕದ್ದಲ್ಲ.

(3) ತಾಲ್ಲೋಕು ಬೋರ್ಡಿನಿಂದ ಯಾವ ಕಂದಾಯದ ಮೊಬಲಗಾದರೂ ಕಡಮೆ ಮಾಡಲ್ಪಟ್ಟರೆ ಅಥವಾ ಮನ್ನಿಸಲ್ಪಟ್ಟರೆ ಪಂಚಾಯಿತಿಯ ಅಧ್ಯಕ್ಷನು ಆ ಮೊಬಲಗನ್ನು ಅದೇ ಪ್ರಕಾರ ವಾಪಸು ಕೊಡತಕ್ಕದ್ದು.

(4) ಅಪ್ಪೀಲು ಮಾಡಲ್ಪಡದೆ ಇರುವಾಗ, ಕಂದಾಯ ಹಾಕೋಣವು ಅಥವಾ ಅದರ ತಗಾದೆಯು, ಮತ್ತು ತಾಲ್ಲೋಕು ಬೋರ್ಡಿನಿಂದ ಮಾಡಲ್ಪಟ್ಟ ಅಪ್ಪೀಲಿನ ತೀರ್ಮಾನವು, ಆಖೈರಾಗಿರತಕ್ಕದ್ದು.

ಬಡತನದ ಸಬಬಿಗೋಸ್ಕರ ವಿನಾಯಿತಿ.

60. ಮನೆ ಇರುವ ಯೂನಿಯನಿನ ಮೇಲೆ ಅಧಿಕಾರವಿರುವ ತಾಲ್ಲೋಕು ಬೋರ್ಡಿನವರು ಕಂದಾಯದ ಒಟ್ಟು ಮೊಬಲಗನ್ನು ಅಥವಾ ಅದರ ಯಾವ ಭಾಗವನ್ನಾದರು ಕೊಡುವುದರಿಂದ ಬಡತನದ ಸಬಬಿಗೋಸ್ಕರ ಅಂತಹ ಕಟ್ಟಡದ ಮಾಲೀಕನನ್ನು ಅಥವಾ ವಾಸವಾಗಿರುವವನನ್ನು ವಿನಾಯಿಸಬಹುದು. ಹಾಗೆಯೇ ಗವರ್ನ್ಮೆಂಟಿನ ಅನುಮತಿಯನ್ನು ಪಡೆದು ಬೋರ್ಡಿನವರು ಯಾವ ತರಗತಿಗಳ ಮನೆಗಳನ್ನಾದರೂ ವಿನಾಯಿಸಬಹುದು.

ಗಾಡಿಗಳು ಬಂಡಿಗಳು ಮತ್ತು ಜಾನವಾರುಗಳ ಮೇಲೆ ಸುಂಕ.

ಸುಂಕದ ವಸೂಲಾತಿಯುಕ್ತ ಕ್ರಮ ವಹಿಸುವುದಕ್ಕೆ ನಿಬಂಧನೆಗಳು.

61. (1) ಇಂಡಿಯಾ ಗವರ್ನ್ಮೆಂಟಿನವರ ಹುಕುಂ ಮೇರೆ ಮೈಸೂರು ಚೀಫ್ ಕಮಿಷನರವರ (* ಕೆಳಗೆ ಅಚ್ಚು ಹಾಕಲ್ಪಟ್ಟಿರುವ) ಸರ್ 1876ನೆಯ ಇಸವಿ ನವಂಬರ್ 4ನೆಯ ಮಿತಿಯ 27ನೆಯ ನಂಬರು ಇಸ್ತಿಹಾರ್ನಾಮೆ ಸಂಗಡ ಪ್ರಕಟಿಸಲ್ಪಟ್ಟಿರುವ "ಮೈಸೂರು ಸೀಮೆಯಲ್ಲಿರುವ ಸರ್ಕಾರಿ ರಸ್ತೆಗಳ ಮೇಲು ಸೇತುಗಳ ಮೇಲು ಸುಂಕದ ವಸೂಲಾತಿಯ ನಿಬಂಧನೆಗಳ, ಇಲ್ಲಿ ಲಗಾವಾಗುವವರೆಗೂ, ನಿಯಮಗಳಿಂದಲೂ ಮತ್ತು

(2) ಕೆಳಗೆ ಬರುವ ಹೆಚ್ಚು ನಿಬಂಧನೆಗಳಿಂದಲೂ

ಡಿಸ್ಟ್ರಿಕ್ಟು ಬೋರ್ಡಿಗೆ ಸೇರಿರುವ ರಸ್ತೆಗಳ ಮತ್ತು ಸೇತುಗಳ ಮೇಲೆ ಹೋಗುವ ಗಾಡಿಗಳು, ಬಂಡಿಗಳು ಮತ್ತು ಜಾನವಾರುಗಳ ಮೇಲೆ ಸುಂಕದ ವಸೂಲಾತಿಯ ಕ್ರಮ ವಹಿಸಲ್ಪಡತಕ್ಕದ್ದು."

---

* ಮೈಸೂರು ಸೀಮೆಯಲ್ಲಿರುವ ಸರ್ಕಾರೀ ರಸ್ತೆಗಳು ಮತ್ತು ಸೇತುಗಳು ಇವುಗಳ ಮೇಲೆ ಸುಂಕ ವಸೂಲ್ ಮಾಡುವ ಬಗ್ಗೆ ಮಾಡಲ್ಪಟ್ಟ ನಿಬಂಧನೆಗಳು.

ಮೈಸೂರು ಸೀಮೆಯಲ್ಲಿರುವ ರಸ್ತೆಗಳು, ಸೇತುಗಳು, ಇವುಗಳ ಮೇಲೆ ಸುಂಕ ವಸೂಲ್ ಮಾಡತಕ್ಕದ್ದನ್ನು ವಿಧಿಸುವುದು ಅವಶ್ಯಕವಾಗಿರುವದರಿಂದ ಸದರೀ ಉದ್ದೇಶದೊಡನೆ ಈ ಕೆಳಗೆ ಬರುವ ನಿಬಂಧನೆಗಳು, ಮಂತ್ರಾಲೋಚಕ ಸಭೆ ಸಮೇತರಾದ, ಘನವನ್ನು ಹೊಂದಿದ ವೈಸರಾಯಿ ಮತ್ತು ಗವರ್ನರ್ ಜನರಲ್ಲವರಿಂದ ಮಂಜೂರ್ಮಾಡಲ್ಪಟ್ಟಿವೆ.

1. ಯಾವ ರಸ್ತೆಗಳ ಮೇಲೆ, ಮತ್ತು ಯಾವ ಸ್ಥಳಗಳಲ್ಲಿ ಸುಂಕಗಳು ತೆಗೆದುಕೊಳ್ಳತಕ್ಕದ್ದೋ ಅವನ್ನು ಮೈಸೂರು ಚೀಫ್ ಕಮಿಷನರವರು ಆಗಿಂದಾಗ್ಯೆ ತಿಳಿಸಬಹುದು, ಮತ್ತು ಯಾವ ರಸ್ತೆಗಳ ಮೇಲೆ ಅಂತಹ ಸುಂಕಗಳು ವಸೂಲಾಗತಕ್ಕದ್ದೆಂದು ತಿಳಿಸಲ್ಪಟ್ಟಿರುತ್ತದೆಯೋ ಆ ರಸ್ತೆಗಳ ಮೇಲೆ ಸುಂಕದ ವಸೂಲಿಯನ್ನು ತೆಗದು ಹಾಕಬಹುದು, ಮತ್ತು ಈ ಪ್ರಕಾರದ ನಿಯಮವನ್ನು ಜಾರೀ ಮಾಡುವ ಬಗ್ಗೆ ಯಾವ ಸುಂಕದ ಕಟ್ಟೆಯನ್ನಾಗಲಿ ಕಟ್ಟಿಸುವುದಕ್ಕೆ ಅಥವಾ ತೆಗದು ಹಾಕುವುದಕ್ಕೆ ಅಪ್ಪಣೆ ಕೊಡಬಹುದು.

2. ಮೈಸೂರು ಗವರ್ನ್ಮೆಂಟಿನ ಖರ್ಚಿನಿಂದ ಕಟ್ಟಲ್ಪಟ್ಟಿರುವ ಅಥವಾ ಇನ್ನುಮೇಲೆ ಕಟ್ಟಲ್ಪಡುವ ಮೈಸೂರು ಸೀಮೆಯೊಳಗಣ ಯಾವದಾದರೂ ರಸ್ತೆಯ ಅಥವಾ ಸೇತುವಿನ ಮೇಲೆ ಇದಕ್ಕೆ ಸೇರಿಸಲ್ಪಟ್ಟಿರುವ ಪಟ್ಟಿಯಲ್ಲಿ ಕಂಡ ದರಕ್ಕೆ ಮೀರದ ದರವುಳ್ಳ ಸುಂಕವನ್ನು ಮೈಸೂರು ಚೀಫ್ ಕಮಿಷನರವರು ವಸೂಲ್ ಮಾಡಿಸಬಹುದು.

3. ಅಂತಹ ಯಾವ ಸುಂಕವನ್ನಾಗಲಿ, ಕೊಡದೇಯಿದ್ದ ಪಕ್ಷಕ್ಕೆ ಅದನ್ನು ವಸೂಲ್ ಮಾಡುವ ಬಗ್ಗೆ ನೌಕರರಾದ ಆಫೀಸರುಗಳು, ಸುಂಕ ತೆರತಕ್ಕ ಯಾವದಾದರೂ ಬಂಡಿಗಳನ್ನು, ಅಥವಾ ಜಾನವರುಗಳನ್ನು, ಅಥವಾ ಅವುಗಳ ಜೋಡೀ ಪೈಕಿ ಸುಂಕದ ಮೊಬಲಗಿಗೆ ತಕ್ಕಷ್ಟನ್ನು ತಡದು ಹಿಡಿಯತಕ್ಕದ್ದು.

4. ಇದರ ಮೇಲಣ ಪ್ರಕರಣದಲ್ಲಿ ಕಂಡಮೇರೆ ಸ್ವತ್ತು ಹಿಡಿಯಲ್ಪಟ್ಟ ಬಳಿಕ 24 ಘಂಟೆಗಳ ವರೆಗೂ ಯಾವ ಸುಂಕವಾಗಲಿ ತೀರಿಸಲ್ಪಡದೆ ಇದ್ದರೆ, ಭಾನುವಾರ ಅಥವಾ ಸೇರಿದಹಾಗೆ ಬರುವ ಯಾವದಾದರೂ ರಜಾದಿನ ವಿನಾ ಇಪ್ಪತ್ತುನಾಲ್ಕು ಘಂಟೆಯ ಕಾಲ ನೋಟಿಸ್ ಕೊಟ್ಟಮೇಲೆ, ಸುಂಕದ ಮೊಬಲಗು ಸಲ್ಲುವಬಗ್ಯೆ, ಹಾಗೆ ಸುಂಕ ವಸೂಲಾಗದೆ ಇರೋಣ, ಸ್ವತ್ತು ತಡೆದೋಣ ವ ಹರಾಜ್ ಮಾಡೋಣ, ಇವುಗಳಿಗಾಗಿ ಹಿಡಿಯುವ ಖರ್ಚಿಗಾಗಿಯೂ, ಸುಂಕದ ವಸೂಲೀ ಕೆಲಸದ ಮೇಲ್ವಿಚಾರಣೆಗೋಸ್ಕರ ನಿಯಮಿಸಲ್ಪಟ್ಟ ಆಫೀಸರನ ಅಪ್ಪಣೆಯಿಂದ ಸದರೀ ಸ್ವತ್ತು ಹರಾಜ್ ಮಾಡಲ್ಪಡತಕ್ಕದ್ದು. ಸದರೀ ಆಫೀಸರ್ ಅಂತಹ ಮೊಬಲಗಿನಲ್ಲಿ ಬಾಕೀ ಏನಾದರೂ ಉಳಿದಿದ್ದರೆ ಅದನ್ನು ಮಾಲೀಕನು ಕೇಳಿದಲ್ಲಿ ವಾಪಸ್ ಕೊಡಿಸಿಬಿಡತಕ್ಕದ್ದು. ಪರಂತು ಹರಾಜ್ ಶುರುವಾಗುವುದಕ್ಕೆ ಮುಂದೆ ಯಾವಾಗಲಾಗಲಿ ಆದ ಒಟ್ಟು ಖರ್ಚು ಮತ್ತು ಸಲ್ಲತಕ್ಕ ಸುಂಕದ ಮಗಣೀ ಮೊಬಲಗು ಸಹಿತ ಕೊಡುವುದಾಗಿ ಖಾಯಿಷ್ ಮಾಡಿದರೆ, ಕೂಡಲೆ ಹಿಡಿದಿರುವ ಸ್ವತ್ತನ್ನು ಬಿಟ್ಟುಬಿಡತಕ್ಕದ್ದು.

387

ಸುಂಕದ ವಸೂಲಾತಿಯು ಇಸ್ತಿಹಾರ್ನಾವೆ.

62. ಸುಂಕದ ವಸೂಲಾತಿಯು ಸರ್ಕಾರದವರಿಂದ ಮಂಜೂರ್ಮಾಡಲ್ಪಟ್ಟಾಗ ಡಿಸ್ಟ್ರಿಕ್ಟ್ ಬೋರ್ಡ್ ಸುಂಕ ಯಾವ ಸ್ಥಳಗಳಲ್ಲಿ ಯಾವ ತಾರೀಖಿನಿಂದ ಮತ್ತು ಯಾವ ದರಗಳಲ್ಲಿ ವಸೂಲ್ಮಾಡಲ್ಪಡತಕ್ಕದ್ದೋ ಅವುಗಳನ್ನು ನಮೂದಿಸಿ ಮೈಸೂರು ಗೆಜೆಟ್ಟಿನಲ್ಲಿ ಒಂದು ಇಸ್ತಿಹಾರ್ನಾಮೆಯು ಪ್ರಕಟಿಸಲ್ಪಡುವಂತೆ ಮಾಡತಕ್ಕದ್ದು.

ಸುಂಕದ ಬಾಗಲುಗಳು ಇಡಲ್ಪಡತಕ್ಕದ್ದು.

63. ಡಿಸ್ಟ್ರಿಕ್ಟ್ ಬೋರ್ಡ್ ತರುವಾಯ ಸುಂಕದ ಕಟ್ಟೆಗಳನ್ನು, ಬಾಗಿಲುಗಳನ್ನು, ಬಾಗಿಲ ಕಾವಲುಗಾರರು ಇರುವ ಮನೆಗಳನ್ನು ಯೋಗ್ಯವಾದ ಸ್ಥಳಗಳಲ್ಲಿ ಕಟ್ಟತಕ್ಕದ್ದು. ಅಂತಹ ಸುಂಕಗಳ ವಸೂಲಾತಿಯನ್ನು ಬೋರ್ಡಿಗೆ ಯುಕ್ತವಾಗಿ ತೋರುವ ಮನುಷ್ಯರ ವಿಚಾರಣೆಯಲ್ಲಿ ಇಡಬಹುದು, ಅಥವಾ ಅದನ್ನು ಗುತ್ತಿಗೆಗೆ ಕೊಡಬಹುದು, ಮತ್ತು ಸುಂಕವನ್ನು ವಸೂಲ್ಮಾಡುವವರ ಆಚರಣೆಯ ಬಗ್ಗೆ ಬಲ ನಿಬಂಧನೆಗಳನ್ನು ಏರ್ಪಡಿಸಬಹುದು.

ಸುಂಕದ ಬಡಂಬಡಿಕೆ ಮತ್ತು ಲೈಸೆನ್ಸ್ ಕೊಡುವುದು.

64. ಡಿಸ್ಟ್ರಿಕ್ಟ್ ಬೋರ್ಡ್ ಬೋರ್ಡಿಗೆ ಸೇರಿದ ಡಿಸ್ಟ್ರಿಕ್ಟಿನಲ್ಲಿರುವ ಸಾಮಾನ್ಯವಾಗಿ ಎಲ್ಲಾ ರಸ್ತೆಗಳಿಗೆ ಮತ್ತು ಸೇತುಗಳಿಗೆ ಸಂಬಂಧಪಟ್ಟ ಅಥವಾ ಪ್ರತ್ಯೇಕವಾದ ಒಂದು ರಸ್ತೆ ಅಥವಾ ಸೇತುವಿಗೆ ಸಂಬಂಧಪಟ್ಟ ಅಂತಹ ಎಲ್ಲಾ ಸುಂಕಗಳಿಗೆ ಬದಲಾಗಿ ಪ್ರತಿ ವರ್ಷದಲ್ಲೂ ಅಥವಾ ವರ್ಷಾರ್ಧದಲ್ಲೂ ಕೊಡತಕ್ಕ ಒಂದು ಮೊಬಲಗಿಗೆ ಯಾವ ಮನುಷ್ಯನ ಸಂಗಡಲಾದರು ಬಡಂಬಡಿಕೆ ಮಾಡಿಕೊಳ್ಳಬಹುದು, ಮತ್ತು ಅವನ ಗಾಡಿಗಳು, ಬಂಡಿಗಳು, ಮತ್ತು ಜಾನುವಾರುಗಳು ಇವುಗಳ ವಿಷಯದಲ್ಲಿ ಅಂತಹ ಮನುಷ್ಯನಿಗೆ ಲೈಸೆನ್ಸುಗಳನ್ನು ಕೊಡಬಹುದು; ಆದರೆ ಯಾವಾಗಲು ಅಂತಹ ಬಡಂಬಡಿಕೆಯಲ್ಲಿ ಬಡಂಬಡಿಕೆ ಮಾಡಿಕೊಳ್ಳುವ ಮನುಷ್ಯನ ವಶದಲ್ಲಿರುವ ಗಾಡಿಗಳು, ಬಂಡಿಗಳು, ಮತ್ತು ಜಾನುವಾರುಗಳು ಸೇರತಕ್ಕದ್ದು.

ಕೆಲವು ಸಂದರ್ಭಗಳಲ್ಲಿ ಯಾವ ಸುಂಕ ವಸೂಲ್ಮಾಡಲ್ಪಡತಕ್ಕದ್ದಲ್ಲ.

65. (ಏ) ಲೋಕಲ್ ಬೋರ್ಡಿಗೆ ಸೇರಿರುವ,

---

5. ಸೈನ್ಯಗಳು, ಸೈನ್ಯದ ಸಾಮಾನುಗಳು, ಅಥವಾ ಆಯುಧಗಳು ಮತ್ತೇ ಪದಾರ್ಥಗಳು ಯಾ ಕೆಲಸದಮೇಲೆ ಹೋಗುವ ಪೋಲೀಸ್ ಆಫೀಸರುಗಳು, ಅಥವಾ ಅವರ ವಶದಲ್ಲಿರುವ ಯಾವನಾದರೂ ಮನುಷ್ಯ ಯಾ ಸ್ವತ್ತು, ಯಾವ ಸ್ವತ್ತುಗಳು ಅದು ಯಾವ ಇಲಾಖೆಗೆ ಸೇರಿದ್ದೋ ಆ ಇಲಾಖೆಯ ಮೊಖ್ತೇಸರರಿಂದ ಒಂದು ಸರಟಿಫಿಕೇಟ್ ಹಾಜರ್ ಮಾಡುವುದರಿಂದ ಪ್ರಾಮಾಣಿಕವಾಗಿ ಗೌವರ್ನಮೆಂಟಿಗೆ ಸೇರಿದ್ದಾಗಿ ಏರ್ಪಟ್ಟ ಯಾವದಾದರೂ ಸ್ವತ್ತು, ಇವುಗಳನ್ನು ಸಾಗಿಸುವ ಬಗ್ಗೆ ಸುಂಕ ವಸೂಲ್ ಮಾಡಲ್ಪಡತಕ್ಕದ್ದಲ್ಲ.

6. ಸುಂಕದ ವಸೂಲಿಯು ಚೀಫ್ ಕಮಿಷನರವರಿಂದ ನೌಕರರ ಮಾಡಲ್ಪಡುವ ಜನಗಳ ವಿಚಾರಣೆಗೆ ಕೊಡಲ್ಪಡಬಹುದು, ಅಥವಾ ಗವರ್ನಮೆಂಟ್ ಆಫಿಸರಗಳಿಂದ ಮಾಡಲ್ಪಡಬಹುದು, ಮತ್ತು ಈ ಬಗ್ಗೆ ನೌಕರರ ಆಗಿರುವ ಎಲ್ಲಾ ಜನಗಳೂ ಜಮೀನ್ ಕಂದಾಯದ ವಸೂಲೀ ವಿಷಯದಲ್ಲಿ ನೇಮಿಸಲ್ಪಟ್ಟಿದ್ದರೆ ಯಾವ ಜವಾಬ್‌ದಾರೀಗೆ ಗುರಿಯಾಗಿರುವರೋ ಅದೇ ಜವಾಬ್‌ದಾರೀಗೆ ಗುರಿಯಾಗತಕ್ಕದ್ದು.

ಎಲ್ಲಾ ಸುಂಕದ ಕಟ್ಟೆಗಳಲ್ಲಿಯಾಗಲಿ ಅಥವಾ ಯಾವವರಲ್ಲಾಗಲಿ ಸುಂಕದ ವಸೂಲಿಯ ಹಕ್ಕುದಾರೀಯನ್ನು ತಕ್ಕಷ್ಟು ಯುಕ್ತ ತೋರುವ ಷರತ್ತಿನ ಹರಾಜ್ ಮೂಲಕ ವಿಕ್ರಯಿಸುವಂತೆ ಸಹ ಚೀಫ್ ಕಮಿಷನರವರು ಹುಕುಂ ಮಾಡಬಹುದು.

7. ಸುಂಕದ ವಸೂಲೀದಾರನಾಗಿ ಕ್ರಮಪ್ರಕಾರ ನೌಕರರಾಗದೆ ಯಾವ ಪಬ್ಲಿಕ ರಸ್ತೆಯಲ್ಲಾಗಲಿ, ಸೇತುವಿನ ಮೇಲಾಗಲೀ ಯಾವ ಸುಂಕವನ್ನಾದರೂ ಹಾಕುವ ಯಾ ಕೊಡಹೇಳಿ ಕೇಳುವ, ಅಥವಾ ಹಾಗೆ ಕ್ರಮಪ್ರಕಾರ ನೇಮಿಸಲ್ಪಟ್ಟ ಪಟ್ಟಿಯಲ್ಲಿ ವಿವರಿಸೋಣವಾದ ದರಗಳಿಗಿಂತ ಜಾಸ್ತಿಯಾಗಿ ಕೊಡಹೇಳಿ ಕೇಳುವ, ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟ ಮೇಲೆ 200 ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಅಥವಾ ಇಂಗ್ಲಿಷ್ ಪಂಚಾಂಗರೀತ್ಯಾ 6 ತಿಂಗಳಿಗೆ ಮೀರದ ಕಾಲದಪರ್ಯಂತ ಸಾಧಾರಣ ಯಾ ಕಠಿಣ ಖೈದಿಗೆ ಗುರಿಯಾಗತಕ್ಕದ್ದು.

8. ಈ ನಿಬಂಧನೆಗಳನ್ನು ಅನುಸರಿಸಿ ಯಾವ ಸುಂಕದ ಬಾಗಿಲಲ್ಲಿ ಅಥವಾ ಸ್ಥಳದಲ್ಲಿ ವಸೂಲಾಗತಕ್ಕದ್ದೆಂದು ನೇಮಿಸಲ್ಪಟ್ಟ ಸುಂಕಗಳ ಒಂದು ಪಟ್ಟಿಯು ಸುಂಕ ಕೊಡುವುದಕ್ಕೆ ನಿರಾಕರಿಸುವ ಬಗ್ಗೆ ವಿಧಿಸುವ ಜುರ್ಮಾನೆಗಳ ಪಟ್ಟಿ ಸಹಿತವಾಗಿ ಇಂಗ್ಲಿಷಿನಲ್ಲಿಯೂ ಸ್ಥಳದ ಭಾಷೆಯೊಳಗೂ ಸ್ಪಷ್ಟವಾಗಿ ಬರೆಯಿಸಿ ಅಂತಹ ಬಾಗಿಲು ಅಥವಾ ಸ್ಥಳದಬಳಿ ಎಲ್ಲರಿಗೂ ಕಾಣಿಸುವ ಸ್ಥಳದಲ್ಲಿ ತಗಲುಹಾಕಲ್ಪಡತಕ್ಕದ್ದು.

ಅಂತಹ ಪಟ್ಟಿಯನ್ನು ಕ್ರಮವಾದ ಮತ್ತು ಚೆನ್ನಾಗಿ ತಿಳಿಯುವಂತಹ ಸ್ಥಿತಿಯಲ್ಲಿ ಇಡುವುದು ಅಂತಹ ಬಾಗಿಲು ಅಥವಾ ಸ್ಥಳದ ವಶದಲ್ಲಿರುವ ಮನುಷ್ಯನ ಕೆಲಸವಾಗಿ ಇರತಕ್ಕದ್ದು.

9. ಈ ಸುಂಕದ ನಿವ್ವಳ ಹುಟ್ಟುವಳಿಯು ಈ ಮೈಸೂರು ಸೀಮೆಯೊಳಗಿರುವ ರಸ್ತೆಗಳು, ಸೇತುಗಳು, ಇವುಗಳ ಕಟ್ಟೋಣ, ರಿಪೇರಿ, ಸಂರಕ್ಷಣೆ, ಇವುಗಳಿಗಾಗಿಯೇ ವಿನಿಯೋಗಿಸಲ್ಪಡತಕ್ಕದ್ದು.

(ಬಿ) ನೌಕರಿಮೇಲಿರುವ ಡಿಸ್ಟ್ರಿಕ್ಟ್ ಫಂಡು ನೌಕರರನ್ನಾಗಲಿ, ಅಥವಾ ಅಂತಹ ನೌಕರರ ವಶದಲ್ಲಿರುವ ಸ್ವತ್ತನ್ನಾಗಲಿ ಸಾಗಿಸುತ್ತಿರುವ,

(ಸಿ) ಲೈಸೆನ್ಸ್ ಕೊಡಲ್ಪಟ್ಟಿರುವ ಕಾಲದವರೆಗೂ, ಡಿಸ್ಟ್ರಿಕ್ಟ್ ಬೋರ್ಡಿನಿಂದ ಲೈಸೆನ್ಸು ಕೊಡಲ್ಪಟ್ಟ, ಅಥವಾ

(ಡಿ) ಟಪಾಲನ್ನು ಸಾಗಿಸುವ ಬಗ್ಗೆ ಟಪಾಲು ಇಲಾಖೆಯಿಂದ ಇಟ್ಟುಕೊಳ್ಳಲ್ಪಟ್ಟಿರುವ,

ಗಾಡಿಗಳು, ಬಂಡಿಗಳು, ಅಥವಾ ಜಾನುವಾರುಗಳು ಹೋಗುವದಕ್ಕಾಗಿ

ಯಾವ ಸುಂಕವು ವಸೂಲ್ಮಾಡಲ್ಪಡತಕ್ಕದ್ದಲ್ಲ.

ಒಂದು ಬಾಗಿಲು ಅಥವಾ ಸೇತುವಿನಲ್ಲಿ ಸುಂಕ ಕೊಡೋಣವು ಮತ್ಯಾವ ಬಾಗಿಲು ಅಥವಾ ಸೇತುವಿನಲ್ಲಿಯಾಗಲಿ ಬಂಡಿ ವಗೈರೆಗಳನ್ನು ಸುಂಕದಿಂದ ವಿನಾಯಿಸತಕ್ಕದ್ದು.

66. ಯಾವ ಬಾಗಲಿನಲ್ಲಿಯಾಗಲಿ ಅಥವಾ ಸೇತುವಿನಲ್ಲಿಯಾಗಲಿ ಗಾಡಿಗಳ, ಬಂಡಿಗಳ, ಅಥವಾ ಜಾನುವಾರುಗಳ ಮೇಲೆ ಸುಂಕ ಕೊಡೋಣವು ನಿರ್ದೇಶಿಸಲ್ಪಟ್ಟಿರುವ ಮತ್ಯಾವ ಬಾಗಲಿನಲ್ಲಿ ಅಥವಾ ಸೇತುವೆಯಲ್ಲಿ ಅಂತಹ ಗಾಡಿಗಳನ್ನು, ಬಂಡಿಗಳನ್ನು, ಅಥವಾ ಜಾನುವಾರುಗಳನ್ನು ಸುಂಕವಿಲ್ಲದೆ ಬಿಡತಕ್ಕದ್ದೆಂದು ಗವರ್ನ್ಮೆಂಟಿನವರ ಮಂಜೂರಾತಿಯನ್ನು ಪಡೆದು ಪ್ರಕಟಿಸಬಹುದು.

ವಿಧಿಸಲ್ಪಟ್ಟ ಸುಂಕಗಳ ಪಟ್ಟಿ ಇಲ್ಲದೆ ಸುಂಕಗಳನ್ನು ವಸೂಲ್ಮಾಡತಕ್ಕದ್ದಲ್ಲ.

67. ಚೀಫ್ ಕಮಿಷನರವರ 1876ನೆಯ ಇಸವಿಯ ನವೆಂಬರ್ 4ನೆಯ ತಾರೀಖಿನ 274ನೆಯ ನಂಬರು ಇಸ್ತಿಹಾರ್ನಾಮೆಯ ಸಂಗಡ ಪ್ರಕಟಿಸಲ್ಪಟ್ಟಿರುವ ನಿಬಂಧನೆಗಳಲ್ಲಿ 8ನೆಯ ನಿಬಂಧನೆಯಲ್ಲಿ ವಿಧಿಸಲ್ಪಟ್ಟಿರುವ ಸುಂಕಗಳ ಪಟ್ಟಿಯು, ಯಾವ ಸುಂಕದ ಕಟ್ಟೆಯಲ್ಲಾಗಲಿ ಅಥವಾ ಬಾಗಲಿನಲ್ಲಿಯಾಗಲಿ ಅಥವಾ ಸ್ಥಲದಲ್ಲಾಗಲಿ ಹೊರಗೆ ತಗಲುಹಾಕಲ್ಪಡದೆ ಇರುವಾಗ ಅಂತಹ ಕಾಲದಲ್ಲಿ ಅಲ್ಲಿ ಯಾವ ಸುಂಕವನ್ನು ವಸೂಲ್ಮಾಡತಕ್ಕದ್ದಲ್ಲ.

ದಿನ ಒಂದಕ್ಕೆ ಒಂದಾವರ್ತಿ ಸುಂಕ ಕೊಟ್ಟರೆ ಬಾಗಿಲಿನಲ್ಲಿ ಬಿಡತಕ್ಕದ್ದು.

68. ಒಂದು ಸೂರ್ಯೋದಯದಿಂದ ಮತ್ತೊಂದು ಸೂರ್ಯೋದಯದವರೆಗೂ ಎಣಿಸಲ್ಪಟ್ಟ ಇಪ್ಪತ್ತುನಾಲ್ಕು ಘಂಟೆಗಳ ಒಂದು ಕಾಲದಲ್ಲಿ ಯಾವ ಗಾಡಿಗೆ, ಬಂಡಿಗೆ, ಅಥವಾ ಜಾನುವಾರಿಗಾದರು ಯಾವದಾದರು ಒಂದು ಸುಂಕದ ಕಟ್ಟೆ, ಬಾಗಿಲು, ಅಥವಾ ಸ್ಥಳದಲ್ಲಿ ಒಂದಾವರ್ತಿಗಿಂತ ಹೆಚ್ಚಾಗಿ ಸುಂಕವು ಕೇಳಲ್ಪಡತಕ್ಕದ್ದಲ್ಲ. ಆದರೆ ಹೊರೆ ಹೊರಿಸಲ್ಪಡದ ಅಥವಾ ಸವಾರಿ ಮಾಡಲ್ಪಡದ ಗಾಡಿಗೆ, ಬಂಡಿಗೆ, ಅಥವಾ ಜಾನುವಾರಿಗಾಗಿ ಯಾವ ಕಟ್ಟೆ, ಬಾಗಲು, ಅಥವಾ ಸ್ಥಳದಲ್ಲಿಯಾದರು, ಸುಂಕವು ಕೊಡಲ್ಪಟ್ಟಿರುವಾಗ ಅಂತಹ ಸುಂಕಕ್ಕೂ, ಹೊರೆ ಹೊರಿಸಲ್ಪಟ್ಟ ಅಥವಾ ಸವಾರಿ ಮಾಡಲ್ಪಟ್ಟ ಅಂತಹ ಗಾಡಿಗೆ, ಬಂಡಿಗೆ ಅಥವಾ ಜಾನುವಾರಿಗಾಗಿ ಕೊಡತಕ್ಕ ಸುಂಕಕ್ಕೂ ಇರುವ ವ್ಯತ್ಯಾಸವು, ಅಂತಹ ಗಾಡಿ, ಬಂಡಿ, ಅಥವಾ ಜಾನುವಾರು ಅಂತಹ ಕಾಲದೊಳಗಾಗಿ ಹೊರೆ ಹೊರಿಸಲ್ಪಟ್ಟು ಅಥವಾ ಸವಾರಿ ಮಾಡಲ್ಪಟ್ಟು ಅಂತಹ ಕಟ್ಟೆ, ಬಾಗಲು, ಅಥವಾ ಸ್ಥಳದ ಮಾರ್ಗವಾಗಿ ತಿರುಗಿ ಹೋದರೆ, ಕೊಡಲ್ಪಡತಕ್ಕದ್ದು.

ರಸೀತಿಗಳು.

69. ಯಾವದಾದರು ಸುಂಕವು ಕೊಡಲ್ಪಟ್ಟಾಗ ಡಿಸ್ಟ್ರಿಕ್ಟ್ ಬೋರ್ಡು ಆಗಾಗ್ಯೆ ವಿಧಿಸಬಹುದಾದ ನಮೂನೆಯ ಸುಂಕವು ಯಾರಿಗೆ ಕೊಡಲ್ಪಟ್ಟಿತೊ ಆ ಮನುಷ್ಯನಿಂದ ಒಂದು ರಶೀತಿಯು ಕೊಡಲ್ಪಡತಕ್ಕದ್ದು.

ಪೋಲೀಸಿನವರು ಸುಂಕ ವಸೂಲ್ಮಾಡುವವರಿಗೆ ಸಹಾಯ ಮಾಡತಕ್ಕದ್ದು.

70. ಈ ನಿಬಂಧನೆಗಳ ಮೇರೆ ನೇಮಿಸಲ್ಪಟ್ಟ ಸುಂಕವನ್ನು ವಸೂಲ್ಮಾಡುವವರ ನ್ಯಾಯವಾದ ಅಧಿಕಾರಕ್ಕೆ ವಿರೋಧಬರುವ ಎಲ್ಲಾ ಸಂದರ್ಭಗಳಲ್ಲಿಯೂ ಎಲ್ಲಾ ಪೋಲೀಸು ಉದ್ಯೋಗಸ್ಥರು, ಅಪೇಕ್ಷಿಸಲ್ಪಟ್ಟಾಗ ಸುಂಕವನ್ನು ವಸೂಲ್ಮಾಡುವವರಿಗೆ ಸಹಾಯ ಮಾಡತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಅವರ ಸಾಧಾರಣವಾದ ಪೋಲೀಸು ಕರ್ತವ್ಯಗಳನ್ನು ನಡಿಸುವುದರಲ್ಲಿ ಅವರು ಯಾವ ಅಧಿಕಾರವನ್ನು ಉಂಟಾಗಿದ್ದಾರೊ ಅದೇ ಅಧಿಕಾರವನ್ನು ಉಂಟಾಗಿರತಕ್ಕದ್ದು.

---

10. ಯಾವ ಸುಂಕದ ಕಟ್ಟೆಯನ್ನಾಗಲಿ, ಸರಿಯಾದ ಸುಂಕವನ್ನು ಕೊಡದೆ ಮೋಸದಿಂದ ಅಥವಾ ಬಲಾತ್ಕಾರದಿಂದ ದಾಟಿಹೋಗುವ ಅಥವಾ, ಸುಂಕದ ವಸೂಲೀದಾರನು ತನ್ನ ಕೆಲಸವನ್ನು ನಿರ್ವಹಿಸುವಲ್ಲಿ ಅವನಿಗೆ ಅಡ್ಡಿಮಾಡುವ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟಮೇಲೆ, ಮೂರು ತಿಂಗಳಿಗೆ ವಿಾರದ ಒಂದು ವಾಯಿದೆ ಪರ್ಯಂತ ಸಾದಾ ಅಥವಾ ಕಠಿಣ ಕೈದಿಗಾಗಲಿ ಅಥವಾ 50 ರೂಪಾಯಿಗಳಿಗೆ ವಿಾರದ ಒಂದು ಜುರ್ಮಾನೆಗಾಗಲಿ, ಗುರಿಯಾಗತಕ್ಕದ್ದು.

11. ಮೈಸೂರು ಶೀಮೆಯೊಳಗೆ ಸುಂಕ ಹಾಕುವದನ್ನು ಕ್ರಮಪಡಿಸುವುದಕ್ಕೆ ತಮಗೆ ಅವಶ್ಯವೆಂದು ತೋರುವ ಹೆಚ್ಚಿಗೆ ಹುಕುಮನ್ನು ಆಗಿಂದಾಗ್ಯೆ ಕೊಡುವುದಕ್ಕೆ ಚೀಫ್ ಕಮಿಷನರವರು ಅಧಿಕಾರ ಕೊಡಲ್ಪಟ್ಟಿರುತ್ತಾರೆ. ಪರಂತು ಅಂತಹ ಹುಕುಂಗಳು ಈ ನಿಬಂಧನೆಗಳಿಗೆ ವಿರೋಧವಾಗಿರತಕ್ಕದ್ದಲ್ಲ.

ಉದ್ಯೋಗಸ್ಥರ, ಮತ್ತು ನಾಕರರ ನೇಮಕ, ಬರತರ್ಫ ವಗೈರೆ.

37. ಲೋಕಲ್ ಬೋರ್ಡಿನ ಪ್ರೆಸಿಡೆಂಟು ಅಥವಾ ಅಧ್ಯಕ್ಷನು ಗವರ್ನಮೆಂಟಿನವರು ವಿಧಿಸಬಹುದಾದ ಅಧಿಕಾರಕ್ಕೆ ಒಳಪಟ್ಟು ಅಂತಹ ಬೋರ್ಡಿಗೆ ಹೊಸದಾಗಿಡುವುದಕ್ಕೆ ಅಧಿಕಾರವಿರುವ ಉದ್ಯೋಗಸ್ಥರನ್ನು ಮತ್ತು ನಾಕರರನ್ನು ನೇಮಿಸಬಹುದು, ಮತ್ತು ಮೇಲ್ಕಂಡ ಅಧಿಕಾರಕ್ಕೆ ಒಳಪಟ್ಟು ಅಂತಹ ಯಾವ ಉದ್ಯೋಗಸ್ಥರಿಗಾಗಲಿ, ಅಥವಾ ನಾಕರರಿಗಾಗಲಿ ಜುಲ್ಮಾನೆ ಹಾಕಬಹುದು ಅಥವಾ ಸಸ್ಪೆಂಡು ಅಥವಾ ಬರತರ್ಫ ಮಾಡಬಹುದು, ಮತ್ತು ಅವರಿಗೆ ಬದಲಾಗಿ ಇತರರನ್ನು ನೇಮಿಸಬಹುದು: ಆದರೆ ಈ ನಿಬಂಧನೆಯಮೇರೆ ಪಂಚಾಯಿತಿಯ ಅಧ್ಯಕ್ಷನಿಂದ ಅಥವಾ ತಾಲ್ಲೋಕು ಅಥವಾ ಡಿಸ್ಟ್ರಿಕ್ಟು ಬೋರ್ಡಿನ ಪ್ರೆಸಿಡೆಂಟನಿಂದ ಕೊಡಲ್ಪಟ್ಟ ಯಾವ ಹುಕುಮಿನಿಂದಲಾದರೂ ನಷ್ಟಹೊಂದಿದ ಯಾವ ಉದ್ಯೋಗಸ್ಥನಾದರು, ಅಥವಾ ನಾಕರನಾದರು ಅಂತಹ ಹುಕುಮಿನ ತಾರೀಖಿನಿಂದ ಒಂದು ತಿಂಗಳೊಳಗಾಗಿ ತಾಲ್ಲೋಕು ಬೋರ್ಡಿನ ಪ್ರೆಸಿಡೆಂಟಿಗೆ ಅಥವಾ ಡಿಸ್ಟ್ರಿಕ್ಟು ಬೋರ್ಡಿನ ಪ್ರೆಸಿಡೆಂಟಿಗೆ ಅಥವಾ ಗವರ್ನಮೆಂಟಿಗೆ ಸಂದರ್ಭಾನುಸಾರವಾಗಿ ಅಪೀಲ್ಮಾಡಿಕೊಳ್ಳಬಹುದು, ಮತ್ತು ಅಂತಹ ಅಪೀಲಿನ ಮೇಲೆ ಕೊಡುವ ಹುಕುಂ ಆಖೈರಾಗಿರತಕ್ಕದ್ದು.

ಪ್ರೆಸಿಡೆಂಟು ವೈಸ್ ಪ್ರೆಸಿಡೆಂಟಿಗೆ ಅಧಿಕಾರಗಳನ್ನು ಕೊಡುವುದು.

38. (1) ಡಿಸ್ಟ್ರಿಕ್ಟು ಅಥವಾ ತಾಲ್ಲೋಕು ಬೋರ್ಡಿನ ಪ್ರೆಸಿಡೆಂಟು ಈ ನಿಬಂಧನೆಗಳ ಪ್ರಕಾರ ತನಗೆ ಕೊಟ್ಟಿರುವ ಅಧಿಕಾರಗಳನ್ನು ನಡಿಸುವುದಕ್ಕಾಗಲಿ ಪ್ರೆಸಿಡೆಂಟಾಗಿ ತಾನು ನಡಿಸುವ ಯಾವ ಕೆಲಸಗಳನ್ನಾದರು ಮಾಡುವುದಕ್ಕಾಗಲಿ ಲಿಖಿತಮೂಲಕವಾದ ಹುಕುಮಿನಿಂದ ವೈಸ ಪ್ರೆಸಿಡೆಂಟಿಗೆ ಆಗಾಗ್ಯೆ ಅಧಿಕಾರ ಕೊಡಬಹುದು ; ಮತ್ತು ಅದೇ ಪ್ರಕಾರವಾಗಿ ಅಂತಹ ಹುಕುಮನ್ನು ಯಾವಾಗಲಾದರು ಬದಲಾಯಿಸಬಹುದು ಅಥವಾ ರದ್ದು ಮಾಡಬಹುದು ; ಆದರೆ ಹಾಗೆ ಅಧಿಕಾರಗಳನ್ನಾಗಲಿ ಅಥವಾ ಕೆಲಸಗಳನ್ನಾಗಲಿ ಕೊಡುವುದು ಈ ನಿಬಂಧನೆಗಳ ಮೇರೆ ಪ್ರೆಸಿಡೆಂಟರಮೇಲೆ ಹಾಕಿರುವ ಜವಾಬ್ದಾರಿಯನ್ನು ತಪ್ಪಿಸತಕ್ಕದ್ದಲ್ಲ.

ಅಧ್ಯಕ್ಷನು ಪಂಚಾಯಿತರಲ್ಲೊಬ್ಬನಿಗೆ ಅಧಿಕಾರಗಳನ್ನು ಕೊಡುವುದು.

(2) ಪಂಚಾಯಿತಿಯ ಅಧ್ಯಕ್ಷನು ಮುಂಚಿತವಾಗಿ ಪಡೆದ ಪಂಚಾಯಿತಿಯ ಸಮ್ಮತಿಯಿಂದ ಈ ನಿಬಂಧನೆಗಳ ಪ್ರಕಾರ ಅಂತಹ ಅಧ್ಯಕ್ಷನಿಗೆ ಕೊಟ್ಟಿರುವ ಅಧಿಕಾರಗಳಲ್ಲಿ ಯಾವದನ್ನಾದರೂ, ಸರ್ಕಾರಿ ವರ್ಷದಲ್ಲಿ ನಾಲ್ಕು ತಿಂಗಳುಗಳಿಗೆ ಮೀರದಷ್ಟು ಕಾಲ ನಡಿಸುವುದಕ್ಕೆ, ಲಿಖಿತ ಮೂಲಕವಾದ ಹುಕುಂನಿಂದ ಪಂಚಾಯಿತಿಯ ಯಾವ ಮೆಂಬರಿಗಾದರು ತನ್ನ ಸ್ವಂತ ಜವಾಬ್ದಾರಿ ಮೇಲೆ ಅಧಿಕಾರಕೊಡಬಹುದು ; ಮತ್ತು ಅಂತಹ ಅಧಿಕಾರವನ್ನು ರದ್ದುಮಾಡಬಹುದು, ಅಥವಾ ಬದಲಾಯಿಸಬಹುದು.

ಕಮಿಟಿ (ಸಂಘ) ಗಳನ್ನು ನೇಮಿಸುವುದಕ್ಕೆ ಲೋಕಲ್ ಬೋರ್ಡುಗಳಿಗೆ ಅಧಿಕಾರ.

39. ಸಾಮಾನ್ಯವಾಗಿ ಕೆಲಸ ನಡಿಯುವ ಉದ್ದೇಶಗಳಿಗಾಗಿ, ಯಾವದಾದರು ಕೆಲಸವನ್ನು ಅಥವಾ ಕೆಲಸಗಳನ್ನು, ನಡಿಸುವುದಕ್ಕಾದರೂ, ಅಥವಾ ಯಾವ ವಿಷಯವನ್ನಾದರೂ ಹಂಗಾಮಿಯಾಗಿ ತೀರ್ಮಾನಿಸುವುದಕ್ಕಾದರೂ, ಅಥವಾ ಅದನ್ನು ಕುರಿತು ರಿಪೋರ್ಟು ಮಾಡುವುದಕ್ಕಾದರೂ, ಲೋಕಲ್ ಬೋರ್ಡಿನ ಮೆಂಬರುಗಳಲ್ಲಿ ಒಬ್ಬ ಅಥವಾ ಅಧಿಕವಾದವರನ್ನು ಒಂದು ಕಮಿಟಿಯಾಗಿ ನೇಮಿಸುವುದಕ್ಕೆ ಲೋಕಲ್ ಬೋರ್ಡು ಅಧಿಕಾರವುಳ್ಳದ್ದಾಗಿರತಕ್ಕದ್ದು, ಮತ್ತು ಲೋಕಲ್ ಬೋರ್ಡು ಅವಶ್ಯವಾಗಿರಬಹುದಾದ ಅದರ ಅಧಿಕಾರಗಳಲ್ಲಿ ಯಾವವನ್ನಾದರೂ ಅಂತಹ ಕಮಿಟಿಗೆ ಕೊಡಬಹುದು. ಕಮಿಟಿಯ ನಡವಳಿಕೆಗಳು ಲೋಕಲ್ ಬೋರ್ಡಿನ ಪುನರಾಲೋಚನೆಗೂ ದೃಢೀಕರಣಕ್ಕೂ ಒಳಪಟ್ಟಿರತಕ್ಕದ್ದು.

ಡಿಸ್ಟ್ರಿಕ್ಟು ಬೋರ್ಡು ಅದರ ಅಧಿಕಾರಕ್ಕೆ ಒಳಪಟ್ಟ ಯಾವ ಆಲಯದ ವಿಚಾರಣೆಗಾದರೂ ಸಭೆಗಳನ್ನು ನೇಮಿಸಬಹುದು.

40. ಡಿಸ್ಟ್ರಿಕ್ಟು ಬೋರ್ಡು ಅದರ ಅಧಿಕಾರದಲ್ಲಿ ಮತ್ತು ಆಡಳಿತದಲ್ಲಿರುವ ಯಾವ ಆಲಯದ ವಿಚಾರಣೆಗಾದರು, ಬೋರ್ಡಿನ ಮೆಂಬರುಗಳಾದ ಅಥವಾ ಇಲ್ಲದ ಯಾವ ಜನಗಳಾದರು ಸೇರಿರುವ ಸಭೆಗಳನ್ನು ಆಗಾಗ್ಯೆ ನೇಮಿಸಬಹುದು, ಮತ್ತು ಹಾಗೆ ನೇಮಿಸಲ್ಪಟ್ಟ ಸಭೆಯು ಡಿಸ್ಟ್ರಿಕ್ಟು ಬೋರ್ಡಿನ ಹುಕುಂಗಳಿಗೆ ಒಳಪಟ್ಟು ಆ ಆಲಯದ ಮೇಲ್ವಿಚಾರಣೆ ಮಾಡತಕ್ಕದ್ದು. ಹಾಗೆ ನೇಮಿಸಲ್ಪಟ್ಟ ಸಭೆಗಳು ಡಿಸ್ಟ್ರಿಕ್ಟು ಬೋರ್ಡಿಗೆ ಇಷ್ಟವಿರುವವರೆಗೂ ಆ ಉದ್ಯೋಗವನ್ನು ವಹಿಸತಕ್ಕದ್ದು.

ಕಂಟ್ರಾಕ್ಟುಗಳು ಸಾಧಾರಣವಾಗಿ ಬರಹಮೂಲಕವಾಗಿಯೂ ಮತ್ತು ಸ್ಟಾಂಪು ಮತ್ತು ರಿಜಿಸ್ಟ್ರೇಷನ್ ಕಾನೂನುಗಳಿಗೆ ಅನುಸಾರವಾಗಿಯೂ ಇರತಕ್ಕದ್ದು.

41. ಡಿಸ್ಟ್ರಿಕ್ಟು ಬೋರ್ಡಿನಿಂದ, ಅಥವಾ ಡಿಸ್ಟ್ರಿಕ್ಟು ಬೋರ್ಡಿನ ಏಜಂಟಾಗಿ ತಾಲ್ಲೋಕು ಬೋರ್ಡಿನಿಂದ, ಅಥವಾ ತಾಲ್ಲೋಕು, ಬೋರ್ಡಿನ ಏಜಂಟಾಗಿ ಪಂಚಾಯಿತಿಯಿಂದ ಮಾಡಲ್ಪಟ್ಟ ಕಂಟ್ರಾಕ್ಟುಗಳು ಸಾಧಾರಣವಾಗಿ ಬರಹಮೂಲಕವಾಗಿರತಕ್ಕದ್ದು. ಮತ್ತು ಸ್ಟಾಂಪು ಮತ್ತು ರಿಜಿಸ್ಟ್ರೇಷನಿಗೆ ಸಂಬಂಧಪಟ್ಟ ಕಾನೂನುಗಳಿಗೆ ಅನುಸಾರವಾಗಿರತಕ್ಕದ್ದು.

ಬರಹಮೂಲಕವಾದ ಕಂಟ್ರಾಕ್ಟುಗಳು ಪ್ರೆಸಿಡೆಂಟು ಅಥವಾ ಅಧ್ಯಕ್ಷನಿಂದ ರುಜು ಮಾಡಲ್ಪಡತಕ್ಕದ್ದು.

42. ಬರಹಮೂಲಕವಾದ ಕಂಟ್ರಾಕ್ಟುಗಳು ಲೋಕಲ್‌ಬೋರ್ಡಿನ ಪರವಾಗಿ ಪ್ರೆಸಿಡೆಂಟ್ ಅಥವಾ ಅಧ್ಯಕ್ಷನಿಂದ ರುಜು ಮಾಡಲ್ಪಡತಕ್ಕದ್ದು.

IVನೆಯ ಭಾಗ.

ಡಿಸ್ಟ್ರಿಕ್ಟು ಫಂಡಿನ ಸ್ವತ್ತು ಮತ್ತು ವರಮಾನ.

ಡಿಸ್ಟ್ರಿಕ್ಟು ಬೋರ್ಡಿಗೆ ಸೇರಿದ ಸ್ವತ್ತು.

ಕೆಲವು ಸಾಧನಗಳು ಡಿಸ್ಟ್ರಿಕ್ಟು ಬೋರ್ಡಿಗೆ ಸೇರಿರತಕ್ಕದ್ದು.

43. ಡಿಸ್ಟ್ರಿಕ್ಟು ಬೋರ್ಡಿಗೆ ಸೇರಿರುವ ಎಲ್ಲಾ ರಸ್ತೆಗಳ ಕಲ್ಲಾಸಿಗೆಗಳು, ಕಲ್ಲುಗಳು, ಮತ್ತು ಇತರ ಸಾಮಾನುಗಳು, ಮತ್ತು ಎಲ್ಲಾ ಕಟ್ಟಡಗಳು, ಸಾಮಾನುಗಳು, ಮುಟ್ಟುಗಳು ಮತ್ತು ಅಂತಹ ರಸ್ತೆಗಳಿಗೆ ಸಿದ್ಧಪಡಿಸಿರುವ ಇತರ ವಸ್ತುಗಳು;

ಡಿಸ್ಟ್ರಿಕ್ಟು ಬೋರ್ಡಿನ ಖರ್ಚಿನಿಂದಾಗಲಿ ಅಥವಾ ಅನ್ಯಥಾ ಆಗಲಿ ಮಾಡಲ್ಪಟ್ಟ ಎಲ್ಲಾ ಗ್ರಾಮಸಾರದ ಬಚ್ಚಲುಗಳು, ಚರಂಡಿಗಳು, ಚರಂಡಿಗೆ ಸಂಬಂಧಪಟ್ಟ ಕೆಲಸಗಳು ಮತ್ತು ಅಂತಹ ರಸ್ತೆಗಳ ಪಕ್ಕದಲ್ಲಿ ಅಥವಾ ಕೆಳಗೆ ಇರುವ ಸೇಜ ವಗೈರೆಗಳು, ಮತ್ತು ಅವುಗಳಿಗೆ ಸಂಬಂಧಪಟ್ಟ ಎಲ್ಲಾ ಕೆಲಸಗಳು, ಸಾಮಾನುಗಳು ಮತ್ತು ವಸ್ತುಗಳು;

ಮತ್ತು ಡಿಸ್ಟ್ರಿಕ್ಟು ಫಂಡಿನ ಖರ್ಚಿನಿಂದ ಜಮಾಯಿಸಲ್ಪಟ್ಟ ಎಲ್ಲಾ ಕಸ, ಗ್ರಾಮಸಾರ, ಕೊಳೆ, ಮತ್ತು ಇತರ ಪದಾರ್ಥಗಳು;

ಡಿಸ್ಟ್ರಿಕ್ಟು ಬೋರ್ಡಿಗೆ ಸೇರಿರತಕ್ಕದ್ದು.

ಆದರೆ ಗೌರ್ನಮೆಂಟಿನವರು ಮೇಲ್ಕಂಡ ವಿಷಯಗಳಲ್ಲಿ ಯಾವದನ್ನಾದರು ಡಿಸ್ಟ್ರಿಕ್ಟು ಬೋರ್ಡಿನ ಅಧಿಕಾರದಿಂದ ಆಗಾಗ್ಗೆ ವಿನಾಯಿಸಬಹುದು. ಮತ್ತು ಅಂತಹ ವಿನಾಯಿಸುವ ಹಕ್ಕನ್ನು ಸಂಪೂರ್ಣವಾಗಿ ಆಗಲಿ ಅಥವಾ ಭಾಗಶಃ ಆಗಲಿ ರದ್ದು ಮಾಡಬಹುದು.

ಲೋಕಲ್ ಸೆಸ್ಸು.

ಲೋಕಲ್ ಸೆಸ್ಸಿನಲ್ಲಿ ಡಿಸ್ಟ್ರಿಕ್ಟು ಫಂಡಿಗೆ ಜಮೆ ಕಟ್ಟಬೇಕಾದ ಭಾಗ.

44. ಪ್ರತಿ ಡಿಸ್ಟ್ರಿಕ್ಟಿನಲ್ಲಿಯು ವಸೂಲಾಗುವ (ಲ್ಯಾಂಡ್ ರೆವಿನ್ಯೂ—ಜಮೀನು ಕಂದಾಯ ಚಿಲ್ಲರೆ ಕೇರಿ) ಜಮೀನು ಕಂದಾಯದ ಎಲ್ಲಾ ಬಾಬುಗಳ ಮೇಲಿನ ಒಂದು ಆಣೆ ಲೋಕಲ್ ಸೆಸ್ಸಿನಲ್ಲಿ ಶೇಕಡ 76ರಷ್ಟು ಆ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟು ಫಂಡಿಗೆ ಜಮೆ ಕಟ್ಟತಕ್ಕದ್ದು: ಮತ್ತು ಶಿವಮೊಗ್ಗ, ಕಡೂರು ಡಿಸ್ಟ್ರಿಕ್ಟುಗಳಲ್ಲಿ ಸಾಯರ್ ಮೇಲಿನ ಒಂದಾಣೆ ಲೋಕಲ್ ಸೆಸ್ಸಿನ ಶೇಕಡ 76ರಷ್ಟು ಕೂಡ ಡಿಸ್ಟ್ರಿಕ್ಟು ಫಂಡಿಗೆ ಹಾಗೆಯೇ ಕೊಟ್ಟುಬಿಡತಕ್ಕದ್ದು.

ಮನೆಕಂದಾಯ.

ಮನೆಕಂದಾಯ.

45. (1) ಲೋಕಲ್‌ಬೋರ್ಡ್ಸ್ ರೆಗ್ಯುಲೇಷನ್ಸಿನ 20ನೆಯ ಪ್ರಕರಣದಲ್ಲಿ ವಿಧಿಸಿರುವ ತಾರೀಖಿನಿಂದ ಮತ್ತು ದರಗಳಿಗೆ ವಿಹಾರದ ಯಾವ ಯೂನಿಯನ್ನಿನಲ್ಲಾದರು ಇರುವ (ಅಂಗಡಿಗಳು ಮತ್ತು ಗಡಂಗುಗಳು ಕೇರಿ) ಮನೆಗಳ ಮೇಲೆ ಕಂದಾಯದ ವಸೂಲಾತಿಯನ್ನು ಗೌರ್ನಮೆಂಟಿನವರು ಯಾವಕಾಲದಲ್ಲಿಯಾದರು ಮಂಜೂರು ಮಾಡಬಹುದು.

ಮೊಹತರ್ಫಾ ವಸೂಲಾತಿಯನ್ನು ನಿಲ್ಲಿಸುವುದು.

(2) ಅಂತಹ ಕಂದಾಯವು ವಸೂಲಿಯಾದ ತಾರೀಖಿನಿಂದ ಆ ತರಹ ಸ್ವತ್ತಿನ ಮೇಲೆ ಇದುವರೆಗೂ ವಸೂಲಾಗುತ್ತಿದ್ದ ಮೊಹತರ್ಫಾ ಕಂದಾಯವನ್ನು ವಸೂಲ್ಮಾಡುವುದನ್ನು ಆ ಯೂನಿಯನ್ ಒಳಗೆ ನಿಲ್ಲಿಸತಕ್ಕದ್ದು.

ಪ್ರಕಟನೆ ಮಾಡತಕ್ಕದ್ದು.

46. ಗೌರ್ನಮೆಂಟಿನವರ ಮಂಜೂರಾತಿಯನ್ನು ಪಡೆದ ಬಂದಾಗ, ಮನೆಗಳ ಮೇಲಿನ ಕಂದಾಯವು ಯಾವ ದರಗಳಲ್ಲಿ, ಮತ್ತು ಯಾವ ತಾರೀಖಿನಿಂದ ವಸೂಲ್ಮಾಡಲ್ಪಡತಕ್ಕದ್ದೋ ಅದನ್ನು ನಿರೂಪಿಸಿ, ದಂಡೂರ ಮೂಲಕವಾಗಿ ಯೂನಿಯನ್ ಒಳಗೆ ಪ್ರಕಟನೆ ಮಾಡಲ್ಪಡುವಂತೆ ಡಿಸ್ಟ್ರಿಕ್ಟು ಬೋರ್ಡ್ ಮಾಡತಕ್ಕದ್ದು.

ಶ್ಯಾನುಭೋಗನು ಮನೆ ಮಾಲೀಕರು ಮತ್ತು ವಾಸಮಾಡುವವರ ಹೆಸರುಗಳನ್ನು ನಮೂದಿಸಿ ಮನೆಗಳ ಪಟ್ಟಿಗಳನ್ನು ಕೊಡತಕ್ಕದ್ದು.

47. (1) ಯೂನಿಯನೊಳಗೆ ಇರುವ ಪ್ರತಿ ಗ್ರಾಮದ ಶ್ಯಾನುಭೋಗನು, ಅಂತಹ ಯೂನಿಯನ್ನಿನ ಪಂಚಾಯತಿಯ ಅಧ್ಯಕ್ಷನು ಕೇಳುವಾಗ, ತಾನು ಶ್ಯಾನುಭೋಗನಾಗಿರುವ ಗ್ರಾಮ ಅಥವಾ ಗ್ರಾಮಗಳಲ್ಲಿರುವ ಮನೆಗಳ ಮತ್ತು ಮನೆಗಳ ಮಾಲೀಕರ ಮತ್ತು ವಾಸ ಮಾಡುವವರ ಹೆಸರುಗಳ ಪಟ್ಟಿಗಳನ್ನು ತಯಾರ್ಮಾಡಿಕೊಡತಕ್ಕದ್ದು.

ಕಂದಾಯದ ಬುಕ್ಕುಗಳು.

(2) ಅಂತಹ ಪಟ್ಟಿಗಳು ಬಂದಾಗ, ಪಂಚಾಯತಿಯ ಅಧ್ಯಕ್ಷನು ಪ್ರತಿ ಮನೆಯ ಮಾಲೀಕನ ಮತ್ತು ವಾಸಮಾಡುವವನ ಹೆಸರುಗಳನ್ನು, ಅಂತಹ ಮನೆಗೆ ಹಾಕಿರುವ ಕಂದಾಯದ ತರಗತಿಯನ್ನು, ಕೊಡತಕ್ಕ ಕಂದಾಯದ ಬಟ್ಟನ್ನು, ಮತ್ತು ಕಂದಾಯ ಕೊಡತಕ್ಕ ತಾರೀಖನ್ನು ಬೇರೆಬೇರೆ ಪುಸ್ತಕಗಳಲ್ಲಿ ತೋರಿಸುವ ಕಂದಾಯದ ಬುಕ್ಕುಗಳನ್ನು ತಯಾರ್ಮಾಡಿಸತಕ್ಕದ್ದು.

ಕಂದಾಯದಿಂದ ವಿನಾಯಿಸಲ್ಪಟ್ಟ ಕೆಲವು ಕಟ್ಟಡಗಳು.

48. ಧರ್ಮಾರ್ಥ ಕೆಲಸಗಳಿಗೆ ಮಾತ್ರವಾಗಿ ಉಪಯೋಗಿಸಲ್ಪಡುವ, ಅಥವಾ ಜನಗಳ ದೇವರ ಪೂಜೆಗೋಸ್ಕರವಾಗಿ ಪ್ರತ್ಯೇಕವಾಗಿಡಲ್ಪಟ್ಟ ಮತ್ತು ನಿಜವಾಗಿ ಹಾಗೆ ಉಪಯೋಗಿಸಲ್ಪಟ್ಟ ಅಥವಾ ಬೇರೆ ಕೆಲಸಕ್ಕೆ ಉಪಯೋಗಿಸಲ್ಪಡದೆ ಇರುವ ಕಟ್ಟಡಗಳು, ಮತ್ತು ಸತ್ರಗಳು, ಮುಸಾಫರಖಾನೆಗಳು, ಆಸ್ಪತ್ರೆಗಳು, ಡಿಸ್ಪೆನ್ಸರಿಗಳು, ಅಥವಾ ಪಾಠಶಾಲೆಗಳಾಗಿ ಮಾತ್ರವೆ ಉಪಯೋಗಿಸಲ್ಪಟ್ಟಿರುವ ಕಟ್ಟಡಗಳು, ಮತ್ತು ಗಾರ್ನಮೆಂಟಿನ ಅಥವಾ ಡಿಸ್ಟ್ರಿಕ್ಟ್ ಬೋರ್ಡಿನ ಸ್ವತ್ತುಗಳಾಗಿರುವ ಅಥವಾ ಅವರಿಗೆ ಸೇರಿರುವ ಮತ್ತು ವಾಸಮಾಡುವುದಕ್ಕೆ ಉಪಯೋಗಿಸಲ್ಪಡದೆ ಇರುವ ಕಟ್ಟಡಗಳು, ಕಂದಾಯಕ್ಕೆ ಗುರಿಯಾಗತಕ್ಕದ್ದಲ್ಲ.

ಕಂದಾಯದ ಬುಕ್ಕುಗಳನ್ನು ನೋಡುವುದು.

49. ಈ ನಿಬಂಧನೆಗಳ ಮೇರೆ ಕಂದಾಯ ಬೀಳತಕ್ಕ ಯಾವ ಮನೆಯ ಮಾಲೀಕನು ಅಥವಾ ವಾಸಮಾಡುವವನು ಎಂದು ಹೇಳುವ ಪ್ರತಿ ಮನುಷ್ಯನು, ಅಥವಾ ಅಂತಹ ಮನುಷ್ಯನ ಏಜೆಂಟು ಸರಿಯಾದ ವೇಳೆಗಳಲ್ಲೆಲ್ಲಾ ಕಂದಾಯದ ಬುಕ್ಕುಗಳನ್ನು ನೋಡುವುದಕ್ಕೂ ಮತ್ತು ಯಾವ ಫೀಸುಮನನ್ನೂ ಕೊಡದೆ ಅವುಗಳಿಂದ ಎತ್ತಿ ಬರೆದುಕೊಳ್ಳುವುದಕ್ಕೂ ಸ್ವತಂತ್ರನಾಗಿರತಕ್ಕದ್ದು.

ಕಂದಾಯದ ಬುಕ್ಕುಗಳು ಪೂರ್ತಿಯಾದುದನ್ನು ಪ್ರಕಟಿಸತಕ್ಕದ್ದು.

50. ಕಂದಾಯದ ಬುಕ್ಕುಗಳು ತಯಾರಾದಕೂಡಲೆ ಆ ಅಂಶವನ್ನು ಮತ್ತು ಆ ಬುಕ್ಕುಗಳನ್ನು ನೋಡಬಹುದಾದ ಸ್ಥಳ ಅಥವಾ ಸ್ಥಳಗಳನ್ನು ಕುರಿತು ಯೂನಿಯನ್ನಲ್ಲಿ ದಂಡೂರ ಮೂಲಕವಾಗಿ ಪಂಚಾಯಿತಿಯ ಅಧ್ಯಕ್ಷನು ಪ್ರಕಟಿಸತಕ್ಕದ್ದು.

ಕಂದಾಯದ ಬುಕ್ಕುಗಳ ತಿದ್ದುಪಾಟು.

51. (1) ಪಂಚಾಯಿತಿಯ ಅಧ್ಯಕ್ಷನು, ಕಂದಾಯಕ್ಕೆ ಗುರಿಯಾಗತಕ್ಕ ಯಾವ ಮನುಷ್ಯನ ಹೆಸರನ್ನಾದರೂ, ಅಥವಾ ಸ್ವತ್ತನ್ನಾದರೂ, ಕಂದಾಯದ ಬುಕ್ಕಿನಲ್ಲಿ ದಾಖಲ್ ಮಾಡುವುದರಿಂದಾಗಲಿ, ಅಥವಾ ಅಂತಹ ಸ್ವತ್ತಿನ ತೆರಗೆತಿಯನ್ನು ಬದಲಾಯಿಸುವುದರಿಂದಾಗಲಿ ಕಂದಾಯದ ಬುಕ್ಕುಗಳಿಗೆ ಸೇರಿಸಬಹುದು, ಅಥವಾ ಅವುಗಳನ್ನು ತಿದ್ದುಪಾಟು ಮಾಡಬಹುದು; ಮತ್ತು ಅಂತಹ ಪ್ರತಿ ತಿದ್ದುಪಾಟಿನ ವಿಷಯದಲ್ಲೂ, ಅಂತಹ ತಿದ್ದುಪಾಟಿಗೆ ಸಂಬಂಧಪಟ್ಟ ಮನುಷ್ಯನಿಗೆ ಅದನ್ನು ಕುರಿತು ನೋಟೀಸು ಕೊಡತಕ್ಕದ್ದು.

(2) ತಾಲ್ಲೋಕು ಬೋರ್ಡಿನ ಪ್ರೆಸಿಡೆಂಟು ಯಾವಾಗಲಾದರು, ತಾನು ಸ್ವತಃ ಅಥವಾ ಸಂಬಂಧಪಟ್ಟ ಯಾವ ಮನುಷ್ಯನ ಕೋರಿಕೆಮೇಲಾದರು, ಈ ನಿಬಂಧನೆಯ (1) ನೆಯ ಅಧಿಕರಣಕ್ಕೆ ಅನುಸಾರವಾಗಿ ಅಲ್ಲಿ ವಿಧಿಸಿರುವಂತೆ ನೋಟೀಸು ಕೊಡುವ ಅಂಶಕ್ಕೆ ಒಳಪಟ್ಟು ಪಂಚಾಯಿತಿಯ ಅಧ್ಯಕ್ಷನ ಅಧಿಕಾರಗಳಲ್ಲಿ ಯಾವದನ್ನಾದರು, ಅಥವಾ ಎಲ್ಲವನ್ನಾದರು ನಡಿಸಬಹುದು; ಮತ್ತು ತಾಲ್ಲೋಕು ಬೋರ್ಡಿನ ಪ್ರೆಸಿಡೆಂಟಿನಿಂದ ಹಾಗೆ ಕೊಡಲ್ಪಟ್ಟ ಯಾವ ಹುಕುಮು 59ನೆಯ ನಿಬಂಧನೆಯ ಮೇರೆ ಅಪೀಲಿನಿಂದಹೊರ್ತು ಬದಲಾಯಿಸಲ್ಪಡತಕ್ಕದ್ದಲ್ಲ, ಅಥವಾ ರದ್ದು ಮಾಡಲ್ಪಡತಕ್ಕದ್ದಲ್ಲ.

ಕಂದಾಯವು ಎರಡು ಸಮವಾದ ಖಿಸ್ತುಗಳಲ್ಲಿ ಕೊಡಲ್ಪಡತಕ್ಕದ್ದು.

52. (1) 45ನೆಯ ನಿಬಂಧನೆಯ ಮೇರೆ ಹಾಕಲ್ಪಟ್ಟ ಕಂದಾಯವು ಮನೆಯ ಮಾಲೀಕನಿಂದ ಅಥವಾ ವಾಸಮಾಡುವವನಿಂದ ಎರಡು ಸಮವಾದ ಖಿಸ್ತುಗಳಲ್ಲಿ ಕೊಡಲ್ಪಡತಕ್ಕದ್ದು.

(2) 53ನೆಯ ನಿಬಂಧನೆಯ (1) ನೆಯ ಅಧಿಕರಣದ ನಿಯಮಗಳಿಗೆ ಒಳಪಟ್ಟು ಪ್ರತಿ ವರ್ಷಾರ್ಧದ (ಎಂದರೆ ಜನವರಿಯಿಂದ ಜೂನ್ ವರೆಗೆ, ಅಥವಾ ಜುಲೈಯಿಂದ ಡಿಸೆಂಬರ್ ವರೆಗೆ) ಖಿಸ್ತು ಅಂತಹ ವರ್ಷಾರ್ಧವು ಪ್ರಾರಂಭಿಸಿದ ಮೇಲೆ 30 ದಿನಗಳೊಳಗಾಗಿ ಕೊಡಲ್ಪಡತಕ್ಕದ್ದು.

ಹೊಸದಾಗಿ ಅಥವಾ ತಿರಗಿ ಕಟ್ಟಲ್ಪಟ್ಟ ಮನೆಗಳು

53. (1) ಒಂದು ಯೂನಿಯನ್ನಲ್ಲಿ ಯಾವ ಮನೆಯಾದರು ಕಟ್ಟಲ್ಪಟ್ಟರೆ, ಪುನಃ ಕಟ್ಟಲ್ಪಟ್ಟರೆ ಅಥವಾ ವಿಸ್ತರಿಸಲ್ಪಟ್ಟರೆ, ಅಧ್ಯಕ್ಷನು ಆ ಮನೆಯ ಮೇಲೆ ವಸೂಲ್ಮಾಡತಕ್ಕ ಕಂದಾಯವನ್ನು ದಾಖಲ್ ಮಾಡತಕ್ಕದ್ದು, ಮತ್ತು ಕಂದಾಯವು ಹಾಕಲ್ಪಟ್ಟ ಆ ವರ್ಷಾರ್ಧದ ಖಿಸ್ತು 54ನೆಯ ನಿಬಂಧನೆಯ (1) ನೆಯ ಅಧಿಕರಣದ ಮೇಲೆ ಹುಟ್ಟಿದ ನೋಟೀಸು ಜಾರಿಯಾದ ತಾರೀಖಿನ ತರುವಾಯ 30 ದಿನಗಳೊಳಗಾಗಿ ಕೊಡಲ್ಪಡತಕ್ಕದ್ದು.

ಮನೆಯು ಕೆಡವಲ್ಪಟ್ಟಾಗ ಅಥವಾ ನಾಶ ಮಾಡಲ್ಪಟ್ಟಾಗ ಕಂದಾಯವನ್ನು ಮಾಫ ಮಾಡುವುದು.

(2) ಯಾವ ಮನೆಯಾದರು ಪೂರ್ತಿಯಾಗಿ ಕೆಡವಲ್ಪಟ್ಟಾಗ ಅಥವಾ ನಾಶ ಮಾಡಲ್ಪಟ್ಟಾಗ, ಅದರ ಮಾಲೀಕನು ಅಂತಹ ಕೆಡಹುವಿಕೆಯನ್ನು ಅಥವಾ ನಾಶವನ್ನು ಕುರಿತು ಅಧ್ಯಕ್ಷನಿಗೆ ವರ್ತಮಾನ ಕೊಡಬಹುದು, ಅಂತಹ ಸಂದರ್ಭದಲ್ಲಿ ಅಧ್ಯಕ್ಷನು ವರ್ತಮಾನ ಕೊಡಲ್ಪಟ್ಟ ವರ್ಷಾರ್ಧದ ತರುವಾಯ ಬರುವ ವರ್ಷಾರ್ಧದಿಂದ ಆ ಮನೆಗೆ ಹಾಕಿರುವ ಕಂದಾಯವನ್ನು ಮನ್ನಿಸತಕ್ಕದ್ದು; ಮತ್ತು ಅಂತಹ ವರ್ತಮಾನವು ಕೊಡಲ್ಪಡುವವರೆಗೂ ಅಂತಹ ಮನೆಯು ಕೆಡವಲ್ಪಡದೆ ಅಥವಾ ನಾಶ ಮಾಡಲ್ಪಡದೆ ಇದ್ದರೆ ವಸೂಲ್ಮಾಡಲ್ಪಡುತ್ತಿದ್ದ ಕಂದಾಯವನ್ನು ಕೊಡುವುದಕ್ಕೆ ಅಧ್ಯಕ್ಷನಿಗೆ ಉಚಿತವಾಗಿ ತೋರುವರೀತ್ಯಾ ಅಂತಹ ಮಾಲೀಕನು ಬದ್ಧನಾಗಿರತಕ್ಕದ್ದು.

ಮನೆ ಕಂದಾಯಕ್ಕೆ ತಗಾದೆ ನೋಟೀಸು.

54. ಕೊಡಬೇಕಾಗಿಬಂದ ಕಾಲಕ್ಕೆ ತರುವಾಯ ಮನೆಕಂದಾಯವು 10 ದಿವಸಗಳ ವರೆಗೂ ಕೊಡಲ್ಪಡದೆ ನಿಂತಿದ್ದರೆ ಪಂಚಾಯಿತಿಯ ಅಧ್ಯಕ್ಷನು ಈ ಕೆಳಗಿನ ನಮೂನೆಯಲ್ಲಿ ಅಥವಾ ಆ ಅರ್ಥವುಳ್ಳ ಒಂದು ಬರಹಮೂಲಕವಾದ ನೋಟೀಸನ್ನು ಮನೆಯ ಮಾಲೀಕನ ಮೇಲಾಗಲಿ ಅಥವಾ ಅವನ ಏಜಂಟಿನ ಮೇಲಾಗಲಿ ಅಥವಾ ವಾಸಮಾಡುವವನ ಮೇಲಾಗಲಿ ಅಥವಾ ಅವರಲ್ಲಿ ಎಲ್ಲರ ಮೇಲಾಗಲಿ ಜಾರಿಯಾಗುವಂತೆ ಮಾಡಬಹುದು.

ತಗಾದೆ ನೋಟೀಸು.

ಇದರಿಂದ ತಿಳಿಯಪಡಿಸುವದೇನಂದರೆ :—ಯೂನಿಯನ್ ಪಂಚಾಯಿತಿಯ ಅಧ್ಯಕ್ಷರು 190 ನೆಯ ವರ್ಷಕ್ಕೆ

ಲ್ಲಿ ಸಿಮ್ಮ ಮನೆಗಾಗಿ

ನ ಪಂಚಾಯಿತಿಗೆ ನಿಮ್ಮಿಂದ ಬರಬೇಕಾದ

ರು

ಮೊಬಲಗಿಗಾಗಿ ನಿಮ್ಮನ್ನು ತಗಾದೆ ಮಾಡುತ್ತಾರೆ,

ಲ್ಲಿ ಇರುವ ರ ಆಫೀಸಿಗೆ ಈ ನೋಟೀಸು ಜಾರಿಯಾದ 15 ದಿನಗಳೊಳಗಾಗಿ,

ಸಲ್ಲಬೇಕಾದ ಮೊಬಲಗು ಪಾವತಿ ಮಾಡಲ್ಪಡದೆ ಇದ್ದರೆ ಅವರಿಗಾಗಲಿ ಅಥವಾ ಗೆ ಆಗಲಿ ಕೊಡದೆ ಇರುವುದಕ್ಕೆ ಸರಿಯಾದ ಕಾರಣವು ತೋರಿಸಲ್ಪಡದೆ ಇದ್ದರೆ, ಖರ್ಚು ಸಹಿತವಾಗಿ ಸದರಿ ಮೊಬಲಗಿನ ವಸೂಲಾತಿಯ ಬಗ್ಗೆ ಜಫ್ತಿ ವಾರಂಟು ಕೊಡಲ್ಪಡುವುದು.

ತಾರೀಖು (ಅಧ್ಯಕ್ಷರ ರುಜು.)

ಜಫ್ತಿ ಪಗ್ಗೆರೆ.

(2) ಅಂತಹ ತಗಾದೆ ನೋಟೀಸು ತನ್ನ ಮೇಲೆ ಜಾರಿಯಾದ 15 ದಿನಗಳೊಳಗಾಗಿ ಅಂತಹ ಮಾಲೀಕನು ಅಥವಾ ಮಾಲೀಕನ ಏಜಂಟು ಅಥವಾ ವಾಸಮಾಡುವವನು ಸಲ್ಲಬೇಕಾದ ಮೊಬಲಗನ್ನು ಕೊಡದೆ ಹೋದರೆ ಅಥವಾ ಅದನ್ನು ಯಾತಕ್ಕೆ ಕೊಡತಕ್ಕದ್ದಲ್ಲ ಎಂಬುದಕ್ಕೆ ಅಧ್ಯಕ್ಷನಿಗೆ ತೃಪ್ತಿಕರವಾಗಿ ಕಾರಣವನ್ನು ತೋರಿಸದೆ ಹೋದರೆ, ಅಧ್ಯಕ್ಷನು ಅಥವಾ ಅವನಿಂದ ಈ ವಿಷಯದಲ್ಲಿ ಕ್ರಮವಾಗಿ ಅಧಿಕಾರವನ್ನು ಪಡೆದಿರುವ ಇತರ ಮನುಷ್ಯನು ಕೆಳಗಿನ ದಾರಿಗಳಲ್ಲಿ ಯಾವದರಲ್ಲಿಯಾದರು, ವಿಶಿಷ್ಟ ಖರ್ಚುಗಳು ಸೇರಿ ಅಂತಹ ಮೊಬಲಗನ್ನು ವಸೂಲ್ಮಾಡಬಹುದು :—

(i) ಬಾಕೀದಾರನ ಚರಸ್ವತ್ತಿನ ಜಫ್ತಿ ಮತ್ತು ಹರಾಜಿನಿಂದ, ಅಥವಾ ಬಾಕೀದಾರನು ಕಂದಾಯ ಬಾಕಿ ಇರುವ ಯಾವದಾದರೂ ಕಟ್ಟಡದಲ್ಲಿ ವಾಸಮಾಡುವವನಾಗಿದ್ದರೆ ಅಂತಹ ಕಟ್ಟಡದ ಒಳಗಾಗಲಿ ಮೇಲಾಗಲಿ ಸಿಕ್ಕುವ ಯಾವದಾದರು ಸ್ವತ್ತಿನ ಜಫ್ತಿ ಮತ್ತು ಹರಾಜಿನಿಂದ, ಆದರೆ ಮೇಲ್ಕಂಡಂತೆ ಅವನ ಮೇಲೆ ನೋಟೀಸು ಜಾರಿ ಮಾಡಿದಹೊರ್ತು ವಾಸ ಮಾಡುವವನ ಯಾವ ಸ್ವತ್ತನ್ನೂ ಜಫ್ತಿ ಮಾಡತಕ್ಕದ್ದಲ್ಲ :

(ii) ಯಾವ ಕಾರಣದಿಂದಲಾದರು ಬಾಕೀದಾರನ ಸ್ವತ್ತಿನ ಜಫ್ತಿಯು ಅಥವಾ ಸಾಕಾದಷ್ಟು ಜಫ್ತಿಯು ಅಸಾಧ್ಯವಾಗಿದ್ದರೆ, ಒಬ್ಬ ಮೇಜಿಸ್ಟ್ರೇಟನ ಮುಂದೆ ಅವನ ಮೇಲೆ ಫಿರ್ಯಾದು ಮಾಡುವದರಿಂದ.

ಕಂದಾಯವನ್ನು ಕೊಡುವುದಕ್ಕೆ ಮನಃಪೂರ್ವಕವಾಗಿ ತಪ್ಪಿದ್ದಕ್ಕೆ ಅಥವಾ ಜಫ್ತಿಗೆ ಅಡ್ಡಿ ಮಾಡಿದ್ದಕ್ಕೆ ಶಿಕ್ಷೆ.

(3) ಈ ನಿಬಂಧನೆಯ ಪ್ರಕಾರ ಮೇಜಿಸ್ಟ್ರೇಟನ ಮುಂದೆ ಫಿರ್ಯಾದು ಮಾಡಲ್ಪಟ್ಟ ಯಾವ ಕಂದಾಯವನ್ನಾದರೂ ಕೊಡುವುದಕ್ಕೆ ಬದ್ಧನಾದ ಯಾವ ಮನುಷ್ಯನು ಅವನಿಂದ ಬರಬೇಕಾಗಿದ್ದ ಮೊಬಲಗನ್ನು ಕೊಡುವುದಕ್ಕೆ ತಪ್ಪಿದನೆಂದು ಅಥವಾ ಜಫ್ತಿಯನ್ನು ಅಥವಾ ಸಾಕಾದಷ್ಟು ಜಫ್ತಿಯನ್ನು ಮನಃಪೂರ್ವಕವಾಗಿ ಅಡ್ಡಿ ಮಾಡಿದನೆಂದು ಮೇಜಿಸ್ಟ್ರೇಟರಿಗೆ ತೃಪ್ತಿಕರವಾಗಿ ರುಜುವಾತಾದಾಗ ಬಾಕಿ ಇದೆ ಎಂದು ಕಂಡುಬಂದಿರುವ ಕಂದಾಯಕ್ಕೆ ಎರಡರಷ್ಟಕ್ಕಿಂತ ಹೆಚ್ಚಾಗದ ಜುರ್ಮಾನೆಯನ್ನು ಕೊಡುವುದಕ್ಕೆ ಬದ್ಧನಾಗಿರತಕ್ಕದ್ದು, ಮತ್ತು ಅಂತಹ ಕಂದಾಯವನ್ನು ಮತ್ತು ಫಿರ್ಯಾದಿನ ಖರ್ಚನ್ನು ಕೂಡ ಕೊಡತಕ್ಕದ್ದು.

ಜಫ್ತಿ ವಾರಂಟು.

55. ಮೇಲಿನ ನಿಬಂಧನೆಯ (2) ನೆಯ ಅಧಿಕರಣದ ಮೇರೆ ಸ್ವತ್ತನ್ನು ಜಫ್ತಿ ಮತ್ತು ಹರಾಜು ಮಾಡುವುದಕ್ಕೋಸ್ಕರ ಪಂಚಾಯಿತಿಯ ಅಧ್ಯಕ್ಷನು ಈ ಕೆಳಗೆ ನಮೂದಾಗುವ ನಮೂನೆಯಲ್ಲಿ ಅಥವಾ ಅದೇತರಹ ನಮೂನೆಯಲ್ಲಿ ಒಂದು ವಾರಂಟನ್ನು ಕೊಡತಕ್ಕದ್ದು ಮತ್ತು ಅಂತಹ ಪ್ರತಿ ಒಂದು ವಾರಂಟಿಗೂ 2 ಆಣೆಗಳ ವಾರಂಟು ರುಸುಮು ವಸೂಲ್ಮಾಡಲ್ಪಡತಕ್ಕದ್ದು.

ಜಫ್ತಿ ವಾರಂಟು.

....ಗೆ (ಇಲ್ಲಿ ವಾರಂಟನ್ನು ಜಾರಿ ಮಾಡತಕ್ಕ ಉದ್ಯೋಗಸ್ಥನ ಹೆಸರನ್ನು ಬರಿ) ಇದರಲ್ಲಿ ಕಂಡ ಮೊಬಲಗಿಗಾಗಿ ಮೇಲ್ಕಂಡ........................ ...ಗೆ ಕ್ರಮವಾಗಿ ತಗಾದೆ ಮಾಡಿದಾಗ್ಯೂ ಮತ್ತು ಅಂತಹ ತಗಾದೆ ಮಾಡಲ್ಪಟ್ಟಂದಿನಿಂದೀಚೆಗೆ 15 ದಿನಗಳು ಕಳೆದಾಗ್ಯೂ.............................. ... ನ.........
....19——— ....ಕ್ಕೆ ಇದರ ಪಕ್ಕದಲ್ಲಿ ನಮೂದಿಸಿರುವ ಕಂದಾಯಗಳಿಗಾಗಿ... ....ರೂಪಾಯಿಗಳನ್ನು ಕೊಡದೆ ಇರುವುದರಿಂದ ಅಥವಾ ಕೊಡದೆ ಇರುವುದ

ರುಸುಮುಗಳು.

ರುಸುಮುಗಳ ವಸೂಲಾತಿಯ ಇಸ್ತಿಹಾರ್ನಾಮೆ.

71. (1) ಯಾವಿದಾದರು ರುಸುಮುಗಳನ್ನು ವಸೂಲ್ಮಾಡಬೇಕೆಂದು ಗವರ್ನಮೆಂಟಿನವರ ಅನುಮತಿಯ ಮೇಲೆ ಡಿಸ್ಟ್ರಿಕ್ಟು ಬೋರ್ಡು ನಿಶ್ಚಯಿಸುವಾಗ ಅದು ಒಂದು ಠರಾವುಮೂಲಕವಾಗಿಯೂ ಹುಕುಂ ಮೂಲಕವಾಗಿಯೂ, ಮತ್ತು ದಂಡೂರಮೂಲಕವಾಗಿಯೂ, ರುಸುಮು ವಸೂಲ್ಮಾಡತಕ್ಕ ಗ್ರಾಮಗಳಲ್ಲಿ, ಅಂತಹ ರುಸುಮುಗಳು ಅಂತಹ ಹುಕುಮಿನಲ್ಲಿ ನೇಮಿಸಿದಾಗುವ ತಾರೀಖಿನಿಂದ ಮತ್ತು ಅದರಲ್ಲಿ ಗೊತ್ತು ಮಾಡಿರುವ ದರದಲ್ಲಿ, ಮೇಲ್ಕಂಡ ಹುಕುಮು ಬದಲಾಯಿಸಲ್ಪಡುವ ಅಥವಾ ರದ್ದು ಮಾಡಲ್ಪಡುವವರೆಗೂ ವಸೂಲ್ಮಾಡಲ್ಪಡುವುದು ಎಂದು ಅದು (ಬೋರ್ಡು) ಒಡನೆ ಪ್ರಕಟಿಸತಕ್ಕದ್ದು.

(2) ಅಂತಹ ಹುಕುಮಿನ ಪ್ರತಿಗಳು ಕೂಡ ಡಿಸ್ಟ್ರಿಕ್ಟು ಮತ್ತು ತಾಲ್ಲೋಕು ಬೋರ್ಡುಗಳ ಕಛೇರಿಗಳಲ್ಲಿಯೂ ಅಂತಹ ರುಸುಮುಗಳು ವಸೂಲ್ಮಾಡತಕ್ಕದ್ದಾಗಿರುವ ಗ್ರಾಮಗಳಲ್ಲಿಯೂ ಎಲ್ಲರೂ ನೋಡಬಹುದಾದ ಸ್ಥಳ ಅಥವಾ ಸ್ಥಳಗಳಲ್ಲಿ ತೋರಿಸಲ್ಪಡತಕ್ಕದ್ದು.

ಪಟ್ಟಿ.

	ರೂ. ಅ. ಪೈ.
ನಾಲ್ಕು ಚಕ್ರಗಳ ಪ್ರತಿ ಬಂಡಿಗೂ	2—0—0
ಎರಡು ಚಕ್ರಗಳ ಪ್ರತಿ ಬಂಡಿಗೂ	1—0—0
ಪ್ರತಿ ಎಕ್ಕಾವಿಗೂ	0—4—0
ಕಮಾನುಗಳುಳ್ಳ ಹ್ಯಾಕರಿಯೆಂಬ ಪ್ರತಿ ಎತ್ತಿನ ಬಂಡಿಗೂ	0—2—0
ಎಂಟೆತ್ತುಗಳು, ಕೋಣಗಳು, ಕುದುರೆಗಳು, ಟಾಕಣಿಗಳು, ಕತ್ತೆಗಳು ಯಾ ಹೇಸರಕತ್ತೆಗಳು ಕಟ್ಟಿದ ಕಮಾನು ಇಲ್ಲದ ಪ್ರತಿ ಚಕಡಾ ಬಂಡಿ ಮತ್ತು ಹ್ಯಾಕರಿ ಇವುಗಳಿಗೆ ಭರ್ತಿಯಾಗಿದ್ದರೆ.	1—8—0
ಡಿಟ್ಟೋ ಭರ್ತಿಯಾಗದೆ ಇದ್ದರೆ	0—8—0
ಆರು ಎತ್ತುಗಳು, ಕೋಣಗಳು, ಕುದುರೆಗಳು, ಟಾಕಣಿಗಳು ಕತ್ತೆಗಳು ಯಾ ಹೇಸರಕತ್ತೆಗಳು ಕಟ್ಟಿದ ಪ್ರತಿ ಚಕಡಾ ಬಂಡಿ ಮತ್ತು ಹ್ಯಾಕರಿ ಬಂಡಿ ಇದಕ್ಕೆ ಭರ್ತಿಯಾಗಿದ್ದರೆ.	0—12—0
ಡಿಟ್ಟೋ ಭರ್ತಿ ಇಲ್ಲದೆ ಇದ್ದರೆ	0—6—0
ನಾಲ್ಕು ಎತ್ತುಗಳು, ಕೋಣಗಳು, ಕುದುರೆಗಳು, ಟಾಕಣಿಗಳು, ಕತ್ತೆಗಳು, ಹೇಸರಕತ್ತೆಗಳು ಕಟ್ಟಿದ ಪ್ರತಿ ಚಕಡಾ ಬಂಡಿ ಮತ್ತು ಹ್ಯಾಕರಿ ಬಂಡಿ ಇದಕ್ಕೆ ಭರ್ತಿಯಾಗಿದ್ದರೆ.	0—8—0
ಡಿಟ್ಟೋ ಭರ್ತಿಯಾಗದೆ ಇದ್ದರೆ	0—4—0
ಎರಡು ಎತ್ತುಗಳು, ಕೋಣಗಳು, ಕುದುರೆಗಳು, ಟಾಕಣಿಗಳು, ಕತ್ತೆಗಳು, ಹೇಸರಕತ್ತೆಗಳು ಕಟ್ಟಿದ ಚಕಡಾ ಬಂಡಿ ಮತ್ತು ಹ್ಯಾಕರಿ ಬಂಡಿ ಭರ್ತಿಯಾಗಿದ್ದರೆ.	0—4—0
ಡಿಟ್ಟೋ ಭರ್ತಿಯಾಗದೆ ಇದ್ದರೆ	0—2—0
ಕೋಣಗಳು, ಯಾ ಎತ್ತುಗಳು ಹೊರೇಹಾಕಿ ಇರತಕ್ಕವು ಪ್ರತಿ ರಾಸಿಗೂ	0—1—0
ಡಿಟ್ಟೋ ಹೊರೇಹಾಕದೆ ಇದ್ದರೆ	0—0—6
ಪ್ರತಿ ಆನೆಗೂ	1—8—0
ಪ್ರತಿ ಒಂಟೆಗೂ ಹೊರೆ ಹಾಕಿದ್ದರೆ	0—8—0
ಡಿಟ್ಟೋ ಹೊರೆ ಹಾಕದೆ ಇದ್ದರೆ	0—4—0
ಪ್ರತಿ ಕುದುರೆಗೂ ಹೊರೆ ಹಾಕಿದ್ದರೆ ಯಾ ಸವಾರೀಯಾಗಿದ್ದರೆ	0—1—6
ಡಿಟ್ಟೋ ಹೊರೆ ಹಾಕದೆ ಯಾ ಖಾಲೀ ತೆಗೆದುಕೊಂಡು ಹೋಗುವುದಕ್ಕೆ	0—0—9
ಪ್ರತಿ ತಟ್ಟು ಯಾ ಹೇಸರಕತ್ತೆ ಹೊರೆ ಹಾಕಿದ್ದರೆ ಯಾ ಸವಾರಿಯಾಗಿದ್ದರೆ	0—0—9
ಡಿಟ್ಟೋ ಹೊರೆ ಹಾಕದೆ ಯಾ ಖಾಲೀ ತೆಗೆದುಕೊಂಡು ಹೋಗುತ್ತಿದ್ದರೆ ..	0—0—6
ಪ್ರತಿ ಕತ್ತೆಗೆ ಹೊರೆ ಹಾಕಿದ್ದರೆ ಯಾ ಸವಾರೀಯಾಗಿದ್ದರೆ ..	0—0—6
ಡಿಟ್ಟೋ ಹೊರೆ ಹಾಕದೆ ಸುಮ್ಮನೆ ತೆಗೆದುಕೊಂಡು ಹೋಗುತ್ತಿದ್ದರೆ ..	0—0—3
ಪ್ರತಿ ಕುರಿ, ಯಾ ಮೇಕೆ ಯಾ ಹಂದಿಗೆ	0—0—1
ಪ್ರತಿ ಪಾಲಖಿ, ಡೋಲಿ, ತೊಟ್ಟಿಲು ಯಾ ಟಾಂಜಾನ್ ಇಂತಹ ಎಂಟು ಮಂದಿ ಬೋಯಿಗಳುಳ್ಳವಕ್ಕೆ.	1—0—0
ಡಿಟ್ಟೋ 6 ಮಂದಿ ಬೋಯಿಗಳುಳ್ಳದ್ದಕ್ಕೆ	0—12—0
ಡಿಟ್ಟೋ 4 ಮಂದಿ ಬೋಯಿಗಳುಳ್ಳದ್ದಕ್ಕೆ	0—8—0
ಡಿಟ್ಟೋ ಇಬ್ಬರು ಬೋಯಿಗಳುಳ್ಳದ್ದಕ್ಕೆ	0—4—0
ಪೈದಲ್ ಹೋಗುವ ಪ್ರತಿ ಮನುಷ್ಯನಿಗೂ	0—0—3

ನೋ—ಟಿ—ಯಾವ ಬಂಡಿಗೆ ಸುಂಕ ತೆಗೆದುಕೊಳ್ಳಲ್ಪಡುತ್ತೋ ಅದಕ್ಕೆ ಕಟ್ಟಿರುವ ಜಾನವಾರುಗಳಿಗೂ ಸುಂಕ ಹಾಕಲ್ಪಡತಕ್ಕದ್ದಲ್ಲ.

ರುಸುಮುಗಳು ಯಾರಿಗೆ ಕೊಡಲ್ಪಡತಕ್ಕದ್ದು.

72. (1) ಮೇಲ್ಕಂಡ ನಿಬಂಧನೆಯ ಮೇರೆ ಹಾಕಿರುವ ಪ್ರತಿ ರುಸುಮು ಪ್ರಕಟನೆಯಲ್ಲಿ ನಮೂದಾಗುವ ದರದಲ್ಲಿ ತಾಲ್ಲೂಕು ಬೋರ್ಡಿನ ಪ್ರೆಸಿಡೆಂಟಿಗಾಗಲಿ ಅಥವಾ ಅಂತಹ ಪ್ರೆಸಿಡೆಂಟನಿಂದ ಅದಕ್ಕಾಗಿ ಅಧಿಕಾರ ಕೊಡಲ್ಪಟ್ಟಿರುವ ಯಾವ ಮನುಷ್ಯನಿಗಾದರೂ ಕೇಳಿದಾಗ ಕೊಡಲ್ಪಡತಕ್ಕದ್ದು.

ರುಸುಮುಗಳನ್ನು ಕೊಡುವುದಕ್ಕೆ ತಪ್ಪಿದಾಗ ಹ್ಯಾಗೆ ವಸೂಲ್ಮಾಡತಕ್ಕದ್ದು.

(2) ಅಂತಹ ರುಸುಮು ಹಾಗೆ ಕೊಡಲ್ಪಡದೆ ಇದ್ದರೆ ಅದನ್ನು ಕೊಡಬೇಕಾಗಿರುವ ಮನುಷ್ಯನ ಸ್ವತ್ತು ತಾಲ್ಲೂಕು ಬೋರ್ಡಿನ ಪ್ರೆಸಿಡೆಂಟನಿಂದ ಅಥವಾ ಅದಕ್ಕಾಗಿ ಅವನಿಂದ ಕ್ರಮವಾಗಿ ಅಧಿಕಾರ ಕೊಡಲ್ಪಟ್ಟಿರುವ ಯಾವ ಮನುಷ್ಯನಿಂದಾಗಲಿ ಜಪ್ತಿ ಹಿಡಿದು ಮಾರಲ್ಪಡತಕ್ಕದ್ದು.

ಕಂದಾಯ ಮುಂತಾದವುಗಳ ವಸೂಲಾತಿ.

ಕಂದಾಯಗಳು ಮತ್ತು ರುಸುಮುಗಳಿಗೆಲ್ಲಾ ಕೊಟ್ಟದ್ದಕ್ಕೆ ರಶೀತಿಗಳು.

73. ತಾಲ್ಲೂಕು ಬೋರ್ಡಿನ ಪ್ರೆಸಿಡೆಂಟು ಅಥವಾ ಪಂಚಾಯಿತಿಯ ಅಧ್ಯಕ್ಷನು ಮತ್ತೆ ಕಂದಾಯವನ್ನಾಗಲಿ ಅಥವಾ ರುಸುಮನ್ನಾಗಲಿ ಕೊಡುವ ಪ್ರತಿ ಮನುಷ್ಯನಿಗೂ ಅದಕ್ಕೆ ಅವನಿಂದ ಅಥವಾ ಅದಕ್ಕಾಗಿ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಯಾವ ಮನುಷ್ಯನಿಂದಲಾದರು ರುಜು ಮಾಡಲ್ಪಟ್ಟ ಒಂದು ರಶೀತಿಯನ್ನು ಕೊಡತಕ್ಕದ್ದು.

ಅಂತಹ ರಶೀತಿಯಲ್ಲಿ

(i) ಅದನ್ನು ಕೊಟ್ಟ ತಾರೀಖು ;

(ii) ಯಾರಿಗೆ ಅದು ಕೊಡಲ್ಪಟ್ಟಿತೊ ಆ ಮನುಷ್ಯನ ಹೆಸರು ;

(iii) ಅಂತಹ ಯಾವ ಕಂದಾಯ ಅಥವಾ ರುಸುಮಿಗಾಗಿ ಹಣ ಕೊಡಲ್ಪಟ್ಟಿತೊ ಅದು.

(iv) ಯಾವ ಕಾಲಕ್ಕಾಗಿ ಹಣವು ಕೊಡಲ್ಪಟ್ಟಿತೊ, ಆ ಕಾಲ ; ಮತ್ತು

(v) ಎಷ್ಟು ಮೊಬಲಗಿಗಾಗಿ ರಶೀತಿಯು ಕೊಡಲ್ಪಟ್ಟಿತೊ, ಅದು :

ಇವುಗಳನ್ನು ನಮೂದಿಸತಕ್ಕದ್ದು.

ಜಪ್ತಿ ಮತ್ತು ಹರಾಜಿನ ಷರತ್ತುಗಳು.

74. ಈ ಭಾಗದ 54 ಮತ್ತು 72ನೆಯ ನಿಬಂಧನೆಗಳ ಅಥವಾ ಚೀಫ್ ಕಮಿಷನರವರ 1867ನೆಯ ಇಸವಿ, ನವಂಬರ್ 4ನೆಯ ತಾರೀಖಿನ 274ನೆಯ ನಂಬರು ಇಸ್ತಿಹಾರ್ನಾಮೆಯೊಡನೆ ಪ್ರಕಟಿಸಿರುವ 3, 4ನೆಯ ನಿಬಂಧನೆಗಳ ನಿಯಮಗಳ ಮೇರೆ ಯಾವಾಗಲಾದರು, ಯಾವದಾದರು ಸ್ವತ್ತು, ಯಾವದಾದರು ಬಾಕಿ ಇರುವ ಕಂದಾಯವನ್ನಾಗಲಿ, ರುಸುಮನ್ನಾಗಲಿ ಅಥವಾ ಸುಂಕವನ್ನಾಗಲಿ ಕೊಡದಿಹೋದದ್ದಕ್ಕೋಸ್ಕರ, ಜಪ್ತಿ ಮಾಡಲ್ಪಟ್ಟಾಗ, ಹಿಡಿದುಕೊಳ್ಳಲ್ಪಟ್ಟಾಗ, ಅಥವಾ ಮಾರಲ್ಪಟ್ಟಾಗ, ಅಂತಹ ಜಪ್ತಿಯು, ಹಿಡಿಯೋಣವು ಮತ್ತು ಮಾರಾಟವು ಸಿವಿಲ್ ಪ್ರೊಸೀಜ್ಯುರ್ ಕೋಡಿನ 271ನೆಯ ಪ್ರಕರಣದ ನಿಯಮಗಳಿಗೂ ಮತ್ತು ಈ ಕೆಳಗೆ ವಿಧಿಸುವ ಷರತ್ತುಗಳಿಗೂ, ನಿಷೇಧಗಳಿಗೂ ಮತ್ತು ವಿನಾಯಿತಿಗಳಿಗೂ ಒಳಪಟ್ಟು, ನಡಿಸಲ್ಪಡತಕ್ಕದ್ದು.

ನಿಷೇಧಗಳು.

(i) ಈ ಕೆಳಗೆ ಬರೆವ ಸ್ವತ್ತು ಜಪ್ತಿಗೆ ಗುರಿಯಾಗತಕ್ಕದ್ದಲ್ಲ :—

(ಎ) ಕಂದಾಯ ಮುಂತಾದ್ದನ್ನು ಕೊಡುವದಕ್ಕೆ ತಪ್ಪಿಹೋದವನಿಗೆ ಅವಶ್ಯವಾದ ಉಡುಪು ಮತ್ತು ಹಾಸಿಗೆ, ಅವನ ಹೆಂಡತಿ ಮತ್ತು ಮಕ್ಕಳು,

(ಬಿ) ಕೆಲಸಗಾರರ ಮುಟ್ಟುಗಳು ; ಮತ್ತು

(ಸಿ) ಬಾಕಿದಾರನು ವ್ಯವಸಾಯಗಾರನಾಗಿರುವ ಪಕ್ಷದಲ್ಲಿ, ಅವನ ವ್ಯವಸಾಯದ ಮುಟ್ಟುಗಳು ಮತ್ತು ಯಾರ ಹುಕುಂ ಮೇರೆ ಅಂತಹ ಸ್ವತ್ತು ಹಿಡಿಯಲ್ಪಟ್ಟಿತೋ ಅಂತಹ ತಾಲ್ಲೂಕು ಬೋರ್ಡಿನ ಪ್ರೆಸಿಡೆಂಟಿನ, ಅಥವಾ ಪಂಚಾಯಿತಿಯ ಅಧ್ಯಕ್ಷನ ಅಭಿಪ್ರಾಯದ ಮೇರೆ, ಬಾಕೀದಾರನು ಅವನ ಜೀವನವನ್ನು ಸಂಪಾದಿಸಿಕೊಳ್ಳುವುದಕ್ಕೆ ಅವಶ್ಯವೆಂದು ತೋರುವ, ದನಗಳು ಮತ್ತು ಬೀಜದ ಧಾನ್ಯವು.

ಅವಧಿ.

(ii) ಜಪ್ತಿಯು ಮಿತಿಮೀರತಕ್ಕದ್ದಲ್ಲ, ಎಂದರೆ, ಜಪ್ತಿ ಮಾಡಲ್ಪಟ್ಟ ಸ್ವತ್ತು ಹಣ ಕಂದಾಯಕ್ಕಾಗಿ ಅಥವಾ ರುಸುಮಿಗಾಗಿ ಅಥವಾ ಸುಂಕಕ್ಕಾಗಿ ಮತ್ತು ವಾರಂಟಿನ ರುಸುಮಿಗಾಗಿ ಮತ್ತು ಮೇಲ್ಕಂಡ ಸ್ವತ್ತನ್ನು ಇಟ್ಟುಕೊಳ್ಳುವುದಕ್ಕೂ, ಮಾರುವುದಕ್ಕೂ ಬಹುಶಃ ತಗಲಬಹುದಾದ ಖರ್ಚಿಗಾಗಿ ಬರಬೇಕಾದ ಮೊಬಲಗಿಗೆ ಸುಮಾರು ಸಾಧ್ಯವಾದ ಮಟ್ಟಿಗೂ ಅನುಗುಣವಾಗಿರತಕ್ಕದ್ದು.

ನಾಶವಾಗತಕ್ಕ ಸ್ವತ್ತು.

(iii) ಹಿಡಿಯಲ್ಪಟ್ಟ ಸ್ವತ್ತು ಜಾಗ್ರತೆಯಾಗಿಯೂ ಸಹಜವಾಗಿಯೂ ನಾಶವಾಗತಕ್ಕದ್ದಾಗಿದ್ದರೆ, ಅಥವಾ ಅದನ್ನು ಕಾವಲಲ್ಲಿಡುವ ಖರ್ಚು ಮತ್ತು ಬಾಕಿ ಬರಬೇಕಾದ ಕಂದಾಯದ ಮೊಬಲಗು ಅದರ ಬೆಲೆಗೆ ಮೀರುವುದಾಗಿದ್ದರೆ, ಸ್ವತ್ತನ್ನು ಹಿಡಿಯುವ ಮನುಷ್ಯನು, ಅಂತಹ ಸ್ವತ್ತನ್ನು ಹಿಡಿದ ಕೂಡ್ಲೆ, ಅದು ಒಡನೆ ಮಾರಲ್ಪಡುವುದೆಂದು ಸ್ವತ್ತು ಹಿಡಿಯಲ್ಪಟ್ಟಾಗ ಅದು ಯಾರ ಸ್ವಾಧೀನದಲ್ಲಿತ್ತೊ ಆ ಮನುಷ್ಯನಿಗೆ ನೋಟೀಸು ಕೊಡತಕ್ಕದ್ದು, ಮತ್ತು ಬಾಕಿ ಬರಬೇಕಾದ ಮೊಬಲಗು ಕೂಡ್ಲೆ ಕೊಡಲ್ಪಟ್ಟ ಹೊರತು ಸ್ವತ್ತನ್ನು ಹಾಗೆಯೆ ಮಾರತಕ್ಕದ್ದು.

ಮಾರಾಟದ ಹುಟ್ಟುವಳಿಯಲ್ಲಿ ಉಳಿದ ಶಿಲ್ಕು.

(iv) ಮನೆ ಕಂದಾಯ, ರುಸುಮು ಅಥವಾ ಸುಂಕ, ಮತ್ತು ಮಾರಾಟದ ಖರ್ಚುಗಳು ಸೇರಿ ಮೇಲ್ಕಂಡ ಖರ್ಚುಗಳು ಇವುಗಳ ಒಟ್ಟು ಮೊಬಲಗನ್ನು ವಜಾ ಮಾಡಿದ ತರುವಾಯ ಯಾವದಾದರು ಉಳಿಯುವ ಶಿಲ್ಕು, ಆರು ತಿಂಗಳೊಳಗಾಗಿ ಕೇಳಲ್ಪಟ್ಟರೆ, ಸ್ವತ್ತಿನ ಮಾಲೀಕನಿಗೆ ಕೇಳಿದಾಗ ವಾಪಸು ಕೊಡಲ್ಪಡತಕ್ಕದ್ದು, ಅಥವಾ ಅಂತಹ ಕಾಲಗೊಳಗಾಗಿ ಕೇಳಲ್ಪಡದೆ ಇದ್ದರೆ, ಡಿಸ್ಟ್ರಿಕ್ಟ್ ಫಂಡಿಗೆ ಜಮೆ ಕಟ್ಟಲ್ಪಡತಕ್ಕದ್ದು.

ವ್ಯವಹಾರ ಮೂಲಕ ಬಾಕಿ ಇರುವ ಮೊಬಲಗನ್ನು ವಸೂಲ್ಮಾಡುವುದು ನಿಷೇಧಿಸಲ್ಪಟ್ಟಿಲ್ಲ.

75. ಇದರಲ್ಲಿರುವ ಯಾವ ವಿಷಯವು ಲೋಕಲ್ ಬೋರ್ಡು ರೆಗ್ಯುಲೇಷನಿನ ಅಥವಾ ಈ ನಿಬಂಧನೆಗಳ ಮೇರೆ ಬಾಕಿ ಬರಬೇಕಾದ ಯಾವ ಮೊಬಲಗಿಗೋಸ್ಕರವು ವ್ಯವಹಾರ ನಡಿಸುವದನ್ನು ನಿಷೇಧಿಸತಕ್ಕದ್ದಲ್ಲ.

V ನೆಯ ಭಾಗ.

ಡಿಸ್ಟ್ರಿಕ್ಟ್ ಫಂಡಿನ ಆದಾಯ ವ್ಯಯಗಳು ಮತ್ತು ಲೆಕ್ಕಗಳು.

ಸಾಮಾನ್ಯ ವಿಷಯಗಳು.

ಖಜಾನೆಗೆ ಆದಾಯಗಳನ್ನು ಒಟ್ಟಾಗಿ ಪಾವತಿ ಮಾಡತಕ್ಕದ್ದು.

76. ಡಿಸ್ಟ್ರಿಕ್ಟ್ ಫಂಡಿಗಾಗಿ ವಸೂಲಾದ ಎಲ್ಲಾ ಮೊಬಲಗುಗಳನ್ನು ಸ್ಥಳೀಯ ಸರ್ಕಾರ ಖಜಾನೆಗೆ ಪ್ರತಿಯೊಂದು ಲೋಕಲ್ ಬೋರ್ಡು ಪಾವತಿ ಮಾಡತಕ್ಕದ್ದು; ಮತ್ತು ಅದಕ್ಕೆ ಅವಶ್ಯಕವಾದ ಯಾವ ಮೊಬಲಗನ್ನಾದರೂ "ಚೆಕ್ಕು" ಮೂಲಕ ತೆಗೆದುಕೊಳ್ಳತಕ್ಕದ್ದು.

77. ಮೇಲೆ ಹೇಳಿದಂತೆ ಲೋಕಲ್ ಬೋರ್ಡುಗಳಿಂದ ವಸೂಲ್ಮಾಡಲ್ಪಟ್ಟ ಸಮಸ್ತ ಮೊಬಲಗುಗಳನ್ನು, ಸರ್ಕಾರದ ಖಜಾನೆಗೆ ಪೂರ್ತಿಯಾಗಿ ಪಾವತಿ ಮಾಡತಕ್ಕದ್ದು; ಮತ್ತು ಅವುಗಳ ಯಾವ ಭಾಗವನ್ನಾಗಲಿ ಖರ್ಚು ಬಗ್ಯೆ ಉಪಯೋಗಿಸತಕ್ಕದ್ದಲ್ಲ.

ವಿಧಿಸಲ್ಪಟ್ಟ ಮುಖ್ಯ ವಗೈರೆ ಬಾಬುಗಳನ್ನು ಬದಲಾಯಿಸತಕ್ಕದ್ದಲ್ಲ.

78. ಕಂಟ್ರೋಲರವರ ಅಪ್ಪಣೆ ವಿನಾ ವಿಧಾಯಕವಾದ (ಎ) ಪರಿಶಿಷ್ಟದಲ್ಲಿ ನಮೂದಿಸಿರುವ ಮುಖ್ಯ, ಒಳ, ಮತ್ತು ವಿವರವಾದ ಬಾಬುಗಳಲ್ಲಿ ಯಾವ ಬದಲಾವಣೆಯನ್ನೂ ಮಾಡತಕ್ಕದ್ದಲ್ಲ.

ತಲಬುಗಳು ವೇತನಗಳು ಮುಂತಾದವು.

79. ಸಮಸ್ತ ಆಫೀಸರುಗಳ ತಲಬುಗಳು ಮತ್ತು ವೇತನಗಳು, ಶಿಬ್ಬಂದಿಗಳ ಸಂಬಳವು, ಮತ್ತು ಅವರ ರಜಾಕಾಲದ ವೇತನಗಳು, ಪ್ರಯಾಣದ ಭತ್ಯಗಳು, ಪೆನ್ಷನ್‌ಗಳು, ಗ್ರಾಟ್ಯುಯಿಟಿಗಳು—ಇವುಗಳು, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ಪ್ರಕಾರ ಮತ್ತು ಸರ್ಕಾರದ ವಿಶೇಷ ಹುಕುಂಗಳು ಯಾವದಾದರೂ ಇದ್ದ ಪಕ್ಷದಲ್ಲಿ ಅವುಗಳ ಪ್ರಕಾರ ಗೊತ್ತು ಮಾಡಲ್ಪಡುವವು.

ಹಣದ ದಸ್ತು ವಗೈರೆ.

80. 'ಹಣದ ದಸ್ತುಗಳ,' 'ಅಳಿಸುವಿಕೆಗಳ' ಮತ್ತು 'ಹೆಚ್ಚು ಖರ್ಚುಗಳ' ವಿಷಯಗಳಲ್ಲಿ ಸಿವಿಲ್ ಅಕೌಂಟ್‌ಕೋಡ್ I ನೆಯ ಸಂಪುಟದಲ್ಲಿರುವ 20, 21, ಮತ್ತು 13 ನೆಯ ಪ್ರಕರಣಗಳಲ್ಲಿರುವ ನಿಬಂಧನೆಗಳ ಪ್ರಕಾರ ಆಚರಿಸತಕ್ಕದ್ದು.

ಜಮೆಗಳು.

ಮೊಬಲಗುಗಳನ್ನು ಚಲನುಗಳೊಡನೆ ಪಾವತಿ ಮಾಡತಕ್ಕದ್ದು.

81. ಅಧಿಕಾರ ಪಡೆದ ಲೋಕಲ್ ಬೋರ್ಡಿನ ನೌಕರರಿಂದ ವಸೂಲ್ಮಾಡಲ್ಪಟ್ಟ ಸಮಸ್ತ ಮೊಬಲಗುಗಳನ್ನು ಮತ್ತು ಯಾವ ಮನುಷ್ಯನಿಂದಾಗಲಿ ಬೋರ್ಡಿಗೆ ಬರಬೇಕಾದ ಮೊಬಲಗುಗಳನ್ನು (1 ನೆಯ ನಮೂನೆ) ಮೂರು ಪ್ರತಿಯುಳ್ಳ ಚಲನ್‌ನೊಡನೆ ಆಯಾ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಖಜಾನೆಗಳಿಗೆ ಸಂಗಡಲೆ ಪಾವತಿ ಮಾಡತಕ್ಕದ್ದು. ಸಂದರ್ಭಾನುಸಾರವಾಗಿ ಡಿಸ್ಟ್ರಿಕ್ಟ್ ಅಥವಾ ಸಬ್ ಟ್ರೆಜರಿ ಆಫೀಸರು ಒಂದನೆಯ ಪ್ರತಿಯನ್ನು ಅವರಲ್ಲಿಯೇ ಇಟ್ಟುಕೊಂಡು ಎರಡನೆಯ ಪ್ರತಿಯನ್ನು ಅದು ತಲಪಿದ ದಿನವೇ ಡಿಸ್ಟ್ರಿಕ್ಟ್ ಬೋರ್ಡಿಗೆ ಕಳುಹಿಸತಕ್ಕದ್ದು, ಮತ್ತು ಮೂರನೆಯ ಪ್ರತಿಯನ್ನು ಹಣ ಪಾವತಿ ಮಾಡುವವನಿಗೆ ಕೊಡತಕ್ಕದ್ದು.

ಮ್ಯುನಿಸಿಪಲ್ ಚೆಕ್ಕುಗಳು.

82. ಡಿಸ್ಟ್ರಿಕ್ಟ್ ಆಫೀಸಿನ ಶಿಬ್ಬಂದಿಯ ಖರ್ಚು ಬಗ್ಯೆ ಮತ್ತು ಸಾದಿಲ್ವಾರ್ ಖರ್ಚು ಬಗ್ಯೆ ಮ್ಯುನಿಸಿಪಾಲಿಟಿಗಳಿಂದ ಬರಬೇಕಾದ ಕಂಟ್ರಿಬ್ಯೂಷನಿಗಾಗಿ ಬಂದ ಮ್ಯುನಿಸಿಪಲ್ ಚೆಕ್ಕುಗಳು, ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರಿಂದ ಕ್ರಮವಾಗಿ ಇಂಡಾರ್ಸ್ ಮಾಡಲ್ಪಟ್ಟು ವಸೂಲಿಯಿಂದ ಡಿಸ್ಟ್ರಿಕ್ಟ್ ಫಂಡಿಗೆ ಜಮಾ ಆಗಲು ವಿಧಾಯಕವಾದ ಚಲನ್ನೊಡನೆ ಡಿಸ್ಟ್ರಿಕ್ಟ್ ಖಜಾನೆಗೆ ಕಳುಹಿಸಲ್ಪಡತಕ್ಕದ್ದು.

ಲೋಕಲ್ ಸೆಸ್ಸನ್ನು ಜಮಾ ಕಟ್ಟೋಣ ಮತ್ತು ಅದರ ವ್ಯವಸ್ಥೆ.

83. ಜಮೀನ್ ಕಂದಾಯ ಮತ್ತು ಇತರ ಬಾಬುಗಳ ಮೇಲೆ ರೆವಿನ್ಯೂ ಇಲಾಖೆಯವರಿಂದ ವಸೂಲ್ ಮಾಡಲ್ಪಟ್ಟ ಒಂದಾಣೆ ಲೋಕಲ್ ಸೆಸ್ಸು ಇದುವರೆಗೆ ಜಾರಿಯಲ್ಲಿರುವಂತೆಯೇ ಮುಂದೆಯೂ ರೆವಿನ್ಯೂ ಮತ್ತು ಖಜಾನೆ ಲೆಕ್ಕಗಳಲ್ಲಿ ಜಮೆ ಕಟ್ಟಲ್ಪಡತಕ್ಕದ್ದು. ಆದರೆ ಪ್ರತಿ ಮಾಹೆಯ ಆಖೈರ್ ದಿವಸದಲ್ಲಿ ಡಿಸ್ಟ್ರಿಕ್ಟ್ ಲೆಕ್ಕಗಳು ತಯಾರ್ ಮಾಡಲ್ಪಡುವಾಗ ಸೆಸ್ ಮೊಬಲಗನ್ನು ಖಜಾನೆಯ ಲೆಕ್ಕಗಳಲ್ಲಿ ಈ ಕೆಳಗೆ ನಮೂದಿಸಿರುವಂತೆ ವ್ಯವಸ್ಥೆ ಪಡಿಸತಕ್ಕದ್ದು.

ಖರ್ಚು.	ಜಮಾ.
ಲೋಕಲ್ ಸೆಸ್ —	ಡಿಸ್ಟ್ರಿಕ್ಟ್ ಫಂಡ್ —
(1) ಡಿಸ್ಟ್ರಿಕ್ಟ್ ಫಂಡಿಗೆ ಕೊಡತಕ್ಕ ಭಾಗ ...	(1) ಲೋಕಲ್ ಸೆಸ್ಸಿನಿಂದ ಜಮಾ ಆದ ಭಾಗ
(2) ಲೋಕಲ್ ಫಂಡ್ ಜನರಲ್ಲಿಗೆ ಕೊಡತಕ್ಕ ಭಾಗ ...	(2) ಲೋಕಲ್‌ಫಂಡ್ಸ್ ಜನರಲ್ ಲೋಕಲ್ ಸೆಸ್ಸಿನಿಂದ ಜಮಾ ಆದ ಭಾಗ
(3) ಗ್ರಾಮ ಪಾಠಶಾಲೆಗಳ ಫಂಡಿಗೆ ಕೊಡತಕ್ಕ ಭಾಗ ...	(3) ಗ್ರಾಮ ಪಾಠಶಾಲೆಗಳ ಫಂಡ್ ಲೋಕಲ್ ಸೆಸ್ಸಿನಿಂದ ಜಮಾಬಂದ ಭಾಗ

ಷರಾ :— ಈ ಪ್ರಕಾರ ಡಿಸ್ಟ್ರಿಕ್ಟ್ ಫಂಡಿಗೆ ಮೊಬಲಗನ್ನು ಜಮಾ ಹಿಡಿದ ಬಗ್ಗೆ ಚಲನ್ನಾಗಲಿ ಅಥವಾ ವರ್ತಮಾನವಾಗಲಿ ಡಿಸ್ಟ್ರಿಕ್ಟ್ ಬೋರ್ಡಿನ ಆಫೀಸಿಗೆ ಕಳುಹಿಸಲ್ಪಡತಕ್ಕ ಅವಶ್ಯಕವಿಲ್ಲ : ಆದರೆ ಈ ಮೊಬಲಗನ್ನು ಪ್ಯಾಸ್ ಬುಕ್ಕಿನ ಜಮಾ ಕಡೆಯಲ್ಲಿ ಚಾಲ್ತಿ ಮಾಹೆಯಲ್ಲಿ ವಸೂಲಾದ ಜಮೀನು ಹುಟ್ಟುವಳಿ ವಸ್ತುಗಳ ಮೇಲೂ ಬಂದಾಜು ಸೆಸ್ಸಿನ ಶೇಕಡ 76ನೆಯ ಭಾಗವೆಂದು ಡಿಸ್ಟ್ರಿಕ್ಟ್ ಖಜಾನೆಯಲ್ಲಿ ಜಮಾ ಕಟ್ಟತಕ್ಕದ್ದು.

ನಗದಿ ಬುಕ್ಕು.

84. ಚಲನುಗಳೊಡನೆ ಖಜಾನೆಗೆ ಬಂದಿರುವುದಾಗಿ ತಿಳಿಯಬಂದಿರುವ ಸಮಸ್ತ ಮೊಬಲಗುಗಳನ್ನು ನಗದಿ ಬುಕ್ಕಿನ (2ನೆಯ ನಮೂನೆ) ಜಮಾಕಡೆಯಲ್ಲಿ ಬಜೆಟ್ಟಿನ ಸರಿಯಾದ ಮೆಸ್ತಕಗಳಲ್ಲಿ ದಾಖಲ್ ಮಾಡತಕ್ಕದ್ದು.

ಹುಟ್ಟುವಳಿಯ ಪ್ರತಿ ಬಾಬನ್ನೂ ಜಮೆ ತೆರತಕ್ಕದ್ದು.

85. ಹುಟ್ಟುವಳಿಯ ಪ್ರತಿ ಬಾಬೂ ಲೆಕ್ಕದಲ್ಲಿ ಸರಿಯಾಗಿ ಜಮಾ ಹಿಡಿಯಲ್ಪಡುವಂತೆ ರಿಪೋರ್ಟ್ ಮಾಡತಕ್ಕ ಜವಾಬ್ದಾರಿಯು ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿರುತ್ತದೆ. ಮತ್ತು ಈ ಬಗ್ಗೆ ಪ್ರತಿಯೊಂದು ಬಾಬಿಗೂ ಜಮಾಬಂದಿ, ವಸೂಲಿ ಮತ್ತು ಬಾಕಿಗಳನ್ನು ತೋರಿಸುವ ಬಂದು ಪ್ರತ್ಯೇಕ ರಿಜಿಸ್ಟರನ್ನು 3, ಮತ್ತು 3 (ಎ) ನಮೂನೆಗಳಂತೆ ಇಡತಕ್ಕದ್ದು. ಪ್ರತಿ ಮಾಹೆಂಸ್ಲಿಯೂ ತಾಲ್ಲೂಕು ಬೋರ್ಡುಗಳೂ ಇದೇ ನಮೂನೆಗಳಲ್ಲಿಯೇ ಜಮಾಬಂದಿ, ವಸೂಲಿ ಮತ್ತು ಬಾಕಿಗಳನ್ನು ತೋರಿಸುವ ಬಂದು ತಃಖ್ತೆಯನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಕಳುಹಿಸತಕ್ಕದ್ದು.

ಕ್ರಮವಾದ ಲೆಕ್ಕಗಳನ್ನು ಇಡೋಣ ವಾಗೈರೆ.

86. ತಾಲ್ಲೂಕ್ ಬೋರ್ಡುಗಳ ನೌಕರರು ಜಮಾಬಂದಿಗೂ ಮತ್ತು ತಮ್ಮಿಂದ ಮಾಡಲ್ಪಟ್ಟ ಹುಟ್ಟುವಳಿಯ ವಸೂಲಿಗೂ ಕ್ರಮವಾದ ಲೆಕ್ಕಗಳನ್ನು ಇಟ್ಟಿರುವಂತೆಯೂ, ಸದರಿ ವಸೂಲಾತಿಗಳು ಕ್ರಮವಾಗಿ ಖಜಾನೆಗೆ ಆರಸಲ್ಮಾಡಲ್ಪಟ್ಟು, ಆ ಬಗ್ಗೆ ಖಜಾನೆಯಿಂದ ರಶೀತಿ ಪಡೆಯುವಂತೆಯೂ ನೋಡಿಕೊಳ್ಳುವುದು ತಾಲ್ಲೂಕ್ ಬೋರ್ಡಿನ ಕರ್ತವ್ಯವಾಗಿರುತ್ತದೆ.

ಖರ್ಚು

ಮುಖ್ಯ ಖರ್ಚಿನ ಬಾಬುಗಳು.

87. ಮರಾಮತ್ತು ಇಲಾಖೆಯಿಂದ ಆದ ಕೆಲಸಗಳ ಖರ್ಚುಗಳುವಿನಾ ಇತರ ಖರ್ಚು ಮುಖ್ಯವಾಗಿ ಈ ಕೆಳಗೆ ನಮೂದಿಸಿರುವ ಬಾಬುಗಳಿಗೆ ಸೇರಿ ಇರುತ್ತದೆ.

(ಎ) ಸಿಬ್ಬಂದಿಗಳ ಸಂಬಳಗಳು.

ಇವುಗಳಿಗೆ 4ನೆಯ ನಮೂನೆಯ ಮೇಲೆ ಹಣ ತೆಗದುಕೊಂಡು ಸಿವಿಲ್ ಅಕೌಂಟ್ ಕೋಡ್ 1ನೆಯ ಅಧ್ಯಾಯದ ನಿಬಂಧನೆಗಳ ಪ್ರಕಾರ ಬಟವಾಡೆ ಮಾಡತಕ್ಕದ್ದು.

(ಬಿ) ಸಿಬ್ಬಂದಿಗಳ ಮತ್ತು ಸರ್ಕಾರಿ ನೌಕರರಲ್ಲದ ಮೆಂಬರುಗಳ ಪ್ರಯಾಣದ ಭತ್ಯ.

ಪ್ರಯಾಣದ ಭತ್ಯಗಳಿಗೆ 5ನೆಯ ನಮೂನೆಯಲ್ಲಿ ಪಟ್ಟಿಗಳನ್ನು ತಯಾರ್ ಮಾಡಿ ಕಳುಹಿಸತಕ್ಕದ್ದು, ಮತ್ತು ಕಂಟ್ರೋಲರವರಿಂದ ವಿಮರ್ಶಿಸಲ್ಪಟ್ಟಮೇಲೆ ಅವುಗಳಿಗೆ ಹಣ ಕೊಡತಕ್ಕದ್ದು.

(ಸಿ) ಸಾದಿಲ್ವಾರ್ ಖರ್ಚುಗಳು.

ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನ ಸಾದಿಲ್ವಾರ್ ಖರ್ಚಿನ ಮೊಬಲಗುಗಳನ್ನು (6 ಮತ್ತು 7ನೆಯ ನಮೂನೆಗಳು) ಪ್ರಥಮತಃ "ಸಂಕ್ಷೇಪ ಸಾದಿಲ್ವಾರ್ ಪಟ್ಟಿಗಳ" ಮೇಲೆ ತೆಗದುಕೊಂಡು, ಕೊನೆಯಲ್ಲಿ ಸಿವಿಲ್ ಅಕೌಂಟ್ ಕೋಡಿನ ನಿಬಂಧನೆಗಳ ಮೇಲೆ "ವಿವರವಾದ ಸಾದಿಲ್ವಾರ್ ಪಟ್ಟಿಗಳ" ಮೇಲೆ ವ್ಯವಸ್ಥೆ ಮಾಡತಕ್ಕದ್ದು. ತಾಲ್ಲೂಕ್ ಬೋರ್ಡಿನ ಸಾದಿಲ್ವಾರ್ ಖರ್ಚಿನ ಮೊಬಲಗುಗಳನ್ನು ಹಾಲಿ ಇರುವಂತೆಯೇ 8ನೆಯ ನಮೂನೆಯ ಮೇಲೆ ತೆಗದುಕೊಳ್ಳತಕ್ಕದ್ದು.

(ಡಿ) ಡಿಸ್ಟ್ರಿಕ್ಟ್ ಬೋರ್ಡ್ ಮೂಲಕ ನಡಿಸಲ್ಪಟ್ಟ ಕೆಲಸಗಳು—

ಕೆಲಸಗಳನ್ನು ಡಿಸ್ಟ್ರಿಕ್ಟ್ ಬೋರ್ಡುಗಳ ಮೂಲಕ ನಡಿಸೋಣ.

ಡಿಸ್ಟ್ರಿಕ್ಟ್ ಬೋರ್ಡುಗಳ ಮೂಲಕ ಜರುಗುವ ಕೆಲಸಗಳನ್ನು ನಡಿಸತಕ್ಕದ್ದು.

88. ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಅನುಕೂಲಿಸದಷ್ಟು ಕಸಬುದಾರಿ ಕುಶಲತೆಯು ಬೇಕಾಗಿರುವ ಸಮಸ್ತ ಕೆಲಸಗಳು, ಇತರ ವಿಧವಾಗಿ ಹುಕುಂ ಕೊಟ್ಟ ಸಂದರ್ಭಗಳಲ್ಲಿ ವಿನಾ, ಯಾವಾಗಲೂ ಮರಾಮತ್ತು ಇಲಾಖೆಯಿಂದ ನಡೆಸಲ್ಪಡತಕ್ಕದ್ದು. ಅಂತಹ ಕುಶಲತೆಯು ಬೇಕಾಗಿಲ್ಲದ ಕೆಲಸಗಳೆಲ್ಲವೂ ಡಿಸ್ಟ್ರಿಕ್ಟ್ ಬೋರ್ಡುಗಳ ಮೂಲಕವಾಗಿಯೇ ನಡೆಸಲ್ಪಡತಕ್ಕದ್ದು. ಡಿಸ್ಟ್ರಿಕ್ಟ್ ಬೋರ್ಡುಗಳ ಮೇಲ್ವಿಚಾರಣೆಯಲ್ಲಿ ನಡಿಸಲ್ಪಡತಕ್ಕ ಕೆಲಸಗಳೆಲ್ಲವೂ ಸಾಧ್ಯವಾದ ಮಟ್ಟಿಗೂ ಗುತ್ತಿಗೆಯ ಮೂಲಕ ನಡಿಸಲ್ಪಡತಕ್ಕದ್ದು.

ಕೆಲಸಗಳಿಗೆ ಅಂದಾಜುಗಳು.

89. ಯಾವದಾದರೂ ಹೊಸ ಕೆಲಸ ಅಥವಾ ರಿಪೇರಿಯು ಪ್ರಾರಂಭಿಸಲ್ಪಡುವುದಕ್ಕೆ ಮುಂಚೆ ಒಂದು ಕ್ರಮವಾದ ವಿವರಗಳುಳ್ಳ ಅಂದಾಜು ತಯಾರ್ ಮಾಡಲ್ಪಟ್ಟು, ಸರಿಯಾದ ಅಧಿಕಾರಿಯಿಂದ ಮಂಜೂರ್ ಮಾಡಲ್ಪಡತಕ್ಕದ್ದು. ಮತ್ತು ವಿಶೇಷ ಸಂದರ್ಭಗಳಲ್ಲಿವಿನಾ, ಮಂಜೂರ್ ಮಾಡಲ್ಪಡದ ಅಂದಾಜು ಇಲ್ಲದೆ ಯಾವ ಕೆಲಸವೂ ಪ್ರಾರಂಭಿಸಲ್ಪಡತಕ್ಕದ್ದಲ್ಲ.

ಕಸಬುದಾರನ ಅಭಿಪ್ರಾಯ.

90. ಯಾವದಾದರೂ ಅಂದಾಜು ಮಂಜೂರ್ ಮಾಡಲ್ಪಡುವುದಕ್ಕೆ ಮುಂಚೆ ಆ ಕೆಲಸದ ವಿಷಯದಲ್ಲಿ ಕಸಬುದಾರನ ಅಭಿಪ್ರಾಯವು ಅವಶ್ಯವೆಂದು ತೋರಿದಲ್ಲಿ, ಮಂಜೂರ್ ಮಾಡತಕ್ಕ ಅಧಿಕಾರಿಯು ಮರಾಮತ್ತು ಇಲಾಖೆಯ ಒಬ್ಬ ಅಧಿಕಾರಿಯಿಂದ ಅದನ್ನು ತರಿಸಿಕೊಳ್ಳಬಹುದು.

ದರಗಳ ಪಟ್ಟಿಯು ಇಡಲ್ಪಡತಕ್ಕದ್ದು.

91. ಅಂದಾಜುಗಳನ್ನು ತಯಾರ್ ಮಾಡುವುದಕ್ಕೆ ಅನುಕೂಲಿಸುವದಕ್ಕಾಗಿ ಸಾಮಾನ್ಯವಾಗಿ ನಡೆಸತಕ್ಕ ಪ್ರತಿ ತರದ ಕೆಲಸದ ದರವನ್ನು ತೋರಿಸುವ ಪಟ್ಟಿಯು ಪ್ರತಿ ಡಿಸ್ಟ್ರಿಕ್ಟ್ ಬೋರ್ಡಿನ ಆಫೀಸಿನಲ್ಲಿ ಇಡಲ್ಪಡತಕ್ಕದ್ದು. ಸದರಿ ಪಟ್ಟಿಯು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳ ಸಂಗದಲ್ಲಿ ಮಂಜೂರ್ ಮಾಡಲ್ಪಟ್ಟು ತತ್ಕಾಲದವರೆಗೆ ತಿದ್ದುಪಾಟು ಮಾಡಲ್ಪಟ್ಟು ಇಡಲ್ಪಡತಕ್ಕದ್ದು.

ಪುನರ್ವಿಮರ್ಶೆಯಾದ ಅಂದಾಜುಗಳು.

92. ದರಗಳು ಕಮ್ಮಿಯೆಂದು ಕಂಡುಬಂದ ಸಬಬಿನಿಂದಾಗಲಿ ಅಥವಾ ಮತ್ತ್ಯಾವ ಇತರ ಕಾರಣಗಳಿಂದಾಗಲಿ ಮೊದಲಿನ ಅಂದಾಜು ಮೀರಲ್ಪಡತಕ್ಕ ಸಂದರ್ಭದಲ್ಲಿ ಪುನರ್ವಿಮರ್ಶೆಯಿಂದ ಒಂದು ಅಂದಾಜ ತಯಾರ್ ಮಾಡಲ್ಪಟ್ಟು ಮಂಜೂರ್ ಮಾಡಲ್ಪಡತಕ್ಕದ್ದು.

ಮಂಜೂರ್ ಮಾಡಲ್ಪಟ್ಟ ಕೆಲಸಗಳನ್ನು ಮುಂಚಿನ ವರ್ಷದಲ್ಲಿ ನಡೆಸಬಹುದು.

93. ಒಂದು ಸಾಲಿನಲ್ಲಿ ಅಂದಾಜು ಮಂಜೂರ್ ಮಾಡಲ್ಪಟ್ಟ ಕೆಲಸಗಳನ್ನು ಪುನಃ ಮಂಜೂರಾತಿಯನ್ನು ಹೊಂದದೆ ಮುಂದಿನ ವರ್ಷದಲ್ಲಿ ನಡೆಸಬಹುದು. ಆದರೆ ಆಗವಡುಮಾತ್ರ ಯಾವ ಸಾಲಿನಲ್ಲಿ ಕೆಲಸವು ನಡೆದು ಹಣ ಬಟವಾಡೆ ಯಾಗುತ್ತದೆಯೋ ಅದೇ ಸಾಲಿನ ಬಡ್ಜೆಟ್ಟು ಹಣದಿಂದ ವ್ಯವಸ್ಥೆ ಯಾಗತಕ್ಕದ್ದು.

ಎರಡು ವರುಷಗಳು ಕಳೆದ ತರುವಾಯ ಹೊಸ ಅಂದಾಜುಗಳು ಅವಶ್ಯ.

94. ಅಂದಾಜುಗಳು ಮಂಜೂರ್ ಮಾಡಲ್ಪಟ್ಟಿರುವ ಕೆಲಸಗಳು ಮಂಜೂರಾದ ತಾರೀಖಿನಿಂದ ಎರಡು ವರ್ಷಗಳೊಳಗಾಗಿ ಪ್ರಾರಂಭಿಸಲ್ಪಡದೆ ಇದ್ದ ಪಕ್ಷದಲ್ಲಿ, ಹೊಸ ಅಂದಾಜುಗಳು ತಯಾರ್ ಮಾಡಲ್ಪಟ್ಟು ಕೆಲಸ ಪ್ರಾರಂಭಿಸಲ್ಪಡದೆ ಇದ್ದುದಕ್ಕೆ ಸಬಬಿನೊಡನೆ ಮಂಜೂರಾತಿ ಬಗ್ಗೆ ಕಳುಹಿಸಲ್ಪಡತಕ್ಕದ್ದು.

ಮುಗಿಯದೇ ಇರುವ ಕೆಲಸಗಳನ್ನು ಮೊದಲು ನಡೆಸತಕ್ಕದ್ದು.

95. ಪ್ರಾರಂಭಿಸಲ್ಪಡದೆ ಇರುವ ಕೆಲಸಗಳನ್ನು ನಡೆಸುವುದಕ್ಕೆ ಮುಂಚೆ ಮುಗಿಯದೇ ಇರುವ ಕೆಲಸಗಳನ್ನು ನಡೆಸತಕ್ಕದ್ದು.

ಗುತ್ತಿಗೆಗೆ ಕೊಟ್ಟ ಕೆಲಸಗಳಿಗೆ ಕರಾರುಗಳು.

96. ಗುತ್ತಿಗೆಗೆ ಕೊಟ್ಟಿರುವ 20 ರೂಪಾಯಿಗಳಿಗೆ ಮೀರಿ ಮುಟ್ಟುವ ಪ್ರತಿ ಕೆಲಸಕ್ಕೂ ಛಾಪಾಕಾಗದದಲ್ಲಿ ಕರಾರು ಬರೆಸಿಕೊಳ್ಳತಕ್ಕದ್ದು.

ಕೆಲಸಗಳಿಗೆ ಹಣ ಕೊಡುವುದು.

97. ಆದ ಕೆಲಸಗಳಿಗೆ ಅವಶ್ಯಕವಾದಹಾಗೆಲ್ಲಾ ಇಂಪ್ರೆಸ್ಟಿಯಾನೆ ಶೇವಕಾತಿ ಮೊಬಲಗಿನಿಂದ ಹಣ ಕೊಡತಕ್ಕದ್ದು. ಮತ್ತು ತಿಂಗಳಿಗೆ ಒಂದಾವರ್ತಿ ಅಥವಾ ಅವಶ್ಯಕವಿದ್ದಲ್ಲಿ ಇನ್ನೂ ಹೆಚ್ಚು ಸಲ ಪ್ರತಿ ಕೆಲಸಕ್ಕೂ 9ನೆಯ ನಮೂನೆಯಲ್ಲಿ ಒಂದು (ಬಿಲ್) ಪಟ್ಟಿಯನ್ನು ಅದಕ್ಕೆ ಆಧಾರವಾಗಿ ಹಣ ತೆಗದುಕೊಂಡವನ ರಶೀತಿ (10ನೆಯ ನಮೂನೆ) ಸಹಿತ ಡಿಸ್ಟ್ರಿಕ್ಟ್ ಬೋರ್ಡಿಗೆ ಕಳುಹಿಸತಕ್ಕದ್ದು.

ಆಖೈರ್ (ಬಿಲ್) ಖರ್ಚು ಪಟ್ಟಿ.

98. ಕೆಲಸವು ಪೂರೈಸಿದ ಕೂಡಲೆ ಕ್ರಮವಾಗಿ ರುಜು ಮಾಡಲ್ಪಟ್ಟ ವಿಧಾಯಕವಾದ ಸರ್ಟಿಫಿಕೇಟ್‌ಯಾನೆ ಪ್ರಮಾಣ ಪತ್ರಿಕೆಗಳೊಡನೆ 11ನೆಯ ನಮೂನೆಯಲ್ಲಿ ಒಂದು ಆಖೈರ್ (ಬಿಲ್) ಖರ್ಚು ಪಟ್ಟಿಯನ್ನು ಕಳುಹಿಸತಕ್ಕದ್ದು.

ಕೆಲಸನಡೆದುದಕ್ಕೆ ಮಾಹೇವಾರಿ ರಿಪೋರ್ಟು.

99. ಕೆಲಸಗಳು ನಡೆದುದಕ್ಕೆ ಮಾಹೆವಾರಾ ರಿಪೋರ್ಟನ್ನು ಮುಂದಲ ತಿಂಗಳ 20ನೆಯ ತಾರೀಖಿನ ದಿನ ಅಥವಾ ಅದಕ್ಕೆ ಮುಂಚಿತವಾಗಿಯೇ 12ನೆಯ ನಮೂನೆಯಲ್ಲಿ ಗವರ್ನ್ಮೆಂಟಿಗೆ ಕಳುಹಿಸತಕ್ಕದ್ದು; ಇದು ವಿಮರ್ಶಿಸಲ್ಪಟ್ಟು ಡಿಸ್ಟ್ರಿಕ್ಟ್ ಬೋರ್ಡಿಗೂ ಮತ್ತು ಕಂಟ್ರೋಲರವರಿಗೂ ಕಳುಹಿಸಲ್ಪಡತಕ್ಕದ್ದು.

100. 138ನೆಯ ನಿಬಂಧನೆಯಲ್ಲಿ ವಿವರಿಸಿರುವ ಕೆಲಸಗಳಿಗೆ ಡಿಸ್ಟ್ರಿಕ್ಟು ಬೋರ್ಡಿನಿಂದ ಕೊಡಲ್ಪಟ್ಟ ಮಂಜೂರಾತಿಗಳ ತಃಖ್ತೆಯನ್ನು ಪ್ರತಿ ತಿಂಗಳು ಮುಗಿದ ನಂತರ ಕೂಡಿದವಟ್ಟಿಗೂ ಜಾಗ್ರತೆಯಾಗಿ 13ನೆಯ ನಮೂನೆಯಲ್ಲಿ ಗವರ್ನ್ಮೆಂಟಿಗೆ ಕಳುಹಿಸತಕ್ಕದ್ದು. ಮತ್ತು ಅದರ ಪ್ರತಿಯನ್ನು ಅದೇಕಾಲದಲ್ಲಿ ಕಂಟ್ರೋಲರವರಿಗೆ ಕಳುಹಿಸತಕ್ಕದ್ದು.

ಮಂಜೂರಾತಿಗಳ ತಃಖ್ತೆ.

ಹಣ ಕೊಡೋಣ.

101. ಪ್ರತಿಯೊಂದು ಖರ್ಚು ಪಟ್ಟಿಯು (ಬಿಲ್) ಅಥವಾ ಹಣ ಪಾವತಿ ವಿಷಯದಲ್ಲಿ ಬರುವ ಪಕ್ಷಿನ ಅರ್ಜಿಯು ಪ್ರಸಿಡೆಂಟರ ಬಳಿಗೆ ಕಳುಹಿಸಲ್ಪಡತಕ್ಕದ್ದು. ಅವರು ಅದನ್ನು ತಾಳೆನೋಡಿ ಪರೀಕ್ಷೆಮಾಡಿ ಸರಿಯಾಗಿದ್ದಪಕ್ಷದಲ್ಲಿ ಹಣ ಪಾವತಿಯಾಗತಕ್ಕಬಗ್ಗೆ ಅವರ ದಸ್ತಖತ್ತುಸಿಸಿ ಹುಕುಂ ಕೊಡತಕ್ಕದ್ದು. ಮೊಬಲಗು (Permanent advance) ಖಾಯಂ ಮುಂಗಡದಿಂದ ಕೊಡತಕ್ಕದ್ದಾಗಿದ್ದಪಕ್ಷದಲ್ಲಿ "ನಗದಾಗಿ ಕೊಡತಕ್ಕದ್ದು" ಎಂದು ಹಣ ಕೊಡುವ್ರದ ಕ್ಕೆ ಅಪ್ಪಣೆ ಕೊಡತಕ್ಕದ್ದು. ಚೆಕ್ಕಿನ ಮೂಲಕ ಕೊಡತಕ್ಕದ್ದಾಗಿದ್ದಪಕ್ಷದಲ್ಲಿ "ಚೆಕ್ಕಿನ ಮೂಲಕ ಕೊಡತಕ್ಕದ್ದು" ಎಂದು ಹುಕುಂ ಇರತಕ್ಕದ್ದು. ಚೆಕ್ಕು ದಸ್ತಖತು ಮಾಡಲ್ಪಡುವಾಗ ಅದರ ಸಂಖ್ಯೆಯನ್ನು ಮತ್ತು ತಾರೀಖನ್ನು ನಮೂದು ಮಾಡತಕ್ಕದ್ದು.

ಖರ್ಚು ಪಟ್ಟಿ (ಬಿಲ್)ಗಳ ಮತ್ತು ಪಕ್ಷಿನ ಅರ್ಜಿಗಳ ವಿಷಯದಲ್ಲಿ ನಡೆಸತಕ್ಕ ಕ್ರಮ.

102. ಚೆಕ್ಕಿನ ಮೂಲಕ ಮಾಡತಕ್ಕ ಸಂದಾಯಗಳನ್ನೆಲ್ಲ ನಗದಿ ಬುಕ್ಕಿನಲ್ಲಿ ಖರ್ಚು ಕಡೆಯಲ್ಲಿ ಜಮಾಖರ್ಚುಅಂದಾಜ ತಃಖ್ತೆಯು (Budget) ಒಂದು ಮೊಸ್ತಕಿನಲ್ಲಿ ಬರೆಯತಕ್ಕದ್ದು, ಅವುಗಳ ದಾಖಲೆಗಳಿಗೆ ಮಾಹೆಯಾನಾ ಅನುಕ್ರಮ ಸಂಖ್ಯೆಗಳನ್ನು ಕೊಡತಕ್ಕದ್ದು.

ಚೆಕ್ಕು ಮೂಲಕ ಸಂದಾಯವಾಗತಕ್ಕ ಮೊಬಲಗುಗಳನ್ನು ನಗದಿ ಬುಕ್ಕಿನಲ್ಲಿ ದಾಖಲ್ಮಾಡತಕ್ಕದ್ದು.

103. ಖಾಯಂ ಮುಂಗಡದ ಮೊಬಲಗಿಗಾಗಲಿ ಅಥವಾ ಠೇವಣಿ (ಇಂಪ್ರೆಸ್ಟ್) ಹಣಕ್ಕಾಗಲಿ ಮಾಹೆ ಆಖೈರ್ ದಿನ ಭರ್ತಿ ಹಾಕಿಕೊಳ್ಳುವುದಕ್ಕೆ ವಿನಾ 10 ರೂಪಾಯಿಗಳಿಗೆ ಕಡಮೆಯಾದುದಕ್ಕೆ ಯಾವ ಚೆಕ್ಕು ಬರೆದುಕೊಡಲ್ಪಡತಕ್ಕದ್ದಲ್ಲ. 10 ರೂಪಾಯಿಗಳಿಗೆ ಕಡಮೆಯಾದ ಸಮಸ್ತ ಸಂದಾಯಗಳೂ ನಗದಾಗಿರತಕ್ಕದ್ದು. ಚೆಕ್ಕುಗಳನ್ನು ತಯಾರ್ಮಾಡುವುದರಲ್ಲಿ ಸಿವಿಲ್ ಅಕೌಂಟ್ ಕೋಡ್ I ನೆಯ ಸಂಪುಟದ 17ನೆಯ ಪ್ರಕರಣದಲ್ಲಿ ಕೊಟ್ಟಿರುವ ಸಾಮಾನ್ಯ ನಿಯಮಗಳನ್ನು ಅನುಸರಿಸತಕ್ಕದ್ದು.

ಸಾಮಾನ್ಯವಾಗಿ ಚೆಕ್ಕು 10 ರೂಪಾಯಿಗಳಿಗಿಂತ ಕಮ್ಮಿ ಮೊಬಲಗುಗಳಿಗೆ ಕೊಡಲ್ಪಡತಕ್ಕದ್ದಲ್ಲ.

104. ಸಮಸ್ತ ಚೆಕ್ಕುಗಳನ್ನು ಡಿಸ್ಟ್ರಿಕ್ಟು ಬೋರ್ಡಿನ ಪ್ರೆಸಿಡೆಂಟರು ದಸ್ತಖತ್ ಮಾಡತಕ್ಕದ್ದು. ಮತ್ತು ಯಾವನಾದರೂ ಒಬ್ಬ ಸರ್ಕಾರದ ಉದ್ಯೋಗದಾರನ ಹೆಸರಿನಲ್ಲಿ ಸಂದಾಯವಾಗತಕ್ಕ ಚೆಕ್ಕುಗಳನ್ನು ಹುಕುಂನಮೇಲೆ ಮಾತ್ರವೇ ಸಂದಾಯವಾಗತಕ್ಕದ್ದೆಂದು ಕೊಡತಕ್ಕದ್ದು, ಮತ್ತ್ಯಾವನಿಗಾದರೂ ಕೊಡತಕ್ಕವುಗಳನ್ನು ಚೆಕ್ಕನ್ನು ತರುವವನಿಗೆ ಹಣ ಸಂದಾಯವಾಗುವಂತೆ ಮಾಡತಕ್ಕದ್ದು.

ಚೆಕ್ಕುಗಳಿಗೆ ದಸ್ತಖತ್ ಮತ್ತು ಅವುಗಳ ನಮೂನೆ.

105. ಒಂದು ಚೆಕ್ಕು ರದ್ದು ಮಾಡಲ್ಪಟ್ಟಾಗ ಅದರಲ್ಲಿ ಕಂಡ ಮೊಬಲಗು ನಗದಿ ಬುಕ್ಕಿನಲ್ಲಿ ಮೊದಲುಲೆಕ್ಕದ ಯಾವ ಮೊಸ್ತಕಿನಲ್ಲಿ ಖರ್ಚು ತೋರಿಸಲ್ಪಟ್ಟಿತ್ತೋ ಅದೇ ಮೊಸ್ತಕಿನಲ್ಲಿ ಕಮ್ಮಿ ಹಾಕುವುದರ ಮೂಲಕ ಖರ್ಚಿನಿಂದ ವಜಾ ಮಾಡಲ್ಪಡತಕ್ಕದ್ದು. ರದ್ದು ಮಾಡಲ್ಪಟ್ಟ ಚೆಕ್ಕುಗಳನ್ನು ಮಾಹೆಯಾನಾ ಲೆಖ್ಖಗಳೊಡನೆ ಕಂಟ್ರೋಲರವರಿಗೆ ಕಳುಹಿಸತಕ್ಕದ್ದು.

ಚೆಕ್ಕು ರದ್ದಾದಾಗ ನಡೆಸತಕ್ಕ ಕ್ರಮ.

106. ಚಿಲ್ಲರೆ ಮೊಬಲಗುಗಳ ಬಟವಾಡೆ ಬಗ್ಗೆ ಪ್ರೆಸಿಡೆಂಟರವರು ಒಂದು ಖಾಯಂಮುಂಗಡವನ್ನು (Permanent advance) ಪಡೆಯತಕ್ಕದ್ದು, ಮತ್ತು ಆ ಮುಂಗಡದಿಂದ ಕೊಡಲ್ಪಟ್ಟ ಚಿಲ್ಲರೆ ಸಂದಾಯಗಳಿಗಾಗಿ ಅವಶ್ಯಕವಿದ್ದಹಾಗೆಲ್ಲಾ ಚೆಕ್ಕು ಮೂಲಕ ಮೊಬಲಗನ್ನು ಭರ್ತಿಹಾಕತಕ್ಕದ್ದು. ಖಾಯಂಮುಂಗಡದಿಂದ ಖರ್ಚುಮಾಡಲ್ಪಟ್ಟ ಯಾವ ಮೊಬಲಗೇ ಆಗಲಿ ತಿಂಗಳಿನ ಕೊನೇದಿನ ಭರ್ತಿ ಮಾಡಲ್ಪಡದೆ ಇರತಕ್ಕದ್ದಲ್ಲ.

ಖಾಯಂಮುಂಗಡ ಮತ್ತು ಅದಕ್ಕೆ ಭರ್ತಿಹಾಕೋಣ.

107. ಖಾಯಂಮುಂಗಡದ ಲೆಕ್ಕವು 14ನೆಯ ನಮೂನೆಯಲ್ಲಿ ಪ್ರತ್ಯೇಕವಾಗಿ ಇಡಲ್ಪಡತಕ್ಕದ್ದು, ಮತ್ತು ದಿನೇ ದಿನೇ ಖರ್ಚು ಆದ ಹಾಗೆಲ್ಲಾ ಅದರಲ್ಲಿ ಬರೆಯಲ್ಪಟ್ಟ ಖರ್ಚನ್ನು ಖಾಯಂಮುಂಗಡಕ್ಕೆ ಭರ್ತಿ ಹಾಕಿದಾಗ ಒಟ್ಟುನಗದಿ ಬುಕ್ಕಿನಲ್ಲಿ ಆ ತಾರೀಖಿನಲ್ಲಿಯೇ ದಾಖಲ್ ಮಾಡತಕ್ಕದ್ದು.

ಖಾಯಂ ಮುಂಗಡಗಳ ರಿಜಿಸ್ಟರ್.

108. ಆದ ಕೆಲಸಗಳ ಭಾಗವಹುಗಳನ್ನು ಮತ್ತು ತಾಲ್ಲೂಕು ಬೋರ್ಡುಗಳೂ ಮತ್ತು ಯೂನಿಯನ್ ಪಂಚಾಯಿತಿಗಳೂ ಖರ್ಚು ಮಾಡಬಹುದೆಂದು ಅಪ್ಪಣೆಯಾಗಬಹುದಾದ ಸಾದಿಲ್ವಾರ್ ವಗೈರೆ ಚಿಲ್ಲರೆ ಖರ್ಚುಗಳಿಗೆ ಹಣವನ್ನು ಕೊಡತಕ್ಕ ಬಗ್ಗೆ ಖಾಯಂ ಮುಂಗಡಗಳಾಗಿ ಸ್ವಲ್ಪ ಮೊಬಲಗುಗಳನ್ನು ಪಡೆಯುವಂತೆ ಸದರಿ ಬೋರ್ಡುಗಳಿಗೆ ಮತ್ತು ಪಂಚಾಯಿತಿಗಳಿಗೆ ಡಿಸ್ಟ್ರಿಕ್ಟ್ ಬೋರ್ಡು ಅಧಿಕಾರವನ್ನು ಕೊಡಬಹುದು. 106ನೆಯ ನಿಬಂಧನೆಯಲ್ಲಿ ವಿಧಿಸಿರುವ ಮೇರೆ ಡಿಸ್ಟ್ರಿಕ್ಟು ಬೋರ್ಡಿನ ಪ್ರೆಸಿಡೆಂಟು ಈ ಮುಂಗಡಗಳನ್ನು ಭರ್ತಿ ಮಾಡಿಕೊಂಡು ಅದಕ್ಕೆ 107ನೆಯ ನಿಬಂಧನೆಯಲ್ಲಿ ಹೇಳಿರುವಂತೆ ಒಂದು ಪ್ರತ್ಯೇಕವಾದ ಲೆಕ್ಕವನ್ನು ಇಡತಕ್ಕದ್ದು.

ತಾಲ್ಲೂಕು ಬೋರ್ಡುಗಳಿಗೂ ಮತ್ತು ಪಂಚಾಯಿತಿಗಳಿಗೂ ಖಾಯಂ ಮುಂಗಡಗಳು.

109. ವೈದ್ಯಶಾಲೆಗಳಿಗಾಗಿ ಸಂಸ್ಥಾನದ ಫಂಡಿಗೆ ಕೊಡತಕ್ಕ ವಂತಿಗೆಗೋಸ್ಕರ ಅದಕ್ಕಾಗಿಯೇ ಜಮಾಖರ್ಚಿನ ಅಂದಾಜು ಪಟ್ಟಿಯ (ಬಜೆಟ್) ಲ್ಲಿ ಪ್ರತ್ಯೇಕವಾಗಿ ಇಟ್ಟಿರತಕ್ಕ ಮೊಬಲಗಿನಲ್ಲಿ ಹನ್ನೆರಡರಲ್ಲಿ ಒಂದು ಭಾಗಕ್ಕೆ ಒಂದು ಚೆಕ್ಕನ್ನು ಪ್ರತಿ ಮಾಹೆಯಲ್ಲಿಯೂ ಡಿಸ್ಟ್ರಿಕ್ಟ್ ಖಜಾನೆ ಆಫೀಸರವರ ಹೆಸರಿನಲ್ಲಿ ತಯಾರ್ ಮಾಡಿ ವೈದ್ಯ ಇಲಾಖೆಯ ಲೆಕ್ಕಕ್ಕೆ ಜಮೆ ಕಟ್ಟುವಂತೆ ಅವರಿಗೆ ಕಳುಹಿಸತಕ್ಕದ್ದು.

ವೈದ್ಯಶಾಲೆಗಳ ಬಗ್ಗೆ ಕೊಡತಕ್ಕ ಕಂಟ್ರಿಬ್ಯೂಷನ್ ಯಾನೆ ವಂತಿಗೆಯನ್ನು ಡ್ರಾಗೆ ಕೊಡತಕ್ಕದ್ದು.

110. ಮರಾಮತ್ತು ಇಲಾಖೆಯ ಮೂಲಕ ನಡೆಯಬೇಕಾದ ಕೆಲಸಗಳಿಗೋಸ್ಕರ ಜಮಾಖರ್ಚು ಅಂದಾಜು ಪಟ್ಟಿಯಲ್ಲಿ ಮಂಜೂರಾದ ಒಟ್ಟು ಮೊಬಲಗು ಆ ಇಲಾಖೆಗೆ ವರ್ಗಾಯಿಸಲ್ಪಡತಕ್ಕದ್ದು, ಮತ್ತು ಅದಕ್ಕೋಸ್ಕರ ಹಣಗಳನ್ನು ಈವರೆಗಿನಂತೆಯೇ ಲೆಟರ್ಸ್ ಆಫ್ ಕ್ರೆಡಿಟ್ (ಯಾನೆ ಜಮೆ ಕಾಗದಗಳ) ದ್ವಾರಾ ಕಂಟ್ರೋಲರವರಿಂದ ಪಡೆಯತಕ್ಕದ್ದು. ಈ ಕೆಲಸಗಳ ಲೆಕ್ಕಗಳನ್ನು ಪಬ್ಲಿಕ್ ವರ್ಕ್ಸ್ ಎಗ್ಸಾಮಿನರವರು ಇಟ್ಟು ಶೋಧಿಸಿ ವ್ಯವಸ್ಥೆ ಪಡಿಸತಕ್ಕದ್ದು, ಮತ್ತು ಕಂಟ್ರೋಲರವರು ಇವುಗಳನ್ನು ಈ ವರೆಗಿನಂತೆಯೇ ಡಿಸ್ಟ್ರಿಕ್ಟ್ ಫಂಡ್ ಲೆಕ್ಕಗಳಲ್ಲಿ ಸೇರಿಸತಕ್ಕದ್ದು.

ಜಮಾಖರ್ಚು ಅಂದಾಜು ಪಟ್ಟಿಯಲ್ಲಿ ಮರಾಮತ್ತ್ ಇಲಾಖೆಯ ಖರ್ಚಿಗಾಗಿ ಮಂಜೂರಾದ ಮೊಬಲಗುಗಳು ಮತ್ತು ಅವಕ್ಕೆ ಸಂಬಂಧಪಟ್ಟ ಲೆಕ್ಕಗಳು.

ಖಜಾನೆಗೆ ಮತ್ತು ಖಜಾನೆಯಿಂದ ಇರಸಾಲುಗಳು, ಮತ್ತು ಪ್ಯಾಸ್ ಬುಕ್ಕುಗಳು.

111. ಡಿಸ್ಟ್ರಿಕ್ಟ್ ಖಜಾನೆಗಳಿಗೆ ನಗದಾಗಿಯಾಗಲಿ, ಚೆಕ್ಕು ಮೂಲಕವಾಗಿಯಾಗಲಿ, ಅಥವಾ ವರ್ಗಾವರ್ಗಿಯಿಂದಲಾಗಲಿ ಕಳುಹಿಸಲ್ಪಟ್ಟ ಸಮಸ್ತ ಡಿಸ್ಟ್ರಿಕ್ಟ್ ಫಂಡ್ ಜಮಾಗಳನ್ನು ಮತ್ತು ಸದರೀ ಫಂಡಿಗಾಗಿ ಕೊಡಲ್ಪಟ್ಟ ಎಲ್ಲಾ ಮೊಬಲಗುಗಳನ್ನು ಒಂದು ಪ್ಯಾಸ್ ಬುಕ್ಕಿನಲ್ಲಿ (15ನೆಯ ನಮೂನೆ) ಡಿಸ್ಟ್ರಿಕ್ಟ್ ಖಜಾನೆಯವರು ದಾಖಲ್ ಮಾಡತಕ್ಕದ್ದು.

ಪ್ಯಾಸ್ ಬುಕ್ಕು.

112. ಆ ಪ್ಯಾಸ್ ಬುಕ್ಕು ಪ್ರೆಸಿಡೆಂಟರವರ ವಶದಲ್ಲಿರತಕ್ಕದ್ದು, ಮತ್ತು ಅದು ಪ್ರತಿ ಮಾಹೆಯ 15ನೆಯ ತಾರೀಖಿನಲ್ಲಿಯೂ, ಆ ಮಾಹೆಯ ಆಖೈರ್ ಕಛೇರಿ ಇರುವ ದಿವಸದಲ್ಲಿಯೂ ಖಜಾನೆಗೆ ಕಳುಹಿಸಲ್ಪಡತಕ್ಕದ್ದು.

113. ಆ ಪ್ಯಾಸ್ ಬುಕ್ಕು ಮಾಹೆಯ 15ನೆಯ ತಾರೀಖಿನ ದಿವಸ ಖಜಾನೆಗೆ ತಲಪಿದಾಗ ಡಿಸ್ಟ್ರಿಕ್ಟಿನಲ್ಲಿ ಆದ ಜಮಾಖರ್ಚುಗಳು ಮೇಲೆ ವಿವರಿಸಿದಂತೆ ತಿಳಿದಮಟ್ಟಿಗೆ ಅದರಲ್ಲಿ ದಾಖಲ್ ಮಾಡಲ್ಪಟ್ಟು ಪ್ಯಾಸ್ ಬುಕ್ಕು ಪ್ರೆಸಿಡೆಂಟರವರಿಗೆ ವಾಪಸು ಕಳುಹಿಸಲ್ಪಡತಕ್ಕದ್ದು. ಮಾಹೆಯ ಆಖೈರ್ ಕಛೇರಿ ದಿವಸ ಆ ಪ್ಯಾಸ್ ಬುಕ್ಕು ಬಂದಾಗ, ಆ ತಿಂಗಳಲ್ಲಿ ನಡೆದ ಎಲ್ಲಾ ಜಮಾ ಖರ್ಚುಗಳನ್ನು ಡಿಸ್ಟ್ರಿಕ್ಟ್ ನಗದಿ ಲೆಕ್ಕವು ಕ್ಲೋಜ್ ಮಾಡಲ್ಪಟ್ಟ ಕೂಡಲೆ ಸ್ವಲ್ಪವೂ ಲೋಪವಿಲ್ಲದೆ ಅದರಲ್ಲಿ ದಾಖಲ್ ಮಾಡತಕ್ಕದ್ದು. ಮತ್ತು ಬಾಕಿ ತೇಲಿಸಿ ಅದನ್ನು ಅಕ್ಷರದಲ್ಲಿ ಬರೆಯತಕ್ಕದ್ದು, ಮತ್ತು ಆ ಪ್ಯಾಸ್ ಬುಕ್ಕನ್ನು ಮುಂದಲ ತಿಂಗಳ 8ನೆಯ ತಾರೀಖಿನೊಳಗಾಗಿ ಪ್ರೆಸಿಡೆಂಟರವರಿಗೆ ವಾಪಸ್ ಮಾಡತಕ್ಕದ್ದು.

114. ಪ್ಯಾಸ್ ಬುಕ್ಕು ವಾಪಸ್ ಬಂದಕೂಡಲೆ, ಪ್ರೆಸಿಡೆಂಟರವರು ಅದನ್ನು ಪರೀಕ್ಷಿಸಿ ತಮ್ಮ ಪ್ಯಾಸ್ ಬುಕ್ಕಿನಲ್ಲಿಯೂ ಮತ್ತು ನಗದಿ ಬುಕ್ಕಿನಲ್ಲಿಯೂ ತೋರಿಸಲ್ಪಟ್ಟಿರುವ ಜಮಾಖರ್ಚು ಮೊಬಲಗುಗಳಲ್ಲಿ ಏನಾದರೂ ವ್ಯತ್ಯಾಸ ಕಂಡುಬಂದಲ್ಲಿ ಅದನ್ನು ಒಡನೆ ಟ್ರೆಜರಿ ಆಫೀಸರವರಿಗೆ ತಿಳಿಸತಕ್ಕದ್ದು.

115. ತಿಂಗಳಿಗೆ ಒಂದಾವರ್ತಿ ಪ್ರೆಸಿಡೆಂಟರವರು ತಮ್ಮ ನಗದಿ ಬುಕ್ಕನ್ನು ಕ್ಲೋಜು ಮಾಡತಕ್ಕದ್ದು, ಮತ್ತು ಅದರಲ್ಲಿ ತೋರಿಸಿರುವ ಬಾಕಿಯನ್ನು ಈ ಕೆಳಗಿನಂತೆ ಪ್ಯಾಸ್ ಬುಕ್ಕಿನ ಬಾಕಿಯೊಡನೆ ತಾಳೆ ಹೊಂದಿಸಬೇಕು.

ನಗದಿ ಬುಕ್ಕಿನ ಮತ್ತು ಪ್ಯಾಸ್ ಬುಕ್ಕಿನ ಬಾಕಿಗಳನ್ನು ತಾಳೆ ಹೊಂದಿಸತಕ್ಕದ್ದು.

	ರೂ. ಆ. ಪೈ.
ನಗದಿ ಬುಕ್ಕಿನ ಪ್ರಕಾರ ಬಾಕಿ ..	0—0—0
ಹಣ ತೆಗೆದುಕೊಳ್ಳದ ಚೆಕ್ಕುಗಳನ್ನು ಸೇರಿಸು ...	0—0—0
ನೆಯ ತಾರೀಖಿನ ... ನೆಯ ನಂಬ್ರಿನ ಚೆಕ್ಕನ್ನು ಸೇರಿಸು ..	0—0—0
ಪ್ಯಾಸ್ ಬುಕ್ಕಿನಲ್ಲಿರುವಂತೆ ಬಾಕಿ ..	0—0—0

116. ನಗದಿ ಬುಕ್ಕಿನ "ವರ್ಗಾವರ್ಗಿ" ಖಾನೆಯು ಬಾಬುವಾರ ವಿಂಗಡಿಸುವದರಲ್ಲಿ ಉಂಟಾದ ತಪ್ಪುಗಳನ್ನು ಜಮಾ ಖರ್ಚುಗಳನ್ನು ಸಂಕಲನ ವ್ಯವಕಲನ ಚಿನ್ಹಗಳೊಡನೆ ದಾಖಲ್ಮಾಡುವದರ ಮೂಲಕ ಕ್ರಮಪಡಿಸತಕ್ಕ ಬಗ್ಯೆ; ಬಿಲ್ಲುಗಳ ಮೇಲೆ ಕೊಡಲ್ಪಟ್ಟ ಮುಂಗಡಗಳನ್ನು 'ಮುಂಗಡದ' ಖಾನೆಯಲ್ಲಿ ಜಮಾ ಕಟ್ಟಿ, ಖರ್ಚು ಖಾನೆಯಲ್ಲಿ ಯಾವದಾದರೂ ಒಂದು ಬಾಬಿನ ಖರ್ಚು ಹಾಕಿ ವ್ಯವಸ್ಥೆ ಪಡಿಸುವದಕ್ಕೂ; ಗುತ್ತಿಗೆದಾರರ ಖರ್ಚುಪಟ್ಟಿ (ಬಿಲ್) ಗಳಿಂದ ವಜಾಮಾಡಿದ ಮೊಬಲಗುಗಳನ್ನು "ಠೇವಣಾತಿ (ಡಿಪಾಜಿಟ್) ಗಳಿಗೆ" ಜಮಾ ಕಟ್ಟಿಕೊಂಡು, ಖರ್ಚು ಖಾನೆಯಲ್ಲಿ ಯಾವದಾದರೂ ಒಂದು ಬಾಬಿಗೆ ಖರ್ಚುಹಾಕಿ ವ್ಯವಸ್ಥೆ ಮಾಡುವದಕ್ಕೂ; ಮತ್ತು ಯಾವದಾದರೂ ರೆವಿನ್ಯೂ ಬಾಬಿಗೆ ಜಮಾ ಕಟ್ಟತಕ್ಕ ಬಗ್ಯೆ ಡಿಪಾಜಿಟ್ ಮೊಬಲಗಿನಿಂದ ಕೊಡಲ್ಪಟ್ಟ ಹಣದ ಮೊಬಲಗುಗಳ ವ್ಯವಸ್ಥೆ ಬಗ್ಯೆಗಲಿ ಉಪಯೋಗಿಸಲ್ಪಡತಕ್ಕದ್ದು.

ಜಮಾಖರ್ಚುಗಳ ಗೋಷ್ವಾರೆ ರಿಜಿಸ್ಟರುಗಳು.

ಜಮಾಖರ್ಚು ಗೋಷ್ವಾರೆ ರಿಜಿಸ್ಟರ್

117. ನಗದಿ ಬುಕ್ಕಿನ ಜಮಾ ಖಾನೆಯಲ್ಲಿ ಬರೆದಿರುವ ಲೆಕ್ಕಗಳನ್ನೆಲ್ಲಾ ದಿನವಹಿ ಪ್ರತ್ಯೇಕಪ್ರತ್ಯೇಕವಾಗಿ ಜಮಾ ಗೋಷ್ವಾರೆ ರಿಜಿಸ್ಟರಿಗೆ (ನಮೂನೆ 16) ಎತ್ತಿ ಬರೆಯತಕ್ಕದ್ದು, ಮತ್ತು ಇದೇ ಪ್ರಕಾರ ನಗದಿ ಬುಕ್ಕಿನ ಖರ್ಚು ಖಾನೆಯಲ್ಲಿ ಬರೆದಿರತಕ್ಕ ಲೆಕ್ಕಗಳೆಲ್ಲವನ್ನು ಖರ್ಚಿನ ಗೋಷ್ವಾರೆ ರಿಜಿಸ್ಟರಿಗೆ (ನಮೂನೆ 17) ಎತ್ತಿ ಬರೆಯತಕ್ಕದ್ದು.

118. ಮಾಹೆಯ ಆಖೈರಿ ದಿವಸದಲ್ಲಿ, ಜಮಾ ಖರ್ಚುಗಳ ಗೋಷ್ವಾರೆ ರಿಜಿಸ್ಟರುಗಳ ಮೊಬಲಗುಗಳು ಕೂಡಲ್ಪಟ್ಟು, ಹಿಂದಲ ತಿಂಗಳ ಆಖೈರ್ ವರೆಗಿನ ಜುಂಲಾಗಳು ಚಾಲ್ತಿ ಮಾಹೆಯ ಜುಂಲಾವಿಗೆ ಸೇರಿಸಲ್ಪಟ್ಟು, ಮತ್ತು ಜುಲೈ ಒಂದನೇ ತಾರೀಖಿನಿಂದ ತಹಲ್ ವರೆಗೆ ಒಟ್ಟು ಜುಂಲಾ ಮಾಡಲ್ಪಡತಕ್ಕದ್ದು.

119. ಸಾಲಿನ ಜಮಾಖರ್ಚು ಅಂದಾಜುಪಟ್ಟಿಯ (ಬಜೆಟ್) ಲ್ಲಿ ಮಂಜೂರಾದ ಮೊಬಲಗುಗಳು ಜಮಾಖರ್ಚು ಗೋಷ್ವಾರೆ ರಿಜಿಸ್ಟರುಗಳಲ್ಲಿ ಲೆಕ್ಕಗಳ ಮುಖ್ಯ ಮತ್ತು ಚಿಲ್ಲರೆ ಬಾಬುಗಳಿಗಾಗಿ ವಿಧಿಸಿರುವ ಪುಸ್ತಕಗಳ ಮೇಲ್ಭಾಗದಲ್ಲಿ ನಮೂದಿಸಲ್ಪಡತಕ್ಕದ್ದು. ಸಾಲಿನಲ್ಲಿಯೇ ಆಗಲಿ ಅಥವಾ ಸಾಲಿನ ತಿದ್ದಲ್ಪಟ್ಟ ಅಂದಾಜಿನಲ್ಲಿಯೇ ಆಗಲಿ, ಮಂಜೂರಾದ ಮೊಬಲಗುಗಳಲ್ಲಿ ಏನಾದರೂ ಅಧಿಕವಾಗಿ ಸೇರಿಸಲ್ಪಟ್ಟರೇ ಆಗಲಿ ಅಥವಾ ಬದಲಾಯಿಸಲ್ಪಟ್ಟರೇ ಆಗಲಿ ಆ ಬಗ್ಯೆ ಅವುಗಳನ್ನು ರಿಜಿಸ್ಟರುಗಳಲ್ಲಿ ಕೆಂಪು ಶಾಯಿಯಲ್ಲಿ ಸಂದರ್ಭಾನುಸಾರ ಸಂಕಲನ ವ್ಯವಕಲನ ಚಿನ್ಹಗಳಿಂದ ನಮೂದಿಸತಕ್ಕದ್ದು. ಈ ಸಂಕಲನ ವ್ಯವಕಲನಗಳು ಯಾವ ಹುಕುಂಗಳ ಮೇರಿಗೆ ಮಾಡಲ್ಪಟ್ಟಿರುತ್ತವೆಯೋ ಆ ಹುಕುಂಗಳನ್ನು ರಿಜಿಸ್ಟರುಗಳಲ್ಲಿ ನಮೂದಿಸತಕ್ಕದ್ದು.

ನಿಯತ ಕಾಲಗಳಲ್ಲಿ ತಯಾರಾಗತಕ್ಕ ಲೆಕ್ಕಗಳು ವಗೈರೆ.

ಚಾಲ್ತಿ ಲೆಕ್ಕ

** ಸಂಪಾದನೆಗಳ ಪಟ್ಟಿ (19ನೆಯ ನಮೂನೆ).*

ಕೊನೆಗೊಳ್ಳಾದ ಚೆಕ್ಕುಗಳ ತಖ್ತೆ (20ನೆಯ ನಮೂನೆ).

ಡಿಸ್ಟ್ರಿಕ್ಟ್ ಫಂಡಿನ ನಾನಾ ಬಾಕಿಯನ್ನು ತೋರಿಸುವ ತಖ್ತೆ (21ನೆಯ ನಮೂನೆ .

120. ಪ್ರತಿ ತಿಂಗಳೂ ಆಖೈರಾದ ನಂತರ ಕೂಡಿದ ಮಟ್ಟಿಗೂ ಜಾಗ್ರತೆಯಾಗಿ, ತಿಂಗಳಿನ ಜಮಾಖರ್ಚು ರಿಜಿಸ್ಟರುಗಳಿಂದ 18ನೆಯ ನಮೂನೆಯಲ್ಲಿ ಎಲ್ಲಾ ಬಾಬುಗಳನ್ನು ತೋರಿಸುವ ಒಂದು ಚಾಲ್ತಿ ಲೆಕ್ಕವನ್ನು ಡಿಸ್ಟ್ರಿಕ್ಟ್ ಬೋರ್ಡ್ ಕಛೇರಿಯಲ್ಲಿ ತಯಾರ್‌ಮಾಡಿ ಫೈನಾನ್ಸ್ ಕಮಿಟಿ ಯವರ ವಿಮರ್ಶೆ ಮತ್ತು ಒಪ್ಪಿತದ ಬಗ್ಯೆ ಆ ಸಭೆಗೆ ಒಪ್ಪಿಸತಕ್ಕದ್ದು, ಅನಂತರ ಅದನ್ನು ಮುಂದಲ ತಿಂಗಳ 20ನೆಯ ತಾರೀಖಿನಲ್ಲಿ ಆಗಲಿ ಅಥವಾ ಅದಕ್ಕೆ ಮುಂಚಿತವಾಗಿಯಾಗಲಿ, ಸಮಸ್ತ ದಾಖಲೆಗಳು, ರದ್ದು ಮಾಡಲ್ಪಟ್ಟ ಚೆಕ್ಕುಗಳು, ವಗೈರೆಗಳು, ಮತ್ತು ಈ ಪಕ್ಕದಲ್ಲಿ * ನಮೂದಿಸಲ್ಪಟ್ಟಿರುವ ಲೆಕ್ಕಗಳು ಇವುಗಳೊಡನೆ ಆಖೈರಿ ಲೆಕ್ಕಚಾರಕ್ಕಾಗಿ ಕಂಟ್ರೋಲರವರ ಆಫೀಸಿಗೆ ಕಳುಹಿಸತಕ್ಕದ್ದು.

ಲೆಕ್ಕಗಳನ್ನು ಪರೀಕ್ಷಿಸುವದರಲ್ಲಿ ಫೈನಾನ್ಸ್ ಕಮಿಟಿ ಯವರ ಕರ್ತವ್ಯವು.

121. ಲೆಕ್ಕಗಳನ್ನು ಪರಿಶೋಧಿಸಿ ಮಾಡುವಾಗ ಫೈನಾನ್ಸ್ ಕಮಿಟಿಯವರು ಡಿಸ್ಟ್ರಿಕ್ಟ್ ಬೋರ್ಡ್ ಕಛೇರಿಯಲ್ಲಿ ಇಡುವಂತೆ ವಿಧಿಸಿರತಕ್ಕ ಪುಸ್ತಕಗಳೂ ಮತ್ತು ಲೆಕ್ಕಗಳೂ ಯಾವ ತಿಂಗಳಿಗೆ ಲೆಕ್ಕವು ಕಳುಹಿಸಲ್ಪಡುತ್ತದೆಯೋ ಆ ತಿಂಗಳ ಆಖೈರ್ ವರೆಗೆ ಬರೆಯಲ್ಪಟ್ಟಿರುತ್ತವೆ ಎಂಬುದನ್ನು, ನಗದು ಬುಕ್ಕಿನೊಡನೆ ಬ್ಯಾಂಕ್ ಪುಸ್ತಕವು ಹೊಂದಿಸಲ್ಪಟ್ಟಿರುತ್ತೆಂಬುದನ್ನು, ಸಂದಾಯವಾದ ಮೊಬಲಗುಗಳಿಗೆಲ್ಲಾ ಸಾಧಕವಾದ ದಾಖಲೆಗಳಿವೆ ಎಂಬುದನ್ನು, ಮತ್ತು ಸದರಿ ದಾಖಲೆಗಳು ನಮೂನೆಗಳಿಗೆ ಅನುಸಾರವಾಗಿವೆ ಮತ್ತು ಕ್ರಮಪ್ರಕಾರ ರದ್ದುಮಾಡಲ್ಪಟ್ಟಿವೆ ಎಂಬುದನ್ನು, ಲೋಕಲ್ ಬೋರ್ಡುಗಳ ಮೂಲಕ ವಸೂಲ್ ಮಾಡಲ್ಪಟ್ಟ ಹುಟ್ಟುವಳಿ ಮೊಬಲಗುಗಳು ಅದೇ ಮಾಸದಲ್ಲಿ ಖಜಾನೆಗೆ ಕ್ರಮವಾಗಿ ಇರಸಾಲಾಗಿವೆ ಎಂಬುದನ್ನು, ಖರ್ಚಿನ ಪ್ರತಿ ಬಾಬಿಗೂ ಕ್ರಮವಾದ ಹುಕುಂಪಿನ ಆಧಾರವು ಇದೆ ಎಂಬುದನ್ನು, ಬಾಕಿ ಇರತಕ್ಕ ಮುಂಗಡಗಳನ್ನು ವ್ಯವಸ್ಥೆ ಪಡಿಸತಕ್ಕ ಬಗ್ಯೆ ಅವಶ್ಯಕವಾದ ಕ್ರಮಗಳೆಲ್ಲವೂ ಜರಿಗಿಸಲ್ಪಟ್ಟಿವೆ ಎಂಬುದನ್ನು, ಆಸ್ಪತ್ರೆ ಯಾನೆ ಔಷಧಶಾಲೆ ಮುಂತಾದವುಗಳಿಗೆ ಸಲ್ಲತಕ್ಕ ವಂತಿಗೆ (ಕಾಂಟ್ರಿಬ್ಯೂಷನ್) ಬಗ್ಯೆ ಕೊಡಲ್ಪಟ್ಟ ಚೆಕ್ಕುಗಳು ನಿಯತವಾದ ಮೊಬಲಗುಗಳಿಗೇನೆ ಕೊಡಲ್ಪಟ್ಟಿವೆ ಎಂಬುದನ್ನು, ಕಂಟ್ರೋಲರವರಿಂದ ಮಾಡಲ್ಪಟ್ಟ ಆಕ್ಷೇಪಣೆಗಳಿಗೆ ಕೂಡಲೆ ಶಿಗ ಉತ್ತರ ಕೊಡಲ್ಪಟ್ಟಿದೆ ಎಂಬುದನ್ನು, ನಗದಿ ಬುಕ್ಕಿನ ಉಭಯ ಪಾರ್ಶ್ವಗಳಲ್ಲಿಯೂ ಇರುವ ವರ್ಗಾವರ್ಗಿ ಕಲಮುಗಳ ಜುಂಲಾಗಳು ತಾಳೆ ಬೀಳುತ್ತವೆ ಎಂಬುದನ್ನು, ಮತ್ತು ಲೆಕ್ಕಗಳು ಸರ್ವತ್ರ ಜಾಗರೂಕತೆಯಿಂದಲೂ, ತಪ್ಪಿಲ್ಲದೆಯೂ, ಸರಿಯಾಗಿಯೂ ತಯಾರು ಮಾಡಲ್ಪಟ್ಟಿವೆ ಎಂಬುದನ್ನು ನೋಡತಕ್ಕದ್ದು.

ಕಂಟ್ರೋಲರವರ ಆಕ್ಷೇಪಣೆಗಳು.

122. ಈ ಲೆಕ್ಕಗಳನ್ನೆಲ್ಲಾ ಪರೀಕ್ಷಿಸಿ ಆನಂತರ ಕಂಟ್ರೋಲರವರು ತಮ್ಮ ಪರೀಕ್ಷೆಯಲ್ಲಿ ಕಂಡುಬಂದ ಆಕ್ಷೇಪಗಳು ಅಡಗಿರುವ ಒಂದು ತಃಖ್ತೆಯನ್ನು ಕಳುಹಿಸತಕ್ಕದ್ದು. ತಮ್ಮ ಪ್ರತ್ಯುತ್ತರಗಳೊಡನೆ ಒಂದು ವಾರದೊಳಗಾಗಿ ಸದರಿ ತಃಖ್ತೆಯನ್ನು ವಾಪಸ್ ಮಾಡುವುದು ಪ್ರೆಸಿಡೆಂಟರ ಕರ್ತವ್ಯವಾಗಿರತಕ್ಕದ್ದು.

ಸಾಲಿನ ಷೋಡಿ ಲೆಕ್ಕಗಳು.

123. ಫೈನಾನ್ಸ್ ಕಮಿಟಿಯವರು ಸಾಲಿನ ಷೋಡಿ ಲೆಕ್ಕವನ್ನು ತಯಾರಿ ಮಾಡತಕ್ಕದ್ದು. ಅದರಲ್ಲಿ ಅವರು ಡಿಸ್ಟ್ರಿಕ್ಟ್ ಫಂಡಿನ ಜಮಾಖರ್ಚುಗಳನ್ನು ಮುಖ್ಯ ಮತ್ತು ಚಿಲ್ಲರೆ ಬಾಬುಗಳಾಗಿ ವಿಂಗಡಿಸುವದಲ್ಲದೆ ಆಯಾ ಮೊಬಲಗುಗಳಿಗೆ ಇರುವ ವ್ಯತ್ಯಾಸಗಳಿಗೆ ಕಾರಣಗಳನ್ನು ತೋರಿಸತಕ್ಕದ್ದು. ಈ ಸಾಲಿನ ಷೋಡಿ ಲೆಕ್ಕದ ಮತ್ತು ವಿಮರ್ಶಾ ಪತ್ರದ ಒಂದು ಪ್ರತಿಯನ್ನು ಬೋರ್ಡಿನವರಿಗೆ ಕಳುಹಿಸಿ, ಅವರು ಒಪ್ಪಿದ ನಂತರ ಕಂಟ್ರೋಲರವರ ದ್ವಾರ ಗವರ್ನಮೆಂಟಿಗೆ ಕಳುಹಿಸತಕ್ಕದ್ದು. ಮತ್ತು ಇನ್ನೊಂದು ಪ್ರತಿಯನ್ನು ಡಿಸ್ಟ್ರಿಕ್ಟಿನ ಆಡಳಿತದ ರಿಪೋರ್ಟಿನೊಳಗೆ ಸೇರಿಸುವುದಕ್ಕೋಸ್ಕರ ಡೆಪ್ಯುಟಿ ಕಮಿಷನರಿಗೆ ಕಳುಹಿಸತಕ್ಕದ್ದು.

ಜಮಾಖರ್ಚು ಅಂದಾಜಾಪಟ್ಟಿಗಳು.

ಪಂಚಾಯಿತಿಗಳ ಜಮಾಖರ್ಚು ಅಂದಾಜಾ ಪಟ್ಟಿಗಳು.

124. ಡಿಶಂಬರ್ ಗುರ್ರೇ ತಾರೀಖಿನಲ್ಲಿಯಾಗಲಿ ಅಥವಾ ಅದಕ್ಕೆ ಮುಂಚಿತವಾಗಿಯಾಗಲಿ, ಮುಂದಿನ ಸರ್ಕಾರೀ ಸಾಲಿನಲ್ಲಿ ಸಮಸ್ತ ಬಾಬುಗಳಲ್ಲಿಯೂ ಆಗಬಹುದಾದ ಜಮಾ ಖರ್ಚುಗಳನ್ನು ತೋರಿಸುವ ಒಂದು ಜಮಾಖರ್ಚು ಅಂದಾಜಾ ಪಟ್ಟಿಯನ್ನು ತಯಾರ್ಮಾಡಿ (22ನೆಯ ನಮೂನೆ) ಅದನ್ನು ಆ ಸಾಲಿನಲ್ಲಿ ನಡಿಸಬೇಕಾಗಿರುವ ಕೆಲಸಗಳ ಪ್ರತ್ಯೇಕವಾದ ತಃಖ್ತೆಯೊಡನೆ ತಾಲ್ಲೂಕು ಬೋರ್ಡಿಗೆ ಯೂನಿಯನ್ ಪಂಚಾಯಿತಿಯು ಕಳುಹಿಸತಕ್ಕದ್ದು.

ತಾಲ್ಲೂಕು ಬೋರ್ಡುಗಳ ಜಮಾಖರ್ಚು ಅಂದಾಜಾ ಪಟ್ಟಿಗಳು.

125. ಹಾಗೆಯೇ ಡಿಶಂಬರ್ 15ನೆಯ ತಾರೀಖಿನ ದಿನವಾಗಲಿ ಅದಕ್ಕೆ ಮುಂಚಿತವಾಗಿಯಾಗಲಿ ಮುಂದಿನ ಸರ್ಕಾರಿ ಸಾಲಿನಲ್ಲಿ ನಡಿಸಬೇಕಾದ ಕೆಲಸಗಳ ತಃಖ್ತೆಯೊಡನೆ ಆ ಸಾಲಿನಲ್ಲಿ ಸಮಸ್ತ ಬಾಬುಗಳಲ್ಲಿಯೂ ಆಗಬಹುದಾದ ಜಮಾಖರ್ಚುಗಳನ್ನು ತೋರಿಸುವ ಒಂದು ಬಡ್ಜೆಟ್ ಅಂದಾಜನ್ನು (22ನೆಯ ನಮೂನೆ) ತಯಾರ್ಮಾಡಿ ಯೂನಿಯನ್ ಬಡ್ಜೆಟ್ಟುಗಳನ್ನು ಅವಶ್ಯಕವಾದ ಬದಲಾವಣೆಗಳೊಡನೆ ಅದರಲ್ಲಿ ಸೇರಿಸಿ ತಾಲ್ಲೂಕು ಬೋರ್ಡು ಡಿಸ್ಟ್ರಿಕ್ಟ್ ಬೋರ್ಡಿಗೆ ಕಳುಹಿಸತಕ್ಕದ್ದು.

ಮರಾಮತ್ತು ಇಲಾಖೆಯಿಂದ ನಡೆಸಬೇಕಾದ ಕೆಲಸಗಳಿಗೆ ಅಂದಾಜುಗಳು.

126. ತಾಲ್ಲೂಕು ಬೋರ್ಡುಗಳ ಅಂದಾಜುಗಳೆಲ್ಲಾ ಬಂದ ಕೂಡಲೆ, ಮುಂದಿನ ಸಾಲಿನಲ್ಲಿ ಮರಾಮತ್ತು ಇಲಾಖೆಯಿಂದ ನಡೆಯಬೇಕಾಗಿರುವ ಸಮಸ್ತ ಕೆಲಸಗಳ ಒಂದು ಪಟ್ಟಿಯನ್ನು, ಪ್ರತಿ ಕೆಲಸದ ಲಾಗವಡಿನ ಅಂದಾಜು ಮಾಡಲು ಮತ್ತು ಅವರಿಗೆ ಅವಶ್ಯಕವೆಂದು ತೋರಿಬರುವ ಯಾವ ಕೆಲಸವನ್ನಾಗಲಿ ಅಥವಾ ಕೆಲಸಗಳನ್ನಾಗಲಿ ಸೂಚಿಸಲು ಡಿಸ್ಟ್ರಿಕ್ಟ್ ಎಗ್ಸಿಕ್ಯೂಟಿವ್ ಎಂಜನಿಯರಿಗೆ ಡಿಸ್ಟ್ರಿಕ್ಟ್ ಬೋರ್ಡು ಕಳುಹಿಸತಕ್ಕದ್ದು.

127. ಜನವರಿ ಗುರ್ರೇ ತಾರೀಖಿನ ದಿನವಾಗಲಿ ಅಥವಾ ಅದಕ್ಕೆ ಮುಂಚಿತವಾಗಿಯಾಗಲಿ ಬೇಕಾದ ಸಮಾಚಾರದೊಡನೆ ಆ ಪಟ್ಟಿಯನ್ನು ಎಗ್ಸಿಕ್ಯೂಟಿವ್ ಎಂಜನಿಯರು ವಾಪಸ್ ಮಾಡತಕ್ಕದ್ದು.

ವೈದ್ಯಶಾಲೆಗಳಿಗಾಗಿ ಲೋಕಲ್ ಸೆಸ್ ಮತ್ತು ವಂತಿಗೆಗಳು.

128. ಜನವರಿ 15ನೆಯ ತಾರೀಖಿನ ದಿನ ಅಥವಾ ಅದಕ್ಕೆ ಮುಂಚಿತವಾಗಿ ಜಮೀನು ಹುಟ್ಟುವಳಿ ವಗೈರೆ ಮೇಲೆ ವಸೂಲಾಗುವ ಒಂದಾಣೆ ಸೆಸ್ಸಿನ ಶೇಕಡ 76ರಷ್ಟು ಮೊಬಲಗನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಡೆಪ್ಯುಟಿ ಕಮಿಷನರು ತಿಳಿಸತಕ್ಕದ್ದು. ಸುಮಾರು ಅದೇ ಕಾಲದಲ್ಲಿ ವೈದ್ಯಶಾಲೆಗಳಿಗಾಗಿ ಕೊಡಬೇಕಾದ ವಂತಿಗೆಯ ಮೊಬಲಗನ್ನು ಸೀನಿಯರ್ ಸರ್ಜನರವರು ತಿಳಿಸತಕ್ಕದ್ದು.

ಡಿಸ್ಟ್ರಿಕ್ಟ್ ಫಂಡ್ (ಬಡ್ಜೆಟ್) ಜಮಾ ಖರ್ಚು ಅಂದಾಜಾ ಪಟ್ಟಿ.

129. ತರುವಾಯ ಫೈನಾನ್ಸ್ ಕಮಿಟಿಯು ಡಿಸ್ಟ್ರಿಕ್ಟಿಗೆಲ್ಲಾ ಒಂದು ಜಮಾ ಖರ್ಚು ಅಂದಾಜಾ ಪಟ್ಟಿಯನ್ನು (22ನೆಯ ನಮೂನೆ) ತಯಾರ್ಮಾಡಿ ಫೆಬ್ರವರಿ 15ನೆಯ ತಾರೀಖಿನಲ್ಲಿ ಅಥವಾ ಅದಕ್ಕೆ ಮುಂಚೆ ಸೇರಬೇಕಾದ ಸಭೆಯಲ್ಲಿ ವಿಮರ್ಶೆ ಬಗ್ಗೆಯೂ ಮತ್ತು ಅಂಗೀಕಾರದ ಬಗ್ಗೆಯೂ ಬೋರ್ಡಿಗೆ ಕಳುಹಿಸತಕ್ಕದ್ದು. ಡಿಸ್ಟ್ರಿಕ್ಟ್ ಬೋರ್ಡಿನವರಿಂದ ಹಂಗಾಮಿಯಾಗಿ ಅಂಗೀಕರಿಸಲ್ಪಟ್ಟ ಆ ಜಮಾ ಖರ್ಚು ಅಂದಾಜಾ ಪಟ್ಟಿಯು ಡೆಪ್ಯುಟಿ ಕಮಿಷನರವರಿಗೆ ಕಳುಹಿಸಲ್ಪಡತಕ್ಕದ್ದು. ಅವರು ಅದನ್ನು ಮಾರ್ಚಿ ಗುರ್ರೇ ತಾರೀಖಿನ ದಿನ ಅಥವಾ ಅದಕ್ಕೆ ಮುಂಚಿತವಾಗಿ ಆಖೈರ್ ಹುಕುಂಬಗ್ಗೆ ಗವರ್ನಮೆಂಟಿಗೆ ಕಳುಹಿಸತಕ್ಕದ್ದು.

ಮುಗಿಯದೇ ಇರುವ ಕೆಲಸಗಳ ಪಟ್ಟಿ.

130. ಜುಲೈ ತಿಂಗಳಲ್ಲಿ ಸೇರಬೇಕಾದ ಡಿಸ್ಟ್ರಿಕ್ಟ್ ಬೋರ್ಡಿನ ಸಂಗಕ್ಕೆ 23ನೆಯ ನಮೂನೆಯಲ್ಲಿ ಹಿಂದಲವರ್ಷಗಳಲ್ಲಿ ಮುಗಿಯದೇ ಇದ್ದ ಕೆಲಸಗಳ ಪಟ್ಟಿ ಯನ್ನು ಕಳುಹಿಸತಕ್ಕದ್ದು, ಮತ್ತು ಅದನ್ನು ಪ್ರತಿ ಸಾಲಿನ ಆಗಸ್ಟ್ 31ನೆಯ ತಾರೀಖಿನದಿನ ಅಥವಾ ಅದಕ್ಕೆ ಮುಂಚಿತವಾಗಿ ಗವರ್ನಮೆಂಟಿಗೆ ಕಳುಹಿಸತಕ್ಕದ್ದು.

ಜಮಾ ಖರ್ಚು ಅಂದಾಜಾ ಪಟ್ಟಿಯಲ್ಲಿ (ಬಜೆಟ್ಟಿನಲ್ಲಿ) ಅಡಗಿರುವ ವಿಷಯಗಳು.

131. ಬಜೆಟ್ಟಿನಲ್ಲಿ, ಲೆಕ್ಕದ ಪ್ರತಿ ಒಂದು ಮುಖ್ಯ ಚಿಲ್ಲರೆ ಮತ್ತು ಬಾಬುವಾರ್ ಮಸ್ತಕಗಳಲ್ಲಿ, ಅಂದಾಜು ಮಾಡಲ್ಪಟ್ಟ ಎಲ್ಲಾ ಜಮಾ ಮತ್ತು ಖರ್ಚು ಮೊಬಲಗುಗಳನ್ನು ಮತ್ತು ಷುರು ಮತ್ತು ಆಖೈರ್ ಬಾಕಿಗಳನ್ನು ತೋರಿಸತಕ್ಕದ್ದು, ಅದರಲ್ಲಿ ಕಂಡ ಬದಲಾವಣೆಗಳ ವಿಷಯದಲ್ಲೂ ಮತ್ತು ಸದರಿ ಅಂದಾಜು ಯಾವ ಆಧಾರದಮೇಲೆ ತಯಾರ್ಮಾಡಲ್ಪಟ್ಟಿತೋ ಆ ವಿಷಯದಲ್ಲೂ ಷರಾಗಳನ್ನು ಬರೆದು ಅದರ ಜೊತೆಯಲ್ಲಿ ಕಳುಹಿಸತಕ್ಕದ್ದು.

ಜಮಾ ಖರ್ಚು ಅಂದಾಜಾ ಪಟ್ಟಿಯ ತಯಾರಿಬಗ್ಗೆ ನಿಯಮಗಳು.

132. ಬಜೆಟ್ಟು ಅಂದಾಜುಗಳನ್ನು ತಯಾರ್ಮಾಡುವಲ್ಲಿ, ಮುಂದೆ ವಿವರಿಸಲ್ಪಡತಕ್ಕ ವಿಷಯಗಳಿಗೆ ಅವಧಾನವನ್ನು ಕೊಡತಕ್ಕದ್ದು.

(ಎ) ಕೊಡಿದಮಟ್ಟಿಗೂ ಮುಂದೆ ಬಾಬು ಹೊರಳೆ (ರೀ ಅಪ್ರೋಪ್ರಿಯೇಷನ್) ಗೆ ಅವಕಾಶ ಉಂಟಾಗದಹಾಗೆ ಅಂದಾಜಾಗಳನ್ನು ಮಾಡತಕ್ಕದ್ದು.

(ಬಿ) ಮುಂದಾಗಿ ಗವರ್ನಮೆಂಟಿನ ಅಪ್ಪಣೆಯನ್ನು ಪಡೆಯದೆ (ಮರಹಮ್ಮತ್ತು ಕೆಲಸಗಳು ವಿನಾ) ಯಾವ ಹೊಸ ಖರ್ಚನ್ನೇ ಆಗಲಿ ಬಜೆಟ್ಟಿನಲ್ಲಿ ಸೇರಿಸತಕ್ಕದ್ದಲ್ಲ.

(ಸಿ) ಡಿಸ್ಟ್ರಿಕ್ಟ್ ಬೋರ್ಡು ಮುಂದಾಗಿ ಗವರ್ನಮೆಂಟಿನ ಅಪ್ಪಣೆಯನ್ನು ಪಡೆಯದೆ, ಖಜಾನೆಯಲ್ಲಿ ಇರತಕ್ಕ ಬೋರ್ಡಿನ ಬಾಕೀ ಮೊಬಲಗನ್ನು ಸಂಪೂರ್ಣವಾಗಿ ಖರ್ಚು ಮಾಡತಕ್ಕದ್ದಲ್ಲ, ಮತ್ತು ಸಾಲಿನ ಒಟ್ಟು ಅಂದಾಜಾ ವರಮಾನದ ಅಷ್ಟಮಾಂಶ (8ನೆಯ ಭಾಗ) ಕ್ಕಿಂತಲೂ ಕಮ್ಮಿಯಾಗದಹಾಗೆ ಕೆಲಸ ನಡೆಸುವುದಕ್ಕೆ ಬಾಕೀ ಮೊಬಲಗು ನಿಲ್ಲುವಂತೆ ಬಜೆಟ್ಟು ಅಂದಾಜುಗಳನ್ನು ತಯಾರ್ಮಾಡತಕ್ಕದ್ದು.

(ಡಿ) ನಿರ್ಣಿತವಾದ ಖರ್ಚುಗಳ ವಿವರವನ್ನು ವ್ಯಕ್ತ ಪಡಿಸುವ ಷರಾವಿಗೆ, ಮಂಜೂರಾದ ಪೂರಾ ಲವಾಜಮಾ, ಸಿಬ್ಬಂದಿಯ ಸಂಖ್ಯೆ ತಲಬಿನ ದರ ಇತ್ಯಾದಿಗಳನ್ನು ತೋರಿಸುವ ತಖ್ತೆಯನ್ನು ಲಗತ್ಮಾಡತಕ್ಕದ್ದು.

(ಇ) ಲೋಕಲ್ ಬೋರ್ಡು ರೆಗ್ಯುಲೇಷನ್ನಿನ 20ನೆಯ ಪ್ರಕರಣದ 1ನೆಯ ಉಪ ಪ್ರಕರಣದ 5ನೆಯ ಅಧಿಕರಣದ ರೀತ್ಯಾ ಸುಂಕಗಳಿಂದ ವಸೂಲಾದ ನಿವ್ವಳ ಹುಟ್ಟುವಳಿಗಳನ್ನೆಲ್ಲಾ ಡಿಸ್ಟ್ರಿಕ್ಟ್ ಬೋರ್ಡಿನ ಸ್ವಾಧೀನದಲ್ಲಿಡಲ್ಪಟ್ಟ ರಸ್ತೆಗಳ ಮತ್ತು ಸೇತುಗಳ ದುರಸ್ತು ಮತ್ತು ಸಂರಕ್ಷಣೆಗಳಿಗಾಗಿ ವಿನಿಯೋಗಿಸತಕ್ಕದ್ದು.

(ಎಫ್) ಮೇಲ್ಕಂಡ ನಿಯಮದ 2ನೆಯ ಮತ್ತು 6ನೆಯ ಅಧಿಕರಣಗಳ ಪ್ರಕಾರ ಯೂನಿಯನಲ್ಲಿ ವಸೂಲ್ಮಾಡಲ್ಪಟ್ಟ ಮನೆ ಕಂದಾಯಗಳ, ಮತ್ತು ಕಟ್ಟಡಗಳನ್ನು ಕಟ್ಟಲು ಅಪ್ಪಣೆ ಬಗ್ಗೆ ವಸೂಲಾಗ ತಕ್ಕ ರುಸುಂಗಳ, ನಿವ್ವಳ ಹುಟ್ಟುವಳಿಯನ್ನು ಸಂಘದ ಉಪಯೋಗಕ್ಕಾಗಿಯೇ ಸಂಪೂರ್ಣವಾಗಿ ವಿನಿಯೋಗಿಸತಕ್ಕದ್ದು.

(ಜಿ) ಮಂಜೂರಾದ ಡಿಸ್ಟ್ರಿಕ್ಟ್ ಫಂಡ್ ಬಜೆಟ್ಟಿನಲ್ಲಿ ಮಾಡಿರುವ ಏರ್ಪಾಡಿಗೆ ಅನುಸಾರವಾಗಿ ಅಥವಾ ಸರ್ಕಾರದವರ ಸ್ಪಷ್ಟವಾದ ಹುಕುಮಿನಮೇಲೆ (ಡಿಸ್ಟ್ರಿಕ್ಟಿನ ಸಾಮಾನ್ಯ ಸಿಬ್ಬಂದಿ ಮತ್ತು ಡಿಸ್ಟ್ರಿಕ್ಟಿಗೆಲ್ಲಾ ಉಪಯೋಗವಾದ ಕೆಲಸಗಳು ಇಂತಹ) ಡಿಸ್ಟ್ರಿಕ್ಟಿನ ಸಾಮಾನ್ಯ ಉಪಯೋಗಗಳಿಗಾಗಿ ದ್ರವ್ಯವನ್ನು ಉಪಯೋಗಿಸುವುದಕ್ಕೆ ಕುಂದಕ ವಿಲ್ಲದಂತೆ ಪ್ರತಿ ತಾಲ್ಲೂಕಿನಲ್ಲೂ ವಸೂಲಾದ ಇತರ ಹುಟ್ಟುವಳಿ ಬಾಬುಗಳ ಕನಿಷ್ಠಪಕ್ಷ ಮುಕ್ಕಾಲುಪಾಲು ಆ ತಾಲ್ಲೂಕಿನ ಖರ್ಚಿಗಾಗಿಯೇ ಸಾಧಾರಣವಾಗಿ ಹೋದಗತಕ್ಕದ್ದು. ಅಧಿಕವಾಗಿ ಮೊಬಲಗು ಏನಾದರೂ ನಿಂತಲ್ಲಿ ಅದನ್ನು ಉಪವತ್ತಿ ಸಾಲದೆ ಸಹಾಯವನ್ನಪೇಕ್ಷಿಸುವ ತಾಲ್ಲೂಕುಗಳ ಪ್ರಯೋಜನಕ್ಕಾಗಿ ವಿನಿಯೋಗಿಸಬಹುದು.

ಪಂಚಾಯಿತಿಗಳಿಗೂ ಮತ್ತು ತಾಲ್ಲೂಕು ಬೋರ್ಡುಗಳಿಗೂ ಹಂಚಿಕೆ ಮಾಡಿದ ಮೊಬಲಗುಗಳನ್ನು ತಿಳಿಸತಕ್ಕದ್ದು.

133. ಸರ್ಕಾರದಿಂದ ಬಜೆಟ್ಟು ಅಂದಾಜಾಗಳು ಮಂಜೂರಾದ ಕೂಡ್ಲೆ, ಪ್ರತಿ ತಾಲ್ಲೂಕಿಗೂ ಹಂಚಿರತಕ್ಕ ಮೊಬಲಗು ಇಷ್ಟೆಂದು ತಾಲ್ಲೂಕು ಬೋರ್ಡಿಗೆ ಡಿಸ್ಟ್ರಿಕ್ಟ್ ಬೋರ್ಡು ವರ್ತಮಾನ ಕೊಡತಕ್ಕದ್ದು, ಮತ್ತು ಹಾಗೆಯೇ ಪ್ರತಿ ಯೂನಿಯನ್ ಪಂಚಾಯಿತಿಗೂ ಆ ಯೂನಿಯನ್‌ಗೆ ಮಂಜೂರಾದ ಮೊಬಲಗನ್ನು ಪ್ರತಿ ತಾಲ್ಲೂಕು ಬೋರ್ಡು ತಿಳಿಸತಕ್ಕದ್ದು.

ಬಜೆಟ್ಟಿನಲ್ಲಿ ಹಂಚಿರುವ ಮೊಬಲಗನ್ನು ಮೀರತಕ್ಕದ್ದಲ್ಲ.

134. ಯಾವ ಕಾರಣದಿಂದಲಾಗಲಿ ಬಜೆಟ್ಟಿನಲ್ಲಿ ಹಂಚಿರುವ ಒಟ್ಟು ಮೊಬಲಗನ್ನು ಮೀರತಕ್ಕದ್ದಲ್ಲ. ಸಾಲಿನಲ್ಲಿ ಯಾವ ಸಂದರ್ಭದಲ್ಲಿಯಾದರೂ ಮಂಜೂರ್ ಮಾಡಲ್ಪಟ್ಟ ಮೊಬಲಗನ್ನು ಮೀರುವುದು ಅತ್ಯವಶ್ಯಕವಾಗಿ ಕಂಡುಬಂದಲ್ಲಿ ಬಾಬು ಹೊರಳೆಯಿಂದ ಅದಕ್ಕೆ ಅನುಕೂಲ ಪಡಿಸತಕ್ಕದ್ದು, ಮತ್ತು ಅದಕ್ಕೆ ಅವಕಾಶವಿಲ್ಲದ ಪಕ್ಷದಲ್ಲಿ ಇನ್ನೂ ಹೆಚ್ಚು ಮೊಬಲಗಿಗಾಗಿ ಸರ್ಕಾರದವರಿಗೆ ಬರೆದುಕೊಂಡು ಮಂಜೂರಾತಿಯನ್ನು ಪಡೆಯತಕ್ಕದ್ದು. ವಿಧಿಸಲ್ಪಟ್ಟಿರುವ ಕನಿಷ್ಠ ಪ್ರಮಾಣಕ್ಕಿಂತ ಅಂದಾಜು ಮಾಡಲ್ಪಟ್ಟ ಆಖೈರ್ ಬಾಕಿಯು ಕಡಮೆಯಾಗದ ಸಂದರ್ಭದಲ್ಲಿ ಮಾತ್ರ ಇಂತಹ ಹೆಚ್ಚು ಮೊಬಲಗು ಮಂಜೂರ್ ಮಾಡಲ್ಪಡತಕ್ಕದ್ದು.

ನೌಕರಿಗಳನ್ನು ಹೊಸದಾಗಿ ಏರ್ಪಡಿಸುವುದಕ್ಕೆ ಅಥವಾ ವಜಾ ಮಾಡುವದಕ್ಕೆ ಸರ್ಕಾರದ ಅಪ್ಪಣೆಯು ಅವಶ್ಯ.

135. ಮುಂಚಿತವಾಗಿ ಸರ್ಕಾರದವರ ಅಪ್ಪಣೆಯನ್ನು ಪಡೆಯದೆ, ಖಾಯುಮಾದ ಅಥವಾ ಹಂಗಾಮಿಯಾದ ಯಾವ ಕೆಲಸವನ್ನೂ ಏರ್ಪಡಿಸತಕ್ಕದ್ದಲ್ಲ ಅಥವಾ ವಜಾವನ್ನು ಮಾಡತಕ್ಕದ್ದಲ್ಲ, ಅಥವಾ ಅಂತಹ ನೌಕರಿಯ ಸಂಬಳವನ್ನು ಬದಲಾಯಿಸತಕ್ಕದ್ದಲ್ಲ.

ಷರಾ :—ಕೆಲಸಗಳಿಗೆ ಖರ್ಚು ಹಾಕಲ್ಪಡತಕ್ಕ ಸಂಬಳವುಳ್ಳ ಹಂಗಾಮಿ ಸಿಬ್ಬಂದಿಗೆ ಈ ನಿಬಂಧನೆಯು ಲಗಾವಾಗುವುದಿಲ್ಲ.

ಸಾದಿಲ್ವಾರ್ ಖರ್ಚುಗಳು.

136. (1) ಬಜೆಟ್ಟಿನಲ್ಲಿ ಸಾಮಾನ್ಯವಾಗಿ ಮಂಜೂರಾದ ಮೊಬಲಗಿಗೂ ಮತ್ತು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ ಸಾಮಾನ್ಯ ವಿಚಾರಣೆಗೂ, ಮತ್ತು ಮುಂದಿನ ಅಧಿಕರಣಗಳ ನಿಯಮಗಳಿಗೂ ಒಳಪಟ್ಟು, ಬೋರ್ಡಿನ ಕಾರ್ಯ ನಿರ್ವಾಹಕ್ಕೆ ನೈಮಿತ್ತಿಕವಾದ ಮತ್ತು ಅವಶ್ಯಕವಾದ ಸಾದಿಲ್ವಾರಿಗಾಗಿ ಎಂದರೆ ಕಛೇರಿಯ ಕುರ್ಚಿ ಮೇಜಾ ವಗೈರೇ ಸಾಮಾನುಗಳಿಗಾಗಿಯೂ, ಉಪಕರಣಗಳಿಗಾಗಿಯೂ, ಮತ್ತು ಸ್ಟೇಷನರಿ ಇಲಾಖೆಯಿಂದ ಮಾಮೂಲಾಗಿ ಸರಬರಾಯಿ ಆಗದೆ ಇರುವ ಲೇಖನ ಸಾಮಗ್ರಿಗಳಿಗಾಗಿಯೂ ಬೋರ್ಡಿನವರು ಸಾದಿಲ್ವಾರ್ ಖರ್ಚು ಮಾಡಬಹುದು.

(2) 50 ರೂಪಾಯಿಗಳಿಗೆ ಮೇಲ್ಪಟ್ಟು ಖರ್ಚು ತಗಲುವ ಯಾವ ಸಾದಿಲ್ವಾರ್ ಬಾಬಿಗಾದರೂ ಸರ್ಕಾರದ ಅಪ್ಪಣೆ ಅವಶ್ಯಕವಾದುದು.

(3) ವ್ಯವಹಾರಗಳಿಗಾಗಿ ಆಗುವ ಚಿಲ್ಲರೆ ಖರ್ಚುಗಳಿಗೆ ಮಂಜೂರಾತಿಯು ಅವಶ್ಯಕವಿಲ್ಲ. ಆದರೆ ಖರ್ಚು 50 ರೂಪಾಯಿಗಳಿಗೆ ಮೀರಬಹುದಾಗಿದ್ದರೆ ಸರ್ಕಾರದ ಅಪ್ಪಣೆಯನ್ನು ಹೊಂದಬೇಕು.

(4) 20 ರೂಪಾಯಿಗಳಿಗೆ ಮೀರುವ ಬೆಲೆಯುಳ್ಳ ಯೂರೋಪ್ ಖಂಡದಲ್ಲಿ ತಯಾರ್ಮಾಡಲ್ಪಟ್ಟ ಯಾವ ಸಾಮಾನನ್ನಾದರೂ ಸರ್ಕಾರದ ಅಪ್ಪಣೆ ಇಲ್ಲದೆ ಕೊಳ್ಳತಕ್ಕದ್ದಲ್ಲ.

(5) ಸ್ಟೇಷನರಿ ಇಲಾಖೆಯಿಂದ ಮಾಮೂಲಾಗಿ ಸರಬರಾಯಿ ಆಗದ ಎಂದರೆ, ಗೋಂದು, ನೂಲು, ಸೂಜಿಗಳು, ದೇಶೀಯ ಲೇಖಣಿಗಳು, ದೇಶೀಯ ಮಸಿ, ಗುಂಡು ಸೂಜಿಗಳು, ಸಣಬಿನ ಹುರಿ, ಮೇಣದ ಬಟ್ಟೆ, ಬರಡೆಕಾಗದ ಮತ್ತು ಬೈಂಡ್ ಮಾಡುವುದಕ್ಕೆ ಬೇಕಾದ ಸಾಮಾನುಗಳು, ಇವುಗಳು ವಿನಾ, ಮಿಕ್ಕ ಲೇಖನ ಸಾಮಗ್ರಿಗಳನ್ನು ಸಾಮಾನ್ಯವಾಗಿ ಸ್ಟೇಷನರಿ ಇಲಾಖೆಯಿಂದ ಪಡೆಯಬೇಕು. ಜರೂರಾದ ಸಂದರ್ಭದಲ್ಲಿ ಸಾಮಾನ್ಯವಾಗಿ ಸ್ಟೇಷನರಿ ಇಲಾಖೆಯಿಂದ, ಸರಬರಾಯಿ ಆಗತಕ್ಕ ಲೇಖನ ಸಾಮಗ್ರಿಗಳನ್ನು ಡೆಪ್ಯುಟಿ ಕಮಿಷನರ ಅಪ್ಪಣೆಯಿಂದ ಸ್ಥಳದಲ್ಲಿಯೇ ಕೊಂಡುಕೊಳ್ಳಬಹುದು.

(6) ಸರ್ಕಾರದವರ ಪ್ರತ್ಯೇಕವಾದ ಮಂಜೂರಾತಿ ಇಲ್ಲದೆ ಆಯಾಯ ಸ್ಥಳದಲ್ಲಿ ನಮೂನೆಗಳನ್ನು ಅಚ್ಚು ಹಾಕುವುದನ್ನು ನಿಷೇಧಿಸಿರುತ್ತದೆ.

(7) ಯಾವನಾದರೂ ಒಬ್ಬ ಸರ್ಕಾರದ ಉದ್ಯೋಗಸ್ಥನ ಅಥವಾ ಇತರ ಮನುಷ್ಯನ ಅಥವಾ ಪ್ರಜೆಗಳಿಗೆ ಸಂಬಂಧಪಟ್ಟ ವಿಶೇಷ ಕಾರ್ಯದ ಗೌರವಾರ್ಥವಾಗಿ ನಡೆಯಬಹುದಾದ ವಿನೋದಗಳು, ಬಹುಮಾನಗಳು, ದೀಪೋತ್ಸವಗಳು, ಉತ್ಸವಗಳು, ಅಥವಾ ಆಚರಣೆಗಳು ಇವುಗಳಿಗಾಗಿ ಕಂದಾಯದ ಹುಟ್ಟುವಳಿಯ ಹಣದಿಂದ ಖರ್ಚು ಮಾಡಲಾಗದು.

(8) ಸರ್ಕಾರದವರ ಅಪ್ಪಣೆಯನ್ನು ಮುಂದಾಗಿ ಪಡೆಯದೆ ಮನೆ ಬಾಡಿಗೆ ಮುಂತಾದ ಆಗಾಗ್ಗೆ ಸಂಭವಿಸುವ ಖರ್ಚುಗಳನ್ನ ಮಾಡಕೂಡದು.

ವಾಪಸ್ ಕೊಡತಕ್ಕ ಹಣ.

137. ಬಾಬುವಾರು ವಿಂಗಡಿಸುವದರಲ್ಲಿ ತಪ್ಪಾಗಿ ಜಮಾ ಕಟ್ಟಿದಾಗ ವಿನಾ ಇತರ ಸಂದರ್ಭಗಳಲ್ಲಿ ಸರ್ಕಾರದವರ ಅಪ್ಪಣೆಯನ್ನು ಮುಂದಾಗಿ ಪಡೆಯದೆ ಡಿಸ್ಟ್ರಿಕ್ಟ್ ಫಂಡಿನ ಲೆಕ್ಕಗಳಲ್ಲಿ ಹುಟ್ಟುವಳಿಯಾಗಿ ಜಮಾ ಕಟ್ಟಿರುವ ಹಣವನ್ನು ವಾಪಸ್ ಮಾಡತಕ್ಕದ್ದಲ್ಲ.

ಕೆಲಸಗಳನ್ನು ಮಂಜೂರ್ ಮಾಡುವ ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡುಗಳ ಅಧಿಕಾರ.

138. ಜಮಾ ಖರ್ಚು ಅಂದಾಜಾ ಪಟ್ಟಿಯಲ್ಲಿಟ್ಟಿರುವ ಹಣದ ಅವಧಿಗೊಳಪಟ್ಟು, ಡಿಸ್ಟ್ರಿಕ್ಟ್ ಬೋರ್ಡುಗಳು ಕೆಲಸ ಒಂದಕ್ಕೆ 500 ರೂಪಾಯಿಗಳಿಗೆ ಮೀರದ ಖರ್ಚು ತಗಲುವ ಕೆಲಸಗಳ ಅಂದಾಜಾಗಳನ್ನು ಮಂಜೂರ್ ಮಾಡುವ ಅಧಿಕಾರವನ್ನು ಉಂಟಾಗಿರುತ್ತವೆ. 500 ರೂಪಾಯಿಗಳಿಗೆ ಮೀರಿ ಮುಟ್ಟುವ ಕೆಲಸಗಳಿಗೆ ಗವರ್ನಮೆಂಟಿನವರ ಮಂಜೂರಾತಿಯನ್ನು ಮುಂದಾಗಿ ಪಡೆಯಬೇಕು.

ಹುಕುಂ ಬಮೋಜೀಬ್,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಫೋರ್ ಗೌರ್ನ್ಮೆಂಟಿನ ಸೆಕ್ರೆಟರಿ.

389

401

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 9.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 3, ಸನ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ನಂಬರ್ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್‌ಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್‌ಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸಗಳು.

3ನೆ ಭಾಗ—ಲೆಜಿಸ್‌ಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದಪತ್ರಗಳು — ಇಲ್ಲಾ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 13ನೆ ಫೆಬ್ರವರಿ 1904.

ನಂ. ಲೋ. ಬೋ. ಪಿ. 1090, ಇದರಿಂದ್ರ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ರೋಗ ತಗಲಿದ ಪ್ರದೇಶಗಳಾಗಿ ಆಗಿಂದಾಗ್ಯೆ ಪ್ರಸಿದ್ಧ ಪಡಿಸಲ್ಪಟ್ಟ ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗವಿಲ್ಲದೆ ಇರುವದ್ದರಿಂದ ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ:—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಊರಕೆರೆ	.. ತುಮಕೂರು	13. ಲಕ್ಕೇನಹಳ್ಳಿ	.... ತುಮಕೂರು
2. ಬೆಳಗುಂಬ	... ಡಿಟೋ	14. ಗೂಳಹರವಿ	... ಡಿಟೋ
3. ಶೆಟ್ಟಿಹಳ್ಳಿ	.. ಡಿಟೋ	15. ಚಿನ್ನೆಹನುಮನಪಾಳ್ಯ	.. ಡಿಟೋ
4. ಹೊನ್ನುಡಿಕೆ	... ಡಿಟೋ	16. ಕಲ್ಲುವಡ್ಡರಹಟ್ಟಿ	... ಡಿಟೋ
5. ಕಳಸೆಗೌಡ್ನಪಾಳ್ಯ	.... ಡಿಟೋ	17. ದಾನಪ್ಪಶೆಟ್ಟಿಪಾಳ್ಯ	... ಡಿಟೋ
6. ಪಾತಗೋನಹಳ್ಳಿ	.. ಡಿಟೋ	18. ಹಾರೇನಹಳ್ಳಿ	.. ಡಿಟೋ
7. ರಾಮದಾಸಪ್ಪನ ಪಾಳ್ಯ	.. ಡಿಟೋ	19. ಗುಲಗಂಜಿಹಳ್ಳಿ	.. ಡಿಟೋ
8. ಮಾರನಾಯಕನಪಾಳ್ಯ	.. ಡಿಟೋ	20. ಕೈದಾಳ	.. ತಿಪಟೂರು
9. ಬೋಚನಹಳ್ಳಿ	.. ಡಿಟೋ	21. ನಾಗರಗಟ್ಟ	... ಡಿಟೋ
10. ಬೊಮ್ಮನಹಳ್ಳಿ	... ಡಿಟೋ	22. ಬಿಗ್ನಸಂತೆ	.. ಡಿಟೋ
11. ಪುರ್ಲಕುಂಟೆ	.. ಡಿಟೋ	23. ಅರಚನಹಳ್ಳಿ	.. ಡಿಟೋ
12. ಮಲ್ಲಸಂದ್ರ	.. ಡಿಟೋ	24. ಅಕ್ಕೇನಹಳ್ಳಿ	... ಕೊರಟಗೆರೆಸಬ್ ತಾ||

ತಾರೀಖು 13ನೆ ಫೆಬ್ರವರಿ 1904.

ನಂ. ಲೋ. ಜೋ. ಪಿ. 1038, ತುಮಕೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ಇರುವ ಇದರಡೀ ಕಂಡ ಸ್ಥಳಗಳಲ್ಲಿ ನಡೆಯುವ ಕೆಳಗೆ ನಮೂದು ಮಾಡಲ್ಪಟ್ಟ ರಥೋತ್ಸವಗಳ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಗವರ್ನ್ಮೆಂಟಿನವರಿಗೆ ನಿಷ್ಕರ್ಷೆಯಾಗಿರುವದ್ದರಿಂದ :—

ರಥೋತ್ಸವದ ಹೆಸರು.	ಸ್ಥಳ.	ತಾಲ್ಲೂಕು.	ತಾರೀಖು. ಯಾವ ಲಾಗಾಯತು.	ತಾರೀಖು. ಯಾವ ವರಿವಿಗೆ.
ತುಮಕೂರು ಡಿಸ್ಟ್ರಿಕ್ಟು.				
1. ಸಿದ್ದಲಿಂಗೇಶ್ವರ ರಥೋತ್ಸವ ...	ಯಡಿಯೂರು ..	ಕುಣಿಗಲ್ ...	20—3—04	27—3—04
ಶಿವಮೊಗ್ಗಾ ಡಿಸ್ಟ್ರಿಕ್ಟು.				
2. ಶ್ರೀ ಅಶ್ವತ್ಥನಾರಾಯಣ ದೇವರ ರಥೋತ್ಸವ.	ಮಹಿಷಿ ..	ತೀರ್ಥಹಳ್ಳಿ ..	29—3—04	2—4—04

ಸನ್ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ 2ನೆ ನಂಬರ್ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಗವರ್ನ್ಮೆಂಟಿನವರು, ಪ್ರತಿ ಬಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಮೇಲ್ಕಂಡ ಸ್ಥಳಗಳಿಗೆ ಪ್ಲೇಗ್ ರೋಗ ಪ್ರದೇಶಗಳಿಂದ ಜನಗಳು ಬರುವದನ್ನು ಅಕ್ಷೇಪಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ರಥೋತ್ಸವಗಳಿಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 13ನೆ ಫೆಬ್ರವರಿ 1904.

ನಂ. ಲೋ. ಜೋ. ಪಿ. 1092, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮರ್ಕುಂ 9353—ಪಿ. ಪ್ಲೈ. 21-96 ಮತ್ತು 96ನೆ ಮತ್ತು 9334—ಪಿ. ಪ್ಲೈ. 21-96ನೆ ನಂಬರು ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಕಮಂಡಲಗುಂಡಿ	.. ಜಗಲೂರು	4. ಗೋಣಿವಾಡ	.. ದಾವಣಗೆರೆ
2. ಕುರುಬರಹಟ್ಟಿ	.. ಚಿತ್ರದುರ್ಗ	5. ಮಳೆ ಬೆನ್ನೂರು	.. ಹರಿಹರ ಸಬ್ ತಾಲ್ಲೂಕ್
.. ಕಂದಗಲ್	.. ದಾವಣಗೆರೆ	6. ಜಗನೂರ ಹಟ್ಟಿ	.. ಚಳ್ಳಕೆರೆ

ತಾರೀಖು 15ನೆ ಫೆಬ್ರವರಿ 1904.

ನಂ. ಲೋ. ಜೋ. ಪಿ. 1097, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮರ್ಕುಂ 9383—ಪಿ. ಪ್ಲೈ. 21—96ನೆ ಮತ್ತು 9384—ಪಿ. ಪ್ಲೈ. 21—96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಸೀರ್ನಾಪುರ	.. ತುಮಕೂರು	6. ತುಮಕೂರು ಹೋಬಳಿಯ ತಿಮ್ಮಲಾಪುರ ...	ತುಮಕೂರು
2. ಕಮಲಾಪುರ ...	ಡಿಟೋ	7. ಚಿಕ್ಕತೊಟ್ಲಗೆರೆಗೆ ಸೇರಿದ ಉಪ್ಪರಪಾಳ್ಯ ...	ಡಿಟೋ
3. ಬೆಳ್ಳಾವಿ ಹೋಬಳಿಯ ತಿಮ್ಮಲಾಪುರ ..	ಡಿಟೋ	8. ಚೂಡಿಗೆರೆ ...	ಗುಬ್ಬಿ
4. ನಾಮಲಹಳ್ಳಿ ...	ಡಿಟೋ	9. ಹಿಂಡಿಸಗೆರೆ ..	ಡಿಟೋ
5. ಮಾರಲೇನಹಳ್ಳಿಗೆ ಸೇರಿದ ಗೊಲ್ಲರಹಟ್ಟಿ ..	ಡಿಟೋ	10. ಮಲ್ಲೆಕಾವು .	ಕೊರಟಗೆರೆ ಸಬ್ ತಾಲ್ಲೂಕು

403

ತಾರೀಖು 16ನೆ ಫೆಬ್ರುವರಿ 1904.

ನಂ. ಲೋ. ಬೋ. ಪಿ. 1108, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ಸ್ ಅನುಸರಿಸಿ 1898ನೆ ಫೆಬ್ರುವರಿ 10ನೆ ಮರ್ಕು ೦ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರಿ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್ಸ್‌ಗಳ ಉದ್ದೇಶಗಳಿಗೋಸ್ಕರ ಹಾಸನದ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಅರಸೀಕೆರೆ	.. ಅರಸೀಕೆರೆ	10. ಹಂಗರಹಳ್ಳಿ	... ಹೊಳೆನರಸೀಪುರ.
2. ಕರಗುಂಡ	.. ಡಿಟೋ	11. ದ್ಯಾವಲಾಪುರ	.. ಹಾಸನ.
3. ಕಾರ್ಗೆರೆ	.. ಡಿಟೋ	12. ಗುಡ್ಡಿನಹಳ್ಳಿ	... ಡಿಟೋ
4. ಬಸವನಹಳ್ಳಿ	.. ಡಿಟೋ	13. ಚೆನ್ನಪಟ್ಣ	.. ಡಿಟೋ
5. ಬಡ್ಡರಹಟ್ಟಿ	... ಡಿಟೋ	14. ಚೆನ್ನೈಯ್ಯನಹಳ್ಳಿ	... ಬೇಲೂರು
6. ಗೊಲ್ಲರಹಟ್ಟಿ	... ಡಿಟೋ	15. ಶಂಕರದೇವರಪೇಟೆ	.. ಡಿಟೋ
7. ಹಾರನಹಳ್ಳಿ	... ಡಿಟೋ	16. ಮಾಯನವಲೆ	... ಚೆನ್ನರಾಯಪಟ್ಣ
8. ರಂಗಾಪುರ	... ಡಿಟೋ	17. ನವಲೆ	.. ಡಿಟೋ.
9. ಬಸವಾಪಟ್ಣ	.. ಅರಕಲಗೂಡು		

ತಾರೀಖು 19ನೆ ಫೆಬ್ರುವರಿ 1904.

ನಂ. ಲೋ. ಬೋ. ಪಿ. 1118, ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿರುವ ಇದರಡೀ ಕಂಡ ಸ್ಥಳಗಳಲ್ಲಿ ನಡೆಯುವ ಕೆಳಗೆ ನಮೂದು ಮಾಡಲ್ಪಟ್ಟ ಜಾತ್ರೆಗಳ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ತಾರೀಖು.	
			ಯಾವ ಲಾಗಾಯತು.	ಯಾವ ವರಿವಿಗೆ.
ಕಡೂರು ಡಿಸ್ಟ್ರಿಕ್ಟು.				
1. ವೀರಭದ್ರದೇವರ ಜಾತ್ರೆ ..	ಬಾಳೆಹೊನ್ನೂರು ಮಠ	ಯಡಹಳ್ಳಿ ಸಬ್ ತಾಲ್ಲೂಕು	25—2—04	6—3—04
2. ದುರ್ಗಮ್ಮದೇವರ ಜಾತ್ರೆ ...	ವಿಠಲ	ಡಿಟೋ	29—2—04	7—3—04
3. ಮಡದಬತ್ತಿಗ ಜಾತ್ರೆ	ಭೈರದೇವರ ಗ್ರಾಮದಲ್ಲಿರುವ ಕೋಗೆ	ಕೊಪ್ಪ	25—2—04	3—3—04
4. ರಾಮೇಶ್ವರದೇವರ ರಥೋತ್ಸವ ..	ದೇವವೃಂದ	ಮೂಡಿಗೆರೆ	17—3—04	17—4—04
5. ಶ್ರೀರಾಮ ನವರಾತ್ರೆ ..	ಬೀರೂರು	ಕಡೂರು.	20—3—04	31—3—04
6. ಋಷ್ಯಶೃಂಗೇಶ್ವರ ದೇವರ ಜಾತ್ರೆ ..	ಮಾರಿಕಲ್ಲು	ಕೊಪ್ಪ	23—3—04	29—3—04
ಶಿವಮೊಗ್ಗ ಡಿಸ್ಟ್ರಿಕ್ಟು.				
ತೊಗರ್ಸಿ ರಥೋತ್ಸವ ..	ತೊಗರ್ಸಿ	ಸಿಕಾರಿಪುರ	26—2—04	5—3—04

1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರು ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು ಪ್ರತಿ ಒಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಮೇಲ್ಕಂಡ ಜಾತ್ರೆಗಳಿಗೆ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಅಡ್ಡೀಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರಿ ಜಾತ್ರೆಗಳಿಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು;

ತಾರೀಖು 5ನೆ ಫೆಬ್ರುವರಿ 1904.

ನಂ. ಲೋ. ಜೋ. ಪಿ. 1027, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರುವರಿ 10ನೆ ಮುಕ್ಕಾಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಹೆನ್ನೂರು ..	ಬೆಂಗಳೂರು	7. ಹರವಸಂದ್ರ ..	ನೆಲಮಂಗಲ
2. ಸಾರಕ್ಕಿ ...	ಡಿಟೋ	8. ಕೋಲಸ್ಪೇಟೆ ..	ಕೋಲಸ್ಪೇಟೆ ಸಬ್ ತಾ||
3. ಅಂಹಳ್ಳಿ ..	ಹೊಸಕೋಟೆ	9. ಜಿಗಳೆ ..	ಆನೇಕಲ್
4. ಲಿಂಗದೇವನಮಲ್ಲಸಂದ್ರ ..	ಡಿಟೋ	10. ಆನೇಕಲ್ ..	ಡಿಟೋ
5. ಬಿದರಹಳ್ಳಿ ..	ಡಿಟೋ	11. ವೆಂಕಟಗಿರಿಕೋಟೆ ..	ದೇವನಹಳ್ಳಿ
6. ಚಿಕ್ಕಬೇರಗ್ರಾಮ ..	ಡಿಟೋ		

ತಾರೀಖು 20ನೆ ಫೆಬ್ರುವರಿ 1904.

ನಂ. ಲೋ. ಜೋ. ಪಿ. 1123, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳಲ್ಲಿ ನಡೆಯುವ ಕೆಳಗೆ ನಮೂದು ಮಾಡಲ್ಪಟ್ಟ ಜಾತ್ರೆಗಳ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಶ್ಚಯವಾಗಿರುವದ್ದರಿಂದ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ತಾರೀಖು.	
			ಯಾವ ಲಾಗಾಯತು.	ಯಾವ ವರಿವಿಗೆ.
1. ಗಂಗಾಧರೇಶ್ವರ ಜಾತ್ರೆ ...	ಪಂಚನಗಿರಿ ...	ನಾಗಮಂಗಲ ...	1—3—04	6—3—04
2. ಮುಳ್ಳುಕಟ್ಟಮ್ಮನ ಜಾತ್ರೆ ...	ಮುಳ್ಳುಕಟ್ಟೆ ..	ಡಿಟೋ .	9—3—04	
3. ಮಾದೇಶ್ವರದೇವರ ಜಾತ್ರೆ ..	ಬೂದನೂರು ..	ಹೆಗ್ಗಡದೇವನಕೋಟೆ.	7—3—04	
4. ಪಾರ್ವತಮ್ಮನ ಜಾತ್ರೆ ...	ಕಂದಗಾಲ ...	ಗುಂಡ್ಲುಪೇಟೆ ..	7—3—04	8—3—04
5. ಶ್ರೀ ಹಿಮವದ್ಗೋಪಾಲಸ್ವಾಮಿಯ ರಥೋತ್ಸವ.	ಹಿಮವದ್ ಗೋಪಾಲ ಸ್ವಾಮಿಯ ಬೆಟ್ಟ.	ಡಿಟೋ ..	17—3—04	22—3—04
6. ಮಾರಿ ಜಾತ್ರೆ ...	ಪಡವಗೂರು ..	ಡಿಟೋ ..	6—3—04	8—3—04
7. ಮಹಾಲಕ್ಷ್ಮೀ ರಥ ...	ಕನ್ನಂಬಾಡಿ ...	ಕೃಷ್ಣರಾಜಪೇಟೆ. .	23—3—04	28—3—04
8. ಕಿಕ್ಕೇರಿಅಮ್ಮನ ಜಾತ್ರೆ ..	ಕಿಕ್ಕೇರಿ ..	ಡಿಟೋ ..	22—3—04	25—3—04
9. ಕರೀಘಟ್ಟದ ರಥೋತ್ಸವ ..	ಕರೀಘಟ್ಟ ..	ಶ್ರೀರಂಗಪಟ್ಟಣ ..	3—3—04	
10. ಹೈದರ್‌ಅಲಿಖಾನರ ಉರುಸು ..	ಗಂಜಾಂ ..	ಡಿಟೋ ..	17—3—04	19—3—04
11. ಮೊಹರಂ ಪಬ್ಬ ..	ಡಿಟೋ ...	ಡಿಟೋ ...	19—3—04	30—3—04
12. ಬೊಪ್ಪಗೌಡನ ಪುರದ ಜಾತ್ರೆ	ಬೊಪ್ಪಗೌಡನಪುರ ...	ಮಳವಳ್ಳಿ ..	16—3—04	18—3—04

ಸ್ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರ್ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು, ಪ್ರತಿ ಒಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಮೇಲ್ಕಂಡ ಜಾತ್ರೆಗಳಿಗೆ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಅಡ್ಡಿಪಡಿಸುತ್ತಾರೆ. ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ಜಾತ್ರೆಗಳಿಗೆ ಹೊರಡುವ ಬರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 20ನೆ ಫೆಬ್ರವರಿ 1904.

ನಂ. ಲೋ. ಬೋ. ಪಿ. 1125, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಕಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಕೋಲಾರ ವ ಕಡೂರು ಡಿಸ್ಟ್ರಿಕ್ಟುಗಳಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಕೋಲಾರ ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಕೋಲಾರ ಟವುನ್	... ಕೋಲಾರ.	17. ಯಲಗಲಪಲ್ಲಿ	... ಬಾಗೇಪಲ್ಲಿ.
2. ವಕ್ಕಲೇರಿ	... ಡಿಟೋ	18. ಹಲಗನಹಳ್ಳಿ	... ಗೌರಿಬಿದನೂರು
3. ಅರ್ಜನಹಳ್ಳಿ	... ಡಿಟೋ	19. ಭೋಗಪರ್ತಿ	... ಚಿಕ್ಕಬಳ್ಳಾಪುರ
4. ಕೋರೂರು	... ಮಾಲೂರು.	20. ನಕ್ಕಲಹಳ್ಳಿ	... ಡಿಟೋ
5. ನಪ್ಪಚಪಲ್ಲಿ	... ಡಿಟೋ	21. ಆರೂರು	... ಚಿಕ್ಕಬಳ್ಳಾಪುರ
6. ಅಂಚಿಮುಸ್ಕೂರು	... ಡಿಟೋ	22. ಆವಾಲ್ ನಾಗೇನಹಳ್ಳಿ	... ಡಿಟೋ.
7. ಚಿನ್ನಸಂದ್ರ	... ಚಿಂತಾಮಣಿ.	23. ಮೈಲಪ್ಪನಹಳ್ಳಿ	... ಡಿಟೋ
8. ಬಿರ್ದಹಳ್ಳಿ	... ಡಿಟೋ	24. ಯಲಗಲಪಲ್ಲಿ	... ಡಿಟೋ
9. ಕರಿಯಪಲ್ಲಿ	... ಡಿಟೋ	25. ಕಣಿತಹಳ್ಳಿ	... ಡಿಟೋ
10. ಪೈನಪಲ್ಲಿ	... ಡಿಟೋ	26. ನಾರಿಗಾನಹಳ್ಳಿ	... ಡಿಟೋ
11. ಸಾದಲಿ	... ಸಿಡ್ಲಘಟ್ಟ.	27. ಮಾಗೊಂದಿ	... ಬಂಗಾರಪೇಟೆ
12. ದೇವಗಾನಹಳ್ಳಿ	... ಡಿಟೋ	28. ಕ್ಯಾಸಂಬಳ್ಳಿ	... ಡಿಟೋ
13. ತೇಕಲಹಳ್ಳಿ	... ಡಿಟೋ	29. ಕಾರಹಳ್ಳಿ	... ಡಿಟೋ
14. ಮುತ್ತೂರು	... ಡಿಟೋ	30. ಬೇಗನೂರು	... ಡಿಟೋ
15. ಲಕ್ಷ್ಮೀಸಾಗರ	... ಗುಡಿಬಂಡೆ ಸಬ್ ತಾ॥	31. ಐಸೋರ ಹೊಸಹಳ್ಳಿ	... ಡಿಟೋ
16. ಮಲ್ಲೇನಹಳ್ಳಿ	... ಡಿಟೋ	32. ಹೊಸ ನಾಗೇನಹಳ್ಳಿ	... ಮುಳಬಾಗಲು

ಕಡೂರು ಡಿಸ್ಟ್ರಿಕ್ಟು.

1. ಕಡೂರು	... ಕಡೂರು	3. ಲಿಂಗದಹಳ್ಳಿ	... ತರೀಕೆರೆ
2. ಎಡಹಳ್ಳಿ	... ಎಡಹಳ್ಳಿ ಸಬ್ ತಾ॥		

ತಾರೀಖು 29ನೆ ಫೆಬ್ರವರಿ 1904.

ನಂ. ಲೋ. ಬೋ. ಪಿ. 1163, ತುಮಕೂರು ಡಿಸ್ಟ್ರಿಕ್ಟು ಪಾವಗಡ ತಾಲ್ಲೂಕಿನ ಕಸಬಾ ಹೋಬಳಿಯಲ್ಲಿ ನಡೆಯುವ ಕಣಿವೆ ನರಸಿಂಹಸ್ವಾಮಿ ಜಾತ್ರೆಯ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳದಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದರಿಂದ, 1897ನೆ ಇಸವಿಯ ಸಾಂಕ್ರಾಮಿಕರೋಗಗಳ IIನೆ ನಂಬರ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, 1904ನೆ ಮಾರ್ಚಿ 1ರ ಲಾಗಾಯತು 4ರ ವರೆವಿಗೆ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳದಲ್ಲಿ ಸೇರುವದನ್ನು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅಡ್ಡೀ ಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ಜಾತ್ರೆಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 2ನೆ ಮಾರ್ಚಿ 1904.

ನಂ. ಲೋ. ಬೋ. ಪಿ. 1165, ಹಾಸನ, ಬೆಂಗಳೂರು ವ ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿರುವ ಇದರಡೀ ಕಂಡ ಸ್ಥಳಗಳಲ್ಲಿ ನಡೆಯುವ ಕೆಳಗೆ ನಮೂದು ಮಾಡಲ್ಪಟ್ಟ ಜಾತ್ರೆಗಳ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದರಿಂದ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ತಾರೀಖು.	
			ಯಾವ ಲಾಗಾಯತು.	ಯಾವ ವರೆವಿಗೆ.
ಹಾಸನ ಡಿಸ್ಟ್ರಿಕ್ಟು.				
ಶ್ರೀ ಚನ್ನಕೇಶವಸ್ವಾಮಿಯ ರಥೋತ್ಸವ.	ಬೇಲೂರು ...	ಬೇಲೂರು ...	27—3—04	4—4—04

ಬೆಂಗಳೂರು ಡಿಸ್ಟ್ರಿಕ್ಟು.

ಶ್ರೀರಂಗನಾಥ ಸ್ವಾಮಿಯ ರಥೋತ್ಸವ.	ಶಿರುಮಲೆ	ಮಾಗಡಿ	25—3—04	5—4—04

ಚಿತ್ರದುರ್ಗ ಡಿಸ್ಟ್ರಿಕ್ಟು.

ತಿಪ್ಪೇರುದ್ರ ದೇವರ ಜಾತ್ರೆ	ನಾಯಿಕನ ಹಟ್ಟಿ	1—3—04	7—3—04

ಸನ್ 1897ನೇ ಇಸವಿಯ ಸಾಂಕ್ರಾಮಿಕ ರೋಗಗಳ IIನೇ ನಂಬರ್ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, ಮೈಸೂರು ಸೀಮೆಯ ಘನವನ್ನುಳ್ಳ ಶ್ರೀಮನ್ ಮಹಾರಾಜಾ ಸರ್ಕಾರದವರು ಪ್ರತಿ ಒಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಮೇಲ್ಕಂಡ ಜಾತ್ರೆಗಳು ನಡೆಯೋ ಸ್ಥಳಗಳಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸೇರುವದನ್ನು ಅಡ್ಡಿ ಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ಜಾತ್ರೆಗಳಿಗೆ ಹೋಗುವ ಪರದೇಶಸ್ಥ ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 2ನೆ ಮಾರ್ಚಿ 1904.

ನಂ. ಲೋ. ಬೋ. ಪಿ. 1167, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 189೯ನೆ ಫೆಬ್ರವರಿ 10ರ ಮುರಾ್ಯಂ 9383 – ಮಿ. ಫೈ. 21–96ನೆ ವ ತ್ತು 9384—ಮಿ. ಫೈ. 1–96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಕ್ಕೋಸ್ಕರ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಇರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಅಕ್ಕಿ ಮಂಗಲ	ಚಿಂತಾಮಣಿ	8. ನಲ್ಲಪಲ್ಲಿ	ಶ್ರೀನಿವಾಸಪುರ
2. ಮೈವಾರ	ಡಿಟೋ	9. ಸಾಮಂನಹಳ್ಳಿ	ಕೋಲಾರ
3. ನಾಯಿನಪಾಳ್ಯ	ಡಿಟೋ	10. ತಂಬಿಹಳ್ಳಿ	ಡಿಟೋ
4. ಲಕ್ಷ್ಮೀಪಲ್ಲಿ	ಶಿಡ್ಲಘಟ್ಟ	11. ದೊಡ್ಡ ಹೇಯೂರು	ಡಿಟೋ
5. ದೊಡ್ಡದಾಸೇನಹಳ್ಳಿ	ಡಿಟೋ	12. ಕೀಲಕೋಟೆ	ಡಿಟೋ
6. ದೇವಲಪಲ್ಲಿ	ಶ್ರೀನಿವಾಸಪುರ	13. ನಾಯಿನಹಳ್ಳಿ	ಚಿಕ್ಕಬಳ್ಳಾಪುರ
7. ರಾಯಲ್ಪಾಡು	ಡಿಟೋ	14. ಗಂಗಮನಪಾಳ್ಯ	ಬೌರಿಂಗ್‌ಪೇಟೆ

ತಾರೀಖು 2ನೆ ಮಾರ್ಚಿ 1904.

ನಂ. ಲೋ. ಬೋ. ಪಿ. 1169, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಾತ್ರೆ ವ ಉತ್ಸವಗಳಿಗೆ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮದರಾಸು ಗವರ್ನ್‌ಮೆಂಟಿನವರು ಅಡ್ಡಿ ಪಡಿಸುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು. ಯಾವ ದಿವಸದಿಂದ ಯಾತು.	ತಾರೀಖು. ಯಾವ ವರಿವಿಗೆ.	ಅಥಾರಿಟಿ.	ಷರಾ.
ಪಂಗುನಿ ಉತ್ತಿರಂ ಉತ್ಸವ ಮತ್ತು ದನಗಳ ಪರಸೆ.	ಮೈಲಾಂ	ತಿಂಡಿವನಂ	ದಕ್ಷಿಣ ಆರ್ಕಾಡ್	16—3—04	30—3—04	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಂಡಾರ್ಸ್‌ಮೆಂಟ್ ನಂ. 313 ಪಿ., ತಾ॥ 23-2-04	ದನಗಳ ಪರಸೆ ನಡೆಯುವದು ಅಡ್ಡಿಪಡಿಸಲ್ಪಟ್ಟಿರುತ್ತದೆ.
ಕಾಳಿಯಮ್ಮನ ಜಾತ್ರೆ	ಆದಮನ ಕೋಟೆ	ಧರ್ಮಪುರಿ	ಸೇಲಂ	28—3—04	12—4—04	ಡಿಟೋ ನಂ. 315 ಪಿ., ತಾ॥ 23-2-04	ಉತ್ಸವಕ್ಕೆ ಯಾತ್ರಾರ್ಥವಾಗಿ ಹೋಗುವದು ಅಡ್ಡಿಪಡಿಸಲ್ಪಟ್ಟಿರುತ್ತದೆ.
ಚಂದ್ರನಾಥ ಸ್ವಾಮಿಯ ರಥೋತ್ಸವ	ಬಾಗಲೂರು	ಹೊಸೂರು	ಡಿಟೋ	20—3—04	3—4—04	ಡಿಟೋ ನಂ. 317 ಪಿ., ತಾ॥ 23—2—04	ಡಿಟೋ

ತಾರೀಖು 24ನೆ ಫೆಬ್ರವರಿ 1904.

ನಂ. 3170—ಲೋ. ಫಂ. 82—03, ಸನ 1902ನೆ ಇಸವಿಯ IIನೆ ನಂಬರ್ ಲೋಕಲ್ ಬೋರ್ಡ್ಸ್ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ಮತ್ತು 1903ನೆ ಸೆಪ್ಟಂಬರ್ 9ನೆ ಮಾರ್ಚಿಂ 30—ಲೆಜಿಸ್ 4-30ನೆ ನಂಬರ್ ಇಸ್ತಿಹಾರ್ನಾಮೆಯೊಡನೆ ಫಾಯಿಷಾದ ರೂಲುಗಳ 21ನೆ ಪ್ಯಾರಾ ಅನುಸರಿಸಿ, ಸದರೀ ರೂಲುಗಳ 7ನೆ ಪ್ಯಾರಾವಿನಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ಕಡೂರು ಡಿಸ್ಟ್ರಿಕ್ಟಿನಲ್ಲಿರುವ ತಾಲ್ಲೂಕು ಬೋರ್ಡುಗಳ ಮೆಂಬರುಗಳ ಇದರಡೀ ಕಂಡ ಪಟ್ಟಿಯು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಫಾಯಿಷ್ಮಾಡಲ್ಪಟ್ಟಿರುತ್ತದೆ :—

ಬೋರ್ಡಿನ ಹೆಸರು.	ಮೆಂಬರುಗಳು.	ಕಸಬು.	ವಾಸಸ್ಥಾನ.
ಚಿಕ್ಕಮಗಳೂರು ತಾಲ್ಲೂಕು ಬೋರ್ಡ್.	**ಎಕ್ಸ್ ಅಫಿಷಿಯೋ ಮೆಂಬರುಗಳು.**		
	1. ಚಿಕ್ಕಮಗಳೂರ ತಾಲ್ಲೂಕಿನ ಅಮಲ್ದಾರು, (ಪ್ರೆಸಿಡೆಂಟರು)		
	2. ಅಸಿಸ್ಟೆಂಟ್ ಸರ್ಜನರು ..		ಕಡೂರು ಡಿಸ್ಟ್ರಿಕ್ಟು
	3. ಪಬ್ಲಿಕ್‌ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು ...		ಚಿಕ್ಕಮಗಳೂರು
	ಇತರ ಮೆಂಬರುಗಳು.		
	(e) ಕ್ಲಾಜ್ ಅನುಸರಿಸಿ ಚುನಾಯಿಸಲ್ಪಟ್ಟವರು.		
	4. ಮ॥ ರಾಮಯ್ಯನವರು	ಶಾನಭೋಗರು ಮತ್ತು ಜಮೀನ್ದಾರು	ಲಕ್ಯ
	5. ,, ನಾಡಿಗ ವೆಂಕಟ ಸುಬ್ಬಯ್ಯನವರು ..	ಪಟೇಲರು	ಚಿಕ್ಕಮಗಳೂರು
	6. ,, ಅಂಣಗಿರಿ ಶಾಮರಾಯರು	ಕಾಫಿಪ್ಲಾಂಟರು	ವಸ್ತಾರ
	7. ,, ದ್ಯಾವಪ್ಪಗೌಡರು	ಪಟೇಲರು ಮತ್ತು ಜಮೀನ್ದಾರು	ಬೈಗೂರು
	(f) ಕ್ಲಾಜ್ ಅನುಸರಿಸಿ ಚುನಾಯಿಸಲ್ಪಟ್ಟವರು.		
	8. ಮ॥ ಸಿ. ವಾಸುದೇವರಾಯರು ..	ಕಾಫಿಪ್ಲಾಂಟರು	ಚಿಕ್ಕಮಗಳೂರು
	(g) ಕ್ಲಾಜ್ ಅನುಸರಿಸಿ ನೊಮಿನೇಟ್ ಮಾಡಲ್ಪಟ್ಟವರು.		
	9. ಮ॥ ಲಿಂಗೇಗೌಡರು ...	ಪಟೇಲರು ಮತ್ತು ಜಮೀನ್ದಾರು	ಬಾಗಮನೆ
	10. ,, ರಾಮಪ್ಪಗೌಡರು	ಡಿಟೋ	ಅಲ್ದೂರು
	11. ,, ಷೇಕ್ ಅಲ್ಲಸಾಹೇಬರು ..	ಕಾಫಿಪ್ಲಾಂಟರು	ಗಡಬನಹಳ್ಳಿ
	12. ,, ವೀರಪ್ಪಗೌಡರು ..	ಪಟೇಲರು ಮತ್ತು ಜಮೀನ್ದಾರು	ಕೆಳಗೂರು
ಮೂಡಗೆರೆ ತಾಲ್ಲೂಕು ಬೋರ್ಡ್.	**ಎಕ್ಸ್ ಅಫಿಷಿಯೋ ಮೆಂಬರುಗಳು.**		
	1. ಮೂಡಗೆರೆ ತಾಲ್ಲೂಕಿನ ಅಮಲ್ದಾರು (ಪ್ರೆಸಿಡೆಂಟರು)		
	2. ಆಸ್ಪಿಟಲ್ ಅಸಿಸ್ಟೆಂಟರು, ಮೂಡಗೆರೆ		
	3. ಪಬ್ಲಿಕ್‌ವರ್ಕ್ಸ್ ಇಲಾಖೆಯ ಸಬ್‌ಡಿವಿಜನ್ ಆಫೀಸರು		
	ಇತರ ಮೆಂಬರುಗಳು.		
	(e) ಕ್ಲಾಜ್ ಅನುಸರಿಸಿ ಚುನಾಯಿಸಲ್ಪಟ್ಟವರು.		
	4. ಮ॥ ಜನಾರ್ದನಯ್ಯನವರು	ಜಮೀನ್ದಾರು ಮತ್ತು ಕಾಫಿಪ್ಲಾಂಟರು	ಕೆಂಜಿಗೆ ಎಸ್ಟೇಟ್
	5. ,, ನಂಜಪ್ಪಯ್ಯನವರು ..	ಶಾನುಭೋಗರು ಮತ್ತು ಜಮೀನ್ದಾರು	ಗೋಣೀಬೀಡು
	6. ,, ದುಗ್ಗಪ್ಪಯ್ಯನವರು ..	ಜಮೀನ್ದಾರು	ಜಾವಳಿ
	7. ,, ನಂಜಪ್ಪಯ್ಯನವರು	ಶಾನುಭೋಗರು ಮತ್ತು ಜಮೀನ್ದಾರು	ಕಳಸ
	(f) ಕ್ಲಾಜ್ ಅನುಸರಿಸಿ ಚುನಾಯಿಸಲ್ಪಟ್ಟವರು.		
	8. ಮ॥ ದಾವೂದಸಾಹೇಬರು	ಸಾಹುಕಾರು	ಮೂಡಗೆರೆ

ಬೋರ್ಡಿನ ಹೆಸರು	ಮೆಂಬರುಗಳು.	ಕಸಬು.	ವಾಸಸ್ಥಾನ.
ಮೂಡಿಗೆರೆ ತಾಲ್ಲೂಕು ಬೋರ್ಡು.	(g) ಕ್ಲಾಜ್ ಅನುಸರಿಸಿ ಮೊಕರೂರು ಮಾಡಲ್ಪಟ್ಟವರು.		
	9. ಮಾ|| ದ್ಯಾವೇಗೌಡರು	ಪಟೇಲರು ಮತ್ತು ಜಮೀನ್ದಾರು	ಮಾಕೊನಹಳ್ಳಿ
	10. ,, ಜೆ. ಜಿ. ಹ್ಯಾಮಿಲ್ಟನ್ಯವರು ..	ಕಾಫಿಪ್ಲಾಂಟರು	ಚಂದ್ರಪುರ್ ಎಸ್ಟೇಟ್
	11. ,, ಬೈರೇಗೌಡರು	ಮಂಡೆ ಪಟೇಲರು ಮತ್ತು ಜಮೀನ್ದಾರು	ಊರುಬಾಗೆ
	12. ,, ಇಬ್ರಾಹಿಂಸಾಹೇಬರು	ಸಾಹುಕಾರು,	ಮೂಡುಗೆರೆ
	ಎಕ್ಸ್ ಅಫಿಷಿಯೋ ಮೆಂಬರುಗಳು.		
ಕಡೂರು ತಾಲ್ಲೂಕು ಬೋರ್ಡು.	1. ಕಡೂರು ತಾಲ್ಲೂಕು ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು (ಪ್ರೆಸಿಡೆಂಟರು)		
	2. ಕಡೂರು ತಾಲ್ಲೂಕಿನ ಅಮಲ್ದಾರು (ವೈಸ್ ಪ್ರೆಸಿಡೆಂಟರು)		
	3. ಕಡೂರಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು		
	4. ಪಬ್ಲಿಕ ವರ್ಕ್ಸ ಇಲಾಖೆಯ ಸಬ್ ಡಿವಿಜನ್ ಆಫಿಸರು		
	ಇತರ ಮೆಂಬರುಗಳು.		
	(e) ಕ್ಲಾಜ್ ಅನುಸರಿಸಿ ಚುನಾಯಿಸಲ್ಪಟ್ಟವರು.		
	5 ಮಾ|| ಪಿ. ರಂಗಣ್ಣನವರು	ಜಮೀನ್ದಾರು	ಪಟ್ಟಗೆರೆ
	6. ,, ಶ್ರೀನಿವಾಸಯ್ಯಂಗಾರ್ರು	ದೇವರಹಳ್ಳಿ ಪಟೇಲರು ಮತ್ತು ಜಮೀನ್ದಾರು	ತಂಗಲಿ
	7. ,, ನಾಡಿಗ ರಾಮಣ್ಣನವರು	ಶಾನುಭೋಗರು	ಯಳ್ಳಂಬಳಸೆ
	8. ,, ವೀರಭದ್ರಯ್ಯನವರು	ಜಮೀನ್ದಾರು	ಕೆಂಚಗಾಲ್ ಕಟ್ಟೆ ಹಳ್ಳಿ.
	(f) ಕ್ಲಾಜ್ ಅನುಸರಿಸಿ ಚುನಾಯಿಸಲ್ಪಟ್ಟವರು.		
	9. ಮಾ|| ಟಿ. ನರಸಿಂಹ್ಯಯ್ಯಂಗಾರು	ಜಮೀನ್ದಾರು ಮತ್ತು ಪಟೇಲರು	ತಂಗಲಿ
	(g) ಕ್ಲಾಜ್ ಅನುಸರಿಸಿ ಮೊಕರೂರು ಮಾಡಲ್ಪಟ್ಟವರು.		
	10. ಮಾ|| ಕೆ. ಗೋವಿಂದಪ್ಪನವರು	ಸಾಹುಕಾರು	ಬೀರೂರು
	11. ,, ಕೆ. ಲಿಂಗಪ್ಪಯ್ಯನವರು	ಶಾನುಭೋಗರು ಮತ್ತು ಜಮೀನ್ದಾರು	ಯಗಟಿ
	12. ,, ಅಣ್ವಟ್ಟಿ ರಂಗರಾಯರು	ಜಮೀನ್ದಾರು ಮತ್ತು ಪ್ರಜಾಪ್ರತಿನಿಧಿ ಸಭೆಯ ಮೆಂಬರು	
	ಎಕ್ಸ್ ಅಫಿಷಿಯೋ ಮೆಂಬರುಗಳು.		
ತರೀಕೆರೆ ತಾಲ್ಲೂಕು ಬೋರ್ಡು.	1. ತರೀಕೆರೆ ತಾಲ್ಲೂಕು ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು (ಪ್ರೆಸಿಡೆಂಟರು)		
	2. ತರೀಕೆರೆ ತಾಲ್ಲೂಕಿನ ಅಮಲದಾರು, (ವೈಸ್ ಪ್ರೆಸಿಡೆಂಟರು)		
	3. ಹಾಸ್ಪಿಟಲ್ ಅಸಿಸ್ಟೆಂಟರು		
	4. ಪಬ್ಲಿಕ ವರ್ಕ್ಸ ಇಲಾಖೆಯ ಸಬ್ ಡಿವಿಜನ್ ಆಫಿಸರು		
	ಇತರ ಮೆಂಬರುಗಳು.		
	(e) ಕ್ಲಾಜ್ ಅನುಸರಿಸಿ ಚುನಾಯಿಸಲ್ಪಟ್ಟವರು.		
	5. ಮಾ|| ಹನುಮೇಗೌಡರು	ಪಟೇಲರು ಮತ್ತು ಜಮೀನ್ದಾರು	ಕೋರನಹಳ್ಳಿ
	6. ,, ಪುರದಪ್ಪನವರು	ಡಿಟೋ	ಶಿವನೆ
	7. ,, ಅತ್ತಿಗನಲ್ ಶ್ಯಾಮಣ್ಣನವರು ಉರುಫ್ ವೆಂಕಟಗಿರಿಯಪ್ಪನವರು.	ಜಮೀನ್ದಾರು	ತರೀಕೆರೆ
	8. ,, ಎ. ಕೃಷ್ಣಸ್ವಾಮಿ ಪಿಳ್ಳೆಯವರು	ಕಂಟ್ರ್ಯಾಕ್ಟರು ಮ ಜಮೀನ್ದಾರು	ಡಿಟೋ

ಬೋರ್ಡಿನ ಹೆಸರು.	ಮೆಂಬರುಗಳು.	ಕಸಬು.	ವಾಸಸ್ಥಾನ.
ತರೀಕೆರೆ ತಾಲ್ಲೂಕು ಬೋರ್ಡು	(f) ಕ್ಲಾಜ್ ಅನುಸರಿಸಿ ಚುನಾಯಿಸಲ್ಪಟ್ಟವರು.		
	9. ಮ॥ ಫಣಿಯಪ್ಪನವರು ...	ಸಾಹುಕಾರರು	ತರೀಕೆರೆ
	(g) ಕ್ಲಾಜ್ ಅನುಸರಿಸಿ ಮೊಕರ್ರರ್ ಮಾಡಲ್ಪಟ್ಟವರು.		
	10. ಮ॥ ಪಟ್ಟಾಭಿರಾಮಪ್ಪನಾಯಕ್ಕರು ...	ಪಾಳ್ಯಗಾರರು	ಡಿಟೋ
	11. ,, ನಂಬಿ ಅಬ್ದುಲ್ ಖಾದರ್ ಸಾಹೇಬರು ...	ಜಹಗೀರ್‌ದಾರರು	ತಗಡೆ ಮತ್ತು ತರೀಕೆರೆ
	12. ,, ಡಬ್ಲ್ಯೂ. ಸೆಂಟ್ ಕ್ಲೇರ್ ಜೆರ್ವಿಸ್ ರವರು ...	ಕಾಫಿಪ್ಲಾಂಟರು	ಹೊಸಬಾಗ್ ಎಸ್ಟೇಟ್
ಕೊಪ್ಪ ತಾಲ್ಲೂಕು ಬೋರ್ಡು	ಎಕ್ಸ್ ಅಫಿಷಿಯೋ ಮೆಂಬರುಗಳು.		
	1. ಕೊಪ್ಪದ ತಾಲ್ಲೂಕು ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು (ಪ್ರೆಸಿಡೆಂಟರು)		
	2. ಕೊಪ್ಪದ ತಾಲ್ಲೂಕು ಅಮಲ್ದಾರು, (ವೈಸ್ ಪ್ರೆಸಿಡೆಂಟರು)		
	3. ಹಾಸ್ಪಿಟಲ್ ಅಸಿಸ್ಟೆಂಟರು		
	4. ಕೊಪ್ಪ ರೇಂಜಿನ ಅಸಿಸ್ಟೆಂಟ್ ಇಂಜಿನಿಯರು		
	ಇತರ ಮೆಂಬರುಗಳು.		
	(e) ಕ್ಲಾಜ್ ಅನುಸರಿಸಿ ಚುನಾಯಿಸಲ್ಪಟ್ಟವರು.		
	5. ಮ॥ ಹಲಗಾರ್ ಹುಚ್ಚುರಾಯರು ...	ಜಹಗೀರ್‌ದಾರರು	ಕೊಪ್ಪ
	6. ,, ಚನ್ನಕೇಶವರಾಯರು ...	ಡಿಟೋ	ಹಲಗಾರ್
	7. ,, ಕೆ. ರಾಮಪ್ಪನವರು ...	ಶ್ಯಾನುಭೋಗರು ಮತ್ತು ಜಹಗೀರ್‌ದಾರರು	ಸೊಳ್ಳೈಲು
	8. ,, ವೆಂಕಟಕೃಷ್ಣಯ್ಯನವರು ...	ಸಾಹುಕಾರರು	ಹಂಪಿಹರಪುರ
	(f) ಕ್ಲಾಜ್ ಅನುಸರಿಸಿ ಚುನಾಯಿಸಲ್ಪಟ್ಟವರು.		
	9. ಮ॥ ಲಾಡರ್ ರಾಣಪ್ಪನವರು ...	ಜಹಗೀರ್‌ದಾರರು ಮತ್ತು ಸಾಹುಕಾರರು	ಕೊಪ್ಪ
	(g) ಕ್ಲಾಜ್ ಅನುಸರಿಸಿ ಮೊಕರ್ರರು ಮಾಡಲ್ಪಟ್ಟವರು.		
	10. ಮ॥ ರಾಸ್ ಪೋರ್ಟರ್ ರವರು ...	ಕಾಫಿಪ್ಲಾಂಟರು	ಉಂಬಳ್ಳಿಬೈಲ್ ಎಸ್ಟೇಟ್
	11. ,, ಸಾಂತರಾಜ ಹೆಗ್ಗಡೆ ...	ಪಟೇಲರು	ನೇಗೂರು
	12. ,, ಎಚ್. ಶ್ರೀಕಂಠ ಶಾಸ್ತ್ರಿಯವರು ...	ಶೃಂಗೇರಿ ಮಠದ ಏಜಂಟರು	ಶೃಂಗೇರಿ
ಎಡಹಳ್ಳಿ ಸಬ್ ತಾಲ್ಲೂಕು ಬೋರ್ಡು	ಎಕ್ಸ್ ಅಫಿಷಿಯೋ ಮೆಂಬರುಗಳು.		
	1. ಎಡಹಳ್ಳಿ ಸಬ್ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, (ಪ್ರೆಸಿಡೆಂಟರು)		
	2. ಎಡಹಳ್ಳಿ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರರು, (ವೈಸ್ ಪ್ರೆಸಿಡೆಂಟರು)		
	3. ಹಾಸ್ಪಿಟಲ್ ಅಸಿಸ್ಟೆಂಟರು ...		
	4. ಕೊಪ್ಪ ರೇಂಜಿನ ಅಸಿಸ್ಟೆಂಟ್ ಇಂಜಿನಿಯರು ...		
	ಇತರ ಮೆಂಬರುಗಳು.		
	(e) ಕ್ಲಾಜ್ ಅನುಸರಿಸಿ ಚುನಾಯಿಸಲ್ಪಟ್ಟವರು.		
	5. ಮ॥ ರಾಮಪ್ಪನವರು ...	ಸಾಹುಕಾರರು	ಎಡಹಳ್ಳಿ
	6. ,, ನಾಡಿಗ ಭಿಸ್ಸಪ್ಪನವರು ...	ಜಹಗೀರ್‌ದಾರರು	ಬಾಳೆ ಹೊನ್ನೂರು
	7. ,, ಶ್ರೀನಿವಾಸಪ್ರಭು ಯವರು ...	ವರ್ತಕರು	ಡಿಟೋ
	8. ,, ಖಾಲಿ ...		

ಬೋರ್ಡಿನ ಹೆಸರು.	ಮೆಂಬರುಗಳು.	ಕಸಬು.	ವಾಸಸ್ಥಾನ.
ಹೊಸಕೋಟೆ ಸಬ್ ತಾಲ್ಲೂಕು ಬೋರ್ಡು.	(*f*) ಕ್ಲಾಜ್ ಅನುಸರಿಸಿ ಚುನಾಯಿಸಲ್ಪಟ್ಟವರು.		
	9. ಖಾಲಿ—(ಮುಂದೆ ಘಾಯಿಷು ಮಾಡಲ್ಪಡುವದು)		
	(*g*) ಕ್ಲಾಜ್ ಅನುಸರಿಸಿ ನೇಮಕ ಮಾಡಲ್ಪಟ್ಟವರು.		
ಹೊಸ ಕಾಡುಕಲ್ಲು ಕೆಲಸ	ಡಿಟೋ	2,121
ಹಳೇ ಕಾಡುಕಲ್ಲು ಕೆಲಸ	ಡಿಟೋ	982
ಗ್ರಾವಲ್ ಬ್ಯಾಕಿಂಗ್ ಯಾನೆ ರಿವೆಟ್‌ಮೆಂಟಿನ ಹಿಂದೆ ಹಾಕತಕ್ಕ ಗ್ರಾವಲ್	ಡಿಟೋ	993
ಜಪ್ಪುಗಟ್ಟುವದು	ಚದ್ರ ಗಜ	20,942
ಗ್ರೇಡು ಕಲ್ಲುಗಳು ತಳಭಾಪಡಿ ಸಮೇತ ..	ನಂ.	51
ಎಸ್ ಎಸ್ ಕಲ್ಲುಗಳು	ಡಿಟೋ	51
ಬೆಂಚು ಮಾರ್ಕ್ ಕಲ್ಲುಗಳು	ಡಿಟೋ	2
ಗೇಜು ಕಲ್ಲುಗಳು	ಡಿಟೋ	2
ಸಂವತ್ಸರ ಮತ್ತು ರಿಜಿಸ್ಟರ್ ನಂ. ಕಲ್ಲು	ಡಿಟೋ	1
ಏರಿಯನ್ನು ಎರಡು ಸ್ಥಳದಲ್ಲಿ ಅಗಲ ಮಾಡತಕ್ಕದ್ದು	ಒಟ್ಟು ಮೊಬಲಗು	
ಏರಿಯ ಜುಮ್ಲಾ ..		
ತೂಬುಗಳು.		
ಎಡಗಡೆ ತೂಬು - ಮಟ್ಟಿ ಕೆಲಸ	ಸಲೆ ಗಜ	13
ಸುಟ್ಟ ಇಟ್ಟಿಗೆಯಿಂದ ಸುರ್ಕಿ ಗಾರೆಕೆಲಸ	ಸಲೆ ಅಡಿ	397
ಸುಟ್ಟ ಕಲ್ಲುಭಪಡಿಗಳು	ಚದ್ರ ಅಡಿ	10
ಸುರ್ಕಿ ಗಾರೆಯಿಂದ ಗಿಲಾವ್	ಚದ್ರ	2·00
ಜುಮ್ಲಾ		
ಬಲಗಡೆ ತೂಬು—ಮೇಲ್ಕಂಡ ಎಡಗಡೆ ತೂಬಿಗೆ ನಮೂದಿಸಿರುವ ತಪಸೀಲನಂತೆ ...		
ತೂಬುಗಳ ಜಮ್ಲಾ		
ಕೋಡಿ.		
ಮಟ್ಟಿ ಕೆಲಸ—ಟ್ರೇನಿಂಗ್ ಬ್ಯಾಂಕಯಾನೆ ಏರಿಗೆ	ಸಲೆ ಗಜ	150
ಸುರ್ಕಿ ಗಾರೆಯಿಂದ ಕಾಡುಕಲ್ಲು ಕೆಲಸ	ಸಲೆ ಅಡಿ	1425
ಸುಟ್ಟ ಕಲ್ಲುಭಪಡಿಗಳು 9 ಅಂಗುಲ ಮಂದವುಳ್ಳದ್ದು	ಚದ್ರ ಅಡಿ	83
ಹೊಸ ಕಾಡುಕಲ್ಲು ಕೆಲಸ	ಸಲೆ ಗಜ	92
ಸುಟ್ಟ ಕಲ್ಲುಭಪಡಿ 4 ಮತ್ತು 6 ಅಂಗುಲದ ವರಿಗೆ ಮಂದವುಳ್ಳದ್ದು	ಚದ್ರ ಅಡಿ.	397
ಹಳೇ ಕಾಡುಕಲ್ಲು ಕೆಲಸ	ಸಲೆ ಗಜ	94
ಸುರ್ಕಿ ಗಾರೆಯಿಂದ ಪಾಯಿಂಟಿಂಗ್ ..	ಚದ್ರ	10·22
ಹಾಲಿ ಇರತಕ್ಕ ಕೋಡೀಗೆ ಅವಶ್ಯಕವಾದ ಸ್ಥಳಗಳಲ್ಲಿ ರಪೇರಿ ಮಾಡತಕದ್ದು ...	ಒಟ್ಟು ಮೊಬಲಗು	

ಕೆ. ನಂಜುಂಡೈಯ್ಯ,
ಫಾರ್ ಎಗ್ಜಿಕ್ಯೂಟಿವ್ ಇಂಜನಿಯರ್.

ಮೈಸೂರ ಗೆಜೆಟ್ ಚಂದಾದಾರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟೀಸ್ ವುುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಅ.	ರೂ.	ಅ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಚಹ್ ಮಾಹೇ ಯಾ ಕ್ವಾರ್ಟರಿಗೆ			ದಾಮಾಷಾಯಿ ಪ್ರಕಾರ ದರಗಳು	

	ರೂ.	ಅ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.	0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮಾರ್ಸ್ಕಂ 155ನೇ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭೋಗಿಕೆ ಕೆಲಸ ನೋಡುತಲಿದ್ದಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ಒಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನ ಇಸವಿ ಜೂನ್ 21ನೇ ಮಾರ್ಸ್ಕಂ 24205—6—ಜಿ. 6200ನೇ ನಂಬರ್ ಗವರ್ನಮೆಂಟ್ ಆರಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ್ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

			ರೂ.	ಅ.
ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟಿಸುಗಳು :—				
ಮೊದಲನೇ ದಫಾ ಪ್ರಾಯಿಷ್ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ		..	2	8
ಎರಡನೇ ಸಲ ವ ಆತರುವಾಯು ಪ್ರತಿ ಆವರ್ತಿಗೂ ಡಿಟೋ		..	1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಗೆ ನೋಟಿಸುಗಳಿಗೆ :—				
ಮೊದಲನೇ ಸಲಕ್ಕೆ	.. ..	..	5	0
ಎರಡನೇ ವ ಆತರುವಾಯು ಪ್ರತಿ ದಫಾಕ್ಕೆ		..	2	0
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.				
ಡ್ಯುಪ್ಲಿಕೇಟ್ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಗೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಿಸುಗಳಿಗೆ :—				
ಮೊದಲನೇ ಸಲಕ್ಕೆ	ಪುಟ 1ಕ್ಕೆ	..	10	0
ಎರಡನೇ ಸಲ ವ ಆತರುವಾಯು ಪ್ರತಿ ಸಲಕ್ಕೂ	,,	..	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ :—				
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ	..	0	8
ಎರಡನೇ ದಫಾ ಡಿಟೋ	ಡಿಟೋ		0	6
ಮೂರನೇ ವ ಆತರುವಾಯು ಪ್ರತಿ ಸಲಕ್ಕೆ	..	..	0	4

ಷರಾ.—ಚಂದಾ ವಗೈರೆ ಬಗ್ಗೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ್ ಆರಡರ್ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಗಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರಿಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟೀಸ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ಒಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯು ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಇಲ್ಲ.

ಜಿ. ಹ್ಯೂಂ ರೈಟ್,
ಕಂಪೈಲರ್, ಮೈಸೂರ ಗೆಜೆಟ್.

ಮೈಸೂರ ಗೆಜೆಟ್.

[ಸಂ. 39] ಅಧಿಕಾರದಿಂದ ಪಬ್ಲಿಷ್ ಆದ್ದು. [ಸಂ. 9.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 3, ಸ್ನ 1904.

IIIನೆ ಭಾಗ.

ಲೆಜಿಸ್ಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೇಟಿವ್ ಇಲಾಖೆ.

ಇಸ್ತಿಹಾರ್‌ನಾಮೆ, ನಂ. 30—ಲೆ. 4-03, ಬೆಂಗಳೂರು, 9ನೆಯ ತಾರೀಖು ಸೆಪ್ಟಂಬರ 1903ನೆಯ ಇಸವಿ.

1902ನೆಯ ಇಸವಿಯ IIನೆಯ ಅಂದರೆ ಮೈಸೂರು ಲೋಕಲ್ ಬೋರ್ಡ್ಸ್ ರೆಗ್ಯುಲೇಷನಿಂದ ಹೊಂದಿದ ಅಧಿಕಾರಗಳನ್ನು ಮತ್ತು ಈ ವಿಷಯದಲ್ಲಿ ಹೊಂದಿರುವ ಇತರ ಎಲ್ಲಾ ಅಧಿಕಾರಗಳನ್ನು ನಡಿಸುವದರಲ್ಲಿ ಈ ಕೆಳಗಿನ ನಿಬಂಧನೆಗಳು ಮೈಸೂರು ಗವರ್ನ್‌ಮೆಂಟಿನವರಿಂದ ಮಾಡಲ್ಪಟ್ಟವೆ:—

Iನೆಯ ಭಾಗ.

ಅವತರಣಿಕೆ.

"ಲೋಕಲ್ ಬೋರ್ಡ್ಸ್‌ಗಳು" ಎಂದರೆ ಡಿಸ್ಟ್ರಿಕ್ಟು ಮತ್ತು ತಾಲ್ಲೋಕು ಬೋರ್ಡ್ಸ್‌ಗಳು ಮತ್ತು ಪಂಚಾಯಿತಿಗಳು.

1. ಈ ನಿಬಂಧನೆಗಳಲ್ಲಿ ಅವುಗಳಲ್ಲಿ ಹೇಳಿರುವ ವಿಷಯದಿಂದಾಗಲಿ ಪರಸ್ಪರ ಸಂಬಂಧದಿಂದಾಗಲಿ ವಿರೋಧವಿಲ್ಲದೆ ಇರುವಪಕ್ಷಕ್ಕೆ "ಲೋಕಲ್ ಬೋರ್ಡ್ಸ್‌ಗಳು" ಎಂಬ ಮಾತುಗಳು, ಈ ನಿಬಂಧನೆಗಳಿಗೆ ಅನುಸಾರವಾಗಿ ಏರ್ಪಡಿಸಿರುವ ಯಾವದಾದರು ಡಿಸ್ಟ್ರಿಕ್ಟು ಬೋರ್ಡ್ಸ್ ಅಥವಾ ತಾಲ್ಲೋಕು ಬೋರ್ಡ್ಸ್ ಅಥವಾ ಪಂಚಾಯಿತಿಯನ್ನು ಅಡಗಿಸಿಕೊಂಡಿರುವ ಅರ್ಥವುಳ್ಳವುಗಳಾಗಿವೆ.

ಕೋಲಾರದ ಚಿನ್ನದಗಣಿಗಳ ಸ್ಯಾನಿಟರಿ ಸರ್ಕಲ್ಲನ್ನು ಸೇರಿಸದೆ ಇರೋಣ.

2. ಲೋಕಲ್ ಬೋರ್ಡ್ಸ್ ರೆಗ್ಯುಲೇಷನ್ನಲ್ಲಿ ಅಥವಾ ಈ ನಿಬಂಧನೆಗಳಲ್ಲಿ ಇರುವ ಯಾವ ವಿಷಯವೂ ಇನ್ನೊಂದು ಹುಕುಂ ಕೊಡುವವರೆಗೂ 1897ನೆಯ ಇಸವಿಯ IIನೆಯದಾದ ಮೈಸೂರು ಮೈನ್ಸ್ ರೆಗ್ಯುಲೇಷನಿನ 24 ಮತ್ತು 25ನೆಯ ಪ್ರಕರಣಗಳ ಪ್ರಕಾರ ಏರ್ಪಡಿಸಿರುವ ಕೋಲಾರದ ಚಿನ್ನದ ಗಣಿಗಳ ಸ್ಯಾನಿಟರಿ ಸರ್ಕಲಿಗೆ ಅನ್ವಯಿಸತಕ್ಕದ್ದಲ್ಲ. ಮತ್ತು ಲೋಕಲ್ ಬೋರ್ಡ್ ರೆಗ್ಯುಲೇಷನಿನ ಮತ್ತು ಈ ನಿಬಂಧನೆಗಳ ಉದ್ದೇಶಗಳಿಗಾಗಿ ಕೋಲಾರದ ಚಿನ್ನದಗಣಿಗಳ ಸ್ಯಾನಿಟರಿ ಸರ್ಕಲಿನಲ್ಲಿ ಅಡಗಿರುವ ವಿಸ್ತೀರ್ಣವು ಕೋಲಾರ ಡಿಸ್ಟ್ರಿಕ್ಟಿನಲ್ಲಿ ಸೇರತಕ್ಕದ್ದಲ್ಲವೆಂದು ಭಾವಿಸತಕ್ಕದ್ದಾಗಿದೆ.

ಈ ರೆಗ್ಯುಲೇಷನಿನ ಉದ್ದೇಶಕ್ಕಾಗಿ ಸಬ್ ತಾಲ್ಲೋಕುಗಳು ತಾಲ್ಲೋಕುಗಳಾಗಿ ಇರತಕ್ಕದ್ದು.

3. ಮೇಲ್ಕಂಡ ಉದ್ದೇಶಗಳಿಗಾಗಿ ಎಲ್ಲಾ ಸಬ್ ತಾಲ್ಲೋಕುಗಳು ತಾಲ್ಲೋಕುಗಳಾಗಿ ಭಾವಿಸಲ್ಪಡತಕ್ಕವುಗಳಾಗಿವೆ, ಮತ್ತು ಮೇಲ್ಕಂಡ ಉದ್ದೇಶಗಳಿಗಾಗಿ ಎಲ್ಲಾ ಡೆಪ್ಯುಟಿ ಅಮಲ್ದಾರರು ಅಮಲ್ದಾರರ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಉಂಟಾಗಿರತಕ್ಕದ್ದು.

IIನೆಯ ಭಾಗ.

ಲೋಕಲ್ ಬೋರ್ಡುಗಳ ನಿರ್ಮಾಣ.

ರೆಗ್ಯುಲೇಷನಿಗೆ ಒಳಪಡದ ಕೆಲವು ಮ್ಯುನಿಸಿಪಾಲಿಟಿಗಳು ಯೂನಿಯನ್ (ಸಂಘ) ಗಳಾಗಿರತಕ್ಕದ್ದು.

4. ಈಗ ಯಾವ ರೆಗ್ಯುಲೇಷನಿಗೂ ಒಳಪಡದ ಮ್ಯುನಿಸಿಪಾಲಿಟಿಗಳಾಗಿರುವ ಆದರೆ ತಾಲ್ಲೋಕು ಕಸಬೆಗಳಲ್ಲದ ಅಥವಾ (1901ನೆಯ ಸೆನ್ಸಸ್ ಪ್ರಕಾರ) 3,000ದಷ್ಟು ಅಥವಾ ಅದಕ್ಕೆ ಮೀರಿದ ಪ್ರಜಾ ಸಂಖ್ಯೆ ಇಲ್ಲದಿರುವ ಕೆಳಗೆ ಕಾಣಿಸಿರುವ ಸ್ಥಳಗಳು, 1904ನೆಯ ಜುಲೈ 1ನೆಯ ತಾರೀಖಿನಿಂದ ಮತ್ತು ಅದಕ್ಕೆ ತರುವಾಯ, ಮ್ಯುನಿಸಿಪಾಲಿಟಿಗಳಾಗಿರುವುದು ನಿಂತು ಹೋಗತಕ್ಕದ್ದು, ಮತ್ತು ಲೋಕಲ್ ಬೋರ್ಡು ರೆಗ್ಯುಲೇಷನಿನ ಮತ್ತು ಈ ನಿಬಂಧನೆಗಳ ಉದ್ದೇಶಗಳಿಗಾಗಿ ಸಂಘ (ಯೂನಿಯನ್) ಗಳೆಂದು ಎಣಿಸಲ್ಪಡತಕ್ಕದ್ದು.

ಸ್ಥಳಗಳು.	ಪ್ರಜಾ ಸಂಖ್ಯೆ.	ಸ್ಥಳಗಳು.	ಪ್ರಜಾ ಸಂಖ್ಯೆ.
ನಾಯಕನಹಟ್ಟಿ	2,858	ಸೋಸಲೆ	1,989
ಸಾಲಿಗ್ರಾಮ	2,744	ಗ್ರಾಮ	1,936
ಮಿರಲೆ	2,682	ಹೊಳೆಹೊನ್ನೂರು	1,931
ಬೆಂಕೀಪುರ	2,676	ಶ್ರವಣಬೆಳಗೊಳ	1,926
ಮದ್ದೂರು	2,597	ಸಕ್ಕರೆಪಟ್ಟಣ	1,884
ಕಳಲೆ	2,500	ದೊಮ್ಮಸಂದ್ರ	1,861
ಯಲಹಂಕ	2,437	ರಾಮಪುರ	1,845
ಬಾಣಾವಾರ	2,422	ಪಾಲಹಳ್ಳಿ	1,793
ಕೋಣನೂರು	2,328	ಹುಲಿಯೂರುದುರ್ಗ	1,746
ಸರಗೂರು	2,284	ಬಸವಾಪಟ್ಟಣ	1,684
ಸಿರಾಳಕೊಪ್ಪ	2,270	ಹೊಲವನಹಳ್ಳಿ	1,682
ಹೊನ್ನವಳ್ಳಿ	2,247	ಬೆಳ್ಳಾವಿ	1,669
ಸೂಲಿಬೆಲೆ	2,186	ಕೆಂಗೇರಿ	1,608
ಅಜ್ಜಂಪುರ	2,164	ನೊಣವಿನಕೆರೆ	1,585
ಹಾರನಹಳ್ಳಿ	2,117	ಬಾಗೂರು	1,540
ಕ್ಯಾತಸಂದ್ರ	2,067	ಕಿಕ್ಕೇರಿ	1,490
ಮಾಲೆಬೆನ್ನೂರು	2,056	ಕಡಬ	1,385
ದೇವಸಮುದ್ರ	2,004	ನಗರ	715

ಡಿಸ್ಟ್ರಿಕ್ಟ್ ಬೋರ್ಡು (ಸಭೆ) ಗಳು, ತಾಲ್ಲೋಕು ಬೋರ್ಡುಗಳು ಮತ್ತು ಪಂಚಾಯಿತಿಗಳು ಇವುಗಳ ಸ್ಥಾಪನೆ.

5. 1903ನೆಯ ಇಸವಿ ನವಂಬರ್ 1ನೆಯ ತಾರೀಖಿನಿಂದ, ಪ್ರತಿ ರೆವಿನ್ಯೂ ಡಿಸ್ಟ್ರಿಕ್ಟಿಗೂ ಒಂದು ಡಿಸ್ಟ್ರಿಕ್ಟ್ ಬೋರ್ಡು, ಮತ್ತು ಪ್ರತಿ ಕ್ರಮವಾದ ತಾಲ್ಲೋಕಿಗೂ ಮತ್ತು ಪ್ರತಿ ಸಬ್ ತಾಲ್ಲೋಕಿಗೂ ಒಂದು ತಾಲ್ಲೋಕು ಬೋರ್ಡು, ಮತ್ತು 1904ನೆಯ ಜುಲೈ 1ನೆಯ ತಾರೀಖಿನಿಂದ, ಪ್ರತಿ ಒಂದು ಸಂಘಕ್ಕೂ ಒಂದು ಪಂಚಾಯಿತಿಯೂ, ಸ್ಥಾಪಿಸಲ್ಪಡತಕ್ಕದ್ದು.

ಪಂಚಾಯಿತಿಯ ನಿರ್ಮಾಣ.

6. (1) ಪ್ರತಿ ಪಂಚಾಯಿತಿಯು, ಪ್ರತಿ ಸಂದರ್ಭದಲ್ಲಿಯೂ ಗೌರ್ನಮೆಂಟಿನವರಿಂದ ಗೊತ್ತು ಮಾಡಲ್ಪಡಬಹುದಾದಹಾಗೆ, 5ಕ್ಕೆ ಕಡಿಮೆ ಇಲ್ಲದ ಮತ್ತು 12ಕ್ಕೆ ಮೀರದ ಮೆಂಬರು (ಸಾಮಾಜಿಕರ) ಗಳ ಸಂಖ್ಯೆಯನ್ನುಳ್ಳದ್ದಾಗಿರತಕ್ಕದ್ದು. ಅಂತಹ ಎಲ್ಲಾ ಮೆಂಬರುಗಳು ಇನ್ನೊಂದು ಹುಕುಂ ಕೊಡುವ ವರೆಗೂ ಡೆಪ್ಯುಟಿ ಕಮಿಷನರ ಶಿಫಾರಸಿನ ಮೇಲೆ ಗೌರ್ನಮೆಂಟಿನವರಿಂದ ನೇಮಿಸಲ್ಪಡತಕ್ಕವರಾಗಿರುತ್ತಾರೆ.

(2) ಪ್ರತಿ ಸಂದರ್ಭದಲ್ಲಿಯೂ ಗೌರ್ನಮೆಂಟಿನವರಿಂದ ಒಬ್ಬ ಅಧ್ಯಕ್ಷನು (Chairman) ಕೂಡ ನೇಮಿಸಲ್ಪಡತಕ್ಕದ್ದು.

ತಾಲ್ಲೋಕು ಬೋರ್ಡಿನ (ಸಭೆಯ) ನಿರ್ಮಾಣ.

7. ಪ್ರತಿ ತಾಲ್ಲೋಕು ಬೋರ್ಡು ಕೆಳಗೆ ತೋರಿಸುವಂತೆ 12 ಮಂದಿ ಸಾಮಾಜಿಕರನ್ನುಳ್ಳದ್ದಾಗಿರತಕ್ಕದ್ದು.

ಉದ್ಯೋಗಪ್ರಯುಕ್ತವಾದ (Ex-Officio) ಸಾಮಾಜಿಕರು (ಮೆಂಬರುಗಳು.)

(ಎ) ತಾಲ್ಲೋಕಿನ (ಅಥವಾ ಸಬ್ ತಾಲ್ಲೋಕಿನ) ರೆವಿನ್ಯೂ ಅಧಿಕಾರದಲ್ಲಿರುವ ಅಸಿಸ್ಟೆಂಟ್ ಕಮಿಷನರು, ಅಥವಾ ಯಾವ ಅಸಿಸ್ಟೆಂಟ್ ಕಮಿಷನರೂ ಅಂತಹ ತಾಲ್ಲೋಕು ಅಥವಾ ಸಬ್ ತಾಲ್ಲೋಕಿನ ರೆವಿನ್ಯೂ ಅಧಿಕಾರದಲ್ಲಿ ಇಡಲ್ಪಡದೆ ಇದ್ದರೆ, ಇದಕ್ಕಾಗಿ ಗೌರ್ನಮೆಂಟಿನವರಿಂದ ನೇಮಿಸಲ್ಪಟ್ಟಿರುವ ಅಮಲ್ದಾರರು ಅಥವಾ ಇತರ ಅಧಿಕಾರಿಯು, ತಾಲ್ಲೋಕು ಬೋರ್ಡಿನ ಪ್ರೆಸಿಡೆಂಟಾಗಿ ಇರತಕ್ಕದ್ದು;

(ಬಿ) ತಾಲ್ಲೋಕಿನ ಅಮಲ್ದಾರರು (ಎ) ಅಧಿಕರಣದಲ್ಲಿ ನಮೂದಿಸಿದ ಸಂದರ್ಭಗಳಲ್ಲಿ ಹಾಗೆ ಪ್ರೆಸಿಡೆಂಟರಾಗಿ ಕೆಲಸ ನೋಡುತ್ತಿರುವಾಗ ವಿನಾ ವೈಸ್‌ಪ್ರೆಸಿಡೆಂಟರಾಗಿರತಕ್ಕದ್ದು:

(ಸಿ) ತಾಲ್ಲೋಕು ಕಸಬೆಯ ಡಿಸ್ಪೆನ್ಸರಿಯ ಛಾರ್ಜಿನಲ್ಲಿರುವ ಮೆಡಿಕಲ್ ಆಫೀಸರು ;

(ಡಿ) ಆ ತಾಲ್ಲೋಕಿಗೆ ಸಂಬಂಧಪಟ್ಟ ಮರಹಮತ್ತು ಇಲಾಖೆಯ ಸೀನಿಯರ್ ಆಫೀಸರು.

ಇತರ ಮೆಂಬರುಗಳು.

(ಇ) ಮುಂದೆ ತೋರಿಸುವರೀತ್ಯಾ ಇತರ ಹುದ್ದೆದಾರರು ಸ್ವಂತಗಾರರು ವಗೈರೆಯಿಂದ ಚುನಾಯಿಸಲ್ಪಡತಕ್ಕ, ಅಥವಾ ಹಾಗೆ ಚುನಾಯಿಸಲ್ಪಡದೆ ಇದ್ದರೆ ಡೆಪ್ಯುಟಿ ಕಮಿಷನರವರ ಶಿಫಾರಿಸಿನ ಮೇಲೆ ಗೌರ್ನಮೆಂಟಿನವರಿಂದ ನೇಮಿಸಲ್ಪಡತಕ್ಕ ತಾಲ್ಲೋಕಿನ ನಾಲ್ಕು ಮಂದಿ ಜಮೀನಿನ ಹಿಡುವಳಿದಾರರು ಅಥವಾ ಮಾಲೀಕರು (ಅಥವಾ ಇತರ ವಿಧವಾದ ಯೋಗ್ಯತೆಯುಳ್ಳ ಮನುಷ್ಯರು) ;

(ಎಫ್) ಮ್ಯುನಿಸಿಪಲ್ ಮೆಂಬರುಗಳಿಂದ ತಮ್ಮ ಸಭೆಯಲ್ಲಿ ಚುನಾಯಿಸಲ್ಪಡತಕ್ಕ ಅಥವಾ ಹಾಗೆ ಚುನಾಯಿಸಲ್ಪಡದೆ ಇದ್ದರೆ, ಮೇಲ್ಕಂಡಂತೆ ಗೌರ್ನಮೆಂಟಿನವರಿಂದ ನೇಮಿಸಲ್ಪಟ್ಟ ತಾಲ್ಲೋಕು ಕಸಬಾ ಮ್ಯುನಿಸಿಪಲ್ ಬೋರ್ಡಿನ ಒಬ್ಬ ಮೆಂಬರು ;

(ಜಿ) ಉಳಿದ ಮೆಂಬರುಗಳು ಮೇಲ್ಕಂಡಂತೆ ಗೌರ್ನಮೆಂಟಿನವರಿಂದ ನೇಮಿಸಲ್ಪಡತಕ್ಕದ್ದು, ಮತ್ತು ಬೋರ್ಡಿನಲ್ಲಿ ಆಗಲಿ ಸಾಕಾದಷ್ಟು ಪ್ರತಿನಿಧಿಗಳಿಲ್ಲದೆ ಇರುವ ಮತ್ತು ಪ್ರತಿನಿಧಿಗಳನ್ನಿಡುವುದು ಅವಶ್ಯವೆಂದು ತೋರುವ ಆ ತಾಲ್ಲೋಕಿನಲ್ಲಿ ಸಂಬಂಧವಿರುವ ಜನಗಳಿಂದ ಅಥವಾ ಜನಸಮೂಹಗಳಿಂದ ಸಾಧ್ಯವಾದಮಟ್ಟಿಗೂ ತೆಗೆದುಕೊಳ್ಳಲ್ಪಡತಕ್ಕದ್ದು.

ಡಿಸ್ಟ್ರಿಕ್ಟು ಬೋರ್ಡಿನ ಏರ್ಪಾಡು.

8. * ಈ ಕೆಳಗೆ ಇರುವಂತೆ ಮೈಸೂರು ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಬೋರ್ಡು ಮೂವತ್ತು ಮೆಂಬರುಗಳನ್ನು ಮತ್ತು ಪ್ರತಿ ಇತರ ಡಿಸ್ಟ್ರಿಕ್ಟ್ ಬೋರ್ಡು ಇಪ್ಪತ್ತೈದು ಮೆಂಬರುಗಳನ್ನು ಉಳ್ಳದ್ದಾಗಿರತಕ್ಕದ್ದು.

ಉದ್ಯೋಗ ಪ್ರಯುಕ್ತವಾದ (Ex-Officio) ಮೆಂಬರುಗಳು.

(ಎ) ಡೆಪ್ಯುಟಿ ಕಮಿಷನರು—ಡಿಸ್ಟ್ರಿಕ್ಟು ಬೋರ್ಡಿನ ಪ್ರೆಸಿಡೆಂಟರಾಗಿರತಕ್ಕದ್ದು.

(ಬಿ) ಆಯಾ ಡಿಸ್ಟ್ರಿಕ್ಟಿನಲ್ಲಿರುವ ತಾಲ್ಲೋಕುಗಳ ರೆವಿನ್ಯೂ ಛಾರ್ಜಿನಲ್ಲಿರುವ ಎಲ್ಲಾ ಅಸಿಸ್ಟೆಂಟ್ ಕಮಿಷನರುಗಳು ; ಮತ್ತು ತಾಲ್ಲೋಕಿನ ರೆವಿನ್ಯೂ ಛಾರ್ಜಿನಲ್ಲಿಲ್ಲದೆ ಡಿಸ್ಟ್ರಿಕ್ಟು ಕಸಬೆಯಲ್ಲಿ ಯಾರಾದರು ಅಸಿಸ್ಟೆಂಟ್ ಕಮಿಷನರಿದ್ದರೆ ಅಂತಹ ಅಸಿಸ್ಟೆಂಟ್ ಕಮಿಷನರು ;

(ಸಿ) ಡಿಸ್ಟ್ರಿಕ್ಟಿನ ವೈದ್ಯ, ಮರಹಮತ್ತು ಮತ್ತು ವಿದ್ಯಾಭ್ಯಾಸ (ಸ್ಕೂಲುಗಳ ಇನ್ಸ್‌ಪೆಕ್ಷನ್) ಈ ಪ್ರತಿ ಒಂದು ಇಲಾಖೆಯ ಮುಖ್ಯವಾದ ಅಥವಾ ದರ್ಜೆಯಲ್ಲಿ ಹೆಚ್ಚಾದ ಅಧಿಕಾರಿ ಮತ್ತು * ಮೈಸೂರು ಡಿಸ್ಟ್ರಿಕ್ಟಿನ ವಿಷಯದಲ್ಲಿ ಫ್ರೆಂಚ್‌ರಾಕ್ಸ್ (ಹಿರೋಡೆ) ಸಬ್ ಡಿವಿಜನಿನ ಮರಹಮತ್ತು ಇಲಾಖೆಯ ಮುಖ್ಯವಾದ ಅಥವಾ ದರ್ಜೆಯಲ್ಲಿ ಹೆಚ್ಚಾದ ಅಧಿಕಾರಿಯೂಕೂಡ.

ಇತರ ಮೆಂಬರುಗಳು.

(ಡಿ) ಡಿಸ್ಟ್ರಿಕ್ಟಿನ ಪ್ರತಿ ತಾಲ್ಲೋಕಿನಿಂದಲೂ ಒಬ್ಬ ಗೌರ್ನಮೆಂಟು ನೌಕರನಲ್ಲದ ಪ್ರತಿನಿಧಿ, ಈ ಪ್ರತಿನಿಧಿಯು ಪ್ರಥಮತಃ ಡೆಪ್ಯುಟಿ ಕಮಿಷನರ ಶಿಫಾರಸಿನಮೇಲೆ ಗೌರ್ನಮೆಂಟಿನವರಿಂದ ನೇಮಿಸಲ್ಪಡತಕ್ಕದ್ದು, ಮತ್ತು ತರುವಾಯ, ತಾಲ್ಲೋಕು ಬೋರ್ಡು ಮೆಂಬರುಗಳಿಂದ ತಮ್ಮ ಸ್ವಂತ ಸಭೆಯಲ್ಲಿ ಚುನಾಯಿಸಲ್ಪಡತಕ್ಕದ್ದು, ಅಥವಾ ಹಾಗೆ ಚುನಾಯಿಸುವುದಕ್ಕೆ ತಪ್ಪಿದರೆ, ಮೇಲ್ಕಂಡಂತೆ ಗೌರ್ನಮೆಂಟಿನವರಿಂದ ನೇಮಿಸಲ್ಪಡತಕ್ಕದ್ದು.

(ಇ) ಉಳಿದ ಮೆಂಬರುಗಳು ಡೆಪ್ಯುಟಿ ಕಮಿಷನರ ಶಿಫಾರಸಿನಮೇಲೆ ಗೌರ್ನಮೆಂಟಿನವರಿಂದ ನೇಮಿಸಲ್ಪಡತಕ್ಕದ್ದು, ಮತ್ತು ಬೋರ್ಡಿನಲ್ಲಿ ಆಗಲಿ ಸಾಕಾದಷ್ಟು ಪ್ರತಿನಿಧಿಗಳಿಲ್ಲದೆ ಇರುವ ಮತ್ತು ಪ್ರತಿನಿಧಿಗಳನ್ನು ಇಡುವುದು ಅವಶ್ಯಕವಾಗಿತೋರುವ ಡಿಸ್ಟ್ರಿಕ್ಟಿನಲ್ಲಿ ಸಂಬಂಧವಿರುವ ಜನಗಳಿಂದ ಅಥವಾ ಜನಸಮೂಹಗಳಿಂದ ಸಾಧ್ಯವಾದಮಟ್ಟಿಗೂ ತೆಗೆದುಕೊಳ್ಳಲ್ಪಡತಕ್ಕದ್ದು.

ವೈಸ್ ಪ್ರೆಸಿಡೆಂಟರು.

9 (i) ಪ್ರತಿ ಡಿಸ್ಟ್ರಿಕ್ಟು ಬೋರ್ಡಿನ ವೈಸ್ ಪ್ರೆಸಿಡೆಂಟು ಗೌರ್ನಮೆಂಟಿನವರಿಂದ ನೇಮಿಸಲ್ಪಡತಕ್ಕದ್ದು, ಅಥವಾ ಪ್ರತಿ ಸಂದರ್ಭದಲ್ಲಿಯೂ ಹುಕುಂ ಕೊಡಲ್ಪಡುವಹಾಗೆ ಸರ್ಕಾರದವರ ಮಂಜೂರಾತಿಗೆ ಒಳಪಟ್ಟು ಮೆಂಬರುಗಳಿಂದ ಚುನಾಯಿಸಲ್ಪಡುವುದಕ್ಕೆ ಸರ್ಕಾರದವರು ಅಧಿಕಾರ ಕೊಡತಕ್ಕದ್ದು.

(ii) 7ನೆಯ ನಿಬಂಧನೆಯ (ಎ) ಅಧಿಕರಣದಮೇರೆ ತಾಲ್ಲೋಕು ಬೋರ್ಡಿನ ಪ್ರೆಸಿಡೆಂಟರಾಗಿ ಅಮಲ್ದಾರರು ಕೆಲಸ ಮಾಡುವಾಗ ವೈಸ್ ಪ್ರೆಸಿಡೆಂಟು ಸರ್ಕಾರದವರ ಮಂಜೂರಾತಿಗೆ ಒಳಪಟ್ಟು ಅಂತಹ ಬೋರ್ಡಿನ ಇತರ ಮೆಂಬರುಗಳಿಂದ ಚುನಾಯಿಸಲ್ಪಡತಕ್ಕದ್ದು.

ತಾಲ್ಲೋಕನ್ನು ಗ್ರಾಮ ಸಮೂಹಗಳನ್ನಾಗಿ ವಿಭಾಗಿಸುವುದು.

10 (1) 7ನೆಯ ನಿಬಂಧನೆಯ (ಇ) ಅಧಿಕರಣದಲ್ಲಿ ಹೇಳಿರುವ ತಾಲ್ಲೋಕು ಬೋರ್ಡಿನ ಮೆಂಬರುಗಳ ಚುನಾವಣೆ ಬಗ್ಗೆ ಪ್ರತಿ ತಾಲ್ಲೋಕು ನಾಲ್ಕು ಗ್ರಾಮ ಸಮೂಹಗಳಾಗಿ ವಿಭಾಗಿಸಲ್ಪಡತಕ್ಕದ್ದು, ಪ್ರತಿ ಸಮೂಹವು ಅವರ ಸ್ವಂತಮೆಂಬರನ್ನು ಕಳುಹಿಸತಕ್ಕದ್ದು.

---

* 1903ನೆಯ ಇಸವಿ ಡಿಸೆಂಬರ್ 7ನೆಯ ತಾರೀಖಿನ ನಂ. 2153—ಎಲ್. 66-03ನೆಯ ಇಸ್ತಿಹಾರು ಮೂಲಕ ತಿದ್ದುಪಾಟಾಗಿರುವಮೇರೆ.

(2) ರಸ್ತೆಗಳು, ಕಿಡಪ್ಪಗಳು, ಆಸ್ಪತ್ರೆಗಳು, ಪಾಠಶಾಲೆಗಳು ಇವೇ ಮೊದಲಾದವುಗಳನ್ನು ಪರ್ಯಾಲೋಚಿಸಿ ಗ್ರಾಮಗಳನ್ನು ಸಮೂಹಗಳನ್ನಾಗಿ ಸೇರಿಸೋಣವು ಡೆಪ್ಯುಟಿ ಕಮಿಷನರವರಿಂದ ಮಾಡಲ್ಪಡತಕ್ಕದ್ದು; ಮತ್ತು ಅಂತಹ ನಾನಾ ಸಮೂಹಗಳಲ್ಲಿ ಪ್ರತಿ ಒಂದರಿಂದಲೂ ಕೊಡಲ್ಪಡತಕ್ಕ ಜಮೀನು ಕಂದಾಯ (ಪರಾಧೀನ ಮಾಡಿರತಕ್ಕ ಗ್ರಾಮಗಳ ಸರ್ವೆ ಬೆಲೆಯು ಸೇರಿ) ಮತ್ತು ಲೋಕಲ್ ಸೆಸ್ಸು ಇವುಗಳ ಒಟ್ಟು ಮೊಬಲಗು ಸುಮಾರು ಸಮವಾಗಿರುವಂತೆ ಸಾಧ್ಯವಾದ ಮಟ್ಟಿಗೂ ಏರ್ಪಾಡು ಮಾಡತಕ್ಕದ್ದು.

ಚುನಾಯಿಸುವವರ ಯೋಗ್ಯತೆ.

11. (1) 21 ವರ್ಷಗಳ ಪೂರ್ತಿಯಾದ ವಯಸ್ಸುಳ್ಳ ಸ್ವಸ್ಥ ಚಿತ್ತವುಳ್ಳ, ಮತ್ತು

(i) ತಾಲ್ಲೋಕಿನ ಒಂದು ಗ್ರಾಮ ಸಮೂಹದಲ್ಲಿರುವ ವರ್ಷ ಒಂದಕ್ಕೆ 50 ರೂಪಾಯಿಗಳಿಗೆ ಕಡಮೆ ಇಲ್ಲದೆ ಕಂದಾಯ ಬಿದ್ದಿರುವ ಜಮೀನಿನ ಹಿಡುವಳಿದಾರನಾದ ಅಥವಾ ಸ್ವಂತಗಾರನಾದ, ಅಥವಾ

(ii) ಆ ತಾಲ್ಲೋಕಿನ ಒಂದು ಗ್ರಾಮ ಸಮೂಹದಲ್ಲಿರುವ ಯಾವದಾದರೂ ಗ್ರಾಮದ ಪಟೇಲನಾಗಿ ಕೆಲಸ ನೋಡುವುದಕ್ಕೆ ಕಾಯಮಾಗಿ ನೇಮಿಸಲ್ಪಟ್ಟಿರುವ, ಅಥವಾ

(iii) ಆ ತಾಲ್ಲೋಕಿನ ಒಂದು ಗ್ರಾಮ ಸಮೂಹದಲ್ಲಿ ಈ ನಿಬಂಧನೆಗಳಿಗನುಸಾರವಾಗಿ ವರ್ಷ ಒಂದಕ್ಕೆ 5 ರೂಪಾಯಿಗಳಿಗೆ ಕಡಿಮೆ ಇಲ್ಲದೆ ಮನೆ ಕಂದಾಯವನ್ನು ಕೊಡುವ

ಪ್ರತಿ ಗಂಡಸೂ ಅಂತಹ ಗ್ರಾಮ ಸಮೂಹಕ್ಕಾಗಿ ತಾಲ್ಲೋಕು ಬೋರ್ಡಿನ ಮೆಂಬರಿನ ಚುನಾವಣೆಯ ಬಗ್ಗೆ ಸಮ್ಮತಿ (Vote) ಯನ್ನು ಕೊಡುವುದಕ್ಕೆ ಅರ್ಹನಾಗಿರತಕ್ಕದ್ದು.

ತಾಲ್ಲೋಕು ಬೋರ್ಡಿನ ಮೆಂಬರಾಗಿರುವುದಕ್ಕೆ ಯೋಗ್ಯತೆ.

(2) 16ನೆಯ ನಿಬಂಧನೆಯ ನಿಯಮಗಳಿಗೆ ಒಳಪಟ್ಟು ಈ ನಿಬಂಧನೆಯ 1ನೆಯ ಅಧಿಕರಣದಮೇರೆ ಯೋಗ್ಯತೆಯುಳ್ಳ ಮತ್ತು ಅದಲ್ಲದೆ ಓದು ಬರಹ ಬಲ್ಲ ಯಾವ ಮನುಷ್ಯನಾದರೂ ತಾನು ಸಾಧಾರಣವಾಗಿ ವಾಸವಾಗಿರುವ ತಾಲ್ಲೋಕು ಬೋರ್ಡಿನ ಮೆಂಬರಾಗಿ ಚುನಾಯಿಸಲ್ಪಡುವುದಕ್ಕಾಗಲಿ ಅಥವಾ ನೇಮಿಸಲ್ಪಡುವುದಕ್ಕಾಗಲಿ ಯೋಗ್ಯತೆಯುಳ್ಳವನಾಗಿರತಕ್ಕದ್ದು.

ಸಮ್ಮತಿ ಕೊಡುವವರ (Voters) ಪಟ್ಟಿಗಳನ್ನು ತಯಾರ್ಮಾಡತಕ್ಕದ್ದು.

12. (1) ಪ್ರತಿ ತಾಲ್ಲೋಕಿನಲ್ಲಿಯೂ ಸಮ್ಮತಿ ಕೊಡುವುದಕ್ಕೆ ಅರ್ಹರಾಗಿರುವ ಮನುಷ್ಯರ ಪಟ್ಟಿಗಳನ್ನು ಡೆಪ್ಯುಟಿ ಕಮಿಷನರವರ ಹುಕುಂ ಪ್ರಕಾರ ತಯಾರ್ಮಾಡತಕ್ಕದ್ದು, ಮತ್ತು ಪ್ರತಿ ಸಾಮಾನ್ಯ ಚುನಾವಣೆಗೆ ಮೂರು ತಿಂಗಳಿಗೆ ಮುಂಚೆಯೂ ಅಂತಹ ಪಟ್ಟಿಗಳನ್ನು ಪುನರ್ವಿಮರ್ಶೆ ಮಾಡತಕ್ಕದ್ದು; ಮತ್ತು ಅವುಗಳ ಪ್ರತಿಗಳನ್ನು ಅಮಲ್ದಾರರ ಕಛೇರಿಯಲ್ಲಿಟ್ಟು ಸರಿಯಾದ ವೇಳೆಗಳಲ್ಲೆಲ್ಲಾ ಸರ್ವ ಜನರು ನೋಡುವುದಕ್ಕೆ ತಡೆ ಇಲ್ಲದೆ ಇಟ್ಟಿರತಕ್ಕದ್ದು.

(2) ಅಂತಹ ಯಾವ ಪಟ್ಟಿಯಲ್ಲಾದರೂ ಯಾರ ಹೆಸರನ್ನಾದರೂ ಬಿಟ್ಟುಬಿಟ್ಟಿದ್ದರೆ ಅವನು ಪಟ್ಟಿಯಲ್ಲಿ ದಾಖಲಾಗುವ ಬಗ್ಗೆ ಡೆಪ್ಯುಟಿ ಕಮಿಷನರಿಗೆ ಹೇಳಿಕೊಳ್ಳಬಹುದು, ಅವರ ತೀರ್ಮಾನವೇ ಅಖೈರಾಗಿರತಕ್ಕದ್ದು.

ತಾಲ್ಲೋಕು ಬೋರ್ಡಿನ ಮೆಂಬರುಗಳ ಚುನಾವಣೆಯ ಕ್ರಮ.

13. (1) ಯಾವ ಚುನಾವಣೆಗಾದರೂ ಡೆಪ್ಯುಟಿ ಕಮಿಷನರವರಿಂದ ಗೊತ್ತು ಮಾಡಲ್ಪಟ್ಟಿರುವ ತಾರೀಖಿಗೆ ಮುಂಚೆ ಒಂದು ತಿಂಗಳಿಗೆ ಕಡಿಮೆ ಇಲ್ಲದೆ ಅಮಲ್ದಾರರು ಚುನಾವಣೆಯ ಕಾಲವನ್ನು ಸ್ಥಳವನ್ನು ನಮೂದಿಸಿ ಒಂದು ಲಿಖಿತವಾದ ನೋಟೀಸನ್ನು ಸಮ್ಮತಿ ಕೊಡುವುದಕ್ಕೆ ಅರ್ಹನಾಗಿರುವ ಪ್ರತಿ ಮನುಷ್ಯನಿಗೂ ಕಳುಹಿಸತಕ್ಕದ್ದು. ಹಾಗೆ ಗೊತ್ತು ಮಾಡಲ್ಪಟ್ಟ ಸ್ಥಳವು ಅದಕ್ಕೆ ಸಂಬಂಧಪಟ್ಟ ಗ್ರಾಮ ಸಮೂಹಕ್ಕೆ ಸಾಧ್ಯವಾದ ಮಟ್ಟಿಗೂ ಅನುಕೂಲವಾದ ಸ್ಥಳವಾಗಿರತಕ್ಕದ್ದು.

(2) ಸಮ್ಮತಿ ಕೊಡುವುದಕ್ಕೆ ಇಷ್ಟವಿರುವ ಮನುಷ್ಯರೆಲ್ಲರೂ ಚುನಾವಣೆಯ ಕಾಲದಲ್ಲಿ ಹಾಜರಿರಬೇಕು, ಮತ್ತು ಬದಲಿ ಮೂಲಕವಾಗಿ ಆಗಲಿ ಅಥವಾ ಬರಹ ಮೂಲಕವಾಗಿ ಆಗಲಿ ಬಂದ ಸಮ್ಮತಿಗಳು ಅಂಗೀಕರಿಸಲ್ಪಡತಕ್ಕವುಗಳಲ್ಲ.

(3) ಹಾಗೆ ಗೊತ್ತಾದ ದಿವಸದಲ್ಲಿ ಆ ತಾಲ್ಲೋಕಿನ ರೆವಿನ್ಯೂ ಛಾರ್ಜಿನಲ್ಲಿರುವ ರೆವಿನ್ಯೂ ಅಸಿಸ್ಟೆಂಟ್ ಕಮಿಷನರಾಗಲಿ, ಅಥವಾ ಅಮಲ್ದಾರರಾಗಲಿ ಅಥವಾ ಚುನಾವಣೆಯ ಕಾಲದಲ್ಲಿ ಅಗ್ರಾಸನವನ್ನು ವಹಿಸುವುದಕ್ಕೆ ಡೆಪ್ಯುಟಿ ಕಮಿಷನರವರಿಂದ ನೇಮಿಸಲ್ಪಟ್ಟ ಇತರ ಯಾವ ಅಧಿಕಾರಿಯಾಗಲಿ, ಖುದ್ದು ಹಾಜರಾಗಿ ಚುನಾವಣೆ ಮಾಡುವವರ ಸಮ್ಮತಿಗಳನ್ನು ಬರೆದುಕೊಳ್ಳತಕ್ಕದ್ದು.

(4) ಸಮ್ಮತಿ ಕೊಡುವವರ ವಿಷಯಕವಾದ ಎಲ್ಲಾ ಆಕ್ಷೇಪಗಳನ್ನು ಅಗ್ರಾಸನಾದ ಅಧಿಕಾರಿಯು ಸಮ್ಮತಿ ಕೊಡುವವರ ಪಟ್ಟಿಯನ್ನು ನೋಡಿ ಸಾಧ್ಯವಾದರೆ ಸಂಕ್ಷೇಪವಾಗಿಯೇ ತೀರ್ಮಾನಿಸತಕ್ಕದ್ದು.

(5) ಗ್ರಾಮ ಸಮೂಹದ ಸಮ್ಮತಿ ಕೊಡುವವರಲ್ಲಿ ಶೇಕಡ 10ಕ್ಕೆ ಕಡಮೆ ಇಲ್ಲದಷ್ಟು ಮಂದಿ ಹಾಜರಾಗಿದ್ದಾರೆಂದು ಅಧ್ಯಕ್ಷನಾದ ಅಧಿಕಾರಿಯು ತೃಪ್ತಿಪಟ್ಟಿದ್ದಲ್ಲಿ ಸ್ಪಷ್ಟವಾಗಿ ಅಧಿಕವಾದ ಸಮ್ಮತಿಗಳನ್ನುಳ್ಳ ಉಮೇದುವಾರನನ್ನು ಕ್ರಮವಾಗಿ ಚುನಾಯಿಸಲ್ಪಟ್ಟನೆಂದು ತಿಳಿಸತಕ್ಕದ್ದು. ಹಾಜರಾಗಿದ್ದ ಸಮ್ಮತಿ ಕೊಡುವವರ ಸಂಖ್ಯೆಯು ಶೇಕಡ 10ಕ್ಕೆ ಕಡಮೆಯಾಗಿದ್ದರೆ, ಡೆಪ್ಯುಟಿ ಕಮಿಷನರು ತಿರಿಗಿ ಚುನಾವಣೆ ನಡಿಯಬಹುದೆಂದು ಹುಕುಂ ಮಾಡಬಹುದು, ಅಥವಾ ಚುನಾಯಿಸತಕ್ಕವರು ಒಬ್ಬ ಮೆಂಬರನ್ನು ಚುನಾಯಿಸುವದಕ್ಕೆ ತಪ್ಪಿಹೋದರೆಂದು ತೀರ್ಮಾನಿಸಬಹುದು.

(6) ಕ್ರಮವಾಗಿ ಚುನಾಯಿಸಲ್ಪಟ್ಟ ಯಾವ ಉಮೇದುವಾರನಾದರೂ ಆ ಕೆಲಸವು ಬೇಡವೆಂದರೆ, ಅವನಿಗೆ ತರುವಾಯ ಅಧಿಕತಮವಾದ ಸಮ್ಮತಿಗಳನ್ನು ಹೊಂದಿ ನಿಷ್ಫಲನಾದ ಉಮೇದುವಾರನು ಯಾವನಾದರು ಇದ್ದರೆ ಅವನು ಚುನಾಯಿಸಲ್ಪಟ್ಟನೆಂದು ಅಂಗೀಕರಿಸತಕ್ಕದ್ದು. ಹಾಗೆ ನಿಷ್ಫಲನಾದ ಉಮೇದುವಾರನು ಇಲ್ಲದೆ ಇದ್ದರೆ ಹೀಗೆ ಆದ ಖಾಲಿಯನ್ನು ಭರ್ತಿ ಮಾಡುವುದಕ್ಕೆ ಹೊಸ ಚುನಾವಣೆಯನ್ನು ನಡಿಸತಕ್ಕದ್ದು.

(7) ಎಲ್ಲಾ ಚುನಾವಣೆಗಳ ಫಲಿತಾಂಶಗಳನ್ನು ಡೆಪ್ಯುಟಿ ಕಮಿಷನರಿಗೆ ಸಾಧ್ಯವಾದಷ್ಟು ಜಾಗ್ರತೆಯಾಗಿ ತಿಳಿಸತಕ್ಕದ್ದು.

ತಾಲ್ಲೋಕು ಮತ್ತು ಮ್ಯುನಿಸಿಪಲ್ ಬೋರ್ಡುಗಳಿಗೆ ಪ್ರತಿನಿಧಿಗಳಾದ ಮೆಂಬರುಗಳ ಚುನಾವಣೆ.

14. ತಾಲ್ಲೋಕು ಬೋರ್ಡುಗಳಿಂದ ಡಿಸ್ಟ್ರಿಕ್ಟು ಬೋರ್ಡಿಗೂ, ಮ್ಯುನಿಸಿಪಲ್ ಬೋರ್ಡುಗಳಿಂದ ತಾಲ್ಲೋಕು ಬೋರ್ಡುಗಳಿಗೂ ಕಳುಹಿಸಲ್ಪಡುವ ಪ್ರತಿನಿಧಿಗಳ ಚುನಾವಣೆಯು ಆ ಕೆಲಸಕ್ಕಾಗಿ ಸೇರಿಸಲ್ಪಡುವ ಅಂತಹ ತಾಲ್ಲೋಕು ಮತ್ತು ಮ್ಯುನಿಸಿಪಲ್ ಬೋರ್ಡು ಸಭೆಗಳಲ್ಲಿ ನಡೆಯತಕ್ಕದ್ದು, ಮತ್ತು ಅದರ ಫಲಿತಾಂಶವು ಚುನಾವಣೆಯಾದಮೇಲೆ ಸಾಧ್ಯವಾದಷ್ಟು ಜಾಗ್ರತೆಯಾಗಿ ಡೆಪ್ಯುಟಿ ಕಮಿಷನರಿಗೆ ತಿಳಿಸಲ್ಪಡತಕ್ಕದ್ದು.

ಎಲ್ಲಾ ಚುನಾವಣೆಗಳ ವಿಷಯವಾದ ಸಾಮಾನ್ಯ ನಿಯಮಗಳು.

15. (1) ಈ ನಿಬಂಧನೆಗಳಿಗೆ ಅನುಸಾರವಾದ ಮೆಂಬರುಗಳ ಎಲ್ಲಾ ಚುನಾವಣೆಗಳ ವಿಷಯದಲ್ಲೂ ಸಮ್ಮತಿಗಳು ಸಮವಾಗಿದ್ದಾಗ ಚುನಾವಣೆಯಲ್ಲಿ ಅಗ್ರಸ್ಥರಾದ ಆಫೀಸರು ಯುಕ್ತವಾಗಿ ಭಾವಿಸುವಂತೆ ಚುನಾವಣೆಯು ದೈವಗತಿ (Lot) ಇಂದ ನಿಶ್ಚೈಸಲ್ಪಡತಕ್ಕದ್ದು.

(2) ಲೋಕಲ್ ಬೋರ್ಡಿನ ನೌಕರಿಯಲ್ಲಿ ಅಥವಾ ಸಂಬಳದಲ್ಲಿ ಇರುವ ಯಾವ ಮನುಷ್ಯನೂ ತಾನು ಸಮ್ಮತಿಯನ್ನು ಕೊಡುವುದಕ್ಕೆ ಅರ್ಹನಾಗಿದ್ದರೆ ತನ್ನ ಸ್ವಂತ ಸಮ್ಮತಿಯನ್ನು ಕೊಡುವುದಕ್ಕಿಂತ ಬೇರೆ ರೀತಿಯಲ್ಲಿ ಸಮ್ಮತಿಗಳನ್ನು ಕೇಳುವ, ಅಥವಾ ಯಾವ ಉಮೇದುವಾರನ ಚುನಾವಣೆಯಲ್ಲಿಯಾದರೂ ಇತರ ವಿಧವಾಗಿ ಸಹಾಯ ಮಾಡುವ ಕೆಲಸಕ್ಕೆ ಪ್ರತ್ಯಕ್ಷವಾಗಿ ಆಗಲಿ ಪರೋಕ್ಷವಾಗಿ ಆಗಲಿ ಹೋಗತಕ್ಕದ್ದಲ್ಲ. ಈ ನಿಬಂಧನೆಯ ಯಾವ ವಿಧವಾದ ಉಲ್ಲಂಘನೆಯೂ ಅವನನ್ನು ಬರ್ತರ್ಫಿಗೆ ಗುರಿಮಾಡುವುದು.

ಮೆಂಬರಾಗುವುದಕ್ಕೆ ಅಯೋಗ್ಯತೆ.

16. (i) ಅಂತಹ ಲೋಕಲ್ ಬೋರ್ಡಿನ ಕಾರ್ಯ ನಿರ್ವಾಹಕ ಅಧಿಕಾರಿ ಅಥವಾ ಗುಮಾಸ್ತ ಅಥವಾ ಸೇವಕನಾಗಿರುವ ; ಅಥವಾ

(ii) ಅಂತಹ ಲೋಕಲ್ ಬೋರ್ಡಿಗೆ ಸಂಬಂಧಪಟ್ಟ ಯಾವ ಕಂಟ್ರಾಕ್ಟು ಕೆಲಸದಲ್ಲಿಯಾದರೂ ಪ್ರತ್ಯಕ್ಷವಾಗಿ ಆಗಲಿ ಅಥವಾ ಪರೋಕ್ಷವಾಗಿ ಆಗಲಿ ಭಾಗಿಯಾಗಿರುವ, ಅಥವಾ ಪ್ರಯೋಜನವುಳ್ಳವನಾಗಿರುವ ; ಅಥವಾ

(iii) ಸರ್ಕಾರದ ನೌಕರಿಯಿಂದ ಕೆಟ್ಟ ನಡತೆಗಾಗಿ ಬರ್ತರ್ಫು ಮಾಡಲ್ಪಟ್ಟಿರುವ, ಅಥವಾ

(iv) ದಿವಾಳಿ ಎಂದು ಪ್ರಕಟಿಸಲ್ಪಟ್ಟಿರುವ, ಅಥವಾ

(v) ಕ್ರಿಮಿನಲ್ ಕೋರ್ಟಿನಿಂದ ಕೈದು ಸಜಾ ವಿಧಿಸಲ್ಪಟ್ಟು ಅಥವಾ ಜಾಮೀನಿನ ಮೇಲೆ ಬಿಡುವುದಕ್ಕೆ ಅರ್ಹವಲ್ಲದ ತಪ್ಪು ಸಾಬೀತು ಮಾಡಲ್ಪಟ್ಟು ಅಂತಹ ಶಿಕ್ಷೆಯಾಗಲಿ, ತಪ್ಪು ಸಾಬೀತಾಗಲಿ ಅಪೀಲಿನಲ್ಲಿ ರದ್ದು ಆಗದೆ ಇರುವ,

ಯಾವ ಮನುಷ್ಯನೂ ಅಂತಹ ಲೋಕಲ್ ಬೋರ್ಡಿನ ಮೆಂಬರಾಗಿ ಚುನಾಯಿಸಲ್ಪಡುವುದಕ್ಕಾಗಲಿ ಅಥವಾ ನೇಮಿಸಲ್ಪಡುವುದಕ್ಕಾಗಲಿ ಯೋಗ್ಯನಾಗಿರತಕ್ಕದ್ದಲ್ಲ.

ಮೆಂಬರುಗಳ ಮತ್ತು ಉದ್ಯೋಗಸ್ಥರ ಉದ್ಯೋಗದ ಅವಧಿ.

17. (i) ಅಧಿಕಾರಪ್ರಯುಕ್ತವಾಗಿ ನೇಮಿಸಲ್ಪಟ್ಟ ಮೆಂಬರುಗಳಲ್ಲದ, ಲೋಕಲ್ ಬೋರ್ಡುಗಳ ಮೆಂಬರುಗಳು ಅವರ ನೇಮಕಗಳು ಅಥವಾ ಚುನಾವಣೆಗಳು ಪ್ರಕಟಿಸಲ್ಪಟ್ಟಿರುವ ಮೈಸೂರ್ ಗೆಜೆಟ್ಟಿನ ತಾರೀಖಿನಿಂದ 3 ವರ್ಷಗಳ ವರೆಗೂ ಅಥವಾ ಅವರ ಉತ್ತರಾಧಿಕಾರಿಗಳ ಹೆಸರುಗಳು ಪ್ರಕಟವಾಗುವುದಕ್ಕೆ ಮುಂಚೆ ಮೂರು ವರ್ಷಗಳ ಅವಧಿಯು ತೀರಿಹೋದರೆ ಹಾಗೆ ಪ್ರಕಟವಾಗುವವರೆಗೂ ಸಾಧಾರಣವಾಗಿ ಉದ್ಯೋಗವನ್ನು ವಹಿಸತಕ್ಕದ್ದು.

ಆದರೆ ಸಂದರ್ಭಾನುಸಾರ ಡಿಸ್ಟ್ರಿಕ್ಟು ಅಥವಾ ತಾಲ್ಲೋಕು ಬೋರ್ಡಿನ ಮೆಂಬರಾಗಿರುವುದಕ್ಕೆ ಕಳುಹಿಸಲ್ಪಟ್ಟಿರುವ ಯಾವ ತಾಲ್ಲೋಕು ಅಥವಾ ಮ್ಯುನಿಸಿಪಲ್ ಬೋರ್ಡಿನ ಮೆಂಬರಾದರೂ ತನಿಗೆ ತಾಲ್ಲೋಕು ಅಥವಾ ಮ್ಯುನಿಸಿಪಲ್ ಬೋರ್ಡಿನ ಮೆಂಬರ್ ಕೆಲಸವು ನಿಂತುಹೋದಾಗ ಅಂತಹ ಡಿಸ್ಟ್ರಿಕ್ಟು ಅಥವಾ ತಾಲ್ಲೋಕು ಬೋರ್ಡು ಮೆಂಬರು ಕೆಲಸವನ್ನು ಬಿಟ್ಟು ಬಿಡತಕ್ಕದ್ದು.

ಆದರೆ ಸಂದರ್ಭಾನುಸಾರವಾಗಿ ತಾಲ್ಲೋಕು ಅಥವಾ ಮ್ಯುನಿಸಿಪಲ್ ಬೋರ್ಡಿನವರು ಕ್ರಮವಾಗಿ ಬರೆಯಲ್ಪಟ್ಟ ತೀರ್ಮಾನದ ಮೂಲಕ ಡಿಸ್ಟ್ರಿಕ್ಟು ಅಥವಾ ತಾಲ್ಲೋಕು ಬೋರ್ಡಿನ ಸಭೆಯು ಸೇರುವಾಗ ಅಲ್ಲಿ ಹಾಜರಿರುವುದಕ್ಕೆ ಅನುಕೂಲವಿಲ್ಲದ ತಮ್ಮ ಪ್ರತಿನಿಧಿಗೆ ಒಬ್ಬ ಹಂಗಾಮಿ ಬದಲಿಯಾಗಿರುವಹಾಗೆ ಇತರ ಯಾವ ಮೆಂಬರನ್ನಾದರೂ ನೇಮಿಸಬಹುದು.

(ii) 9ನೆಯ ನಿಬಂಧನೆಯ ಮೇರೆ ನೇಮಿಸಲ್ಪಟ್ಟ ಅಥವಾ ಚುನಾಯಿಸಲ್ಪಟ್ಟ ಡಿಸ್ಟ್ರಿಕ್ಟು ಅಥವಾ ತಾಲ್ಲೋಕು ಬೋರ್ಡಿನ ವೈಸ್ ಪ್ರೆಸಿಡೆಂಟು ಮತ್ತು ಪಂಚಾಯತಿಯ ಅಧ್ಯಕ್ಷನು, (Chairman) ಉದ್ಯೋಗ ಪ್ರಯುಕ್ತವಾದ ಮೆಂಬರಾಗಿದ್ದರೆ ವೈಸ್ ಪ್ರೆಸಿಡೆಂಟ್ ಅಥವಾ ಅಧ್ಯಕ್ಷನಾಗಿ (Chairman) ಅವರ ನೇಮಕ ಅಥವಾ ಚುನಾವಣೆಯು ಪ್ರಕಟಿಸಲ್ಪಟ್ಟಿರುವ ಮೈಸೂರು ಗೆಜೆಟ್ಟಿನ ತಾರೀಖಿನಿಂದ 3 ವರ್ಷಗಳ ವರೆಗೂ, ಇತರ ಸಂದರ್ಭಗಳಲ್ಲಿ ಮೆಂಬರಾಗಿರುವ ಅವಧಿಯಲ್ಲಿ ಉಳಿದಿರುವ ಕಾಲ ತೀರುವ ವರೆಗೂ ಸಾಧಾರಣವಾಗಿ ಉದ್ಯೋಗವನ್ನು ವಹಿಸತಕ್ಕದ್ದು.

(iii) ಲೋಕಲ್ ಬೋರ್ಡಿನ ಅವಧಿ ಕಳೆದು ಹೊರಟುಹೋಗತಕ್ಕ ಮೆಂಬರು, ವೈಸ್ ಪ್ರೆಸಿಡೆಂಟು, ಅಥವಾ ಅಧ್ಯಕ್ಷನು (Chairman), ಇತರ ವಿಧದಲ್ಲಿ ಯೋಗ್ಯತೆ ಉಳ್ಳವನಾಗಿದ್ದರೆ ಪುನಃ ಚುನಾವಣೆ ಮಾಡಲ್ಪಡುವುದಕ್ಕಾಗಲಿ ಅಥವಾ ನೇಮಿಸಲ್ಪಡುವುದಕ್ಕಾಗಲಿ ಅರ್ಹನಾಗಿರತಕ್ಕದ್ದು.

ಕೆಲಸಕ್ಕೆ ರಾಜೀನಾಮೆ.

18. ಲೋಕಲ್ ಬೋರ್ಡಿನ ವೈಸ್ ಪ್ರೆಸಿಡೆಂಟು, ಅಧ್ಯಕ್ಷನು (Chairman) ಅಥವಾ ಮೆಂಬರಾಗಿ ನೇಮಿಸಲ್ಪಟ್ಟ ಅಥವಾ ಚುನಾಯಿಸಲ್ಪಟ್ಟವನು ತನ್ನ ಕೆಲಸಕ್ಕೆ ರಾಜಿನಾಮೆ ಕೊಡಬಹುದು, ಮತ್ತು ಅಂತಹ ರಾಜಿನಾಮೆಯು ಗೌರ್ನಮೆಂಟಿನವರಿಂದ ಅಂಗೀಕರಿಸಲ್ಪಟ್ಟಾಗ ಅವನು ತನ್ನ ಕೆಲಸವನ್ನು ಖಾಲಿ ಮಾಡಿದನೆಂದು ಭಾವಿಸತಕ್ಕದ್ದು.

ವರ್ಗಾವರ್ಗಿ ಅಥವಾ ಇತರ ಕಾರಣಗಳಿಂದ ಗೌರ್ನಮೆಂಟ್ ನೌಕರರು ಕೆಲಸವನ್ನು ಖಾಲಿ ಮಾಡೋಣ.

(ii) ಲೋಕಲ್ ಬೋರ್ಡಿನ ಮೆಂಬರಾಗಿರುವ ಸಂಬಳವುಳ್ಳ ಸರ್ಕಾರಿ ನೌಕರಿಯಲ್ಲಿರುವ ಮನುಷ್ಯನು ಅಂತಹ ಬೋರ್ಡಿನ ಅಧಿಕಾರಕ್ಕೆ ಒಳಪಟ್ಟ ಪ್ರದೇಶದಿಂದ ಖಾಯಂ ಆಗಿ ವರ್ಗಾಯಿಸಲ್ಪಟ್ಟಾಗ, ಅಥವಾ ಮೂರು ತಿಂಗಳಿಗಿಂತ ಹೆಚ್ಚಾಗಿ ಅಲ್ಲಿಂದ ಗೈರು ಹಾಜರಾಗಿರಬೇಕೆಂಬ ಉದ್ದೇಶದಿಂದ ಅಂತಹ ಪ್ರದೇಶವನ್ನು ಬಿಟ್ಟಾಗ, ಅಥವಾ ಕೆಲಸಕ್ಕೆ ರಾಜಿನಾಮೆ ಕೊಟ್ಟಾಗ, ಅಥವಾ ಸಸ್ಪೆಂಡ್ ಮಾಡಲ್ಪಟ್ಟಾಗ, ಅಥವಾ ಸರ್ಕಾರದ ನೌಕರಿಯಿಂದ ತೆಗೆದುಹಾಕಲ್ಪಟ್ಟಾಗ, ಅಥವಾ ಅಂತಹ ನೌಕರಿಯನ್ನು ಬಿಟ್ಟುಬಿಟ್ಟಾಗ ಅಂತಹ ಬೋರ್ಡಿನ ಮೆಂಬರು ಕೆಲಸವನ್ನು ಖಾಲಿ ಮಾಡಿದ ಹಾಗೆ ಭಾವಿಸತಕ್ಕದ್ದು.

ಲೋಕಲ್ ಬೋರ್ಡಿನ ವೈಸ್ ಪ್ರೆಸಿಡೆಂಟ್, ಅಧ್ಯಕ್ಷ (Chairman) ಅಥವಾ ಮೆಂಬರನ್ನು ಕೆಲಸದಿಂದ ತೆಗೆದುಹಾಕುವುದು.

19. (1) ಲೋಕಲ್ ಬೋರ್ಡಿನ ಉದ್ಯೋಗ ಪ್ರಯುಕ್ತವಾದ ಮೆಂಬರಲ್ಲದ ವೈಸ್ ಪ್ರೆಸಿಡೆಂಟ್, ಅಧ್ಯಕ್ಷ (Chairman) ಅಥವಾ ಮೆಂಬರನ್ನು ;

(i) ಅವನು ಅಂತಹ ಲೋಕಲ್ ಬೋರ್ಡು ಅಧಿಕಾರಕ್ಕೆ ಒಳಪಟ್ಟ ಪ್ರದೇಶದಿಂದ 6 ಅನುಕ್ರಮವಾದ ಮಾಸಗವಳಿಗೆ ಅಧಿಕವಾಗಿ ಗೈರ್‌ಹಾಜರ್ ಆಗಿದ್ದರೆ, ಅಥವಾ ಕೆಲಸ ಮಾಡುವದಿಲ್ಲವೆಂದು ಹೇಳಿದರೆ, ಅಥವಾ ಕೆಲಸ ಮಾಡುವುದಕ್ಕೆ ಅಸಮರ್ಥನಾದರೆ, ಅಥವಾ ದಿವಾಳಿ ಎಂದು ಪ್ರಕಟಿಸಲ್ಪಟ್ಟರೆ, ಅಥವಾ ಲೋಕಲ್ ಬೋರ್ಡಿನ ವೈಸ್ ಪ್ರೆಸಿಡೆಂಟ್, ಅಧ್ಯಕ್ಷ (Chairman) ಅಥವಾ ಮೆಂಬರಾಗಿರುವುದಕ್ಕೆ ಅವನನ್ನು ಅನರ್ಹನನ್ನಾಗಿ ಮಾಡುವ ನಡತೆಯು ದೋಷವೆಂದು ಗೌರ್ನಮೆಂಟಿನವರ ಅಭಿಪ್ರಾಯಕ್ಕೆ ಬರುವಂತಹ ಯಾವ ತಪ್ಪಾದರೂ ಸಾಬೀತು ಮಾಡಲ್ಪಟ್ಟರೆ ಅಥವಾ ಕ್ರಿಮಿನಲ್ ಕೋರ್ಟಿನಿಂದ ಯಾವ ಹುಕುಂಗಾದರೂ ಗುರಿಪಡಿಸಲ್ಪಟ್ಟರೆ ;

(ii) ಅವನು, ಗೌರ್ನಮೆಂಟಿನವರ ಅಭಿಪ್ರಾಯದಲ್ಲಿ ಸಾಕಾದಷ್ಟು ಕಾರಣವಿಲ್ಲದೆ, ಲೋಕಲ್ ಬೋರ್ಡಿನ ಮೂರಕ್ಕಿಂತ ಹೆಚ್ಚಾದ ಅನುಕ್ರಮವಾದ ಸಭೆಗಳಲ್ಲಿ ಹಾಜರಾಗಿರುವುದಕ್ಕೆ ಉಪೇಕ್ಷಿಸಿದರೆ ;

iii) ಅವನು, ಅಧಿಕಾರದಲ್ಲಿ ನಿಲ್ಲುವುದು, ಗೌರ್ನಮೆಂಟಿನವರ ಅಭಿಪ್ರಾಯದಲ್ಲಿ, ಜನರ ಸಮಾಧಾನಕ್ಕಾಗಲಿ ಅಥವಾ ಕ್ರಮಕ್ಕಾಗಲಿ ಅಪಾಯಕರವಾಗಿದ್ದರೆ, ಅಥವಾ ಲೋಕಲ್ ಬೋರ್ಡಿನ ಆಡಳಿತವು ಅಸಡ್ಡೆಗೆ ಬರುವಹಾಗೆ ಆಗಬಹುದಾದರೆ ;

(iv) ಅವನ ಉದ್ಯೋಗದ ಕಾಲವು ಪ್ರಾರಂಭಿಸುವುದಕ್ಕೆ ಮುಂಚೆ ಇದ್ದದ್ದೆ ಆದರೆ ಅವನ ಚುನಾವಣೆಗಾಗಲಿ ನೇಮಕಕ್ಕೆ ಆಗಲಿ ಅವನನ್ನು ಅನರ್ಹನನ್ನಾಗಿ ಮಾಡುತ್ತಾ ಇದ್ದ ಯಾವ ಸಂಗತಿಯಾಗಲಿ ಸಂಭವಿಸಿದಾಗ,

ಗೌರ್ನಮೆಂಟಿನವರು ಇಸ್ತಿಹಾರ್ ಮೂಲಕ ಅವನನ್ನು ನೌಕರಿಯಿಂದ ತೆಗೆದುಹಾಕಬಹುದು.

(2) ಹಾಗೆ ನೌಕರಿಯಿಂದ ತೆಗೆದುಹಾಕಲ್ಪಟ್ಟ ಮನುಷ್ಯನು ಪುನಃ ನೇಮಕಕ್ಕಾಗಲಿ ಚುನಾವಣೆಗಾಗಲಿ ಇಷ್ಟುಕಾಲಪರ್ಯಂತವೂ ಅರ್ಹನಾಗಿರತಕ್ಕದ್ದಲ್ಲವೆಂದು ಸರ್ಕಾರದವರು ಒಂದು ಅವಧಿಯನ್ನು ವಿಧಿಸಬಹುದು.

ಆಗಂತುಕವಾದ ಖಾಲಿಗಳನ್ನು ಭರ್ತಿ ಮಾಡುವುದು.

(20) ಲೋಕಲ್ ಬೋರ್ಡಿನ ವೈಸ್ ಪ್ರೆಸಿಡೆಂಟ್, ಅಧ್ಯಕ್ಷ (Chairman) ಅಥವಾ ಮೆಂಬರು, ಅವನು ಯಾವ ಕಾಲದ ವರೆಗೂ ನೇಮಿಸಲ್ಪಟ್ಟನೊ ಅಥವಾ ಚುನಾಯಿಸಲ್ಪಟ್ಟನೊ ಅಂತಹ ಕಾಲವು ಕಳೆಯುವುದಕ್ಕೆ ಮುಂಚೆ ಅವನು ಸತ್ತರೆ ಅಥವಾ ತನ್ನ ಕೆಲಸವನ್ನು ಖಾಲಿ ಮಾಡಿದರೆ, ಅಥವಾ ನೌಕರಿಯಿಂದ ತೆಗೆದುಹಾಕಲ್ಪಟ್ಟರೆ, ಹಾಗೆ ಸಾಯುವ, ಕೆಲಸವನ್ನು ಖಾಲಿ ಮಾಡುವ, ಅಥವಾ ಕೆಲಸದಿಂದ ತೆಗೆದುಹಾಕಲ್ಪಟ್ಟ ಮನುಷ್ಯನು ನೇಮಿಸಲ್ಪಟ್ಟನೊ ಅಥವಾ ಚುನಾಯಿಸಲ್ಪಟ್ಟನೊ ಅದಕ್ಕೆ ಅನುಸಾರವಾಗಿ, ಸರ್ಕಾರದವರು ಬೇರೆ ವಿಧವಾಗಿ ಹುಕುಂ ಮಾಡಿದ ಹೊರ್ತು, ಒಬ್ಬ ಉತ್ತರಾಧಿಕಾರಿಯು ನೇಮಿಸಲ್ಪಡತಕ್ಕದ್ದು ಅಥವಾ ಚುನಾಯಿಸಲ್ಪಡತಕ್ಕದ್ದು ; ಮತ್ತು ಅವನು ಯಾರಿಗೆ ಉತ್ತರಾಧಿಕಾರಿಯಾಗಿ ಬಂದಿರುತ್ತಾನೊ ಅಂತಹ ವೈಸ್ ಪ್ರೆಸಿಡೆಂಟ್, ಅಧ್ಯಕ್ಷ ಅಥವಾ ಮೆಂಬರ ಅಧಿಕಾರಾವಧಿಯಲ್ಲಿ ಉಳಿದಿರುವ ಕಾಲದ ವರೆಗೂ ಉದ್ಯೋಗವನ್ನು ವಹಿಸತಕ್ಕದ್ದು.

ಚುನಾವಣೆಗಳ ಮತ್ತು ನೇಮಕಗಳ ಇಸ್ತಿಹಾರ್‌ನಾಮೆ.

21. ಲೋಕಲ್ ಬೋರ್ಡಿನ ಪ್ರತಿ ವೈಸ್ ಪ್ರೆಸಿಡೆಂಟ್, ಅಧ್ಯಕ್ಷ (Chairman) ಅಥವಾ ಮೆಂಬರಿನ ಚುನಾವಣೆಯು ಅಥವಾ ನೇಮಕವು ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡತಕ್ಕದ್ದು.

ಮೆಂಬರುಗಳಿಗೆ ಪ್ರಯಾಣದ ಭತ್ಯವಲ್ಲದೆ ಸಂಬಳಗಳನ್ನಾಗಲಿ ಅಥವಾ ವೇತನ (ಅಲೋಯೆನ್ಸ್) ಗಳನ್ನಾಗಲಿ ಕೊಡುವುದನ್ನು ನಿಷೇಧಿಸಿದೆ.

22. ಲೋಕಲ್ ಬೋರ್ಡಿನ ಯಾವ ಮೆಂಬರೂ ಅವನ ಉದ್ಯೋಗಕ್ಕಾಗಿ ಯಾವ ಸಂಬಳಕ್ಕಾದರೂ ವೇತನಕ್ಕಾದರೂ, ಹಕ್ಕುಳ್ಳವನಾಗಿರತಕ್ಕದ್ದಲ್ಲ. ಆದರೆ ಡೆಪ್ಯುಟಿ ಕಮಿಷನರವರ ಅನುಮತಿಯ ಮೇಲೆ ಡಿಸ್ಟ್ರಿಕ್ಟ್ ಬೋರ್ಡಿನವರು ಲೋಕಲ್ ಬೋರ್ಡಿನ ಸರ್ಕಾರಿ ನೌಕರನಲ್ಲದ ಮೆಂಬರಿಗೆ ಅವನ ಸಾಧಾರಣವಾದ ವಾಸಸ್ಥಳದಿಂದ 5 ಮೈಲಿಗೆ ಅಧಿಕವಾದ ದೂರಗಳಿಗೆ ಸರ್ಕಾರದ ನೌಕರಿಯಲ್ಲಿ ಮಾತ್ರವೇ ಅವಶ್ಯವಾಗಿಯೂ ಯಥಾರ್ಥವಾಗಿಯೂ ಆದ ಪ್ರಯಾಣದ ಖರ್ಚುಗಳನ್ನು, ರಸ್ತೆಯಲ್ಲಿ ಮಾಡಿದ ಪ್ರಯಾಣಗಳಿಗೆ ಮೈಲಿಗೆ 4 ಆಣೆಗೆ ಮೀರದೆಯೂ ರೈಲ್ ಮೂಲಕ ಮಾಡಿದ ಪ್ರಯಾಣಗಳಿಗೆ ಎರಡು ಸೆಕೆಂಡ್ ಕ್ಲಾಸ್ ಛಾರ್ಜಿಗೆ ಮೀರದೆಯೂ ಕೊಡಬಹುದು. ಸರ್ಕಾರದ ನೌಕರರಾದ ಮೆಂಬರುಗಳಿಗೆ ಕೊಡತಕ್ಕ ಅಲೋಯೆನ್ಸ್ ದರಗಳು ಮೈಸೂರ್ ಸರ್ವಿಸ್ ರೆಗ್ಯುಲೇಷನ್ ಪ್ರಕಾರ ಗೊತ್ತು ಮಾಡಲ್ಪಡತಕ್ಕದ್ದು, ಮತ್ತು ಅವರು ಸೇರಿರುವ ನೌಕರಿಯ ಬಾಬುಗಳಿಗೆ ಖರ್ಚು ಹಾಕಲ್ಪಡತಕ್ಕದ್ದು.

IIIನೆಯ ಭಾಗ.

ಲೋಕಲ್ ಬೋರ್ಡುಗಳು ಕೆಲಸ ನಡಿಸುವ ಕ್ರಮ.

ಡಿಸ್ಟ್ರಿಕ್ಟು ಬೋರ್ಡುಗಳ ಸಭೆ ಸೇರುವುದು.

23. (i) ಪ್ರತಿ ಡಿಸ್ಟ್ರಿಕ್ಟು ಬೋರ್ಡು ವರ್ಷದಲ್ಲಿ 4 ಸಲಕ್ಕೆ ಕಡಮೆ ಇಲ್ಲದೆ ಸಭೆ ಸೇರತಕ್ಕದ್ದು ; ಯಾವ 2 ಅನುಕ್ರಮವಾದ ಸಭೆಗಳು ಸೇರುವುದಕ್ಕೆ ಮಧ್ಯೆ 4 ತಿಂಗಳುಗಳಿಗೆ ಅಧಿಕವಾದ ಕಾಲವು ಗತಿಸಲು ಅವಕಾಶಕೊಡತಕ್ಕದ್ದಲ್ಲ.

ತಾಲ್ಲೋಕು ಬೋರ್ಡುಗಳ ಸಭೆ ಸೇರುವುದು.

(ii) ಪ್ರತಿ ತಾಲ್ಲೋಕು ಬೋರ್ಡು ವರ್ಷದಲ್ಲಿ 6 ಸಲಕ್ಕೆ ಕಡಮೆ ಇಲ್ಲದೆ ಸಭೆ ಸೇರತಕ್ಕದ್ದು. ಯಾವ 2 ಅನುಕ್ರಮದ ಸಭೆಗಳು ಸೇರುವುದಕ್ಕೆ ಮಧ್ಯೆ 3 ತಿಂಗಳುಗಳಿಗೆ ಅಧಿಕವಾದ ಕಾಲವು ಗತಿಸಲು ಅವಕಾಶ ಕೊಡತಕ್ಕದ್ದಲ್ಲ.

ಪಂಚಾಯಿತಿಗಳ ಸಭೆ ಸೇರುವುದು.

(iii) ಪ್ರತಿ ಪಂಚಾಯಿತಿಯು ತಿಂಗಳಿಗೆ ಒಂದುಸಲಕ್ಕೆ ಕಡಮೆ ಇಲ್ಲದೆ ಸಭೆ ಸೇರತಕ್ಕದ್ದು.

ಸಭೆಯು ಸೇರುವ ತಾರೀಖುಗಳು.

24. (i) ಸಾಧಾರಣವಾಗಿ ಲೋಕಲ್ ಬೋರ್ಡಿನ ಪ್ರತಿ ಸಭೆಯು ಮುಗಿಯುವುದಕ್ಕೆ ಮುಂಚೆ ಮುಂದಿನ ಸಭೆಯು ಸಾಮಾನ್ಯವಾಗಿ ಸೇರುವ ತಾರೀಖು ಗೊತ್ತು ಮಾಡಲ್ಪಡತಕ್ಕದ್ದು.

(ii) ಆದರೆ ಪ್ರೆಸಿಡೆಂಟಾಗಲಿ ಅಥವಾ ಅಧ್ಯಕ್ಷನಾಗಲಿ (Chairman) ಸಭೆ ಸೇರಿಸುವುದಕ್ಕೆ ತಕ್ಕ ಅವಶ್ಯಕತೆ ಉಂಟಾಗಿರುವ ಹಾಗೆ ತನಗೆ ತೋರಿದಾಗ ಸಭೆಯನ್ನು ಸೇರಿಸಬಹುದು, ಮತ್ತು ಆ ಕಾಲದಲ್ಲಿರುವ ಬೋರ್ಡಿನ ಮೆಂಬರುಗಳಲ್ಲಿ 3ರಲ್ಲಿ ಒಂದು ಭಾಗಕ್ಕಿಂತ ಹೆಚ್ಚಾದವರ ಲಿಖಿತಮೂಲಕವಾದ ಕೋರಿಕೆಯ ಮೇಲೆ ಯಾವ ಕಾಲದಲ್ಲಿಯಾದರೂ ಸಭೆಯನ್ನು ಸೇರಿಸತಕ್ಕದ್ದು: ಆದರೆ ಸಭೆಯನ್ನು ಸೇರಿಸತಕ್ಕ ಕಾಲ, ಸ್ಥಳ ಮತ್ತು ಉದ್ದೇಶ ಇವುಗಳನ್ನು ನಮೂದಿಸಿ ಸಭೆ ಸೇರುವ ದಿವಸಕ್ಕೆ ಕಡೇಪಕ್ಷ ಆರು ದಿವಸಗಳಿಗೆ ಮುಂಚಿತವಾಗಿ ಪ್ರತಿ ಮೆಂಬರಿಗೂ ಒಂದು ನೋಟೀಸು ಕೊಡಲ್ಪಟ್ಟಿದ್ದ ಹೊರತು ಅಂತಹ ಯಾವ ಸಭೆಯು ಸೇರಿಸಲ್ಪಡತಕ್ಕದ್ದಲ್ಲ.

ಸಭೆಗಳಿಗೆ ಹೋಗುವುದಕ್ಕೆ ಜನಗಳಿಗೆ ತಡೆ ಇಲ್ಲದೆ ಇರುವುದು.

25. ಸಾಧಾರಣವಾಗಿ ಲೋಕಲ್ ಬೋರ್ಡಿನ ಸಭೆಯಲ್ಲಿ ಜನರ ಪ್ರವೇಶಕ್ಕೆ ತಡೆ ಇಲ್ಲದೆ ಇರತಕ್ಕದ್ದು. ಆದರೆ ಸಭಾಧ್ಯಕ್ಷನು ಯಾವದಾದರು ವಿಶೇಷವಾದ ಸಂದರ್ಭದಲ್ಲಿ ಸಾಧಾರಣವಾಗಿ ಜನಗಳು ಅಥವಾ ಒಬ್ಬ ಪ್ರತ್ಯೇಕವಾದ ಮನುಷ್ಯನು ಸಭೆಯಿಂದ ಹೊರಟು ಹೋಗತಕ್ಕದ್ದೆಂದು ಆಜ್ಞಾಪಿಸಬಹುದು.

ಸಾಕಾದಷ್ಟು ಮೆಂಬರುಗಳು.

26. ಪಂಚಾಯತಿಯಲ್ಲಿ ಕಡೇಪಕ್ಷ ಮೂರು ಮೆಂಬರುಗಳು, ತಾಲ್ಲೂಕು ಬೋರ್ಡಿನಲ್ಲಿ ನಾಲು, ಮತ್ತು ಡಿಸ್ಟ್ರಿಕ್ಟು ಬೋರ್ಡಿನಲ್ಲಿ ಐದು ಮೆಂಬರುಗಳು ಹಾಜರಿದ್ದ ಹೊರತು ಯಾವ ಕೆಲಸವನ್ನೂ ನಡೆಸತಕ್ಕದ್ದಲ್ಲ. ಸಭೆ ಸೇರುವುದಕ್ಕೆ ಗೊತ್ತು ಮಾಡಿದ ಕಾಲದಲ್ಲಿ ಅಥವಾ ಆಮೇಲೆ ಅರ್ಧಘಂಟೆ ಒಳಗಾಗಿ ಸಾಕಾದಷ್ಟು ಮೆಂಬರುಗಳು ಹಾಜರಿಲ್ಲದೆ ಇದ್ದರೆ ಅಧ್ಯಕ್ಷನಾದ ಮೆಂಬರು ಮುಂದೆ ಯಾವದಾದರೂ ಒಂದು ದಿವಸದಲ್ಲಿ ಸಭೆ ಸೇರುವಂತೆ ಮಾಡಬಹುದು.

ಹೆಚ್ಚು ಮೆಂಬರುಗಳಿಂದ ತೀರ್ಮಾನ.

27. ಲೋಕಲ್ ಬೋರ್ಡಿನ ಸಭೆ ಸೇರಿರುವಾಗ ಪ್ರಸ್ತಾಪಿಸಲ್ಪಡುವ ಎಲ್ಲಾ ವಿಷಯಗಳು ಹೆಚ್ಚು ಮೆಂಬರುಗಳಿಂದ (Majority) ತೀರ್ಮಾನಿಸಲ್ಪಡತಕ್ಕದ್ದು; ಸಮವಾದ ಸಮ್ಮತಿಗಳು ಇರುವ ಪ್ರತಿ ಸಂದರ್ಭದಲ್ಲಿಯೂ ಪ್ರೆಸಿಡೆಂಟು ಅಥವಾ ಅಧ್ಯಕ್ಷ ಅಥವಾ ಇತರ ಅಗ್ರಸ್ಥನಾದ ಮೆಂಬರು ಎರಡನೆಯ ಅಥವಾ ನಿಶ್ಚಯಿಸುವ ಸಮ್ಮತಿಯನ್ನು ಉಂಟಾಗಿರತಕ್ಕದ್ದು.

ಸ್ವಪ್ರಯೋಜನಪರನಾದ ಮೆಂಬರು ಸಮ್ಮತಿ ಕೊಡಲಾಗದು.

28. ಲೋಕಲ್ ಬೋರ್ಡಿನ ಯಾವ ಮೆಂಬರು ತನಗೆ ಯಾವ ವಿಧವಾದ ಹಣದ ಪ್ರಯೋಜನವಿರುವ ವಿಷಯವು ಲೋಕಲ್ ಬೋರ್ಡಿನ ಆಲೋಚನೆ ಬಗ್ಯೆ ಬಂದಾಗ (ಲೋಕಲ್ ಬೋರ್ಡಿನ ಅಧಿಕಾರಕ್ಕೆ ಒಳಪಟ್ಟ ಪ್ರದೇಶದಲ್ಲಿರುವ ಜಮೀನುಗಳು ಮತ್ತು ಸ್ವತ್ತುಗಳಿಗೆ ಅದು ಸಾಮಾನ್ಯವಾಗಿ ಅನ್ವಯಿಸದೆ ಇದ್ದರೆ) ಸಮ್ಮತಿಯನ್ನು ಕೊಡತಕ್ಕದ್ದಲ್ಲ.

ಪ್ರಮೇಯಗಳು ಲಿಖಿತವಾಗಿರತಕ್ಕದ್ದು.

29. ಕ್ರಮವಾಗಿ ಮಾಡಲ್ಪಟ್ಟ ಮತ್ತು (ಮತ್ತೊಬ್ಬನಿಂದ) ಅನುಮೋದಿಸಲ್ಪಟ್ಟ ಮತ್ತು ಭಿನ್ನಾಭಿಪ್ರಾಯ ಹುಟ್ಟುವ ವರೆಗೂ ಒತ್ತಿ ಹೇಳಲ್ಪಟ್ಟ ಪ್ರತಿಸೂಚನೆ ಅಥವಾ ತಿದ್ದುಪಾಟು ಸಮ್ಮತಿ ಕೇಳುವುದಕ್ಕೆ ಮುಂಚೆ ಬರೆದಿಡಲ್ಪಡತಕ್ಕದ್ದು.

ತೀರ್ಮಾನಗಳ ಬದಲಾವಣೆ ಅಥವಾ ರದ್ದು.

30. ಲೋಕಲ್ ಬೋರ್ಡಿನ ಯಾವ ತೀರ್ಮಾನವು ಅದಕ್ಕಾಗಿ ಪ್ರತ್ಯೇಕವಾಗಿ ಸೇರಿಸಲ್ಪಟ್ಟ ಸಭೆಯಲ್ಲಿ ಆಗ ಬೋರ್ಡಿನಲ್ಲಿ ಸೇರಿದ್ದ ಒಟ್ಟು ಮೆಂಬರುಗಳಲ್ಲಿ ಅರ್ಧ ಭಾಗಕ್ಕಿಂತ ಹೆಚ್ಚಾದವರು ಒಪ್ಪಿದ ತೀರ್ಮಾನದಿಂದ ಹೊರತು, ಅಂತಹ ಬೋರ್ಡಿನಿಂದ ಮೂರು ತಿಂಗಳೊಳಗಾಗಿ ಬದಲಾಯಿಸಲ್ಪಡತಕ್ಕದ್ದಲ್ಲ ಅಥವಾ ರದ್ದುಮಾಡಲ್ಪಡತಕ್ಕದ್ದಲ್ಲ.

31. (1) ಲೋಕಲ್ ಬೋರ್ಡಿನ ನಡವಳಿಕೆಗಳು ಅಂತಹ ಬೋರ್ಡು ತೀರ್ಮಾನಿಸಬಹುದಾದಹಾಗೆ ಇಂಗ್ಲೀಷಿನಲ್ಲಿ ಯಾಗಲಿ ಅಥವಾ ಕನ್ನಡದಲ್ಲಿಯಾಗಲಿ ನಡೆಸಲ್ಪಡತಕ್ಕದ್ದು: ಆದರೆ ನಡವಳಿಕೆಗಳು ಇಂಗ್ಲೀಷಿನಲ್ಲಿ ನಡಿಸಲ್ಪಟ್ಟರೆ, ಇಂಗ್ಲೀಷು ತಿಳಿಯದ ಮೆಂಬರುಗಳ ಪ್ರಯೋಜನಕ್ಕಾಗಿ ಕನ್ನಡದಲ್ಲಿ ಅವುಗಳ ಅರ್ಥವನ್ನು ಹೇಳುವುದಕ್ಕೆ ಏರ್ಪಾಡು ಮಾಡತಕ್ಕದ್ದು.

ಬೋರ್ಡಿನ ನಡವಳಿಕೆಗಳ ಭಾಷೆ.

(2) ಲೋಕಲ್ ಬೋರ್ಡಿನ ಪ್ರತಿ ಸಂಗದ ನಡವಳಿಕೆಗಳು ಗೈರ್‌ಹಾಜರಾಗಿದ್ದ ಮತ್ತು ಹಾಜರಾಗಿದ್ದ ಮೆಂಬರುಗಳ ಹೆಸರುಗಳನ್ನು ನಮೂದಿಸತಕ್ಕದ್ದು ಮತ್ತು ಗೈರ್‌ಹಾಜರಾಗಿರುವ ಪ್ರತಿ ಮೆಂಬರ ವಿಷಯದಲ್ಲೂ ಕಾರಣವು ತಿಳಿಯಬಂದಿದೆಯೋ ಎಂಬದನ್ನು ಸೂಚಿಸತಕ್ಕದ್ದು.

ಹಾಜರು ಗೈರ್‌ಹಾಜರ್ ಇರುವ ಮೆಂಬರುಗಳ ಹೆಸರುಗಳು ನಮೂದು ಮಾಡಲ್ಪಡತಕ್ಕದ್ದು.

(3) ಗೌರ್ನಮೆಂಟಿಗೆ ಕಳುಹಿಸಲ್ಪಡುವ ಸಂಗಗಳ ನಡವಳಿಕೆಗಳ ಪ್ರತಿಗಳು, ಇಂಗ್ಲಿಷ್ ಭಾಷೆಯಲ್ಲಿ ಇಲ್ಲದೆ ಇದ್ದರೆ, ಅವುಗಳೊಡನೆ ಅವುಗಳ ಇಂಗ್ಲಿಷ್ ತರ್ಜುಮೆಯನ್ನು ಡೆಪ್ಯುಟಿ ಕಮಿಷನರ ರುಜುನಿಕಿ ಕಳುಹಿಸತಕ್ಕದ್ದು.

ನಡವಳಿಕೆಗಳ ಪ್ರತಿಗಳನ್ನು ಇಂಗ್ಲಿಷ್ ತರ್ಜುಮೆ ಸಹಿತವಾಗಿ ಗೌರ್ನಮೆಂಟಿಗೆ ಕಳುಹಿಸತಕ್ಕದ್ದು.

32. ಡಿಸ್ಟ್ರಿಕ್ಟು ಮತ್ತು ತಾಲ್ಲೋಕು ಬೋರ್ಡುಗಳು ಒಬ್ಬರಿಗೊಬ್ಬರು ಮತ್ತು ಮ್ಯುನಿಸಿಪಲ್ ಬೋರ್ಡುಗಳ ಸಂಗಡಲೂ ನೇರಾ ಕಾಗದ ಪತ್ರಗಳನ್ನು ನಡಿಸಬಹುದು; ಆದರೆ ಪಂಚಾಯತಿಗಳು ಅವರ ತಾಲ್ಲೋಕು ಬೋರ್ಡುಗಳ ಮೂಲಕವಾಗಿ ಕಾಗದ ಪತ್ರಗಳನ್ನು ನಡಿಸತಕ್ಕದ್ದು. ತಾಲ್ಲೋಕು ಬೋರ್ಡುಗಳಿಂದ ಗೌರ್ನಮೆಂಟು ಆಫೀಸರುಗಳಿಗೆ ಹೋಗುವ ಕಾಗದ ಪತ್ರಗಳು ಸಾಧಾರಣವಾಗಿ ಡೆಪ್ಯುಟಿ ಕಮಿಷನರವರ ಮೂಲಕ, ಮತ್ತು ಅವರ ಹೆಸರಿಗೆ ಬರೆದ ಲೇಖನಗಳ ಮೂಲಕ (ಸುಮ್ಮನೆ ಅವರ ಮೂಲಕವಾಗಿ ಕಳುಹಿಸತಕ್ಕದ್ದಲ್ಲ) ಕಳುಹಿಸಲ್ಪಡತಕ್ಕದ್ದು; ಆದರೆ ಡೆಪ್ಯುಟಿ ಕಮಿಷನರು ಲಿಖಿತಮೂಲಕವಾದ ಸಾಮಾನ್ಯವಾದ ಅಥವಾ ವಿಶೇಷವಾದ ಹುಕುಂನಿಂದ ಯಾವ ಇಲಾಖೆಯಲ್ಲಾದರು ಇರುವ ತಮಗೆ ಕೀಳ್ಪಟ್ಟ ಯಾವ ಅಧಿಕಾರಿಯನ್ನಾದರು ಆತನ ಮೇಲ್ವಿಚಾರಣೆಗೆ ಕೊಟ್ಟಿರುವ ಕೆಲಸದ ವಿಷಯವಾಗಿ ಯಾವ ಲೋಕಲ್ ಬೋರ್ಡಿನ ಸಂಗಡಲಾದರು ಅಥವಾ ಯಾವ ಕಮಿಟಿಯ ಸಂಗಡಲಾದರು ಸಾಕ್ಷಾತ್ತಾಗಿ ಕಾಗದ ಪತ್ರಗಳನ್ನು ನಡಿಸಬಹುದೆಂದಾಗಲಿ ಆಲೋಚನೆ ಮಾಡಬಹುದೆಂದಾಗಲಿ ಹುಕುಂ ಮಾಡಬಹುದು.

ಲೋಕಲ್ ಬೋರ್ಡುಗಳ ಕಾಗದಪತ್ರಗಳು.

33. ಗೌರ್ನಮೆಂಟು ಅಥವಾ ಡೆಪ್ಯುಟಿ ಕಮಿಷನರು ಅಥವಾ ವಿದ್ಯಾಭ್ಯಾಸ, ವೈದ್ಯ ಅಥವಾ ಮರಹಮತ್ತು ಇಲಾಖೆಯ ಡಿಸ್ಟ್ರಿಕ್ಟಿನ ಮುಖ್ಯ ಅಥವಾ ಹಿರಿ ಅಧಿಕಾರಿ, ಅಥವಾ ಅಂತಹ ಇಲಾಖೆಯ ಮುಖ್ಯಾಧಿಕಾರಿ ಇವರಿಂದ ಲೋಕಲ್ ಬೋರ್ಡಿಗೆ ಯಾವ ವಿಷಯವನ್ನಾದರೂ ಕುರಿತು ಲಿಖಿತಮೂಲಕವಾದ ಸೂಚನೆಯು ಬಂದಾಗ ಅದು ಮುಂದಿನ ಸಂಗದ ಮುಂದೆ ಇಡಲ್ಪಟ್ಟು ಚನ್ನಾಗಿ ಪರ್ಯಾಲೋಚಿಸಲ್ಪಡತಕ್ಕದ್ದು, ಮತ್ತು ಆ ವಿಷಯದಲ್ಲಿ ಒಂದು ಕ್ರಮವಾದ ತೀರ್ಮಾನವು ಬರೆದಿಡಲ್ಪಡತಕ್ಕದ್ದು.

ಗೌರ್ನಮೆಂಟು ಅಥವಾ ಡೆಪ್ಯುಟಿ ಕಮಿಷನರು, ಮುಂತಾದವರಿಂದ ಬರುವ ಸೂಚನೆಗಳು ಮುಂದಿನ ಸಂಗದಲ್ಲಿ ಆಲೋಚಿಸಲ್ಪಡತಕ್ಕದ್ದು.

34. ಲೋಕಲ್ ಬೋರ್ಡಿನ ಪ್ರೆಸಿಡೆಂಟು ಅಥವಾ ಅಧ್ಯಕ್ಷನು ನಡವಳಿಕೆಗಳನ್ನು ಅಥವಾ ಕಾಗದಪತ್ರಗಳನ್ನು ತನ್ನ ವಶದಲ್ಲಿಟ್ಟುಕೊಂಡಿರತಕ್ಕದ್ದು.

ಪ್ರೆಸಿಡೆಂಟು ಅಥವಾ ಅಧ್ಯಕ್ಷನು ನಡವಳಿಕೆಗಳನ್ನು ಮತ್ತು ಕಾಗದಪತ್ರಗಳನ್ನು ತನ್ನ ವಶದಲ್ಲಿಟ್ಟುಕೊಂಡಿರತಕ್ಕದ್ದು.

35. ಲೋಕಲ್ ಬೋರ್ಡಿನ ತೀರ್ಮಾನಗಳು ಆ ಬೋರ್ಡಿನ ಸಂಪೂರ್ಣವಾದ ಕಾರ್ಯ ನಿರ್ವಾಹಾಧಿಕಾರವುಳ್ಳ ಮತ್ತು ಲೋಕಲ್ ಬೋರ್ಡ್ ರೆಗ್ಯುಲೇಷನಿನ ಮತ್ತು ಈ ನಿಬಂಧನೆಗಳ ಉದ್ದೇಶಗಳನ್ನು ಸರಿಯಾಗಿ ನೆರವೇರಿಸುವುದಕ್ಕೆ ಸಾಕ್ಷಾತ್ತಾಗಿ ಜವಾಬುದಾರರಾಗಿರುವ ಆದರ ಪ್ರೆಸಿಡೆಂಟ್ ಅಥವಾ ಅಧ್ಯಕ್ಷರಿಂದ ನಿರ್ವಹಿಸಲ್ಪಡತಕ್ಕದ್ದು.

ಕಾರ್ಯ ನಿರ್ವಾಹಕ ಅಧಿಕಾರಗಳು ಪ್ರೆಸಿಡೆಂಟು ಅಥವಾ ಅಧ್ಯಕ್ಷರಲ್ಲಿ ಇರತಕ್ಕದ್ದು.

36. ಡಿಸ್ಟ್ರಿಕ್ಟು ಅಥವಾ ತಾಲ್ಲೋಕು ಬೋರ್ಡಿನ ಪ್ರೆಸಿಡೆಂಟು ಜರೂರಾದ ಸಂದರ್ಭಗಳಲ್ಲಿ ನೆರವೇರಿಸುವುದಕ್ಕಾಗಲಿ ಅಥವಾ ಮಾಡುವುದಕ್ಕಾಗಲಿ ಅಂತಹ ಬೋರ್ಡಿಗೆ ಅಧಿಕಾರವಿರುವ ಮತ್ತು ಜನಗಳ ಪ್ರಯೋಜನಕ್ಕಾಗಲಿ ಅಥವಾ ಕ್ಷೇಮಕ್ಕಾಗಲಿ ಒಡನೆ ನೆರವೇರಿಸುವುದು ಅಥವಾ ಮಾಡುವುದು ಅವಶ್ಯವೆಂಬ ಪ್ರೆಸಿಡೆಂಟು ಅಭಿಪ್ರಾಯ ಪಡುವ ಯಾವ ಕಾಮಗಾರಿಯನ್ನು ನಡೆಸುವುದಕ್ಕಾಗಲಿ ಅಥವಾ ಯಾವ ಕೆಲಸವನ್ನಾದರೂ ಮಾಡುವುದಕ್ಕಾಗಲಿ ಹುಕುಂ ಕೊಡುವುದಕ್ಕೂ ಮತ್ತು ಅಂತಹ ಜರೂರಾದ ಕಾಮಗಾರಿಯನ್ನು ನಡಿಸುವುದಕ್ಕಾಗಲಿ ಮತ್ತು ಕೆಲಸವನ್ನು ಮಾಡುವುದಕ್ಕಾಗಲಿ ಮುಟ್ಟುವ ಖರ್ಚು ಅಂತಹ ಬೋರ್ಡಿನ ವಶದಲ್ಲಿರುವ ಹಣದಿಂದ ಕೊಡಲ್ಪಡತಕ್ಕದ್ದೆಂದು ಹುಕುಂ ಮಾಡುವುದಕ್ಕೂ ನ್ಯಾಯವಾಗಿರತಕ್ಕದ್ದು.

ಜರೂರು ಕೆಲಸಗಳಲ್ಲಿ ಪ್ರೆಸಿಡೆಂಟರ ಅಧಿಕಾರಗಳು.

ಉದ್ಯೋಗಸ್ಥರ ಮತ್ತು ನೌಕರರ ನೇಮಕ, ಬರತರ್ಫ ವಗ್ಯೆರೆ.

37. ಲೋಕಲ್ ಬೋರ್ಡಿನ ಪ್ರೆಸಿಡೆಂಟು ಅಥವಾ ಅಧ್ಯಕ್ಷನು ಗವರ್ನ್ಮೆಂಟಿನವರು ವಿಧಿಸಬಹುದಾದ ಅಧಿಕಾರಕ್ಕೆ ಒಳಪಟ್ಟು ಅಂತಹ ಬೋರ್ಡಿಗೆ ಹೊಸದಾಗಿಡುವುದಕ್ಕೆ ಅಧಿಕಾರವಿರುವ ಉದ್ಯೋಗಸ್ಥರನ್ನು ಮತ್ತು ನೌಕರರನ್ನು ನೇಮಿಸಬಹುದು, ಮತ್ತು ಮೇಲ್ಕಂಡ ಅಧಿಕಾರಕ್ಕೆ ಒಳಪಟ್ಟು ಅಂತಹ ಯಾವ ಉದ್ಯೋಗಸ್ಥರಿಗಾಗಲಿ, ಅಥವಾ ನೌಕರರಿಗಾಗಲಿ ಜುರ್ಮಾನೆ ಹಾಕಬಹುದು ಅಥವಾ ಸಸ್ಪೆಂಡು ಅಥವಾ ಬರತರ್ಫು ಮಾಡಬಹುದು, ಮತ್ತು ಅವರಿಗೆ ಬದಲಾಗಿ ಇತರರನ್ನು ನೇಮಿಸಬಹುದು: ಆದರೆ ಈ ನಿಬಂಧನೆಯಮೇರೆ ಪಂಚಾಯಿತಿಯ ಅಧ್ಯಕ್ಷನಿಂದ ಅಥವಾ ತಾಲ್ಲೋಕು ಅಥವಾ ಡಿಸ್ಟ್ರಿಕ್ಟು ಬೋರ್ಡಿನ ಪ್ರೆಸಿಡೆಂಟನಿಂದ ಕೊಡಲ್ಪಟ್ಟ ಯಾವ ಹುಕುಂನಿಂದಲಾದರೂ ನಷ್ಟಹೊಂದಿದ ಯಾವ ಉದ್ಯೋಗಸ್ಥನಾದರು, ಅಥವಾ ನೌಕರನಾದರು ಅಂತಹ ಹುಕುಮಿನ ತಾರೀಖಿನಿಂದ ಒಂದು ತಿಂಗಳೊಳಗಾಗಿ ತಾಲ್ಲೋಕು ಬೋರ್ಡಿನ ಪ್ರೆಸಿಡೆಂಟಿಗೆ ಅಥವಾ ಡಿಸ್ಟ್ರಿಕ್ಟು ಬೋರ್ಡಿನ ಪ್ರೆಸಿಡೆಂಟಿಗೆ ಅಥವಾ ಗವರ್ನ್ಮೆಂಟಿಗೆ ಸಂದರ್ಭಾನುಸಾರವಾಗಿ ಅಪೀಲ್ಮಾಡಿಕೊಳ್ಳಬಹುದು, ಮತ್ತು ಅಂತಹ ಅಪೀಲಿನ ಮೇಲೆ ಕೊಡುವ ಹುಕುಂ ಅಖೈರಾಗಿರತಕ್ಕದ್ದು.

ಪ್ರೆಸಿಡೆಂಟು ವೈಸ್ ಪ್ರೆಸಿಡೆಂಟಿಗೆ ಅಧಿಕಾರಗಳನ್ನು ಕೊಡುವುದು.

38. (1) ಡಿಸ್ಟ್ರಿಕ್ಟು ಅಥವಾ ತಾಲ್ಲೋಕು ಬೋರ್ಡಿನ ಪ್ರೆಸಿಡೆಂಟು ಈ ನಿಬಂಧನೆಗಳ ಪ್ರಕಾರ ತನಗೆ ಕೊಟ್ಟಿರುವ ಅಧಿಕಾರಗಳನ್ನು ನಡಿಸುವುದಕ್ಕಾಗಲಿ ಪ್ರೆಸಿಡೆಂಟಾಗಿ ತಾನು ನಡಿಸುವ ಯಾವ ಕೆಲಸಗಳನ್ನಾದರು ಮಾಡುವುದಕ್ಕಾಗಲಿ ಲಿಖಿತಮೂಲಕವಾದ ಹುಕುಮಿನಿಂದ ವೈಸ್ ಪ್ರೆಸಿಡೆಂಟಿಗೆ ಆಗಾಗ್ಯೆ ಅಧಿಕಾರ ಕೊಡಬಹುದು; ಮತ್ತು ಅದೇ ಪ್ರಕಾರವಾಗಿ ಅಂತಹ ಹುಕುಮನ್ನು ಯಾವಾಗಲಾದರು ಬದಲಾಯಿಸಬಹುದು ಅಥವಾ ರದ್ದು ಮಾಡಬಹುದು; ಆದರೆ ಹಾಗೆ ಅಧಿಕಾರಗಳನ್ನಾಗಲಿ ಅಥವಾ ಕೆಲಸಗಳನ್ನಾಗಲಿ ಕೊಡುವುದು ಈ ನಿಬಂಧನೆಗಳ ಮೇರೆ ಪ್ರೆಸಿಡೆಂಟರಮೇಲೆ ಹಾಕಿರುವ ಜವಾಬ್ದಾರಿಯನ್ನು ತಪ್ಪಿಸತಕ್ಕದ್ದಲ್ಲ.

ಅಧ್ಯಕ್ಷನು ಪಂಚಾಯಿತರಲ್ಲೊಬ್ಬನಿಗೆ ಅಧಿಕಾರಗಳನ್ನು ಕೊಡುವುದು.

(2) ಪಂಚಾಯಿತಿಯ ಅಧ್ಯಕ್ಷನು ಮುಂಚಿತವಾಗಿ ಪಡೆದ ಪಂಚಾಯಿತಿಯು ಸಮ್ಮತಿಯಿಂದ ಈ ನಿಬಂಧನೆಗಳ ಪ್ರಕಾರ ಅಂತಹ ಅಧ್ಯಕ್ಷನಿಗೆ ಕೊಟ್ಟಿರುವ ಅಧಿಕಾರಗಳಲ್ಲಿ ಯಾವದನ್ನಾದರೂ, ಸರ್ಕಾರಿ ವರ್ಷದಲ್ಲಿ ನಾಲ್ಕು ತಿಂಗಳುಗಳಿಗೆ ಮೀರದಷ್ಟು ಕಾಲ ನಡಿಸುವುದಕ್ಕೆ, ಲಿಖಿತಮೂಲಕವಾದ ಹುಕುಂನಿಂದ ಪಂಚಾಯಿತಿಯ ಯಾವ ಮೆಂಬರಿಗಾದರು ತನ್ನ ಸ್ವಂತ ಜವಾಬ್ದಾರಿ ಮೇಲೆ ಅಧಿಕಾರಕೊಡಬಹುದು; ಮತ್ತು ಅಂತಹ ಅಧಿಕಾರವನ್ನು ರದ್ದುಮಾಡಬಹುದು, ಅಥವಾ ಬದಲಾಯಿಸಬಹುದು.

ಕಮಿಟಿ (ಸಂಘ) ಗಳನ್ನು ನೇಮಿಸುವುದಕ್ಕೆ ಲೋಕಲ್ ಬೋರ್ಡುಗಳಿಗೆ ಅಧಿಕಾರ.

39. ಸಾಮಾನ್ಯವಾಗಿ ಕೆಲಸ ನಡಿಯುವ ಉದ್ದೇಶಗಳಿಗಾಗಿ, ಯಾವದಾದರು ಕೆಲಸವನ್ನು ಅಥವಾ ಕೆಲಸಗಳನ್ನು, ನಡಿಸುವುದಕ್ಕಾದರೂ, ಅಥವಾ ಯಾವ ವಿಷಯವನ್ನಾದರೂ ಹಂಗಾಮಿಯಾಗಿ ತೀರ್ಮಾನಿಸುವುದಕ್ಕಾದರೂ, ಅಥವಾ ಅದನ್ನು ಕುರಿತು ರಿಪೋರ್ಟು ಮಾಡುವುದಕ್ಕಾದರೂ, ಲೋಕಲ್ ಬೋರ್ಡಿನ ಮೆಂಬರುಗಳಲ್ಲಿ ಒಬ್ಬ ಅಥವಾ ಅಧಿಕವಾದವರನ್ನು ಒಂದು ಕಮಿಟಿಯಾಗಿ ನೇಮಿಸುವುದಕ್ಕೆ ಲೋಕಲ್ ಬೋರ್ಡು ಅಧಿಕಾರವುಳ್ಳದ್ದಾಗಿರತಕ್ಕದ್ದು, ಮತ್ತು ಲೋಕಲ್ ಬೋರ್ಡು ಅವಶ್ಯವಾಗಿರಬಹುದಾದ ಅದರ ಅಧಿಕಾರಗಳಲ್ಲಿ ಯಾವವನ್ನಾದರೂ ಅಂತಹ ಕಮಿಟಿಗೆ ಕೊಡಬಹುದು. ಕಮಿಟಿಯ ನಡವಳಿಕೆಗಳು ಲೋಕಲ್ ಬೋರ್ಡಿನ ಪುನರಾಲೋಚನೆಗೂ ದೃಢೀಕರಣಕ್ಕೂ ಒಳಪಟ್ಟಿರತಕ್ಕದ್ದು.

ಡಿಸ್ಟ್ರಿಕ್ಟು ಬೋರ್ಡು ಅದರ ಅಧಿಕಾರಕ್ಕೆ ಒಳಪಟ್ಟ ಯಾವ ಆಲಯದ ವಿಚಾರಣೆಗಾದರೂ ಸಭೆಗಳನ್ನು ನೇಮಿಸಬಹುದು.

40. ಡಿಸ್ಟ್ರಿಕ್ಟು ಬೋರ್ಡು ಅದರ ಅಧಿಕಾರದಲ್ಲಿ ಮತ್ತು ಆಡಳಿತದಲ್ಲಿರುವ ಯಾವ ಆಲಯದ ವಿಚಾರಣೆಗಾದರು, ಬೋರ್ಡಿನ ಮೆಂಬರುಗಳಾದ ಅಥವಾ ಇಲ್ಲದ ಯಾವ ಜನಗಳಾದರು ಸೇರಿರುವ ಸಭೆಗಳನ್ನು ಆಗಾಗ್ಯೆ ನೇಮಿಸಬಹುದು, ಮತ್ತು ಹಾಗೆ ನೇಮಿಸಲ್ಪಟ್ಟ ಸಭೆಯು ಡಿಸ್ಟ್ರಿಕ್ಟು ಬೋರ್ಡಿನ ಹುಕುಂಗಳಿಗೆ ಒಳಪಟ್ಟು ಆ ಆಲಯದ ಮೇಲ್ವಿಚಾರಣೆ ಮಾಡತಕ್ಕದ್ದು. ಹಾಗೆ ನೇಮಿಸಲ್ಪಟ್ಟ ಸಭೆಗಳು ಡಿಸ್ಟ್ರಿಕ್ಟು ಬೋರ್ಡಿಗೆ ಇಷ್ಟವಿರುವವರೆಗೂ ಆ ಉದ್ಯೋಗವನ್ನು ವಹಿಸತಕ್ಕದ್ದು.

ಕಂಟ್ರಾಕ್ಟುಗಳು ಸಾಧಾರಣವಾಗಿ ಬರಹಮೂಲಕವಾಗಿಯೂ ಮತ್ತು ಸ್ಟಾಂಪು ಮತ್ತು ರೆಜಿಸ್ಟ್ರೇಷನ್ ಕಾನೂನುಗಳಿಗೆ ಅನುಸಾರವಾಗಿಯೂ ಇರತಕ್ಕದ್ದು.

41. ಡಿಸ್ಟ್ರಿಕ್ಟು ಬೋರ್ಡಿನಿಂದ, ಅಥವಾ ಡಿಸ್ಟ್ರಿಕ್ಟು ಬೋರ್ಡಿನ ಏಜಂಟಾಗಿ ತಾಲ್ಲೋಕು ಬೋರ್ಡಿನಿಂದ, ಅಥವಾ ತಾಲ್ಲೋಕು ಬೋರ್ಡಿನ ಏಜಂಟಾಗಿ ಪಂಚಾಯಿತಿಯಿಂದ ಮಾಡಲ್ಪಟ್ಟ ಕಂಟ್ರಾಕ್ಟುಗಳು ಸಾಧಾರಣವಾಗಿ ಬರಹಮೂಲಕವಾಗಿರತಕ್ಕದ್ದು. ಮತ್ತು ಸ್ಟಾಂಪು ಮತ್ತು ರೆಜಿಸ್ಟ್ರೇಷನಿಗೆ ಸಂಬಂಧಪಟ್ಟ ಕಾನೂನುಗಳಿಗೆ ಅನುಸಾರವಾಗಿರತಕ್ಕದ್ದು.

ಬರಹಮೂಲಕವಾದ ಕಂಟ್ರಾಕ್ಟುಗಳು ಪ್ರೆಸಿಡೆಂಟು ಅಥವಾ ಅಧ್ಯಕ್ಷನಿಂದ ರುಜು ಮಾಡಲ್ಪಡತಕ್ಕದ್ದು.

42. ಬರಹಮೂಲಕವಾದ ಕಂಟ್ರಾಕ್ಟುಗಳು ಲೋಕಲ್ ಬೋರ್ಡಿನ ಪರವಾಗಿ ಪ್ರೆಸಿಡೆಂಟು ಅಥವಾ ಅಧ್ಯಕ್ಷನಿಂದ ರುಜು ಮಾಡಲ್ಪಡತಕ್ಕದ್ದು.

ಕಂದಾಯದಿಂದ ವಿನಾಯಿಸಲ್ಪಟ್ಟ ಕೆಲವು ಕಟ್ಟಡಗಳು.

48. ಧರ್ಮದ ಕೆಲಸಗಳಿಗೆ ಮಾತ್ರವಾಗಿ ಉಪಯೋಗಿಸಲ್ಪಡುವ, ಅಥವಾ ಜನಗಳ ದೇವರ ಪೂಜೆಗೋಸ್ಕರವಾಗಿ ಪ್ರತ್ಯೇಕವಾಗಿಡಲ್ಪಟ್ಟ ಮತ್ತು ನಿಜವಾಗಿ ಹಾಗೆ ಉಪಯೋಗಿಸಲ್ಪಟ್ಟ ಅಥವಾ ಬೇರೆ ಕೆಲಸಕ್ಕೆ ಉಪಯೋಗಿಸಲ್ಪಡದೆ ಇರುವ ಕಟ್ಟಡಗಳು, ಮತ್ತು ಸತ್ರಗಳು, ಮುಸಾಫರಖಾನೆಗಳು, ಆಸ್ಪತ್ರೆಗಳು, ಡಿಸ್ಪೆನ್ಸರಿಗಳು, ಅಥವಾ ಪಾಠಶಾಲೆಗಳಾಗಿ ಮಾತ್ರವೆ ಉಪಯೋಗಿಸಲ್ಪಟ್ಟಿರುವ ಕಟ್ಟಡಗಳು, ಮತ್ತು ಗೌರ್ನಮೆಂಟಿನ ಅಥವಾ ಡಿಸ್ಟ್ರಿಕ್ಟು ಬೋರ್ಡಿನ ಸ್ವತ್ತುಗಳಾಗಿರುವ ಅಥವಾ ಅವರಿಗೆ ಸೇರಿರುವ ಮತ್ತು ವಾಸಮಾಡುವುದಕ್ಕೆ ಉಪಯೋಗಿಸಲ್ಪಡದೆ ಇರುವ ಕಟ್ಟಡಗಳು, ಕಂದಾಯಕ್ಕೆ ಗುರಿಯಾಗತಕ್ಕದ್ದಲ್ಲ.

ಕಂದಾಯದ ಬುಕ್ಕುಗಳನ್ನು ನೋಡುವುದು.

49. ಈ ನಿಬಂಧನೆಗಳ ಮೇರೆ ಕಂದಾಯ ಬೀಳತಕ್ಕ ಯಾವ ಮನೆಯ ಮಾಲೀಕನು ಅಥವಾ ವಾಸಮಾಡುವವನು ಎಂದು ಹೇಳುವ ಪ್ರತಿ ಮನುಷ್ಯನು, ಅಥವಾ ಅಂತಹ ಮನುಷ್ಯನ ಏಜಂಟು ಸರಿಯಾದ ವೇಳೆಗಳಲ್ಲೆಲ್ಲಾ ಕಂದಾಯದ ಬುಕ್ಕುಗಳನ್ನು ನೋಡುವುದಕ್ಕೂ ಮತ್ತು ಯಾವ ರುಸುಮನ್ನೂ ಕೊಡದೆ ಅವುಗಳಿಂದ ಎತ್ತಿ ಬರೆದುಕೊಳ್ಳುವುದಕ್ಕೂ ಸ್ವತಂತ್ರನಾಗಿರತಕ್ಕದ್ದು.

ಕಂದಾಯದ ಬುಕ್ಕುಗಳು ಪೂರ್ತಿಯಾದುದನ್ನು ಪ್ರಕಟಿಸತಕ್ಕದ್ದು.

50. ಕಂದಾಯದ ಬುಕ್ಕುಗಳು ತಯಾರಾದಕೂಡಲೆ ಆ ಅಂಶವನ್ನು ಮತ್ತು ಆ ಬುಕ್ಕುಗಳನ್ನು ನೋಡಬಹುದಾದ ಸ್ಥಳ ಅಥವಾ ಸ್ಥಳಗಳನ್ನು ಕುರಿತು ಯೂನಿಯನ್ನಲ್ಲಿ ದಂಡೂರೆ ಮೂಲಕವಾಗಿ ಪಂಚಾಯಿತಿಯ ಅಧ್ಯಕ್ಷನು ಪ್ರಕಟಿಸತಕ್ಕದ್ದು.

ಕಂದಾಯದ ಬುಕ್ಕುಗಳ ತಿದ್ದುಪಾಟು.

51. (1) ಪಂಚಾಯಿತಿಯ ಅಧ್ಯಕ್ಷನು, ಕಂದಾಯಕ್ಕೆ ಗುರಿಯಾಗತಕ್ಕ ಯಾವ ಮನುಷ್ಯನ ಹೆಸರನ್ನಾದರೂ, ಅಥವಾ ಸ್ವತ್ತನ್ನಾದರೂ, ಕಂದಾಯದ ಬುಕ್ಕಿನಲ್ಲಿ ದಾಖಲ್ ಮಾಡುವುದರಿಂದಾಗಲಿ, ಅಥವಾ ಅಂತಹ ಸ್ವತ್ತಿನ ತರಗತಿಯನ್ನು ಬದಲಾಯಿಸುವುದರಿಂದಾಗಲಿ ಕಂದಾಯದ ಬುಕ್ಕುಗಳಿಗೆ ಸೇರಿಸಬಹುದು, ಅಥವಾ ಅವುಗಳನ್ನು ತಿದ್ದುಪಾಟು ಮಾಡಬಹುದು ; ಮತ್ತು ಅಂತಹ ಪ್ರತಿ ತಿದ್ದುಪಾಟಿನ ವಿಷಯದಲ್ಲೂ, ಅಂತಹ ತಿದ್ದುಪಾಟಿಗೆ ಸಂಬಂಧಪಟ್ಟ ಮನುಷ್ಯನಿಗೆ ಅದನ್ನು ಕುರಿತು ನೋಟೀಸು ಕೊಡತಕ್ಕದ್ದು.

(2) ತಾಲ್ಲೋಕು ಬೋರ್ಡಿನ ಪ್ರೆಸಿಡೆಂಟು ಯಾವಾಗಲಾದರೂ, ತಾನು ಸ್ವತಃ ಅಥವಾ ಸಂಬಂಧಪಟ್ಟ ಯಾವ ಮನುಷ್ಯನ ಕೋರಿಕೆಮೇಲಾದರೂ ಈ ನಿಬಂಧನೆಯ (1)ನೆಯ ಅಧಿಕರಣಕ್ಕೆ ಅನುಸಾರವಾಗಿ, ಅಲ್ಲಿ ವಿಧಿಸಿರುವಂತೆ ನೋಟೀಸು ಕೊಡುವ ಅಂಶಕ್ಕೆ ಒಳಪಟ್ಟು ಪಂಚಾಯಿತಿಯ ಅಧ್ಯಕ್ಷನ ಅಧಿಕಾರಗಳಲ್ಲಿ ಯಾವುದನ್ನಾದರೂ ಅಥವಾ ಎಲ್ಲವನ್ನಾದರೂ ನಡೆಸಬಹುದು ; ಮತ್ತು ತಾಲ್ಲೋಕು ಬೋರ್ಡಿನ ಪ್ರೆಸಿಡೆಂಟಿನಿಂದ ಹಾಗೆ ಕೊಡಲ್ಪಟ್ಟ ಯಾವ ಹುಕುಮು 59ನೆಯ ನಿಬಂಧನೆಯ ಮೇರೆ ಅಪೀಲಿನಿಂದಹೊರ್ತು ಬದಲಾಯಿಸಲ್ಪಡತಕ್ಕದ್ದಲ್ಲ, ಅಥವಾ ರದ್ದು ಮಾಡಲ್ಪಡತಕ್ಕದ್ದಲ್ಲ.

ಕಂದಾಯವು ಎರಡು ಸಮವಾದ ಖಿಸ್ತುಗಳಲ್ಲಿ ಕೊಡಲ್ಪಡತಕ್ಕದ್ದು.

52. (1) 45ನೆಯ ನಿಬಂಧನೆಯ ಮೇರೆ ಹಾಕಲ್ಪಟ್ಟ ಕಂದಾಯವು ಮನೆಯ ಮಾಲೀಕನಿಂದ ಅಥವಾ ವಾಸಮಾಡುವವನಿಂದ ಎರಡು ಸಮವಾದ ಖಿಸ್ತುಗಳಲ್ಲಿ ಕೊಡಲ್ಪಡತಕ್ಕದ್ದು.

(2) 53ನೆಯ ನಿಬಂಧನೆಯ (1)ನೆಯ ಅಧಿಕರಣದ ನಿಯಮಗಳಿಗೆ ಒಳಪಟ್ಟು ಪ್ರತಿ ವರ್ಷಾರ್ಧದ (ಎಂದರೆ ಜನವರಿಯಿಂದ ಜೂನ್ ವರೆಗೆ, ಅಥವಾ ಜುಲೈಯಿಂದ ಡಿಸೆಂಬರ್ ವರೆಗೆ) ಖಿಸ್ತು ಅಂತಹ ವರ್ಷಾರ್ಧವು ಪ್ರಾರಂಭಿಸಿದ ಮೇಲೆ 30 ದಿನಗಳೊಳಗಾಗಿ ಕೊಡಲ್ಪಡತಕ್ಕದ್ದು.

ಹೊಸದಾಗಿ ಅಥವಾ ತಿರಗಿ ಕಟ್ಟಲ್ಪಟ್ಟ ಮನೆಗಳು.

53. (1) ಒಂದು ಯೂನಿಯನ್ನಲ್ಲಿ ಯಾವ ಮನೆಯಾದರೂ ಕಟ್ಟಲ್ಪಟ್ಟರೆ, ಪುನಃ ಕಟ್ಟಲ್ಪಟ್ಟರೆ ಅಥವಾ ವಿಸ್ತರಿಸಲ್ಪಟ್ಟರೆ, ಅಧ್ಯಕ್ಷನು ಆ ಮನೆಯ ಮೇಲೆ ವಸೂಲ್ಮಾಡತಕ್ಕ ಕಂದಾಯವನ್ನು ದಾಖಲ್ ಮಾಡತಕ್ಕದ್ದು, ಮತ್ತು ಕಂದಾಯವು ಹಾಕಲ್ಪಟ್ಟ ಆ ವರ್ಷಾರ್ಧದ ಖಿಸ್ತು 54ನೆಯ ನಿಬಂಧನೆಯ (1)ನೆಯ ಅಧಿಕರಣದ ಮೇಲೆ ಹುಟ್ಟಿದ ನೋಟೀಸು ಜಾರಿಯಾದ ತಾರೀಖಿನ ತರುವಾಯ 30 ದಿನಗಳೊಳಗಾಗಿ ಕೊಡಲ್ಪಡತಕ್ಕದ್ದು.

ಮನೆಯು ಕೆಡವಲ್ಪಟ್ಟಾಗ ಅಥವಾ ನಾಶ ಮಾಡಲ್ಪಟ್ಟಾಗ, ಕಂದಾಯವನ್ನು ಮಾಫ್ ಮಾಡುವುದು.

(2) ಯಾವ ಮನೆಯಾದರು ಪೂರ್ತಿಯಾಗಿ ಕೆಡವಲ್ಪಟ್ಟಾಗ ಅಥವಾ ನಾಶ ಮಾಡಲ್ಪಟ್ಟಾಗ, ಅದರ ಮಾಲೀಕನು ಅಂತಹ ಕೆಡಹುವಿಕೆಯನ್ನು ಅಥವಾ ನಾಶವನ್ನು ಕುರಿತು ಅಧ್ಯಕ್ಷನಿಗೆ ವರ್ತಮಾನ ಕೊಡಬಹುದು; ಅಂತಹ ಸಂದರ್ಭದಲ್ಲಿ ಅಧ್ಯಕ್ಷನು ವರ್ತಮಾನ ಕೊಡಲ್ಪಟ್ಟ ವರ್ಷಾರ್ಧದ ತರುವಾಯ ಬರುವ ವರ್ಷಾರ್ಧದಿಂದ ಆ ಮನೆಗೆ ಹಾಕಿರುವ ಕಂದಾಯವನ್ನು ಮನ್ನಿಸತಕ್ಕದ್ದು ; ಮತ್ತು ಅಂತಹ ವರ್ತಮಾನವು ಕೊಡಲ್ಪಡುವವರೆಗೂ ಅಂತಹ ಮನೆಯು ಕೆಡವಲ್ಪಡದೆ ಅಥವಾ ನಾಶ ಮಾಡಲ್ಪಡದೆ ಇದ್ದರೆ ವಸೂಲ್ಮಾಡಲ್ಪಡುತ್ತಿದ್ದ ಕಂದಾಯವನ್ನು ಕೊಡುವುದಕ್ಕೆ ಅಧ್ಯಕ್ಷನಿಗೆ ಉಚಿತವಾಗಿ ತೋರುವರೀತ್ಯಾ ಅಂತಹ ಮಾಲೀಕನು ಬದ್ಧನಾಗಿರತಕ್ಕದ್ದು.

54. ಕೊಡಬೇಕಾಗಿಬಂದ ಕಾಲಕ್ಕೆ ತರುವಾಯ ಮನೆಕಂದಾಯವು 10 ದಿವಸಗಳ ವರೆಗೂ ಕೊಡಲ್ಪಡದೆ ನಿಂತಿದ್ದರೆ ಪಂಚಾಯಿತಿಯ ಅಧ್ಯಕ್ಷನು ಈ ಕೆಳಗಿನ ನಮೂನೆಯಲ್ಲಿ ಅಥವಾ ಆ ಅರ್ಥವುಳ್ಳ ಒಂದು ಬರಹಮೂಲಕವಾದ ನೋಟೀಸನ್ನು ಮನೆಯ ಮಾಲೀಕನ ಮೇಲಾಗಲಿ ಅಥವಾ ಅವನ ಏಜಂಟನ ಮೇಲಾಗಲಿ ಅಥವಾ ವಾಸಮಾಡುವವನ ಮೇಲಾಗಲಿ ಅಥವಾ ಅವರಲ್ಲಿ ಎಲ್ಲರ ಮೇಲಾಗಲಿ ಜಾರಿಯಾಗುವಂತೆ ಮಾಡಬಹುದು.

ಮನೆ ಕಂದಾಯಕ್ಕೆ ತಗಾದೆ ನೋಟೀಸು.

ಇದರಿಂದ ತಿಳಿಯಪಡಿಸುವದೇನಂದರೆ :—ಯೂನಿಯನ್ ಪಂಚಾಯಿತಿಯ ಅಧ್ಯಕ್ಷರು 190 ನೆಯ ವರ್ಷಕ್ಕೆ

ಲ್ಲಿ ನಿಮ್ಮ ಮನೆಗಾಗಿ

ತಗಾದೆ ನೋಟೀಸು.

ನ ಪಂಚಾಯಿತಿಗೆ ನಿಮ್ಮಿಂದ ಬರಬೇಕಾದ

ಮ

ಮೊಬಲಗಿಗಾಗಿ ನಿಮ್ಮನ್ನು ತಗಾದೆ ಮಾಡುತ್ತಾರೆ,

ಲ್ಲಿ ಇರುವ ರ ಆಫೀಸಿಗೆ ಈ ನೋಟೀಸು ಜಾರಿಯಾದ 15 ದಿನಗಳೊಳಗಾಗಿ, ಸಲ್ಲಬೇಕಾದ ಮೊಬಲಗು ಪಾವತಿ ಮಾಡಲ್ಪಡದೆ ಇದ್ದರೆ ಅವರಿಗಾಗಲಿ ಅಥವಾ ಗೆ ಆಗಲಿ ಕೊಡದೆ ಇರುವುದಕ್ಕೆ ಸರಿಯಾದ ಕಾರಣವು ತೋರಿಸಲ್ಪಡದೆ ಇದ್ದರೆ, ಖರ್ಚು ಸಹಿತವಾಗಿ ಸದರಿ ಮೊಬಲಗಿನ ವಸೂಲಾತಿಯ ಬಗ್ಗೆ ಜಫ್ತಿ ವಾರಂಟು ಕೊಡಲ್ಪಡುವುದು.

ತಾರೀಖು (ಅಧ್ಯಕ್ಷರ ರುಜು.)

(2) ಅಂತಹ ತಗಾದೆ ನೋಟೀಸು ತನ್ನ ಮೇಲೆ ಜಾರಿಯಾದ 15 ದಿನಗಳೊಳಗಾಗಿ ಅಂತಹ ಮಾಲೀಕನು ಅಥವಾ ಮಾಲೀಕನ ಏಜಂಟು ಅಥವಾ ವಾಸಮಾಡುವವನು ಸಲ್ಲಬೇಕಾದ ಮೊಬಲಗನ್ನು ಕೊಡದೆ ಹೋದರೆ ಅಥವಾ ಅವನ್ನು ಯಾತಕ್ಕೆ ಕೊಡತಕ್ಕದ್ದಲ್ಲ ಎಂಬುದಕ್ಕೆ ಅಧ್ಯಕ್ಷನಿಗೆ ತೃಪ್ತಿಕರವಾಗಿ ಕಾರಣವನ್ನು ತೋರಿಸದೆ ಹೋದರೆ, ಅಧ್ಯಕ್ಷನು ಅಥವಾ ಅವನಿಂದ ಈ ವಿಷಯದಲ್ಲಿ ಕ್ರಮವಾಗಿ ಅಧಿಕಾರವನ್ನು ಪಡೆದಿರುವ ಇತರ ಮನುಷ್ಯನು ಕೆಳಗಿನ ದಾರಿಗಳಲ್ಲಿ ಯಾವದ ರಲ್ಲಿಯಾದರು, ವಿಶಿಷ್ಟ ಖರ್ಚುಗಳು ಸೇರಿ ಅಂತಹ ಮೊಬಲಗನ್ನು ವಸೂಲ್ಮಾಡಬಹುದು :—

ಜಫ್ತಿ ವಗೈರೆ.

(i) ಬಾಕೀದಾರನ ಚರಸ್ವತ್ತಿನ ಜಫ್ತಿ ಮತ್ತು ಹರಾಜಿನಿಂದ, ಅಥವಾ ಬಾಕೀದಾರನು ಕಂದಾಯ ಬಾಕಿ ಇರುವ ಯಾವದಾದರೂ ಕಟ್ಟಡದಲ್ಲಿ ವಾಸಮಾಡುವವನಾಗಿದ್ದರೆ ಅಂತಹ ಕಟ್ಟಡದ ಒಳಗಾಗಲಿ ಮೇಲಾಗಲಿ ಸಿಕ್ಕುವ ಯಾವದಾದರು ಸ್ವತ್ತಿನ ಜಫ್ತಿ ಮತ್ತು ಹರಾಜಿನಿಂದ, - ಆದರೆ ಮೇಲ್ಕಂಡಂತೆ ಅವನ ಮೇಲೆ ನೋಟೀಸು ಜಾರಿ ಮಾಡಿದಹೊರ್ತು ವಾಸ ಮಾಡುವವನ ಯಾವ ಸ್ವತ್ತನ್ನೂ ಜಫ್ತಿ ಮಾಡತಕ್ಕದ್ದಲ್ಲ;

(ii) ಯಾವ ಕಾರಣದಿಂದಲಾದರು ಬಾಕೀದಾರನ ಸ್ವತ್ತಿನ ಜಫ್ತಿಯು ಅಥವಾ ಸಾಕಾದಷ್ಟು ಜಫ್ತಿಯು ಅಸಾಧ್ಯ ವಾಗಿದ್ದರೆ, ಒಬ್ಬ ಮೇಜಿಸ್ಟ್ರೇಟಿನ ಮುಂದೆ ಅವನ ಮೇಲೆ ಫಿರ್ಯಾದು ಮಾಡುವದರಿಂದ.

(3) ಈ ನಿಬಂಧನೆಯ ಪ್ರಕಾರ ಮೇಜಿಸ್ಟ್ರೇಟಿನ ಮುಂದೆ ಫಿರ್ಯಾದು ಮಾಡಲ್ಪಟ್ಟ ಯಾವ ಕಂದಾಯವನ್ನಾದರೂ ಕೊಡುವುದಕ್ಕೆ ಬದ್ಧನಾದ ಯಾವ ಮನುಷ್ಯನು ಅವನಿಂದ ಬರಬೇಕಾಗಿದ್ದ ಮೊಬಲಗನ್ನು ಕೊಡುವುದಕ್ಕೆ ತಪ್ಪಿದನೆಂದು ಅಥವಾ ಜಫ್ತಿಯನ್ನು ಅಥವಾ ಸಾಕಾದಷ್ಟು ಜಫ್ತಿಯನ್ನು ಮನಃಪೂರ್ವಕವಾಗಿ ಅಡ್ಡಿ ಮಾಡಿದನೆಂದು ಮೇಜಿಸ್ಟ್ರೇಟರಿಗೆ ತೃಪ್ತಿಕರವಾಗಿ ರುಜುವಾತಾದಾಗ ಬಾಕಿ ಇದೆ ಎಂದು ಕಂಡುಬಂದಿರುವ ಕಂದಾಯಕ್ಕೆ ಎರಡರಷ್ಟಕ್ಕಿಂತ ಹೆಚ್ಚಾಗದ ಜುರ್ಮಾನೆಯನ್ನು ಕೊಡುವುದಕ್ಕೆ ಬದ್ಧನಾಗಿರತಕ್ಕದ್ದು, ಮತ್ತು ಅಂತಹ ಕಂದಾಯವನ್ನು ಮತ್ತು ಫಿರ್ಯಾದಿನ ಖರ್ಚನ್ನು ಕೂಡ ಕೊಡತಕ್ಕದ್ದು.

ಕಂದಾಯವನ್ನು ಕೊಡುವುದಕ್ಕೆ ಮನಃಪೂರ್ವಕವಾಗಿ ತಪ್ಪಿದ್ದಕ್ಕೆ ಅಥವಾ ಜಫ್ತಿಗೆ ಅಡ್ಡಿ ಮಾಡಿದ್ದಕ್ಕೆ ಶಿಕ್ಷೆ.

55. ಮೇಲಿನ ನಿಬಂಧನೆಯ (2) ನೆಯ ಅಧಿಕರಣದ ಮೇರೆ ಸ್ವತ್ತನ್ನು ಜಫ್ತಿ ಮತ್ತು ಹರಾಜು ಮಾಡುವುದಕ್ಕೋಸ್ಕರ ಪಂಚಾಯಿತಿಯ ಅಧ್ಯಕ್ಷನು ಈ ಕೆಳಗೆ ನಮೂದಾಗುವ ನಮೂನೆಯಲ್ಲಿ ಅಥವಾ ಅದೇತರಹ ನಮೂನೆಯಲ್ಲಿ ಒಂದು ವಾರಂಟನ್ನು ಕೊಡತಕ್ಕದ್ದು. ಮತ್ತು ಅಂತಹ ಪ್ರತಿ ಒಂದು ವಾರಂಟಿಗೂ 2 ಆಣೆಗಳ ವಾರಂಟು ರುಸುಮು ವಸೂಲ್ಮಾಡಲ್ಪಡತಕ್ಕದ್ದು.

ಜಫ್ತಿ ವಾರಂಟು.

ಜಫ್ತಿ ವಾರಂಟು.

....ಗೆ (ಇಲ್ಲಿ ವಾರಂಟನ್ನು ಜಾರಿ ಮಾಡತಕ್ಕ ಉದ್ಯೋಗಸ್ಥನ ಹೆಸರನ್ನು ಬರಿ) ಇದರಲ್ಲಿ ಕಂಡ ಮೊಬಲಗಿಗಾಗಿ ಮೇಲ್ಕಂಡ..............................ಗೆ ಕ್ರಮವಾಗಿ ತಗಾದೆ ಮಾಡಿದಾಗ್ಯೂ ಮತ್ತು ಅಂತಹ ತಗಾದೆ ಮಾಡಲ್ಪಟ್ಟಂದಿನಿಂದೀಚೆಗೆ 15 ದಿನಗಳು ಕಳದಾಗ್ಯೂ..............................ನ.......... ....19———........................ಕ್ಕೆ ಇದರ ಪಕ್ಕದಲ್ಲಿ ನಮೂದಿಸಿರುವ ಕಂದಾಯಗಳಿಗಾಗಿ... ....ರೂಪಾಯಿಗಳನ್ನು ಕೊಡದೆ ಇರುವುದರಿಂದ ಅಥವಾ ಕೊಡದೆ ಇರುವುದ

ಕ್ಕೆ ಸಾಕಾದಷ್ಟು ಕಾರಣವನ್ನು ತೋರಿಸದೆ ಇರುವುದರಿಂದ :—ಮೇಲ್ಕಂಡ.................ರೂಪಾಯಿಗಳು ವಾರಂಟಿನ ರುಸುಮು..........................ರೂಪಾಯಿಗಳು ಸೇರಿ ಒಟ್ಟು.............................. ರೂಪಾಯಿಗಳು ಇದಲ್ಲದೆ ಅಂತಹ ಸ್ವತ್ತನ್ನು ತೆಗೆದುಕೊಳ್ಳುವುದಕ್ಕು, ಇಡುವುದಕ್ಕು ಮತ್ತು ಮಾರುವುದಕ್ಕು ತಗಲುವ ಖರ್ಚಿಗೆ ಸಾಕಾದಷ್ಟು ಮೊಬಲಗಿನವರೆಗೂ ಬಾಳತಕ್ಕ.........................ನ ಸಾಮಾನುಗಳನ್ನು ಮತ್ತು ಚರ ಸ್ವತ್ತುಗಳನ್ನು ಅಥವಾ, ಸಂದರ್ಭಾನುಸಾರವಾಗಿ (ಮೇಲ್ಕಂಡ ಮನೆಯಲ್ಲಿ ಸಿಕ್ಕುವ ಯಾವ ಸಾಮಾನುಗಳನ್ನು ಮತ್ತು ಚರ ಸ್ವತ್ತುಗಳನ್ನಾದರೂ) ಜಫ್ತಿ ಮಾಡುವುದಕ್ಕೂ ಮತ್ತು ಅಂತಹ ಜಫ್ತಿಯ ತರುವಾಯ ಮುಂದಿನ 15 ದಿನಗಳೊಳಗಾಗಿ ಜಫ್ತಿ ಸ್ವತ್ತನ್ನು ತೆಗೆದುಕೊಳ್ಳುವುದಕ್ಕೂ ಇಡುವುದಕ್ಕೂ ಮುಟ್ಟುವ ಖರ್ಚಿಗೆ ಸಾಕಾದಷ್ಟು ಹೆಚ್ಚು ಮೊಬಲಗು ಸಹ ಮೇಲ್ಕಂಡ ಕಂದಾಯಗಳಿಗೂ ಮತ್ತು ರುಸುಮಿಗೋಸ್ಕರ ಸಲ್ಲಬೇಕಾದ ಒಟ್ಟು ಮೊಬಲಗು ಪಾವತಿ ಮಾಡಲ್ಪಡದೆ ಇದ್ದರೆ ಮೇಲ್ಕಂಡ ಸಾಮಾನುಗಳನ್ನು ಚರ ಸ್ವತ್ತುಗಳನ್ನು ಮಾರುವುದಕ್ಕೂ; ಮತ್ತು ಮಾರಾಟದ ಹುಟ್ಟುವಳಿಯಿಂದ ಮೇಲ್ಕಂಡ ಕಂದಾಯಗಳು ಮತ್ತು ರುಸುಂ ....ರೂಪಾಯಿಗಳಿಗಾಗಿಯೂ ಮತ್ತು ಜಫ್ತಿ ಸ್ವತ್ತನ್ನು ತೆಗೆದುಕೊಳ್ಳುವುದು, ಇಡುವುದು ಮತ್ತು ಮಾರುವುದು ಇವುಗಳ ಖರ್ಚಿಗಾಗಿಯೂ ಬರಬೇಕಾದ ಒಟ್ಟು ಮೊಬಲಗನ್ನು ಕೊಟ್ಟು ಮತ್ತು ವಜಾ ಮಾಡಿ ಸಿಲ್ಕು ಏನಾದರು ಉಳಿದಿದ್ದರೆ ಮೇಲ್ಕಂಡ ಸಾಮಾನುಗಳು ಮತ್ತು ಚರ ಸ್ವತ್ತುಗಳು ಯಾರ ಸ್ವಾಧೀನದಲ್ಲಿದ್ದವೊ ಆ ಮನುಷ್ಯನಿಗೆ ವಾಪಸು ಕೊಡುವುದಕ್ಕೂ ಇದರಿಂದ ನಿಮಗೆ ಆಜ್ಞಾಪಿಸಿ ಇದೆ. ಮೇಲ್ಕಂಡ.........................ನ ಸಾಮಾನು ಮತ್ತು ಚರ ಸ್ವತ್ತುಗಳಲ್ಲಿ ಸಾಕಾದಷ್ಟು ಜಫ್ತಿ ಮಾಡುವುದಕ್ಕೆ ಸಿಕ್ಕದಿದ್ದರೆ ಆ ಅಂಶವನ್ನು ನನಗೆ ಈ ವಾರಂಟಿನೊಡನೆ ನೀವು ತಿಳಿಸತಕ್ಕದ್ದಾಗಿರುತ್ತದೆ.

ತಾರೀಖು.

(ಪಂಚಾಯಿತಿಯ ಅಧ್ಯಕ್ಷನ ರುಜು ಅಥವಾ ಮೊಹರು)

ಪಟ್ಟಿ. ವಿಕ್ರಯ.

56. ಪಂಚಾಯಿತಿಯ ಅಧ್ಯಕ್ಷನು ಅಥವಾ ಮೇಲ್ಕಂಡಂತೆ ಕ್ರಮವಾಗಿ ಅಧಿಕಾರ ಹೊಂದಿದ ಇತರ ಮನುಷ್ಯನು ಜಫ್ತಿ ಮಾಡಲ್ಪಟ್ಟ ಸ್ವತ್ತಿನ ಒಂದು ಪಟ್ಟಿಯನ್ನು ತಯಾರ್ಮಾಡತಕ್ಕದ್ದು, ಮತ್ತು ಜಫ್ತಿಯಾದ 15 ದಿನಗಳೊಳಗಾಗಿ ಬಾಕಿ ಬರಬೇಕಾದ ಮೊಬಲಗು ಕೊಡಲ್ಪಡದೆ ಇದ್ದರೆ ಸ್ವತ್ತು ಮಾರಲ್ಪಡಬಹುದು.

ವಾಸ ಮಾಡುವವನಿಂದ ಕೊಡಲ್ಪಟ್ಟ ಕಂದಾಯವು ಬಾಡಿಗೆಯಿಂದ ವಜಾ ಮಾಡಲ್ಪಡತಕ್ಕದ್ದು.

57. ಮನೆ ಕಂದಾಯವು ವಾಸಮಾಡುವವನಿಂದ ಕೊಡಲ್ಪಟ್ಟಿದ್ದರೆ, ಅಥವಾ ಅವನ ಸ್ವತ್ತಿನ ಜಫ್ತಿ ಮತ್ತು ವಿಕ್ರಯದಿಂದ ಅವನಿಂದ ವಸೂಲ್ಮಾಡಲ್ಪಟ್ಟಿದ್ದರೆ ಹಾಗೆ ಕೊಟ್ಟ ಅಥವಾ ವಸೂಲ್ಮಾಡಲ್ಪಟ್ಟ ಮೊಬಲಗನ್ನು ಮುಂದಿನ ಮತ್ತು ಆತಃಪರ ಕೊಡತಕ್ಕ ಬಾಡಿಗೆಯಿಂದ ವಜಾ ಮಾಡುವುದು ಅವನಿಗೆ ನ್ಯಾಯವಾಗಿರತಕ್ಕದ್ದು.

ಕಂದಾಯದ ಬುಕ್ಕುಗಳನ್ನು ಪ್ರತಿ ವರ್ಷದಲ್ಲಿಯೂ ತಯಾರ್ಮಾಡಬೇಕಾದ ಅವಶ್ಯಕವಿಲ್ಲ.

58. (1) ಪಂಚಾಯಿತಿಯ ಅಧ್ಯಕ್ಷನು ಪ್ರತಿ ವರ್ಷವು ಹೊಸ ಪಟ್ಟಿಗಳನ್ನಾಗಲಿ ಅಥವಾ ಕಂದಾಯದ ಬುಕ್ಕುಗಳನ್ನಾಗಲಿ ತಯಾರ್ಮಾಡಿಸುವುದಕ್ಕೆ ಬದ್ಧನಾಗಿರತಕ್ಕದ್ದಲ್ಲ; ಆದರೆ ಹಿಂದಿನ ವರ್ಷದವುಗಳನ್ನು ತನಗೆ ಅವಶ್ಯವಾಗಿ ತೋರುವ ಬದಲಾವಣೆ ಮತ್ತು ತಿದ್ದುಪಾಟುಗಳೊಡನೆ ಇಟ್ಟುಕೊಳ್ಳಬಹುದು; ಆದರೆ 4 ವರ್ಷಕ್ಕೆ ಒಂದಾವರ್ತಿಗೆ ಕಡಮೆ ಇಲ್ಲದೆ ಎಲ್ಲಾ ಕಂದಾಯವು ಹೊಸದಾಗಿ ಹಾಕಲ್ಪಡತಕ್ಕದ್ದು.

(2) 50ನೆಯ ನಿಬಂಧನೆಯಲ್ಲಿ ವಿಧಿಸಿರುವಂತೆ ಅವುಗಳ ಅಂತಹ ಬದಲಾವಣೆ ಮತ್ತು ತಿದ್ದುಪಾಟುಗಳನ್ನು ಕುರಿತು ಜನರಿಗೆ ನೋಟೀಸು ಕೊಡತಕ್ಕದ್ದು. 49 ಮತ್ತು 51ನೆಯ ನಿಬಂಧನೆಗಳ ನಿಯಮಗಳು ಅಂತಹ ಬುಕ್ಕುಗಳಿಗೂ ಅವುಗಳಲ್ಲಿ ನಮೂದಿಸಿರುವ ಕಂದಾಯಗಳಿಗೂ ಲಗಾವಾಗತಕ್ಕದ್ದು.

ಅಪ್ಪೀಲುಗಳು.

59. (1) ಪಂಚಾಯತಿಯ ಅಧ್ಯಕ್ಷನಿಂದಾಗಲಿ ಅಥವಾ ತಾಲ್ಲೋಕು ಬೋರ್ಡಿನ ಪ್ರೆಸಿಡೆಂಟನಿಂದಾಗಲಿ ಹಾಕಲ್ಪಟ್ಟ ಕಂದಾಯದ ಅಥವಾ ತಗಾದೆ ಮಾಡಲ್ಪಟ್ಟ ಕಂದಾಯದ ವಿಷಯದಲ್ಲಿ ಅವರ ತೀರ್ಮಾನದ ಮೇಲೆ ತಾಲ್ಲೋಕು ಬೋರ್ಡಿಗೆ ಅಪ್ಪೀಲು ಮಾಡತಕ್ಕದ್ದು. ತಾಲ್ಲೋಕು ಬೋರ್ಡಿನವರು ಅಂತಹ ಅಪ್ಪೀಲನ್ನು ಮುಂದಿನ ಮೀಟಿಂಗಿನಲ್ಲಿ ವಿಚಾರಣೆ ಮಾಡಿ ಉಚಿತವಾಗಿ ತೋರುವ ಹಾಗೆ ತೀರ್ಮಾನಿಸತಕ್ಕದ್ದು.

(i) ಹಾಗೆ ಫಿರ್ಯಾದು ಮಾಡಲ್ಪಟ್ಟ ಕಂದಾಯಕ್ಕೆ ತಗಾದೆ ಮಾಡಿದ ಮುವ್ವತ್ತು ದಿನಗಳೊಳಗಾಗಿ ಅಪ್ಪೀಲು ಮಾಡಲ್ಪಟ್ಟ ಹೊರ್ತು

(ii) ಪಂಚಾಯಿತಿಯ ಅಧ್ಯಕ್ಷನಿಂದಾಗಲಿ ಅಥವಾ ತಾಲ್ಲೋಕು ಬೋರ್ಡಿನ ಪ್ರೆಸಿಡೆಂಟನಿಂದಾಗಲಿ ತಗಾದೆ ಮಾಡಲ್ಪಟ್ಟ ಅಂತಹ ಯಾವ ಕಂದಾಯವು, ತಾಲ್ಲೋಕು ಬೋರ್ಡಿನವರು ಬೇರೆ ವಿಧವಾಗಿ ಹುಕುಂ ಮಾಡಿದಾಗ ಹೊರ್ತು, ಅಪ್ಪೀಲು ಮಾಡಲ್ಪಟ್ಟ ದಿನವೇ ಆಗಲಿ ಅಥವಾ ಅದಕ್ಕೆ ಮುಂಚೆ ಆಗಲಿ ಯೂನಿಯನಿನ ಆಫೀಸಿಗೆ ಕೊಡಲ್ಪಟ್ಟು ಅಥವಾ ಅಲ್ಲಿ ಅಮಾನತ್ತಾಗಿ ಇಡಲ್ಪಟ್ಟ ಹೊರ್ತು,

ಅಂತಹ ಯಾವ ಅಪ್ಪೀಲನ್ನು ಅಂಗೀಕರಿಸತಕ್ಕದ್ದಲ್ಲ.

(3) ತಾಲ್ಲೋಕು ಬೋರ್ಡಿನಿಂದ ಯಾವ ಕಂದಾಯದ ಮೊಬಲಗಾದರೂ ಕಡಮೆ ಮಾಡಲ್ಪಟ್ಟರೆ ಅಥವಾ ಮನ್ನಿಸಲ್ಪಟ್ಟರೆ ಪಂಚಾಯೆತಿಯ ಅಧ್ಯಕ್ಷನು ಆ ಮೊಬಲಗನ್ನು ಅದೇ ಪ್ರಕಾರ ವಾಪಸು ಕೊಡತಕ್ಕದ್ದು.

(4) ಅಪ್ಪೀಲು ಮಾಡಲ್ಪಡದೆ ಇರುವಾಗ, ಕಂದಾಯ ಹಾಕೋಣವು ಅಥವಾ ಅದರ ಕಡಾವೆಯು, ಮತ್ತು ತಾಲ್ಲೋಕು ಬೋರ್ಡಿನಿಂದ ಮಾಡಲ್ಪಟ್ಟ ಅಪ್ಪೀಲಿನ ತೀರ್ಮಾನವು, ಅಖೈರಾಗಿರತಕ್ಕದ್ದು.

ಬಡತನದ ಸಬಬಿಗೋಸ್ಕರ ವಿನಾಯಿತಿ.

60. ಮನೆ ಇರುವ ಯೂನಿಯನಿನ ಮೇಲೆ ಅಧಿಕಾರವಿರುವ ತಾಲ್ಲೋಕು ಬೋರ್ಡಿನವರು ಕಂದಾಯದ ಒಟ್ಟು ಮೊಬಲಗನ್ನು ಅಥವಾ ಅದರ ಯಾವ ಭಾಗವನ್ನಾದರು ಕೊಡುವುದರಿಂದ ಬಡತನದ ಸಬಬಿಗೋಸ್ಕರ ಅಂತಹ ಕಟ್ಟಡದ ಮಾಲೀಕನನ್ನು ಅಥವಾ ವಾಸವಾಗಿರುವವನನ್ನು ವಿನಾಯಿಸಬಹುದು. ಹಾಗೆಯೇ ಗವರ್ನ್ಮೆಂಟಿನ ಅನುಮತಿಯನ್ನು ಪಡೆದು ಬೋರ್ಡಿನವರು ಯಾವ ತರಗತಿಗಳ ಮನೆಗಳನ್ನಾದರೂ ವಿನಾಯಿಸಬಹುದು.

ಗಾಡಿಗಳು ಬಂಡಿಗಳು ಮತ್ತು ಜಾನವಾರುಗಳ ಮೇಲೆ ಸುಂಕ.

ಸುಂಕದ ವಸೂಲಾತಿಯನ್ನು ಕ್ರಮ ಪಡಿಸುವುದಕ್ಕೆ ನಿಬಂಧನೆಗಳು.

61. (1) ಇಂಡಿಯಾ ಗವರ್ನ್ಮೆಂಟಿನವರ ಹುಕುಂ ಮೇರೆ ಮೈಸೂರು ಚೀಫ್ ಕಮಿಷನರವರ (* ಕೆಳಗೆ ಅಚ್ಚು ಹಾಕಲ್ಪಟ್ಟಿರುವ) ಸ್ನ 1876ನೆಯ ಇಸವಿ ನವಂಬರ್ 4ನೆಯ ಮರ್ಸ್ಕಂ 274ನೆಯ ನಂಬರು ಇಸ್ತಿಹಾರ್ನಾಮೆ ಸಂಗಡ ಪ್ರಕಟಿಸಲ್ಪಟ್ಟಿರುವ "ಮೈಸೂರು ಸೀಮೆಯಲ್ಲಿರುವ ಸರ್ಕಾರಿ ರಸ್ತೆಗಳ ಮೇಲು ಸೇತುಗಳ ಮೇಲು ಸುಂಕದ ವಸೂಲಾತಿಯ ನಿಬಂಧನೆಗಳ, ಇಲ್ಲಿ ಲಗಾವಾಗುವವರೆಗೂ, ನಿಯಮಗಳಿಂದಲೂ ಮತ್ತು

(2) ಕೆಳಗೆ ಬರುವ ಹೆಚ್ಚು ನಿಬಂಧನೆಗಳಿಂದಲೂ

ಡಿಸ್ಟ್ರಿಕ್ಟು ಬೋರ್ಡಿಗೆ ಸೇರಿರುವ ರಸ್ತೆಗಳ ಮತ್ತು ಸೇತುಗಳ ಮೇಲೆ ಹೋಗುವ ಗಾಡಿಗಳು, ಬಂಡಿಗಳು ಮತ್ತು ಜಾನವಾರುಗಳ ಮೇಲೆ ಸುಂಕದ ವಸೂಲಾತಿಯು ಕ್ರಮ ಪಡಿಸಲ್ಪಡತಕ್ಕದ್ದು.,,

---

ಮೈಸೂರು ಸೀಮೆಯಲ್ಲಿರುವ ಸರ್ಕಾರೀ ರಸ್ತೆಗಳು ಮತ್ತು ಸೇತುಗಳು ಇವುಗಳ ಮೇಲೆ ಸುಂಕ ವಸೂಲ್ ಮಾಡುವ ಬಗ್ಗೆ ಮಾಡಲ್ಪಟ್ಟ ನಿಬಂಧನೆಗಳು.

ಮೈಸೂರು ಸೀಮೆಯಲ್ಲಿರುವ ರಸ್ತೆಗಳು, ಸೇತುಗಳು, ಇವುಗಳ ಮೇಲೆ ಸುಂಕ ವಸೂಲ್ ಮಾಡತಕ್ಕದ್ದನ್ನು ವಿಧಿಸುವುದು ಅವಶ್ಯಕವಾಗಿರುವದರಿಂದ ಸದರೀ ಉದ್ದೇಶದೊಡನೆ ಈ ಕೆಳಗೆ ಬರುವ ನಿಬಂಧನೆಗಳು, ಮಂತ್ರಾಲೋಚಕ ಸಭೆ ಸಮೇತರಾದ, ಘನವನ್ನು ಹೊಂದಿದ ವೈಸರಾಯಿ ಮತ್ತು ಗವರ್ನರ್ ಜನರಲ್ಲವರಿಂದ ಮಂಜೂರ್ಮಾಡಲ್ಪಟ್ಟಿವೆ.

1. ಯಾವ ರಸ್ತೆಗಳ ಮೇಲೆ, ಮತ್ತು ಯಾವ ಸ್ಥಳಗಳಲ್ಲಿ ಸುಂಕಗಳು ತೆಗೆದುಕೊಳ್ಳತಕ್ಕದ್ದೊ ಅದನ್ನು ಮೈಸೂರು ಚೀಫ್ ಕಮ್ಮಿಷನರವರು ಆಗಿಂದಾಗ್ಯೆ ತಿಳಿಸಬಹುದು, ಮತ್ತು ಯಾವ ರಸ್ತೆಗಳ ಮೇಲೆ ಅಂತಹ ಸುಂಕಗಳು ವಸೂಲಾಗತಕ್ಕದ್ದೆಂದು ತಿಳಿಸಲ್ಪಟ್ಟಿರುತ್ತದೆಯೋ ಆ ರಸ್ತೆಗಳ ಮೇಲೆ ಸುಂಕದ ವಸೂಲಿಯನ್ನು ತೆಗೆದು ಹಾಕಬಹುದು, ಮತ್ತು ಈ ಪ್ರಕರಣದ ನಿಯಮವನ್ನು ಜಾರೀ ಮಾಡುವ ಬಗ್ಗೆ ಯಾವ ಸುಂಕದ ಕಟ್ಟೆಯನ್ನಾಗಲಿ ಕಟ್ಟಿಸುವುದಕ್ಕೆ ಅಥವಾ ತೆಗೆದು ಹಾಕುವುದಕ್ಕೆ ಅಪ್ಪಣೆ ಕೊಡಬಹುದು.

2. ಮೈಸೂರು ಗವರ್ನ್ಮೆಂಟಿನ ಖರ್ಚಿನಿಂದ ಕಟ್ಟಲ್ಪಟ್ಟಿರುವ ಅಥವಾ ಇನ್ನುಮೇಲೆ ಕಟ್ಟಲ್ಪಡುವ ಮೈಸೂರು ಸೀಮೆಯೊಳಗಣ ಯಾವದಾದರೂ ರಸ್ತೆಯು ಅಥವಾ ಸೇತುವಿನ ಮೇಲೆ ಇದಕ್ಕೆ ಸೇರಿಸಲ್ಪಟ್ಟಿರುವ ಪಟ್ಟಿಯಲ್ಲಿ ಕಂಡ ದರಕ್ಕೆ ಮೀರದ ದರವುಳ್ಳ ಸುಂಕವನ್ನು ಮೈಸೂರು ಚೀಫ್ ಕಮ್ಮಿಷನರವರು ವಸೂಲ್ ಮಾಡಿಸಬಹುದು.

3. ಅಂತಹ ಯಾವ ಸುಂಕವನ್ನಾಗಲಿ, ಕೊಡದೇಯಿದ್ದ ಪಕ್ಷಕ್ಕೆ ಅದನ್ನು ವಸೂಲ್ ಮಾಡುವ ಬಗ್ಗೆ ನೊಕರರಾದ ಆಫೀಸರ್‌ಗಳು, ಸುಂಕ ತೆರತಕ್ಕ ಯಾವದಾದರೂ ಬಂಡಿಗಳನ್ನು, ಅಥವಾ ಜಾನವರ್‌ಗಳನ್ನು, ಅಥವಾ ಅವುಗಳ ಬೋಜೀ ಪೈಕಿ ಸುಂಕದ ಮೊಬಲಗಿಗೆ ತಕ್ಕಷ್ಟನ್ನು ತಡೆದು ಹಿಡಿಯತಕ್ಕದ್ದು.

4. ಇದರ ಮೇಲಣ ಪ್ರಕರಣದಲ್ಲಿ ಕಂಡಮೇರೆ ಸ್ವತ್ತು ಹಿಡಿಯಲ್ಪಟ್ಟ ಬಳಿಕ 24 ಘಂಟೆಗಳ ವರೆಗೂ ಯಾವ ಸುಂಕವಾಗಲಿ ತೀರಿಸಲ್ಪಡದೆ ಇದ್ದರೆ, ಭಾನುವಾರ ಅಥವಾ ಸೇರಿದಹಾಗೆ ಬರುವ ಯಾವದಾದರೂ ರಜಾದಿನ ವಿನಾ ಇಪ್ಪತ್ತುನಾಲ್ಕು ಘಂಟೆಯ ಕಾಲ ನೋಟಿಸ್ ಕೊಟ್ಟಮೇಲೆ, ಸುಂಕದ ಮೊಬಲಗು ಸಲ್ಲುವಬಗ್ಗೆ, ಹಾಗೆ ಸುಂಕ ವಸೂಲಾಗದೆ ಇರೋಣ, ಸ್ವತ್ತು ತಡೆಯೋಣ ವ ಹರಾಜ್ ಮಾಡೋಣ, ಇವುಗಳಿಗಾಗಿ ಹಿಡಿಯುವ ಖರ್ಚಿಗಾಗಿಯೂ, ಸುಂಕದ ವಸೂಲೀ ಕೆಲಸದ ಮೇಲ್ವಿಚಾರಣೆಗೋಸ್ಕರ ನಿಯಮಿಸಲ್ಪಟ್ಟ ಆಫೀಸರಿನ ಅಪ್ಪಣೆಯಿಂದ ಸದರೀ ಸ್ವತ್ತು ಹರಾಜ್ ಮಾಡಲ್ಪಡತಕ್ಕದ್ದು. ಸದರೀ ಆಫೀಸರ್ ಅಂತಹ ಮೊಬಲಗಿನಲ್ಲಿ ಬಾಕೀ ಏನಾದರೂ ಉಳಿದಿದ್ದರೆ ಅದನ್ನು ಮಾಲೀಕನು ಕೇಳಿದಲ್ಲಿ ವಾಪಸ್ ಕೊಡಿಸಿಬಿಡತಕ್ಕದ್ದು. ಪರಂತು ಹರಾಜ್ ಶುರುವಾಗುವುದಕ್ಕೆ ಮುಂಚೆ ಯಾವಾಗಲಾಗಲಿ ಆದ ಒಟ್ಟು ಖರ್ಚು ಮತ್ತು ಸಲ್ಲತಕ್ಕ ಸುಂಕದ ದುಗಣೀ ಮೊಬಲಗು ಸಹಿತ ಕೊಡುವುದಾಗಿ ಖಾಯಿಷ್ ಮಾಡಿದರೆ, ಕೂಡಲೆ ಹಿಡಿದಿರುವ ಸ್ವತ್ತನ್ನು ಬಿಟ್ಟುಬಿಡತಕ್ಕದ್ದು.

ಸುಂಕದ ವಸೂಲಾತಿಯು ಇಸ್ತಿಹಾರ್ನಾವೆ.

62. ಸುಂಕದ ವಸೂಲಾತಿಯು ಸರಕ್ಕಾರದವರಿಂದ ಮಂಜೂರ್ಮಾಡಲ್ಪಟ್ಟಾಗ ಡಿಸ್ಟ್ರಿಕ್ಟ್ ಬೋರ್ಡು ಸುಂಕ ಯಾವ ಸ್ಥಳಗಳಲ್ಲಿ ಯಾವ ತಾರೀಖಿನಿಂದ ಮತ್ತು ಯಾವ ದರಗಳಲ್ಲಿ ವಸೂಲ್ಮಾಡಲ್ಪಡತಕ್ಕದ್ದೂ ಅವುಗಳನ್ನು ನಮೂದಿಸಿ ಮೈಸೂರು ಗೆಜೆಟ್ಟಿನಲ್ಲಿ ಒಂದು ಇಸ್ತಿಹಾರ್ನಾವೆಯು ಪ್ರಕಟಿಸಲ್ಪಡುವಂತೆ ಮಾಡತಕ್ಕದ್ದು.

ಸುಂಕದ ಬಾಗಲುಗಳು ಇಡಲ್ಪಡತಕ್ಕದ್ದು.

63. ಡಿಸ್ಟ್ರಿಕ್ಟ್ ಬೋರ್ಡು ತರುವಾಯ ಸುಂಕದ ಕಟ್ಟೆಗಳನ್ನು, ಬಾಗಿಲುಗಳನ್ನು, ಬಾಗಿಲ ಕಾವಲುಗಾರರು ಇರುವ ಮನೆಗಳನ್ನು ಮೇಲ್ಕಂಡ ಸ್ಥಳಗಳಲ್ಲಿ ಕಟ್ಟತಕ್ಕದ್ದು, ಅಂತಹ ಸುಂಕಗಳ ವಸೂಲಾತಿಯನ್ನು ಬೋರ್ಡಿಗೆ ಯುಕ್ತವಾಗಿ ತೋರುವ ಮನುಷ್ಯರ ವಿಚಾರಣೆಯಲ್ಲಿ ಇಡಬಹುದು, ಅಥವಾ ಅದನ್ನು ಗುತ್ತಿಗೆಗೆ ಕೊಡಬಹುದು, ಮತ್ತು ಸುಂಕವನ್ನು ವಸೂಲ್ಮಾಡುವವರ ಆಚರಣೆಯ ಬಗ್ಗೆ ಒಳ ನಿಬಂಧನೆಗಳನ್ನು ಏರ್ಪಡಿಸಬಹುದು.

ಸುಂಕದ ಒಡಂಬಡಿಕೆ ಮತ್ತು ಲೈಸೆನ್ಸ್ ಕೊಡುವುದು.

64. ಡಿಸ್ಟ್ರಿಕ್ಟ್ ಬೋರ್ಡು ಬೋರ್ಡಿಗೆ ಸೇರಿದ ಡಿಸ್ಟ್ರಿಕ್ಟಿನಲ್ಲಿರುವ ಸಾಮಾನ್ಯವಾಗಿ ಎಲ್ಲಾ ರಸ್ತೆಗಳಿಗೆ ಮತ್ತು ಸೇತುಗಳಿಗೆ ಸಂಬಂಧಪಟ್ಟ ಅಥವಾ ಪ್ರತ್ಯೇಕವಾದ ಒಂದು ರಸ್ತೆ ಅಥವಾ ಸೇತುವಿಗೆ ಸಂಬಂಧಪಟ್ಟ ಅಂತಹ ಎಲ್ಲಾ ಸುಂಕಗಳಿಗೆ ಬದಲಾಗಿ ಪ್ರತಿ ವರ್ಷದಲ್ಲೂ ಅಥವಾ ವರ್ಷಾರ್ಧದಲ್ಲೂ ಕೊಡತಕ್ಕ ಒಂದು ಮೊಬಲಗಿಗೆ ಯಾವ ಮನುಷ್ಯನ ಸಂಗಡಲಾದರೂ ಒಡಂಬಡಿಕೆ ಮಾಡಿಕೊಳ್ಳಬಹುದು, ಮತ್ತು ಅವನ ಗಾಡಿಗಳು, ಬಂಡಿಗಳು, ಮತ್ತು ಜಾನುವಾರುಗಳು ಇವುಗಳ ವಿಷಯದಲ್ಲಿ ಅಂತಹ ಮನುಷ್ಯನಿಗೆ ಲೈಸೆನ್ಸುಗಳನ್ನು ಕೊಡಬಹುದು ; ಆದರೆ ಯಾವಾಗಲು ಅಂತಹ ಒಡಂಬಡಿಕೆಯಲ್ಲಿ ಒಡಂಬಡಿಕೆ ಮಾಡಿ ಕೊಳ್ಳುವ ಮನುಷ್ಯನ ವಶದಲ್ಲಿರುವ ಗಾಡಿಗಳು, ಬಂಡಿಗಳು, ಮತ್ತು ಜಾನುವಾರುಗಳು ಸೇರಿರತಕ್ಕದ್ದು.

ಕೆಲವು ಸಂದರ್ಭಗಳಲ್ಲಿ ಯಾವ ಸುಂಕವೂ ವಸೂಲ್ಮಾಡಲ್ಪಡತಕ್ಕದ್ದಲ್ಲ.

65. (ಎ) ಲೋಕಲ್ ಬೋರ್ಡಿಗೆ ಸೇರಿರುವ,

---

5. ಸೈನ್ಯಗಳು, ಸೈನ್ಯದ ಸಾಮಾನುಗಳು, ಅಥವಾ ಆಯುಧಗಳು ವಗೈರೇ ಪದಾರ್ಥಗಳು ಯಾ ಕೆಲಸದಮೇಲೆ ಹೋಗುವ ಪೋಲೀಸ್ ಆಫೀಸರಗಳು, ಅಥವಾ ಅವರ ವಶದಲ್ಲಿರುವ ಯಾವನಾದರೂ ಮನುಷ್ಯ ಯಾ ಸ್ವತ್ತು, ಯಾವ ಸ್ವತ್ತಾಗಲಿ, ಅದು ಯಾವ ತಾಲ್ಲೂಕಿಗೆ ಸೇರಿದ್ದೋ ಆ ತಾಲೂಕಿನ ಮೋಜ್ತೇದಾರರಿಂದ ಒಂದು ಸರ್ಟಿಫಿಕೇಟ್ ಹಾಜರ್ ಮಾಡುವುದರಿಂದ ಪ್ರಾಮಾಣಿಕವಾಗಿ ಗವರ್ನಮೆಂಟಿಗೆ ಸೇರಿದ್ದಾಗಿ ಏರ್ಪಟ್ಟ ಯಾವದಾದರೂ ಸ್ವತ್ತು, ಇವುಗಳನ್ನು ಸಾಗಿಸುವ ಬಗ್ಗೆ ಸುಂಕ ವಸೂಲ್ ಮಾಡಲ್ಪಡತಕ್ಕದ್ದಲ್ಲ.

6. ಸುಂಕದ ವಸೂಲಿಯು ಚೀಫ್ ಕಮ್ಮಿಷನರವರಿಂದ ನೌಕರರ್ ಮಾಡಲ್ಪಡುವ ಜನಗಳ ವಿಚಾರಣೆಗೆ ಕೊಡಲ್ಪಡಬಹುದು, ಅಥವಾ ಗವರ್ನಮೆಂಟ್ ಆಫಿಸರಗಳಿಂದ ಮಾಡಲ್ಪಡಬಹುದು, ಮತ್ತು ಈ ಬಗ್ಗೆ ನೌಕರರ್ ಆಗಿರುವ ಎಲ್ಲಾ ಜನಗಳೂ ಜಮೀನ್ ಕಂದಾಯದ ವಸೂಲೀ ವಿಷಯದಲ್ಲಿ ನೇಮಿಸಲ್ಪಟ್ಟಿದ್ದರೆ ಯಾವ ಜವಾಬ್ದಾರೀಗೆ ಗುರಿಯಾಗಿರುವರೋ ಅದೇ ಜವಾಬ್ದಾರೀಗೆ ಗುರಿಯಾಗತಕ್ಕದ್ದು.

ಎಲ್ಲಾ ಸುಂಕದ ಕಟ್ಟೆಗಳಲ್ಲಿಯಾಗಲಿ ಅಪೈಕಿ ಯಾವದರಲ್ಲಾಗಲಿ ಸುಂಕದ ವಸೂಲಿಯ ಹಕ್ಕುದಾರೀಯನ್ನು ತಮಗೆ ಯುಕ್ತ ತೋರುವ ಷರತ್ ಸಹಿ ಹರಾಜ್ ಮೂಲಕ ವಿಕ್ರಯಿಸುವಂತೆ ಸಹ ಚೀಫ್ ಕಮ್ಮಿಷನರವರು ಹುಕುಂ ಮಾಡಬಹುದು.

7. ಸುಂಕದ ವಸೂಲೀದಾರನಾಗಿ ಕ್ರಮಪ್ರಕಾರ ನೌಕರರಾಗದೆ, ಯಾವ ಪಬ್ಲಿಕ ರಸ್ತೆಯಲ್ಲಾಗಲಿ, ಸೇತುವಿನ ಮೇಲಾಗಲೀ ಯಾವ ಸುಂಕವನ್ನಾದರೂ ಹಾಕುವ ಯಾ ಕೊಡಹೇಳಿ ಕೇಳುವ, ಅಥವಾ ಹಾಗೆ ಕ್ರಮಪ್ರಕಾರ ನೇಮಿಸಲ್ಪಟ್ಟ ಪಟ್ಟಿಯಲ್ಲಿ ವಿವರಿಸಲ್ಪಟ್ಟ ದರಗಳಿಗಿಂತ ಜಾಸ್ತಿಯಾಗಿ ಕೊಡಹೇಳಿ ಕೇಳುವ, ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟ ಮೇಲೆ 200 ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಅಥವಾ ಇಂಗ್ಲಿಷ್ ಪಂಚಾಂಗರೀತ್ಯಾ 6 ತಿಂಗಳಿಗೆ ಮೀರದ ಕಾಲದಪರ್ಯಂತ ಸಾಧಾರಣ ಯಾ ಕಠಿಣ ಖೈದಿಗೆ ಗುರಿಯಾಗತಕ್ಕದ್ದು.

8. ಈ ನಿಬಂಧನೆಗಳನ್ನು ಅನುಸರಿಸಿ ಯಾವ ಸುಂಕದ ಬಾಗಿಲಲ್ಲಿ ಅಥವಾ ಸ್ಥಳದಲ್ಲಿ ವಸೂಲಾಗತಕ್ಕದ್ದೆಂದು ನೇಮಿಸಲ್ಪಟ್ಟ ಸುಂಕಗಳ ಒಂದು ಪಟ್ಟಿಯು ಸುಂಕ ಕೊಡುವುದಕ್ಕೆ ನಿರಾಕರಿಸುವ ಬಗ್ಗೆ ವಿಧಿಸುವ ಜುರ್ಮಾನೆಗಳ ಪಟ್ಟಿ ಸಹಿತವಾಗಿ ಇಂಗ್ಲಿಷಿನಲ್ಲಿಯೂ ಸ್ಥಳದ ಭಾಷೆಯೊಳಗೂ ಸ್ಪಷ್ಟವಾಗಿ ಬರೆಯಿಸಿ ಅಂತಹ ಬಾಗಿಲು ಅಥವಾ ಸ್ಥಳದಬಳಿ ಎಲ್ಲರಿಗೂ ಕಾಣಿಸುವ ಸ್ಥಳದಲ್ಲಿ ತಗಲುಹಾಕಲ್ಪಡತಕ್ಕದ್ದು.

ಅಂತಹ ಪಟ್ಟಿಯನ್ನು ಕ್ರಮವಾದ ಮತ್ತು ಚನ್ನಾಗಿ ತಿಳಿಯುವಂತಹ ಸ್ಥಿತಿಯಲ್ಲಿ ಇಡುವುದು ಅಂತಹ ಬಾಗಿಲು ಅಥವಾ ಸ್ಥಳದ ವಶದಲ್ಲಿರುವ ಮನುಷ್ಯನ ಕೆಲಸವಾಗಿ ಇರತಕ್ಕದ್ದು.

9. ಈ ಸುಂಕದ ನಿವ್ವಳ ಹುಟ್ಟುವಳಿಯು ಈ ಮೈಸೂರು ಸೀಮೆಯೊಳಗಿರುವ ರಸ್ತೆಗಳು, ಸೇತುಗಳು, ಇವುಗಳ ಕಟ್ಟೋಣ, ರಿಪೇರಿ, ಸಂರಕ್ಷಣೆ, ಇವುಗಳಿಗಾಗಿಯೇ ವಿನಿಯೋಗಿಸಲ್ಪಡತಕ್ಕದ್ದು.

440

(ಬಿ) ನೌಕರಿಮೇಲಿರುವ ಡಿಸ್ಟ್ರಿಕ್ಟು ಫಂಡು ನೌಕರರನ್ನಾಗಲಿ, ಅಥವಾ ಅಂತಹ ನೌಕರರ ವಶದಲ್ಲಿರುವ ಸ್ವತ್ತನ್ನಾಗಲಿ ಸಾಗಿಸುತ್ತಿರುವ,

(ಸಿ) ಲೈಸೆನ್ಸ್ ಕೊಡಲ್ಪಟ್ಟಿರುವ ಕಾಲದವರೆಗೂ, ಡಿಸ್ಟ್ರಿಕ್ಟು ಬೋರ್ಡಿನಿಂದ ಲೈಸೆನ್ಸು ಕೊಡಲ್ಪಟ್ಟ, ಅಥವಾ

(ಡಿ) ಟಪಾಲನ್ನು ಸಾಗಿಸುವ ಬಗ್ಗೆ ಟಪಾಲು ಇಲಾಖೆಯಿಂದ ಇಟ್ಟುಕೊಳ್ಳಲ್ಪಟ್ಟಿರುವ,

ಗಾಡಿಗಳು, ಬಂಡಿಗಳು, ಅಥವಾ ಜಾನುವಾರುಗಳು ಹೋಗುವದಕ್ಕಾಗಿ

ಯಾವ ಸುಂಕವು ವಸೂಲ್ಮಾಡಲ್ಪಡತಕ್ಕದ್ದಲ್ಲ.

ಒಂದು ಬಾಗಿಲು ಅಥವಾ ಸೇತುವಿನಲ್ಲಿ ಸುಂಕ ಕೊಡೋಣವು ಮತ್ತಾವ ಬಾಗಿಲು ಅಥವಾ ಸೇತುವಿನಲ್ಲಿಯಾಗಲಿ ಬಂಡಿ ವಗೈರಗಳನ್ನು ಸುಂಕದಿಂದ ವಿನಾಯಿಸತಕ್ಕದ್ದು.

66. ಯಾವ ಬಾಗಲಿನಲ್ಲಿಯಾಗಲಿ ಅಥವಾ ಸೇತುವಿನಲ್ಲಿಯಾಗಲಿ ಗಾಡಿಗಳ, ಬಂಡಿಗಳ, ಅಥವಾ ಜಾನುವಾರುಗಳಮೇಲೆ ಸುಂಕ ಕೊಡೋಣವು ನಿರ್ದೇಶಿಸಲ್ಪಟ್ಟಿರುವ ಮತ್ತಾವ ಬಾಗಲಿನಲ್ಲಿ ಅಥವಾ ಸೇತ್ವೆಯಲ್ಲಿ ಅಂತಹ ಗಾಡಿಗಳನ್ನು, ಬಂಡಿಗಳನ್ನು, ಅಥವಾ ಜಾನುವಾರುಗಳನ್ನು ಸುಂಕವಿಲ್ಲದೆ ಬಿಡತಕ್ಕದ್ದೆಂದು ಗವರ್ನ್ಮೆಂಟಿನವರ ಮಂಜೂರಾತಿಯನ್ನು ಪಡೆದು ಪ್ರಕಟಿಸಬಹುದು.

ವಿಧಿಸಲ್ಪಟ್ಟ ಸುಂಕಗಳ ಪಟ್ಟಿ ಇಲ್ಲದೆ ಸುಂಕಗಳನ್ನು ವಸೂಲ್ಮಾಡತಕ್ಕದ್ದಲ್ಲ.

67. ಚೀಫ್ ಕಮಿಷನರವರ 1876ನೆಯ ಇಸವಿಯ ನವೆಂಬರ್ 4ನೆಯ ತಾರೀಖಿನ 274ನೆಯ ನಂಬರು ಇಸ್ತಿಹಾರ್ನಾಮೆಯ ಸಂಗಡ ಪ್ರಕಟಿಸಲ್ಪಟ್ಟಿರುವ ನಿಬಂಧನೆಗಳಲ್ಲಿ 8ನೆಯ ನಿಬಂಧನೆಯಲ್ಲಿ ವಿಧಿಸಲ್ಪಟ್ಟಿರುವ ಸುಂಕಗಳ ಪಟ್ಟಿಯು, ಯಾವ ಸುಂಕದ ಕಟ್ಟೆಯಲ್ಲಾಗಲಿ ಅಥವಾ ಬಾಗಲಿನಲ್ಲಿಯಾಗಲಿ ಅಥವಾ ಸ್ಥಳದಲ್ಲಾಗಲಿ ಹೊರಗೆ ತಗಲುಹಾಕಲ್ಪಡದೆ ಇರುವಾಗ ಅಂತಹ ಕಾಲದಲ್ಲಿ ಅಲ್ಲಿ ಯಾವ ಸುಂಕವನ್ನು ವಸೂಲ್ಮಾಡತಕ್ಕದ್ದಲ್ಲ.

ದಿನ ಒಂದಕ್ಕೆ ಒಂದಾವರ್ತಿ ಸುಂಕ ಕೊಟ್ಟರೆ ಬಾಗಿಲಿನಲ್ಲಿ ಬಿಡತಕ್ಕದ್ದು.

68. ಒಂದು ಸೂರ್ಯೋದಯದಿಂದ ಮತ್ತೊಂದು ಸೂರ್ಯೋದಯದವರೆಗೂ ಎಣಿಸಲ್ಪಟ್ಟ ಇಪ್ಪತ್ತನಾಲ್ಕು ಘಂಟೆಗಳ ಒಂದು ಕಾಲದಲ್ಲಿ ಯಾವ ಗಾಡಿಗೆ, ಬಂಡಿಗೆ, ಅಥವಾ ಜಾನುವಾರಿಗಾದರು ಯಾವದಾದರು ಒಂದು ಸುಂಕದ ಕಟ್ಟೆ, ಬಾಗಿಲು, ಅಥವಾ ಸ್ಥಳದಲ್ಲಿ ಒಂದಾವರ್ತಿಗಿಂತ ಹೆಚ್ಚಾಗಿ ಸುಂಕವು ಕೇಳಲ್ಪಡತಕ್ಕದ್ದಲ್ಲ. ಆದರೆ ಹೊರೆ ಹೊರಿಸಲ್ಪಡದ ಅಥವಾ ಸವಾರಿ ಮಾಡಲ್ಪಡದ ಗಾಡಿಗೆ, ಬಂಡಿಗೆ, ಅಥವಾ ಜಾನುವಾರಿಗಾಗಿ ಯಾವ ಕಟ್ಟೆ, ಬಾಗಲು, ಅಥವಾ ಸ್ಥಳದಲ್ಲಿಯಾದರು, ಸುಂಕವು ಕೊಡಲ್ಪಟ್ಟಿರುವಾಗ ಅಂತಹ ಸುಂಕಕ್ಕೂ ಹೊರೆ ಹೊರಿಸಲ್ಪಟ್ಟ ಅಥವಾ ಸವಾರಿ ಮಾಡಲ್ಪಟ್ಟ ಅಂತಹ ಗಾಡಿಗೆ, ಬಂಡಿಗೆ ಅಥವಾ ಜಾನುವಾರಿಗಾಗಿ ಕೊಡತಕ್ಕ ಸುಂಕಕ್ಕೂ ಇರುವ ವ್ಯತ್ಯಾಸವು, ಅಂತಹ ಗಾಡಿ, ಬಂಡಿ, ಅಥವಾ ಜಾನುವಾರು ಅಂತಹ ಕಾಲದೊಳಗಾಗಿ ಹೊರೆ ಹೊರಿಸಲ್ಪಟ್ಟು ಅಥವಾ ಸವಾರಿ ಮಾಡಲ್ಪಟ್ಟು ಅಂತಹಕಟ್ಟೆ, ಬಾಗಲು, ಅಥವಾ ಸ್ಥಳದ ಮಾರ್ಗವಾಗಿ ತಿರಿಗಿ ಹೋದರೆ, ಕೊಡಲ್ಪಡತಕ್ಕದ್ದು.

ರಶೀತಿಗಳು.

69. ಯಾವದಾದರು ಸುಂಕವು ಕೊಡಲ್ಪಟ್ಟಾಗ ಡಿಸ್ಟ್ರಿಕ್ಟು ಬೋರ್ಡು ಆಗಾಗ್ಯೆ ವಿಧಿಸಬಹುದಾದ ನಮೂನೆಯಲ್ಲಿ ಸುಂಕವು ಯಾರಿಗೆ ಕೊಡಲ್ಪಟ್ಟಿತೊ ಆ ಮನುಷ್ಯನಿಂದ ಒಂದು ರಶೀತಿಯು ಕೊಡಲ್ಪಡತಕ್ಕದ್ದು.

ಪೋಲೀಸಿನವರು ಸುಂಕ ವಸೂಲ್ಮಾಡುವವರಿಗೆ ಸಹಾಯ ಮಾಡತಕ್ಕದ್ದು.

70. ಈ ನಿಬಂಧನೆಗಳ ಮೇರೆ ನೇಮಿಸಲ್ಪಟ್ಟ ಸುಂಕವನ್ನು ವಸೂಲ್ಮಾಡುವವರ ನ್ಯಾಯವಾದ ಅಧಿಕಾರಕ್ಕೆ ವಿರೋಧಬರುವ ಎಲ್ಲಾ ಸಂದರ್ಭಗಳಲ್ಲಿಯೂ ಎಲ್ಲಾ ಪೋಲೀಸು ಉದ್ಯೋಗಸ್ಥರು ಅಪೇಕ್ಷಿಸಲ್ಪಟ್ಟಾಗ ಸುಂಕವನ್ನು ವಸೂಲ್ಮಾಡುವವರಿಗೆ ಸಹಾಯ ಮಾಡತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಅವರ ಸಾಧಾರಣವಾದ ಪೋಲೀಸು ಕರ್ತವ್ಯಗಳನ್ನು ನಡಿಸುವುದರಲ್ಲಿ ಅವರು ಯಾವ ಅಧಿಕಾರವನ್ನು ಉಂಟಾಗಿದ್ದಾರೊ ಅದೇ ಅಧಿಕಾರವನ್ನೆ ಉಂಟಾಗಿರತಕ್ಕದ್ದು.

---

10. ಯಾವ ಸುಂಕದ ಕಟ್ಟೆಯನ್ನಾಗಲಿ, ಸರಿಯಾದ ಸುಂಕವನ್ನು ಕೊಡದೆ ಮೋಸದಿಂದ ಅಥವಾ ಬಲಾತ್ಕಾರದಿಂದ ದಾಟಿಹೋಗುವ ಅಥವಾ, ಸುಂಕದ ವಸೂಲೀದಾರನು ತನ್ನ ಕೆಲಸವನ್ನು ನಿರ್ವಹಿಸುವಲ್ಲಿ ಅವನಿಗೆ ಅಡ್ಡಿಮಾಡುವ ಯಾವ ಮನುಷ್ಯನಾಗಲಿ ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟಮೇಲೆ, ಮೂರು ತಿಂಗಳಿಗೆ ಮೀರದ ಒಂದು ವಾಯಿದೆ ಪರ್ಯಂತ ಸಾಧಾರಣ ಅಥವಾ ಕಠಿಣ ಕೈದಿಗಾಗಲಿ ಅಥವಾ 50 ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗಾಗಲಿ, ಗುರಿಯಾಗತಕ್ಕದ್ದು.

11. ಮೈಸೂರು ಸೀಮೆಯೊಳಗೆ ಸುಂಕ ಹಾಕುವದನ್ನು ಕ್ರಮಪಡಿಸುವುದಕ್ಕೆ ತಮಗೆ ಅವಶ್ಯವೆಂದು ತೋರುವ ಹೆಚ್ಚಿಗೆ ಹುಕುಮನ್ನು ಆಗಿಂದಾಗ್ಯೆ ಕೊಡುವುದಕ್ಕೆ ಚೀಫ್ ಕಮಿಷನರವರು ಅಧಿಕಾರ ಕೊಡಲ್ಪಟ್ಟಿರುತ್ತಾರೆ. ಪರಂತು ಅಂತಹ ಹುಕುಂಗಳು ಈ ನಿಬಂಧನೆಗಳಿಗೆ ವಿರೋಧವಾಗಿರತಕ್ಕದ್ದಲ್ಲ.

441

453

ರುಸುಮುಗಳು.

71. (1) ಯಾವುದಾದರು ರುಸುಮುಗಳನ್ನು ವಸೂಲ್ಮಾಡಬೇಕೆಂದು ಗವರ್ನ್ಮೆಂಟಿನವರ ಅನುಮತಿಯ ಮೇಲೆ ಡಿಸ್ಟ್ರಿಕ್ಟ್ ಬೋರ್ಡ್ ನಿಶ್ಚಯಿಸುವಾಗ ಅದು ಒಂದು ಬರಹಮೂಲಕವಾಗಿಯೂ ಹುಕುಂ ಮೂಲಕವಾಗಿಯೂ ಮತ್ತು ಡಂಗೂರಮೂಲಕವಾಗಿಯೂ, ರುಸುಮು ವಸೂಲ್ಮಾಡತಕ್ಕ ಗ್ರಾಮಗಳಲ್ಲಿ, ಅಂತಹ ರುಸುಮುಗಳು ಅಂತಹ ಹುಕುಮಿನಲ್ಲಿ ನಮೂದಾಗುವ ತಾರೀಖಿನಿಂದ ಮತ್ತು ಅದರಲ್ಲಿ ಗೊತ್ತುಮಾಡಿರುವ ದರದಲ್ಲಿ, ಮೇಲ್ಕಂಡ ಹುಕುಮು ಬದಲಾಯಿಸಲ್ಪಡುವ ಅಥವಾ ರದ್ದು ಮಾಡಲ್ಪಡುವವರೆಗೂ ವಸೂಲ್ಮಾಡಲ್ಪಡುವುದು ಎಂಬುದಾಗಿ ಅದು (ಬೋರ್ಡ್) ಒಡನೆ ಪ್ರಕಟಿಸತಕ್ಕದ್ದು.

ರುಸುಮುಗಳ ವಸೂಲಾತಿಯ ಇಸ್ತಿಹಾರನಾಮೆ.

(2) ಅಂತಹ ಹುಕುಮಿನ ಪ್ರತಿಗಳು ಕೂಡ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಬೋರ್ಡುಗಳ ಕಛೇರಿಗಳಲ್ಲಿಯೂ ಅಂತಹ ರುಸುಮುಗಳು ವಸೂಲ್ಮಾಡತಕ್ಕದ್ದಾಗಿರುವ ಗ್ರಾಮಗಳಲ್ಲಿಯೂ ಎಲ್ಲರೂ ನೋಡಬಹುದಾದ ಸ್ಥಳ ಅಥವಾ ಸ್ಥಳಗಳಲ್ಲಿ ತೋರಿಸಲ್ಪಡತಕ್ಕದ್ದು.

ಪಟ್ಟಿ.

	ರೂ. ಆ. ಪೈ.
ನಾಲ್ಕು ಚಕ್ರಗಳ ಪ್ರತಿ ಬಂಡಿಗೂ	2—0—0
ಎರಡು ಚಕ್ರಗಳ ಪ್ರತಿ ಬಂಡಿಗೂ	1—0—0
ಪ್ರತಿ ಎಕ್ಕಾಗಿಗೂ	0—4—0
ಕಮಾನುಗಳುಳ್ಳ ಹ್ಯಾಕರಿಯೆಂಬ ಪ್ರತಿ ಎತ್ತಿನ ಬಂಡಿಗೂ	0—2—0
ಎಂಟು ಎತ್ತುಗಳು, ಕೋಣಗಳು, ಕುದುರೆಗಳು, ಟಾಕಣಿಗಳು, ಕತ್ತೆಗಳು ಯಾ ಹೇಸರಕತ್ತೆಗಳು ಕಟ್ಟಿದ ಕಮಾನು ಇಲ್ಲದ ಪ್ರತಿ ಚಕಡಾ ಬಂಡಿ ಮತ್ತು ಹ್ಯಾಕರಿ ಇವುಗಳಿಗೆ ಭರ್ತಿಯಾಗಿದ್ದರೆ.	1—8—0
ಡಿಟೋ ಭರ್ತಿಯಾಗದೆ ಇದ್ದರೆ	0—8—0
ಆರು ಎತ್ತುಗಳು, ಕೋಣಗಳು, ಕುದುರೆಗಳು, ಟಾಕಣಿಗಳು ಕತ್ತೆಗಳು ಯಾ ಹೇಸರಕತ್ತೆಗಳು ಕಟ್ಟಿದ ಪ್ರತಿ ಚಕಡಾ ಬಂಡಿ ಮತ್ತು ಹ್ಯಾಕರಿ ಬಂಡಿ ಇದಕ್ಕೆ ಭರ್ತಿಯಾಗಿದ್ದರೆ.	0—12—0
ಡಿಟೋ ಭರ್ತಿ ಇಲ್ಲದೆ ಇದ್ದರೆ	0—6—0
ನಾಲ್ಕು ಎತ್ತುಗಳು, ಕೋಣಗಳು, ಕುದುರೆಗಳು, ಟಾಕಣಿಗಳು, ಕತ್ತೆಗಳು, ಹೇಸರಕತ್ತೆಗಳು ಕಟ್ಟಿದ ಪ್ರತಿ ಚಕಡಾ ಬಂಡಿ ಮತ್ತು ಹ್ಯಾಕರಿ ಬಂಡಿ ಇದಕ್ಕೆ ಭರ್ತಿಯಾಗಿದ್ದರೆ.	0—8—0
ಡಿಟೋ ಭರ್ತಿಯಾಗದೆ ಇದ್ದರೆ	0—4—0
ಎರಡು ಎತ್ತುಗಳು, ಕೋಣಗಳು, ಕುದುರೆಗಳು, ಟಾಕಣಿಗಳು, ಕತ್ತೆಗಳು, ಹೇಸರಕತ್ತೆಗಳು ಕಟ್ಟಿದ ಚಕಡಾ ಬಂಡಿ ಮತ್ತು ಹ್ಯಾಕರೀ ಬಂಡಿ ಭರ್ತಿಯಾಗಿದ್ದರೆ.	0—4—0
ಡಿಟೋ ಭರ್ತಿಯಾಗದೆ ಇದ್ದರೆ	0—2—0
ಕೋಣಗಳು, ಯಾ ಎತ್ತುಗಳು ಹೊರೆಹಾಕಿ ಇರತಕ್ಕವು ಪ್ರತಿ ರಾಸಿಗೂ	0—1—0
ಡಿಟೋ ಹೊರೆಹಾಕದೆ ಇದ್ದರೆ	0—0—6
ಪ್ರತಿ ಆನೆಗೂ	1—8—0
ಪ್ರತಿ ಒಂಟೆಗೂ ಹೊರೆ ಹಾಕಿದ್ದರೆ	0—8—0
ಡಿಟೋ ಹೊರೆ ಹಾಕದೆ ಇದ್ದರೆ	0—4—0
ಪ್ರತಿ ಕುದುರೆಗೂ ಹೊರೆ ಹಾಕಿದ್ದರೆ ಯಾ ಸವಾರಿಯಾಗಿದ್ದರೆ	0—1—6
ಡಿಟೋ ಹೊರೆ ಹಾಕದೆ ಯಾ ಖಾಲೀ ತೆಗೆದುಕೊಂಡು ಹೋಗುವುದಕ್ಕೆ	0—0—9
ಪ್ರತಿ ತಟ್ಟು ಯಾ ಹೇಸರಕತ್ತೆ ಹೊರೆ ಹಾಕಿದ್ದರೆ ಯಾ ಸವಾರಿಯಾಗಿದ್ದರೆ	0—0—9
ಡಿಟೋ ಹೊರೆ ಹಾಕದೆ ಯಾ ಖಾಲೀ ತೆಗೆದುಕೊಂಡು ಹೋಗುತ್ತಿದ್ದರೆ	0—0—6
ಪ್ರತಿ ಕತ್ತೆಗೆ ಹೊರೆ ಹಾಕಿದ್ದರೆ ಯಾ ಸವಾರಿಯಾಗಿದ್ದರೆ .. .	0—0—6
ಡಿಟೋ ಹೊರೆ ಹಾಕದೆ ಸುಮ್ಮನೆ ತೆಗೆದುಕೊಂಡು ಹೋಗುತ್ತಿದ್ದರೆ ..	0—0—3
ಪ್ರತಿ ಕುರಿ, ಯಾ ಮೇಕೆ ಯಾ ಹಂದಿಗೆ	0—0—1
ಪ್ರತಿ ಪಾಲಕಿ, ಡೋಲಿ, ತೊಟ್ಟು ಯಾ ಟಾಂಜಾನ್ ಇಂತಹ ಎಂಟು ಮಂದಿ ಬೋಯಿಗಳುಳ್ಳವಕ್ಕೆ	1—0—0
ಡಿಟೋ 6 ಮಂದಿ ಬೋಯಿಗಳುಳ್ಳವಕ್ಕೆ	0—12—0
ಡಿಟೋ 4 ಮಂದಿ ಬೋಯಿಗಳುಳ್ಳವಕ್ಕೆ	0—8—0
ಡಿಟೋ ಇಬ್ಬರು ಬೋಯಿಗಳುಳ್ಳವಕ್ಕೆ	0—4—0
ಪೈವಲ್ ಹೋಗುವ ಪ್ರತಿ ಮನುಷ್ಯನಿಗೂ	0—0—3

ನೋ—ಬಿ – ಯಾವ ಬಂಡಿಗೆ ಸುಂಕ ತೆಗೆದುಕೊಳ್ಳಲ್ಪಡುತ್ತದೋ ಅದಕ್ಕೆ ಕಟ್ಟಿರುವ ಜಾನವಾರುಗಳಿಗೂ ಸುಂಕ ತೆಗೆಯಲ್ಪಡತಕ್ಕದ್ದಲ್ಲ.

ತಾರೀಖು 28ನೇ ಡಿಸೆಂಬರ್ 1903.

ನಂ. 24599—ಲೋ. ಫಂ. 82-03. ಸನ್ 1903ನೇ ಸೆಪ್ಟೆಂಬರ್ 9ನೇ ಮಾರ್ಚಿ 30—ಲೋಜಿಸ್. 4-03ನೇ ನಂಬರ್ ಆಸ್. ಹಾರ್ಡ್ಮನ್ ಮುಖೇನ ಭಾಗ್ಯವಾದ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ 8ನೇ ಪ್ಯಾರಾವಿನಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ಕಡೂರು ಡಿಸ್ಟ್ರಿಕ್ಟ್ ಬೋರ್ಡಿಗೋಸ್ಕರ ಮಂಜೂರು ಮಾಡಲ್ಪಟ್ಟ ಮೆಂಬರುಗಳ ಪಟ್ಟಿ:—

ಎಕ್ಸ್ ಅಫಿಷಿಯೋ ಮೆಂಬರುಗಳು.

1. ಡೆಪ್ಯುಟಿ ಕಮಿಷನರು—ಪ್ರೆಸಿಡೆಂಟರು.
2. ಕಡೂರು ಡಿವಿಜನಿನ ಎಕ್ಸಿಕ್ಯುಟಿವ್ ಇಂಜನಿಯರು.
3. ಕಡೂರು ಡಿವಿಜನಿನ ಸಿವಿಲ್ ಸರ್ಜನರು.
4. ಹಾಸನ ವ ಚಿಕ್ಕಮಗಳೂರು ಡಿಸ್ಟ್ರಿಕ್ಟುಗಳ ಡೆಪ್ಯುಟಿ ಇನ್ಸ್‌ಪೆಕ್ಟರು.
5. ಕಡೂರು ವ ತರೀಕೆರೆ ತಾಲ್ಲೂಕುಗಳ ಚಾರ್ಜಿನಲ್ಲಿರುವ ಮೊದಲನೇ ಅಸಿಸ್ಟೆಂಟ್ ಕಮಿಷನರು.
6. ಕೊಪ್ಪ ವ ಮೂಡಗೆರೆ ತಾಲ್ಲೂಕುಗಳ ಚಾರ್ಜಿನಲ್ಲಿರುವ ಎರಡನೇ ಅಸಿಸ್ಟೆಂಟ್ ಕಮಿಷನರು.
7. ಟ್ರೆಜರಿಯ ಅಸಿಸ್ಟೆಂಟ್ ಕಮಿಷನರು.

8ನೇ ಪ್ಯಾರ (d) ಕ್ಲಾಜ್ ಅನುಸರಿಸಿ ಟೌನ್ಷ್ ಬೋರ್ಡ್ ಮೆಂಬರುಗಳು.

8. ಮ॥ ಎ. ಚಂದ್ರಗೌಡರು, ಚಿಕ್ಕಮಗಳೂರು ತಾಲ್ಲೂಕು.
9. ,, ಪಿ. ರಂಗನಾಥಯ್ಯ, ಕಡೂರು.
10. ,, ನಂದಿ ಅಬ್ದುಲ್ ಖಾದರ್ ಸಾಹೇಬರು, ತರೀಕೆರೆ.
11. ,, ಸಾಂತಪ್ಪ ಸೆಟ್ಟರು, ಯಡಹಳ್ಳಿ ಸಬ್ ತಾಲ್ಲೂಕು.
12. ,, ಚನ್ನಕೇಶವರಾಯರು, ಕೊಪ್ಪದ ತಾಲ್ಲೂಕು.
13. ,, ಮೂಡಗೆರೆ ದಾವುದ್ ಖಾನ್ ಸಾಹೇಬರು, ಮೂಡಗೆರೆ.

8ನೇ ಪ್ಯಾರಾ (e) ಕ್ಲಾಜ್ ಅನುಸರಿಸಿ ಇತರ ಪ್ರತಿನಿಧಿಗಳು.

14. ಮ॥ ಎಂ. ರಾಮಚಂದ್ರರಾಯರು, ಕಾಫಿಪ್ಲಾಂಟರು, ಚಿಕ್ಕಮಗಳೂರು ತಾಲ್ಲೂಕು.
15. ,, ಬಿ. ಗುಂಡಪ್ಪನವರು, ಇನಾಂದಾರು.
16. ,, ಸಿ. ಎಸ್. ಗೋವಿಂದಯ್ಯನವರು, ಕಾಫಿಪ್ಲಾಂಟರು.
17. ,, ಸಿ. ಶ್ರೀನಿವಾಸರಾಯರು, ಡಿಟೋ.
18. ,, ಟಿ. ನರಸಿಂಹಯ್ಯಂಗಾರು, ಜಮೀನ್ದಾರು, ಕಡೂರು.
19. ,, ಎಸ್. ಪಾರ್ವತಪ್ಪನವರು, ಸಾಹುಕಾರು, ಕಡೂರು.
20. ,, ಎ. ಕಾಪ್ಪ ಸಾಮಿಪಿಳ್ಳೆಯವರು, ಕಂಟ್ರಾಕ್ಟದಾರು ಮತ್ತು ಜಮೀನ್ದಾರು, ತರೀಕೆರೆ.
21. ,, ಟಿ. ಶ್ರೀನಿವಾಸರಾಯರು, ಜಮೀನ್ದಾರು ಮತ್ತು ಸಾಹುಕಾರು, ಯಡಹಳ್ಳಿ ಸಬ್ ತಾಲ್ಲೂಕು.
22. ,, ಎಚ್. ಪಿಲ್ಕಿಂಗ್ಟನ್‌ರವರು, ಕಾಫಿಪ್ಲಾಂಟರು, ಮತ್ತು ಕಾಫಿ ಎಸ್ಟೇಟುಗಳ ಇನ್ಸ್‌ಪೆಕ್ಟರು, ಕೊಪ್ಪ.
23. ,, ಎನ್. ಶ್ರೀಕಂಠಶಾಸ್ತ್ರಿಯವರು, ಶೃಂಗೇರಿ ಜಹಗೀರಿನ ಪ್ರತಿನಿಧಿಗಳು.
24. ,, ಎಂ. ಗಣೇಶರಾಯರು, ಕಾಫಿಪ್ಲಾಂಟರು, ಮೂಡಗೆರೆ.
25. ,, ಜಮೇಲಿ ಗಣೇಶರಾಯರು, ಜಮೀನ್ದಾರು, ಡಿಟೋ.

ತಾರೀಖು 6ನೇ ಜನವರಿ 1904.

ನಂ. ಇ. 3356—ಎಜ್ಯು., ಸನ್ 1894ನೇ ಜನವರಿ 24ನೇ ಮಾರ್ಚಿ ಸಿ. 197-271ನೇ ನಂಬರ್ ಗವರ್ನ್‌ಮೆಂಟ್ ಆರ್ಡರಿನಲ್ಲಿ ಗ್ರಾಮ ಪಾಠಶಾಲೆಗಳ ಲೋವರ್ ಪ್ರೈಮರಿ ಸ್ಟ್ಯಾಂಡರ್ಡ್ ಫೀಸುಗಳ ದರಗಳಿಗೆ ಬದಲಾಗಿ, ಈಗಿನಂತೆಯೇ ಮನ್ನಾ ಮಾಡಲ್ಪಟ್ಟ ಗ್ರಾಮ ಪಾಠಶಾಲೆಗಳ ಹೊರತು ವಿದ್ಯಾಭ್ಯಾಸದ ಪಾಠಶಾಲೆಗಳ ನಾನಾ ತರಗತಿಗಳಲ್ಲಿ ಫೀಸುಗಳ ಇದರಡೀ ಕಂಡ ದರಗಳಲ್ಲಿ ವಿನಹಾ ಇದರಡೀ ನಮೂದಿಸಲ್ಪಟ್ಟ ವಿದ್ಯಾಭ್ಯಾಸದ ಪಾಠಶಾಲೆಗಳ ... 1904ನೇ ಜನವರಿ ಗುರ್ರ್ ಲಾಗಾಯ್ತು ಜಾರಿಲಿ ತರತಕ್ಕದ್ದೆಂದು ಶ್ರೀಮನ್ ಮಹಾರಾಜಾ ಸರ್ಕಾರದವರು ಅಪ್ಪಣೆ ಕೊಡುತ್ತಾರೆ:—

ಎಮ್. ಎ. ಕ್ಲಾಸ.	ಮಾಹೆಯಾನ 4 ರೂಪಾಯಿ.
ಬಿ. ಎ. ಕ್ಲಾಸು:—	
ಇಂಗ್ಲಿಷ್ ಲ್ಯಾಂಗ್ವೇಜ್	,, 2 ,,
ಸೈನ್ಸ್ ಡಿವಿಜನ್	,, 2 ,,
ಸೆಕಂಡ್ ಲ್ಯಾಂಗ್ವೇಜ್	,, 1 ,,
	5 ,,
ಹೈಸ್ಕೂಲ್:—	
IV ಫಾರಂ	,, 2 ,,
V ಫಾರಂ	,, 2½ ,,
VI ಫಾರಂ	,, 2½ ,,
ಕಾಲೇಜುಗಳಲ್ಲದ ಇಂಗ್ಲಿಷ್ ಸ್ಕೂಲುಗಳು—	
ಮಿಡಲ್ ಸ್ಕೂಲ್:—	
I (ಪಿ. ಪಿ ಕ್ಲಾಸು)	,, 8 ಆಣೆ.
II ಡಿಟೋ	,, 12 ,,
III (ಎ. ಪಿ. ಕ್ಲಾಸು) ಅಥವಾ I ಫಾರಂ	,, 1 ರೂಪಾಯಿ.
IV (ಸೆಕೆಂಡ್ ಫಾರಂ)	,, 1¼ ,,
V (ಥರ್ಡ್ ಫಾರಂ)	,, 1½ ,,
ವರ್ನ್ಯಾಕ್ಯುಲರ್ ತಾಲ್ಲೂಕು ಸ್ಕೂಲುಗಳು:—	
ಲೋವರ್ ಪ್ರೈಮರಿ ಕ್ಲಾಸು I	,, 2 ಆಣೆ.
ಅಪ್ಪರ್ ಪ್ರೈಮರಿ ಕ್ಲಾಸುಗಳು II ವ III	,, 3 ,,
ಮಿಡಲ್ ಸ್ಕೂಲ್ ಕ್ಲಾಸುಗಳು IV ವ V	,, 4 ,,
ಗ್ರಾಮ ವ ತಾಲ್ಲೂಕು ಬ್ರಾಂಚ್ ಸ್ಕೂಲುಗಳು:—	ಫೀಸ್ ಇಲ್ಲ.
ಲೋವರ್ ಪ್ರೈಮರಿ ಕ್ಲಾಸುಗಳು (ಇನ್ಫೆಂಟ್ಸ್ ವ I)	ಮಾಹೆಯಾನ 1 ಆಣೆ.
ಅಪ್ಪರ್ ಪ್ರೈಮರಿ ಕ್ಲಾಸುಗಳು II ವ III	... 2 ...

ರುಸುಮುಗಳು ಯಾರಿಗೆ ಕೊಡಲ್ಪಡತಕ್ಕದ್ದು.

72. (1) ಮೇಲ್ಕಂಡ ನಿಬಂಧನೆಯು ಮೇರೆ ಹಾಕಿರುವ ಪ್ರತಿ ರುಸುಮು ಪ್ರಕಟನೆಯಲ್ಲಿ ನಮೂದಾಗುವ ವೇಳೆಯಲ್ಲಿ ತಾಲ್ಲೋಕು ಬೋರ್ಡಿನ ಪ್ರೆಸಿಡೆಂಟಿಗಾಗಲಿ ಅಥವಾ ಅಂತಹ ಪ್ರೆಸಿಡೆಂಟಿನಿಂದ ಅದಕ್ಕಾಗಿ ಅಧಿಕಾರ ಕೊಡಲ್ಪಟ್ಟಿರುವ ಯಾವ ಮನುಷ್ಯನಿಗಾದರೂ ಕೇಳಿದಾಗ ಕೊಡಲ್ಪಡತಕ್ಕದ್ದು.

ರುಸುಮುಗಳನ್ನು ಕೊಡುವುದಕ್ಕೆ ತಪ್ಪಿದಾಗ ಹ್ಯಾಗೆ ವಸೂಲ್ಮಾಡತಕ್ಕದ್ದು.

(2) ಅಂತಹ ರುಸುಮು ಹಾಗೆ ಕೊಡಲ್ಪಡದೆ ಇದ್ದರೆ ಅದನ್ನು ಕೊಡಬೇಕಾಗಿರುವ ಮನುಷ್ಯನ ಸ್ವತ್ತು ತಾಲ್ಲೋಕು ಬೋರ್ಡಿನ ಪ್ರೆಸಿಡೆಂಟಿನಿಂದ ಅಥವಾ ಅದಕ್ಕಾಗಿ ಅವನಿಂದ ಕ್ರಮವಾಗಿ ಅಧಿಕಾರ ಕೊಡಲ್ಪಟ್ಟಿರುವ ಯಾವ ಮನುಷ್ಯನಿಂದಾಗಲಿ ಜಫ್ತಿ ಹಿಡಿದು ಮಾರಲ್ಪಡತಕ್ಕದ್ದು.

ಕಂದಾಯ ಮುಂತಾದವುಗಳ ವಸೂಲಾತಿ.

ಕಂದಾಯಗಳು ಮತ್ತು ರುಸುಮುಗಳ ಹಣ ಕೊಟ್ಟದ್ದಕ್ಕೆ ರಶೀತಿಗಳು.

73. ತಾಲ್ಲೋಕು ಬೋರ್ಡಿನ ಪ್ರೆಸಿಡೆಂಟು ಅಥವಾ ಪಂಚಾಯಿತಿಯ ಅಧ್ಯಕ್ಷನು ಮನೆಕಂದಾಯವನ್ನಾಗಲಿ ಅಥವಾ ರುಸುಮನ್ನಾಗಲಿ ಕೊಡುವ ಪ್ರತಿ ಮನುಷ್ಯನಿಗೂ ಅದಕ್ಕೆ ಅವನಿಂದ ಅಥವಾ ಅದಕ್ಕಾಗಿ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಯಾವ ಮನುಷ್ಯನಿಂದಲಾದರು ರುಜು ಮಾಡಲ್ಪಟ್ಟ ಒಂದು ರಶೀತಿಯನ್ನು ಕೊಡತಕ್ಕದ್ದು.

ಅಂತಹ ರಶೀತಿಯಲ್ಲಿ

(i) ಅದನ್ನು ಕೊಟ್ಟ ತಾರೀಖು ;

(ii) ಯಾರಿಗೆ ಅದು ಕೊಡಲ್ಪಟ್ಟಿತೊ ಆ ಮನುಷ್ಯನ ಹೆಸರು ;

(iii) ಅಂತಹ ಯಾವ ಕಂದಾಯ ಅಥವಾ ರುಸುಮಿಗಾಗಿ ಹಣ ಕೊಡಲ್ಪಟ್ಟಿತೊ ಅದು.

(iv) ಯಾವ ಕಾಲಕ್ಕಾಗಿ ಹಣವು ಕೊಡಲ್ಪಟ್ಟಿತೊ, ಆ ಕಾಲ ; ಮತ್ತು

(v) ಎಷ್ಟು ಮೊಬಲಗಿಗಾಗಿ ರಶೀತಿಯು ಕೊಡಲ್ಪಟ್ಟಿತೊ, ಅದು ;

ಇವುಗಳನ್ನು ನಮೂದಿಸತಕ್ಕದ್ದು.

ಜಫ್ತಿ ಮತ್ತು ಹರಾಜಿನ ಷರತ್ತುಗಳು.

74. ಈ ಭಾಗದ 54 ಮತ್ತು 72ನೆಯ ನಿಬಂಧನೆಗಳ ಅಥವಾ ಚೀಫ್ ಕಮಿಷನರವರ 1876ನೆಯ ಇಸವಿಯ ನವಂಬರ್ 4ನೆಯ ತಾರೀಖಿನ 274ನೆಯ ನಂಬರು ಇಸ್ತಿಹಾರ್ನಾಮೆಯೊಡನೆ ಪ್ರಕಟಿಸಿರುವ 5, 4ನೆಯ ನಿಬಂಧನೆಗಳ ನಿಯಮಗಳ ಮೇರೆ ಯಾವಾಗಲಾದರು ಯಾವದಾದರು ಸ್ವತ್ತು, ಯಾವದಾದರು ಬಾಕಿ ಇರುವ ಕಂದಾಯವನ್ನಾಗಲಿ ರುಸುಮನ್ನಾಗಲಿ ಅಥವಾ ಸುಂಕವನ್ನಾಗಲಿ ಕೊಡದೆಹೋದದ್ದಕ್ಕೋಸ್ಕರ, ಜಫ್ತಿ ಮಾಡಲ್ಪಟ್ಟಾಗ, ಹಿಡಿದುಕೊಳ್ಳಲ್ಪಟ್ಟಾಗ, ಅಥವಾ ಮಾರಲ್ಪಟ್ಟಾಗ, ಅಂತಹ ಜಫ್ತಿಯು, ಹಿಡಿಯೋಣವು ಮತ್ತು ಮಾರಾಟವು ಸಿವಿಲ್ ಪ್ರೊಸಿಜ್ಯೂರ್ ಕೋಡಿನ 271ನೆಯ ಪ್ರಕರಣದ ನಿಯಮಗಳಿಗೂ ಮತ್ತು ಈ ಕೆಳಗೆ ವಿಧಿಸುವ ಷರತ್ತುಗಳಿಗೂ, ನಿಷೇಧಗಳಿಗೂ ಮತ್ತು ವಿನಾಯಿತಿಗಳಿಗೂ ಒಳಪಟ್ಟು, ನಡಿಸಲ್ಪಡತಕ್ಕದ್ದು.

ನಿಷೇಧಗಳು.

(i) ಈ ಕೆಳಗೆ ಬರುವ ಸ್ವತ್ತು ಜಫ್ತಿಗೆ ಗುರಿಯಾಗತಕ್ಕದ್ದಲ್ಲ :—

(ಎ) ಕಂದಾಯ ಮುಂತಾದ್ದನ್ನು ಕೊಡುವದಕ್ಕೆ ತಪ್ಪಿಹೋದವನಿಗೆ ಅವಶ್ಯವಾದ ಉಡುವು ಮತ್ತು ಹಾಸಿಗೆ, ಅವನ ಹೆಂಡತಿ ಮತ್ತು ಮಕ್ಕಳು,

(ಬಿ) ಕೆಲಸಗಾರರ ಮುಟ್ಟುಗಳು : ಮತ್ತು

(ಸಿ) ಬಾಕಿದಾರನು ವ್ಯವಸಾಯಗಾರನಾಗಿರುವ ಪಕ್ಷದಲ್ಲಿ, ಅವನ ವ್ಯವಸಾಯದ ಮುಟ್ಟುಗಳು ಮತ್ತು ಯಾರ ಹುಕುಂ ಮೇರೆ ಅಂತಹ ಸ್ವತ್ತು ಹಿಡಿಯಲ್ಪಟ್ಟಿತೋ ಅಂತಹ ತಾಲ್ಲೋಕು ಬೋರ್ಡಿನ ಪ್ರೆಸಿಡೆಂಟಿನ, ಅಥವಾ ಪಂಚಾಯಿತಿಯ ಅಧ್ಯಕ್ಷನ ಅಭಿಪ್ರಾಯದ ಮೇರೆ, ಬಾಕೀದಾರನು ಅವನ ಜೀವನವನ್ನು ಸಂಪಾದಿಸಿಕೊಳ್ಳುವದಕ್ಕೆ ಅವಶ್ಯವೆಂದು ತೋರುವ, ದನಗಳು ಮತ್ತು ಬೀಜದ ಧಾನ್ಯವು.

ಅವಧಿ.

(ii) ಜಫ್ತಿಯು ಮಿತಿಮೀರತಕ್ಕದ್ದಲ್ಲ, ಎಂದರೆ, ಜಫ್ತಿ ಮಾಡಲ್ಪಟ್ಟ ಸ್ವತ್ತು ಮನೆ ಕಂದಾಯಕ್ಕಾಗಿ ಅಥವಾ ರುಸುಮಿಗಾಗಿ ಅಥವಾ ಸುಂಕಕ್ಕಾಗಿ ಮತ್ತು ವಾರಂಟಿನ ರುಸುಮಿಗಾಗಿ ಮತ್ತು ಮೇಲ್ಕಂಡ ಸ್ವತ್ತನ್ನು ಇಟ್ಟುಕೊಳ್ಳುವುದಕ್ಕೂ, ಮಾರುವುದಕ್ಕೂ ಬಹುಶಃ ತಗಲಬಹುದಾದ ಖರ್ಚಿಗಾಗಿ ಬರಬೇಕಾದ ಮೊಬಲಗಿಗೆ ಸುಮಾರು ಸಾಧ್ಯವಾದ ಮಟ್ಟಿಗೂ ಅನುಗುಣವಾಗಿರತಕ್ಕದ್ದು.

ನಾಶವಾಗತಕ್ಕ ಸ್ವತ್ತು.

(iii) ಹಿಡಿಯಲ್ಪಟ್ಟ ಸ್ವತ್ತು ಜಾಗ್ರತೆಯಾಗಿಯೂ ಸಹಜವಾಗಿಯೂ ನಾಶವಾಗತಕ್ಕದ್ದಾಗಿದ್ದರೆ, ಅಥವಾ ಅದನ್ನು ಕಾವಲಲ್ಲಿಡುವ ಖರ್ಚು ಮತ್ತು ಬಾಕಿ ಬರಬೇಕಾದ ಕಂದಾಯದ ಮೊಬಲಗು ಅದರ ಬೆಲೆಗೆ ಮೀರುವುದಾಗಿದ್ದರೆ, ಸ್ವತ್ತನ್ನು ಹಿಡಿಯುವ ಮನುಷ್ಯನು, ಅಂತಹ ಸ್ವತ್ತನ್ನು ಹಿಡಿದ ಕೂಡಲೆ, ಅದು ಒಡನೆ ಮಾರಲ್ಪಡುವುದೆಂದು ಸ್ವತ್ತು ಹಿಡಿಯಲ್ಪಟ್ಟಾಗ ಅದು ಯಾರ ಸ್ವಾಧೀನದಲ್ಲಿತ್ತೊ ಆ ಮನುಷ್ಯನಿಗೆ ನೋಟೀಸು ಕೊಡತಕ್ಕದ್ದು, ಮತ್ತು ಬಾಕಿ ಬರಬೇಕಾದ ಮೊಬಲಗು ಕೂಡಲೆ ಕೊಡಲ್ಪಡದಿದ್ದರೆ ಅಂತಹ ಸ್ವತ್ತನ್ನು ಹರಾಜು ಮಾಡತಕ್ಕದ್ದು.

(iv) ಮನೆ ಕಂದಾಯ, ರುಸುಮು ಅಥವಾ ಸುಂಕ, ಮತ್ತು ವಸೂಲಾತಿಯ ಖರ್ಚುಗಳು ಸೇರಿ ಮೇಲ್ಕಂಡ ಖರ್ಚುಗಳು ಇವುಗಳ ಒಟ್ಟು ಮೊಬಲಗನ್ನು ವಜಾ ಮಾಡಿದ ತರುವಾಯ ಏನಾದರೂ ಉಳಿಯುವ ಶಿಲ್ಕು, ಆರು ತಿಂಗಳೊಳಗಾಗಿ ಕೇಳಲ್ಪಟ್ಟರೆ, ಸ್ವತ್ತಿನ ಮಾಲೀಕನಿಗೆ ಕೇಳಿದಾಗ ವಾಪಸು ಕೊಡಲ್ಪಡತಕ್ಕದ್ದು, ಅಥವಾ ಅಂತಹ ಕಾಲದೊಳಗಾಗಿ ಕೇಳಲ್ಪಡದೆ ಇದ್ದರೆ, ಡಿಸ್ಟ್ರಿಕ್ಟ್ ಫಂಡಿಗೆ ಜಮೆ ಕಟ್ಟಲ್ಪಡತಕ್ಕದ್ದು.

ಮಾರಾಟದ ಹುಟ್ಟುವಳಿಯಲ್ಲಿ ಉಳಿದ ಶಿಲ್ಕು.

75. ಇದರಲ್ಲಿರುವ ಯಾವ ವಿಷಯವು ಲೋಕಲ್ ಬೋರ್ಡ್ಸ್ ರೆಗ್ಯುಲೇಷನಿನ ಅಥವಾ ಈ ನಿಬಂಧನೆಗಳ ಮೇರೆ ಬಾಕಿ ಬರಬೇಕಾದ ಯಾವ ಮೊಬಲಗಿಗೋಸ್ಕರವು ವ್ಯವಹಾರ ನಡಿಸುವದನ್ನು ನಿಷೇಧಿಸತಕ್ಕದ್ದಲ್ಲ.

ವ್ಯವಹಾರ ಮೂಲಕ ಬಾಕಿ ಇರುವ ಮೊಬಲಗನ್ನು ವಸೂಲ್ಮಾಡುವುದು ನಿಷೇಧಿಸಲ್ಪಟ್ಟಿಲ್ಲ.

Vನೆಯ ಭಾಗ.

ಡಿಸ್ಟ್ರಿಕ್ಟ್ ಫಂಡಿನ ಆದಾಯ ವ್ಯಯಗಳು ಮತ್ತು ಲೆಕ್ಕಗಳು.

ಸಾಮಾನ್ಯ ವಿಷಯಗಳು.

76. ಡಿಸ್ಟ್ರಿಕ್ಟ್ ಫಂಡಿಗಾಗಿ ವಸೂಲಾದ ಎಲ್ಲಾ ಮೊಬಲಗುಗಳನ್ನು ಸ್ಥಳೀಯ ಸರ್ಕಾರಿ ಖಜಾನೆಗೆ ಪ್ರತಿಯೊಂದು ಲೋಕಲ್ ಬೋರ್ಡು ಪಾವತಿ ಮಾಡತಕ್ಕದ್ದು; ಮತ್ತು ಅದಕ್ಕೆ ಅವಶ್ಯಕವಾದ ಯಾವ ಮೊಬಲಗನ್ನಾದರೂ "ಚೆಕ್ಕು" ಮೂಲಕ ತೆಗೆದುಕೊಳ್ಳತಕ್ಕದ್ದು.

ಖಜಾನೆಗೆ ಆದಾಯಗಳನ್ನು ಒಟ್ಟಾಗಿ ಪಾವತಿ ಮಾಡತಕ್ಕದ್ದು.

77. ಮೇಲೆ ಹೇಳಿದಂತೆ ಲೋಕಲ್ ಬೋರ್ಡುಗಳಿಂದ ವಸೂಲ್ಮಾಡಲ್ಪಟ್ಟ ಸಮಸ್ತ ಮೊಬಲಗುಗಳನ್ನು, ಸರ್ಕಾರದ ಖಜಾನೆಗೆ ಪೂರ್ತಿಯಾಗಿ ಪಾವತಿ ಮಾಡತಕ್ಕದ್ದು; ಮತ್ತು ಅವುಗಳ ಯಾವ ಭಾಗವನ್ನಾಗಲಿ ಖರ್ಚು ಬಗ್ಗೆ ಉಪಯೋಗಿಸತಕ್ಕದ್ದಲ್ಲ.

78. ಕಂಟ್ರೋಲರವರ ಅಪ್ಪಣೆ ವಿನಾ ವಿಧಾಯಕವಾದ (ಎ) ಪರಿಶಿಷ್ಟದಲ್ಲಿ ನಮೂದಿಸಿರುವ ಮುಖ್ಯ, ಒಳ, ಮತ್ತು ವಿವರವಾದ ಬಾಬುಗಳಲ್ಲಿ ಯಾವ ಬದಲಾವಣೆಯನ್ನೂ ಮಾಡತಕ್ಕದ್ದಲ್ಲ.

ವಿಧಾಯಕವಾದ ಮುಖ್ಯ ವಗೈರೆ ಬಾಬುಗಳನ್ನು ಬದಲಾಯಿಸತಕ್ಕದ್ದಲ್ಲ.

79. ಸಮಸ್ತ ಆಫೀಸರುಗಳ ತಲಬುಗಳು ಮತ್ತು ವೇತನಗಳು, ಶಿಬ್ಬಂದಿಗಳ ಸಂಬಳವು, ಮತ್ತು ಅವರ ರಜಾಕಾಲದ ವೇತನಗಳು, ಪ್ರಯಾಣದ ಭತ್ಯಗಳು, ಪೆನ್ಷನುಗಳು, ಗ್ರಾಚ್ಯುಯಿಟಿಗಳು—ಇವುಗಳು, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ ಪ್ರಕಾರ ಮತ್ತು ಸರ್ಕಾರದ ವಿಶೇಷ ಹುಕುಂಗಳು ಯಾವದಾದರೂ ಇದ್ದ ಪಕ್ಷದಲ್ಲಿ ಅವುಗಳ ಪ್ರಕಾರ ಗೊತ್ತು ಮಾಡಲ್ಪಡುವವು.

ತಲಬುಗಳು ವೇತನಗಳು ಮುಂತಾದವು.

80. 'ಹಣದ ವಸ್ತುಗಳ,' 'ಅಳಿಸುವಿಕೆಗಳ' ಮತ್ತು 'ಹೆಚ್ಚು ಖರ್ಚುಗಳ' ವಿಷಯಗಳಲ್ಲಿ ಸಿವಿಲ್ ಅಕೌಂಟ್‌ಕೋಡ್ Iನೆಯ ಸಂಪುಟದಲ್ಲಿರುವ 20, 21, ಮತ್ತು 18ನೆಯ ಪ್ರಕರಣಗಳಲ್ಲಿರುವ ನಿಬಂಧನೆಗಳ ಪ್ರಕಾರ ಆಚರಿಸತಕ್ಕದ್ದು.

ಹಣದ ವಸ್ತು ವಗೈರೆ.

ಜಮೆಗಳು.

81. ಅಧಿಕಾರ ಪಡೆದ ಲೋಕಲ್ ಬೋರ್ಡಿನ ನೌಕರರಿಂದ ವಸೂಲ್ಮಾಡಲ್ಪಟ್ಟ ಸಮಸ್ತ ಮೊಬಲಗುಗಳನ್ನು ಮತ್ತು ಯಾವ ಮನುಷ್ಯನಿಂದಾಗಲಿ ಬೋರ್ಡಿಗೆ ಬರಬೇಕಾದ ಮೊಬಲಗುಗಳನ್ನು (1ನೆಯ ನಮೂನೆ) ಮೂರು ಪ್ರತಿಯುಳ್ಳ ಚಲನ್‌ನೊಡನೆ ಆಯಾ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಖಜಾನೆಗಳಿಗೆ ಸಂಗಡಲೆ ಪಾವತಿ ಮಾಡತಕ್ಕದ್ದು. ಸಂದರ್ಭಾನುಸಾರವಾಗಿ ಡಿಸ್ಟ್ರಿಕ್ಟ್ ಅಥವಾ ಸಬ್ ಟ್ರೆಜರಿ ಆಫೀಸರು ಒಂದನೆಯ ಪ್ರತಿಯನ್ನು ಅವನಲ್ಲಿಯೇ ಇಟ್ಟುಕೊಂಡು ಎರಡನೆಯ ಪ್ರತಿಯನ್ನು ಅದು ತಲುಪಿದ ದಿನವೇ ಡಿಸ್ಟ್ರಿಕ್ಟ್ ಬೋರ್ಡಿಗೆ ಕಳುಹಿಸತಕ್ಕದ್ದು. ಮತ್ತು ಮೂರನೆಯ ಪ್ರತಿಯನ್ನು ಹಣ ಪಾವತಿ ಮಾಡುವವನಿಗೆ ಕೊಡತಕ್ಕದ್ದು.

ಮೊಬಲಗುಗಳನ್ನು ಚಲನುಗಳೊಡನೆ ಪಾವತಿ ಮಾಡತಕ್ಕದ್ದು.

82. ಡಿಸ್ಟ್ರಿಕ್ಟ್ ಆಫೀಸಿನ ಶಿಬ್ಬಂದಿಯ ಖರ್ಚು ಬಗ್ಗೆ ಮತ್ತು ಸಾದಿಲ್ವಾರ್ ಖರ್ಚು ಬಗ್ಗೆ ಮ್ಯುನಿಸಿಪಾಲಿಟಿಗಳಿಂದ ಬರಬೇಕಾದ ಕಂಟ್ರಿಬ್ಯೂಷನಿಗಾಗಿ ಬಂದ ಮ್ಯುನಿಸಿಪಲ್ ಚೆಕ್ಕುಗಳು, ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರಿಂದ ಕ್ರಮವಾಗಿ ಎಂಡಾರ್ಸ್ ಮಾಡಲ್ಪಟ್ಟು ವಸೂಲಿಯಿಂದ ಡಿಸ್ಟ್ರಿಕ್ಟ್ ಫಂಡಿಗೆ ಜಮಾ ಆಗಲು ವಿಧಾಯಕವಾದ ಚಲನ್ನೊಡನೆ ಡಿಸ್ಟ್ರಿಕ್ಟ್ ಖಜಾನೆಗೆ ಕಳುಹಿಸಲ್ಪಡತಕ್ಕದ್ದು.

ಮ್ಯುನಿಸಿಪಲ್ ಚೆಕ್ಕುಗಳು.

83. ಅಬ್ಕಾರಿ ಕಂದಾಯ ಮತ್ತು ಇತರ ಬಾಬುಗಳ ಮೇಲೆ ರೆವಿನ್ಯೂ ಇಲಾಖೆಯವರಿಂದ ವಸೂಲ್ ಮಾಡಲ್ಪಟ್ಟ ಒಂದಾಣೆ ಲೋಕಲ್ ಸೆಸ್ಸು ಇದುವರೆಗೆ ಜಾರಿಯಲ್ಲಿರುವಂತೆಯೇ ಮುಂದೆಯೂ ರೆವಿನ್ಯೂ ಮತ್ತು ಖಜಾನೆ ಲೆಕ್ಕಗಳಲ್ಲಿ ಜಮೆ ಕಟ್ಟಲ್ಪಡತಕ್ಕದ್ದು. ಆದರೆ ಪ್ರತಿ ಮಾಹೆಯ ಅಖೈರ್ ದಿವಸದಲ್ಲಿ ಡಿಸ್ಟ್ರಿಕ್ಟ್ ಲೆಕ್ಕಗಳು ತಯಾರ್ ಮಾಡಲ್ಪಡುವಾಗ ಸೆಸ್ ಮೊಬಲಗನ್ನು ಖಜಾನೆಯ ಲೆಕ್ಕಗಳಲ್ಲಿ ಈ ಕೆಳಗೆ ನಮೂದಿಸಿರುವಂತೆ ವ್ಯವ

ಲೋಕಲ್ ಸೆಸ್ಸನ್ನು ಜಮಾ ಕಟ್ಟೋಣ ಮತ್ತು ಅದರ ವ್ಯವಸ್ಥೆ.

ಖರ್ಚು	ಜಮೆ
ಲೋಕಲ್‌ಸೆಸ್ಸು— ...	ಡಿಸ್ಟ್ರಿಕ್ಟ್ ಫಂಡ್ —
(1) ಡಿಸ್ಟ್ರಿಕ್ಟ್ ಫಂಡಿಗೆ ಕೊಡತಕ್ಕ ಭಾಗ ...	(1) ಲೋಕಲ್ ಸೆಸ್ಸಿನಿಂದ ಜಮಾ ಆದ ಭಾಗ
(2) ಲೋಕಲ್ ಫಂಡ್ ಜನರಲ್ಲಿಗೆ ಕೊಡತಕ್ಕ ಭಾಗ ...	(2) ಲೋಕಲ್‌ಫಂಡ್ಸ್ ಜನರಲ್ ಲೋಕಲ್ ಸೆಸ್ಸಿನಿಂದ ಜಮಾ ಆದ ಭಾಗ
(3) ಗ್ರಾಮ ಪಾಠಶಾಲೆಗಳ ಫಂಡಿಗೆ ಕೊಡತಕ್ಕ ಭಾಗ ...	(3) ಗ್ರಾಮ ಪಾಠಶಾಲೆಗಳ ಫಂಡ್ ಲೋಕಲ್ ಸೆಸ್ಸಿನಿಂದ ಜಮಾಬಂದ ಭಾಗ

ಷರಾ :— ಈ ಪ್ರಕಾರ ಡಿಸ್ಟ್ರಿಕ್ಟ್ ಫಂಡಿಗೆ ಹೊಬಲಗನ್ನು ಜಮಾ ಹಿಡಿದ ಬಗ್ಗೆ ಚಲನ್ನಾಗಲಿ ಅಥವಾ ಪತ್ರವಾಗಲಿ ಡಿಸ್ಟ್ರಿಕ್ಟ್ ಬೋರ್ಡಿನ ಆಫೀಸಿಗೆ ಕಳುಹಿಸಲ್ಪಡತಕ್ಕ ಅವಶ್ಯಕವಿಲ್ಲ ; ಆದರೆ ಈ ಹೊಬಲಗನ್ನು ಪ್ಯಾಸ್ ಬುಕ್ಕಿನ ಜಮಾ ಕಡೆಯಲ್ಲಿ ಚಾಲ್ತಿ ಮಾಹೆಯಲ್ಲಿ ವಸೂಲಾದ ಜಮೀನ್ ಹುಟ್ಟುವಳಿ ವಗೈರೆಗಳ ಮೇಲಣ ಲೋಕಲ್ ಸೆಸ್ಸಿನ ಶೇಕಡ 76ನೆಯಭಾಗವೆಂದು ಡಿಸ್ಟ್ರಿಕ್ಟ್ ಖಜಾನೆಯಲ್ಲಿ ಜಮಾ ಕಟ್ಟತಕ್ಕದ್ದು.

ನಗದಿ ಬುಕ್ಕು.

84. ಚಲನುಗಳೊಡನೆ ಖಜಾನೆಗೆ ಬಂದಿರುವುದಾಗಿ ತಿಳಿಯಬಂದಿರುವ ಸಮಸ್ತ ಹೊಬಲಗಳನ್ನು ನಗದಿ ಬುಕ್ಕಿನ (2ನೆಯ ನಮೂನೆ) ಜಮಾಕಡೆಯಲ್ಲಿ ಏಕ್ಸ್‌ಟ್ರಸ್ ಸರಿಯಾದ ಪುಸ್ತಕಗಳಲ್ಲಿ ದಾಖಲ್ ಮಾಡತಕ್ಕದ್ದು.

ಹುಟ್ಟುವಳಿಯ ಪ್ರತಿ ಬಾಬನ್ನೂ ಜಮೆ ಗೆ ತರತಕ್ಕದ್ದು.

85. ಹುಟ್ಟುವಳಿಯ ಪ್ರತಿ ಬಾಬೂ ಲೆಕ್ಕದಲ್ಲಿ ಸರಿಯಾಗಿ ಜಮಾ ಹಿಡಿಯಲ್ಪಡುವಂತೆ ನಿರ್ವಹಿಸಿ ನೋಡತಕ್ಕ ಜವಾಬ್ದಾರಿಯು ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿರುತ್ತದೆ. ಮತ್ತು ಈ ಬಗ್ಗೆ ಪ್ರತಿಯೊಂದು ಬಾಬಿಗೂ ಜಮಾಬಂದಿ, ವಸೂಲಿ ಮತ್ತು ಬಾಕಿಗಳನ್ನು ತೋರಿಸುವ ಒಂದು ಪ್ರತ್ಯೇಕ ರಿಜಿಸ್ಟರನ್ನು 3, ಮತ್ತು 3 (ಎ) ನಮೂನೆಗಳಂತೆ ಇಡತಕ್ಕದ್ದು. ಪ್ರತಿ ಮಾಹೆಯಲ್ಲಿಯೂ ತಾಲ್ಲೂಕು ಬೋರ್ಡುಗಳೂ ಇವೇ ನಮೂನೆಗಳಲ್ಲಿಯೇ ಜಮಾಬಂದಿ, ವಸೂಲಿ ಮತ್ತು ಬಾಕಿಗಳನ್ನು ತೋರಿಸುವ ಒಂದು ತಃಖ್ತೆಯನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಕಳುಹಿಸತಕ್ಕದ್ದು.

ಕ್ರಮವಾದ ಲೆಕ್ಕಗಳನ್ನು ಇಡಬೇಕಾ ದ್ದಗತ್ಯ.

86. ತಾಲ್ಲೂಕ್ ಬೋರ್ಡುಗಳ ನೌಕರರು ಜಮಾಬಂದಿಗೂ ಮತ್ತು ತಮ್ಮಿಂದ ಮಾಡಲ್ಪಟ್ಟ ಹುಟ್ಟುವಳಿಯ ವಸೂಲಿಗೂ ಕ್ರಮವಾದ ಲೆಕ್ಕಗಳನ್ನು ಇಟ್ಟಿರುವಂತೆಯೂ, ಸದರಿ ವಸೂಲಾತಿಗಳು ಕ್ರಮವಾಗಿ ಖಜಾನೆಗೆ ಇರಸಾಲ್ಮಾಡಲ್ಪಟ್ಟು, ಆ ಬಗ್ಗೆ ಖಜಾನೆಯಿಂದ ರಶೀತಿ ಪಡೆಯುವಂತೆಯೂ ನೋಡಿಕೊಳ್ಳುವುದು ತಾಲ್ಲೂಕ್ ಬೋರ್ಡಿನ ಕರ್ತವ್ಯವಾಗಿರುತ್ತದೆ.

ಖರ್ಚು

ಮುಖ್ಯ ಖರ್ಚಿನ ಬಾಬುಗಳು.

87. ಮರಹಮತ್ತು ಇಲಾಖೆಯಿಂದ ಆದ ಕೆಲಸಗಳ ಖರ್ಚುಗಳು ವಿನಾ ಇತರ ಖರ್ಚು ಮುಖ್ಯವಾಗಿ ಈ ಕೆಳಗೆ ನಮೂದಿಸಿರುವ ಬಾಬುಗಳಿಗೆ ಸೇರಿ ಇರುತ್ತದೆ.

(ಎ) ಸಿಬ್ಬಂದಿಗಳ ಸಂಬಳಗಳು.

ಇವುಗಳಿಗೆ 4ನೆಯ ನಮೂನೆಯ ಮೇಲೆ ಹಣ ತೆಗದುಕೊಂಡು ಸಿವಿಲ್ ಅಕೌಂಟ್ ಕೋಡ್ Vನೆಯ ಅಧ್ಯಾಯದ ನಿಬಂಧನೆಗಳ ಪ್ರಕಾರ ಬಟವಾಡೆ ಮಾಡತಕ್ಕದ್ದು.

(ಬಿ) ಸಿಬ್ಬಂದಿಗಳ ಮತ್ತು ಸರ್ಕಾರಿ ನೌಕರರಲ್ಲದ ಮೆಂಬರುಗಳ ಪ್ರಯಾಣದ ಭತ್ಯ.

ಪ್ರಯಾಣದ ಭತ್ಯಗಳಿಗೆ 5ನೆಯ ನಮೂನೆಯಲ್ಲಿ ಪಟ್ಟಿಗಳನ್ನು ತಯಾರ್ ಮಾಡಿ ಕಳುಹಿಸತಕ್ಕದ್ದು, ಮತ್ತು ಕಂಟ್ರೋಲರವರಿಂದ ವಿಮರ್ಶಿಸಲ್ಪಟ್ಟ ಮೇಲೆ ಅವುಗಳಿಗೆ ಹಣ ಕೊಡತಕ್ಕದ್ದು.

(ಸಿ) ಸಾದಿಲ್ವಾರ್ ಖರ್ಚುಗಳು.

ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನ ಸಾದಿಲ್ವಾರ್ ಖರ್ಚಿನ ಹೊಬಲಗುಗಳನ್ನು (6 ಮತ್ತು 7ನೆಯ ನಮೂನೆಗಳು) ಪ್ರಥಮತಃ "ಸಂಕ್ಷಿಪ್ತ ಸಾದಿಲ್ವಾರ್ ಪಟ್ಟಿಗಳ" ಮೇಲೆ ತೆಗದುಕೊಂಡು, ಕೊನೆಯಲ್ಲಿ ಸಿವಿಲ್ ಅಕೌಂಟ್ ಕೋಡಿನ ನಿಬಂಧನೆಗಳ ಮೇರೆ "ವಿವರವಾದ ಸಾದಿಲ್ವಾರ್ ಪಟ್ಟಿಗಳ" ಮೇಲೆ ವ್ಯವಸ್ಥೆ ಮಾಡತಕ್ಕದ್ದು. ತಾಲ್ಲೂಕ್ ಬೋರ್ಡಿನ ಸಾದಿಲ್ವಾರ್ ಖರ್ಚಿನ ಹೊಬಲಗುಗಳನ್ನು ಹಾಲಿ ಇರುವಂತೆಯೇ 6ನೆಯ ನಮೂನೆಯ ಮೇಲೆ ತೆಗದುಕೊಳ್ಳತಕ್ಕದ್ದು.

(ಡಿ) ಡಿಸ್ಟ್ರಿಕ್ಟ್ ಬೋರ್ಡ್ ಮೂಲಕ ನಡಿಸಲ್ಪಟ್ಟ ಕೆಲಸಗಳು—

ಕೆಲಸಗಳನ್ನು ಡಿಸ್ಟ್ರಿಕ್ಟ್ ಬೋರ್ಡುಗಳ ಮೂಲಕ ನಡಿಸೋಣ.

ಡಿಸ್ಟ್ರಿಕ್ಟ್ ಬೋರ್ಡುಗಳ ಮೂಲಕ ಯಾವ ಕೆಲಸಗಳನ್ನು ನಡಿಸತಕ್ಕದ್ದು.

88. ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಅನುಕೂಲಿಸದಷ್ಟು ಕಸಬುದಾರಿ ಕುಶಲತೆಯು ಬೇಕಾಗಿರುವ ಸಮಸ್ತ ಕೆಲಸಗಳು, ಇತರ ವಿಧವಾಗಿ ಹುಕುಂ ಕೊಟ್ಟ ಸಂದರ್ಭಗಳಲ್ಲಿ ವಿನಾ, ಯಾವಾಗಲೂ ಮರಹಮ್ಮತ್ತು ಇಲಾಖೆಯಿಂದ ನಡೆಸಲ್ಪಡತಕ್ಕದ್ದು. ಅಂತಹ ಕುಶಲತೆಯು ಬೇಕಾಗಿಲ್ಲದ ಕೆಲಸಗಳೆಲ್ಲವೂ ಡಿಸ್ಟ್ರಿಕ್ಟ್ ಬೋರ್ಡುಗಳ ಮೂಲಕವಾಗಿಯೇ ನಡೆಸಲ್ಪಡತಕ್ಕದ್ದು. ಡಿಸ್ಟ್ರಿಕ್ಟ್ ಬೋರ್ಡುಗಳ ಮೇಲ್ವಿಚಾರಣೆಯಲ್ಲಿ ನಡಿಸಲ್ಪಡತಕ್ಕ ಕೆಲಸಗಳೆಲ್ಲವೂ ಸಾಧ್ಯವಾದ ಮಟ್ಟಿಗೂ ಗುತ್ತಿಗೆ ಮೂಲಕ ನಡಿಸಲ್ಪಡತಕ್ಕದ್ದು.

ಕೆಲಸಗಳಿಗೆ ಅಂದಾಜುಗಳು.

89. ಯಾವದಾದರೂ ಹೊಸ ಕೆಲಸ ಅಥವಾ ರಿಪೇರಿಯು ಪ್ರಾರಂಭಿಸಲ್ಪಡುವುದಕ್ಕೆ ಮುಂಚೆ ಒಂದು ಕ್ರಮವಾದ ವಿವರಗಳುಳ್ಳ ಅಂದಾಜು ತಯಾರ್ ಮಾಡಲ್ಪಟ್ಟು, ಸರಿಯಾದ ಅಧಿಕಾರಿಯಿಂದ ಮಂಜೂರ್ ಮಾಡಲ್ಪಡತಕ್ಕದ್ದು. ಮತ್ತು ವಿಶೇಷ ಸಂದರ್ಭಗಳಲ್ಲಿ ವಿನಾ, ಮಂಜೂರ್ ಮಾಡಲ್ಪಡದ ಅಂದಾಜು ಇಲ್ಲದೆ ಯಾವ ಕೆಲಸವೂ ಪ್ರಾರಂಭಿಸಲ್ಪಡತಕ್ಕದ್ದಲ್ಲ.

ಕಸಬುದಾರನ ಅಭಿಪ್ರಾಯ.

90. ಯಾವದಾದರೂ ಅಂದಾಜು ಮಂಜೂರ್ ಮಾಡಲ್ಪಡುವುದಕ್ಕೆ ಮುಂಚೆ ಆ ಕೆಲಸದ ವಿಷಯದಲ್ಲಿ ಕಸಬುದಾರನ ಅಭಿಪ್ರಾಯವು ಅವಶ್ಯವೆಂದು ತೋರಿದಲ್ಲಿ, ಮಂಜೂರ್ ಮಾಡತಕ್ಕ ಅಧಿಕಾರಿಯು ಮರಾಮತ್ತು ಇಲಾಖೆಯ ಒಬ್ಬ ಅಧಿಕಾರಿಯಿಂದ ಅದನ್ನು ತಿಳಿದುಕೊಳ್ಳಬಹುದು.

ದರಗಳ ಪಟ್ಟಿಯು ಇಡಲ್ಪಡತಕ್ಕದ್ದು.

91. ಅಂದಾಜುಗಳನ್ನು ತಯಾರ್ ಮಾಡುವುದಕ್ಕೆ ಅನುಕೂಲಿಸುವದಕ್ಕಾಗಿ ಸಾಮಾನ್ಯವಾಗಿ ನಡೆಸತಕ್ಕ ಪ್ರತಿ ತರಹ ಕೆಲಸದ ದರವನ್ನು ತೋರಿಸುವ ಪಟ್ಟಿಯು ಪ್ರತಿ ಡಿಸ್ಟ್ರಿಕ್ಟ್ ಬೋರ್ಡಿನ ಆಫೀಸಿನಲ್ಲಿ ಇಡಲ್ಪಡತಕ್ಕದ್ದು. ಸದರಿ ಪಟ್ಟಿಯು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳ ಸಭೆಯಲ್ಲಿ ಮಂಜೂರ್ ಮಾಡಲ್ಪಟ್ಟು ತತ್ಕಾಲದವರೆಗೆ ತಿದ್ದುಪಾಟು ಮಾಡಲ್ಪಟ್ಟು ಇಡಲ್ಪಡತಕ್ಕದ್ದು.

ಪುನರ್ವಿಮರ್ಶೆಯಾದ ಅಂದಾಜುಗಳು.

92. ದರಗಳು ಕಮ್ಮಿಯೆಂದು ಕಂಡುಬಂದ ಸಬಬಿನಿಂದಾಗಲಿ ಅಥವಾ ಮತ್ತಾವ ಇತರ ಕಾರಣಗಳಿಂದಾಗಲಿ ಮೊದಲಿನ ಅಂದಾಜು ಮೀರಲ್ಪಡತಕ್ಕ ಸಂದರ್ಭದಲ್ಲಿ ಪುನರ್ವಿಮರ್ಶೆಯಿಂದ ಒಂದು ಅಂದಾಜು ತಯಾರ್ ಮಾಡಲ್ಪಟ್ಟು ಮಂಜೂರ್ ಮಾಡಲ್ಪಡತಕ್ಕದ್ದು.

ಮಂಜೂರ್ ಮಾಡಲ್ಪಟ್ಟ ಕೆಲಸಗಳನ್ನು ಮುಂದಿನ ವರ್ಷದಲ್ಲಿ ನಡೆಸಬಹುದು.

93. ಒಂದು ಸಾಲಿನಲ್ಲಿ ಅಂದಾಜು ಮಂಜೂರ್ ಮಾಡಲ್ಪಟ್ಟ ಕೆಲಸಗಳನ್ನು ಪುನಃ ಮಂಜೂರಾತಿಯನ್ನು ಹೊಂದದೆ ಮುಂದಿನ ವರ್ಷದಲ್ಲಿ ನಡೆಸಬಹುದು. ಆದರೆ ಆಗಬಹುದಾದಮಾತ್ರ ಯಾವ ಸಾಲಿನಲ್ಲಿ ಕೆಲಸವು ನಡೆದು ಹಣ ಬಟವಾಡೆ ಯಾಗುತ್ತದೆಯೋ ಅದೇ ಸಾಲಿನ ಬಜೆಟ್ಟು ಹಣದ ವ್ಯವಸ್ಥೆ ಯಾಗತಕ್ಕದ್ದು.

ಎರಡು ವರುಷಗಳು ಕಳೆದ ತರುವಾಯ ಹೊಸ ಅಂದಾಜುಗಳು ಅವಶ್ಯ.

94. ಅಂದಾಜುಗಳು ಮಂಜೂರ್ ಮಾಡಲ್ಪಟ್ಟಿರುವ ಕೆಲಸಗಳು ಮಂಜೂರಾದ ತಾರೀಖಿನಿಂದ ಎರಡು ವರ್ಷಗಳೊಳಗಾಗಿ ಪ್ರಾರಂಭಿಸಲ್ಪಡದೆ ಇದ್ದ ಪಕ್ಷದಲ್ಲಿ, ಹೊಸ ಅಂದಾಜುಗಳು ತಯಾರ್ ಮಾಡಲ್ಪಟ್ಟು ಕೆಲಸ ಪ್ರಾರಂಭಿಸಲ್ಪಡದೆ ಇದ್ದುದಕ್ಕೆ ಸಬಬಿನೊಡನೆ ಮಂಜೂರಾತಿ ಬಗ್ಗೆ ಕಳುಹಿಸಲ್ಪಡತಕ್ಕದ್ದು.

ಮುಗಿಯದೇ ಇರುವ ಕೆಲಸಗಳನ್ನು ಮೊದಲು ನಡೆಸತಕ್ಕದ್ದು.

95. ಪ್ರಾರಂಭಿಸಲ್ಪಡದೆ ಇರುವ ಕೆಲಸಗಳನ್ನು ನಡೆಸುವುದಕ್ಕೆ ಮುಂಚೆ ಮುಗಿಯದೇ ಇರುವ ಕೆಲಸಗಳನ್ನು ನಡೆಸತಕ್ಕದ್ದು.

ಗುತ್ತಿಗೆಗೆ ಕೊಟ್ಟ ಕೆಲಸಗಳಿಗೆ ಕರಾರುಗಳು.

96. ಗುತ್ತಿಗೆಗೆ ಕೊಟ್ಟಿರುವ 20 ರೂಪಾಯಿಗಳಿಗೆ ಮೀರಿ ಮತ್ತಾವ ಪ್ರತಿ ಕೆಲಸಕ್ಕೂ ಛಾಪಕಾಗದದಲ್ಲಿ ಕರಾರು ಬರೆಸಿಕೊಳ್ಳತಕ್ಕದ್ದು.

ಕೆಲಸಗಳಿಗೆ ಹಣ ಕೊಡುವುದು.

97. ಆ ಕೆಲಸಗಳಿಗೆ ಅವಶ್ಯಕವಾದಾಗೆಲ್ಲಾ ಇಂಪ್ರೆಸ್ಟ್ ಯಾನೆ ಸೇವ ಖಾತಿ ಮೊಬಲಗಿನಿಂದ ಹಣ ಕೊಡತಕ್ಕದ್ದು, ಮತ್ತು ತಿಂಗಳಿಗೆ ಒಂದಾವರ್ತಿ ಅಥವಾ ಅವಶ್ಯಕವಿದ್ದಲ್ಲಿ ಇನ್ನೂ ಹೆಚ್ಚು ಸಲ ಪ್ರತಿ ಕೆಲಸಕ್ಕೂ 9ನೆಯ ನಮೂನೆಯಲ್ಲಿ ಒಂದು (ಬಿಲ್) ಪಟ್ಟಿಯನ್ನು ಅದಕ್ಕೆ ಆಧಾರವಾಗಿ ಹಣ ತೆಗೆದುಕೊಂಡವನ ರಶೀತಿ (10ನೆಯ ನಮೂನೆ) ಸಹಿತ ಡಿಸ್ಟ್ರಿಕ್ಟ ಬೋರ್ಡಿಗೆ ಕಳುಹಿಸತಕ್ಕದ್ದು.

ಆಖೈರ (ಬಿಲ್) ಖರ್ಚು ಪಟ್ಟಿ.

98. ಕೆಲಸವು ಪೂರೈಸಿದ ಕೂಡಲೆ ಕ್ರಮವಾಗಿ ರುಜು ಮಾಡಲ್ಪಟ್ಟ ವಿಧಾಯಕವಾದ ಸರ್ಟಿಫಿಕೇಟ್ ಯಾನೆ ಪ್ರಮಾಣ ಪತ್ರಿಕೆಗಳೊಡನೆ 11ನೆಯ ನಮೂನೆಯಲ್ಲಿ ಒಂದು ಆಖೈರ (ಬಿಲ್) ಖರ್ಚು ಪಟ್ಟಿಯನ್ನು ಕಳುಹಿಸತಕ್ಕದ್ದು.

ಕೆಲಸನಡೆದುದಕ್ಕೆ ಮಾಹೇವಾರಿ ರಿಪೋರ್ಟು.

99. ಕೆಲಸಗಳು ನಡೆದುದಕ್ಕೆ ಮಾಹೆವಾರಾ ರಿಪೋರ್ಟನ್ನು ಮುಂದಿನ ತಿಂಗಳ 20ನೆಯ ತಾರೀಖಿನ ದಿನ ಅಥವಾ ಅದಕ್ಕೆ ಮುಂಚಿತವಾಗಿಯೇ 12ನೆಯ ನಮೂನೆಯಲ್ಲಿ ಗವರ್ನ್ಮೆಂಟಿಗೆ ಕಳುಹಿಸತಕ್ಕದ್ದು. ಇದು ವಿಮರ್ಶಿಸಲ್ಪಟ್ಟು ಡಿಸ್ಟ್ರಿಕ್ಟ್ ಬೋರ್ಡಿಗೂ ಮತ್ತು ಕಂಟ್ರೋಲರಿಗೂ ಕಳುಹಿಸಲ್ಪಡತಕ್ಕದ್ದು.

ಮಂಜೂರಾತಿಗಳ ತಃಖ್ತೆ.

100. 138ನೆಯ ನಿಬಂಧನೆಯಲ್ಲಿ ವಿವರಿಸಿರುವ ಕೆಲಸಗಳಿಗೆ ಡಿಸ್ಟ್ರಿಕ್ಟ್ ಬೋರ್ಡಿನಿಂದ ಕೊಡಲ್ಪಟ್ಟ ಮಂಜೂರಾತಿಗಳ ತಃಖ್ತೆಯನ್ನು ಪ್ರತಿ ತಿಂಗಳು ಮುಗಿದ ನಂತರ ಕೂಡಿದಷ್ಟುಗೂ ಜಾಗ್ರತೆಯಾಗಿ 13ನೆಯ ನಮೂನೆಯಲ್ಲಿ ಗವರ್ನ್ಮೆಂಟಿಗೆ ಕಳುಹಿಸತಕ್ಕದ್ದು. ಮತ್ತು ಅದರ ಪ್ರತಿಯನ್ನು ಅದೇಕಾಲದಲ್ಲಿ ಕಂಟ್ರೋಲರವರಿಗೆ ಕಳುಹಿಸತಕ್ಕದ್ದು.

ಹಣ ಕೊಡೋಣ.

ಖರ್ಚು ಪಟ್ಟಿ (ಬಿಲ್)ಗಳ ಮತ್ತು ಹಕ್ಕಿನ ಅರ್ಜಿಗಳ ವಿಷಯದಲ್ಲಿ ನಡೆಸತಕ್ಕ ಕ್ರಮ.

101. ಪ್ರತಿಯೊಂದು ಖರ್ಚು ಪಟ್ಟಿಯು (ಬಿಲ್) ಅಥವಾ ಹಣ ಪಾವತಿ ವಿಷಯದಲ್ಲಿ ಬರುವ ಹಕ್ಕಿನ ಅರ್ಜಿಯು ಪ್ರಸಿಡೆಂಟರ ಬಳಿಗೆ ಕಳುಹಿಸಲ್ಪಡತಕ್ಕದ್ದು. ಅವರು ಅದನ್ನು ತಾಳೆನೋಡಿ ಪರೀಕ್ಷೆಮಾಡಿ ಸರಿಯಾಗಿದ್ದಪಕ್ಷದಲ್ಲಿ ಹಣ ಪಾವತಿಯಾಗತಕ್ಕಬಗ್ಗೆ ಅದರ ದಸ್ತಖತ್ತುನಿಸಿ ಹುಕುಂ ಕೊಡತಕ್ಕದ್ದು. ಮೊಬಲಗು (Permanent advance) ಖಾಯಂ ಮುಂಗಡದಿಂದ ಕೊಡತಕ್ಕದ್ದಾಗಿದ್ದಪಕ್ಷದಲ್ಲಿ "ನಗದಾಗಿ ಕೊಡತಕ್ಕದ್ದು" ಎಂದು ಹಣ ಕೊಡುವುದಕ್ಕೆ ಅಪ್ಪಣೆ ಕೊಡತಕ್ಕದ್ದು. ಚೆಕ್ಕಿನ ಮೂಲಕ ಕೊಡತಕ್ಕದ್ದಾಗಿದ್ದಪಕ್ಷದಲ್ಲಿ "ಚೆಕ್ಕಿನ ಮೂಲಕ ಕೊಡತಕ್ಕದ್ದು" ಎಂದು ಹುಕುಂ ಇರತಕ್ಕದ್ದು. ಚೆಕ್ಕು ದಸ್ತಖತು ಮಾಡಲ್ಪಡುವಾಗ ಅದರ ಸಂಖ್ಯೆಯನ್ನು ಮತ್ತು ತಾರೀಖನ್ನು ನಮೂದು ಮಾಡತಕ್ಕದ್ದು.

ಚೆಕ್ಕು ಮೂಲಕ ಸಂದಾಯವಾಗತಕ್ಕ ಮೊಬಲಗುಗಳನ್ನು ನಗದಿ ಬುಕ್ಕಿನಲ್ಲಿ ದಾಖಲ್ಮಾಡತಕ್ಕದ್ದು.

102. ಚೆಕ್ಕಿನ ಮೂಲಕ ಮಾಡತಕ್ಕ ಸಂದಾಯಗಳನ್ನೆಲ್ಲಾ ನಗದಿ ಬುಕ್ಕಿನಲ್ಲಿ ಖರ್ಚು ಕಡೆಯಲ್ಲಿ ಜಮಾಖರ್ಚು ಅಂದಾಜು ತಃಖ್ತೆಯ (Budget) ಬಂದು ಮೆಸ್ತುಕಿನಲ್ಲಿ ಬರೆಯತಕ್ಕದ್ದು. ಅವುಗಳ ದಾಖಲೆಗಳಿಗೆ ಮಾಹೆಯಾನಾ ಅನುಕ್ರಮ ಸಂಖ್ಯೆಗಳನ್ನು ಕೊಡತಕ್ಕದ್ದು.

ಸಾಮಾನ್ಯವಾಗಿ ಚೆಕ್ಕು 10 ರೂಪಾಯಿಗಳಿಗಿಂತ ಕಮ್ಮಿ ಮೊಬಲಗುಗಳಿಗೆ ಕೊಡಲ್ಪಡತಕ್ಕದ್ದಲ್ಲ.

103. ಖಾಯಂ ಮುಂಗಡದ ಮೊಬಲಗಿಗಾಗಲಿ ಅಥವಾ ತೇವಣಾತಿ (ಇಂಪ್ರೆಸ್ಟ್) ಹಣಕ್ಕಾಗಲಿ ಮಾಹೆ ಆಖೈರ್ ದಿನ ಭರ್ತಿ ಹಾಕಿಕೊಳ್ಳುವುದಕ್ಕೆ ವಿನಾ 10 ರೂಪಾಯಿಗಳಿಗೆ ಕಡಮೆಯಾದುದಕ್ಕೆ ಯಾವ ಚೆಕ್ಕು ಬರೆದುಕೊಡಲ್ಪಡತಕ್ಕದ್ದಲ್ಲ. 10 ರೂಪಾಯಿಗಳಿಗೆ ಕಡಮೆಯಾದ ಸಮಸ್ತ ಸಂದಾಯಗಳೂ ನಗದಾಗಿರತಕ್ಕದ್ದು. ಚೆಕ್ಕುಗಳನ್ನು ತಯಾರ್ಮಾಡುವುದರಲ್ಲಿ ಸಿವಿಲ್ ಅಕೌಂಟ್ ಕೋಡ್ I ನೆಯ ಸಂಪುಟದ 17ನೆಯ ಪ್ರಕರಣದಲ್ಲಿ ಕೊಟ್ಟಿರುವ ಸಾಮಾನ್ಯ ನಿಯಮಗಳನ್ನು ಅನುಸರಿಸತಕ್ಕದ್ದು.

ಚೆಕ್ಕುಗಳಿಗೆ ದಸ್ತಖತು ಮತ್ತು ಅವುಗಳ ನಮೂನೆ.

104. ಸಮಸ್ತ ಚೆಕ್ಕುಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನ ಪ್ರಸಿಡೆಂಟರು ದಸ್ತಖತು ಮಾಡತಕ್ಕದ್ದು, ಮತ್ತು ಯಾವನಾದರೂ ಬಿಟ್ಟು ಸರ್ಕಾರದ ಹುದ್ದೇದಾರನ ಹೆಸರಿನಲ್ಲಿ ಸಂದಾಯವಾಗತಕ್ಕ ಚೆಕ್ಕುಗಳನ್ನು ಹುಕುಂನಮೇಲೆ ಮಾತ್ರವೇ ಸಂದಾಯವಾಗತಕ್ಕದ್ದೆಂದು ಕೊಡತಕ್ಕದ್ದು, ಮತ್ಯಾವನಿಗಾದರೂ ಕೊಡತಕ್ಕವುಗಳನ್ನು ಚೆಕ್ಕನ್ನು ತರುವವನಿಗೆ ಹಣ ಸಂದಾಯವಾಗುವಂತೆ ಮಾಡತಕ್ಕದ್ದು.

ಚೆಕ್ಕು ರದ್ದಾದಾಗ ನಡೆಸತಕ್ಕ ಕ್ರಮ.

105. ಬಂದು ಚೆಕ್ಕು ರದ್ದು ಮಾಡಲ್ಪಟ್ಟಾಗ ಅದರಲ್ಲಿ ಕಂಡ ಮೊಬಲಗು ನಗದಿ ಬುಕ್ಕಿನಲ್ಲಿ ಮೊದಲುಲೆಕ್ಕದ ಯಾವ ಮೆಸ್ತುಕಿನಲ್ಲಿ ಖರ್ಚು ತೋರಿಸಲ್ಪಟ್ಟಿತೋ ಅದೇ ಮೆಸ್ತುಕಿನಲ್ಲಿ ಕಮ್ಮಿ ಹಾಕುವುದರ ಮೂಲಕ ಖರ್ಚಿನಿಂದ ವಜಾ ಮಾಡಲ್ಪಡತಕ್ಕದ್ದು. ರದ್ದು ಮಾಡಲ್ಪಟ್ಟ ಚೆಕ್ಕುಗಳನ್ನು ಮಾಹೆಯಾನಾ ಲೆಖ್ಖಗಳೊಡನೆ ಕಂಟ್ರೋಲರವರಿಗೆ ಕಳುಹಿಸತಕ್ಕದ್ದು.

ಖಾಯಂ ಮುಂಗಡ ಮತ್ತು ಅದಕ್ಕೆ ಭರ್ತಿಹಾಕೋಣ.

106. ಚಿಲ್ಲರೆ ಮೊಬಲಗುಗಳ ಬಟವಾಡೆ ಬಗ್ಗೆ ಪ್ರೆಸಿಡೆಂಟರವರು ಬಂದು ಖಾಯಂಮುಂಗಡವನ್ನು (Permanent advance) ಪಡೆಯತಕ್ಕದ್ದು. ಮತ್ತು ಆ ಮುಂಗಡದಿಂದ ಕೊಡಲ್ಪಟ್ಟ ಚಿಲ್ಲರೆ ಸಂದಾಯಗಳಿಗಾಗಿ ಅವಶ್ಯಕವಿದ್ದಹಾಗೆಲ್ಲಾ ಚೆಕ್ಕುಮೂಲಕ ಮೊಬಲಗನ್ನು ಭರ್ತಿಹಾಕತಕ್ಕದ್ದು. ಖಾಯಂಮುಂಗಡದಿಂದ ಖರ್ಚುಮಾಡಲ್ಪಟ್ಟ ಯಾವ ಮೊಬಲಗೇ ಆಗಲಿ ತಿಂಗಳಿನ ಕೊನೇದಿನ ಭರ್ತಿ ಮಾಡಲ್ಪಡದೆ ಇರತಕ್ಕದ್ದಲ್ಲ.

ಖಾಯಂ ಮುಂಗಡಗಳ ರಿಜಿಸ್ಟರ್.

107. ಖಾಯಂಮುಂಗಡದ ಲೆಕ್ಕವು 14ನೆಯ ನಮೂನೆಯಲ್ಲಿ ಪ್ರತ್ಯೇಕವಾಗಿ ಇಡಲ್ಪಡತಕ್ಕದ್ದು. ಮತ್ತು ದಿನೇ ದಿನೇ ಖರ್ಚು ಆದ ಹಾಗೆಲ್ಲಾ ಅದರಲ್ಲಿ ಬರೆಯಲ್ಪಟ್ಟ ಖರ್ಚನ್ನು ಖಾಯಂಮುಂಗಡಕ್ಕೆ ಭರ್ತಿ ಹಾಕಿದಾಗ ಬಟ್ಟುನಗದಿ ಬುಕ್ಕಿನಲ್ಲಿ ಆ ತಾರೀಖಿನಲ್ಲಿಯೇ ದಾಖಲ್ ಮಾಡತಕ್ಕದ್ದು.

108. ಆಧ ಕೆಲಸಗಳ ಲಾಗವಡುಗಳನ್ನು ಮತ್ತು ತಾಲ್ಲೂಕು ಬೋರ್ಡುಗಳೂ ಮತ್ತು ಯೂನಿಯನ್ ಪಂಚಾಯಿತಿಗಳೂ ಖರ್ಚು ಮಾಡಬಹುದೆಂದು ಅಪ್ಪಣೆಯಾಗಬಹುದಾದ ಕಾಂಟಿಂಜೆಂಟ್ ವಗೈರೆ ಬಿಲ್ಲಿನ ಖರ್ಚುಗಳಿಗೆ ಹಣವನ್ನು ಕೊಡತಕ್ಕ ಬಗ್ಗೆ ಖಾಯಂ ಮುಂಗಡಗಳಾಗಿ ಸ್ವಲ್ಪ ಮೊಬಲಗುಗಳನ್ನು ಪಡೆಯುವಂತೆ ಸದರಿ ಬೋರ್ಡುಗಳಿಗೆ ಮತ್ತು ಪಂಚಾಯಿತಿಗಳಿಗೆ ಡಿಸ್ಟ್ರಿಕ್ಟ್ ಬೋರ್ಡು ಅಧಿಕಾರವನ್ನು ಕೊಡಬಹುದು. 106ನೆಯ ನಿಬಂಧನೆಯಲ್ಲಿ ವಿಧಿಸಿರುವ ಮೇರೆ ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟು ಈ ಮುಂಗಡಗಳನ್ನು ಭರ್ತಿ ಮಾಡಿಕೊಂಡು ಅದಕ್ಕೆ 107ನೆಯ ನಿಬಂಧನೆಯಲ್ಲಿ ಹೇಳಿರುವಂತೆ ಒಂದು ಪ್ರತ್ಯೇಕವಾದ ಲೆಕ್ಕವನ್ನು ಇಡತಕ್ಕದ್ದು.

ತಾಲ್ಲೂಕು ಬೋರ್ಡುಗಳಿಗೂ ಮತ್ತು ಪಂಚಾಯಿತಿಗಳಿಗೂ ಖಾಯಂ ಮುಂಗಡಗಳು.

109. ವೈದ್ಯಶಾಲೆಗಳಿಗಾಗಿ ಸಂಸ್ಥಾನದ ಫಂಡಿಗೆ ಕೊಡತಕ್ಕ ವಂತಿಗೆ[illegible] ಸ್ಕರ ಆದಕ್ಕಾಗಿಯೇ ಜಮಾಖರ್ಚಿನ ಅಂದಾಜುಪಟ್ಟಿಯ (ಬಡ್ಜೆಟ್) [illegible] ವಾಗಿ ಇಟ್ಟಿರತಕ್ಕ ಮೊಬಲಗಿನಲ್ಲಿ ಹನ್ನೆರಡರಲ್ಲಿ ಒಂದು ಭಾಗಕ್ಕೆ ಬಿಲ್[illegible]ನ್ನು ಪ್ರತಿ ಮಾಹೆಯಲ್ಲಿಯೂ ಡಿಸ್ಟ್ರಿಕ್ಟ್ ಖಜಾನೆ ಆಫೀಸರವರ ಹೆಸರಿನಲ್ಲಿ [illegible] ಮಾಡಿ ವೈದ್ಯ ಇಲಾಖೆಯ ಲೆಕ್ಕಕ್ಕೆ ಜಮೆ ಕಟ್ಟುವಂತೆ ಅವರಿಗೆ ಕಳುಹಿಸತಕ್ಕದ್ದು.

ವೈದ್ಯಶಾಲೆಗಳ ಬಗ್ಗೆ ಕೊಡತಕ್ಕ ಕಂಟ್ರಿಬ್ಯೂಷನ್ ಯಾನೆ ವಂತಿಗೆಯನ್ನು ಸ್ಟ್ಯಾಗೆ ಕೊಡತಕ್ಕದ್ದು.

110. ಮುರಾಮತ್ತು ಇಲಾಖೆಯ ಮೂಲಕ ನಡೆಯಬೇಕಾದ ಕೆಲಸಗಳಿಗೋಸ್ಕರ ಜಮಾಖರ್ಚಿನ ಅಂದಾಜುಪಟ್ಟಿಯಲ್ಲಿ ಮಂಜೂರಾದ ಒಟ್ಟು ಮೊಬಲಗು ಆ ಇಲಾಖೆಗೆ ವರ್ಗಾಯಿಸಲ್ಪಡತಕ್ಕದ್ದು, ಮತ್ತು ಅದಕ್ಕೋಸ್ಕರ ಐವಜುಗಳನ್ನು ಈವರೆಗಿನಂತೆಯೇ ಲೆಟರ್ ಆಫ್ ಕ್ರೆಡಿಟ್ (ಯಾನೆ ಜಮೆ ಕಾಗದಗಳ) ದ್ವಾರಾ ಕಂಟ್ರೋಲರವರಿಂದ ಪಡೆಯತಕ್ಕದ್ದು. ಈ ಕೆಲಸಗಳ ಲೆಕ್ಕಗಳನ್ನು ಪಬ್ಲಿಕ್‌ವರ್ಕ್ಸ್ ಎಗ್ಸಾಮಿನರವರು ಇಟ್ಟು, ಶೋಧಿಸಿ ವ್ಯವಸ್ಥೆ ಪಡಿಸತಕ್ಕದ್ದು, ಮತ್ತು ಕಂಟ್ರೋಲರವರು ಅವುಗಳನ್ನು ಈ ವರೆಗಿನಂತೆಯೇ ಡಿಸ್ಟ್ರಿಕ್ಟ್‌ಫಂಡ್ ಲೆಕ್ಕಗಳಲ್ಲಿ ಸೇರಿಸತಕ್ಕದ್ದು.

ಜಮಾಖರ್ಚು ಅಂದಾಜು ಪಟ್ಟಿಯಲ್ಲಿ ಮುರಾಮತ್ ಇಲಾಖೆಯ ಖರ್ಚಿಗಾಗಿ ಮಂಜೂರಾದ ಮೊಬಲಗುಗಳು ಮತ್ತು ಅದಕ್ಕೆ ಸಂಬಂಧಪಟ್ಟ ಲೆಕ್ಕಗಳು.

ಖಜಾನೆಗೆ ಮತ್ತು ಖಜಾನೆಯಿಂದ ಇರಸಾಲುಗಳು, ಮತ್ತು ಪ್ಯಾಸ್ ಬುಕ್ಕುಗಳು.

111. ಡಿಸ್ಟ್ರಿಕ್ಟ್ ಖಜಾನೆಗಳಿಗೆ ನಗದಾಗಿಯಾಗಲಿ, ಚೆಕ್ಕು ಮೂಲಕವಾಗಿಯಾಗಲಿ, ಅಥವಾ ವರ್ಗಾವಣೆ ಮೂಲಕವಾಗಲಿ ಕಳುಹಿಸಲ್ಪಟ್ಟ ಸಮಸ್ತ ಡಿಸ್ಟ್ರಿಕ್ಟ್ ಫಂಡ್ ಜಮೆಗಳನ್ನು ಮತ್ತು ಸದರೀ ಫಂಡಿಗಾಗಿ ಕೊಡಲ್ಪಟ್ಟ ಎಲ್ಲಾ ಮೊಬಲಗುಗಳನ್ನು ಒಂದು ಪ್ಯಾಸ್ ಬುಕ್ಕಿನಲ್ಲಿ (15ನೆಯ ನಮೂನೆ) ಡಿಸ್ಟ್ರಿಕ್ಟ್ ಖಜಾನೆ ಮುಖಾಂತರ ದಾಖಲು ಮಾಡತಕ್ಕದ್ದು.

ಪ್ಯಾಸ್ ಬುಕ್ಕು.

112. ಆ ಪ್ಯಾಸ್ ಬುಕ್ಕು ಪ್ರೆಸಿಡೆಂಟರವರ ವಶದಲ್ಲಿರತಕ್ಕದ್ದು, ಮತ್ತು ಅದು ಪ್ರತಿ ಮಾಹೆಯ 15ನೆಯ ತಾರೀಖಿನಲ್ಲಿಯೂ, ಆ ಮಾಹೆಯ ಆಖೈರ್ ಕಛೇರಿ ಇರುವ ದಿವಸದಲ್ಲಿಯೂ ಖಜಾನೆಗೆ ಕಳುಹಿಸಲ್ಪಡತಕ್ಕದ್ದು.

113. ಆ ಪ್ಯಾಸ್ ಬುಕ್ಕು ಮಾಹೆಯ 15ನೆಯ ತಾರೀಖಿನ ದಿವಸ ಖಜಾನೆಗೆ ತಲಪಿದಾಗ ಡಿಸ್ಟ್ರಿಕ್ಟಿನಲ್ಲಿ ಆದ ಜಮಾಖರ್ಚುಗಳು ಮೇಲೆ ವಿವರಿಸಿದಂತೆ ತಿಳಿದ ಹೊರತು ಅದರಲ್ಲಿ ದಾಖಲು ಮಾಡಲ್ಪಟ್ಟು, ಪ್ಯಾಸ್ ಬುಕ್ಕು ಪ್ರೆಸಿಡೆಂಟರವರಿಗೆ ವಾಪಸು ಕಳುಹಿಸಲ್ಪಡತಕ್ಕದ್ದು. ಮಾಹೆಯ ಆಖೈರ್ ಕಛೇರಿ ದಿವಸ ಆ ಪ್ಯಾಸ್ ಬುಕ್ಕು ಬಂದಾಗ, ಆ ತಿಂಗಳಲ್ಲಿ ನಡೆದ ಎಲ್ಲಾ ಜಮಾ ಖರ್ಚುಗಳನ್ನು ಡಿಸ್ಟ್ರಿಕ್ಟ್ ನಗದಿ ಲೆಕ್ಕವು ಕ್ಲೋಸ್ ಮಾಡಲ್ಪಟ್ಟ ಕೂಡಲೆ ಸ್ವಲ್ಪವೂ ಲೋಪವಿಲ್ಲದೆ ಅದರಲ್ಲಿ ದಾಖಲು ಮಾಡತಕ್ಕದ್ದು. ಮತ್ತು ಬಾಕಿ ತೇಲಿಸಿ ಅದನ್ನು ಅಕ್ಷರದಲ್ಲಿ ಬರೆಯತಕ್ಕದ್ದು, ಮತ್ತು ಆ ಪ್ಯಾಸ್ ಬುಕ್ಕನ್ನು ಮುಂದಲ ತಿಂಗಳ 5ನೆಯ ತಾರೀಖಿನೊಳಗಾಗಿ ಪ್ರೆಸಿಡೆಂಟರವರಿಗೆ ವಾಪಸ್ ಮಾಡತಕ್ಕದ್ದು.

114. ಪ್ಯಾಸ್ ಬುಕ್ಕು ವಾಪಸ ಆದಕೂಡಲೆ ಪ್ರೆಸಿಡೆಂಟರವರು ಅದನ್ನು ಪರೀಕ್ಷಿಸಿ, ತಮ್ಮ ಪ್ಯಾಸ್ ಬುಕ್ಕಿನಲ್ಲಿಯೂ ಮತ್ತು ನಗದಿ ಬುಕ್ಕಿನಲ್ಲಿಯೂ ತೋರಿಸಲ್ಪಟ್ಟಿರುವ ಜಮಾಖರ್ಚು ಮೊಬಲಗುಗಳಲ್ಲಿ ಏನಾದರೂ ವ್ಯತ್ಯಾಸ ಕಂಡುಬಂದಲ್ಲಿ ಅದನ್ನು ಒಡನೆ ಟ್ರೆಜರಿ ಆಫೀಸರವರಿಗೆ ತಿಳಿಸತಕ್ಕದ್ದು.

115. ತಿಂಗಳಿಗೆ ಒಂದಾವರ್ತಿ ಪ್ರೆಸಿಡೆಂಟರವರು ತಮ್ಮ ನಗದಿ ಬುಕ್ಕನ್ನು ಕ್ಲೋಸು ಮಾಡತಕ್ಕದ್ದು, ಮತ್ತು ಅದರಲ್ಲಿ ತೋರಿಸಿರುವ ಬಾಕಿಯನ್ನು ಈ ಕೆಳಗಿನಂತೆ ಪ್ಯಾಸ್ ಬುಕ್ಕಿನ ಬಾಕಿಯೊಡನೆ ತಾಳೆ ಹೊಂದಿಸಬೇಕು.

ನಗದಿ ಬುಕ್ಕಿನ ಮತ್ತು ಪ್ಯಾಸ್ ಬುಕ್ಕಿನ ಬಾಕಿಗಳನ್ನು ತಾಳೆ ಹೊಂದಿಸತಕ್ಕದ್ದು.

		ರೂ. ಆ. ಪೈ.
ನಗದಿ ಬುಕ್ಕಿನ ಪ್ರಕಾರ ಬಾಕಿ	.. ..	0 - 0 - 0
ಹಣ ತೆಗೆದುಕೊಳ್ಳದ ಚೆಕ್ಕುಗಳನ್ನು ಸೇರಿಸು	.. ..	0—0—0
ನೆಯ ತಾರೀಖಿನ ನೆಯ ನಂಬರಿನ ಚೆಕ್ಕನ್ನು ಸೇರಿಸು	.. ..	0—0—0
ಪ್ಯಾಸ್ ಬುಕ್ಕಿನಲ್ಲಿರುವಂತೆ ಬಾಕಿ	.. ..	0 - 0 - 0

116. ನಗದಿ ಬುಕ್ಕಿನ "ವರ್ಗಾವರ್ಗಿ" ಖಾನೆಯು ಬಾಬುವಾರ ವಿಂಗಡಿಸುವದರಲ್ಲಿ ಉಂಟಾದ ತಪ್ಪುಗಳನ್ನು ಜಮಾ ಖರ್ಚುಗಳನ್ನು ಸಂಕಲನ ವ್ಯವಕಲನ ಚಿನ್ಹಗಳೊಡನೆ ದಾಖಲ್ಮಾಡುವುದರ ಮೂಲಕ ಕ್ರಮಪಡಿಸತಕ್ಕ ಬಗ್ಗೆ; ಬಿಲ್ಲುಗಳ ಮೇಲೆ ಕೊಡಲ್ಪಟ್ಟ ಮುಂಗಡಗಳನ್ನು 'ಮುಂಗಡದ' ಖಾನೆಯಲ್ಲಿ ಜಮಾ ಕಟ್ಟಿ, ಖರ್ಚು ಖಾನೆಯಲ್ಲಿ ಯಾವದಾದರೂ ಒಂದು ಬಾಬಿಗೆ ಖರ್ಚು ಹಾಕಿ ವ್ಯವಸ್ಥೆ ಪಡಿಸುವುದಕ್ಕೂ; ಗುತ್ತೇದಾರರ ಖರ್ಚುಪಟ್ಟಿ (ಬಿಲ್) ಗಳಿಂದ ವಜಾಮಾಡಿದ ಮೊಬಲಗುಗಳನ್ನು "ಠೇವಣಾತಿ (ಡಿಪಾಜಿಟ್) ಗಳಿಗೆ" ಜಮಾ ಕಟ್ಟಿಕೊಂಡು, ಖರ್ಚು ಖಾನೆಯಲ್ಲಿ ಯಾವದಾದರೂ ಒಂದು ಬಾಬಿಗೆ ಖರ್ಚುಹಾಕಿ ವ್ಯವಸ್ಥೆ ಮಾಡುವುದಕ್ಕೂ; ಮತ್ತು ಯಾವದಾದ್ದರೂ ರೆವಿನ್ಯೂ ಬಾಬಿಗೆ ಜಮಾ ಕಟ್ಟತಕ್ಕ ಬಗ್ಗೆ ಡಿಪಾಜಿಟ್ ಮೊಬಲಗಿನಿಂದ ಕೊಡಲ್ಪಟ್ಟ ಯಾವ ಮೊಬಲಗುಗಳ ವ್ಯವಸ್ಥೆ ಬಗ್ಗಾಗಲಿ ಉಪಯೋಗಿಸಲ್ಪಡತಕ್ಕದ್ದು.

ಜಮಾಖರ್ಚುಗಳ ಗೋಷ್ವಾರೆ ರಿಜಿಸ್ಟರಗಳು.

ಜಮಾಖರ್ಚು ಗೋಷ್ವಾರೆ ರಿಜಿಸ್ಟರ್.

117. ನಗದಿ ಬುಕ್ಕಿನ ಜಮಾ ಖಾನೆಯಲ್ಲಿ ಬರೆದಿರುವ ಲೆಕ್ಕಗಳನ್ನೆಲ್ಲಾ ದಿನವಹಿ ಪ್ರತ್ಯೇಕಪ್ರತ್ಯೇಕವಾಗಿ ಜಮಾ ಗೋಷ್ವಾರೆ ರಿಜಿಸ್ಟರಿಗೆ (ನಮೂನೆ 16) ಎತ್ತಿ ಬರೆಯತಕ್ಕದ್ದು, ಮತ್ತು ಇದೇ ಪ್ರಕಾರ ನಗದಿ ಬುಕ್ಕಿನ ಖರ್ಚು ಖಾನೆಯಲ್ಲಿ ಬರೆದಿರತಕ್ಕ ಲೆಕ್ಕಗಳೆಲ್ಲವನ್ನು ಖರ್ಚಿನ ಗೋಷ್ವಾರೆ ರಿಜಿಸ್ಟರಿಗೆ (ನಮೂನೆ 17) ಎತ್ತಿ ಬರೆಯತಕ್ಕದ್ದು.

118. ಮಾಹೆಯ ಆಖೈರ ದಿವಸದಲ್ಲಿ, ಜಮಾ ಖರ್ಚುಗಳ ಗೋಷ್ವಾರೆ ರಿಜಿಸ್ಟರುಗಳ ಮೊಬಲಗುಗಳು ಕೂಡಲ್ಪಟ್ಟು, ಹಿಂದಿನ ತಿಂಗಳ ಆಖೈರ ವರೆಗಿನ ಜುಂಲಾಗಳು ಚಾಲ್ತಿ ಮಾಹೆಯ ಜುಂಲಾವಿಗೆ ಸೇರಿಸಲ್ಪಟ್ಟು, ಮತ್ತು ಜುಲೈ ಒಂದನೇ ತಾರೀಖಿನಿಂದ ತಹಲ್ ವರೆಗೆ ಒಟ್ಟು ಜುಂಲಾ ಮಾಡಲ್ಪಡತಕ್ಕದ್ದು.

119. ಸಾಲಿನ ಜಮಾಖರ್ಚು ಅಂದಾಜಾಪಟ್ಟಿಯು (ಬಜೆಟ) ಲ್ಲಿ ಮಂಜೂರಾದ ಮೊಬಲಗುಗಳು ಜಮಾಖರ್ಚು ಗೋಷ್ವಾರೆ ರಿಜಿಸ್ಟರುಗಳಲ್ಲಿ ಲೆಕ್ಕಗಳ ಮುಖ್ಯ ಮತ್ತು ಚಿಲ್ಲರೆ ಬಾಬುಗಳಿಗಾಗಿ ವಿಧಿಸಿರುವ ಪುಸ್ತಕಗಳ ಮೇಲ್ಭಾಗದಲ್ಲಿ ನಮೂದಿಸಲ್ಪಡತಕ್ಕದ್ದು. ಸಾಲಿನಲ್ಲಿಯೇ ಆಗಲಿ ಅಥವಾ ಸಾಲಿನ ತಿದ್ದಲ್ಪಟ್ಟ ಅಂದಾಜಾವಿನಲ್ಲಿಯೇ ಆಗಲಿ, ಮಂಜೂರಾದ ಮೊಬಲಗುಗಳಲ್ಲಿ ಏನಾದರೂ ಅಧಿಕವಾಗಿ ಸೇರಿಸಲ್ಪಟ್ಟರೇ ಆಗಲಿ ಅಥವಾ ಬದಲಾಯಿಸಲ್ಪಟ್ಟರೇ ಆಗಲಿ ಆ ಬಗ್ಗೆ ಅವುಗಳನ್ನು ರಿಜಿಸ್ಟರುಗಳಲ್ಲಿ ಕೆಂಪು ಮಸಿಯಲ್ಲಿ ಸಂದರ್ಭಾನುಸಾರ ಸಂಕಲನ ವ್ಯವಕಲನ ಚಿನ್ಹಗಳಿಂದ ನಮೂದಿಸತಕ್ಕದ್ದು. ಈ ಸಂಕಲನ ವ್ಯವಕಲನಗಳು ಯಾವ ಹುಕುಂಗಳ ಪ್ರಕಾರ ಮಾಡಲ್ಪಟ್ಟಿರುತ್ತವೆಯೋ ಆ ಹುಕುಂಗಳನ್ನು ರಿಜಿಸ್ಟರುಗಳಲ್ಲಿ ನಮೂದಿಸತಕ್ಕದ್ದು.

ನಿಯತ ಕಾಲಗಳಲ್ಲಿ ತಯಾರಾಗತಕ್ಕ ಲೆಕ್ಕಗಳು ವಗೈರೆ.

ಚಾಲ್ತಿ ಲೆಕ್ಕ.

* ಸಂದಾಯಗಳ ಪಟ್ಟಿ (19ನೆಯ ನಮೂನೆ).

ಕೊಡೋಣಾದ ಚೆಕ್ಕುಗಳ ತಃಖ್ತೆ (20ನೆಯ ನಮೂನೆ).

ಡಿಸ್ಟ್ರಿಕ್ಟ್ ಫಂಡಿನ ವಾಸ್ತವ ಬಾಕಿಯನ್ನು ತೋರಿಸುವ ತಃಖ್ತೆ (21ನೆಯ ನಮೂನೆ).

120. ಪ್ರತಿ ತಿಂಗಳೂ ಆಖೈರಾದ ನಂತರ ಕೂಡಿದ ಮಟ್ಟಿಗೂ ಜಾಗ್ರತೆಯಾಗಿ, ತಿಂಗಳಿನ ಜಮಾಖರ್ಚು ರಿಜಿಸ್ಟರುಗಳಿಂದ 18ನೆಯ ನಮೂನೆಯಲ್ಲಿ ಎಲ್ಲಾ ಬಾಬುಗಳನ್ನು ತೋರಿಸುವ ಒಂದು ಚಾಲ್ತಿ ಲೆಕ್ಕವನ್ನು ಡಿಸ್ಟ್ರಿಕ್ಟ್ ಬೋರ್ಡ್ ಕಛೇರಿಯಲ್ಲಿ ತಯಾರ್‌ಮಾಡಿ ಫೈನಾನ್ಸ ಕಮಿಟಿ ಯವರ ವಿಮರ್ಶೆ ಮತ್ತು ಒಪ್ಪಿತದ ಬಗ್ಗೆ ಆ ಸಭೆಗೆ ಒಪ್ಪಿಸತಕ್ಕದ್ದು. ಅನಂತರ ಅದನ್ನು ಮುಂದಲ ತಿಂಗಳ 20ನೆಯ ತಾರೀಖಿನಲ್ಲಿ ಆಗಲಿ ಅಥವಾ ಅದಕ್ಕೆ ಮುಂಚಿತವಾಗಿಯಾಗಲಿ, ಸಮಸ್ತ ದಾಖಲೆಗಳು, ರದ್ದು ಮಾಡಲ್ಪಟ್ಟ ಚೆಕ್ಕುಗಳು, ವಗೈರೆಗಳು, ಮತ್ತು ಈ ಪಕ್ಕದಲ್ಲಿ * ನಮೂದಿಸಲ್ಪಟ್ಟಿರುವ ಲೆಕ್ಕಗಳು ಇವುಗಳೊಡನೆ ಆಖೈರ ಲೆಕ್ಕಾಚಾರಕ್ಕಾಗಿ ಕಂಟ್ರೋಲರವರ ಆಫೀಸಿಗೆ ಕಳುಹಿಸತಕ್ಕದ್ದು.

ಲೆಕ್ಕಗಳನ್ನು ಪರೀಕ್ಷಿಸುವದರಲ್ಲಿ ಫೈನಾನ್ಸ ಕಮಿಟಿ ಯವರ ಕರ್ತವ್ಯವು.

121. ಲೆಕ್ಕಗಳನ್ನು ಅಜಮಾಯಿಷಿ ಮಾಡುವಾಗ ಫೈನಾನ್ಸ ಕಮಿಟಿಯವರು ಡಿಸ್ಟ್ರಿಕ್ಟ್‌ಬೋರ್ಡ್ ಕಛೇರಿಯಲ್ಲಿ ಇಡುವಂತೆ ವಿಧಿಸಿರತಕ್ಕ ಬುಕ್ಕುಗಳೂ ಮತ್ತು ಲೆಕ್ಕಗಳು ಯಾವ ತಿಂಗಳಿಗೆ ಲೆಕ್ಕವು ಕಳುಹಿಸಲ್ಪಡುತ್ತದೆಯೋ ಆ ತಿಂಗಳ ಆಖೈರ ವರೆಗೆ ಬರೆಯಲ್ಪಟ್ಟಿರುತ್ತವೆ ಎಂಬದನ್ನು, ನಗದಿ ಬುಕ್ಕಿನೊಡನೆ ಪಾಸ್ ಬುಕ್ಕು ತಾಳೆ ಹೊಂದಿಸಲ್ಪಟ್ಟಿರುತ್ತೆಂಬುದನ್ನು, ಸಂದಾಯವಾದ ಮೊಬಲಗುಗಳಿಗೆಲ್ಲಾ ಸಾಧಕವಾದ ದಾಖಲೆಗಳಿವೆ ಎಂಬುದನ್ನು, ಮತ್ತು ಸದರಿ ದಾಖಲೆಗಳು ನಮೂನೆಗಳಿಗೆ ಅನುಸಾರವಾಗಿವೆ ಮತ್ತು ಕ್ರಮಪ್ರಕಾರ ರದ್ದುಮಾಡಲ್ಪಟ್ಟಿವೆ ಎಂಬುದನ್ನು, ಲೋಕಲ್ ಬೋರ್ಡುಗಳ ಮೂಲಕ ವಸೂಲ್ ಮಾಡಲ್ಪಟ್ಟ ಹುಟ್ಟುವಳಿ ಮೊಬಲಗುಗಳು ಅದೇ ಮಾಹೆಯಲ್ಲಿ ಖಜಾನೆಗೆ ಕ್ರಮವಾಗಿ ಇರಸಾಲಾಗಿವೆ ಎಂಬುದನ್ನು, ಖರ್ಚಿನ ಪ್ರತಿ ಬಾಬಿಗೂ ಕ್ರಮವಾದ ಹುಕುಂಮಿನ ಆಧಾರವು ಇದೆ ಎಂಬುದನ್ನು, ಬಾಕಿ ಇರತಕ್ಕ ಮುಂಗಡಗಳನ್ನು ವ್ಯವಸ್ಥೆ ಪಡಿಸತಕ್ಕ ಬಗ್ಗೆ ಅವಶ್ಯಕವಾದ ಕ್ರಮಗಳೆಲ್ಲವೂ ಜರಿಗಿಸಲ್ಪಟ್ಟಿವೆ ಎಂಬುದನ್ನು, ಡಿಸ್ಪೆನ್ಸರಿ ಯಾನೆ ಔಷಧಶಾಲೆ ಮುಂತಾದವುಗಳಿಗೆ ಸಲ್ಲತಕ್ಕ ವಂತಿಗೆ (ಕಂಟ್ರಿಬ್ಯೂಷನ್) ಬಗ್ಗೆ ಕಂಟ್ರೋಲರವರಿಂದ ಮಾಡಲ್ಪಟ್ಟ ಆಕ್ಷೇಪಣೆಗಳಿಗೆ ಕೂಡಲೆ ನಿಗಾ ಕೊಡಲ್ಪಟ್ಟಿದೆ ಎಂಬುದನ್ನು, ನಗದಿ ಬುಕ್ಕಿನ ಉಭಯ ಪಾರ್ಶ್ವಗಳಲ್ಲಿಯೂ ಇರುವ ವರ್ಗಾವರ್ಗಿ ಕೊಡಲ್ಪಟ್ಟ ಚೆಕ್ಕುಗಳು ನಿಯತವಾದ ಮೊಬಲಗುಗಳಿಗೇನೆ ಕೊಡಲ್ಪಟ್ಟಿವೆ ಎಂಬುದನ್ನು, ಕಲಮುಗಳ ಜುಂಲಾಗಳು ತಾಳೆ ಬೀಳುತ್ತವೆ ಎಂಬುದನ್ನು, ಮತ್ತು ಲೆಕ್ಕಗಳು ಸರ್ವತ್ರ ಜಾಗರೂಕತೆಯಿಂದಲೂ, ತಪ್ಪಿಲ್ಲದೆ ಯಥಾ ಸರಿಯಾಗಿಯೂ ತಯಾರ್ ಮಾಡಲ್ಪಟ್ಟಿವೆ ಎಂಬುದನ್ನು ನೋಡತಕ್ಕದ್ದು.

ಕಂಟ್ರೋಲರವರ ಆಕ್ಷೇಪಣೆಗಳು.

122. ಈ ಲೆಕ್ಕಗಳನ್ನೆಲ್ಲಾ ಪರೀಕ್ಷಿಸಿ ಅನಂತರ ಕಂಟ್ರೋಲರವರು ತಮ್ಮ ಪರೀಕ್ಷೆಯಲ್ಲಿ ಕಂಡುಬಂದ ಆಕ್ಷೇಪಗಳು ಅಡಗಿರುವ ಒಂದು ತಃಖ್ತೆಯನ್ನು ಕಳುಹಿಸ ತಕ್ಕದ್ದು, ತಮ್ಮ ಪ್ರತ್ಯುತ್ತರದ ಜೊತೆಗೆ ಒಂದು ವಾರದೊಳಗಾಗಿ ಸದರಿ ತಃಖ್ತೆಯನ್ನು ವಾಪಸ್ ಮಾಡುವುದು ಪ್ರೆಸಿಡೆಂಟರ ಕರ್ತವ್ಯವಾಗಿರತಕ್ಕದ್ದು.

ಸಾಲಿನ ಒಟ್ಟು ಲೆಕ್ಕಗಳು.

123. ಫೈನಾನ್ಸ್ ಕಮ್ಮಿಟಿಯವರು ಸಾಲ್‌ಝಾಡೆ ಲೆಕ್ಕವನ್ನು ತಯಾರ್ ಮಾಡತಕ್ಕದ್ದು, ಅದರಲ್ಲಿ ಅವರು ಡಿಸ್ಟ್ರಿಕ್ಟ್ ಫಂಡಿನ ಜಮಾಖರ್ಚುಗಳನ್ನು ಮುಖ್ಯ ಮತ್ತು ಚಿಲ್ಲರೆ ಬಾಬುಗಳಾಗಿ ವಿಂಗಡಿಸುವದಲ್ಲದೆ ಆಯಾ ಮೊತ್ತಗಳಿಗೆ ಇರುವ ವ್ಯತ್ಯಾಸಗಳಿಗೆ ಕಾರಣಗಳನ್ನು ತೋರಿಸತಕ್ಕದ್ದು. ಈ ಸಾಲ್‌ಝಾಡೆ ಲೆಕ್ಕದ ಮತ್ತು ವಿಮರ್ಶೆ ಪತ್ರದ ಒಂದು ಪ್ರತಿಯನ್ನು ಬೋರ್ಡಿನವರಿಗೆ ಕಳುಹಿಸಿ, ಅವರು ಒಪ್ಪಿದ ನಂತರ ಕಂಟ್ರೋಲರವರ ದ್ವಾರ ಗವರ್ನ್ಮೆಂಟಿಗೆ ಕಳುಹಿಸತಕ್ಕದ್ದು, ಮತ್ತು ಇನ್ನೊಂದು ಪ್ರತಿಯನ್ನು ಡಿಸ್ಟ್ರಿಕ್ಟಿನ ಆಡಳಿತದ ರಿಪೋರ್ಟಿನೊಳಗೆ ಸೇರಿಸುವುದಕ್ಕೋಸ್ಕರ ಡೆಪ್ಯುಟಿ ಕಮಿಷನರಿಗೆ ಕಳುಹಿಸತಕ್ಕದ್ದು.

ಜಮಾಖರ್ಚು ಅಂದಾಜು ಪಟ್ಟಿಗಳು.

ಪಂಚಾಯಿತಿಗಳ ಜಮಾಖರ್ಚು ಅಂದಾಜು ಪಟ್ಟಿಗಳು.

124. ಡಿಸೆಂಬರ್ ಗುರ್ರೇ ತಾರೀಖಿನಲ್ಲಿ ಯಾಗಲಿ ಅಥವಾ ಅದಕ್ಕೆ ಮುಂಚಿತವಾಗಿಯಾಗಲಿ, ಮುಂದಿನ ಸರ್ಕಾರೀ ಸಾಲಿನಲ್ಲಿ ಸಮಸ್ತ ಬಾಬುಗಳಲ್ಲಿಯೂ ಆಗಬಹುದಾದ ಜಮಾಖರ್ಚುಗಳನ್ನು ತೋರಿಸುವ ಒಂದು ಜಮಾಖರ್ಚು ಅಂದಾಜು ಪಟ್ಟಿಯನ್ನು ತಯಾರ್ಮಾಡಿ (22ನೆಯ ನಮೂನೆ) ಅದನ್ನು ಆ ಸಾಲಿನಲ್ಲಿ ನಡಿಸಬೇಕಾಗಿರುವ ಕೆಲಸಗಳ ಪ್ರತ್ಯೇಕವಾದ ತಃಖ್ತೆಯೊಡನೆ ತಾಲ್ಲೂಕು ಬೋರ್ಡಿಗೆ ಯೂನಿಯನ್ ಪಂಚಾಯಿತಿಯು ಕಳುಹಿಸತಕ್ಕದ್ದು.

ತಾಲ್ಲೂಕು ಬೋರ್ಡುಗಳ ಜಮಾಖರ್ಚು ಅಂದಾಜು ಪಟ್ಟಿಗಳು.

125. ಹಾಗೆಯೇ ಡಿಸೆಂಬರ್ 15ನೆಯ ತಾರೀಖಿನ ದಿನವಾಗಲಿ ಅದಕ್ಕೆ ಮುಂಚಿತವಾಗಿಯಾಗಲಿ ಮುಂದಿನ ಸರ್ಕಾರೀ ಸಾಲಿನಲ್ಲಿ ನಡಿಸಬೇಕಾದ ಕೆಲಸಗಳ ತಃಖ್ತೆಯೊಡನೆ ಆ ಸಾಲಿನಲ್ಲಿ ಸಮಸ್ತ ಬಾಬುಗಳಲ್ಲಿಯೂ ಆಗಬಹುದಾದ ಜಮಾಖರ್ಚುಗಳನ್ನು ತೋರಿಸುವ ಒಂದು ಬಡ್ಜೆಟ್ ಅಂದಾಜನ್ನು (22ನೆಯ ನಮೂನೆ) ತಯಾರ್ಮಾಡಿ ಯೂನಿಯನ್ ಬಡ್ಜೆಟ್ಟುಗಳನ್ನು ಅವಶ್ಯಕವಾದ ಬದಲಾವಣೆಗಳೊಡನೆ ಅದರಲ್ಲಿ ಸೇರಿಸಿ ತಾಲ್ಲೂಕು ಬೋರ್ಡು ಡಿಸ್ಟ್ರಿಕ್ಟ್ ಬೋರ್ಡಿಗೆ ಕಳುಹಿಸತಕ್ಕದ್ದು.

ಮರಾಮತ್ತು ಇಲಾಖೆಯಿಂದ ನಡೆಸಬೇಕಾದ ಕೆಲಸಗಳಿಗೆ ಅಂದಾಜುಗಳು.

126. ತಾಲ್ಲೂಕು ಬೋರ್ಡುಗಳ ಅಂದಾಜುಗಳೆಲ್ಲಾ ಬಂದಕೂಡಲೆ, ಮುಂದಿನ ಸಾಲಿನಲ್ಲಿ ಮರಾಮತ್ತು ಇಲಾಖೆಯಿಂದ ನಡೆಯಬೇಕಾಗಿರುವ ಸಮಸ್ತ ಕೆಲಸಗಳ ಒಂದು ಪಟ್ಟಿಯನ್ನು ಪ್ರತಿ ಕೆಲಸದ ಲಾಗವಡಿನ ಅಂದಾಜು ಮಾಡಲು ಮತ್ತು ಅವರಿಗೆ ಅವಶ್ಯಕವೆಂದು ತೋರಬರುವ ಯಾವ ಕೆಲಸವನ್ನಾಗಲಿ ಅಥವಾ ಕೆಲಸಗಳನ್ನಾಗಲಿ ಸೂಚಿಸಲು ಡಿಸ್ಟ್ರಿಕ್ಟ್ ಎಗ್ಜಿಕ್ಯೂಟಿವ್ ಎಂಜನಿಯರಿಗೆ ಡಿಸ್ಟ್ರಿಕ್ಟ್ ಬೋರ್ಡು ಕಳುಹಿಸತಕ್ಕದ್ದು.

127. ಜನವರಿ ಗುರ್ರೇ ತಾರೀಖಿನದಿನವಾಗಲಿ ಅಥವಾ ಅದಕ್ಕೆ ಮುಂಚಿತವಾಗಿಯಾಗಲಿ ಬೇಕಾದ ಸಮಾಚಾರದೊಡನೆ ಆ ಪಟ್ಟಿಯನ್ನು ಎಗ್ಜಿಕ್ಯೂಟಿವ್ ಎಂಜನಿಯರು ವಾಪಸ್ ಮಾಡತಕ್ಕದ್ದು.

ವೈದ್ಯಶಾಲೆಗಳಿಗಾಗಿ ಲೋಕಲ್ ಸೆಸ್ ಮತ್ತು ವಂತಿಗೆಗಳು.

128. ಜನವರಿ 15ನೆಯ ತಾರೀಖಿನ ದಿನ ಅಥವಾ ಅದಕ್ಕೆ ಮುಂಚಿತವಾಗಿ ಜಮೀನ್ ಹುಟ್ಟುವಳಿ ವಗೈರೆ ಮೇಲೆ ವಸೂಲಾಗುವ ಒಂದಾಣೆ ಸೆಸ್ಸಿನ ಶೇಕಡ 76ರಷ್ಟು ಮೊಬಲಗನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಡೆಪ್ಯುಟಿ ಕಮಿಷನರು ತಿಳಿಸತಕ್ಕದ್ದು. ಸುಮಾರು ಅದೇ ಕಾಲದಲ್ಲಿ ವೈದ್ಯಶಾಲೆಗಳಿಗಾಗಿ ಕೊಡಬೇಕಾದ ವಂತಿಗೆಯ ಮೊಬಲಗನ್ನು ಸೀನಿಯರ್ ಸರ್ಜನರವರು ತಿಳಿಸತಕ್ಕದ್ದು.

ಡಿಸ್ಟ್ರಿಕ್ಟ್ ಫಂಡ್ (ಬಡ್ಜೆಟ್) ಜಮಾ ಖರ್ಚು ಅಂದಾಜು ಪಟ್ಟಿ.

129. ತರುವಾಯ ಫೈನಾನ್ಸ್ ಕಮ್ಮಿಟಿಯು ಡಿಸ್ಟ್ರಿಕ್ಟಿಗೆಲ್ಲಾ ಒಂದು ಜಮಾ-ಖರ್ಚು ಅಂದಾಜು ಪಟ್ಟಿಯನ್ನು (22ನೆಯ ನಮೂನೆ) ತಯಾರ್ಮಾಡಿ ಫೆಬ್ರುವರಿ 15ನೆಯ ತಾರೀಖಿನಲ್ಲಿ ಅಥವಾ ಅದಕ್ಕೆ ಮುಂಚೆ ಸೇರಬೇಕಾದ ಸಭೆಯಲ್ಲಿ ವಿಮರ್ಶೆ ಬಗ್ಗೆ ಮತ್ತು ಅಂಗೀಕಾರದ ಬಗ್ಗೆ ಬೋರ್ಡಿಗೆ ಕಳುಹಿಸತಕ್ಕದ್ದು. ಡಿಸ್ಟ್ರಿಕ್ಟ್ ಬೋರ್ಡಿನವರಿಂದ ತಂಗಾಮಿಯಾಗಿ ಅಂಗೀಕರಿಸಲ್ಪಟ್ಟ ಆ ಜಮಾ-ಖರ್ಚು ಅಂದಾಜು ಪಟ್ಟಿಯು ಡೆಪ್ಯುಟಿ ಕಮಿಷನರವರಿಗೆ ಕಳುಹಿಸಲ್ಪಡತಕ್ಕದ್ದು, ಅವರು ಅದನ್ನು ಮಾರ್ಚಿ ಗುರ್ರೇ ತಾರೀಖಿನದಿನ ಅಥವಾ ಅದಕ್ಕೆ ಮುಂಚಿತವಾಗಿ ಆಖೈರ್ ಹುಕುಂಬಗ್ಗೆ ಗವರ್ನ್ಮೆಂಟಿಗೆ ಕಳುಹಿಸತಕ್ಕದ್ದು.

ಮುಗಿಯದೇ ಇರುವ ಕೆಲಸಗಳ ಪಟ್ಟಿ.

130. ಜುಲೈ ತಿಂಗಳಲ್ಲಿ ಸೇರಬೇಕಾದ ಡಿಸ್ಟ್ರಿಕ್ಟ್ ಬೋರ್ಡಿನ ಸಂಗಕ್ಕೆ 23ನೆಯ ನಮೂನೆಯಲ್ಲಿ ಹಿಂದಲವರ್ಷಗಳಲ್ಲಿ ಮುಗಿಯದೇ ಇದ್ದ ಕೆಲಸಗಳ ಪಟ್ಟಿಯನ್ನು ಕಳುಹಿಸತಕ್ಕದ್ದು. ಮತ್ತು ಅದನ್ನು ಪ್ರತಿ ಸಾಲಿನ ಆಗಸ್ಟ್ 31ನೆಯ ತಾರೀಖಿನದಿನ ಅಥವಾ ಅದಕ್ಕೆ ಮುಂಚಿತವಾಗಿ ಗವರ್ನಮೆಂಟಿಗೆ ಕಳುಹಿಸತಕ್ಕದ್ದು.

ಜಮಾ ಖರ್ಚು ಅಂದಾಜಾ ಪಟ್ಟಿಯಲ್ಲಿ (ಬಜೆಟ್ಟಿನಲ್ಲಿ) ಅಡಗಿರುವ ವಿಷಯಗಳು.

131. ಬಜೆಟ್ಟಿನಲ್ಲಿ, ಲೆಕ್ಕದ ಪ್ರತಿ ಒಂದು ಮುಖ್ಯ, ಚಿಲ್ಲರೆ ಮತ್ತು ಬಾಬುವಾರ್ ಪುಸ್ತಕಗಳಲ್ಲಿ, ಅಂದಾಜು ಮಾಡಲ್ಪಟ್ಟ ಎಲ್ಲಾ ಜಮಾ ಮತ್ತು ಖರ್ಚು ಮೊಬಲಗುಗಳನ್ನು ಮತ್ತು ಷುರು ಮತ್ತು ಆಖೈರ್ ಬಾಕಿಗಳನ್ನು ತೋರಿಸತಕ್ಕದ್ದು, ಅವರಲ್ಲಿ ಕಂಡ ಬದಲಾವಣೆಗಳ ವಿಷಯದಲ್ಲೂ ಮತ್ತು ಸದರಿ ಅಂದಾಜು ಯಾವ ಆಧಾರದಮೇಲೆ ತಯಾರ್ಮಾಡಲ್ಪಟ್ಟಿತೋ ಆ ವಿಷಯದಲ್ಲೂ ಷರಾಗಳನ್ನು ಬರೆದು ಅದರ ಜೊತೆಯಲ್ಲಿ ಕಳುಹಿಸತಕ್ಕದ್ದು.

ಜಮಾ ಖರ್ಚು ಅಂದಾಜಾ ಪಟ್ಟಿಯ ತಯಾರಿಕೆಯ ನಿಯಮಗಳು.

132. ಬಜೆಟ್ಟು ಅಂದಾಜುಗಳನ್ನು ತಯಾರ್ಮಾಡುವಲ್ಲಿ, ಮುಂದೆ ವಿವರಿಸಲ್ಪಡತಕ್ಕ ವಿಷಯಗಳಿಗೆ ಅವಧಾನವನ್ನು ಕೊಡತಕ್ಕದ್ದು.

(ಎ) ಕೂಡಿದಮಟ್ಟಿಗೂ ಮುಂದೆ ಬಾಬು ಹೊರಳೆ (ರೀ ಅಪ್ರೋಪ್ರಿಯೇಷನ್) ಗೆ ಅವಕಾಶ ಉಂಟಾಗದಹಾಗೆ ಅಂದಾಜುಗಳನ್ನು ಮಾಡತಕ್ಕದ್ದು.

(ಬಿ) ಮುಂದಾಗಿ ಗವರ್ನಮೆಂಟಿನ ಅಪ್ಪಣೆಯನ್ನು ಪಡೆಯದೆ (ಮರಹಮ್ಮತ್ತು ಕೆಲಸಗಳು ವಿನಾ) ಯಾವ ಹೊಸ ಖರ್ಚನ್ನೇ ಆಗಲಿ ಬಜೆಟ್ಟಿನಲ್ಲಿ ಸೇರಿಸತಕ್ಕದ್ದಲ್ಲ.

(ಸಿ) ಡಿಸ್ಟ್ರಿಕ್ಟ್ ಬೋರ್ಡು ಮುಂದಾಗಿ ಗವರ್ನಮೆಂಟಿನ ಅಪ್ಪಣೆಯನ್ನು ಪಡೆಯದೆ, ಖಜಾನೆಯಲ್ಲಿ ಇರತಕ್ಕ ಬೋರ್ಡಿನ ಬಾಕೀ ಮೊಬಲಗನ್ನು ಸಂಪೂರ್ಣವಾಗಿ ಖರ್ಚು ಮಾಡತಕ್ಕದ್ದಲ್ಲ, ಮತ್ತು ಸಾಲಿನ ಬಜೆಟ್ಟು ಅಂದಾಜಾ ಮೇರಮೂನದ ಬೋರ್ಡಿನ ಬಾಕೀ ಮೊಬಲಗನ್ನು ಸಂಪೂರ್ಣವಾಗಿ ಖರ್ಚು ಮಾಡತಕ್ಕದ್ದಲ್ಲ, ಮತ್ತು ಸಾಲಿನ ಬಜೆಟ್ಟು ಅಷ್ಟಮಾಂಶ (8ನೆಯ ಭಾಗ) ಕ್ಕಿಂತಲೂ ಕಮ್ಮಿಯಾಗದಹಾಗೆ ಕೆಲಸ ನಡಸುವುದಕ್ಕೆ ಬಾಕೀ ಮೊಬಲಗು ನಿಲ್ಲುವಂತೆ ಬಜೆಟ್ಟು ಅಂದಾಜುಗಳನ್ನು ತಯಾರ್ಮಾಡತಕ್ಕದ್ದು.

(ಡಿ) ನಿರ್ಣೀತವಾದ ಖರ್ಚುಗಳ ವಿವರವನ್ನು ವ್ಯಕ್ತಪಡಿಸುವ ಪರವಾಗಿ, ಮಂಜೂರಾದ ಪೂರಾ ಲವಾಜಮಾ, ಸಿಬ್ಬಂದಿಯ ಸಂಖ್ಯೆ ತಲಬಿನ ದರ ಇತ್ಯಾದಿಗಳನ್ನು ತೋರಿಸುವ ತಖ್ತೆಯನ್ನು ಲಗತ್ತುಮಾಡತಕ್ಕದ್ದು.

(ಇ) ಲೋಕಲ್ ಬೋರ್ಡು ರೆಗ್ಯುಲೇಷನ್ಸಿನ 20ನೆಯ ಪ್ರಕರಣದ 1ನೆಯ ಉಪಪ್ರಕರಣದ ?ನೆಯ ಅಧಿಕರಣದ ರೀತ್ಯಾ ಸುಂಕಗಳಿಂದ ವಸೂಲಾದ ನಿವ್ವಳ ಹುಟ್ಟುವಳಿಗಳನ್ನೆಲ್ಲಾ ಡಿಸ್ಟ್ರಿಕ್ಟ್ ಬೋರ್ಡಿನ ಸ್ವಾಧೀನದಲ್ಲಿಡಲ್ಪಟ್ಟ ರಸ್ತೆಗಳ ಮತ್ತು ಸೇತುಗಳ ದುರಸ್ತು ಮತ್ತು ಸಂರಕ್ಷಣೆಗಳಿಗಾಗಿ ವಿನಿಯೋಗಿಸತಕ್ಕದ್ದು.

(ಎಫ್) ಮೇಲ್ಕಂಡ ನಿಯಮದ 2ನೆಯ ಮತ್ತು 6ನೆಯ ಅಧಿಕರಣಗಳ ಪ್ರಕಾರ ಯೂನಿಯನ್ನಲ್ಲಿ ವಸೂಲ್ಮಾಡಲ್ಪಟ್ಟ ಮನೆ ಕಂದಾಯಗಳು, ಮತ್ತು ಕಟ್ಟಡಗಳನ್ನು ಕಟ್ಟಲು ಅಪ್ಪಣೆ ಬಗ್ಗೆ ವಸೂಲಾಗತಕ್ಕ ರುಸುಂಗಳ, ನಿವ್ವಳ ಹುಟ್ಟುವಳಿಯನ್ನು ಸಂಘದ ಉಪಯೋಗಕ್ಕಾಗಿಯೇ ಸಂಪೂರ್ಣವಾಗಿ ವಿನಿಯೋಗಿಸತಕ್ಕದ್ದು.

(ಜಿ) ಮಂಜೂರಾದ ಡಿಸ್ಟ್ರಿಕ್ಟ್ ಫಂಡ್ ಬಜೆಟ್ಟಿನಲ್ಲಿ ಮಾಡಿರುವ ಏರ್ಪಾಡಿಗೆ ಅನುಸಾರವಾಗಿ ಅಥವಾ ಸರ್ಕಾರದವರ ಸ್ಪಷ್ಟವಾದ ಹುಕುಮಿನಮೇಲೆ (ಡಿಸ್ಟ್ರಿಕ್ಟಿನ ಸಾಮಾನ್ಯ ಶಿಬ್ಬಂದಿ ಮತ್ತು ಡಿಸ್ಟ್ರಿಕ್ಟಿಗೆಲ್ಲಾ ಉಪಯೋಗವಾದ ಕೆಲಸಗಳು ಇಂತಹ) ಡಿಸ್ಟ್ರಿಕ್ಟಿನ ಸಾಮಾನ್ಯ ಉಪಯೋಗಗಳಿಗಾಗಿ ದ್ರವ್ಯವನ್ನು ಉಪಯೋಗಿಸುವುದಕ್ಕೆ ಕುಂದಕವಿಲ್ಲವಂತೆ ಪ್ರತಿ ತಾಲ್ಲೂಕಿನಲ್ಲೂ ವಸೂಲಾದ ಇತರ ಹುಟ್ಟುವಳಿ ಬಾಬುಗಳ ಕನಿಷ್ಠಪಕ್ಷ ಮುಕ್ಕಾಲುಪಾಲು ಆ ತಾಲ್ಲೂಕಿನ ಖರ್ಚಿಗಾಗಿಯೇ ಸಾಧಾರಣವಾಗಿ ಉಪಯೋಗತಕ್ಕದ್ದು. ಅಧಿಕವಾಗಿ ಮೊಬಲಗು ಏನಾದರೂ ನಿಂತಲ್ಲಿ ಅದನ್ನು ಉಪಪತ್ತಿ ಸಾಲದೆ ಸಹಾಯವನ್ನಪೇಕ್ಷಿಸುವ ತಾಲ್ಲೂಕುಗಳ ಪ್ರಯೋಜನಕ್ಕಾಗಿ ವಿನಿಯೋಗಿಸಬಹುದು.

ಪಂಚಾಯಿತಿಗಳಿಗೂ ಮತ್ತು ತಾಲ್ಲೂಕು ಬೋರ್ಡುಗಳಿಗೂ ಹಂಚಿಕೆ ಮಾಡಿದ ಮೊಬಲಗುಗಳನ್ನು ತಿಳಿಸತಕ್ಕದ್ದು.

133. ಸರ್ಕಾರದಿಂದ ಬಜೆಟ್ಟು ಅಂದಾಜುಗಳು ಮಂಜೂರಾದ ಕೂಡಲೆ, ಪ್ರತಿ ತಾಲ್ಲೂಕಿಗೂ ಹಂಚಿರತಕ್ಕ ಮೊಬಲಗು ಇಷ್ಟೆಂದು ತಾಲ್ಲೂಕು ಬೋರ್ಡಿಗೆ ಡಿಸ್ಟ್ರಿಕ್ಟ್ ಬೋರ್ಡು ವರ್ತಮಾನ ಕೊಡತಕ್ಕದ್ದು, ಮತ್ತು ಹಾಗೆಯೇ ಪ್ರತಿ ಯೂನಿಯನ್ ಪಂಚಾಯಿತಿಗೂ ಆ ಯೂನಿಯನ್ನಿಗೆ ಮಂಜೂರಾದ ಮೊಬಲಗನ್ನು ಪ್ರತಿ ತಾಲ್ಲೂಕು ಬೋರ್ಡು ತಿಳಿಸತಕ್ಕದ್ದು.

ಬಜೆಟ್ಟಿನಲ್ಲಿ ಹಂಚಿರುವ ಮೊಬಲಗನ್ನು ಮೀರತಕ್ಕದ್ದಲ್ಲ.

134. ಯಾವ ಕಾರಣದಿಂದಲಾಗಲಿ ಬಜೆಟ್ಟಿನಲ್ಲಿ ಹಂಚಿರುವ ಒಟ್ಟು ಮೊಬಲಗನ್ನು ಮೀರತಕ್ಕದ್ದಲ್ಲ. ಸಾಲಿನಲ್ಲಿ ಯಾವ ಸಂದರ್ಭದಲ್ಲಿಯಾದರೂ ಮಂಜೂರ್ ಮಾಡಲ್ಪಟ್ಟ ಮೊಬಲಗನ್ನು ಮೀರುವುದು ಅತ್ಯವಶ್ಯಕವಾಗಿ ಕಂಡುಬಂದಲ್ಲಿ ಬಾಬು ಹೊರಳೆಯಿಂದ ಅದಕ್ಕೆ ಅನುಕೂಲ ಪಡಿಸತಕ್ಕದ್ದು, ಮತ್ತು ಅದಕ್ಕೆ ಅವಕಾಶವಿಲ್ಲದ ಪಕ್ಷದಲ್ಲಿ ಇನ್ನೂ ಹೆಚ್ಚು ಮೊಬಲಗಿಗಾಗಿ ಸರ್ಕಾರದವರಿಂದ ಬರೆದುಕೊಂಡು ಮಂಜೂರಾತಿಯನ್ನು ಪಡೆಯತಕ್ಕದ್ದು. ವಿಧಿಸಲ್ಪಟ್ಟಿರುವ ಕನಿಷ್ಠ ಪ್ರಮಾಣಕ್ಕಿಂತ ಅಂದಾಜು ಮಾಡಲ್ಪಟ್ಟ ಆಖೈರ್ ಬಾಕಿಯು ಕಡಮೆಯಾಗದ ಸಂದರ್ಭದಲ್ಲಿ ಮಾತ್ರ ಇಂತಹ ಹೆಚ್ಚು ಮೊಬಲಗು ಮಂಜೂರ್ ಮಾಡಲ್ಪಡತಕ್ಕದ್ದು.

ನೌಕರಿಗಳನ್ನು ಹೊಸದಾಗಿ ಏರ್ಪಡಿಸುವುದಕ್ಕೆ ಅಥವಾ ವಜಾ ಮಾಡುವದಕ್ಕೆ ಸರ್ಕಾರದ ಅಪ್ಪಣೆಯು ಅವಶ್ಯ.

135. ಮುಂಚಿತವಾಗಿ ಸರ್ಕಾರದವರ ಅಪ್ಪಣೆಯನ್ನು ಪಡೆಯದೆ, ಖಾಯಮಾದ ಅಥವಾ ಹಂಗಾಮಿಯಾದ ಯಾವ ಕೆಲಸವನ್ನೂ ಏರ್ಪಡಿಸತಕ್ಕದ್ದಲ್ಲ ಅಥವಾ ವಜಾವನ್ನು ಮಾಡತಕ್ಕದ್ದಲ್ಲ, ಅಥವಾ ಅಂತಹ ನೌಕರಿಯ ಸಂಬಳವನ್ನು ಬದಲಾಯಿಸತಕ್ಕದ್ದಲ್ಲ.

ಷರಾ :—ಕೆಲಸಗಳಿಗೆ ಖರ್ಚು ಹಾಕಲ್ಪಡತಕ್ಕ ಸಂಬಳವುಳ್ಳ ಹಂಗಾಮಿ ಶಿಬ್ಬಂದಿಗೆ ಈ ನಿಬಂಧನೆಯು ಲಗಾವಾಗುವುದಿಲ್ಲ.

ಸಾದಿಲ್ವಾರ್ ಖರ್ಚುಗಳು.

136. (1) ಬಡ್ಜೆಟ್ಟಿನಲ್ಲಿ ಸಾಮಾನ್ಯವಾಗಿ ಮಂಜೂರಾದ ಮೊಬಲಗಿಗೂ ಮತ್ತು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷ್ನರ ಸಾಮಾನ್ಯ ವಿಚಾರಣೆಗೂ, ಮತ್ತು ಮುಂದಿನ ಅಧಿಕರಣಗಳ ನಿಯಮಗಳಿಗೂ ಒಳಪಟ್ಟು, ಬೋರ್ಡಿನ ಕಾರ್ಯ ನಿರ್ವಾಹಕ್ಕೆ ನೈಮಿತ್ತಿಕವಾದ ಮತ್ತು ಅವಶ್ಯಕವಾದ ಸಾದಿಲ್ವಾರಿಗಾಗಿ ಎಂದರೆ ಕಛೇರಿಯ ಕುರ್ಚಿ ಮೇಜಾ ವಗೈರೇ ಸಾಮಾನುಗಳಿಗಾಗಿಯೂ, ಉಪಕರಣಗಳಿಗಾಗಿಯೂ, ಮತ್ತು ಸ್ಟೇಷನರಿ ಇಲಾಖೆಯಿಂದ ಮಾಮೂಲಾಗಿ ಸರಬರಾಯಿ ಆಗದೆ ಇರುವ ಲೇಖನ ಸಾಮಗ್ರಿಗಳಿಗಾಗಿಯೂ ಬೋರ್ಡಿನವರು ಸಾದಿಲ್ವಾರ್ ಖರ್ಚು ಮಾಡಬಹುದು.

(2) 50 ರೂಪಾಯಿಗಳಿಗೆ ಮೇಲ್ಪಟ್ಟು ಖರ್ಚು ತಗಲುವ ಯಾವ ಸಾದಿಲ್ವಾರ್ ಬಾಬಿಗಾದರೂ ಸರ್ಕಾರದ ಅಪ್ಪಣೆ ಅವಶ್ಯಕವಾದುದು.

(3) ವ್ಯವಹಾರಗಳಿಗಾಗಿ ಆಗುವ ಚಿಲ್ಲರೆ ಖರ್ಚುಗಳಿಗೆ ಮಂಜೂರಾತಿಯು ಅವಶ್ಯಕವಿಲ್ಲ. ಆದರೆ ಖರ್ಚು 50 ರೂಪಾಯಿಗಳಿಗೆ ಮೀರಬಹುದಾಗಿದ್ದರೆ ಸರ್ಕಾರದ ಅಪ್ಪಣೆಯನ್ನು ಹೊಂದಬೇಕು.

(4) 20 ರೂಪಾಯಿಗಳಿಗೆ ಮೀರುವ ಬೆಲೆಯುಳ್ಳ ಯೂರೋಪ್ ಖಂಡದಲ್ಲಿ ತಯಾರ್ಮಾಡಲ್ಪಟ್ಟ ಯಾವ ಸಾಮಾನನ್ನಾದರೂ ಸರ್ಕಾರದ ಅಪ್ಪಣೆ ಇಲ್ಲದೆ ಕೊಳ್ಳತಕ್ಕದ್ದಲ್ಲ.

(5) ಸ್ಟೇಷನರಿ ಇಲಾಖೆಯಿಂದ ಮಾಮೂಲಾಗಿ ಸರಬರಾಯಿ ಆಗದ ಎಂದರೆ, ಗೋಂದು, ನೂಲು, ಸೂಜಿಗಳು, ದೇಶೀಯ ಲೇಖಣಿಗಳು, ದೇಶೀಯ ಮಶಿ, ಗುಂಡು ಸೂಜಿಗಳು, ಸಣಬಿನ ಹುರಿ, ಮೇಣದ ಬಟ್ಟೆ, ಬರಡಿಕಾಗದ ಮತ್ತು ಬೈಂಡ್ ಮಾಡುವುದಕ್ಕೆ ಬೇಕಾದ ಸಾಮಾನುಗಳು, ಇವುಗಳು ವಿನಾ, ಮಿಕ್ಕ ಲೇಖನ ಸಾಮಗ್ರಿಗಳನ್ನು ಸಾಮಾನ್ಯವಾಗಿ ಸ್ಟೇಷನರಿ ಇಲಾಖೆಯಿಂದ ಪಡೆಯಬೇಕು. ಜರೂರಾದ ಸಂದರ್ಭದಲ್ಲಿ ಸಾಮಾನ್ಯವಾಗಿ ಸ್ಟೇಷನರಿ ಇಲಾಖೆಯಿಂದ, ಸರಬರಾಯಿ ಆಗತಕ್ಕ ಲೇಖನ ಸಾಮಗ್ರಿಗಳನ್ನು ಡೆಪ್ಯುಟಿ ಕಮಿಷನರ ಅಪ್ಪಣೆಯಿಂದ ಸ್ಥಳದಲ್ಲಿಯೇ ಕೊಂಡುಕೊಳ್ಳಬಹುದು.

(6) ಸರ್ಕಾರದವರ ಪ್ರತ್ಯೇಕವಾದ ಮಂಜೂರಾತಿ ಇಲ್ಲದೆ ಆಯಾಯ ಸ್ಥಳದಲ್ಲಿ ನಮೂನೆಗಳನ್ನು ಅಚ್ಚು ಹಾಕುವುದನ್ನು ನಿಷೇಧಿಸಿರುತ್ತದೆ.

(7) ಯಾವನಾದರೂ ಒಬ್ಬ ಸರ್ಕಾರದ ಹುದ್ದೇದಾರನ ಅಥವಾ ಇತರ ಮನುಷ್ಯನ ಅಥವಾ ಪ್ರಜೆಗಳಿಗೆ ಸಂಬಂಧಪಟ್ಟ ವಿಶೇಷ ಕಾರ್ಯದ ಗೌರವಾರ್ಥವಾಗಿ ನಡೆಯಬಹುದಾದ ವಿನೋದಗಳು, ಬಹುಮಾನಗಳು, ದೀಪೋತ್ಸವಗಳು, ಉತ್ಸವಗಳು, ಅಥವಾ ಆಚರಣೆಗಳು ಇವುಗಳಿಗಾಗಿ ಕಂದಾಯದ ಹುಟ್ಟುವಳಿಯ ಹಣದಿಂದ ಖರ್ಚು ಮಾಡಲಾಗದು.

(8) ಸರ್ಕಾರದವರ ಅಪ್ಪಣೆಯನ್ನು ಮುಂದಾಗಿ ಪಡೆಯದೆ ಮನೆ ಬಾಡಿಗೆ ಮುಂತಾದ ಆಗಾಗ್ಗೆ ಸಂಭವಿಸುವ ಖರ್ಚುಗಳನ್ನು ಮಾಡಕೂಡದು.

ವಾಪಸ್ ಕೊಡತಕ್ಕ ಹಣ.

137. ಬಾಬುವಾರು ವಿಂಗಡಿಸುವದರಲ್ಲಿ ತಪ್ಪಾಗಿ ಜಮಾ ಕಟ್ಟಿದಾಗ ವಿನಾ ಇತರ ಸಂದರ್ಭಗಳಲ್ಲಿ ಸರ್ಕಾರದವರ ಅಪ್ಪಣೆಯನ್ನು ಮುಂದಾಗಿ ಪಡೆಯದೆ ಡಿಸ್ಟ್ರಿಕ್ಟ್ ಫಂಡಿನ ಲೆಕ್ಕಗಳಲ್ಲಿ ಹುಟ್ಟುವಳಿಯಾಗಿ ಜಮಾ ಕಟ್ಟಿರುವ ಹಣವನ್ನು ವಾಪಸ್ ಮಾಡತಕ್ಕದ್ದಲ್ಲ.

ಕೆಲಸಗಳನ್ನು ಮಂಜೂರ್ ಮಾಡುವ ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡುಗಳ ಅಧಿಕಾರ.

138. ಜಮಾ ಖರ್ಚು ಅಂದಾಜಾ ಪಟ್ಟಿಯಲ್ಲಿಟ್ಟಿರುವ ಹಣದ ಅವಧಿಗೊಳಪಟ್ಟು, ಡಿಸ್ಟ್ರಿಕ್ಟ್ ಬೋರ್ಡುಗಳು ಕೆಲಸ ಒಂದಕ್ಕೆ 500 ರೂಪಾಯಿಗಳಿಗೆ ಮೀರದ ಖರ್ಚು ತಗಲುವ ಕೆಲಸಗಳ ಅಂದಾಜಾಗಳನ್ನು ಮಂಜೂರ್ ಮಾಡುವ ಅಧಿಕಾರವನ್ನು ಉಂಟಾಗಿರುತ್ತವೆ. 500 ರೂಪಾಯಿಗಳಿಗೆ ಮೀರಿ ಮುಟ್ಟುವ ಕೆಲಸಗಳಿಗೆ ಗವರ್ನಮೆಂಟಿನವರ ಮಂಜೂರಾತಿಯನ್ನು ಮುಂದಾಗಿ ಪಡೆಯಬೇಕು.

ಹುಕುಂ ಬಮೋಜಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಫಾರ್ ಗೌರ್ನ್ಮೆಂಟಿನ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಪ್ರಕಟಿಸಿದ್ದು. [ನಂ. 10.

ಬೆಂಗಳೂರು, ಗುರುವಾರ, ಮಾರ್ಚಿ ತಾ॥ 10, ಸನ್ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕ್ಸ ಆಫೀಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫೀಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲ್ಗುತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸುಗಳು.

3ನೆ ಭಾಗ—ಲೆಜಿಸ್ಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದಪತ್ರಗಳು—ಇಲ್ಲಾ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 20ನೆ ಫೆಬ್ರವರಿ 1904.

ನಂ: ಲೋ. ಬೋ. ಪಿ. 1125, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಕು 9383—ಮಿ. ಫೈ. 21–96ನೆ ಮತ್ತು 9384—ಮಿ. ಫೈ. 21–96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಕೋಲಾರ ವ ಕಡೂರು ಡಿಸ್ಟ್ರಿಕ್ಟುಗಳಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗಗ್ರಸ್ತವಾದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ಕೋಲಾರ ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಕೋಲಾರ ಟವನ್	... ಕೋಲಾರ.	17. ಯಲಗಲಪಲ್ಲಿ	... ಬಾಗೇಪಲ್ಲಿ.
2. ವಕ್ಕಲೇರಿ	... ಡಿಟ್ಟೋ	18. ಹಲಗನಹಳ್ಳಿ	... ಗೌರಿಬಿದನೂರು
3. ಅರ್ಜುನಹಳ್ಳಿ	... ಡಿಟ್ಟೋ	19. ಭೋಗಪರ್ತಿ	... ಚಿಕ್ಕಬಳ್ಳಾಪುರ
4. ಕೋಡೂರು	... ಮಾಲೂರು.	20. ನಕ್ಕಲಹಳ್ಳಿ	... ಡಿಟ್ಟೋ
5. ವಪ್ಪಚಪಲ್ಲಿ	... ಡಿಟ್ಟೋ	21. ಅರೂರು	... ಚಿಕ್ಕಬಳ್ಳಾಪುರ
6. ಅಂಚಿಮುಸ್ತೂರು	... ಡಿಟ್ಟೋ	22. ಆವಾಲ ನಾಗೇನಹಳ್ಳಿ	... ಡಿಟ್ಟೋ
7. ಚಿನ್ನಸಂದ್ರ	... ಚಿಂತಾಮಣಿ.	23. ಮೈಲಪ್ಪನಹಳ್ಳಿ	... ಡಿಟ್ಟೋ
8. ಬುರ್ಡಹಳ್ಳಿ	... ಡಿಟ್ಟೋ	24. ಯಲಗೇಪಲ್ಲಿ	... ಡಿಟ್ಟೋ
9. ಕರಿಯಾಪಲ್ಲಿ	... ಡಿಟ್ಟೋ	25. ಕಣಿತಹಳ್ಳಿ	... ಡಿಟ್ಟೋ
10. ಬೈನಪಲ್ಲಿ	... ಡಿಟ್ಟೋ	26. ಮಾರಗಾನಹಳ್ಳಿ	... ಡಿಟ್ಟೋ
11. ಸಾದಲಿ	... ಸಿಡ್ಲಘಟ್ಟ.	27. ಮಾಗೊಂದಿ	... ಬೌರಿಂಗ್ ಪೇಟೆ
12. ದೇವಗಾನಹಳ್ಳಿ	... ಡಿಟ್ಟೋ	28. ಕ್ಯಾಸಂಬಳ್ಳಿ	... ಡಿಟ್ಟೋ
13. ತೇಕಹಳ್ಳಿ	... ಡಿಟ್ಟೋ.	29. ಕಾರಹಳ್ಳಿ	... ಡಿಟ್ಟೋ
14. ಮುತ್ತೂರು	... ಡಿಟ್ಟೋ	30. ಬೇಗನೂರು	... ಡಿಟ್ಟೋ
15. ಲಕ್ಷ್ಮಿಸಾಗರ	... ಗುಡಿಬಂಡೆ ಸಬ್ ತಾ॥	31. ಐನೋರ ಹೊಸಹಳ್ಳಿ	... ಡಿಟ್ಟೋ
16. ಮಲ್ಲೇನಹಳ್ಳಿ	... ಡಿಟ್ಟೋ	32. ಹೊಸ ನಾಗೇನಹಳ್ಳಿ	... ಮುಳಬಾಗಲು

ಕಡೂರು ಡಿಸ್ಟ್ರಿಕ್ಟು.

1. ಕಡೂರು	ಕಡೂರು	3. ಲಿಂಗದಹಳ್ಳಿ	..	ತರೀಕೆರೆ
2. ಎಡಹಳ್ಳಿ	.. ಎಡಹಳ್ಳಿ ಸಬ್ ತಾ||			

ತಾರೀಖು 19ನೆ ಫೆಬ್ರುವರಿ 1904.

ನಂ. ಲೋ. ಬೋ. ಪಿ. 1118, ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿರುವ ಇದರಡೀ ಕಂಡ ಸ್ಥಳಗಳಲ್ಲಿ ನಡಿಯುವ ಕೆಳಗೆ ನಮೂದು ಮಾಡಲ್ಪಟ್ಟ ಜಾತ್ರೆಗಳ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ತಾರೀಖು. ಯಾವ ಆಗಾಯತು.	ತಾರೀಖು. ಯಾವ ವರಿವಿಗೆ.
ಕಡೂರು ಡಿಸ್ಟ್ರಿಕ್ಟು.				
1. ವೀರಭದ್ರದೇವರ ಜಾತ್ರೆ ..	ಬಾಳೆಹೊನ್ನೂರು ಮಠ	ಯಡಹಳ್ಳಿ ಸಬ್ ತಾಲ್ಲೂಕು	25—2—04	6—3—04
2. ದುರ್ಗಮ್ಮದೇವರ ಜಾತ್ರೆ ...	ವಿಠಲ	ಡಿಟೋ	29—2—04	7—3—04
3. ಮಡದಬತ್ತಿಗ ಜಾತ್ರೆ	ಭೈರದೇವರ ಗ್ರಾಮದಲ್ಲಿರುವ ಕೋಗೆ	ಕೊಪ್ಪ	25—2—04	3—3—04
4. ರಾಮೇಶ್ವರದೇವರ ರಥೋತ್ಸವ ..	ದೇವನೋಯಿಂದ	ಮೂಡಿಗೆರೆ	17—3—04	17—4—04
5. ಶ್ರೀರಾಮ ನವರಾತ್ರೆ ..	ಬೀರೂರು	ಕಡೂರು	20—3—04	31—3—04
6. ರುಷ್ಯಶೃಂಗೇಶ್ವರ ದೇವರ ಜಾತ್ರೆ ..	ಮಾರಕಲ್ಲು	ಕೊಪ್ಪ	23—3—04	29—3—04
ಶಿವಮೊಗ್ಗ ಡಿಸ್ಟ್ರಿಕ್ಟು.				
ತೊಗರ್ಸಿ ರಥೋತ್ಸವ ..	ತೊಗರ್ಸಿ	ಸಿಕಾರಿಪುರ	26—2—04	5—3—04

1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರು ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು ಪ್ರತಿ ಒಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಮೇಲ್ಕಂಡ ಜಾತ್ರೆಗಳಿಗೆ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಅಡ್ಡೀಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರಿ ಜಾತ್ರೆಗಳಿಗೆ ಹೊರಡುವ ದಸ್ತೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 2ನೆ ಮಾರ್ಚಿ 1904.

ನಂ. ಲೋ. ಬೋ. ಪಿ. 1167, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರುವರಿ 10ನೆ ಮಾರ್ಚ್ಕಂ 9383—ಮಿ. ಪ್ಲೈ. 21-96ನೆ ಮತ್ತು 9384—ಮಿ. ಪ್ಲೈ. 21-96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್ಗಳ ಉದ್ದೇಶಗಳಿಗೋಸ್ಕರ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಇರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಅಕ್ಕಿಮೊಂಗಲ ...	ಚಿಂತಾಮಣಿ	8. ನಲ್ಲಪಲ್ಲಿ ..	ಶ್ರೀನಿವಾಸಪುರ
2. ಕೈವಾರ	ಡಿಟೋ	9. ಸೂಮನಹಳ್ಳಿ ..	ಕೋಲಾರ
3. ನಾಯಿನಹಳ್ಳಿ ..	ಡಿಟೋ	10. ತಂಬಿಹಳ್ಳಿ ..	ಡಿಟೋ
4. ಲಕ್ಕಿಹಳ್ಳಿ ..	ಶಿಡ್ಲಘಟ್ಟ	11. ದೊಡ್ಡಹೇಯೂರು ..	ಡಿಟೋ
5. ದೊಡ್ಡದಾಸೇನಹಳ್ಳಿ ..	ಡಿಟೋ	12. ಕೀಲಕೋಟೆ ...	ಡಿಟೋ
6. ದೇವಲಪಲ್ಲಿ ...	ಶ್ರೀನಿವಾಸಪುರ	13. ನಾಯಿನಹಳ್ಳಿ ..	ಚಿಕ್ಕಬಳ್ಳಾಪುರ
7. ರೋಣೂರು ..	ಡಿಟೋ	14. ಗಂಗಮನಪಾಳ್ಯ ..	ಬೌರಿಂಗ್‌ಪೇಟೆ

ತಾರೀಖು 20ನೆ ಫೆಬ್ರವರಿ 1904.

ನಂ. ಲೋ. ಪೋ. ಪಿ. 1123, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳಲ್ಲಿ ನಡೆಯುವ ಕೆಳಗೆ ನಮೂದು ಮಾಡಲ್ಪಟ್ಟ ಜಾತ್ರೆಗಳ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ತಾರೀಖು.	
			ಯಾವ ಲಾಗಾಯತು.	ಯಾವ ವರಿವಿಗೆ.
1. ಗಂಗಾಧರೇಶ್ವರ ಜಾತ್ರೆ ...	ಚಂಚಿನಗಿರಿ ...	ನಾಗಮಂಗಲ ...	1—3—04	6—3—04
2. ಮುಳ್ಳುಕಟ್ಟಮ್ಮನ ಜಾತ್ರೆ ...	ಮುಳ್ಳುಕಟ್ಟೆ	ಡಿಟೋ ..	9—3—04	
3. ಮಾದೇಶ್ವರದೇವರ ಜಾತ್ರೆ ..	ಬೂದನೂರು ..	ಹೆಗ್ಗಡದೇವನಕೋಟೆ.	7—3—04	
4. ಪಾರ್ವತಮ್ಮನ ಜಾತ್ರೆ ...	ಕಂದೇಗಾಲ ...	ಗುಂಡ್ಲುಪೇಟೆ ..	7—3—04	8—3—04
5. ಶ್ರೀ ಹಿಮವದ್ಗೋಪಾಲಸ್ವಾಮಿಯ ರಥೋತ್ಸವ.	ಹಿಮವದ್ ಗೋಪಾಲ ಸ್ವಾಮಿಯ ಬೆಟ್ಟ.	ಡಿಟೋ ..	17—3—04	22—3—04
6. ಮಾರಿ ಜಾತ್ರೆ ...	ಪಡವಗೂರು ..	ಡಿಟೋ ..	6—3—04	8—3—04
7. ಮಹಾಲಕ್ಷ್ಮೀ ರಥ ...	ಕನ್ನಂಬಾಡಿ ...	ಕೃಷ್ಣರಾಜಪೇಟೆ.	23—3—04	28—3—04
8. ಕಿಕ್ಕೇರಿಅಮ್ಮನ ಜಾತ್ರೆ ..	ಕಿಕ್ಕೇರಿ ..	ಡಿಟೋ ..	22—3—04	25—3—04
9. ಕರೀಘಟ್ಟದ ರಥೋತ್ಸವ ..	ಕರೀಘಟ್ಟ ..	ಶ್ರೀರಂಗಪಟ್ಟಣ ..	3—3—04	
10. ಹೈದರಅಲೀಖಾನರ ಉರಸು ..	ಗಂಜಾಂ ..	ಡಿಟೋ ..	17—3—04	19—3—04
11. ಮೊಹರಂ ಪಾಚ್ಛಾ ..	ಡಿಟೋ	ಡಿಟೋ ...	19—3—04	30—3—04
12. ಬೊಪ್ಪೇಗೌಡನ ಪುರದ ಜಾತ್ರೆ	ಬೊಪ್ಪೇಗೌಡನಪುರ ...	ಮಳವಳ್ಳಿ ..	16—3—04	18—3—04

ಸ್ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು, ಪ್ರತಿ ಬಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಮೇಲ್ಕಂಡ ಜಾತ್ರೆಗಳಿಗೆ ಪ್ಲೇಗ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಅಡ್ಡಿಪಡಿಸುತ್ತಾರೆ. ಈ ಇಸ್ತಿಹಾರ್‌ನಾಮೆಗೆ ವ್ಯತಿರಿಕ್ತವಾಗಿ ಸದರೀ ಜಾತ್ರೆಗಳಿಗೆ ಹೊರಡುವ ಪರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 9ನೆ ಮಾರ್ಚಿ 1904.

ನಂ. ಲೋ. ಪೋ. ಪಿ. 1206, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧ ಪಡಿಸುವದೇನಂದರೆ, ಇದರಡೀ ಕಂಡ ಉತ್ಸವಕ್ಕೆ ಯಾತ್ರಾರ್ಥವಾಗಿ ಹೋಗುವದನ್ನು ಮದರಾಸು ಗವರ್ನಮೆಂಟಿನವರು ಅಡ್ಡಿಪಡಿಸುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಆಥಾರಿಟಿ.
				ಯಾವ ಲಾಗಾಯತು.	ಯಾವ ವರಿವಿಗೆ.	
ಉಚ್ಚಂಗೆಮ್ಮನ ಉತ್ಸವ.	ಉಚ್ಚಂಗಿದುರ್ಗ.	ಹರಪನಹಳ್ಳಿ ...	ಬಳ್ಳಾರಿ.	5—3—04	25—3—04	ಫಸ್ಟ್ ಅಸಿಸ್ಟೆಂಟ ರೆಸಿಡೆಂಟರವರ ಎಂಡಾರ್ಸ್‌ಮೆಂಟ ನಂ. 376—ಪಿ., ತಾ॥ 7—3—04

ತಾರೀಖು 7ನೆ ಮಾರ್ಚಿ 1904.

ನಂ. ಲೋ. ಬೋ. ಪಿ. 1201, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಾತ್ರೆ ವ ಉತ್ಸವಗಳಿಗೆ ರೋಗತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮದರಾಸು ಗವರ್ನ್ಮೇಂಟನವರು ಅಡ್ಡಿಪಡಿಸುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಧಾರಿಟಿ.	ಷರಾ.
				ಯಾವ ಲಾಗಾಯತು.	ಯಾವ ವರಿವಿಗೆ.		
ಶ್ರೀ ಭಾಷ್ಯಕಾರಸ್ವಾಮಿಯ ಬ್ರಹ್ಮೋತ್ಸವ	ಶ್ರೀ ಪೆರಂಬದೂರು	ಕಂಜೀವರಂ	ಚಿಂಗಲ್‌ಪಟ್	5—4—04	22—4—04	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎರ್ಡಾರ್ಸ್ಮೆಂಟ್ ನಂ. 338-ಪಿ., ತಾ|| 4-3-04	
ಡಂಕಣಿಕೋಟೆ ರಥೋತ್ಸವ	ಡಂಕಣಿಕೋಟೆ	ಹೊಸೂರು	ಶೇಲಂ	24—3—04	2—4—04	ಡಿಟೋ 340-ಪಿ., ತಾ|| 4—3—04	ಯಾತ್ರಾರ್ಥವಾಗಿ ಹೋಗುವದು ಅಡ್ಡಿಪಡಿಸಲ್ಪಟ್ಟಿರುತ್ತದೆ
ಮಾಹಿಮೈ ಉತ್ಸವವೆಂದು ಕರಿಯಲ್ಪಟ್ಟ ಈಸ್ಟರ್	ವೇಲಾಂಡಿವಲಸೈ	ತಿರಚಂಗೋಡು	ಡಿಟೋ	25—3—04	6—4—04	ಡಿಟೋ 342-ಪಿ., ತಾ|| 4—3—04	ಡಿಟೋ
ಸಪ್ತಸ್ಥಾನಂ ಉತ್ಸವ	ತಂಜಾವೂರು ಸಮೀಪದಲ್ಲಿರುವ ತಿರುವಾಡಿ	...	...	12—4—04	1—5—04	ಡಿಟೋ 344-ಪಿ., ತಾ|| 4—3—04	
ಪಂಗುನಿ ಉತ್ತಿರಂ ಉತ್ಸವ ಮತ್ತು ದನಗಳ ಪರಿಸೆ	ಕಜಗೊಮಲೈ	ಒಟ್ಟಪಿಡಾರಂ	ತಿನ್ನವೆಲ್ಲಿ	14—3—04	11—4—04	ಡಿಟೋ 346-ಪಿ., ತಾ|| 4—3—04	

ತಾರೀಖು 7ನೆ ಮಾರ್ಚಿ 1904.

ನಂ. ಲೋ. ಬೋ. ಪಿ. 1202, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಉತ್ಸವಕ್ಕೆ ಮೈಸೂರು ಸಂಸ್ಥಾನ ಸಹಿತವಾಗಿ ರೋಗತಗಲಿವ ಪ್ರದೇಶಗಳಿಂದ ಬರಲು ಉದ್ದೇಶಿಸಿರುವ ಜನಗಳಿಗೆ ಟಿಕೆಟ್ಟುಗಳು ಕೊಡುವದನ್ನು ಮದರಾಸು ಗವರ್ನ್ಮೇಂಟನವರು ಅಡ್ಡಿಪಡಿಸುತ್ತಾರೆ:—

ಜಾತ್ರೆ ಯಾ ಉತ್ಸವದ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ಟಿಕೆಟ್ಟುಗಳು ವಿಕ್ರಯಿಸಲ್ಪಡದೆ ಇರುವ ತಾರೀಖುಗಳು ಮತ್ತು ಸ್ಟೇಷನ್‌ಗಳು.			ಅಧಾರಿಟಿ.
				ಯಾವ ಲಾಗಾಯತು.	ಯಾವ ವರಿವಿಗೆ.	ಸ್ಟೇಷನ್‌ಗಳು.	
ಶ್ರೀ ಭಾಷ್ಯಕಾರ ಸ್ವಾಮಿಯ ಬ್ರಹ್ಮೋತ್ಸವ	ಶ್ರೀ ಪೆರಂಬದೂರು	ಕಂಜೀವರಂ	ಚಿಂಗಲ್‌ಪಟ್	5—4—04	22—4—04	ಮದ್ರಾಸ್ ರೈಲ್ವೆಯಲ್ಲಿರುವ ಪೂನಮಲ್ಲಿ, ಕಡಂಬತ್ತೂರು, ತಿರುವಳ್ಳೂರು, ಸೆವ್ವಾಪೇಟೆ ರೋಡು, ತಿನ್ನಾನೂರು ವ ಆವಳಿ, ಮತ್ತು ದಕ್ಷಿಣ ಇಂಡಿಯನ್ ರೈಲ್ವೆಯಲ್ಲಿರುವ ವಾಲಾಜಾಬಾದ್, ಶಿಂಗಪೆರುಮಾಳ್ ಕೋವಿಲ್, ವಂಡಲೂರು, ಗುಡುವಂಚೆರಿ *	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಂಡಾರ್ಸ್ಮೆಂಟ್ ನಂ. 334-ಪಿ., ತಾ|| 4-3-04.

